Reg No B. 270

Monday, September 7th, 1925.

ವರ್ಷ ೯.

ಸಂಚಿಕೆ ೪೭.

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.
ಮುಂಚಿಯಲ್ಲಿ ಆಗಾವು
ರೂಪಾಯಿ 2-4-0.
ನೆಯಾರ್ಡರಿಯಿಂದ
ರೂ. 3-0-0
ವಿ. ಅಂಚೆವೆಚ್ಚ ಸಹ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ
ಕನ್ನಡ, ಇಂಗ್ಲೀಷ ಪ್ರಾಸ್ತಾವಿಕ (ಗಣ ಎಡಿಟ್ ಜುಬ್ಬ)
ಆ ಸಾಲುಗಳವರೆಗೆ ರೂ. 1-0-
ಆ ನಂತ್ರ ಪ್ರತಿಸಾಲಿಗೆ 0-1-0.
ಹೆಚಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಖಾಸ ಜಾಹಿರಾತುಗಳ ಬಗ್ಗೆ ಪತ್ರದ್ವಾರ ದರ ಸಮಕ್ಷ ತಿಳಿಸಲ್ಪಡುವದು.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೭ ಮಾಹೆ ಸಪ್ಟಂಬರ ಸನ್ ೧೯೨೫ ನೇ ಇಸವಿ)

हिंदुस्थानांतील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव- दीड रतलची किंमत २ रुपये;

रामबाण औषधें

सर्दि घालविणारें,
भूक वाढविणारें
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

विश्वास ठेवकर.
क्याटलाग मागवा,

बेंगाल केमिकल...? हिंदु फार्मास्युटिकल वर्क्स लिमिटेड,
मुंबई नं. १३

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಲೋಕಪ್ರಸಿದ್ಧವಾದದ್ದು ! ಅನುಭವಸಿದ್ಧವಾದದ್ದು !!
ಮೂರು ದಿವಸಗಳಲ್ಲಿ ಗುಣ ಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಸು
ದೇಹಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ವೆನಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.
ಟ್ರೇಡ ಮಾರ್ಕ] ರಿಜಿಸ್ಟರ ಆದದ್ದು [ನೋಡಿ ಕೊಳ್ಳಿರಿ.

ಅಸ್ಸಲ ಮನ್ಮಥ ಚಿಂತಾಮಣಿ ಲೇಹ.

ಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು, ಮೇಹವಿಕಾರವಿದ್ದವರೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾದ ಯುವತರಿಗೂ ದೃಷ್ಟಿ ಮಂದವಾದವರಿಗೂ ವಯೋಗಾವಳ್ಳ ಪರಮಾನಂದ ಔಷಧಿ
ಸೇರು ನಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು.
1 ಸೇರು ಡಬ್ಬಿ ಒಂದಕ್ಕೆ 3—0—0
½ ಸೇರು ಡಬ್ಬಿ ಒಂದಕ್ಕೆ 1—9—0
ವ್ಹಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಬರೆಕೊಳ್ಳಿರಿ.

ದೇವಣ್ಣ ನಾರಾಯಣ ಸೇಟ್,
ಸರಾಫ್, ಗೋರಿಕಟ್ಟಾ, ಮಂಗಳೂರು, (ದ. ಕ.)

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕಾಪಾಡುವದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮುಸುಕಿದ ಬೇನೆಯು ಕಡಿಮೆಯಾಗಿ ಮುಖವು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅದನ್ನು ಹಚ್ಚಿಕೊಳ್ಳುತ್ತಿರುವ ತನಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅಷ್ಟೇ ಅಲ್ಲ, ದಟ್ಟವಾಗಿ ಬೆಳೆದು ಕಪ್ಪಾಗಿರುತ್ತವೆ. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುತ್ತದೆ.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ಹಣ್ಣು ಹಣವನ್ನು ಕಳೆಯುವದಕ್ಕಿಂತ ಒಂದೇ ಒಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ಪೆಸೆಯಿಂದ ನಮಗೆ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಅಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗ್ರಾಹಕರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚು 0-14-0.

ಮಹಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಪ್ರಪಂಚದ ಯಾವ ಮೂಲೆಯಲ್ಲಿಯಾದರೂ ಉತ್ತಮ ಎಣ್ಣೆಗಳ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧ ಮಾಡಿದ್ದು. ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಹಾಕಿದರೆ ಅದರ ಸುವಾಸನೆಯು ಅನೇಕ ದಿವಸಗಳ ತನಕ ಉಳಿಯುತ್ತದೆ. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರದಿಂದ ನೆಲೆಗೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.
ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0
ಆರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ

Indian Drug & Chemical Co,
16, Market, BOMBAY 2

☞ ನಮ್ಮ ಪ್ರೆಸ್ಸಿನಲ್ಲಿ

ಗೇಣ ಬಾಕಿ ದಾವೆಯ ಫಾರ್ಮುಗಳು ತಯಾರಿವೆ. ವಕಾಲತ, ಅಮಲಜಾರಿ ಮೊದಲಾದ ಕೋರ್ಟ ವ್ಯವಹರಣೆಯ ಹಾಗೂ ಕಸ್ಟಮ್ ಖಾತೆಯ ಫಾರ್ಮುಗಳು ಅಗ್ಗವಾಗಿ ಶಿಗುತವೆ.

ಮೆನೇಜರ,

ಸ್ಟಾರ ಒಫ್ ಕೆನರಾ ಪ್ರೆಸ್, ಕುಮಟಾ

ಉತಮ, ಸುವಾಸಿಕ, ಶದ್ಧ, ಮಿಶ್ರಣವಿಲ್ಲದ,

ಜನರಿಗೆ ಅವಶ್ಯ ಬೇಕಾಗಿರುವ

ಕಾಬೂಲೀ ಹಿಂಗು.

೪೦ ತೊಲೆಯುಳ್ಳ	ಡಬ್ಬಿ	೧ಕ್ಕೆ	೫—೦—೦
೨೦ ತೊಲೆ	ಡಬ್ಬಿ	೧ಕ್ಕೆ	೨—೧೨—೦
೧೦ ತೊಲೆ	ಡಬ್ಬಿ	೧ಕ್ಕೆ	೧—೮—೦
೫ ತೊಲೆ	ಡಬ್ಬಿ	೧ಕ್ಕೆ	೧—೦—

೧ ತೊಲೆಯ ಡಬ್ಬಿಗಳ ಡಜನ ೧ಕ್ಕೆ ೨—೯—೦

ನಮ್ಮ ಹಿಂಗು ಖೋಟಾ ಬಂದಲ್ಲಿ,ಪರತ ಕೊಳ್ಳುವೆವು. ಟಪಾಲು ಖರ್ಚು ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ

ಜವಳಿಬಾಜಾರ, ಕುಮಟಾ

ಪ್ರತಿನಿತ್ಯ ಉಳಡೆಗ ಒಳಕೆಯಲ್ಲಿದ್ದು ಖಚಾಗುವ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕೊಲೆರಾ ಔಷಧಿಗಳ ದ್ರಾವಕ (Tincture) ಸಹ ಆಗಾವು ಸೂಚಿಸಿದರೆ ಕಳುಹುವೆವು

ಬಾಯುದುಮ್ಮಸದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ಕ್ಕೆ ೦-೨-೦.

ಕೊಲೆರಾದ ಬಗ್ಗೆ	„ „ „	೦—೨—೦
ಅರ್ಧಾಂಗ ವಾಯುವಿನಬಗ್ಗೆ	… … …	೦—೪ ೧.
ನಾಯಿ ಕಡಿತದಬಗ್ಗೆ	… … …	೦-೪-೦
ಸರ್ಪಸುತ್ತಿನ ಬಗ್ಗೆ	… … …	೦-೨-೦

ಹೊಟ್ಟೆಯಲ್ಲಿ ಕೃತ್ರಿಮ ಔಷಧಿ ಬಿದಬಗ್ಗೆ ತೊಲೆ ೧೦ ಕ್ಕೆ ೦-೨-೦.

ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾತ್ಲು ೧ಕ್ಕೆ ೧-೦-೦

ಮೋರಾವಳಾ (ನೆಲ್ಲಿಕಾಯಿ ಗುಳಂಬ) ರಾತ್ಲು ೧ ಕ್ಕೆ ೧-೦-೦

ರಾತುಗಟ್ಟಲೆ ಯಾ ಅದಕ್ಕೂ ಹೆಚ್ಚು ತರಿಸಿಕೊಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಪತ್ರ ದ್ವಾರಾ. ಅನುಪಾನಪತ್ರ ಔಷಧೀ ಸಂಗಡ.

ಎನ್. ಜಿ. ಹೆಗಡೆ, ಮಾಸ್ಕೇರಿ,

ಪೋಸ್ಟ—ಬಂಕಿಕೊಡ್ಲ. ಜಿ. ಉತ್ತರ ಕಾನಡಾ

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ



ಕಳೆದ ೬-೭ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ-ತಾಳಗುಪ್ಪೆ, ಶಿವಮೊಗ್ಗಾ-ಹರಿಹರ-ದಾವಣಗೆರೆ, ಶಿವಮೊಗ್ಗಾ-ಕಳೂರಕಟ್ಟೆ, ಸಾಗರ-ಸೊರಬ-ಶಿರಾಳಕೊಪ್ಪ, ಸಾಗರ-ತೀರ್ಥಹಳ್ಳಿ, ಸಾಗರ-ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವೀಸನ್ನು ನಡೆಸುತ್ತಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯ ಕಾರಕಳ, ಉಡುಪಿ, ಕುಂದಾಪುರ, ಮಂಗಳೂರ ಹಾಗು ಬೆಳಂಗಡಿ ಈ ಕಡೆಗೆ "ಕಾರ್ಕಳ ಮೋಟರ ಸರ್ವೀಸಿನ" ವಿದ್ಯಮಾನವೂ, ಬಳ್ಳಾರಿ ಜಿಲ್ಲೆಯ ಹಡಪನಹಳ್ಳಿಗೆ "ಲಕ್ಷ್ಮೀ ಮೋಟರ ಸರ್ವೀಸಿನ" ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುತ್ತೇವೆ

ಉತರ ಕನ್ನಡ ಜಿಲ್ಲೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ ಸಾಗರ, ಹರಿಹರ ಮತ್ತು ಮೇಲ್ಕಂಡ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಶಿರ್ಶಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವೀಸ ಪ್ರಾರಂಭ ಮಾಡಿರತೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	… … ..	ಬೆಳಿಗ್ಗಿನ ೭ ಘಂಟೆಗೆ.
ಶಿರ್ಶಿ ಸೇರುವದು—	…	„ ೧೦ „
ಶಿರ್ಶಿಯಿಂದ ಬಿಡುವದು ಶಿವಮೊಗ್ಗಾ ಕಡೆಗೆ—		ಮಧ್ಯಾಹ್ನ ೧ „
ಸಾಗರಕ್ಕೆ ಸೇರುವದು (ಸಿದ್ದಾಪುರ ಮಾರ್ಗವಾಗಿ)—		ಸಾಯಂಕಾಲ ೬ „
ಸಾಗರದಿಂದ ಶಿರ್ಶಿ ಕಡೆಗೆ ಹೊರಡುವದು—	. . …	ಬೆಳಿಗ್ಗಿನ ೬ „
ಸಿದ್ದಾಪುರದ ಮೇಲಾಗಿ ಶಿರ್ಶಿಗೆ ಸೇರುವದು— .	…	„ ೧೧ „
ಶಿರ್ಶಿಯಿಂದ ಕುಮಟೆಗೆ ಹೊರಡುವದು—	. . . .	ಮಧ್ಯಾಹ್ನ ೨ „
ಕುಮಟೆ ಸೇರುವದು—	. . … …	ಸಾಯಂಕಾಲ ೫ „

N. B.— ಈ ಮೇಲಿನ ಲೈನುಗಳ ಹೊರತು ಶಿರಶಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವೀಸ ಮೇಲಿನ ಉಪಾಯದಿಂದ ಜನರಿಗೆ ಸಹಾಯ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿವಿನಂತಿ

M. MANJAPPA.
PROPRIETOR.

ಪರದೇಶದಿಂದ ಬರುವ ಪಂಪುಗಳು ಇವುಗಳನ್ನು ಕೊಳ್ಳುವದಾಗುವದಿಲ್ಲ. ಇ ಅಗ್ಗದಿಂದ ಕೊಡುತಿರುವೆವು ಇದಲ್ಲದೆ, ನಮ್ಮಲ್ಲಿಯೇ ತಯಾರಾಗುತಿರುವದರಿಂದ

ಈ ಸೌಕರ್ಯವು ವಿದೇಶೀ ಪಂಪ

ಕೇ. ಬಿ. ಜೋಶಿ ಮುಂಬೈ ೪

ಸವಿಸ್ತರ ಸಂಗತಿಯ ಬ ಧಾತುವೃದ್ಧಿ ಕಾರಕ

ಕಿರ್ಲೋಸ್ಕರ ಬಂಧು

ರಜಿಸ್ಟರ ಆದಂಥ

ಸುವರ್ಣಪದಕಗಳು ಸಂಪಾದಿಸಿದ

ಕಾಮಧು.

೪ ಸೀಯಾಗಿಯೂ ರುಚಿಕರವಾಗಿಯೂ ಇರುತದೆ ಔಷಧಿಗಳ ಮಿಶ್ರಣದಿಂದಾದ ಜೇನದು ಹೋಗುವದು ತರುಣರಂತೆ ಪ್ರವರ್ಧಮಾನವಾಗುವದು. (ನಿಜಗಿ ನನೇಂದ್ರಿಯದೊಳನ ಶಕ್ತಿಯು ಹೋಗಿ ಸ್ವಪ್ನದ ನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯ ದೋಷಕನಾದ ಕಾರಣವು ನಿರೋಗಿಯಾಗುವದು. ಹೀ ಈ ದ್ರಾಕ್ಷಾಸಹ ಮಧುವಿನ ಸೇವನ ಮಾಡಿ ಅವರೋಗ ಗ, ಉದರರೋಗ ಮತ್ತು ಇವುಗಳು ನಾಶವಾಗುತು ಪಚನವಾಗಿ ಹಸಿವೆ ಚನ್ನಾಗಿ ಆಗುತದೆ. ಇವರ ಶೋಧ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಪಥಕ್ಕೆ ತಕ್ಕುವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣ ಬಾಟಲಿಯಿಂದ ಗುಣಹರುವದು. ಹಳೇ ರೋಗವಿದ್ದರೆ ಕಿಮ್ಮತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತು ಟಪಾಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚ ಹ ೦—೦ ಮತು ೧ ಬಾಟಲಿ ಪ್ರತ್ಯೇಕ ಆಗುವದು. ಟಪಾ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦ ತಾ

ಅಗರ ಗಳಮೇಲೆ, ಅದರ ಉಪಯ ಬಗೆಗಳು ಅ ಎಲ್ಲ ಪ್ರಕಾರ ಎಷ್ಟೇ ವ್ಯಾಕ ಪ್ರತ್ಯಕ್ಷ ಅನು ವ್ಹಿ. ಪಿ. ಖರ್ಚ

ಅಮೃತಧಾರಾ ಆಫೀಸು, ಪೋ. ನಿಪ್ಪಾಣಿ, ಜಿ. ಬೆಳಗಾಂ

Printed and Published by Krishnarao Keshav Shenvi (Editor) at

ಸಿದ್ದಾಪುರದಲ್ಲಿ ಶ್ರೀ ಗಣೇಶೋತ್ಸವ

ರಾಷ್ಟ್ರೀಯ ಶಾಲಾಧ್ಯಾಪಕರು ತಿಳಿಸುತ್ತಾರೆ:—

ತಾ. ೧೯-೮-೨೫ನೇ ದಿವಸ ರಾಷ್ಟ್ರೀಯ ಶಾಲೆಯ ವರ್ಧಂತಿಯು(ಶಾಲೆಗೆ ನಾಲ್ಕು ವರ್ಷ ಮುಗಿದು ಐದನೇ ವರ್ಷ ಪ್ರಾರಂಭವಾಯ್ತು) ಬಳ್ಳೆ ಆಡಂಬರದ ರೀತಿಯಿಂದ ನಡೆಯಿತು. ಅಂದು ಶಾಲೆಯ ಹುಡುಗರಲ್ಲಿ ನೂಲಿನ ಶರ್ಯತ್ತು ಹಚ್ಚಿ ಮೊದಲಿನ ಮೂರು ನಂಬ್ರದವರಿಗೆ ೨ನಾ ದಿ ಟೊಪಿಗೆಯ ಇನಾಮು ಶ್ರೀ ಸುಬ್ರಾಯ ಬಳ್ಳಭಟ್ಟರವರ ಕಡೆಯಿಂದ ಕೊಡಿಸಲಾಯ್ತು. ಖಾದಿ ಟೊಪ್ಪಿಗೆಯು ಕಾಂಗ್ರೆಸ ಕಮಿಟಿಯ ಕಡೆಯಿಂದಲೇ ಉಚಿತವಾಗಿ ಹುಡುಗರಿಗೆ ಹಂಚಲು ಬಂದಿದ್ದವು.

ಕಳೆದ ಎರಡು ವರ್ಷದಂತೆ ಈ ವರ್ಷವೂ ರಾಷ್ಟ್ರೀಯ ಶಾಲೆಯಲ್ಲಿ ಶಾಲೆಯ ಬಾಲಕರು ಸಾರ್ವಜನಿಕ ಶ್ರೀ ಗಣಪತಿಯನ್ನು ತಾ. ೨೩-೮-೨೫ನೇ ದಿವಸ ಸ್ಥಾಪಿಸಿದರು. ಶ್ರೀ ಗಜಾನನ ಮಂಟಪವು ಪರದೇಶಿ ಚಿತ್ರವಿಚಿತ್ರ ಕಾಗದದಿಂದ ತಯಾರಿಸಲ್ಪಡದೆ, ಬರೇ ಶುದ್ಧ ಚಿತ್ರ ವಿಚಿತ್ರ ಖಾದಿಯಿಂದ ತಯಾರಿಸಲ್ಪಟ್ಟಿತ್ತು. ಒಮ್ಮೆ ಅದನ್ನು ನೋಡಿದರೆ ಬೆಳಗಾಂವದಲ್ಲಿ ರಾಷ್ಟ್ರೀಯ ಸಭೆಯ ವೇಳ್ಯ ತಯಾರಿಸಿದ, ಮಹಾತ್ಮಾ ಗಾಂಧಿಯವರ ಕುಟೀರದ ನೆನಪಾಗುತ್ತಿದ್ದಿತು. ಪ್ರತಿ ವರ್ಷದಂತೆ, ಈ ವರ್ಷವೂ ಪುರಾಣ, ಕೀರ್ತನ ವಗೈರೆ ನಡೆದವು.

ತಾ. ೨೫-೮-೨೫ನೇ ದಿವಸ ಶ್ರೀ ಕಾನಗೋಡ ಸೀತಾರಾಮರಾಯರು "ಗಣೇಶಗೀತ"ದ ಮೇಲೆ ಪುರಾಣ ಹೇಳಿದರು. ತಾ. ೨೭ನೇ ದಿವಸ ಶ್ರೀ ಶಂಕರಭಟ್ಟ "ದಧೀಚಿ" ಋಷಿಯ ವಿಷಯದ ಮೇಲೆ ಕೀರ್ತನೆ ಮಾಡಿ, ಆನಾಗ ದಧೀಚಿ ಋಷಿಯು ವೃತ್ರಾಸುರನೆಂಬ ರಾಕ್ಷಸನ ವಧೆಗಾಗಿ ತನ್ನ ಪ್ರಾಣಬಿಟ್ಟು ಎಲುಬನ್ನು ಸಾರ್ವಜನಿಕ ಹಿತಕ್ಕೋಸ್ಕರ, ರಾಷ್ಟ್ರಕಾರ್ಯಕ್ಕೋಸ್ಕರ ಧಾರೆಯೆರೆದನೋ, ಅದ್ರಂತೆ ರಾಷ್ಟ್ರಕಾರ್ಯಕ್ಕೆ ದೇಶಕಾರ್ಯಕ್ಕೆ, ಧರ್ಮಕಾರ್ಯಕ್ಕೆ ಎಲ್ಲರೂ ತನು-ಮನ-ಧನದಿಂದ ಸಹಾಯ ಮಾಡಬೇಕೆಂದು ಹೇಳಿದರು. ಶ್ರೋತೃವೃಂದವು ಎಲ್ಲ ದಿವಸದಲ್ಲೂ ಸಾಕಷ್ಟು ಇತ್ತು.

ಶ್ರೀ ಗಜಾನನನನ್ನು ತಾ. ೨೭—೮—೨೫ ನೇ ಗುರುವಾರ ಸಾಯಂಕಾಲ ಐದು ಘಂಟೆಗೆ ವಿಸರ್ಜಿಸಿ, ಡೋಲು ವಾದ್ಯ, ಭಜನೆ, ಗಾಯನದವರಿಂದ ಮೆರವಣಿಗೆಯಿಂದ ಊರಲ್ಲಿ ಮೆರೆಯಿಸಿ, ಹೊನ್ನೆಗುಂಡಿ ಕೆರೆಯಲ್ಲಿ ಕಳುಹಿಸಲಾಯಿತು. ನಂತರ ಪುನಃ ರಾಷ್ಟ್ರೀಯ ಶಾಲೆಗೆ ಬಂದು, ಅಲ್ಲಿ ಶ್ರೀ ಗೋಪಾಲರಾವ ದೇವ, ಶ್ರೀ ಸುಬ್ರಾಯ ಬೆಳ್ಳಭಟ್ಟರವರಿಗೆ ಅವರ್ಸ್ಯರೂ ಸಾರ್ವಜನಿಕ ಗಣಪತಿ ಉತ್ಸವದಲ್ಲಿ ಬೇರೆ ಬೇರೆ ಜನರು ಸಾರ್ವಜನಿಕ ಕೆಲಸದಲ್ಲಿ ಶಕ್ತಿ ಮೀರಿ ಸಹಾಯ ಮಾಡಿದವರೆಲ್ಲರ ಉಪಕಾರ ಮನ್ನಿಸಿ ಇನ್ನು ಮುಂದಾದರೂ, ಇದಕ್ಕಿಂತ ಹೆಚ್ಚು ಉತ್ಸಾಹದಿಂದ ಸಹಾಯ ಮಾಡಬೇಕೆಂದು ಹೇಳಿ, ತಮ್ಮ ನಾಲ್ಕು ಮಾತು ಮುಗಿಸಿದ ನಂತರ, ಕೊಂಡ್ಲಿ ಊರಿನ ಹೊಳ್ಳನವರಿಗೆ ಅವರು ತೋರಿಸಿದ ಭಕ್ತಿಗೂ, ಸೇವೆಗೂ ದ್ಯೋತಕರೂಪವಾಗಿ ಶ್ರೀ ಸುಬ್ರಾಯ ಭಟ್ಟರ ಕೈಯಿಂದ ಒಂದು "ರಾಷ್ಟ್ರೀಯ" ನಿಶಾನೆಯು ಕೊಡಲ್ಪಟ್ಟಿತು. ಇನ್ನು ಮುಂದಾದರೂ, ಎಲ್ಲ ಊರಿನವರೂ, ಬಂದು ತಮ್ಮ ತಮ್ಮ ಯಥಾಶಕ್ತಿ ಸೇವೆ ಇದೇ ಪ್ರಕಾರ ಮಾಡಬೇಕಾಗಿ ಪ್ರಾರ್ಥನೆ.

ಈ ವರ್ಷ ಸಾರ್ವಜನಿಕ ಶ್ರೀ ಗಣಪತಿ ಉತ್ಸವದಲ್ಲಿ ನಡೆದ ಕಾರ್ಯಕ್ರಮದ ಪ್ರತಿ, ಸಂತೋಷಕರ ಸಮಾಧಾನಕರ, ಆನಂದಜನಕವಾದ, ವಿಧಾಯಕ ಕೆಲಸವೆಂದರೆ, ಶ್ರೀ ಗಜಾನನನ ಸ್ಥಾಪನೆಯಾದಂದಿನಿಂದ, ವಿಸರ್ಜನೆವರೆಗೆ ಸಾರ್ವತ್ರಿಕವಾಗಿ ನೂಲುವ ಕೆಲಸವು ನಡೆದದ್ದೇ. ಈ ನೂಲುವದರಲ್ಲಿ, ಊರೊಳಗಿನವರು ಭಾಗ ತಕ್ಕೊಂಡಂತೆ ಇನ್ನುಮುಂದೆ ಶ್ರೀ ಶಾರದಾ ಉತ್ಸವವೇಳೆಯಲ್ಲೂ ಭಾಗ ತಕ್ಕೊಂಡು, ಆ ವೇಳೆಯಲ್ಲಿ ಇಡಬಹುದಾದ ಇನಾಮನ್ನು ಸಂಪಾದಿಸಬೇಕಾಗಿ ವಿನಂತಿ.

ಶ್ರೀ ಗಣಪತಿ ಉತ್ಸವ ವೇಳೆಯಲ್ಲಿ ತನು-ಮನ-ಧನದಿಂದ ಸಹಾಯ ಮಾಡಿದ ಎಲ್ಲ ಬಂಧು ಭಗಿನಿಯರಿಗೆ ಉತ್ಸವ ಕಮಿಟಿಯವರು ತುಂಬಾ ಆಭಾರಿಯಾಗಿದ್ದಾರೆ.

ಸಿದ್ದಾಪುರ, ತಾ. ೩೦-೮-೨೫.

—ಮೈಸೂರ ವಿಶ್ವವಿದ್ಯಾಲಯದಲ್ಲಿ ಜ್ಞಾನದಾನವನ್ನು ಕನ್ನಡದಿಂದಲೇ ಕೊಡಬೇಕೆಂದು ಶ್ರೀ ಸಿ.ಆರ್.ರೆಡ್ಡಿಯವರು ಸೂಚಿಸಿರುವರು. ಮೈಸೂರಿನವರು ಈ ಸೂಚನೆಯನ್ನು ಶೀಘ್ರವೇ ಮನ್ನಿಸಬೇಕಾಗಿ ಪ್ರಾರ್ಥನೆ.

—ಮೈಸೂರಿನ ಶ್ರೀ ಚಾಮರಾಜೇಂದ್ರ ಒಡೆಯರ ಕಾಲದಲ್ಲಿ ಪಟ್ಟಾಭಿಷಿಕ್ತರಾದ ಪಟ್ಟದರಸಿಯು ಕಳೆದ ತಾ. ೧೦ನೇಗೆ ಮೃತಪಟ್ಟರು. ಯಥಾಶಾಸ್ತ್ರ ಅವರ ಉತ್ತರಕ್ರಿಯಾದಿಗಳು ರಾಜವೈಭವದಿಂದ ನೆರವೇರಿಸಲ್ಪಟ್ಟವು.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ಬಯಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಕೇಶ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅದನ್ನು ತೊಡೆಯುತ್ತಾ ಹೋದರೆ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅದರೆ, ಅವು ದೊಡ್ಡದಾಗಿ ಬೆಳೆದು ದಟ್ಟವಾಗುತ್ತವೆ. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುತ್ತದೆ.

ಕೀಳು ತರದ ವಸ್ತುಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ವಸ್ತುವಿನ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಒಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚು 0-14-0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಹೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದ್ದು. ಇದರಲ್ಲಿ ಮದಿರೆಯ (ಅಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರದ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಿಂದ ಸೆಳಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಕ್ರಯ: ಸೀಸೆ 1 ಕ್ಕೆ 0-3-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ¼ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ

Adress:- **The Anglo Indian Drug & Chemical Co,**
16, Market, **BOMBAY 2**

ದೇವಿ ಶ್ರೀ ಅಹಿಲ್ಯಾಬಾಯಿ !

ಪ್ರಸಿದ್ಧ ಹೋಳಕರ ಮನೆತನದ ದೇವಿ ಶ್ರೀ ಅಹಿಲ್ಯಾಬಾಯಿಯವರ ಪುಣ್ಯ ತಿಥಿಯು ಕಳೆದ ಅಗಸ್ಟ ೧೮ ನೇ ತಾರೀಖಿಗೆ ಅಲ್ಲಲ್ಲಿ ಸಮಾಚರಿಸಲ್ಪಟ್ಟಿತು. ದೇವಿ ಶ್ರೀ ಅಹಿಲ್ಯಾಬಾಯಿ ಹೋಳಕರರವರ ಚರಿತ್ರೆಯನ್ನು ವಾಚಕರು ತಿಳಿದುಕೊಳ್ಳುವದು ಅವಶ್ಯವು. ಅಹಿಲ್ಯಾಬಾಯಿಯವರು ಆನಂದರಾವ ಶಿಂದೆಯವರ ಮಗಳು. ಆನಂದರಾಯರು ಬಾರಶಿ ಗ್ರಾಮದ ಪಟೇಲರು. ಅಹಿಲ್ಯಾಬಾಯಿಯವರು ೧೭೩೫ನೇ ಇಸ್ವಿಯಲ್ಲಿ ಜನ್ಮವನ್ನೆತ್ತಿದರು. ಎಂಟನೇ ವರುಷ ಪ್ರಾಯದಲ್ಲಿ ಅಹಿಲ್ಯಾಬಾಯಿಯ ಮದುವೆಯಾಯಿತು. ಪತಿಗಳು ಖಂಡೇರಾವ ಹೋಳಕರರವರು. ಖಂಡೇರಾಯರು ಹೋಳಕರ ಮನೆತನದ ಸಂಸ್ಥಾಪಕರಾದ ಮಲ್ಹಾರರಾಯರ ಪುತ್ರರು. ಅಹಿಲ್ಯಾಬಾಯಿಯ ಸ್ಥಿತಿಯ ವಿಚಾರ ಮಾಡಿದರೆ, ಅವಳಿಗೆ ಸಿಕ್ಕ ಶಿಕ್ಷಣವು ತೀರ ಅಲ್ಪವು. ಓದುಬರೆಯಲು ಮಾತ್ರ ಅವಳಿಗೆ ಬರುತ್ತಿತ್ತು. ಅಹಿಲ್ಯಾಬಾಯಿಯು ವ್ಯಸನಗಳ ಲೇಶವಿದ್ದಿಲ್ಲ. ಆದರೆ, ವ್ಯವಹಾರಜ್ಞಾನವು ಅವಳಲ್ಲಿ ಮೂಲತಃ ನೆಲೆಗೊಂಡಿತ್ತು. ಪ್ರಪಂಚದೊಳಗಿನ ವ್ಯವಹಾರಗಳ ಅಂತರಂಗವನ್ನು ಅರಿತುಕೊಳ್ಳಲು ಅವಳು ತೀರ ಆತುರಳಾಗಿದ್ದಳು. ಆದರಿಂದ ಅವಳ ಜ್ಞಾನವು ಬಹುಬೇಗನೆ ಬೆಳೆಯಿತು.

ಖಂಡೇರಾಯರೂ ಚತುರರೇ. ದೊರೆಯಾಗುವ ಲವಲವಿಕೆಯು ಇವರಿಗೆ ವಿಶೇಷ. ಅಹಿಲ್ಯಾಬಾಯಿಯವರು ಸೌಖ್ಯದಿಂದ ೧೦-೧೨ ವರುಷ ಸಂಸಾರ ಮಾಡಿ ಎರಡು ಮಕ್ಕಳನ್ನು ಪಡೆದರು. ಹಿರಿಯರು ಮಾಲೇರಾಯರು; ಎರಡನೇಯವಳು ಮುಕ್ತಾಬಾಯಿ ಎಂಬ ಹುಡುಗಿ.

ಮಲ್ಹಾರರಾಯರಿಗೆ ಸೊಸೆಯ ಚಾತುರ್ಯ ನೋಡಿ ಬಹಳ ಆನಂದವಾಯಿತು. ರಾಜಕಾರಣವನ್ನು ನಡಿಸಲು ಇವಳು ತೀರ ಯೋಗ್ಯಳೆಂದು ಅವರ ಮನವರಿಕೆಯಾಗಿ ಸಂಸ್ಥಾನದ ಕಾರಭಾರವನ್ನು ಕೆಲವಟ್ಟಿಗೆ ಅಹಿಲ್ಯಾಬಾಯಿಗೆ ವಹಿಸಿದರು. ಅಹಿಲ್ಯಾಬಾಯಿಯವರು ತಮಗೆ ವಹಿಸಿಕೊಟ್ಟ ಕೆಲಸವನ್ನು ಚೊಕ್ಕ ರೀತಿಯಿಂದ ನಡಿಸಿ, ತಮ್ಮ ಪಾತ್ರತೆಯನ್ನು ಸಿದ್ಧಪಡಿಸಿದರು.

ಆಗ ಹೋಳಕರ ಸಂಸ್ಥಾನವು ಪೇಶವೆಯವರ ಮಾಂಡಲೀಕ ಸಂಸ್ಥಾನವಾಗಿದ್ದಿತು. ೧೭೫೪ ನೇ ಇಸ್ವಿಯಲ್ಲಿ ಪಂಜಾಬದ ಬದಿಗೆ ದಂಡೆತ್ತಿ ಹೋಗುವ ಪ್ರಸಂಗ ಬಂತು. ನಾನಾಸಾಹೇಬ ಪೇಶವೇಯವರು ರಾಘೋಬಾ ದಾದಾರವರನ್ನು ಸೇನಾಪತಿಯಾಗಿ ನೇಮಿಸಿ, ಶಿಂದೇ, ಹೋಳಕರ ಮುಂತಾದ ಮಾಂಡಲೀಕ ರಾಜರಿಗೆ ರಾಘೋಬಾ ದಾದಾರವರನ್ನು ಹಿಂಬಾಲಿಸಲು ಆಜ್ಞೆಯನ್ನಿತ್ತರು. ಮಲ್ಹಾರರಾಯರೂ, ಖಂಡೇರಾಯರೂ ರಾಘೋಬಾ ದಾದಾರವರ ಸೈನ್ಯಕ್ಕೆ ನೆರವಾಗಿ ಮುಂದರಿದರು. ಅಹಿಲ್ಯಾಬಾಯಿಯವರೂ ತಮ್ಮ ಪತಿಗಳನ್ನು ಹಿಂಬಾಲಿಸಿದರು. ಕುಂಭೇರಿ ಕೋಟೆಗೆ ಪೇಶವೇಯರೂ, ಹೋಳಕರರೂ, ಶಿಂದೆಯವರೂ, ಮುತ್ತಿಗೆ ಹಾಕಿದರು. ಕದನ ಸಂಗ್ರಾಮವು ನಡೆದಿತ್ತು. ಘಕ್ಕನೆ ಒಂದು ಗುಂಡು ತಗಲಿ ಖಂಡೇರಾಯರು ನೆಲಕ್ಕುರುಳಿ ಸ್ವರ್ಗಸ್ಥರಾದರು. ಅಹಿಲ್ಯಾಬಾಯಿಯವರು ಅನಾಥರಾದರು! ಆಗ ಅವರ ಪ್ರಾಯವು ಬರೇ ೨೧ ವರುಷ. ಮಲ್ಹಾರರಾಯರಿಗೆ ಪುತ್ರ ಶೋಕವು. ಅಹಿಲ್ಯಾಬಾಯಿಯವರಿಗೆ ಪತಿಶೋಕವು. ಅಪ್ರಾಯಸ್ತ ಮಾಲೇರಾಯರ ಹೊರತು, ರಾಜ್ಯಕಾರಭಾರವನ್ನು ನಡಿಸಲು ಯಾರೂ ಯೋಗ್ಯ ಪುರುಷರಿದ್ದಿಲ್ಲ. ಮಲ್ಹಾರರಾಯರ ಮೇಲೆ ಮತ್ತೊಂದು ವಿಪತ್ತು ಬಂದೊದಗಿತು. ಅಹಿಲ್ಯಾಬಾಯಿಯವರು ಪತಿಗಳೊಡನೆ ಸಹಗಮನವನ್ನೈದು ಆತ್ಮತ್ಯಾಗವನ್ನು ಮಾಡುವ ಕಠೋರ ನಿರ್ಧಾರ ಮಾಡಿದ್ದರು. ಇದನ್ನು ಕೇಳಿ ಮಲ್ಹಾರರಾಯರು ಅಪಾರ ಶೋಕಸಾಗರದಲ್ಲಿ ಮುಳುಗಿದರು. ಕೆಲ ಹೊತ್ತಿನಲ್ಲಿ ಧೈರ್ಯ ತಳೆದು, ಸೊಸೆಯನ್ನು ಕರೆದು ಬುದ್ಧಿ ಮಾರ್ಗವನ್ನು ಹೇಳಿ ಸಹಗಮನ ಮಾಡಿದರೆ ಸರ್ವನಾಶವಾಗುವದೆಂದೂ, ಮಾಲೇರಾಯರೂ, ಮುಕ್ತಾಬಾಯಿಯವರೂ ಅನಾಥರಾಗುವರೆಂದೂ ಹೇಳಿದ ಬಳಿಕ, ಅಹಿಲ್ಯಾಬಾಯಿಯವರು ದುರ್ದೈವದಿಂದ ಪ್ರಾಪ್ತವಾದ ವೈಧವ್ಯವನ್ನು ಸಮಾಧಾನ ಚಿತ್ತದಿಂದ ಕಳೆಯುವ ನಿಶ್ಚಯ ಮಾಡಿದರು.

ಮಲ್ಹಾರರಾಯರು ರಾಕ್ಷಸಭುವನ, ಪಾಣಿಪತ್ತ ಮುಂತಾದ ಸಂಗ್ರಾಮಗಳಲ್ಲಿ ಪೇಶವೇಯವರಿಗೆ ನೆರವಾಗಿ, ಅದ್ಭುತ ಸಾಹಸವನ್ನು ಪ್ರಕಟಿಸಿದರು. ಪೇಶವೆಯವರು ಆಗಾಗ ಮಲ್ಹಾರರಾಯರಿಗೆ ಪಾರಿತೋಷಕಗಳನ್ನಿತ್ತು ಸತ್ಕರಿಸಿದರು. ಮಲ್ಹಾರರಾಯರು ೧೭೬೬ ನೇ ಇಸ್ವಿಯಲ್ಲಿ ತೀರಿಕೊಂಡಾಗ ಸಂಸ್ಥಾನದ ಕೋಶದಲ್ಲಿ ೧೬ ಕೋಟಿ ರೂಪಾಯಿಗಳ ದೊಡ್ಡ ಶಿಲ್ಕು. ಸಂಸ್ಥಾನದ ಉತ್ಪನ್ನವು ರೂ. ೭೫ ಲಕ್ಷ ಇತ್ತು. ಮಲ್ಹಾರರಾಯರ ತರುವಾಯ ಮಾಲೇರಾಯರು ಪಟ್ಟವನ್ನೇರಿದರು. ಇನ್ನೂ ಅಹಿಲ್ಯಾಬಾಯಿಯವರ ದುರ್ದೈವ ತೀರಲಿಲ್ಲ. ಒಂದು ವರ್ಷದಲ್ಲಿ ಮಾಲೇರಾಯರು ತೀರಿಕೊಂಡರು. ಪತಿಶೋಕದಲ್ಲಿ ಪುತ್ರಶೋಕವು ಕೂಡಿತು. ಆದರೂ ಅಹಿಲ್ಯಾಬಾಯಿಯವರು ಧೈರ್ಯ ಬಿಡಲಿಲ್ಲ; ರಾಜ್ಯಕಾರಭಾರವನ್ನು ತಾವೇ ವಹಿಸಿಕೊಂಡು ನಡಿಸಹತ್ತಿದರು.

ಅಹಿಲ್ಯಾಬಾಯಿಯವರು ಹೆಂಗಸರು; ಅವರಿಂದ ರಾಜ್ಯಕಾರಭಾರವನ್ನು ಸೆಳೆಕೊಂಡು ತಾವೇ ಅಧಿಪತಿಗಳಾಗಬೇಕೆಂದು ಆಗಿನ ಪ್ರಧಾನರಾದ ಗಂಗಾಧರ ಯಶ್ವಂತ ಚಂದ್ರಚೂಡರವರು ಅಹಿಲ್ಯಾಬಾಯಿಯವರಿಗೆ ದತ್ತಕ ಕೊಳ್ಳಲು ಉಪದೇಶ ಮಾಡಿದರು.

ಅಹಿಲ್ಯಾಬಾಯಿಯವರಿಗೆ ಅಂತರಂಗ ತಿಳಿಯಿತು. ದತ್ತಕ ಮಗನಿಗೆ ಪಟ್ಟಕಟ್ಟಿ ಚಂದ್ರಚೂಡರವರು ತಾವೇ ಸಂಸ್ಥಾನದಲ್ಲಿ ಸರ್ವಾಧಿಕಾರಿಗಳಾಗಿ ಮೆರೆಯಬೇಕೆಂದಿರುವದು ಅಹಿಲ್ಯಾಬಾಯಿಯವರ ಮನೋನಿಶ್ಚಯವಾಯಿತು. ತಾವು ದತ್ತಕ ಕೊಳ್ಳುವದಿಲ್ಲವಾಗಿ ನಿರ್ಧಾರದಿಂದ ನುಡಿದರು. ಇದರಿಂದ ಚಂದ್ರಚೂಡರವರಿಗೆ ನಿರಾಶೆಯಾಗಿ, ಅಹಿಲ್ಯಾಬಾಯಿಯವರನ್ನು ದಂಡಿಸುವ ಆಲೋಚನೆ ಮಾಡಿದರು.

ರಾಘೋಬಾ ದಾದಾರವರು ಪೇಶವೇ ಕಾರಭಾರದಲ್ಲಿ ಆ ಸಮಯ ಪ್ರತಿಷ್ಠಿತರಿದ್ದರು. ಇವರಿಗೆ ದುರಾಶೆ ಬಹಳ. ಚಂದ್ರಚೂಡರವರು ಅವರೊಡನೆ ಪತ್ರವ್ಯವಹಾರ ನಡಿಸಿದರು. ಅಹಿಲ್ಯಾಬಾಯಿಯಂಥ ಸ್ತ್ರೀಯರು ಸಂಸ್ಥಾನಾಧಿಪತ್ಯವನ್ನು ಕೈಕೊಂಡಿದ್ದರಿಂದ ಈಗಲೇ ದಾಳಿಯನ್ನೆತ್ತಿ ಬಂದರೆ ಅವರಿಗೆ ಸೋಲಾಗುವದು; ನೀವು ಗೆಲ್ಲುವಿರಿ; ಸಂಸ್ಥಾನದ ಕೋಶದಲ್ಲಿದ್ದ ಕೋಟ್ಯಾವಧಿ ದ್ರವ್ಯವೂ, ಲಕ್ಷಾವಧಿ ರೂಪಾಯಿಗಳ ಉತ್ಪನ್ನವುಳ್ಳ ಪ್ರದೇಶವೂ ನಿಮ್ಮ ಹಸ್ತಗತವಾಗುವದು, ಇತ್ಯಾದಿ ಬರೆದರು. ರಾಘೋಬಾ ದಾದಾರವರಿಗೆ ಬಾಯಿಯಲ್ಲಿ ನೀರು ಬಂತು. ದಾಳಿಯನ್ನೆತ್ತುವ ತಯಾರಿ ಮಾಡಿದರು. ಅಹಿಲ್ಯಾಬಾಯಿಯವರಿಗೆ ಈ ಸುದ್ದಿಯ ಸುಳಿವು ಹತ್ತಿದ ಕೂಡಲೆ ಅಹಿಲ್ಯಾಬಾಯಿಯವರು ರಾಘೋಬಾ ದಾದಾರವರಿಗೆ ಪತ್ರ ಬರೆದದ್ದೇನಂದರೆ:—

"ನಾನೇನು ನಿರಾಧಾರಿ ಹೆಂಗಸು. ನನಗೆ ನೀವು ರಣಕ್ಷೇತ್ರದಲ್ಲಿ ಸೋಲಿಸಿದರೆ ಆಶ್ಚರ್ಯವೇನಿಲ್ಲ. ಆದರೆ, ನಾನು ನಿಮಗೆ ಸೋಲಿಸಿದರೆ, ಹೆಂಗಸಿನ ಕಡೆಯಿಂದ ಪರಾಜಯ ಹೊಂದಿದ ಹೇಡಿ ಪುರುಷನೆಂದು ನೀವು ಶಾಶ್ವತವಾದ ಅಪಕೀರ್ತಿ ಹೊಂದುವಿ."

ಈ ಪತ್ರ ನೋಡಿದೊಡನೆ ರಾಘೋಬರಾಯರು ನಾಚಿಕೆಗೇಡಿಗಳಾಗಿ ದುರಾಶೆಯನ್ನು ತೊಲಗಿದರು. ಅಹಿಲ್ಯಾಬಾಯಿಯವರ ಮೇಲಿನ ದೊಡ್ಡ ಸಂಕಟವು ದೂರವಾಯಿತು.

ಅಹಿಲ್ಯಾಬಾಯಿಯವರು ೧೭೬೭ನೇ ಇಸ್ವಿಯಿಂದ ೧೭೯೫ನೇ ಇಸ್ವಿಯವರೆಗೆ ದಕ್ಷತೆಯಿಂದ ಕಾರಭಾರವನ್ನು ನಡಿಸಿದರು. ಅವರ ಕಠಿಣ ತಪಸ್ಸು, ನಿಷ್ಠೆಯೂ, ಅಚಲ ಸ್ಥೈರ್ಯವೂ, ಧರ್ಮಬುದ್ಧಿಯೂ ಪ್ರಶಂಸನೀಯವಿವೆ. ಶ್ರೀ ದೇವಿಯವರು ಇಡೀ ಹಿಂದುಸ್ಥಾನದಲ್ಲೆಲ್ಲ ಅನ್ನಛತ್ರ ಮೊದಲಾದ ಧರ್ಮಕಾರ್ಯಗಳನ್ನು ನೆರವೇರಿಸಿ, ಶಾಶ್ವತವಾದ ಕೀರ್ತಿಯನ್ನು ಪಡೆದಿರುವರು. ಇಂಥ ರಾಜಕಾರಣಧುರಂಧರ, ಧರ್ಮನಿಷ್ಠ, ಪರ, ಔದಾರ್ಯಸಾಗರ, ತಪೋನಿಧಿ ಅಹಿಲ್ಯಾಬಾಯಿ ಹೋಳಕರರವರ ಪುಣ್ಯತಿಥಿಯನ್ನು ಸನಾತನ ಧರ್ಮಾಭಿಮಾನಿಗಳು ಪಾಲಿಸಿ ಕೃತಕೃತ್ಯರಾಗುವದು ಸಹಜವು.

—ಅನಂತಶಯನಪುರದ ಮಹಾರಾಜರವರ ಸಂಸ್ಕೃತ ಕಾಲೇಜಿನೊಳಗಿನ ೧೬ ವರ್ಷದ ವಿದ್ಯಾರ್ಥಿನಿಯೊಬ್ಬಳು ಕಳೆದ ತಾ. ೨೫ನೇಗೆ ಚಿಮಣಿ ಎಣ್ಣೆಯ ಸಮೀಪ ಕುಳಿತಿದ್ದಳು; ಅಲ್ಲಿಯೇ ನಿದ್ದೆಹೋದಳು. ಅವಳ ಉಡುಗೆಗಳಿಗೆ ದೀಪ ತಾಗಿ ಇಡೀ ಮೈ ಸುಟ್ಟು ಸತ್ತಳು.

ನಾವು ಎಲ್ಲ ನಮೂನೆಯ, ಖಾತ್ರಿಯ ಉತ್ತಮ ಕನ್ನಡಕ



ಗಳನ್ನು ಯೋಗ್ಯ ಕಿಮ್ಮತಿಗೆ ತರಿಸಿಕೊಡುವೆವು. ಪರಊರಿನ ಗೃಹಸ್ಥರು ಯಾವ ನಮೂನೆಯ ಕಣ್ಣುಗಳು ಬೇಕೆಂಬದನ್ನು ತಿಳಿಸಬೇಕು. ಮತ್ತು ಆದೇಶದ ಸಂಗಡ ೧ ರೂಪಾಯಿ ಮುಂಗಡ ಕಳಿಸಿದ್ದಲ್ಲಿ ಬೇಕಾದ ನಮೂನೆಯ ಕಣ್ಣುಗಳು ದೊರಕುವವು. ಅನುಭವದಿಂದ ಖಾತ್ರಿಯಾಗುವದು.

ಆಪಟೇ ಸನ್ಸ್,

ಕನ್ನಡಕ ವ್ಯಾಪಾರಿಗಳು, ಮಾರುತಿ ಪೇಟೆ,

ಕಾರವಾರ.

ವಿವಿಧ ಸಂಗ್ರಹ.

ಅದ್ಭುತ !

ಅಮೇರಿಕೆಯಲ್ಲಿ ಒಂದು ಹೊಸ ಮೋಟಾರು ತಯಾರಾಗಿದೆ. ಅದರ ವೇಗವು ಮಿನಿಟಿಗೆ ೩ ಮೈಲು ತಾಸಿಗೆ ೬೦ ಮೈಲಿಗಳ ಕನಿಷ್ಠ ವೇಗದಿಂದ ಅದನ್ನು ನಡಿಸಲು ಬರುವದೇ ಇಲ್ಲ! ಇದರ ಇಂಜಿನು ವಿಮಾನದ ಇಂಜಿನಿನಂತೆ ಇದೆ. ಈ ಮೋಟಾರನ್ನು ಜನರು ತಿರುಗಾಡುವ ಮಾರ್ಗಗಳ ಮೇಲಿಂದ ನಡಿಸುವದು ಗಂಡಾಂತರಪ್ರದವು.

***

ಹೊಸ ಸಕ್ಕರೆ !

ಇಂಗ್ಲಂಡದೊಳಗಿನ ಲಿವ್ಹರಪೂಲದಲ್ಲಿ ಪ್ರೊ| ಬೆಲಿ ಎಂಬವರು ಕೃತ್ರಿಮ ಸಕ್ಕರೆಯನ್ನು ತಯಾರಿಸಿರುವರು! ಸೂರ್ಯ ಪ್ರಕಾಶದಿಂದ ಕೃತ್ರಿಮ ಸಕ್ಕರೆಯನ್ನು ಇವರು ತಯಾರು ಮಾಡಿರುವರು. ವಿದ್ಯುದ್ದೀಪದ ಜ್ಯೋತಿಯನ್ನು ಕಾರ್ಬೋಲಿಕ್ ಎಸಿಡ್ ಗ್ಯಾಸಿನ ಮೇಲೆ ಕೇಂದ್ರೀಕೃತ ಮಾಡಲು, ಹೊಸದೊಂದು ಗ್ಯಾಸ ತಯಾರಿತು. ಈ ಗ್ಯಾಸನ್ನು ಬಡುವಿನ ಪುಡಿ ಹಾಕಿದ ನೀರಿನಲ್ಲಿ ಕರಗಿಸಲು ಸಕ್ಕರೆಯು ತಯಾರಾಯಿತು. ಚಹಾ ಕುಡಿಯುವವರಿಗೆ ಅನುಕೂಲ!

***

ಮದುವೆಯ ಪೇಟೆ

ಮಧ್ಯಭೂಮಿಯ ಬಳಿ ಸೋರಟ್‌ನಲ್ಲಿ ಒಂದು ವಿಚಿತ್ರ ತರದ ಮದುವೆಯ ಸಂಪ್ರದಾಯವು ನಡೆದುಬಂದಿದೆ. ಪ್ರತಿ ವರ್ಷಕ್ಕೆ ಸಾವಿರಾರು ಮಂದಿಗಳು ತಮ್ಮ ಹುಡುಗ-ಹುಡುಗಿಯರನ್ನು ಕರಕೊಂಡು ಅಲ್ಲಿಯ ಶಿವ ಮಂದಿರದ ಬಳಿ ಒಂದು ದಿವಸ ಒಟ್ಟಿಗೆ ನೆರೆಯುತ್ತಾರೆ. ಈ ಸಮ್ಮೇಲನವು ಕೆಲವು ದಿವಸ ನಡೆಯುತ್ತದೆ. ಈ ಸಮ್ಮೇಲನದಲ್ಲಿಯೇ ಮದುವೆಗಳಾಗುತ್ತವೆ. ಈ ಪೇಟೆಯು ಸುರುವಾಗಿ ೩೦೦ ವರ್ಷಗಳಾದವಂತೆ. ವಿವಾಹಾತುರ ಬಡವರೂ, ಶ್ರೀಮಂತರೂ ಅಲ್ಲಿ ಬಂದು ತಮಗೆ ಬೇಕಾದ ಗಂಡ-ಹೆಂಡರನ್ನು ಆರಿಸಿ ತೆಗೆದು ಮದುವೆ ಮಾಡಿಕೊಳ್ಳುತ್ತಾರೆ.

***

ವೈಷ್ಣವ ಮುಸಲ್ಮಾನರು !

ಮುಸಲ್ಮಾನರಲ್ಲಿ ರಾಧಾಕೃಷ್ಣನ ಗೀತ ಮಾಡುವ ಸುಮಾರು ೪೫ ಮುಸಲ್ಮಾನ ವೈಷ್ಣವ ಭಕ್ತರ ಹೆಸರುಗಳನ್ನು ರಾಯಸಾಹೇಬ ಗಣೇಶ ಚಂದ್ರ ಸೇನರವರು "ವಂಗ ಸಾಹಿತ್ಯಪರಿಚಯ"ವೆಂಬ ಗ್ರಂಥದಲ್ಲಿ ನಮೂದಿಸಿರುವರು. ರಾಧಾಕೃಷ್ಣರ ಪ್ರೇಮದಿಂದ ತಲ್ಲೀನರಾಗಿ ಇವರು ಗೀತಗಳನ್ನು ಮಾಡಿರುವರು. ಆಚಾರ-ವಿಚಾರಗಳಲ್ಲಿ ಸನಾತನ ಧರ್ಮಾನುಯಾಯಿಗಳಂತೆ ಇವರು ಪಾಲಿಸುತ್ತಿದ್ದರು. ಆದರೂ ಇವರಿಗೆ ಹಿಂದೂ ಧರ್ಮದಲ್ಲಿ ಸೇರಿಸಿಕೊಂಡಿದ್ದಿಲ್ಲ. ಚೈತನ್ಯ ಸ್ವಾಮಿಯವರ ಉದಯವಾದ ಬಳಿಕ ಅವರ ಪಂಥದಲ್ಲಿ ಇವರು ಸೇರಿಕೊಂಡು ವೈಷ್ಣವರಾದರು !

***

ಚೀನದೊಳಗಿನ ಸಮಾಜ ಸ್ಥಿತಿ.

ಚೀನ ದೇಶದಲ್ಲಿ ಜಾತಿಭೇದವಿಲ್ಲ; ಧರ್ಮಭೇದವಿಲ್ಲ; ಎಲ್ಲರೂ ಒಂದೇ ಬೌದ್ಧ ಧರ್ಮಾನುಯಾಯಿಗಳು. ಸ್ಪೃಶ್ಯ-ಅಸ್ಪೃಶ್ಯರೆಂಬ ಭೇದಭಾವವಿಲ್ಲ. ಸ್ತ್ರೀಯರು ತಮ್ಮ ಮೋರೆಯನ್ನು ಪರದೆಯಲ್ಲಿ ಅಡಗಿಸಿಕೊಳ್ಳುವದಿಲ್ಲ. ಅಲ್ಲಿ ಬಾಲ ವಿವಾಹದ ಪದ್ಧತಿಯಿಲ್ಲ. ಹುಡುಗ-ಹುಡುಗಿಯರು ಪ್ರೌಢಾವಸ್ಥೆಗೆ ಬಂದ ಬಳಿಕ, ವಿವಾಹಗಳಾಗುತ್ತವೆ. ಸಹಭೋಜನ ಬೇಕೋ? ಅವೂ ನಡೆಯುತ್ತವೆ. ಅಲ್ಲಿಯ ಸಹಭೋಜನದ ನಮೂನೆಯು ವಿಚಿತ್ರವಿದೆ. ಮಧ್ಯದಲ್ಲಿ ಅನ್ನದ ಕಪ್ಪಲಿಯನ್ನಿಡುತ್ತಾರೆ; ಸುತ್ತಲೂ ೧೦-೧೫ ಮಂದಿಗಳು ಕೂಡುಕೊಂಡು ಅನ್ನ ಬಡಿಸಿಕೊಂಡು, ವಿನೋದದಿಂದ ಹರಟೆ ಕೊಡುತ್ತ ಉಣ್ಣುತ್ತಾರೆ. ಈ ಸಾಮಾಜಿಕ ಸ್ಥಿತಿಯು ತೀರ ಉಚ್ಚ ತರಗತಿಯದು, ಪೂರ್ಣಾವಸ್ಥೆಯದು ಆದರೂ, ಚೀನ ದೇಶದಲ್ಲಿ ಸ್ವಾತಂತ್ರ್ಯ ಜ್ಯೋತಿಯಿಲ್ಲ. ಕಾರಣವೇನು? ಪರಕೀಯ ಯುರೋಪಿಯನ್‌ರು ಅಲ್ಲಿ ಠಾಣ್ಯ ಹೂಡಿ ಚೀನ ಪ್ರಜೆಗಳಲ್ಲಿ ಭೇದಬುದ್ಧಿಯನ್ನು ಹುಟ್ಟಿಸಿ, ಚೀನ ದೇಶದ ಸೊಂಟ ಮುರಿದಿರುವರು. ಭರತಖಂಡದೊಳಗಿನ ಸ್ವರಾಜ್ಯಕ್ಕೆ ಜಾತಿಭೇದ, ಧರ್ಮಭೇದ, ಬಾಲವಿವಾಹ ಇತ್ಯಾದಿ ಕಾರಣಗಳಿಂದ ಆತಂಕವಾಗಿದೆಂಬ ಮಾತು ಅಸ್ವಾಭಾವಿಕವಲ್ಲೇನು ?

***

ವಿಶ್ವವಿದ್ಯಾಲಯ ಸುಧಾರಣಾ ಕಮಿಟಿಯ ಶಿಫಾರಸುಗಳು.

ಮುಂಬಯಿಯ ವಿಶ್ವವಿದ್ಯಾಲಯದವರು ವಿಶ್ವವಿದ್ಯಾಲಯದ ಸುಧಾರಣೆಯ ವಿಚಾರಕ್ಕಾಗಿ ಸರ್ ಚಿಮಣಲಾಲ ಸೆಟಲವಾಡ, ಡಾ| ರಘುನಾಥರಾವ ಪರಾಂಜಪೆ, ಮಿ| ಕೊವ್ಹರಜಿ, ಬೆರಿಸ್ಟರ ಜಯಕರ, ರೆವ್ಹರೆಂಡ ಬ್ಲೆಟರ, ಶ್ರೀ| ನಟರಾಜನ, ಪ್ರೊ| ಕೇ. ಟಿ. ಶಹಾ, ಮಿರ್ಜಾ ಅಲ್ಲಿ ಮಹಮ್ಮದ ಖಾನ, ಸರ್ ಪುರುಷೋತ್ತಮದಾಸ ಠಾಕೂರದಾಸ, ಸರ್ ಫಾಝುಲಭಾಯಿ ಕರೀಮಭಾಯಿ, ಶ್ರೀ| ಅಣ್ಣಾ ಬಾಬಾಜಿ ಲಠ್ಠೆ, ಪಿ| ಪಟೇಲ ಮೊದಲಾದ ವಿದ್ವಾಂಸರ ಕಮೀಟಿಯನ್ನು ನೇಮಿಸಿದ್ದರು. ಈ ಕಮೀಟಿಯವರು ಪುರಾವೆಯನ್ನು ಸಂಗ್ರಹಿಸಿ, ತಮ್ಮ ಶಿಫಾರಸುಗಳನ್ನು ಪ್ರಕಟಿಸಿರುವರು. ಮುಖ್ಯವಾದವುಗಳು ಯಾವವೆಂದರೆ:— (೧) ಮುಂಬಯಿ ವಿಶ್ವವಿದ್ಯಾಲಯದ ಕಾರ್ಯಕ್ಷೇತ್ರವು ಈಗಿನಂತೆ ಇರಬೇಕು; ಆದರೆ, ಇಲಾಖೆಯ ಇತರ ಭಾಗಗಳಲ್ಲಿ ಸ್ವತಂತ್ರ ವಿದ್ಯಾಲಯಗಳನ್ನು ಸ್ಥಾಪಿಸಬೇಕು. ಮತ್ತು ಈ ವಿದ್ಯಾಲಯಗಳಿಗೆ ಜೋಡಿಸಿ ಅಲ್ಲಲ್ಲಿ ಕಾಲೇಜುಗಳನ್ನು ತೆರೆಯಬೇಕು. (೨) ಮುಂಬಯಿಯ ವಿಶ್ವವಿದ್ಯಾಲಯದವರು ಅತ್ಯುಚ್ಚ ತರಗತಿಯ ಶಿಕ್ಷಣವನ್ನು ಅರ್ಪಿಸಬೇಕು. ವಿದ್ಯಾರ್ಥಿಗಳು ಪದವೀಧರರಾದ ಬಳಿಕ, ಅವರ ಶೋಧಕ ಬುದ್ಧಿ ವೃದ್ಧಿಯಾಗುವಂಥ ಶಿಕ್ಷಣವನ್ನು ವಿದ್ಯಾಲಯದವರು ಕೊಡಬೇಕು. ಈ ಯೋಜನೆಗೆ ಕಾಲೇಜುಗಳೊಳಗಿನ ಪ್ರೊಫೆಸರರ ಬೆಂಬಲ ಕೊಳ್ಳಬೇಕು. ಅದಕ್ಕಾಗಿ ಅಲ್ಲಲ್ಲಿ ಹರಡಿಕೊಂಡಿದ್ದ ಕಾಲೇಜುಗಳನ್ನು ವಿಶ್ವವಿದ್ಯಾಲಯದ ಬಳಿಯಲ್ಲಿ ತರಬೇಕು. (೩) ಶಾಸ್ತ್ರೀಯ ಶಿಕ್ಷಣವನ್ನು ದೇಶದೊಳಗಿನ ಉದ್ಯೋಗ-ಧಂದೆಗಳೊಳಗಿನ ಅಡಚಣೆಗಳನ್ನು ದೂರ ಮಾಡುವ ದೃಷ್ಟಿಯಿಂದ ಸಂಘಟಿಸಬೇಕು. (೪) ವಿಶ್ವವಿದ್ಯಾಲಯದ ಕಾರಭಾರಿ ಮಂಡಳವನ್ನು ಪ್ರಜಾಪ್ರತಿನಿಧಿ ಸಂಸ್ಥೆಯಾಗಿ ಪರಿವರ್ತಿಸಬೇಕು. ಅಂದರೆ, ಶೇಕಡಾ ೭೫ ರಷ್ಟು ಜಾಗೆಗಳು ಪ್ರಜೆಗಳಿಂದ ಆರಿಸಲ್ಪಡಬೇಕು. ೨೫ ಮಂದಿಗಳನ್ನು ಸರಕಾರವು ನೇಮಿಸಬೇಕು (೫) ಪಾಶ್ಚಿಮಾತ್ಯ ಶಾಸ್ತ್ರ ಹಾಗು ಉದ್ಯೋಗ-ಧಂದೆ ಹಾಗು ಪೌರ್ವಾತ್ಯ ತತ್ವಜ್ಞಾನಗಳನ್ನು ಒಟ್ಟಿಗೆ ಸೇರಿಸಿ, ಶಿಕ್ಷಣಕ್ರಮದ ಉಪಯುಕ್ತತೆಯನ್ನು ಬೆಳಿಸುವದು ವಿದ್ಯಾಲಯದ ಧ್ಯೇಯವಿದ್ದದರಿಂದ ಶಾಸ್ತ್ರೀಯ ಶಿಕ್ಷಣದಲ್ಲಿ ತಾತ್ವಿಕ ಹಾಗು ವ್ಯವಹಾರಿಕ ಹೀಗೆ ೨ ಭಾಗಗಳನ್ನು ಮಾಡಿ, ಔದ್ಯೋಗಿಕ ಶಿಕ್ಷಣ ಕ್ರಮವನ್ನು ವಿಶೇಷವಾಗಿ ಪುರಸ್ಕರಿಸಬೇಕು. ಇದರಿಂದ ಈಗಿನ ಸುಶಿಕ್ಷಿತರ ಮೇಲೆ ಬರುವ ಪುಸ್ತಕಿ ಜ್ಞಾನದ ಆರೋಪವು ತಪ್ಪುವದು. (೬) ವಿದ್ಯಾರ್ಥಿಗಳ ನಡಾವಳಿ ಹಾಗು ಶಾರೀರಿಕ ಸ್ಥಿತಿ ಇವುಗಳ ಕಡೆಗೆ ವಿದ್ಯಾಲಯದವರು ವಿಶೇಷ ಲಕ್ಷ ಪೂರೈಸಬೇಕು. ವಸತಿಗೃಹಗಳಲ್ಲಿ ವಾಸ್ತವ್ಯ ಮಾಡಲು ಒತ್ತಾಯಪಡಿಸುವದು ಇಷ್ಟವಲ್ಲವಿದ್ದರೂ, ವಿದ್ಯಾರ್ಥಿಗಳು ಊಳಕೊಳ್ಳುವ ಸ್ಥಳಗಳನ್ನು ವಿದ್ಯಾಲಯದವರು ತಪಾಸ ಮಾಡಬೇಕು. ಕಮಿಟಿಯವರು ಬಹುಮತದಿಂದ ಎಲ್ಲ ವಿದ್ಯಾರ್ಥಿಗಳಿಗೆ ಲಷ್ಕರಿ ಶಿಕ್ಷಣವನ್ನು ಕೊಡಬೇಕೆಂದು ಬಹುಮತದಿಂದ ಸೂಚಿಸಿರುವರು. ಈ ವಿಷಯ ಸ್ವತಂತ್ರ ಮಂಡಳವನ್ನೊಂದೂ ಏರ್ಪಡಿಸಬೇಕೆಂದು ಕಮಿಟಿಯವರ ಸೂಚನೆಯಿದೆ. (೭) ಸ್ತ್ರೀ-ಪುರುಷರ ಶಿಕ್ಷಣವು ಈಗಿನಂತೆ ಒಟ್ಟಿಗ ನಡೆಯಬೇಕು. (೮) ಪರೀಕ್ಷೆಗಳ ಅಭ್ಯಾಸವನ್ನು ಹೆಚ್ಚಿಸಿ, ಪರೀಕ್ಷೆಗಳ ದರ್ಜೆಯನ್ನು ಬೆಳಿಸಬೇಕು. ಕಾಲೇಜಿನೊಳಗಿನ ಮೊದಲನೇ ವರ್ಷದ ಅಭ್ಯಾಸವನ್ನು ಹಾಯಸ್ಕೂಲಿನಲ್ಲಿಯೇ ಮುಗಿಸಬೇಕು. ಹಾಯಸ್ಕೂಲಿನಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ೫ ವರುಷ, ಹಾಯಸ್ಕೂಲು ಶಿಕ್ಷಣಕ್ಕೆ ೫ ವರುಷ, ಅಂತು ೧೦ ವರುಷಗಳಲ್ಲಿ ಈಗಿನಂತೆ ೧೩ ವರುಷಗಳಲ್ಲಿ ನಡೆಯುವ ಅಭ್ಯಾಸ ಕ್ರಮವನ್ನು ಮುಗಿಸಬೇಕು. ಶಿಕ್ಷಣವನ್ನು ಇಂಗ್ಲಿಷ ಭಾಷೆಯಿಂದಲೇ ಕೊಡಬೇಕು. ಸ್ವತಂತ್ರ ವಿದ್ಯಾಲಯಗಳಾದಲ್ಲಿ ಆ ವಿದ್ಯಾಲಯಗಳು ತಮಗೆ ಯುಕ್ತ ಕಂಡಂತೆ ಶಿಕ್ಷಣವನ್ನು ಇಂಗ್ಲಿಷಿನಲ್ಲಾಗಲಿ, ದೇಶಭಾಷೆಗಳಲ್ಲಾಗಲಿ ಕೊಡಬಹುದೆಂದು ಶ್ರೀ| ನಟರಾಜನ, ಜಯಕರ ಮೊದಲಾದವರು ಸೂಚಿಸಿದ್ದಾರೆ. ಸ್ವತಂತ್ರ ವಿದ್ಯಾಲಯಗಳಲ್ಲಿಯೂ ಇಂಗ್ಲಿಷಿನಿಂದಲೇ ಜ್ಞಾನದಾನ ಮಾಡಬೇಕೆಂದು ಬಹುಮತದ ಹೇಳಿಕೆ. (೯) ಮಹಾರಾಷ್ಟ್ರ-ಕರ್ನಾಟಕ-ಗುಜರಾಥ ಹಾಗು ಸಿಂಧ ಈ ನಾಲ್ಕು ಪ್ರಾಂತಗಳಲ್ಲಿ ಸ್ವತಂತ್ರ ವಿದ್ಯಾಲಯಗಳನ್ನು ಸ್ಥಾಪಿಸಬೇಕು. ಸದ್ಯಕ್ಕೆ ಪುಣೆಯಲ್ಲಿ ಒಂದು ಮಹಾರಾಷ್ಟ್ರ ವಿದ್ಯಾಲಯವನ್ನು ಸ್ಥಾಪಿಸಬೇಕು. ಈ ಬಗ್ಗೆ ೧೨ ಲಕ್ಷ ರೂಪಾಯಿಗಳು ಮೊಟ್ಟಮೊದಲು ಖರ್ಚಿಗೆ ಬೇಕು. ೨೫ ಲಕ್ಷ ರೂಪಾಯಿಗಳು ಪ್ರತಿ ವರ್ಷ ಬೇಕಾಗುವವು ಇಷ್ಟು ಖರ್ಚಿನ ವ್ಯವಸ್ಥೆ ಮಾಡಿದ ಹೊರತು, ಹೊಸ ವಿದ್ಯಾಲಯದ ಯೋಜನೆಯನ್ನು ಕೈಕೊಳ್ಳಬಾರದು.

ಕಾನಡಾವೃತ್ತ

ಮಿತಿ ಶ್ರೀಧನ ಸಂ| ಭಾದ್ರಪದ ಬ| ೫ಮಿ ಸೋಮವಾರ

ಮದ್ಯಪಾನೋಚ್ಚಾಟನ.

ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಕಳೆದ ತಾ. ೩ನೇ ಬುಧವಾರಕ್ಕೆ ಮದ್ಯಪಾನೋಚ್ಚಾಟನದ ಠರಾವು ಬಹುಮತದಿಂದ ಮಂಜೂರಾಗಿರುವದೆಂದು ತಿಳಿಸಲು ಸಂತೋಷವಾಗುತ್ತದೆ. ಮದ್ಯಪಾನದಿಂದ ಒದಗುವ ಅನರ್ಥಪರಂಪರೆಗಳನ್ನು ಈಗ ಯಾರಿಗೂ ಹೇಳಬೇಕಾಗಿಲ್ಲ. ದೊಡ್ಡ ದೊಡ್ಡ ಮನೆತನಗಳು, ದೊಡ್ಡ ದೊಡ್ಡ ಊರುಗಳು ಹೆಂಡಗುಡುಕತನದಿಂದ ಸಂಪೂರ್ಣವಾಗಿ ನಾಶಹೊಂದಿರುತ್ತವೆ. ಸನಾತನ ಧರ್ಮದಂತೆ, ಮದ್ಯಪಾನವು ಮಹಾ ಪಾತಕವು. ಇಸ್ಲಾಮು ಧರ್ಮಕ್ಕೂ ಮದ್ಯಪಾನವು ಸಮ್ಮತವಿಲ್ಲ. ಬ್ರಿಟಿಶರ ಸಹವಾಸದಿಂದ ಹಿಂದುಸ್ಥಾನದಲ್ಲಿ ಮದ್ಯಪಾನದ ಪ್ರಸಾರಕ್ಕೆ ಕಳೆಯೇರಿ ಭರತಖಂಡದ ದೈನ್ಯವು ಇನ್ನೂ ವಿಶೇಷವಾಗಿದೆ. ಬುಧವಾರದ ವರಿಷ್ಠ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ಮದ್ಯಪಾನದ ವಿಷಯು ನಡೆದ ಚರ್ಚೆಯಲ್ಲಿ ಮದ್ಯಪಾನದಿಂದುಂಟಾದ ಬಗೆಬಗೆಯ ಕೇಡುಗಳನ್ನು ಲೋಕಪಕ್ಷದ ಸಭಾಸದರು ಸ್ಪಷ್ಟವಾಗಿ ನಮೂದಿಸಿ, ಶ್ರೀ| ಕೇಳಕರರ ಠರಾವನ್ನು ಬಹುಮತದಿಂದ ಮಂಜೂರಮಾಡಿಕೊಂಡರು.

ಶ್ರೀ| ನರಸೋಪಂತ ಕೇಳಕರವರ ಠರಾವು ಸರ್ವಮಾನ್ಯವಾಗುವ ಹಾಗಿತ್ತು. ಮದ್ಯ ತಯಾರಿಸುವದು, ವಿಕ್ರಯಿಸುವದು, ಆಮದು-ರಫ್ತು ಮಾಡುವದು ಸಂಪೂರ್ಣವಾಗಿ ನಿಲ್ಲಿಸುವದೆಂದು ಮೊಟ್ಟಮೊದಲು ಸರಕಾರವು ಜಾಹೀರುಪಡಿಸಿ, ಆ ಧೋರಣಕ್ಕನುಗುಣವಾಗಿ ಮದ್ಯದ ವ್ಯಾಪಾರಕ್ಕೆ ಕ್ರಮವಾಗಿ ತಡೆಹಾಕುತ್ತ ಬರಬೇಕು. ಶ್ರೀ| ನರಸೋಪಂತರು ಇದರೊಳಗೂ ಹೆಂಡಗುಡುಕರ ಸ್ವಾತಂತ್ರ್ಯಕ್ಕೆ ಭಂಗ ತರಬಾರದೆಂದು ಮದ್ಯಪಾನದ ಉಚ್ಚಾಟನದ ಕ್ರಮವನ್ನು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಒಪ್ಪಿಸಿ, ಆ ಸಂಸ್ಥೆಗಳು ಅಪ್ಪಣೆ ಪಡೆದು, ಅವುಗಳ ಅನುಮತಿಯಿಂದ ಮದ್ಯದಂಗಡಿಗಳನ್ನು ಇಡಬೇಕು. ಸ್ಥಳ, ಕಾಲ, ಪರಿಮಿತಿಗಳನ್ನು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳೇ ನಿರ್ಣಯಿಸಬೇಕು.

ಶ್ರೀ| ಕೇಳಕರರ ಠರಾವಿನ ಅನ್ವಯವಿದು! ಥಟ್ಟನೆ ಮದ್ಯದ ವ್ಯಾಪಾರವನ್ನು ನಿರ್ಬಂಧಿಸಬೇಕೆಂದು ಅವರ ಅಭಿಪ್ರಾಯವಿಲ್ಲ; ಕ್ರಮವಾಗಿ ದೇಶಕಾಲಾನುರೋಧದಿಂದ ಪ್ರತಿಬಂಧಿಸಲು ಅವರ ಸೂಚನೆಯಿದೆ. ಮದ್ಯದಂಗಡಿಗಳ ಸ್ಥಾನಭೇದದಿಂದ, ವ್ಯಾಪಾರದ ಕಾಲಭೇದದಿಂದ ಮದ್ಯದ ವ್ಯಾಪಾರವು ಹೆಚ್ಚು ಕಡಿಮೆಯಾಗುತ್ತದೆಂಬ ಮಾತು ಯಾರೂ ಅಲ್ಲಗಳೆಯಲಾರರು. ಪೇಟೆಯ ಬಳಿಯಲ್ಲಿ ಮದ್ಯದ ಅಂಗಡಿಯಿದ್ದರೆ, ಬಡಕೂಲಿಕಾರರು ವ್ಯಾಪಾರ ಮಾಡಿ ದುಡ್ಡು-ಕಾಸು ಮನೆಗೆ ಒಯ್ಯುವ ಸಮಯ ಮದ್ಯದ ಅಂಗಡಿಯು ತೆರೆದಿದ್ದರೆ, ಅಜ್ಞ ಬಾಂಧವನು ಹೆಂಡ ಕುಡಿದು ದರಿದ್ರನಾಗುತ್ತಾನೆಂಬ ಹಕೀಕತು ಸ್ವಾಭಾವಿಕವು. ಆದರಿಂದ ನಮ್ಮ ಹಿಂದೂ ಧರ್ಮಶಾಸ್ತ್ರದಲ್ಲಿ ಮದ್ಯದ ಅಂಗಡಿಗಳನ್ನು ಊರ ಹೊರಗಿಡಬೇಕೆಂಬ ಆಜ್ಞೆಯಿದೆ. "ವಿಕಾರ ಹೇತೌ ಸತಿ ವಿಕ್ರಿಯಂತೇ ಯೇಷಾಂ ನ ಚೇತಾಂಸಿ ತ ಏವ ಧೀರಾಃ" ಧೀರರು ಮಾತ್ರ ಇಂಥ ವಿಕಾರ ಹೇತುಗಳಿಗೆ ಬಲಿಬೀಳುವದಿಲ್ಲ. ಇದರ ಮೇಲಿಂದ ಸ್ಥಾನ ಹಾಗು ಕಾಲಗಳ ನಿರ್ಣಯವು ಎಷ್ಟು ಮಹತ್ವದೆಂಬುದು ಗೊತ್ತಾಗುವದು.

ಶ್ರೀ| ನರಸೋಪಂತರು ತಮ್ಮ ವ್ಯಕ್ತಿಗತ ಮತವನ್ನು ಸಮಸ್ತ ಪ್ರಜೆಗಳ ಮೇಲೆ ಹೊರಿಸಲಿಲ್ಲ. ಅಲ್ಲಲ್ಲಿಯ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ, ಹೊಸ ಕಾಯಿದೆಮಂಡಳಿ, ಲೋಕಸಂಸ್ಥೆಗಳು ಅಪ್ಪ ಅಲ್ಲಲ್ಲಿಯ ಪರಿಸ್ಥಿತಿಯನ್ನು ವಿಚಾರಿಸಿ, ಪ್ರಜೆಗಳ ಸ್ಥಿತಿಗತಿಯನ್ನು ಆಲೋಚಿಸಿ ಹೆಂಡಗುಡುಕರ ಅನಾನುಕೂಲತೆಗಳನ್ನೂ ಲಕ್ಷಿಸಿ, ಸರಕಾರದ ಧೋರಣವನ್ನು ಅಮಲಿನಲ್ಲಿ ತರುವ ಹಾಗೆ ತಕ್ಕ ಉಪಾಯಯೋಜನೆ ಮಾಡಲು ತೀರ ಪಾತ್ರವಿರುವವು. ಅವುಗಳ ಮನಸ್ಸಿನಂತೆ ಮದ್ಯದ ಅಂಗಡಿಗಳನ್ನು ಇಟ್ಟು ನಡಿಸಲಿಕ್ಕೆ ಶ್ರೀ| ನರಸೋಪಂತರು ಸ್ವಾತಂತ್ರ್ಯಕೊಟ್ಟಿರುವರು. ಈ ಯೋಜನೆಯಿಂದ ಮತ್ತೊಂದು ಲಾಭವಾಗುವದು. ಅಲ್ಲಲ್ಲಿಯ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಪ್ರಯೋಗಗಳು ಭಿನ್ನ ಭಿನ್ನವಾಗುವದರಿಂದ ಯಾವ ಯಾವ ಉಪಾಯಗಳು ಹೆಚ್ಚೆಚ್ಚು ಪರಿಣಾಮಕಾರಕಗಳಾದವೆಂದು ತಿಳಿದು, ಮುಂದೆ ಸರ್ವಮಾನ್ಯ ಪದ್ಧತಿಯನ್ನು ಸ್ವೀಕರಿಸಲು ಅನಾಯಾಸವಾಗಿ ಅನುಕೂಲವಾಗುವದು.

ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಮದ್ಯಪಾನ ಉಚ್ಚಾಟನದ ಅಧಿಕಾರವನ್ನು ಕೊಡಲಿಕ್ಕೆ ಸರಕಾರದ ಆಕ್ಷೇಪವಿದ್ದಲ್ಲಿ, ಅದಕ್ಕೂ ಶ್ರೀ| ನರಸೋಪಂತರು ಠರಾವಿನಲ್ಲಿ ಉಪಾಯಯೋಜನೆ ಮಾಡಿರುವರು. ಸರಕಾರವು ಮದ್ಯಪಾನದ ಉಚ್ಚಾಟನದ ಧೋರಣವನ್ನು ನಿಶ್ಚಯಿಸಿ ಅದನ್ನು ಅಮಲಿನಲ್ಲಿ ತರಲು ಲೈಸೆನ್ಸಿಂಗ ಬೋರ್ಡುಗಳನ್ನು ಏರ್ಪಡಿಸಬೇಕು. ಈ ಬೋರ್ಡುಗಳಿಗೆ ಪ್ರಜೆಗಳು ಪ್ರತಿನಿಧಿಗಳನ್ನು ಆರಿಸಿಕೊಡಬೇಕು. ಈ ಪ್ರತಿನಿಧಿಗಳು ಮದ್ಯದಂಗಡಿಗಳ ಸ್ಥಾನ, ಕಾಲಗಳನ್ನು ನಿರ್ಣಯಿಸಬೇಕು. ಅಂದರೆ, ಜಿಲ್ಲೆಯ ಮದ್ಯದ ವ್ಯಾಪಾರವು ಈ ಬೋರ್ಡುಗಳ ವಿಧ್ಯಮಾನ ನಡೆಯಬೇಕು. ಮದ್ಯದ ವ್ಯಾಪಾರದ ನಿಯಂತ್ರಣಕ್ಕಾಗಿಯೇ ಈ ಬೋರ್ಡುಗಳ ಏರ್ಪಾಟಾಗುವದರಿಂದ ಪ್ರತಿನಿಧಿಗಳು ಪ್ರಜೆಗಳ ಮತದಂತೆ ನಡೆಯುವರೆಂಬುದರಲ್ಲಿ ಸಂದೇಹವೇನಿಲ್ಲ.

ಶ್ರೀ| ನರಸೋಪಂತರ ಠರಾವು ಸಮಸ್ತ ಪಕ್ಷಗಳಿಗೆ ಸರ್ವಮಾನ್ಯವಾಗುವಂಥಾದ್ದು; ಪ್ರಜೆಗಳ ಹಿತಕ್ಕಾಗಿ, ಹೆಂಡಗುಡುಕರ ಸ್ವಾತಂತ್ರ್ಯಕ್ಕಾಗಿ ಹೆಣಗಾಡುವ ಸರಕಾರವು ಆಕ್ಷೇಪಿಸಲಿಕ್ಕೆ ಇಂಬು ಸಹ ಇಲ್ಲ. ಆದರೂ, ಸರ್ ಅಲೆಕ್ಝಾಂಡರ ಮುಡಿಮನ್ ಮೊದಲಾದ ಸರಕಾರಿ ಸಭಾಸದರು ಬಹಳವಾಗಿ ವಿರೋಧಿಸಿದರು. ಆದರೆ, ಅವರ ವಿರೋಧದಿಂದ ಅತಂಕವಾಗದೆ, ಠರಾವಿಗೆ ಅನುಕೂಲ ೬೯, ಪ್ರತಿಕೂಲ ೩೯ ಹೀಗೆ ಮತಗಳು ಬಿದ್ದು ಶ್ರೀ| ನರಸೋಪಂತರ ಠರಾವು ಬಹುಮತದಿಂದ ಮಂಜೂರಾಗಿದೆ. ಹಿಂದುಸ್ಥಾನ ಸರಕಾರವು ಶ್ರೀ| ನರಸೋಪಂತರ ಠರಾವನ್ನು ಅಮಲಿನಲ್ಲಿ ತಂದರೆ ಬಡ ಪ್ರಜೆಗಳು ಹೆಂಡಗುಡುಕತನದಿಂದ ದೀನರಾದವರು ಆಳರಸರಿಗೆ ಕೃತಜ್ಞ ಬುದ್ಧಿಯಿಂದ ನಿರಂತರವಾಗಿ ಹಾಡಿ ಹರಸುವರು. ಮೊಂಟೆಗ್ಯೂ ಸ್ವರಾಜ್ಯ ಕಾಯಿದೆಯನ್ವಯ ಘಟಿಸಿದ ಪ್ರಜಾಪ್ರತಿನಿಧಿ ಸಂಸ್ಥೆಯು ಮನ್ನಣೆ ಮಾಡಿದ ಶ್ರೇಯಸ್ಸೂ ಸರಕಾರಕ್ಕೆ ಪ್ರಾಪ್ತವಾಗುವದು. ವಿರೋಧ ಬುದ್ಧಿಯನ್ನು ಮರೆತು ಸರಕಾರವು ಔದಾರ್ಯಬುದ್ಧಿಯಿಂದ ಠರಾವನ್ನು ಅಮಲಿನಲ್ಲಿ ತಂದು ಪ್ರಜೆಗಳಿಗೆ ಕಾಯುವದೇನು !

ಸ್ಫುಟ ಸೂಚನೆಗಳು.

೧ ನೇಮಸ್ತರ ಅಂತರಂಗಪರೀಕ್ಷೆ ಬೇಕಾದರೆ, ಕಳೆದ ಶನಿವಾರ-ರವಿವಾರ ಅಗಸ್ಟ ತಾ. ೨೯-೩೦ರ್ಸ್ಕ ಪುಣೆಯಲ್ಲಿ ಸೇರಿದ ಸಭೆಯ ವೃತ್ತಾಂತವನ್ನು ಓದಬೇಕು. ಸ್ವಾಗತ ಮಂಡಳದ ಅಧಿಪತಿಗಳು ಪುಣೆಯ ಶ್ರೀ| ಬಾಲಕೃಷ್ಣ ಸೀತಾರಾಮ ಕಾಮತರವರು. ಸಭಾಪತಿಗಳು ಅಲಹಾಬಾದದ ಶ್ರೀ| ಸಿ. ವಾಯ್. ಚಿಂತಾಮಣಿಯವರು. ನೇಮಸ್ತರ ಪಕ್ಷದ ಸ್ವಾಗತ ಮಂಡಳದ ಅಧ್ಯಕ್ಷರ ಭಾಷಣ, ಅಧ್ಯಕ್ಷರಾದ ಶ್ರೀ| ಚಿಂತಾಮಣಿಯವರ ಭಾಷಣ, ಮಂಜೂರಾದ ಠರಾವುಗಳು, ಇವುಗಳಲ್ಲಿ ನೇಮಸ್ತರ ರಾಜಕಾರಣದ ಕಾದಾಟದ ಸ್ವರೂಪವು ಪ್ರತಿಬಿಂಬಿತವಾಗಿದೆ. ನೇಮಸ್ತರ ಪರಿಷತ್ತು ಧಾರ ಮಂತ್ರಿಗಳ ಭಾಷಣವನ್ನು ನಿಷೇಧಿಸುತ್ತದೆ; ಸರ್ವಾಧಿಪತಿ ರೀಡಿಂಗ ದೊರೆಗಳ ಭಾಷಣವನ್ನು ನಿಷೇಧಿಸುತ್ತದೆ; ಬೇಕಷ್ಟು ಅಸಮಾಧಾನವನ್ನು ವ್ಯಕ್ತಪಡಿಸುತ್ತದೆ. ದಕ್ಷಿಣ ಆಫ್ರಿಕೆಯೊಳಗಿನ ಭಾರತೀಯರಿಗೆ ವಿರೋಧವಾದ ಚಳುವಳಿಕೆಯನ್ನು ನೋಡಿ ಪರಿಷತ್ತು ಸಂತಪ್ತವಾಗಿದೆ. ಲೀ ಕಮೀಶನಿನ ಶಿಫಾರಸುಗಳಂತೆ ಅಧಿಕಾರ ಸಂಬಳವನ್ನು ಏರಿಸಿದ ಬ

ಪರಿಷತ್ತಿಗೆ ಅಸಂತೋಷವಾಗಿದೆ. ಅಸಂತೋಷದಲ್ಲಿ ಅಸಮಾಧಾನದಲ್ಲಿ, ಬಾಯ್ಬುತ್ತಳ ಸಂತಾಪದಲ್ಲಿ ನೇಮಸ್ತರಿಗೂ, ರಾಷ್ಟ್ರೀಯರಿಗೂ ಭೇದವು ವಿಶೇಷವಾಗಿ ಕಂಡುಬರಲಾರದು. ಆದರೆ, ಸಂತಾಪ—ಅಸಮಾಧಾನ—ಅಸಂತೋಷಗಳು ಕೃತಿಯಿಂದ ವ್ಯಕ್ತಪಡಿಸಿ, ತರಹೋಪಾಯವನ್ನು ಸಾಧಿಸುವ ಎಂದರೆ, ಅದಕ್ಕೆ ಮಾತ್ರ ನೇಮಸ್ತರು ತಯಾರಿಲ್ಲ.

---

೩. ನೇಮಸ್ತರ ಮತದಂತೆ ಪ್ರಚಲಿತ ರಾಜಕಾರಣದೊಳಗಿನ ಅನ್ಯಾಯಪರಂಪರೆಯನ್ನು ದೂರಪಡಿಸುವ ಮಾರ್ಗವು ಹಿಂದೇ ಬಂದಿವೆ. ಮೊಟ್ಟಗಸ್ಕ್ಯ ಸ್ವರಾಜ್ಯದಂತೆ, ಆಳರಸರು ಅರ್ಪಿಸಿದ ರಾಜ್ಯಘಟನೆಯನ್ನು ಭಕ್ತಿಯಿಂದ ಪುರಸ್ಕರಿಸುವದು; ಭಾರತ ಮಂತ್ರಿಗಳು ಮಾಡಿದಂತೆ ಒಂದು ರಾಜ್ಯಘಟನೆಯನ್ನು ತಯಾರಿಸಿ, ಅವರಿಗೆ ಕಳಿಸುವದು. ಭಾರತ ಮಂತ್ರಿಗಳು ಅದನ್ನು ಬೇಕಾದರೆ ವಿಚಾರಿಸಲಿ, ವಿಚಾರಿಸದಿರಲಿ ಅದರ ಗೊಡವೆ ನಮ್ಮ ನೇಮಸ್ತರಿಗಿಲ್ಲ. ಭಾರತ ಮಂತ್ರಿಗಳ ವಚನವು ಎಷ್ಟರಮಟ್ಟಿಗೆ ಅಂತಃಕರಣಪೂರ್ವಕವಿರುವದೆಂಬ ಮಾತನ್ನೂ ಅವರು ವಿಚಾರಿಸುವದಿಲ್ಲ. ಅದರ ಕಾರಣವು ಸ್ಪಷ್ಟವಿದೆ. ಆಳರಸರ ನಿರಂಕುಶ ಪ್ರಭುತ್ವವನ್ನು ಅಲ್ಲಗಳೆಯಲು ನಾವೆಷ್ಟೂ ಹಿಡಿದರೂ, ನಮ್ಮದೇನು ನಡೆಯುದ ಬಳಿಕ, ಸುಮ್ಮನೆ ಕಲ್ಲು ಬಂಡೆಯ ಮೇಲೆ ಹಣೆ ಅಪ್ಪಳಿಸಿಕೊಳ್ಳುವದೇಕೆ? ಆಳರಸರನ್ನೇ ಸೇರಿಕೊಂಡು, ಅವರ ಮನವೊಲಿಸಿ, ಅವರು ಹೇಳಿದ ಹಾಗೆ ಕೇಳಿ, ಅವರ ಕರುಣೆಯಿಂದ ಕ್ರಮವಾಗಿ ಸ್ವರಾಜ್ಯಾಧಿಕಾರವನ್ನು "ಭವತಿ ಭಿಕ್ಷಾಂ ದೇಹಿ" ಪದ್ಧತಿಯಿಂದ ಸಂಪಾದಿಸಿಕೊಳ್ಳಲು ನೇಮಸ್ತರು ಹೊಂಚು ಹಾಕುತ್ತಿರುವರು. ಇಂಥ ನಿರುಪದ್ರವಿ, ದೀನ ಶಬ್ದಗಳಿಂದ ಯಾವದೇ ಕಾರ್ಯವನ್ನು ನೆರವೇರಿಸುವದು ಅಶಕ್ಯವೆಂದು ಮಹಾತ್ಮರಂಥ ಸಾಧುಪುರುಷರು ಸೋದಾಹರಣ ಸಿದ್ಧಪಡಿಸಿದರೂ, ನೇಮಸ್ತರ ಆರ್ಜಾಯ ಮರುಳು ಇನ್ನೂ ಬಿಡಲೊಲ್ಲದು. "ಯ ಸ್ವಭಾವೋ ಹಿ ಯಸ್ಯಾಸ್ತೇ ಸ ನಿತ್ಯಂ ದುರತಿಕ್ರಮಃ॥" ಎಂಬಂತೆ, ನಮ್ಮ ನೇಮಸ್ತರ ಗತಿಯಾಗಿದೆ. ಅದಕ್ಕೆ ಯಾರದೇನುಪಾಯ?

---

೪. ಮುಂಬಯಿಯ ವಿಶ್ವವಿದ್ಯಾಲಯದವರು ವಿಶ್ವವಿದ್ಯಾಲಯದ ತಿದ್ದುಪಡಿಗಾಗಿ ಸೂಚಿಸಿದ ಮಂಡಳದ ಶಿಫಾರಸುಗಳು ಇನ್ನೊಂದೆಡೆಗೆ ಸಂಕ್ಷಿಪ್ತವಾಗಿ ಕೊಡಲ್ಪಟ್ಟಿವೆ. ಕಮಿಟಿಯವರು, ಶಾರೀರಿಕ ಶಿಕ್ಷಣ, ಲಷ್ಕರಿ ಶಿಕ್ಷಣಗಳ ವಿಷಯ ಮಾಡಿದ ಸೂಚನೆಗಳನ್ನು ಶೀಘ್ರವೇ ಅಮಲಿನಲ್ಲಿ ತಂದರೆ, ಈಗಿನ ವಿದ್ಯಾರ್ಥಿಗಳ ದೊಡ್ಡದೊಂದು ಗ್ರಹದಶೆಯು ಸಮಾಪ್ತಿಯಾಗುವದು. ಈಗಿನ ಸುಶಿಕ್ಷಿತರಿಗೆ ಬಹಳವಾಗಿ ಅಸ್ತಿಪಂಜರವೊಂದಿದೆ. ಅದರಿಂದ ಶರೀರಸಂಪತ್ತಿಯನ್ನು ದೃಢಪಡಿಸುವ ಮಹತ್ವದ ಸುಧಾರಣೆಯನ್ನು ವಿದ್ಯಾಲಯದವರು ಬೇಗನೇ ಕೈಕೊಳ್ಳಬೇಕು. ಸ್ತ್ರೀ-ಪುರುಷರ ಪ್ರಪಂಚದೊಳಗಿನ ಭಿನ್ನ ಭಿನ್ನ ಕಾರ್ಯಕ್ಷೇತ್ರಗಳನ್ನು ವಿಚಾರಿಸಿದರೆ, ಅವರಿಗೆ ಬೇರ್ಪಟ್ಟಿಗೆ ಶಿಕ್ಷಣ ಕೊಡಬೇಕೆಂಬ ಕಮಿಟಿಯವರ ಶಿಫಾರಸು ವಿಚಾರಶೀಲರಿಗೆ ಮಾನ್ಯವಾಗದು. ಜ್ಞಾನದಾನವನ್ನು ಮಾತೃಭಾಷೆಯಲ್ಲಿ ಮಾಡುವದು ವಿದ್ಯಾಗ್ರಹಣಕ್ಕೆ ಅನುಕೂಲವೆಂಬ ಈಗ ಯಾರೂ ಅರಿಯದ ಮಾತಲ್ಲ ಹೀಗಿದ್ದು, ಕಮಿಟಿಯವರು ಆಂಗ್ಲ ಭಾಷೆಯಿಂದಲೇ ವಿದ್ಯಾದಾನವಾಗಬೇಕೆಂಬ ದುರಾಗ್ರಹ ಹಿಡಿದದ್ದು ಶೋಚನೀಯವು. ಮಹಾರಾಷ್ಟ್ರ ಕರ್ನಾಟಕ- ಗುಜರಾಥ-ಸಿಂಧ ಈ ಪ್ರಾಂತಗಳಲ್ಲಿ ಸ್ವತಂತ್ರ ವಿಶ್ವವಿದ್ಯಾಲಯಗಳಾದರೂ, ಇಂಗ್ಲಿಷದಿಂದಲೇ ವಿದ್ಯಾದಾನವಾಗಬೇಕೆಂಬ ಶಿಫಾರಸು ದುರ್ಧರವಾದ ದ್ರೋಹಕವೆಂದು ಯಾರೂ ಹೇಳುವರು. ಶ್ರೀ ನಟರಾಜನ, ಜಯಕರ ಹಾಗು ಮಿ| ಕಸಾರರವರು ತಮ್ಮ ಮತಭೇದವನ್ನು ಸ್ಪಷ್ಟವಾಗಿ ನಮೂದಿಸಿದ ಬಗ್ಗೆ ಸಂತೋಷವಾಗುತ್ತದೆ. ದೇಶಭಾಷೆಗಳ ಹೊರತು, ಪರಕೀಯ ಭಾಷೆಯಿಂದ ವಿಷಯಗ್ರಹಿಕೆಯಾಗುವದು ಯಾವಾಗಲೂ ದುಸ್ಸಾಧ್ಯವೇ. ಇಂಗ್ಲಂಡದಲ್ಲಿ ಜರ್ಮನ್ ಭಾಷೆಯಿಂದ ವಿದ್ಯಾದಾನ ಮಾಡಬೇಕೆಂದು ಯಾರಾದರೂ ಶಿಫಾರಸು ಮಾಡಿದರೆ, ಅವರಿಗೆ ಹುಚ್ಚರ ಆಸ್ಪತ್ರೆಯಲ್ಲಿ ಅಲ್ಲಿಯವರು ಒಮ್ಮೆಲೇ ಕಳಿಸಿಬಿಡುವರು. ಇಷ್ಟು ಈ ಸೂಚನೆಯು ಅಸ್ವಾಭಾವಿಕವಿದ್ದರೂ, ಕಮಿಟಿಯವರು ಅದನ್ನೇ ಎತ್ತಿ ಹಿಡಿದಿರುವರು. ಕಮಿಟಿಯವರ ಸೂಚನೆಯಂತೆ ಹೊಸ ಸ್ವತಂತ್ರ ವಿಶ್ವವಿದ್ಯಾಲಯಗಳ ಏರ್ಪಾಟಾದಲ್ಲಿ ಶಿಕ್ಷಣಕ್ರಮದೊಳಗಿನ ಕೃತ್ರಿಮತನವು ಬಹು ಮಟ್ಟಿಗೆ ಬಯಲಾಗುವದು. ಅದಕ್ಕೆ ಹಣದ ಅಡಚಣೆ ಮಹಾರಾಷ್ಟ್ರದವರು ಯಾವ ಉಪಾಯದಿಂದ ಹಣದ ಪ್ರಶ್ನೆ ಬಿಡಿಸುತ್ತಾರೆಂದು ನೋಡುವ. ಯಾಕೆಂದರೆ, ಸದ್ಯಸ್ಥಿತಿಯಲ್ಲಿ ಮಹಾರಾಷ್ಟ್ರವು ವಿಶ್ವವಿದ್ಯಾಲಯವನ್ನು ಪಡೆಯಲು ಪಾತ್ರವಿರುವದೆಂದು ಕಮಿಟಿಯವರೇ ಹೇಳುವರಲ್ಲವೆ?

---

೫. ಲೋಕಲ್ ಬೋರ್ಡ ಚುನಾವಣೆಯು ಗದ್ದಲವು ಅಲ್ಲಲ್ಲಿ ಕೇಳಬರುತ್ತದೆ. ಮತದಾರರು ಜಾಗ್ರತೆಯಿಂದಿರಬೇಕು. ಈಗಿನ ಹೊಸ ಲೋಕಲ್ ಬೋರ್ಡ ಹಳೇ ಲೋಕಲ್‌ಬೋರ್ಡ ಅಲ್ಲ. ಹೊಸ ಲೋಕಲ್‌ಬೋರ್ಡಿಗೆ ಹೊಸ ಹೊಸ ಅಧಿಕಾರಗಳು ಕೊಡಲ್ಪಟ್ಟಿವೆ; ಹೊಸ ಹೊಸ ಜವಾಬದಾರಿಗಳೂ ಹೇರಲ್ಪಟ್ಟಿವೆ. ಬಹು ದೊಡ್ಡ ಜವಾಬದಾರಿಯೆಂದರೆ, ಹಳ್ಳಿಯೊಳಗಿನ ಪ್ರಾಥಮಿಕ ಶಿಕ್ಷಣವು. ಶಿಕ್ಷಣದ ಜವಾಬದಾರಿಗನುಕೂಲವಾಗಿ ಸರಕಾರವು ಹಣದ ಗಂಟು ಮಾತ್ರ ಕೊಡಲಿಲ್ಲ. ಈ ಮುಂಚೆ ವೆಚ್ಚ ಮಾಡುವಷ್ಟು ಹಣವನ್ನು ಸಹ ಹೊಸ ಲೋಕಲ್ ಬೋರ್ಡಿಗೆ ವಹಿಸಲು ಸರಕಾರವು ತಯಾರಿಲ್ಲ. ಈಗಿನಷ್ಟೇ ಶಿಕ್ಷಣವನ್ನು ಈಗಿನಂತೆಯೇ ನಡೆಸಬೇಕಾದರೆ, ನಮ್ಮ ಜಿಲ್ಲಾ ಬೋರ್ಡಿನವರು ಕನಿಷ್ಠ ೩೦-೪೦ ಸಾವಿರ ರೂಪಾಯಿಗಳನ್ನಾದರೂ ಹೊಸದಾಗಿ ಎತ್ತುವಳಿ ಮಾಡಬೇಕು. ಪ್ರಾಥಮಿಕ ಶಿಕ್ಷಕರ ಬಡತಿಯು ಬಡದಾಟದ ದುಃಖಕಾಷ್ಟವೂ ಜಿಲ್ಲಾ ಬೋರ್ಡಿನ ಬೆನ್ನಿಗೆ ಹತ್ತುವದು. ಔಷಧಾಲಯ, ರಾಜಮಾರ್ಗ ಮುಂತಾದವುಗಳಿಗೂ ಹೆಚ್ಚು ಖರ್ಚು ತಗಲುವದು. ಖರ್ಚು ಹುಟ್ಟಿಸುವ ಬಗೆಯೇನು? ಹೊಸ ಹೊಸ ಕರಗಳನ್ನೆತ್ತುವಳಿ ಮಾಡುವದು, ಲೋಕಲ್ ಫಂಡವನ್ನು ಏರಿಸಿರಿ; ಉದ್ಯೋಗ-ಧಂದೆಗಳ ಮೇಲೆ ತೆರಿಗೆಯನ್ನೆತ್ತಿರಿ; ಇತ್ಯಾದಿ ಸೂಚನೆಗಳು ಸರಕಾರದಿಂದ ಬರಲಾರಂಭಿಸಿವೆ. ಸರಕಾರವು ಈಗ ಎತ್ತುವಳಿ ಮಾಡುವ ಕರದ ಭಾರವು ಶಕ್ತಿಬಾಹ್ಯವೆಂದು ಪ್ರಜೆಗಳು ಮರುಗುತ್ತಿದ್ದಾಗ ಸ್ವರಾಜ್ಯದ ದೆಲ್ಲದ ಬೊಕ್ಕಸ್ಸು ನಾಲಿಗೆ ತುಟಿದಿಗೆ ಹಚ್ಚಿ ಹೊಸ ಹೊಸ ಕರಗಳನ್ನು ಪ್ರಜಾಪ್ರತಿನಿಧಿಗಳಿಂದಲೇ ಎತ್ತುವಳಿ ಮಾಡುವ ಸ್ವರಾಜ್ಯಾಧಿಕಾರವು ನಮಗೆ ವಹಿಸಲ್ಪಟ್ಟಿದೆ. ಇಂಥ ಪ್ರಸಂಗದಲ್ಲಿ ಮತದಾರರು ಪ್ರತಿನಿಧಿಗಳನ್ನು ಆರಿಸಿ ಕಳುಹಿಸಬೇಕಾಗಿದೆ.

---

೬. ಮತದಾರ ಬಾಂಧವರೇ, ಈ ಸ್ಥಿತಿಯನ್ನು ಚನ್ನಾಗಿ ಲಕ್ಷಿಸಿರಿ. ಪ್ರತಿನಿಧಿಗಳಿಗೆ ಬೆಂಬಲ ಕೊಡುವಾಗ ಬೋರ್ಡಿನ ಕರ್ತವ್ಯದಿಂದ-ಆಳರಸರೊಡನೆ ಸಾಹಸದಿಂದ ಕಾದಾಡಿ ಪ್ರಜೆಗಳ ಮೇಲೆ ಕರದ ಹೊರೆ ಬರದಂತೆ ವರ್ತಿಸುವ ಪ್ರತಿನಿಧಿಗಳನ್ನೇ ನೇಮಿಸಿರಿ. ಶಿಕ್ಷಣ ಬೇಕೋ? ಇನ್ನು ಕರ ತೆರಿರಿ; ಪ್ರಾಥಮಿಕ ಶಿಕ್ಷಕರಿಗೆ ಬಡತಿ ಕೊಡಬೇಕೋ? ಇನ್ನಷ್ಟು ತೆರಿಗೆ ತೆರಿರಿ; ಔಷಧಾಲಯಗಳು ಬೇಕೋ? ಮತ್ತೊಂದು ಕರ ಸಹಿಸಿರಿ; ಆರೋಗ್ಯ ಪಾಲನ ಕಾಪಾಡಬೇಕೋ? ಇನ್ನೊಂದು ಕರ ತೆರಿರಿ; ಹೀಗೆ ಹೇಳುವದು ಸುಲಭವು. ಪ್ರಜಾನುಕೂಲತೆಗಾಗಿ ಪ್ರಜೆಗಳು ಹೊಸ ಹೊಸ ಕರಗಳನ್ನು ತೆರಬೇಕಾದರೆ ಹಳೇ ಕರಗಳನ್ನು ನಾವು ಯಾಕೆ ತೆರುವದು? ಹೊಸ ಪ್ರತಿನಿಧಿಗಳು ಹೊಸ ಕರಗಳನ್ನು ಎತ್ತುವಳಿ ಮಾಡುವ ಉತ್ತರಕುಮಾರರಾಗಿರದೆ, ಕೇವಲ ಹಳೇ ಕರಗಳೊಳಗಿಂದಲೇ ತಮ್ಮ ಸ್ವರಾಜ್ಯಾಧಿಕಾರವನ್ನು ನಡಿಸಿಕೊಂಡು ಹೋಗುವಂಥವರಿರಬೇಕು. ಮತದಾರರು ಇಂಥ ವೀರ ಪುರುಷರನ್ನೇ ಆರಿಸಿಕೊಟ್ಟು ಮತಾಧಿಕಾರವನ್ನು ಸಾರ್ಥಕಪಡಿಸಬೇಕು. ದಾಕ್ಷಿಣ್ಯಕ್ಕಾಗಲಿ, ಜಿಜ್ಞಾಸೆಯಕ್ಕಾಗಲಿ, ಗೆಳೆತನಕ್ಕಾಗಲಿ ಒಲಿಯದೆ, ಪಾತ್ರರನ್ನೇ ನಿರ್ಧಾರದಿಂದ ಆರಿಸಿಕೊಡಬೇಕು. ಮತದಾನದ ವಚನವನ್ನು ಈಗಲೇ ಯಾರಿಗೂ ಕೊಡದೆ, ಉಮೇದವಾರರ ಯಾದಿಯೊಳಗಿನ ಪಾತ್ರರಿದ್ದವರಿಗೆ ಸ್ವಸಂತೋಷದಿಂದ ಮತದಾನ ಮಾಡಬೇಕು. ಇಂದಿಗೆ ಇಷ್ಟೇ ಎಚ್ಚರಿಕೆ ಸಾಕು!

ಸ್ಥಾನಿಕ ವೃತ್ತಾಂತ.

ಕುಮಟಾ— ಹುಬ್ಬಾ ನಕ್ಷತ್ರದ ಮಳೆಯು ಸಾಧಾರಣ ಸುರಿಯುತ್ತದೆ. ಜ್ವರಾದಿ ರೋಗಗಳ ಪಿಡುಗು ಇದೆ. ಈ ವಾರದಲ್ಲಿ ೧-೭೫ ಇಂಚು ಮಳೆ; ಈವರೆಗೆ ಒಟ್ಟು ೧೪೯-೧೨ ಇಂಚು ಮಳೆ ಬಿತ್ತು.

ಕಳೆದ ಬುಧವಾರಕ್ಕೆ ಶ್ರೀ ಗ್ರಾಮದೇವಸ್ಥಾನದೊಳಗಿನ ಭಜನೆ ಸಪ್ತಾಹವು ವಾಡಿಕೆಯಂತೆ ಉತ್ಸಾಹದಿಂದ ನೆರವೇರಿತು.

ಕಡೆಕೋಡಿ, ಕಲಬಾಗ, ಕುಂದಗುಣಿ, ಹೊಳೆಗದ್ದೆ, ಊರಕೇರಿ, ಹೊಗಬಾಗ, ದೇವಗಿರಿ, ಮುತ್ತ, ಹಾದಿಗೋಣ, ಹರನೀರ ಗ್ರಾಮದ ಜನರು ಕೂಜಳ್ಳಿ ಶಾಲೆಯ ಮತದಾನದ ಠಾಣ್ಯವು, ಲೋಕಲ್ ಬೋರ್ಡ ಇಲೆಕ್ಷನದ ಮತದಾರರಿಗೆ ಬಹಳ ದೂರವಾಗುವದರಿಂದ, ದೇವಗಿರಿ ಗ್ರಾಮದ ಗ್ರಾಮಚಾವಡಿಯಲ್ಲಿ ಮತದಾನದ ಠಾಣ್ಯವೊಂದನ್ನು ಇಡಬೇಕಾಗಿಯೂ, ಹಾಗೆ ಇಡಲಿಕ್ಕೆ ಶಕ್ಯವಿಲ್ಲದಿದ್ದಲ್ಲಿ ಕೂಜಳ್ಳಿಯ ಶಾಲೆಯ ಬದಲು ದೇವಗಿರಿಯ ಗ್ರಾಮಚಾವಡಿಯನ್ನೇ ಚುನಾವಣೆಯ ಠಾಣ್ಯವನ್ನಾ

ಗಿಡಬೇಕಾಗಿಯೂ ಕಲೆಕ್ಟರರಿಗೆ ಅರ್ಜಿ ಮಾಡಿರುವರು. ಕಲೆಕ್ಟರರು ಮತದಾರರ ಅನುಕೂಲತೆಯನ್ನು ಲಕ್ಷಿಸಿ, ಯುಕ್ತ ಕಂಡ ತಿದ್ದುಪಡಿ ಮಾಡಬೇಕು.

ಕಳೆದ ತಾ. ೨ ನೇಗೆ ಮೆಜಿಸ್ಟ್ರೇಟರು ಗೋಕರ್ಣ ಮುಕ್ಕಾಮಿಗೆ ಹೋದ ಮೂಲಕ, 'ವೃತ್ತ' ಕರ್ತರ ಮೇಲಿ ರಾ॥ ಮಂಗೇಶ ಕುಳಕರ್ಣಿಯವರು ಮಾಡಿದ ಖಟ್ಲೆಯ ವಿಚಾರಣೆಯು ನಡೆಯಲಿಲ್ಲ. ಈ ಹೊತ್ತು ನಡೆಯುವದಿತ್ತು. ಆದರೆ, ಕಾಗದಪತ್ರಗಳು ಹಾಜರ ಪಡಿಸಲಿಕ್ಕೆ ತಡವಾದ್ದರಿಂದ ವಿಚಾರವು ೧೫ ದಿವಸ ಮುಂದರಿಸಲ್ಪಟ್ಟಿದೆ.

ಇಲ್ಲಿಯ ಮ್ಯುನಿಸಿಪಾಲಿಟಿಗೆ ಈ ಕೆಳಗಿನ ಮೂವರು ಸರಕಾರ ತರ್ಫೆಯಿಂದ ನೇಮಣೂಕ ಹೊಂದಿರುವರು — (೧) ಮಾಮಲೇದಾರ, ಕುಮಟಾ, (೨) ಮಿ॥ ಬಸ್ತ್ಯಾಂವ ಗಸ್ಪಾರ ಡಿಸೋಜಾ, (೩) ರಾ॥ ಗಣ್ಪಯ್ಯಾ ಕೃಷ್ಣ ಗೌರಯ್ಯಾ.

ಗೋಕರ್ಣ— ಬರೋಡೆಯ ಮಹಾರಾಣಿಯವರು ಕಳೆದ ಬುಧವಾರದಿವಸ ಇಲ್ಲಿಗೆ ಚಿತ್ತೈಸಿ ಶ್ರೀ ಮಹಾಬ್ಳೇಶ್ವರ ದೇವಸ್ಥಾನದಲ್ಲಿ ಮಹಾರುದ್ರ ಸಹ ಬ್ರಹ್ಮಭೋಜನ ವಗೈರೆ ಮಾಡಿಸಿ ಶುಕ್ರವಾರಕ್ಕೆ ಮರಳಿ ಹೋದರು.

ಕಾರವಾರ—ಕಳೆದ ತಾ. ೩೦-೮-೧೯೨೫ ನೇಗೆ ಇಲ್ಲಿಯ ಸಹಕಾರಿ ಸಂಘದ ಸಾಧಾರಣ ಸಭೆಯು ಸೇರಿತ್ತು. ಶ್ರೀ॥ ಸುಬ್ರಾವ ರಾಮಚಂದ್ರ ಹಳದೀಪ್ರಕರರು ಅಧ್ಯಕ್ಷರಿದ್ದರು. ಸಭೆಯಲ್ಲ [illegible] ನೇಮಣೂಕಿಯ ಸಮಯ ಬಹಳ ಗದ್ದಲವಾಯಿತು. ಮೆನೆಜಿಂಗ ಕಮೀಟಿಯವರು ಮಿ॥ ವಾಗಳೇಯವರನ್ನು ನೇಮಿಸಬೇಕೆಂದು ಸಾಮಾನ್ಯ ಸಭೆಗೆ ಶಿಫಾರಸು ಮಾಡಿದ್ದರು. ಈ ವಿಷಯ ಮಿ॥ ಶೇಕ ಆದಮ್, ಶ್ರೀ॥ ಪದ್ಮನಾಭ ಶೇಣ್ವೆ, ಅಧ್ಯಕ್ಷರಾದ ಶ್ರೀ॥ ಹಳದೀಪ್ರರ, ಶ್ರೀ॥ ಎಮ್. ಬಿ ನಾಡಕರ್ಣಿ ಇವರೊಳ [illegible] ಲದ ವರೆಗೆ ಚರ್ಚೆಯಾಯಿತು. ಬೇಂಕಿನವರು ಕೊಟ್ಟ ಜಾಹೀರಾತಿಯ ಅರ್ಥ, ಬೇಂಕಿನ ನಿಯಮಗಳ ಅರ್ಥ, ಮೆನೆಜಿಂಗ ಕಮೀಟಿಯ ಅಧಿಕಾರ, ಸಾಮಾನ್ಯ ಸಭೆಯ ಅಧಿಕಾರ ವ್ಯಾಪ್ತಿ ಚರ್ಚೆಯಾಗಿ, ಕೊನೆಗೆ ಮತಗಳ ಎಣಿಕೆಯಾಯಿತು. ಅಧ್ಯಕ್ಷರು ಕೈಯೆತ್ತ ಹೇಳಿದರು [illegible] ಪ್ರತಿಕೂಲ [illegible] ಳ ಎಣಿಕೆಯಿಂದ ಮಿ॥ ವಾಗಳೆಯವರ ನೇಮಣೂಕಿಯು ಮಂಜೂರಾಗಿರುವದೆಂದು ಅಧ್ಯಕ್ಷರು ನಿರ್ಣಯಿಸಿದರು. ವಿರೋಧಕರು, ಅನುಕೂಲ ೫೬, ಪ್ರತಿಕೂಲ ೬೦ ಹೀಗೆ ಮತವಿಭಾಗಣಿಯಾಗಿದೆಂದು ತಕರಾರು ಮಾಡಲು, ಅನುಕೂಲ-ಪ್ರತಿಕೂಲ-ತಟಸ್ಥ ಮಂದಿಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ನಿಲ್ಲಲು ಅಧ್ಯಕ್ಷರು ಹೇಳಿದರು. ಈ ಸಮಯದಲ್ಲಿ ಕೆಲವು ಪಕ್ಷಾಂಧ ಮಂದಿಗಳು ಇತರ ಪಕ್ಷದವರಿಗೆ ಎಳೆಯಹತ್ತಿದರಂತೆ. ಅಧ್ಯಕ್ಷರೂ ತಮ್ಮ ಆಸನವನ್ನು ಬಿಟ್ಟು ಬಂದಿದ್ದರು. ಗದ್ದಲವು ವಿಪರೀತವಾಗಲು, ಸಭಾಪತಿಗಳು ಪೋಲೀಸರ ಸಹಾಯದಿಂದ ಸಭೆಯನ್ನು ವಿಸರ್ಜಿಸಿ ನಡೆದರು. ತೀರ ಶೋಚನೀಯ!

ಇಲ್ಲಿಯ ಶೇಂದಿ ಅಂಗಡಿಯ ರಾ॥ ತಿಂದೇಂಡುವರಿಗೆ ಅಬಕಾರಿ ಕಾಯಿದೆಯಂತೆ ೪೦ ರೂಪಾಯಿ ದಂಡವಾಗಿದೆ. ಅವರ ಲೈಸನ್ಸು ರದ್ದಾಗಿ, ಈಗ ಅವರ ಅಂಗಡಿಯು ಪುನಃ ಲಿಲಾಂವಿಗೆ ಇಡಲ್ಪಟ್ಟಿದೆ. ೨ ವರ್ಷಗಳ ವರೆಗೆ ಇವರಿಗೆ ಲೈಸನ್ಸು ಕೊಡಬಾರದಾಗಿಯೂ ಅಪ್ಪಣೆಯಾಗಿದೆ.

ಕಾರವಾರ-ಅಂಕೋಲಾ ಮಾರ್ಗವು ಬಹಳ ನಾದುರುಸ್ತಾಗಿದೆ. ಅಧಿಕಾರಿಗಳು ಇತ್ತ ಲಕ್ಷ ಕೊಡಬೇಕು.

ಸುಂಕೇರಿ— ಈ ವರ್ಷ ಇಲ್ಲಿಯ ಜನರ ಭಾಗ್ಯವೇ ಸರಿ. ಕಾರಣ, ವಿಘ್ನನಾಶನಾದ ಗಣೇಶ ದೇವರ ಉತ್ಸವಗಳು ಮುಗಿಯುವಷ್ಟರಲ್ಲಿ, ಇನ್ನೂ ಇಲ್ಲಿಯ ಜನರ ಕೇಳಿಕೆಯಲ್ಲಿಯೂ ಇಲ್ಲದಂಥ — ಪ್ರತ್ಯಕ್ಷ ನೋಡಿ ಅನುಭೋಗಿಸದ ಮಾತು ಒತ್ತಟ್ಟಿಗಿರಲಿ — ಶ್ರೀಮದ್ಭಾಗವತ ಸಪ್ತಾಹವು ಶ್ರೀ ಕೃಷ್ಣ ದೇವಸ್ಥಾನದಲ್ಲಿ ಸಶಾಸ್ತ್ರ ಪ ತ್ತ [illegible] ಯಥಾಂಗವಾಗಿ ಜರುಗಿತು. ಸಪ್ತಾಹವು ಭಾದ್ರಪದ [illegible] ವಿಗೆ ಪ್ರಾರಂಭವಾಗಿ ಹುಣ್ಣಿಮೆಯ ದಿವ ಮಹಾಪೂಜೆಯೊಂದಿಗೆ ಸಮಾಪ್ತಿಗೈದಿತು. ಪಾರಾಯಣಕಾರರು ಇಲ್ಲಿಯ ಪ್ರಸಿದ್ಧ ಶಾಸ್ತ್ರಕೋವಿದ ಮತ್ತು ಸಂಸ್ಕೃತ ಭಾಷಾ ಪಾರಂಗತರಾದ ವೆ। ರಘುವೀರ ವ್ಯಾಸರಾಯ ಆಚಾರ್ಯರವರ! ದಿನಾಲು ಬೆಳಿಗ್ಗೆ ೫ ೬ ತಾಸುಗಳ ವರೆಗ ಅವರ ಪಾರಾಯಣವು, ಸಂಜೆಗೆ ೫-೬ ತಾಸುಗಳ ವರೆಗೆ ಬೆಳಿಗ್ಗೆ ಓದಿದ್ದರ ಮರಾಠಿಯಿಂದ ಅರ್ಥವೂ ಹೇಳಲ್ಪಡುತ್ತಿತ್ತು. [illegible] ಭಕ್ತಜನರು — ಆಬಾಲವೃದ್ಧ [illegible] ಗಂಡಸರೂ, ಹೆಂಗಸರೂ — ಏಕಾಗ್ರತೆಯಿಂದ ಬಹು ಪ್ರೇಮಪುರಸ್ಸರ ಶ್ರವಣ ಮಾಡುತ್ತಿದ್ದರು. ಮಧ್ಯಾಹ್ನದಲ್ಲಿ ದಿವಸ ಗೀತೆಯ ಪಾರಾಯಣವಾಗಿ [illegible] ಬ್ರಾಹ್ಮಣ ಸಂತರ್ಪಣೆಯಾಯಿತು. ಭಾಗವತ ಶ್ರವಣದಿಂದ ಪ್ರವೀತರಾದವರೆಲ್ಲರೂ ಈ ಮುಂದೆಯೂ [illegible] ಪ್ರಸಿದ್ಧಪಟ್ಟರ ಮಟ್ಟಿಗೆ ಆಚರಣೆಯನ್ನು ಮಾಡಿ ಕೃತಕೃತ್ಯರಾಗಲಿ!

ವೃತ್ತಸಾರ.

— ಮದ್ರಾಸ ಜಂಗಲು ಖಾತೆಯವರು ದಕ್ಷಿಣ ಕನ್ನಡ ಜಿಲ್ಹೆಯ ಜಂಗಲುಗಳೊಳಗಿನ ತೆಗದ ಕಟ್ಟಿಗೆಯನ್ನು ಆರಿಸಿ ಕೊರೆಯಲು ಎಂದು ಕಾರಖಾನೆಗಳನ್ನು ಮಂಗಳೂರಿನಲ್ಲಿ ಸ್ಥಾಪಿಸಲಿರುವರು.

— ಬೆಳಗಾಂವಿಯಲ್ಲಿ ಪ್ರಾಥಮಿಕ ಶಿಕ್ಷಣದ ಅಧಿಕಾರದ ವಿಷಯ ಗೊಂದಲ. ಮ್ಯುನಿಸಿಪಾಲಿಟಿಯವರೇ ಶಾಲೆಗಳನ್ನು ನಡಿಸಬೇಕೆಂದು ನಾಗರಿಕರ ಅಭಿಪ್ರಾಯ. ಬೋರ್ಡಿನವರು ನಡಿಸಬೇಕೆಂದು ಮ್ಯುನಿಸಿಪಾಲಿಟಿಯವರ ಠರಾವು.

— ಪಾಲನಪೂರ ಸಂಸ್ಥಾನದೊಳಗಿನ ರತನಪಾತದಲ್ಲಿ ಶ್ರೀ ಶಂಕರದೇವರನ್ನು ಪ್ರಸನ್ನಗೊಳಿಸುವದಕ್ಕಾಗಿ ಒಕ್ಕಲಿಗನೊಬ್ಬನು ಶಿವಲಿಂಗದ ಮೇಲೆ ಆತ್ಮಾರ್ಪಣ ಮಾಡಿದನು.

— ಅಮೇರಿಕೆಯೊಳಗಿನ ಹೆಂಗಸರು ಲಷ್ಕರಿ ಶಿಕ್ಷಣವನ್ನು ಪಡೆಯುಹತ್ತಿರುವರು. ವೀರ ಸ್ತ್ರೀಯರು!

— ಕಾಶಿಯ ಪ್ರದರ್ಶನ ಮಂದಿರದಲ್ಲಿ ಒಂದು ಅದ್ಭುತವಾದ ಹಾವಿಟ್ಟಿರುವರು. ಅದಕ್ಕೆ ೨ ಕಾಲುಗಳಿವೆ. ಕಾಲಿಗೆ ೫ ಬೆರಳುಗಳಿವೆ! ಉಗುರುಗಳಿವೆ! ೧॥ ಅಡಿ ಉದ್ದ! ಅದು ಟಿ ಕಾ ವಿ ಚೌ ಕ ಎಂಬಲ್ಲಿ ಸಿಕ್ಕಿತು.

ಬೆಳಗಾಂವಿಯಲ್ಲಿ ಅನ್‌ಫ್ಲುಎಂಝಾ ಬೇನೆಯು ಹಬ್ಬುಗಲು ಬಂದಾಗ ಕಟುಕರು ಮರಣಹೊಂದುಬರಾಗಿದ್ದರು. ಶ್ರೀ ದೇವರ ಹೆಸರಲ್ಲಿ ಗೋವುಗಳನ್ನು ಬಿಟ್ಟುಕೊಡುತ್ತೇವೆಂದು ಬೇಡಿಕೊಂಡವರೆಲ್ಲರೂ ಈ ಆಪತ್ತಿಯೊಳಗಿಂದ ಪಾರಾದರೆಂದು ಬೆಳಗಾಂವಿಯ 'ಗೋಸೇವಕ' ಪತ್ರಿಕೆಯು ಪ್ರಕಟಿಸುತ್ತದೆ.

— ಸೊಲ್ಹಾಪುರ ಸ್ಟೇಶನದ ಹತ್ತರ ಬಾರಿವಾಳವೆಂಬ ಗ್ರಾಮವಿದೆ. ಇಲ್ಲಿ ಒಬ್ಬ ಮುಸಲ್ಮಾನನ ಮನೆಯ ಹೊರಬಾಗಿಲಿಗೆ ನಾಲ್ಕಾರು ತಿಂಗಳುಗಳಿಂದ ಮಲ ಹತ್ತುತ್ತಿರುವದು ಕಂಡು ಬಂತು. ಬಾಗಿಲು ತೊಳಿದರೆ, ಪತ್ತೆ ಹತ್ತಲಿಲ್ಲ. ಕಳೆದ ಒಂದು ತಿಂಗಳಿಂದ ಮನೆಯೊಳಗಿನ ಸಾಮಗ್ರಿಗಳಲ್ಲೆಲ್ಲ ಮಲ ಕೂಡಿ ದುರ್ಗಂಧವಾಗಹತ್ತಿದೆ. ಇತ್ತಿತ್ತ ಅಡಿಗೆ ಮಾಡಿಟ್ಟು ಹೊರ ಹೋದರಾಯಿತು, ಅಡಿಗೆಯಲ್ಲೆಲ್ಲ ಮಲ ಬೀಳುತ್ತದೆ. ಕುಡಿಯುವ ನೀರಿನಲ್ಲಿಯೂ ಮಲ. ಇದೆಂಥ ಭೂತಾಟಿಕೆಯೆಂದು ಸಾರುವರು ಶೋಲಾಪೂರ 'ಗೋಸೇವಕ' ಪತ್ರಿಕೆಯಲ್ಲಿ ಬರೆದು ಇದರ ಮರ್ಮವನ್ನು ಕಂಡುಹಿಡಿಯಲು ಬಲ್ಲವರಿಗೆ ಬಿನ್ನಹ ಮಾಡಿರುವರು.

— ಮಹಾತ್ಮರು ಕಳೆದ ಗುರುವಾರಕ್ಕೆ ಬಂಗಾಲದ ಪ್ರವಾಸ ಮುಗಿಸಿ ಮುಂಬಯಿಗೆ ಬಂದು ಮುಟ್ಟಿದರು. "ಮುಂಬಯಿ ಕ್ರಾನಿಕಲ್" ಪತ್ರಿಕೆಯ ಪ್ರತಿನಿಧಿಗಳು ಪ್ರಚಲಿತ ಕಾರ್ಯಕ್ರಮದ ಬಗ್ಗೆ ಮಹಾತ್ಮರ ಮುಲಾಖತ ಕೇಳ್ಳಲು, "ನೂಲಿರಿ, ನೂಲಿರಿ, ನೂಲಿರಿ," ಎಂದು ಮಹಾತ್ಮರು ಹೇಳಿದರು.

— ಕಲಕತ್ತೆಯ ಮ್ಯುನಿಸಿಪಾಲಿಟಿಯವರು ದೇಶಬಂಧುಗಳ ಸ್ಮಾರಕಕ್ಕಾಗಿ ೧ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಬೇಕೆಂದಿದ್ದರು. ಆದರೆ ಹೀಗೆ ಮಾಡುವದು, ಕಾಯಿದೆಯ ವಿರೋಧವೆಂದು ಮ್ಯುನಿಸಿಪಾಲಿಟಿಯ ಕಾಯಿದೆ ಪಂಡಿತರು ಅಭಿಪ್ರಾಯಪಟ್ಟಿರುವರು.

— ಒಂದು ಚಮತ್ಕಾರ! ಆಗಸ್ಟ ತಾ. ೧ನೇಗೆ ವೈನಹಾಟವಂಬ ಗ್ರಾಮದ ಬಳಿ ವೈಷ್ಣವ ಸತ್ಪುರುಷನು ನಿಧನ ಹೊಂದಿದನು. ಈತನ ಹೆಸರು ಹರಿದಾಸ. ಹರಿಕೀರ್ತನ ಮಾಡುವವರಲ್ಲಿ ಹೆಸರಾದವನು. ಊರವರು ಹರಿಕೀರ್ತನೆ ಮಾಡುತ್ತ ಹರಿದಾಸನ ಪ್ರೇತಯಾತ್ರೆಯನ್ನು ನಡಿಸಿದರು. ಯಾತ್ರೆಯು ಗಂಗಾತೀರಕ್ಕೆ ಹೋಗಿ ಮುಟ್ಟಿತು. ಥಕ್ಕನೆ, ಪ್ರೇತವು ಎದ್ದು ನಿಂತು, ಭಾಗೀರಥಿಯ ಪ್ರವಾಹದಲ್ಲಿ ತಾನಾಗಿ ಸೇರಿಕೊಂಡಿತು. ಭಜನೆಯು ನಡಿಯುತ್ತಿತ್ತು. ಮೇಲಕ್ಕೆ ಬಂದು ೧೦ ನಿಮಿಷಗಳ ವರೆಗೆ ಕುಣಿದು, ಕುಣಿದು, ಗಂಗಾನದಿಯಲ್ಲಿ ಸೇರಿಕೊಂಡಿತು. ಇದನ್ನೆಲ್ಲ ಅನೇಕರು ಕಣ್ಣಾರೆ ಕಂಡಿರುವರೆಂದು 'ಹಿಂದೂ ಸಮಾಚಾರ' ಪತ್ರಿಕೆಯು ಪ್ರಕಟಿಸಿರುವದು.

— ಬ್ರಿಟಿಶ ಕಾಲಿಕಾರ ಪಕ್ಷವು ಭಾರತೀಯ ಪ್ರಜೆಗಳ ಮೇಲೆ ಸಹಾನುಭೂತಿಯನ್ನು ವ್ಯಕ್ತಪಡಿಸಿ ಅವರಿಗೆ ಸ್ವಾತಂತ್ರ್ಯವನ್ನಿತ್ತ ಹೊರತು, ಭಾರತಖಂಡಕ್ಕಾಗಲಿ, ಬ್ರಿಟಿಶ ರಾಷ್ಟ್ರಕ್ಕಾಗಲಿ ಕ್ಷೇಮವಿಲ್ಲೆಂದು ಜಾಹೀರುಪಡಿಸಿರುವದು. ಮತ್ತು ಹಿಂದುಸ್ಥಾನದಲ್ಲಿ ಆಳರಸರು ನಡಿಸುವ ಪೀಡನೆಯನ್ನು ನಿಷೇಧಿಸಿರುವದು.

— ಸರ್ವಾಧಿಪತಿಗಳ ವಿಲಾಯತಿಯ ಪ್ರಯಾಣಕ್ಕೆ ಆಂತು ಖರ್ಚು ೬೪ ಸಾವಿರ ರೂಪಾಯಿ ತಗಲಿತು.

— ಮಹಮ್ಮದೀಯ ಸಮಾಜದಲ್ಲಿ ಸಧ್ಯಕ್ಕೊಂದು ದೊಡ್ಡ ಗಲಭೆಯೆದ್ದಿದೆ. ಮದೀನಾದಲ್ಲಿ ಪೈಗಂಬರರ ಗುಡಿಯ ಶಿಖರದ ಮೇಲೆ ಇಬ್ನಸೂದರು ಗುಂಡು ಹಾಕಿದರೆಂದು ಮಹಮ್ಮದೀಯರು ಚಿಂತಾಕ್ರಾಂತರಾಗಿರುವರು. ಈ ಸುದ್ದಿಯು ಸುಳ್ಳೆಂದು ಕೆಲವರು, ಸತ್ಯವೆಂದು ಅನೇಕರು ಹೇಳುತ್ತಾರೆ. ಆತಬಸ್ತ್ವನದ ಬಗೆಗೆ ತಂತಿಗಳ ಮೇಲೆ ತಂತಿಗಳು ಹೋಗುತ್ತಿವೆ. ಮೌ॥ ಅಬುಲ್ ಕಲಮ್ ಆಝಾದರವರು ಜಾಹೀರಪಡಿಸುವದೇನಂದರೆ — ಇಬ್ನಸೂದರಿಗೂ, ಪೈಗಂಬರರ ಸ್ಥಾನವು ಅತಿ ಪವಿತ್ರವಿದ್ದು, ಅಂಥ ದುರಾಚಾರಗಳನ್ನು ಅವರೆಂದೂ ಮಾಡಲಿಕ್ಕಿಲ್ಲ. ಇದು ಸುದ್ದಿಗಾರರ ವೃಥಾ ಜೊಳ್ಳೆಯು. ಇದರ ಮೇಲೆ ನಂಬಿಗೆಯನ್ನಿಟ್ಟು ಮಹಮ್ಮದೀಯ ಬಾಂಧವರು ಇಬ್ನಸೂದರ ವಿಷಯ ಸಂಶಯರಾಗಬಾರದು.

— ಅಮೃತಸರದಲ್ಲಿ ಲೀನಾ ಎಂಬ ನರ್ತಕಿಯೊಬ್ಬಳು ನರ್ತನ ಮಾಡುತ್ತಿದ್ದಳು. ಒಬ್ಬ ಮಹಮ್ಮದೀಯ ತರುಣನು ತನ್ನ ಸಂಗಡಿಗರೊಡನೆ ಆವಳ ಮೈಮೇಲೆ ಬಿದ್ದನು. ಆತನ ಮೇಲೆ ಖಟ್ಲೆಯಾಗಿ ೨ ವರ್ಷದ ಶಿಕ್ಷೆ ವಿಧಿಸಲ್ಪಟ್ಟಿದೆ; ಸಂಗಡಿಗರಿಗೆ ೧-೩ ವರ್ಷದ ಶಿಕ್ಷೆ.

— ಆಗೋಸ್ಟ ತಾ. ೧೭ ಕ್ಕೆ ಮುಕ್ತೇಶ್ವರಿಯಲ್ಲಿ ಒಂದು ವಿಚಿತ್ರ ಕೂಸು ಹುಟ್ಟಿದೆ. ಅದಕ್ಕೆ ೨ ಬಾಯಿ, ೪ ಕಣ್ಣು, ೪ ಕಿವಿ, ೩ ಕೈ, ೨ ಕಾಲು, ಮತ್ತು ೧ ಮೂಗು ಇದ್ದವು. ಹುಟ್ಟಿದ ಕೆಲ ಹೊತ್ತು ಉಸುರಾಡಿ ಪ್ರಾಣ ಬಿಟ್ಟಿತು.

— ಸಾತಾರೆಯ ಪ್ರಸಿದ್ಧ ವಕೀಲರಾದ ರಾವಬಹಾದ್ದೂರ ಕಾಳೆಯವರ ಮಗಂದಿರು ಸದ್ಯಕ್ಕೆ ಬೆರಿಸ್ಟರರಾಗಿ ಬಂದಿದ್ದರು. ಕಳೆದ ತಾ. ೨೪ ನೇಗೆ ಅವರು ಗುಂಡು ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡರು.

— ಕುರುಂದವಾಡದೊಳಗಿನ ಉಗಿಬಂಡಿಯ ನೌಕರರ ಹೆಂಗಸರು ಮಕ್ಕಳು ದೇವದರ್ಶನಕ್ಕಾಗಿ ಗಾಡಿಯ ಮೇಲೆ ಕೂತು ಹೋಗುತ್ತಿರುವಾಗ ಹಾದಿಯ ಮೇಲೆ ಧಕ್ಕನೆ ಹಳ್ಳಬಂದು ಗಾಡಿ ಕವಚಿ ೯ ಹುಡುಗರು ಮೃತಪಟ್ಟರು.

— ಕರಾಚಿಯೊಳಗಿನ ಹಿಂದುಗಳು ಜಾಹೀರ ಸಭೆ ಕೂಡಿಸಿ ಕರಾಚಿ ಮ್ಯುನಿಸಿಪಾಲಿಟಿಯವರು ಹಿಂದೀ ಭಾಷೆಯ ಶಿಕ್ಷಣವನ್ನು ಕೊಡಬೇಕಾಗಿಯೂ, ಅವಶ್ಯವಿದ್ದರೆ ಹಿಂದೀ ಶಾಲೆಗಳನ್ನು ಸ್ಥಾಪಿಸಬೇಕಾಗಿಯೂ ಠರಾಯಿಸಿರುವರು.

— ಸಿಂಧ ಪ್ರಾಂತದ ಜಾಸಂದರ ಊರೊಳಗಿನ ಹಿಂದೂ ಮನೆಯಲ್ಲಿ ದರೋಡೆಯಾಯಿತು. ಅಲ್ಲಿ ಇದೇ ಊರಲ್ಲಿ ಮೂರೇ ಮನೆಗಳು ಹಿಂದುಗಳವು. ಮೂರು ಮನೆಯೊಳಗಿನ ಹಿಂದೂಗಳು ಒಟ್ಟುಗೂಡಿ ದರೋಡೆಖೋರರಿಗೆ ಎದುರಾಗಿ ಒಬ್ಬನನ್ನು ಹಿಡಿದು ಬಿಟ್ಟರು.

— ಉಗಿಬಂಡಿಯು ಲಖನೌ ಸಮೀಪ ಪ್ರಯಾಣ ಬೆಳೆಸುತ್ತಿದ್ದಾಗ ದರೋಡೆಖೋರರು ಮಾಡಿದ ದರೋಡೆಯ ಪತ್ತೆ ಹಚ್ಚಿಕೊಡುವವರಿಗೆ ಪೋಲೀಸರು ೫ ಸಾವಿರ ರೂಪಾಯಿಗಳ ಇನಾಮು ಕೊಡಮಾಡಿರುವರು.

— ಕಲಕತ್ತೆಯಲ್ಲಿ ಪೋಲೀಸರು ಜುಗಾರು ಮಂದಿಗಳ ಮೇಲೆ ದಾಳಿಯನ್ನಿತ್ತು ಸುಮಾರು ೨೦೦ ಕ್ಕೆ ಮಿಕ್ಕಿ ಜುಗಾರಿಗಳನ್ನು ಹಿಡಿದಿರುವರು.

— ಬಾರಿಸಾಲದಲ್ಲಿ ಸ್ವಯಂಸೇವಕ ಸಂಘದ ಸಭೆಯಾಗಿ ಪರದೇಶೀ ಅರಿವೆ, ವಸ್ತುಗಳ ಬಹಿಷ್ಕಾರ ಮಾಡುವ ಚಳವಳಿಯನ್ನು ಕೈಕೊಳ್ಳುವ ಠರಾವಾಗಿದೆ.

— ಅಮೇರಿಕನ್ ಬೈಬಲ್ ಸೊಸೈಟಿಯವರು ಪ್ರತಿವರ್ಷಕ್ಕೆ ಸುಮಾರು ೬೭ ಲಕ್ಷ ಬೈಬಲ ಪ್ರತಿಗಳನ್ನು ಪರದೇಶಗಳಲ್ಲಿ ಹಂಚುತ್ತಾರೆ. ಕ್ರಿಸ್ತಿ ಧರ್ಮ ಪ್ರಸಾರ ಕಾರ್ಯವು ಹ್ಯಾಗೆ ಸಾಗಿದೆ ನೋಡಿರಿ!

ಅಂಕೋಲೆಯ ಬಾತಮೀ ಪತ್ರ.

ಲೋಕಲ ಬೋರ್ಡ ಇಲೆಕ್ಷನದ ಪೂರ್ವರಂಗ.

ಶ್ರೀ। ರಾಮರಾವ ನಾಡ್ಕರ್ಣಿಯವರ ಚಟುವಟಿಕೆಗಳು.

(ನಮ್ಮ ಬಾತಮೀದಾರರಿಂದ.)

ಅಂಕೋಲೆಯ ತಾಲೂಕಿನ, ಜಿಲ್ಹಾ ಮತ್ತು ಲೋಕಲ ಬೋರ್ಡ ಇಲೆಕ್ಷನುಗಳು ದಿನೇ ದಿನೇ ಸಮೀಪಿಸಿದಂತೆ, ವಾತಾವರಣದೊಳಗೆ ಚಿತ್ರವಿಚಿತ್ರ ಚಲವಲಗಳು ಉಂಟಾಗುತ್ತಿವೆ. ಇಂಗ್ಲಿಷ ಶಾಲೆಯ ಪ್ರಕರಣವು ನಿಶ್ಯಕ ಚರ್ಚೆಯ ವಿಷಯವಾಗಿದ್ದರೂ ಸ್ವಯಂಭೂ ಕಮಿಟಿಯ ಕಾರಭಾರದಲ್ಲಿ ಶಿಕ್ಷಕರ ಮೇಲೆ ಶಿಕ್ಷಕರು ರಾಜೀನಾಮೆ ಕೊಟ್ಟು ನಡೆದದ್ದು ಮೇಲಿನ ಇಯತ್ತೆಗಳ ಹುಡುಗರಿಗೆ ಇತರೇ ಶಾಲೆಗಳ ಮಾನದಿಂದ ಕೊಟ್ಟ ಫೀಯ ನಾಲ್ಕು ಆಣೆ ಪಾಲು ಶಿಕ್ಷಣ ದೊರೆಯದಿದ್ದರೂ, ರಾಜೀನಾಮೆ ಕೊಟ್ಟ ಮೂರೂ ಶಿಕ್ಷಕರ ಜಾಗೆಯ ಮೇಲೆ ಎರಡು ತಿಂಗಳು ತಾತ್ಪುರತಾದ ಹುಡುಗ ಪ್ರಾಯದ ಶಿಕ್ಷಕರನ್ನು ಸ್ಥಾಪಿಸಿ ಹೆಡ್ ಮಾಸ್ತರರ ಜಾಗೆಯ ಮೇಲೆ ಈ ಜಾಗೆಯ ಹೊಸತಾಗಿ ಅನುಭವ ತಕ್ಕೊಳ್ಳಬೇಕಾದ ಒಬ್ಬರನ್ನು ನೇಮಿಸಿ ಸದ್ಯಕ್ಕೆ ಶಿಕ್ಷಣ ಖಾತೆಯವರಿಗೆ ತಪಾಸಿಗೆ ಬಂದರೆ, ಅವರಿಗೆ ಬೇಕಾದಷ್ಟು ಸಿದ್ಧತೆಯನ್ನು ಅಲ್ಪ ಹೊತ್ತಿಗೆ ತೋರಿಸುವಷ್ಟು ಪ್ರಯತ್ನ ನಡೆದದೆ. ಶಾಲೆಯ ನೌಕರ ಸರಂಜಾಮದ ಲೆಕ್ಕಕ್ಕೆ ಈ ತಯಾರಿ ನಡೆದಿದ್ದಾಗ, ಫಂಡಿನ ಲೆಕ್ಕಕ್ಕೆ ಇಲ್ಲಿಯ ಜಿಂಖಾನೆಯಿಂದ ಬಹಿಷ್ಕಾರವಿದ್ದಾಗ, ದೊಡ್ಡದೊಂದು ನೋಟ್ಟಿ ತೆಗೆದು ಪರಊರಿನಿಂದ ಜುಗಾರ ಕ್ಲಬ್ಬಿನ [T' ri-club] ದಿಂದ ವಂತಿಗೆ ತಂದು ಫಂಡು ಕೂಡಿಸಿ ತೋರಿಸುವ ವಿಚಾರವು ಕೆಲ ಹಿತಚಿಂತಕರದು ನಡೆದಿರುತ್ತದೆಂದು ತೋರುತ್ತದೆ. ಅತ್ತ ಈ ಕಾರಸ್ಥಾನಗಳು, ಫೌಜದಾರೀಗೆ ಕು ದಿನಂಪ್ರತಿ ನಡೆದಿದ್ದಾಗ ಇಲ್ಲಿ ಇಲೆಕ್ಷನದ ಕಾಟಾಟವು ಸಮೀಪಿಸಿದೆ. ಇಂಗ್ಲಿಷ ಶಾಲೆಯ ಸ್ವಯಂಭೂ ಕಮಿಟಿಯ ಒಬ್ಬ ಜನಕರಾದ ಶ್ರೀ। ರಾಮರಾವ ನಾಡಕರ್ಣಿ ಎಂಬೊಬ್ಬ ಕಾರಸ್ಥಾನಿ ಮಂಡಳರ ಸ್ವಾಭಾವಿಕ ಚಟುವಟಿಕೆಗಳು ಲೋಕಲ ಬೋರ್ಡ ಚುನಾವಣಿಯಲ್ಲಿ ಉತ್ಸಾಹತೆಯಿಂದ ಪ್ರವೇಶ ಹೊಂದುತ್ತಿವೆ. ಇಲೆಕ್ಷನದ ರಣರಂಗದ ಪೂರ್ವಸಿದ್ಧತೆಯೊಳಗೆ ಕಳೆದ ವಾರದಲ್ಲಿ ಅವರು ತನ್ನ ರಾಜಕೀಯ ಕಾರಸ್ಥಾನಿಯ ಚಮತ್ಕಾರವನ್ನು ನಡಿಸಲಾರಂಭಿಸಿದರು. ಲೋಕಲ ಪಕ್ಷದ ರಾಷ್ಟ್ರೀಯ ಉಮೇದವಾರರನ್ನು ಏನ ಕೇನ ಉಪಾಯೇನ ಕೆಡಗಬೇಕು ಮತ್ತು ಈ ಪಂಗಡವನ್ನು ಉಧ್ವಸ್ತ ಮಾಡಬೇಕು; ಇಷ್ಟು ಮಾಡಿ ತಮ್ಮ ಕ್ಲಿಕ್ಕಿನ ಪುರಸ್ಕಾರ ಮಾಡಬೇಕು ಎಂದು ಮುಜುಮದಾರರೆಂಬ ವಕೀಲರನ್ನು ಅವರ ಪಕ್ಷದ ಉಮೇದವಾರರನ್ನು ಬಹು ಪ್ರಯಾಸದಿಂದ ಆರಿಸಿ ತಂದು ಬಹುಮತದ ಬೆಂಬಲದಿಂದ ತಾನು ಅವರು ಮುಖ್ಯ ಕಾರಭಾರಿಯಾಗಿ ಲೋಕಲ ಬೋರ್ಡಿನ ಕಾರಭಾರವನ್ನು ನಿರಂಕುಶವಾಗಿ ನಡಿಸಬೇಕು. ಇಷ್ಟೆಲ್ಲ ಸಾಧ್ಯ ಮಾಡಬೇಕಾದರೆ ರಾ। ಮುಜುಮದಾರರಿಗೂ, ಇಲ್ಲಿಯ ಪ್ರಸಿದ್ಧ ವರ್ತಕರಾದ ರಾ। ಶೇಷಗಿರಿ ಕಾಮತ ಇವರಿಗೂ ಹೊಸ ಮಿತ್ರತ್ವದ ... ನಿಸಬೇಕು. ಇಷ್ಟು ದೊಡ್ಡ ಕಾರಸ್ಥಾನದ ರಚನೆಯನ್ನು ಕಳೆದವಾರದಲ್ಲಿ ಮಾಡಿದ್ದರೆಂದು ಎಲ್ಲ ಸ್ಥಿತಿಯನ್ನು ಸೂಕ್ಷ್ಮ ರೀತಿಯಿಂದ ಅವಲೋಕಿಸಿದ ನನ್ನ ತರ್ಕವಾಗಿದೆ. ಈ ತರ್ಕವು ತಪ್ಪಿದೆಯೋ, ಇಲ್ಲವೋ ಎಂಬುದನ್ನು ಮುಂದಿನ ಸಂಗತಿಗಳಿಂದ ತಿಳಿಯುವದು. ನಾನು ಭಾವಿಸಿದ ರಾ। ರಾಮರಾಯರ ಕಾರಸ್ಥಾನದ ಚಟುವಟಿಕೆಯು ಬಿಸ್ಮಾರ್ಕನ ತತ್ವಗಳ ಮೇಲೆ "ರಾ। ವಿಶ್ವನಾಥ ಪ್ರಭುರು ನಿಮಗೆ ಉಮೇದವಾರರಾಗಿ ಪಾಡ ಬಾರದೆಂದು" ಹೇಳುತ್ತಾರೆಂದು ಒಬ್ಬ ಉತ್ಸಾಹಿ ಉಮೇದವಾರನಿಗೆ ಹೇಳಿ, ರಾಷ್ಟ್ರೀಯ ಪಕ್ಷದ ಪೂರ್ವದ ಚರ್ಚೆಯನ್ನು ತಿಳಿಸದೆ ಈ ಸದ್ಗ್ರಹಸ್ಥರಿಗೆ ರಾ। ಪ್ರಭುರ ವಿರುದ್ಧ ಪ್ರತಿಸ್ಪರ್ಧಿಯಾಗಿ ಎಬ್ಬಿಸುವದು ಇದೊಂದು ದಿವಸದ ಕಾರಸ್ಥಾನ. ಮತ್ತೊಂದು ದಿವಸ ರಾಷ್ಟ್ರೀಯ ಪಕ್ಷದ ಒಬ್ಬ ಪ್ರಮುಖ ಮುಖಂಡರು ತನ್ನ ಪಕ್ಷದ ಮುಖಂಡರ ಕಾಲಮೇಲೆ ನಿನ್ನ ಹೋಗಿ ಬಿದ್ದರು" ಎಂತ ಸುದ್ದಿ ಹೇಳುತ್ತ ಹೋಗುವದು. ಈ ಕಾರಸ್ಥಾನಗಳಿಗೆ ಬೇಕಾದ ಸಂಗತಿಗಳನ್ನು ಹುಡುಕಿ ತೆಗೆಯುವದು, ಮತ್ತು ಜನರಿಗೆ ಆಶ್ಚರ್ಯಗೊಳಿಸುವದು ಅವರ ಈಗಿನ ಕಾರ್ಯಕ್ರಮವಾಗಿದೆ. ರಾ। ಮುಜುಮದಾರರಿಗೂ ರಾ। ಕಾಮತರಿಗೂ ಗಂಟು ಹಾಕಿಸಿ ಅವರ ಗೆಳೆತನವನ್ನು ಕೂಡಿಸಿ ತಾನು ಮುಂದಾಳಾಗಿ ಬರುವದು ದಾಖಿಸಿ ಇಷ್ಟರ ಮಟ್ಟಿಗೆ ತನ್ನ ಪಂಗಡವನ್ನು ಸ್ಥಿರಪಡಿಸುವ ಅವರ ಪ್ರಯತ್ನವು ಇಷ್ಟರಿಂದಲೇ ಅಂತಹರ ಯೋಗ್ಯತೆ ಕಾಣದೆಂಬುದು ಖಾತ್ರಿ ಇದೆ. ಇನ್ನು ಇಲೆಕ್ಷನದ ಎಲ್ಲ ಪತ್ರಗಳ ಕಾರಸ್ಥಾನಗಳು ಹಾಗೂ ದಿಮೇಲೆ ಅವುಗಳ ಸವಿರಸವನ್ನು ವಾಚಕರಿಗೆ ಮತ್ತೊಮ್ಮೆ ಕಾಣಿಸುವೆನು. ಸುತಾರಾಂ ಮಾತ್ರ ಅಂಥದಾಗಿ ಇಷ್ಟು ಬೇಗನೆ ದಿಕ್ಕು ತಪ್ಪಿ ಲೋಕ ಪಕ್ಷದ ಪಾತ್ರ ಉಮೇದವಾರರನ್ನು ಬಿಟ್ಟು, ಇತರರಿಗೆ ಮತ ಕೊಡುವ ಭೀತಿಗೆ ಬಲಿಬೀಳದೆ, ದೊಡ್ಡ ದೊಡ್ಡ ಅಹಂಕಾರ ಆಲಸ್ಯತನಕ್ಕೆ ಬೆದರದೆ ತಮ್ಮ ಮತದಾನದ ಸ್ವಾತಂತ್ರ್ಯವನ್ನು ವಚನ, ಆಶ್ವಾಸನ, ವಚನಭಂಗ, ಈ ಶಬ್ದಗಳಿಗೆ ಲಕ್ಷ್ಯಕೊಡದೆ ಕಾಯುವರೆಂದು ನನ್ನ ವಿಶ್ವಾಸವದೆ.

ಜಾಹೀರನಾಮೆ.

ಶ್ರೀ ಮದ್ರಾಮಚಂದ್ರಾಪುರ ಶ್ರೀ ಸಂಸ್ಥಾನಾಧಿಕಾರಸ್ಥಾನದಿಂದ—

ಸಮಸ್ತ ವಿದ್ವಚ್ಛಿರೋಮಣಿಗಳಿಗೆ,

ಸಂಧ್ಯಾವಂದನಾದಿ ನಿತ್ಯ ಕರ್ಮಾದಿಗಳಲ್ಲಿ ಮಾಡುವ ಮಾರ್ಜನ ವಿಧಿ ನಿರೂಪಣೆ ಪ್ರಸಂಗದಲ್ಲಿ,

೧

प्रसास्तमुदकं ब्रह्म मुखाख्येनाभिमन्त्र्य च ॥ आपोहिष्ठादिभिर्मन्त्रैर्दर्भैः शिरसि मार्जयेत् ॥१॥

स्पृष्ट्वा चाभिहुतवतोयं मूर्ध्नी ब्रह्ममुखेन च॥ आपोहिष्ठादिभिर्मन्त्रैर्दर्भैः शिरसि मार्जयेत् ॥२॥

ಇವೆರಡೂ ಭಿನ್ನ ಭಿನ್ನ ಮಹಾಸ್ಮೃತಿಗಳ ಶ್ಲೋಕಗಳಾಗಿರುತವೆ. ಇವುಗಳಲ್ಲಿ ಪ್ರಯೋಗ ಮಾಡಿರುವ **मूर्ध्नी, ब्रह्ममुख,** ಈ ಶಬ್ದಗಳು ಯಾವ ... ಗೆ ಸಂಜ್ಞೆಯಾಗಿರುತ್ತವೆ. ಅಥವಾ ಬೇರೆ ಯಾವದಾದರೂ ಅರ್ಥಗಳಾಗುತವೆಯೋ?

ಮತ್ತೂ ಸಕಲ ಮಹಾಜನಗಳೂ ಕಥಾ ಪ್ರದೋಷ ಕಾಲದಲ್ಲಿ ಪಠಿಸುವ ನಾರದ ಪುರಾಣಾಂತರ್ಗತವಾದ ಶ್ರೀ ಮಹಾಗಣಪತಿ ಸ್ತೋತ್ರದಲ್ಲಿ ಸೇರಿರುವ

೨

अष्टानां ब्राह्मणानां च लिखित्वा यः समर्पयेत् ॥ तस्य विद्या भवेत्सर्वा गणेशस्य प्रसादतः ॥१॥

ಈ ಶ್ಲೋಕದಲ್ಲಿ (**अष्टभ्यो ब्राह्मणेभ्यश्च**) ಎಂಬದಾಗಿ ಚತುರ್ಥೀ ವಿಭಕ್ತ್ಯಂತ ಪಾಠವು ಕಂಡು ಬರುತ್ತದೆ. ಆದರೆ ಸಪ್ರಮಾಣವಾದ್ದು ಷಷ್ಠಿ ವಿಭಕ್ತ್ಯಂತವೋ? ಚತುರ್ಥೀ ವಿಭಕ್ತ್ಯಂತವೋ?

ಈ ವಿಷಯಗಳಿಗೆ ಯೋಗ್ಯ ಶಾಸ್ತ್ರಾರ್ಥ ವಿಚಾರದಿಂದ ಸಪ್ರಮಾಣವಾಗಿ ನಿರೂಪಣೆ ಮಾಡಿ ಈ ಕೆಳಗೆ ವಿಳಾಸದವರ ವಿಳಾಸಕ್ಕೆ ಬರುವ ಆಶ್ವಯುಜ ಶು। ೧೦ (ವಿಜಯಾ ದಶಮಿ) ಯೊಳಗೆ ಕಳಿಸಿಕೊಡತಕ್ಕದ್ದು. ಅದೇ ಅಶ್ವಯುಜ ಬಹುಳದಲ್ಲಿ ಶ್ರೀ ಶ್ರೀ ಮಹಾಸಂನಿಧಿಯು ಮುಂದೆ ಬಂದು ಈ ವಿಷಯಗಳನ್ನು ನಿರೂಪಣೆ ಮಾಡಿ ಸಮಾಧಾನ ಕೊಟ್ಟಲ್ಲಿ ಅವರವರ ಶಾಸ್ತ್ರಾರ್ಥನಿರೂಪಣಾನುಸಾರವಾಗಿ, ಉತ್ತಮ, ಮಧ್ಯಮಾದಿ ತರತಮಭಾವವನ್ನು ತಿಳಿದು ಯೋಗ್ಯ ಬಹುಮಾನವನ್ನು ಕೊಡಿಸಿ ಕೊಡಬೇಕೆಂತ ನಿಶ್ಚಯಿಸಿರುತ್ತದೆ.

ಕ್ರೋಧನ ಸಂ। ಭಾದ್ರಪದ ಶು. ೧೪ ಗುರುವಾರ,
ಕೆಕ್ಕಾರ ರಘೂತ್ತಮ ಮಠ,
ಜಿಲ್ಲಾ ಉತ್ತರ ಕಾನಡಾ.
ತಾ. ಹೊನ್ನಾವರ,
ಪೋಸ್ಟ— ಮುಲ್ಲಾಪುರ.

ಶ್ರೀ; ಶ್ರೀ; ಮಹಾ ಸನ್ನಿಧಾನದ
ಅಪ್ಪಣೆ ಪ್ರಕಾರ.
ಗಂಗಾಧರಶಾಸ್ತ್ರಿ
ಪಾರುಪತ್ಯಗಾರ.

ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ.

ಅನುವಾದಕ:— ಶ್ರೀ ಎ. ಹೊದ್ಕೆ, ಸಿರ್ಸಿ.

(ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು.)

೪.

ಸಿಟ್ಟಿನಿಂದ ಹುಚ್ಚರಂತಾದ ಪರಮೇಶ್ವರ ಫೌಜದಾರರು ಆದಷ್ಟು ಬೇಗ ಠಾಣೆಗೆ ಹೋಗಿ, ಜಮಾದಾರನಾದ ಜಾಧವ ಅಲ್ಲಿಯವರನ್ನು ಕರೆದು,—“ಜಮಾದಾರ ಸಾಹೇಬರೇ, ಡಾಕ್ಟರರ ಇಬ್ಬರು ಹುಡುಗರ ಹೆಸರುಗಳನ್ನು ನೀವು ಬಲ್ಲಿರೋ?” ಎಂದು ಕೇಳಿದರು.

“ಡಾಕ್ಟರರ ಹುಡುಗರು? ಯಾವ ಡಾಕ್ಟರರು?”

“ಡಾಕ್ಟರ ದೇಸಾಯಿ! ಮತ್ಯಾರು? ಸರಕಾರದ ಉಪ್ಪುಂಡು ಅದಕ್ಕೆ ಎರಡು ಬಗೆಯುವಂಥವರು.”

“ನನಗೆ ಅವರ ಹೆಸರು ಗೊತ್ತಿಲ್ಲ.”

“ಬೇಗ ಅವರ ಹೆಸರುಗಳನ್ನು ತರುವಿರಾ?”

“ಹೌದು, ತರುವೆನು. ಅವರೇನು ಮಾಡಿದ—”

“ನನ್ನೊಡನೆ ಮಾತಾಡುತ್ತ ಇಲ್ಲಿ ನಿಲ್ಲುವದು ಬೇಡ. ಹೋಗಿರಿ.”

ಜಮಾದಾರರು ಅದೃಶ್ಯರಾದರು. ಆ ಮೇಲೆ ಫೌಜದಾರರು ಸಿಟ್ಟಿಗೆದ್ದ ಹುಲಿಯಂತೆ ಠಾಣೆಯ ಪಡಸಾಲೆಯಲ್ಲಿ ಅತ್ತಿಂದಿತ್ತ, ಇತ್ತಿಂದತ್ತ ತಿರುಗುತ್ತ ತಮ್ಮಷ್ಟಕ್ಕೆ ನುಡಿದದ್ದೇನಂದರೆ—

“ಏನು? ಸ್ವತಃ ಫೌಜದಾರರಿಗೇ ಅಪಮಾನ ಮಾಡುವ ಧೈರ್ಯವು ಅವರಿಗಾಯಿತೇ? ನನ್ನನ್ನು ಒದ್ದು ಮನೆಯಿಂದ ಹೊರಗೆ ಹಾಕಲು ಸೇವಕನನ್ನು ಕರೆದರಲ್ಲವೇ! ದೇಸಾಯಿಯವರಿಗೆ ನಾವು ಯಾರೆಂಬ ಕಲ್ಪನೆಯಾಗದೆ ತಿಳಿಯಲಿಲ್ಲ. ಒಂದೇ ತಾಸಿನೊಳಗೆ ನಾನು ಅವರ ಇಬ್ಬರು ಮಕ್ಕಳನ್ನು ದಸ್ತಗಿರಿ ಮಾಡುವೆನು. ಹೌದು, ಹಾಗೇ ಮಾಡುವೆನು. ಆದರೆ ಅಷ್ಟರಿಂದ ನನ್ನ ಸಮಾಧಾನವಾಗಲಾರದು. ಆ ಡಾಕ್ಟರರನ್ನು ಬೆಟ್ಟ ಹತ್ತಿಳಿಕ್ಕಿಸುವೆನು—ನಾನು ಅಷ್ಟು ಮಾಡದೇ ಹೋದರೆ, ಹೇಳಿರಿ. ಅವರ ಮೇಲೆ ನಾನೊಂದು ಟಿಪ್ಪಣಿಯನ್ನು ಮಾಡಿಸುವೆನು—ಇತರೇ ಭಯಂಕರ ಕ್ರಿಮಿನಲ್ ಆರೋಪ— ಹೌದೋ ಅಲ್ಲವೋ ನೋಡಿರಿ. ಅದೇನಿರಬೇಕಾದೀತು? ಹೌದು— ಅವರು ಕಳವಿನ ಮಾಲನ್ನು ತೆಗೆದುಕೊಳ್ಳುವರೆಂಬುದು. ರಾತ್ರಿಯಲ್ಲಿ ಕಳ್ಳರು ಅವರ ಮನೆಗೆ ಬಂದು ತಾವು ಕದ್ದಂಥ ಸರಕುಗಳನ್ನು ಅರ್ಧ ಕಿಮ್ಮತ್ತಿಗೆ, ಕಾಲು ಕಿಮ್ಮತ್ತಿಗೆ ಅವರಿಗೆ ಮಾರುತ್ತಾರೆಂತ, ನಾನು ಅವರ ಮನೆಯ ಝಡತಿ ಮಾಡಿ ಕಳವಿನ ಮಾಲಿನ ರಾಶಿಗಳನ್ನೇ ಹುಡುಕಿ ತೋರಿಸುವೆನು, ಅದನ್ನು ಹ್ಯಾಗೆ ಸಾಧಿಸಬೇಕೆಂಬುದನ್ನು ನಾನು ಬಲ್ಲೆನು.— ಅದಕ್ಕೂ ಸುಲಭ ಮಾರ್ಗವೂ ಇಲ್ಲ. ಆದರೆ— ವಿಚಾರಣೆಯ ಕಾಲಕ್ಕೆ ಡೆಪ್ಯುಟಿ ಕಲೆಕ್ಟರರು ಅದನ್ನು ನಂಬುವರೋ? ಅವರು ನಂಬಲಿಕ್ಕಿಲ್ಲ? ಡೆಪ್ಯುಟಿ ಕಲೆಕ್ಟರರಿಗೆ ಫೌಜದಾರರ ಮಾತೆಂದರೆ ವೇದವಾಕ್ಯ. ಡಾಕ್ಟರರನ್ನು ನಿರ್ದೋಷಿಯಾಗಿ ಮಾಡುವರು— ಅವರು ಮಾಡ್ಯಾರೋ? ಹಾಗೊಂದು ಅವರು ಮಾಡಲಿ, ನೋಡುವಾ. ನಾನು ನನ್ನ ಸುಪರಿಂಟೆಂಡೆಂಟ ಸಾಹೇಬರ ಬಳಿಗೆ ಹೋಗಿ, ಡೆಪ್ಯುಟಿ ಕಲೆಕ್ಟರರ ವರ್ತನದ ವಿಷಯವಾಗಿ ಅವರ ಕಡೆಯಿಂದ ದೊಡ್ಡದೊಂದು ರಿಪೋರ್ಟನ್ನು ಸರಕಾರಕ್ಕೆ ಸಾದರಪಡಿಸುವೆನು.—ಮತ್ತು ಮುಂದಿನ ಗ್ಯಾಝೇಟ್‍ದಲ್ಲಿ ಪ್ರಕಟವಾಗುವದೇನು?—ಡೆಪ್ಯುಟಿಯವರ ಬಡತಿಯು ೨ ವರ್ಷ ಹಿಂದ ಬೀಳುವದು.—ಇದು ಸಹಜವೇ, ಇತ್ತಿತ್ತಲಾಗಿ ಡೆಪ್ಯುಟಿ ಸಾಹೇಬರು ಫೌಜದಾರರಿಗೆ ಇಷ್ಟು ಅಂಜುವ ಕಾರಣವಾದರೂ ಇದೇ—ಇದೇ ಅವರ ಗುಟ್ಟು. ಆದರೆ, ಅಪೀಲಿನಲ್ಲಿ ಜಜ್ಜ ಸಾಹೇಬರು ಅವರನ್ನು ದೋಷಮುಕ್ತ ಮಾಡಿದರೆ? ಅವರು ಮಾಡಿದರೂ ಮಾಡಬಹುದು. ಉದಾಹರಣಾರ್ಥವಾಗಿ— ಇವರು ತಿಂಗಳೊಂದಕ್ಕೆ ನೂರುಗಟ್ಲೆ ರೂಪಾಯಿಗಳನ್ನು ಗಳಿಸುವ ಡಾಕ್ಟರರು. ಇಂಥ ಯೋಗ್ಯತೆಯ ಸುಶಿಕ್ಷಿತ ಮನುಷ್ಯರು ಕಳವಿನ ಮಾಲನ್ನು ಕೊಳ್ಳುವ ಸಂಭವವಿದೆಯೋ? ಆ ಮೇಲೆ? ಹೌದು ಜಜ್ಜರು ಹಾಗೆ ಮಾಡಬಹುದು. ಭಯಂಕರ ಜನರವರು ಅವರನ್ನು ಪೋಲೀಸ ಖಾತೆಯ ಕೈಕೆಳಗಿಡಬೇಕಾಗಿತ್ತು. ಇನ್ನೊಂದು ಕೆಲಸ ಮಾಡುವೆನು. ಮೊನ್ನೆಯ ದಿವಸ ದಂಗೆಯ ಪ್ರಕರಣದ ವಿಷಯದಲ್ಲಿ, ನಾನು ಹೊಂದಿದ ಕೆಲವು ಜನರನ್ನು ತಪಾಸಣೆಗಾಗಿ ಅವರ ಬಳಿಗೆ ಕಳಿಸಿದ್ದೆನು. ಅವರು ಆ ಗಾಯಗಳೆಲ್ಲ ಸಾದಾ ಎಂತ ಸರ್ಟಿಫಿಕೇಟ ಕೊಟ್ಟಿರುವರು. ನಾನು ಆ ಜನರೊಳಗಿನೊಬ್ಬನನ್ನು ವಶ ಮಾಡಿಕೊಂಡು, ತನ್ನ ಗಾಯಗಳು ನಿಜವಾಗಿಯೂ ಭಯಂಕರವಿದ್ದವೆಂತಲೂ ಡಾಕ್ಟರರು ಆರೋಪೀ ಜನರಿಂದ ೩೦೦ ರೂಪಾಯಿಗಳ ಲಂಚವನ್ನು ಪಡೆದು ಅವು ಸಾದಾ ಎಂತ ರಿಪೋರ್ಟ ಮಾಡಿರುವರಾಗಿಯೂ ಅವನಿಂದ ಫಿರ್ಯಾದಿ ದಾಖಲ ಮಾಡಿಸುವೆನು. ಅದು ಸಾಕಷ್ಟು ಸಂಭವನೀಯವಾಗಿ ಕಾಣಿಸುವದು. ಮತ್ತು ಡಾಕ್ಟರರು ಅದರೊಳಗಿಂದ ಹ್ಯಾಗೆ ಪಾರಾಗುತ್ತಾರೋ ನೋಡುತ್ತೇನೆ. ನಾನು ಹೇಳಿದರೆ ಅವನು ಫಿರ್ಯಾದಿ ಮಾಡಲಿಕ್ಕಿಲ್ಲವೋ? ನನ್ನ ಮಾತು ಮೀರುವ ಧೈರ್ಯವು ಅವನಿಗಾದೀತೇ? ಬದಮಾಸ್ ಎಂತ ಅವನ ಮೇಲೆ ಖಟ್ಲೆ ಮಾಡಿ ಬೇಕಾದಾಗ ನಾನು ಅವನನ್ನು ೧೧೦ ನೇ ಕಲಮಿನ ಪ್ರಕಾರ ಜೈಲಿಗೆ ಕಳಿಸಬಲ್ಲೆನೆಂಬುದು ಅವನಿಗೆ ಗೊತ್ತಿಲ್ಲವೋ?”

ಇಷ್ಟರಲ್ಲಿ ಜಮಾದಾರರು ತಿರುಗಿ ಬಂದು, ಡಾಕ್ಟರರ ೨ ಹುಡುಗರ ಹೆಸರು ಸದಾಶಿವ ಹಾಗೂ ಶಂಕರ ಎಂತ ಹೇಳಿದರು.

ಕೂಡಲೆ ಫೌಜದಾರರು ಕಲೆಕ್ಟರರಿಗೆ ಝಡ್ತಿ ವಾರಂಟನ್ನು ದಯಪಾಲಿಸಬೇಕಾಗಿ ಅಂತರಂಗದ ರಿಪೋರ್ಟೊಂದನ್ನು ತಯಾರಿಸಲು ತೊಡಗಿಕೊಂಡರು. ಅದು ಈ ಪ್ರಕಾರ ಇತ್ತು:—

ದೀನ ದಯಾಳು ಸಾಹೇಬರಿಗೆ ಶುಭವಾಗಲಿ! ಯುರೋಪಿಯನ್‍ನಿಗೆ ಹೊಡೆದ ಪ್ರಕರಣದಲ್ಲಿ ನಾನು ನಡಿಸಿದ ತಪಾಸಣೆಯ ಕಾಲಕ್ಕೆ ಇನ್ನೂ ಇಬ್ಬರು ಹುಡುಗರು ಆ ಹೊಡದಾಟದಲ್ಲಿ ಸೇರಿದ್ದಾರೆಂತ ನನಗೆ ಕಂಡುಬಂದಿರುತ್ತದೆ. ಅವರು ಸದಾಶಿವ ಮತ್ತು ಶಂಕರ ಎಂಬುವರು— ಇಬ್ಬರೂ ಸರಕಾರೀ ದವಾಖಾನೆಯ ಡಾಕ್ಟರ ದೇಸಾಯಿಯವರ ಮಕ್ಕಳು. ಸದಾಶಿವನು ಆಗಲೇ ಪ್ರಚಂಡ ಯುವಕನಾಗಿರುವಂತೆ ಕಾಣುತ್ತದೆ. ಅವನು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಕಲಿಯುತ್ತಿರುವನು. ಸದಾಶಿವನ ದುರ್ಬೋಧನೆಯ ಮೇಲಿಂದಲೇ ಉಳಿದ ಆರೋಪಿಗಳು ಆ ಯುರೋಪಿಯನ್‍ನ ಮೇಲೆ ಬಿದ್ದು, ಅವನನ್ನು ಹೊಡೆಯುತ್ತಿದ್ದರೆಂತ ಕಾಣುತ್ತದೆ. ಇನ್ನು ಮೇಲೆ ನಾನು ಆ ಇಬ್ಬರು ಅಣ್ಣ-ತಮ್ಮಂದಿರನ್ನು ಕ್ರಿಮಿನಲ್ ಪ್ರೊಸೀಜರ ಕೋಡಿನ ೫೪ ನೇ ಕಲಮಿನಂತೆ ಕೈದ ಮಾಡುವ ವ್ಯವಸ್ಥೆ ಮಾಡುತ್ತೇನೆ.

ಸೂಕ್ಷ್ಮವಾದ ವಿಚಾರಾಂತ್ಯದಲ್ಲಿ, ಈ ಸದಾಶಿವನು ಸದ್ಯದಲ್ಲಾದ ಧಾರವಾಡದ ದಂಗೆಯಲ್ಲಿ ಸಹ ಭಾಗ ತೆಗೆದುಕೊಂಡಿದ್ದನೆಂತ ನನಗೆ ಕಂಡುಬಂದಿರುತ್ತದೆ. ತರುಣರಿಗೆ ದೊಣ್ಣೆಯ ಉಪಯೋಗವನ್ನು ಕಲಿಸುವ ಸಂಸ್ಥೆಯೊಂದನ್ನು ಅವನು ಸ್ಥಾಪಿಸಿದ್ದು, ಶಹರದೊಳಗಿನ ಅನೇಕ ಗೃಹಸ್ಥರು ಕೊಡುವ ಮಾಸಿಕ ವರ್ಗಣಿಯಿಂದ ಅದು ನಡೆದಿರುವದು. ಎರಡನೆಯವನಾದ ಶಂಕರನು ಇನ್ನೂ ಬಹಳ ಚಿಕ್ಕವನಿದ್ದರೂ ಕೂಡ, ಹುಡುಗರಿಗೆ ಕಲ್ಲುಗಳ ಉಪಯೋಗವನ್ನು ಕಲಿಸುವ ಸಂಘ ಒಂದನ್ನು ಸ್ಥಾಪಿಸಿದ್ದು ಅದರ ಸಭಾಸದರ ಉದ್ದೇಶವು ನಾವು ಪ್ರಸಂಗ ಬಿದ್ದಾಗೆಲ್ಲ ಯುರೋಪಿಯನ್ ಗಂಡಸರನ್ನೂ ಹೆಂಗಸರನ್ನೂ ಕಲ್ಲುಗಳಿಂದ ಹೊಡೆಯುವದಾಗಿರುತ್ತದೆ.

ಗುಪ್ತ ರೀತಿಯಿಂದ ತಪಾಸಣೆ ಮಾಡಿ ನೋಡಲಾಗಿ, ಯುರೋಪಿಯನ್ ಸಾಹೇಬರನ್ನು ಹೊಡೆಯಲು ಉಪಯೋಗಿಸಿದಂಥ ರಕ್ತದಿಂದ ತುಂಬಿದ ಬಡಿಗೆಯು ಡಾಕ್ಟರರ ಮನೆಯಲ್ಲಿ ಅಡಗಿಸಿಟ್ಟಿರುತ್ತದೆಂತ ನನ್ನ ತಿಳುವಳಿಕೆಗೆ ಬಂದಿರುತ್ತದೆ. ‘ದೊಣ್ಣೆ ಸಂಸ್ಥೆ’ಯ ಸಭಾಸದರ ಹೆಸರಿನ ಪಟ್ಟಿಯೂ ಅಲ್ಲಿರುವದು ಮತ್ತು ಇನ್ನೂ ಆರೋಪಿಗಳನ್ನು ಕಂಡುಹಿಡಿಯಲು ಅದರಿಂದ ನನಗೆ ಹೆಚ್ಚಿನ ಸಹಾಯವಾಗುವದು. ಆದ್ದರಿಂದ ಡಾಕ್ಟರ ದೇಸಾಯಿಯವರ ಮನೆಯನ್ನು ತಪಾಸಿಸಲು ಕ್ರಿಮಿನಲ್ ಪ್ರೊಸೀಜರ ಕೋಡ ೯೬ ನೇ ಕಲಮಿನ ಪ್ರಕಾರ ಝಡತಿ ವಾರಂಟನ್ನು ಹುಜೂರರು ದಯಪಾಲಿಸಬೇಕಾಗಿ ಬೇಡಿಕೊಳ್ಳುತ್ತೇನೆ.

ಡಾಕ್ಟರ ದೇಸಾಯಿಯವರು ಕಟ್ಟಾ ಸ್ವದೇಶೀ ಭಕ್ತರಿದ್ದಾರೆಂಬುದನ್ನು ಸಹ ತಮ್ಮ ಲಕ್ಷಕ್ಕೆ ತರಲು ನಾನು ಬಯಸುತ್ತೇನೆ. ಅವರ ಮನೆಯಲ್ಲಿ ದೇಶೀ ವಸ್ತುಗಳೇ ಉಪಯೋಗಿಸಲ್ಪಡುತ್ತವೆ. ಸುದರ್ಶನ ಛಾಪಖಾನೆಯ ೫೦೦ ರೂಪಾಯಿಯ ಕಿಮ್ಮತ್ತಿನ ಶೇರುಗಳನ್ನು ಅವರು ತಮ್ಮ ಹೆಂಡತಿಯ ಹೆಸರಿನಲ್ಲಿ ಖರೀದಿ ಮಾಡಿರುವರು. ಈ ಪ್ರಕರಣದಲ್ಲಿ ಅವರ ಇಬ್ಬರೂ ಹುಡುಗರು ಆರೋಪಿಗಳಾಗಿರುವ ಮೂಲಕ ಅವರನ್ನು ಸರಕಾರದ ಬದಿಯ ಸಾಕ್ಷೀಗಾರರನ್ನಾಗಿ ಮಾಡಿದರೆ, ಅವರು ನಿಜ ಸಂಗತಿಯನ್ನು ಹೊರಗೆಡಹಲಿಕ್ಕಿಲ್ಲವೆಂಬ ಅನುಮಾನವಿದೆ. ಆದ್ದರಿಂದ ನಾನು ಅವರ ಹೆಸರನ್ನು ಸಾಕ್ಷಿಗಾರರ ಲಿಸ್ಟಿನೊಳಗಿಂದ ಕಡಿಮೆ ಮಾಡಿರುತ್ತೇನೆ. ಯಾವದೇ ಜಜ್ಜರ ಅಥವಾ ಮ್ಯಾಜಿಸ್ಟ್ರೇಟರ ಅಂಜಿಕೆಯು ತನಗಿಲ್ಲಂತ ಆ ಡಾಕ್ಟರರು ಜನರಿಗೆಲ್ಲ ಹೇಳಹತ್ತಿದ್ದಾರೆಂಬುದನ್ನು ಸಹ ನಾನು ಕೇಳಿರುವೆನು.

ತಮ್ಮ ವಿಧೇಯ ಸೇವಕ,
ಪರಮೇಶ್ವರ ಫೌಜದಾರ

ಅದರಂತೆ ಆ ಇಬ್ಬರು ದುರ್ದೈವಿ ಹುಡುಗರ ದಸ್ತಗಿರಿಯಾಗಿ ಅವರು ಪೋಲೀಸ ಠಾಣೆಗೆ ತರಲ್ಪಟ್ಟರು. ಸ್ವಲ್ಪ ಹೊತ್ತಿನ ಮೇಲೆ ಸ್ವತಃ ಜಾಮೀನಾಗಿ ಅವರನ್ನು ಬಿಡಿಸಲು ಕೆಲವು ವಕೀಲರು ಬಂದರು. ಆದರೆ ಅದಕ್ಕೆ ‘ಸಾಹೇಬರ ಹುಕುಮ ಅನುಕೂಲವಿಲ್ಲ’ ಎಂತ ಫೌಜದಾರರ ಸಂಕ್ಷಿಪ್ತ ಉತ್ತರ ದೊರೆಯಿತು.

(ಮುಂದೆ ಸಾಗುವದು.)

ದಿ ಎಡ್ವಾನ್ಸ ಮೋಟರ
ಟ್ರೇನಿಂಗ ಕ್ಲಾಸ
ಧಾರವಾಡ ಮತ್ತು ಕುಮಟಾ.

ಈ ನಮ್ಮ ಟ್ರೇನಿಂಗ ಕ್ಲಾಸಿನಲ್ಲಿ ಡ್ರಾಯ್ವಿಂಗ ಮಾಡಲಿಕ್ಕೂ, ರಿಪೇರಿ ಮಾಡಲಿಕ್ಕೂ ಕಲಿಸಿ ಮೂರು ತಿಂಗಳಲ್ಲಿ ಲೈಸನ್ಸ ಸಹ ತೆಗಿಸಿ ಕೊಡಿಸಲಾಗುತ್ತದೆ. ಬೇಕಾದವರು ಇದರ ಫಾಯದೆ ಪಡಕೊಳ್ಳಬಹುದು. ವಿಶೇಷ ಮಾಹಿತಿ ಸಮಕ್ಷ ಯಾ ಪತ್ರದ್ವಾರಾ. ಪತ್ತೆ—

ಸರದಾರ ಹೋಟೆಲ,	ಅನಂತರಾವ ಮಂಗೇಶರಾವ
ಮೋರಿ ಕಟ್ಟಾ,	ಕರಿಕುತ್ತಲ, ಮೋಟರ ಏಜಂಟ
ಧಾರವಾಡ	ಆಫೀಸ— ಕುಮಟಾ.

ಅತಿ ಉತ್ತಮವಾದ ನಶ್ಯ!

ಈ ನಶ್ಯವು ನಮ್ಮಲ್ಲಿ ಬಹಳೇ ವರ್ಷಗಳಿಂದ ಪ್ರಖ್ಯಾತಿ ಹೊಂದಿರುತದೆ. ಬೇಕಾದವರು ತರಿಸಿಕೊಳ್ಳಬಹುದು. ಸೆಂಪಲ್ ಬೇಕಾದವರು ೧ ಆಣೆ ಸ್ಟಾಂಪು ಕಳುಹಿಸಬೇಕು.

ನಂಬರ ೧. ಪೌಂಡು ೧ಕ್ಕೆ ೨-೪-೦.
,, ೨ ಪೌಂಡು ೧ಕ್ಕೆ ೨-೦-೦.

ಜಿ. ರಾಮಯ್ಯಾ ಕುರಡಿ,
ಪೋಸ್ಟ— ಕಕ್ಕೆ ಉ. ಕಾನಡಾ

ಗೌಡ ಸಾರಸ್ವತ ಸ್ಕೊಲರಶಿಪ್ ಲೀಗ ಮುಂಬಯಿ.

ವಾರ್ಷಿಕ ಮಹಾಸಭೆ

(ಬಾತ್ಮೀದಾರರಿಂದ.)

ಈ ಸಂಸ್ಥೆಯ ವಾರ್ಷಿಕ ಮಹಾಸಭೆಯು ಅಗಸ್ಟ ತಾ. ೯ ನೇಗೆ ಗಿರಗಾಂವ ಕೊಂಗ್ರೆಸ ಮಂದಿರದಲ್ಲಿ ಮತ್ತು ಆ ದಿನದ ಅವಶೇಷ ಕೆಲಸವನ್ನು ಪೂರ್ಣ ಮಾಡುವದಕ್ಕಾಗಿ ಗೋಖಲೇ ಎಜ್ಯುಕೇಶನ ಸೊಸೈಟಿ ಶಾಲಾಗೃಹದಲ್ಲಿ ತಾ. ೨೩ ನೇಗೆ ನೆರೆದಿತ್ತು. ಅಧ್ಯಕ್ಷರು ದಕ್ಷಿಣ ಕನ್ನಡ ಜಿಲ್ಲೆಯ ಎಮ್. ಪಾಂಡುರಂಗರಾವ ಎಲ್. ಟಿ. ಇವರಾಗಿದ್ದರು. ಹಿಂದಿನ ಯಾವದೇ ಸಭೆಗೆ ಕೂಡದಷ್ಟು, ಅಂದರೆ ೮೦ ಸಭಾಸದರು ಈ ಅಧಿವೇಶನಕ್ಕೆ ನೆರೆದಿದ್ದರು.

ಕೊಟ್ಟಕೊನೆಯಲ್ಲಿ, ಸನ್ಮಾನ್ಯ ಅಧ್ಯಕ್ಷರು ಮಾಡಿದ ಮುಖ್ಯವಿಷಯ ಭಾಷಣದ ಸಾರಾಂಶವೇನೆಂದರೆ:— ನಮ್ಮ ಜ್ಞಾತಿಯಲ್ಲಿ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಗೆ ಸಹಾಯ ಮಾಡಲಿಕ್ಕೆ ಇಂಥ ಸಂಸ್ಥೆಗಳು ಬಹಳೇ ಕಡಿಮೆ ಇರುತ್ತವೆ. ನಾವು ಯಾವಾಗಲೂ ಸಹಕಾರದಿಂದ, ನಿಸ್ವಾರ್ಥಬುದ್ಧಿಯಿಂದ ಈ ಕೆಲಸವನ್ನು ಕೈಕೊಂಡು ಸಂಸ್ಥೆಯ ಅಧಿಕಾರಿ ಮಂಡಳದವರಿಗೆ ಯೋಗ್ಯ ಸಹಾಯ ಮಾಡಿ, ನಮ್ಮ ಜ್ಞಾತಿಯ ವಿದ್ಯಾರ್ಥಿಗಳು ಬೆಳೆಯುವಂತೆಯೂ, ಸಭಾಸದರಲ್ಲಿ ಯಾವದೇ ತರದ ವ್ಯಕ್ತಿಗತ ದ್ವೇಷ ಮತಭೇದಗಳಿದ್ದರೂ, ಅವುಗಳನ್ನು ಬದಿಗೆ ಸಾರಿ, ಗಕ್ಷಪರಿಪಕ್ಷಗಳೆಂದು ಜಗಳಾಡದೆ, ಸಂಸ್ಥೆಯನ್ನು ಅಭಿವೃದ್ಧಿ ಮಾಡುವ ಒಂದೇ ಒಂದು ಉತ್ಕೃಷ್ಟವಾದ ಉದ್ದೇಶವನ್ನು ಮನಗಂಡು ನಿರಂತರ ದುಡಿಯಬೇಕೆಂತಲೂ, ಈ ಉದ್ದೇಶವನ್ನೇ ಮಾತ್ರ ಮನಸ್ಸಿನಲ್ಲಿಟ್ಟುಕೊಂಡು ಇನ್ನಿಂದು ಹೆಚ್ಚು ಸಹಾಯ ಮಾಡುತ್ತೇವೆಂತಲೂ ಆಶ್ವಾಸಿಸಿದರು."

ಮಾನ್ಯ ಕಾರ್ಯದರ್ಶಿಗಳಾದ ಶ್ರೀ॥ ಕೃಷ್ಣ ಪದ್ಮನಾಭ ಪ್ರಭು, ಬಿ. ಎ. ಎಲ್. ಎಲ್. ಬಿ., ಇವರು ಸಂಸ್ಥೆಯ ಯಾವತ್ತೂ ಕೆಲಸವನ್ನು ದಕ್ಷತೆಯಿಂದ ಮತ್ತು ಅಧಿಕಾರಿ ಮಂಡಳದ ತಮ್ಮ ಇತರೇ ಮಿತ್ರರ ಸಹಕಾರ-ಪ್ರೀತಿಗಳಿಂದ ಸಾಂಗಗೊಳಿಸುವಂಥವರಾಗಿದ್ದಾರೆ. ಇದೇ ಸಭಾಕಾರ್ಯದಲ್ಲಿ ಬೇಕಾದ ವಿಷಯಗಳನ್ನು ಸಭಾಸದರಿಗೆ ಶಾಂತ ರೀತಿಯಿಂದ ಸ್ಪಷ್ಟೀಕರಿಸಿ ತಮ್ಮ ಮೇಲಿನ ವಿಶ್ವಾಸವನ್ನು ದೃಢಪಡಿಸಿಕೊಂಡಿದ್ದಕ್ಕಾಗಿ, ಮುಂದಿನ ವರ್ಷಕ್ಕೆ ಇವರನ್ನೇ ಕಾರ್ಯದರ್ಶಿಗಳಾಗಿ ಸಭೆಯು ಆರಿಸಿತು. ಅಧ್ಯಕ್ಷರು ತಮ್ಮ ಭಾಷಣದ ನಂತರ ಕಾರ್ಯದರ್ಶಿಗಳಿಗೆ ಕಾರ್ಯಕ್ರಮ ವಿವರಿಸಲು ಹೇಳಿದರು. ಅನಂತರ ಅವರು ಕಳೆದ ವರ್ಷದ ಅಹವಾಲವನ್ನು ಓದಿ ಹೇಳಿದರು.

ಅದೇನಂದರೆ:—

ಸದ್ಯಕ್ಕೆ ಸಂಸ್ಥೆಯ ಪಟದ ಮೇಲೆ ೩ ವಾಶ್ರಿ, ೨೧ ಆಜೀವ ಸಭಾಸದರು ಮತ್ತು ೩೨೦ ಸಾಧಾರಣ ಸಭಾಸದರಿದ್ದು, ಸಂಸ್ಥೆಯ ರಿಝರ್ವ ಫಂಡು ರೂಪಾಯಿ ೧೩೦೦೦ ಕ್ಕೆ ಮಿಕ್ಕಿ ಇರುವದು. ಅಹವಾಲಿನಲ್ಲಿ ಹೇಳಿದಂತೆ ಸಂಸ್ಥೆಯು ಶುರುವಾದಂದಿನಿಂದ ಈವರೆಗೆ ಈ ಸಂಸ್ಥೆಯು ೧೧೦ ಹುಡುಗರಿಗೆ ಸ್ಕೊಲರಶಿಪ ಕೊಡುವದರಲ್ಲಿ ರೂಪಾಯಿ ೫೧೫೦ ಗಳನ್ನು ಖರ್ಚು ಮಾಡಿರುವದು.

ಮೇಲಿನ ರಿಪೋರ್ಟು ವಾಚನವಾಗಿ ಮುಗಿದ ನಂತರ ಅಂದಾಜು ಪತ್ರಕದ ವಾಚನವಾಗಿ ರೂ॥ ೧೨೦೦ ರ ಬಜೆಟು ಮಂಜೂರಾಯಿತು.

ಆ ಮೇಲೆ ಕಳೆದ ವರ್ಷ ಮಹಾಸಭೆಯು ಸರ್ವಾನುಮತದಿಂದ ಪಾಸುಮಾಡಿದ, ಕೆಳಗೆ ಕಾಣಿಸಿದ ಟ್ರಸ್ಟಿಯವರ ಪಾಶ್ಕೆ ರಿಝರ್ವ ಫಂಡು ಕೊಡುವದಕ್ಕಾಗಿ ಟ್ರಸ್ಟಡೀಡ (ವಿಶ್ವಾಸಪತ್ರ) ಪಾಸಾಯಿತು.

ಟ್ರಸ್ಟಿಗಳು.

(೧) ಶ್ರೀ॥ ರಾಮಚಂದ್ರ ಕೃಷ್ಣ ಪ್ರಭು, (ಮುಂಬೈ ಕೌನ್ಸಿಲರ್) (೨) ಶ್ರೀ॥ ಪಾಂಡುರಂಗ ವಾಸುದೇವ ಭಟ್ಟ, (೩) ಅನಂತರಾವ ಪಾಂಡುರಂಗ ಕಾಮತ, (೪) ಶ್ರೀ॥ ವೆಂಕಟರಾವ ರಾಮಚಂದ್ರರಾವ್ ಬಳವಿಪುರ, ವಕೀಲ, ಕಾರವಾರ, (೫) ಶ್ರೀ॥ ಮಾಧವರಾವ ಮಂಜುನಾಥ ಶ್ಯಾನಭಾಗ, ಎಮ್. ಎ, ಎಲ್. ಎಲ್. ಬಿ., ವಕೀಲ, ಕಾರವಾರ.

ಈ ವರ್ಷದ ಅಧಿಕಾರ ಮಂಡಳದವರ ಚುನಾವಣೆಯಾಗಿ ಈ ಕೆಳಗಿನ ಗೃಹಸ್ಥರು ನೇಮಕ ಮಾಡಲ್ಪಟ್ಟರು.

೧೯೨೪-೨೫ ಸಾಲಿನ ಅಧಿಕಾರೀ ಮಂಡಳ

ಶ್ರೀ॥ ರಾಮಚಂದ್ರ ಕೃಷ್ಣ ಪ್ರಭು, ಅಧ್ಯಕ್ಷ. ಶ್ರೀ॥ ಮನೋಹರರಾವ ಮಂಗೇಶ ಗಾಯತೊಂಡೆ ಮುಂಬಯಿ, ಉಪಾಧ್ಯಕ್ಷ.

ಶ್ರೀ॥ ಕೃಷ್ಣ ಪದ್ಮನಾಭ ಪ್ರಭು ಬಿ ಎ., ಎಲ್‌ಎಲ್ ಬಿ., ಶ್ರೀ॥ ಮಾಧವ ಶಿವಗಿರಿ ಕಾಮತ, ಕಾರ್ಯದರ್ಶಿಗಳು.

ಶ್ರೀ॥ ಶ್ರೀಧರ ಗೋವಿಂದ ಶ್ಯಾನಭಾಗ ಆಡ್ಟಿಟರ ಅನಂತ ಕೃ. ಕೋಶಪಾಲಕರು.

ಶ್ರೀ॥ ಎಮ್. ಪಾಂಡುರಂಗರಾವ, ಎಲ್. ಟಿ., ಶ್ರೀ॥ ಪುತ್ತು ವಾಸು ಶ್ಯಾನಭಾಗ ಶ್ರೀ॥ ಪದ್ಮನಾಭ ಸಾಬ್ರಾಯ ಕಾಮತ, ಬಿ. ಎ. ಶ್ರೀ॥ ಗಣಪತ ಎಸ್. ಶೆಣ್ವಿ, ಶ್ರೀ॥ ದಾಮೋಧರ ವಿಠೋಬ ಶ್ಯಾನಭಾಗ ಸಾಧಾರಣ ಸಭಾಸದರು

ಶ್ರೀ॥ ಗೋವಿಂದರಾವ ಶ್ರೀನಿವಾಸ ಗುಡಾಳ, ಮತ್ತು ಶ್ರೀ॥ ಅನಂತ ವಾಮನ ಶ್ಯಾನಭಾಗ, ಲೆಕ್ಕತಪಾಸಕರು.

೧೯೨೪-೨೫ ನೇ ಸಾಲಿನ ಪ್ರತಿನಿಧಿಯರು.

ಕಾರವಾರ—ಶ್ರೀ॥ ವಾಸುದೇವ ರಾಮಚಂದ್ರ ಪಳವೀಕರ, ಬಿ. ಎ., ಶ್ರೀ॥ ಜನಾರ್ದನ ಪುರುಷೋತ್ತಮ ಶೆಣ್ವಿ.

ಅಂಕೋಲಾ—ಶ್ರೀ॥ ಮಂಜನಾಥ ಮನೋಹರ ಪ್ರಭು ಶ್ರೀ॥ ಶ್ರೀಧರ ವೆಂಕಟೇಶ ಭಟ್ಟ, ಶ್ರೀ॥ ಶ್ರೀನಿವಾಸ ಕೃಷ್ಣ ಪೈ.

ಕುಮಟಾ—ಶ್ರೀ॥ ಜಗನ್ನಾಥ ವಿಷ್ಣು ಗಾಯತ್ತೊಂಡ ಬಿ. ಎ., ಶ್ರೀ॥ ಪುರುಷೋತ್ತಮ ಲಕ್ಷ್ಮಣಯ್ಯ ಶ್ಯಾನಭಾಗ.

ಹೊನ್ನಾವರ—ಶ್ರೀ॥ ವಾಸುದೇವ ಪಾಂಡುರಂಗ ಶ್ಯಾನಭಾಗ ಕಾಮತ, ಶ್ರೀ॥ ವೆಂಕಟರಾವ ಸುಬ್ರಾವ ಮಹಾಲೆ.

ಈ ಪ್ರಕಾರ ಚುನಾವಣೆಯಾಯಿತು. ಅಧ್ಯಕ್ಷರಾದ ಎಮ್. ಪಾಂಡುರಂಗರಾಯರು, ಬೇಗನೆ ಎಲ್ಲಾ ಸಭಾಸದರು ತಮ್ಮ ತಮ್ಮ ಮತವನ್ನು ಸ್ವತಂತ್ರ ಪ್ರತಿಪಾದಿಸುತ್ತಿದ್ದಾಗ, ಮತಭೇದದಿಂದ ಸಭಾಸದರಲ್ಲಿ ಬಹಳ ಕಾವು ಬರದಂತೆ ಜಾಗ್ರತೆಯಾಗಿ ತಮ್ಮ ನಿಷ್ಪಕ್ಷಪಾತವಾದ ಮತವನ್ನು ಯೋಗ್ಯ ಕಾಲಕ್ಕೆ ಕೊಡಿಸುವದರಲ್ಲಿ, ಸಭಾಕಾರ್ಯವನ್ನು ನಡೆಸುವ ತಮ್ಮ ಶೈಲಿಯನ್ನು ಸಭಿಕರ ಮೇಲೆ ಚನ್ನಾಗಿ ನೆಲೆಗೊಳಿಸಿದರು. ಯಾವದೇ ತರದ ವ್ಯಕ್ತಿಯ ಮೇಲೆ ವಾಗ್ವಾದ ಬಂದರೂ ಸಭಾಧಿಕಾರದಂತೆ ತರ ತೂಕದಿ ಐಕ್ಯಮತ್ಯವನ್ನುಂಟುಮಾಡುವದರಲ್ಲಿ ಬಹಳೇ ಸುಜನ ಕೈಕೊಂಡ ಬಗ್ಗೆ ಸಭಿಕರು ಮನ್ನಣೆಯನ್ನು ಅರ್ಪಿಸಿದರು. ಇಷ್ಟಾದ ಬಳಿಕ ಸಭೆಯು ವಿಸರ್ಜನ ಹೊಂದಿತು.

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತದೆ. ಚಲೋ ಆಹಾರ ದೊರಕದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟು ಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೩—೦—೦

ಏಜಂಟರು:— ವಿಕ್ಟೋರಿಯಾ ಏಜನ್ಸಿ,

ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨

धातु क्षीणता व कमजोरपणा यांसाठी

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात. पचन शक्ति सुधरून परसाकडे साफ होतें. त्याचप्रमाणें प्रत्येक प्रकारची अशक्तता दूर होऊन शरीर तेजदार व बळवान होतें. किं. ४० गोळ्यांच्या डबीस रु. १.

रमण विलासिनी गोळ्या. रात्रौ फक्त १ गोळी दुधाबरोबर खाल्यानें इच्छेप्रमाणें वीर्यस्तंभन होतें. किं. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पावून खरें पुरुषत्व प्राप्त होतें. किं. डबीस रु. १.

कुमटा एजंट :— माधव सांतप्पा शेणवी बलेकेरी.

राजवैद्य नारायणजी केशवजी ब्रँच:— ३९३ काळबादेवी रोड मुंबई नं. २.

ಜಾಹೀರಾತು.

ತಾರೀಖು ೭-೯-೧೯೩೫ನೇ ಪತ್ರದಲ್ಲಿ ಪ್ರಸಿದ್ಧಿಪಡಿಸಿರುವ ನಾಮಾಂಕಿತ ಸುಪ್ರಸಿದ್ಧ ಪರಂಪರಾ ಜ್ಯೋತಿಷಿ ಕೇ. ಸಿ. ನಾರಾಯಣಶಾಸ್ತ್ರಿ ಎಂಬವರು ಸ್ವಲ್ಪ ದಿವಸದಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ ಸಾಗರದಲ್ಲಿ ಕೆಲವು ದಿವಸದ ಪೂರ್ತಿ ತಮ್ಮ ಮುಕ್ಕಾಂ ಮಾಡಿರುತ್ತಾರೆ. ಅವಶ್ಯವಿದ್ದ ಆಸಕ್ತರೂ ಜನರು ಸದ್ರಿಯವರಿಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಪತ್ತೆ:—

ಕೇರಳ ಜ್ಯೋತಿಷಿ

ಕೇ. ಸಿ. ನಾರಾಯಣ ಶಾಸ್ತ್ರಿ.

ಚಾಮರಾಜೇಂದ್ರ ಪೇಟೆ, ಪೋ. ಸಾಗರ,

ಡಿಸ್ಟ್ರಿಕ್ಟ- ಶಿವಮೊಗ್ಗಾ

ವಿಶೇಷ] **ಅನುಭವಸಿದ್ಧ** [ಪಥ್ಯವಿಲ್ಲ.

ವನೌಷಧಿಮೂಲಿಕೆಗಳು

ವಾಯುದುಮ್ಮಾನ (ನಿಮೋನಿಯಾ) ವಾಂತಿ ಭ್ರಾಂತಿ (ಕೋಲೆರಾ) ಅರ್ಧಾಂಗವಾಯು (ಪೆರಾಲಿಸಿಸ್) ಹುಚ್ಚುನಾಯಿ ಕಡಿತ, ಸರ್ಪಸುತ್ತು, ಹೊಟ್ಟೆಯಲ್ಲಿ ಕೃತ್ರಿಮ ವಿಷಹಾಕಿದ್ದು (ಕೈಮದ್ದು) ವಗೈರೆ ರೋಗಗಳಿಗೆ ಒಂದೇ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು ಇಷ್ಟು ಬಹುಕಾಲದಿಂದ ಅನುಭವ ತಕ್ಕೊಂಡು ಹಾಗು ಪ್ರತಿನಿತ್ಯ ಈಕಡೆಗೆ ಒಳಕೆಯಲ್ಲಿದ್ದು ಖರ್ಚಾಗುವ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕೋಲೆರಾ ಔಷಧಿಗಳ ದ್ರಾವಕ (Tincture) ಸಹ ಆಗಾವ್ರ ಸೂಚಿಸಿದರೆ ಕಳುಹುವೆವು

ವಾಯುದುಮ್ಮಾನದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ಕ್ಕೆ ೦-೨-೦.

ಕೋಲೆರಾದ ಬಗ್ಗೆ	" " "	೦-೨-೦
ಅರ್ಧಾಂಗ ವಾಯುವಿನಬಗ್ಗೆ	......	೦-೪-೦.
ನಾಯಿ ಕಡಿತದಬಗ್ಗೆ	....	೦-೪-೦
ಸರ್ಪಸುತ್ತಿನ ಬಗ್ಗೆ	....	೦-೨-೦

ಹೊಟ್ಟೆಯಲ್ಲಿ ಕೃತ್ರಿಮ ಔಷಧಿ ಬಿದಬಗ್ಗೆ!

ತೊಲೆ ೧೦ ಕ್ಕೆ ೦-೮-೦.

ರಕ್ತಶುದ್ಧಿ ವ ಮಲಶೋಧನೆ ಬಗ್ಗೆ

ಮೂಲಿಕೆ ರಾಶ್ಲು ಕ್ಕೆ ೧-೦-೦.

ಮೋರಾವಳಾ (ನಿದ್ರೆಕಾಯಿ ಗುಳುಂಬ)

ಶೀಶ್ಶೆ ೧ ಕ್ಕೆ ೧-೦-೦

ರೋತುಗಳ್ಳಿ ಯಾ ಅದಕ್ಕೂ ಹೆಚ್ಚು ತರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು ಟಪಾಲ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಪತ್ರದ್ವಾರಾ. ಅನುಪಾನಪತ್ರ ಔಷಧಿ ಸಂಗಡ.

ಎನ್. ಜಿ. ಹೆಗಡೆ, ಮಾಸ್ಕೇರಿ,

ಪೋಸ್ಟ— ಬಂಕಿಕೋಡ್ಲ. ಜಿ. ಉತ್ತರ ಕಾನಡಾ

ಸುಲಭ ಕ್ರಯ! **ಸುಲಭ ಕ್ರಯ!!**

ಡಾಕ್ಟರ ಜೀ. ಬಿ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ, ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು, ಇದನ್ನು ಅನೇಕ ಜನರು ತಮ್ಮ ಗಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ ಪಿ ೪ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ. ೫೧೦, ಪಾರ್ಕಟೌನ, ಮದರಾಸ

ಕಿರ್ಲೋಸ್ಕರ ಪಂಪ.

ಬಾವಿಯೊಳಗಿನ ನೀರನ್ನು ಮೇಲಕ್ಕೆ ತರುವದರಲ್ಲಿ

ಕಿರ್ಲೋಸ್ಕರ ನೀರಿನ ಪಂಪು ಮೇಲಾದ್ದಿರುತ್ತದೆ. ಸಣ್ಣ ಮಕ್ಕಳು, ಅಬಲೆಯರು ಈ ಪಂಪಿನಿಂದ ನೀರನ್ನು ಒಂದೇ ನಿಮಿಷದಲ್ಲಿ ಮೇಲಕ್ಕೆ ತರುವರು. ಪ್ರಪಂಚದಲ್ಲಿ ಮಿಕ್ಕ ಅಡಚಣೆಗಳಲ್ಲಿ ನೀರಿನ ತೊಂದರೆಯು ಸ್ವಾಭಾವಿಕವು. ಈ ಅಡಚಣೆಯು ಮೇಲಿನ ಉಪಾಯದಿಂದ ದೂರಾಗುವದು.

ಪರದೇಶದಿಂದ ಬರುವ ಪಂಪುಗಳು ಬಹುತುಟ್ಟಿ ಇರುವದರಿಂದ ಮಧ್ಯಮ ಜನರಿಗೆ ಇವುಗಳನ್ನು ಕೊಳ್ಳುವದಾಗುವದಿಲ್ಲ ಇದನ್ನು ತಿಳಿದು ನಾವು ಈ ಪಂಪನ್ನು ಬಹು ಅಗ್ಗದಿಂದ ಕೊಡುತಿರುವೆವು. ಇದಲ್ಲದೆ, ಈ ಪಂಪಿನ ಬಿಡಿ ಭಾಗಗಳು ನಮ್ಮ ಕಾರಖಾನೆಯಲ್ಲಿಯೇ ತಯಾರಾಗುತಿರುವದರಿಂದ ಬೇಡಿದಾಗ ದೊರೆಯುತವೆ.

ಈ ಸೌಕರ್ಯವು ವಿದೇಶೀ ಪಂಪುಗಳನ್ನು ಕೊಂಡಲ್ಲಿ ದೊರೆಯದು.

ಕೇ. ಬಿ ಜೋಶಿ ಮುಂಬೈ ಇವರು ನಮ್ಮ ಸೋಲ ಏಜಂಟರು.

ಸವಿಸ್ತರ ಸಂಗತಿಯು ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ; ಜಿಲ್ಹಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಅಕ್ಕಾರಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು, ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಟೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ ಖರ್ಚು ಬೇರೆ

ಅಮೃತಾಂಜನ ಡಿ, ಪೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

Reg No B. 1270 Monday, September 14th, 1925.

ವರ್ಷ ೯.

ಕಾನಡಾವೃತ್ತ.

ಸಂಚಿಕೆ ೪೮.

THE KANARA NEWS.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನೆಯಾರ್ತರಿಯಿಂದ ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ್ ಪೈಕಾ (೧೨ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1-0- ೮ ನಂತ್ರ ಪ್ರತಿಸಾಲಿಗೆ 0-2-0.
ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ೮ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

—(ಕುಮಟಾ—ಕಾನಡಾವೃತ್ತ, ಸೋಮವಾರ, ತಾರೀಖು ೧೪ ಮಾಹೆ ಸಪ್ಟಂಬರ ಸನ್ ೧೯೨೫ ನೇ ಇಸವಿ)—

हिंदुस्थानांतील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव- वीर रसायनी किंमत २ रुपये;

रामबाण औषधें

सर्दी घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

विश्वास ठेवकर.

क्याटलाग मागवा,

बंगाल फार्मास्युटिकल वर्क्स लिमिटेड, मुंबई नं. १२

ಲೋಕಪ್ರಸಿದ್ಧ ಮಾದದ್ದು! ಅನುಭವಸಿದ್ಧ ಮದದ್ದು!!
ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಸು

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಟ್ರೇಡ ಮಾರ್ಕ] ರಿಜಿಸ್ಟರ ಆದದ್ದು [ನೋಂದಿ ಕೊಸ್ಟರು.

ಅಗಸ್ತ್ಯ ಮನ್ಮಥ ಚಿಂತಾಮಣಿ ಲೇಹ.

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು. ಮೋಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ

1 ಸೇರು ನಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು.

1 ಸೇರು ಡಬ್ಬಿ ಒಂದಕ್ಕೆ 3—0—0
½ ಸೇರು ಡಬ್ಬಿ ಒಂದಕ್ಕೆ 1—9—0
ವ್ಹಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಬರೆಕೊಳ್ಳಿರಿ.

ಪತ್ತೆ:—**ದೇವಣ್ಣ ನಾರಾಯಣ ಸೇಟ್,**
ಸರಾಫ್, ಗೋಳಿಕಟ್ಟಾ, ಮಂಗಳೂರು, (ದ. ಕ.)

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, B. A.
Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.
ರತ್ನಾಭರಣ ವ್ಯಾಪಾರಿ, ಕುಮಟಾ.

Notification.

It has come to our notice that there have been rumours afloat for some time past that Mr. MangeshRao Soiroba Mirjankar, our Agent in the Kanara District, was to be relieved of our Agency, and we take this opportunity of informing the Public that there is no truth in this rumour and that Mr. Mirjankar will continue to represent us in the future as in the past. He has for sale at his godowns throughout Kanara our well-known "Anchor" brand, "Rising Sun" brand and "Swan" brand Kerosene Oil at the rates fixed by the Company; also "Shell" brand Petrol

E. MILLER,
BOMBAY MANAGER,
For THE ASIATIC PETROLEUM CO: (INDIA), LTD.

ಜಾಹೀರನಾಮೆ.

ನಮ್ಮ ಕಾನಡಾ ಜಿಲ್ಹೆಯ ಏಜಂಟರಾದ ರಾ|| ರಾ|| ಮಂಗೇಶರಾವ ಸೈರೋಬಾ ಮಿರ್ಜಾನಕರ ಇವರ ಏಜನ್ಸಿಯನ್ನು ತಪ್ಪಿಸುವದುಂಟು ಎಂತ ಕೆಲವು ಕಾಲದಿಂದ ಬಾತಮಿ ಬಿದ್ದಿತ್ತು, ಎಂತ ನಮ್ಮ ತಿಳಿವಳಿಕೆಗೆ ಬಂದಿರುತ್ತದೆ. ಆದ್ರೆ ಈ ಜಾಹೀರನಾಮೆಯಿಂದ ಎಲ್ಲಾ ಜನರಿಗೆ ಜಾಹೀರ ಪಡಿಸುವದೇನಂದರೆ, ಈ ಬಾತಮಿಯಲ್ಲಿ ಏನೇನು ಖರೆತನವಿಲ್ಲ. ಹೊರತಾಗಿ ರಾ|| ರಾ|| ಮಿರ್ಜಾನಕರ ಇವರು ಹಿಂದಿನಂತೆಯೇ ಇನ್ನು ಮುಂದೆ ಸಹ ನಮ್ಮ ಏಜಂಟರಾಗಿರುತ್ತಾರೆ ಇವರ ಕಾನಡಾ ಜಿಲ್ಹೆಯಲ್ಲಿರುವ ನಮ್ಮ ಎಲ್ಲಾ ವಖಾರೆಗಳಲ್ಲಿ ನಮ್ಮ ನಾಮಾಂಕಿತವಾದ "ನಾಂಗರ" ಛಾಪ "ಸೂರ್ಯ" ಛಾಪ ಮತ್ತು "ಹಂಸ" ಛಾಪ ಕೆರೋಸಿನ ಎಣ್ಣೆ ಹಾಗೂ "ಶೆಲ್" ಪೆಟ್ರೋಲು, ಕಂಪನಿಯು ಠರಾವಿಸಿದ ದರದಿಂದಲೇ ರಾ|| ರಾ|| ಮಿರ್ಜಾನಕರರ ಹತ್ತರ ವಿಕ್ರಿಯಲ್ಲಿರುವವು.

ಈ. ಮಿಲ್ಲರ್,
ಮುಂಬಯಿ ಮೆನೇಜರ,
FOR THE ASIATIC PETROLEUM COY. (INDIA) LTD.

ನಮ್ಮ ಪ್ರೆಸ್ಸಿನಲ್ಲಿ

ಗೇಣಿ ಬಾಕಿ ದಾವೆಯ ಫಾರ್ಮುಗಳು ತಯಾರಿವೆ.

ವಕಾಲತ, ಅಮಲದಾರಿ ಮೊದಲಾದ ಕೋರ್ಟ ವ್ಯವಹರಣೆಯ ಹಾಗೂ ಕಸ್ಟಮ್ ಖಾತೆಯ ಫಾರ್ಮುಗಳು ಅಗ್ಗವಾಗಿ ಸಿಗುತ್ತವೆ.

ಮೆನೇಜರ,

ಸ್ಟಾರ ಒಫ್ ಕೆನರಾ ಪ್ರೆಸ್, ಕಾರವಾರ

ಎಲ್ಲಾ ರೋಗಗಳಿಗೆ ದಿವ್ಯೌಷಧ !

ವಾತಹಾರಿ ತೈಲ.

ಕ್ರಯ ೫ ತೊಲಿ ಬಾಟ್ಲಿ ೧ ಕ್ಕೆ ೦—೧೨—೦. ಉಂಚಿ ಸುವಾಸಿಕ ಕಾಬೂಲೀ ಹಿಂಗು ೧೦ ತೊಲಿ ಡಬ್ಬಿ ೧ ಕ್ಕೆ ೧—೮—೦. ಹಿಂಗಿನ ಅರ್ಕ .॥. ತೊಲೆಯ ಬಾಟ್ಲಿ ೧ ಕ್ಕೆ ೦—೮—೦ ರಕ್ತ ಶುದ್ಧಿಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲ್ವಾ ೨೦ ತೊಲೆಯ ಡಬ್ಬಿ ೧ ಕ್ಕೆ ೧—೪—೦ ೧ ತೊಲೆಯ ಹಿಂಗಿನ ಡಬ್ಬಿಗಳು ಡಜನ್ ೧ ಕ್ಕೆ ೨—೦—೦ ತಲೆಗೆ ಹಾಕುವ ಸುವಾಸಿಕ ಮಸ್ತಕರಾಜ ತೈಲ ೫ ತೊಲಿಯ ಬಾಟ್ಲಿ ೧ ಕ್ಕೆ ೨—೦—೦ ಹುಳದ ಪೌಡ ತೊಲೆ ೧ ಕ್ಕೆ ೦—೮—. ಇವಲ್ಲದೆ ನೀಲಗಿರಿ ತೈಲ ಎಲ್ಲಾ ತರದ ಉಂಚಿ ಊದಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು ಟಪಾಲ ಖರ್ಚ ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ.

ಜವಳಿಬಾಜಾರ, ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧, ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೦೦.
" " ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೨೦, ೧೪೦.
೩. ತಬಲೆ ಜೋಡಿ ಕಿಂ. ೧೬, ೧೮, ೨೦, ೨೫.
೪. ಹಾರ್ಮೋನಿಯಮ ಗ್ಯಾತ (ಮರಾಠಿ) ಕಿಂ. ೧॥, ತಬಲೆ ಗ್ಯಾಡ ಕಿಂ. ೧೨ ಅ.

ವಿಶೇಷ ಮಾಹಿತಿಗಾಗಿ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:— **ಗೋಪಾಳ ಸಖಾರಾಮ ಮತ್ತ. ಕಂಪನಿ, ವಿಠ್ಠಲವಾಡಿ ಎದುರಿಗೆ, ೩೬೨ ಕಾಳಬಾದೇವಿ, ಮುಂಬಯಿ.**

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ



ಕಳೆದ ೪-೫ ವರ್ಷಗಳಿಂದ ನಾವು ಶಿವಮೊಗ್ಗಾ—ತೀರ್ಥಹಳ್ಳಿ—ಆಗುಂಬೆ, ಶಿವಮೊಗ್ಗಾ—ಸಾಗರ—ತಾಳಗುಪ್ಪೆ, ಶಿವಮೊಗ್ಗಾ—ಹರಿಹರ—ದಾವಣಗೆರೆ, ಶಿವಮೊಗ್ಗಾ—ಕಳೂರಕಟ್ಟೆ, ಸಾಗರ—ಸೊರಬ—ಶಿರಾಳಕೊಪ್ಪಾ, ಸಾಗರ—ತೀರ್ಥಹಳ್ಳಿ, ಸಾಗರ—ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸುತ್ತಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ ಹಾಗು ಜೋಗ ಇವು ಈ ಕಡೆಗೆ "ಕಾರ್ಕಳ ಮೋಟರ ಸರ್ವಿಸಿನ" ವಿದ್ಯಮಾನವೂ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಗೆ "ಲಕ್ಷ್ಮೀ ಮೋಟರ ಸರ್ವಿಸಿನ" ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುತ್ತೇವೆ.

ಉತ್ತರ ಕನ್ನಡ ಜಿಲ್ಲೆಯ ಪ್ರಯಾಣಿಕರು ಜೋಗ (Geroppa Falls), ಶಿವಮೊಗ್ಗಾ ಸಾಗರ, ಹರಿಹರ ಮತ್ತು ಮೈಸೂರಿನ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಶಿರಸಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾರಂಭ ಮಾಡಿರುತ್ತೇವೆ.

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	ಬೆಳಿಗ್ಗಿನ ೭ ಘಂಟೆಗೆ.
ಶಿರಸಿಗೆ [illegible]	" ೧೧ "
ಶಿರಸಿಯಿಂದ ಬಿಟ್ಟು ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧ "
ಸಾಗರಕ್ಕೆ ಸೇರುವದು (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ "
ಸಾಗರದಿಂದ ಶಿರಸಿ ಕಡೆಗೆ ಹೊರಡುವದು—	ಬೆಳಿಗ್ಗಿನ ೬ "
ಸಿದ್ದಾಪುರದ ಮೇಲಾಗಿ ಶಿರಸಿಗೆ ಸೇರುವದು—	" ೧೧ "
ಶಿರಸಿಯಿಂದ ಕುಮಟೆಗೆ ಹೊರಡುವದು—	ಮಧ್ಯಾಹ್ನ ೨ "
ಕುಮಟೆಗೆ ಸೇರುವದು—	ಸಾಯಂಕಾಲ ೫ "

N. B.— ಈ ಮೇಲಿನ ಲೈನುಗಳಲ್ಲದೆ ಶಿರಸಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ ಪ್ರಾರಂಭಿಸುವ ಯೋಜನೆ ನಡೆದಿರುತ್ತದೆ. ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

SHIMOGA, 22—11—1924. } **M. MANJAPPA,** PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ರುಚಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦ ೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವದು. (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯಸ್ರಾವ ಬಂದಾಗುವದು — ಬದನಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವದು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚ ಹೆಚ್ಚು ಬೀಳುವದಿಲ್ಲ. ಆರನ ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚ ಬೇರೆ ಬೀಳುವದು. ಏಜಂಟರ ಕಡಿಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦ ಡಜನಿಗೆ ೧೩—।—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು, ಪೋ. ನಿಪ್ಪಾಣಿ, ಜಿ. ಬೆಳಗಾಂವ.

ಪ್ರಾಥಮಿಕ ಶಿಕ್ಷಕರ ನಿರಾಶೆಯೂ, ಅವರ ಮುಂದಿನ ಕರ್ತವ್ಯವೂ.

(ಶ್ರೀ-ನಾರಾಯಣಶಾಸ್ತ್ರಿ)

ಪ್ರಾಥಮಿಕ ಶಿಕ್ಷಕರ ಸಂಬಳದ ಸಂಬಂಧದಲ್ಲಿ ಮಾತು ತೆಗೆದರೆ ಸರಕಾರಕ್ಕೆ ಇಷ್ಟವಿಲ್ಲದ ಮಾತೆಂಬುದು ಇದುವರೆಗೆ ಸರಕಾರದಿಂದ ನೇಮಿಸಲ್ಪಟ್ಟ ಶಿಕ್ಷಕರ ಪಗಾರ ವಿಚಾರಣೆಯ ಕಮಿಟಿಗಳ ಅನುಭವದಿಂದ ಎಲ್ಲ ಶಿಕ್ಷಕರಿಗೆ ಬಹಳ ತಿಳಿದ ವಿಷಯವೇ. "ಅಂತೂ ಇಂತೂ ಕುಂತೀ ಮಕ್ಕಳ ವನವಾಸ ತಪ್ಪಲಿಲ್ಲ" ವೆಂಬಂತೆ ಶಿಕ್ಷಕರು ಎಷ್ಟೇ ಪ್ರಯತ್ನಪಟ್ಟರೂ, ಎಷ್ಟು ಮನವಿ ಹಿಡಿದರೂ, ಕೌನ್ಸಿಲ ಹಾಲದವರೆಗೆ ಹೋಗಿ ತಲೆ ಬಡಕೊಂಡು ಚೀರ್ಯಾಟ ಮಾಡಿದರೂ, ಕಟ್ಟಕಡೆಗೆ ಅವರ ಸೆರಗಿನಲ್ಲಿ ಬೀಳುವ ಫಲ ಮಂತ್ರಾಕ್ಷತೆಯೊಂದರ, ನಿರಾಶೆಯೇ. ಇದು ಕೇವಲ ಪ್ರಾಥಮಿಕ ಶಿಕ್ಷಕರ ದುರ್ದೈವವೆಂದೇ ಹೇಳಬೇಕಾಗಿದೆ. ಅವರೆ "ಮತ್ತ ಕೃತೇ ಯದಿ ನ ಸಿದ್ಧ್ಯತಿ ಕೋಽತ್ರ ದೋಷಃ" ಎಂಬಂತೆ ಶಿಕ್ಷಕರು ಹತಾಶರಾಗದೆ ತಮ್ಮ ಮುಂದಿನ ಕರ್ತವ್ಯವನ್ನು ಯೋಚಿಸುವದು ಯೋಗ್ಯವಲ್ಲವೇ?

ಮುಮ್ಮೂರ ಸುವರ್ಣಯವರ ಸೂಚನೆಯಂತೆ ಶಿಕ್ಷಕರಿಗೆ ವ್ಯವಹಾರ್ಯವಾದ ಪಗಾರ ಸ್ಕೇಲಿನ ಬಗ್ಗೆ ಶಿಫಾರಸು ಮಾಡಲು ನೇಮಕವಾದ ಸುವರ್ಣ ಕಮಿಟಿಯು ಶಿಫಾರಸು ಎಷ್ಟು ವ್ಯವಹಾರ್ಯವಿರುವದೆಂಬುದು ಆ ಕಮಿಟಿಯ ರಿಪೋರ್ಟ ಓದಿದವರಿಗೆ ಗೊತ್ತಾಗದಿರದು. ಯಾವ ಸ್ಕೇಲು ಶಿಕ್ಷಕರ ಅಸಂತುಷ್ಟತೆಗೆ ಕಾರಣವಾಗಿದ್ದಿತೋ, ಅದೇ ಸ್ಕೇಲಿನ ಜೊತೆಗೆ ಹೆಡ್‌ಮಾಸ್ತರ ಅಲಾವನ್ಸ ಎಂಬುದೊಂದು ಶಿಕ್ಷಕರಿಗೆ ನಿಷ್ಕಾರಣ ಮತ್ತು ಕುಚಮತ್ಕಾರವಾದ ಪದ್ಧತಿಯ ಯೋಜನೆ ಮಾಡಿ, ಸುವರ್ಣ ಕಮಿಟಿಯು ಸಮಾಪ್ತವಾಗಿದೆ. ಮುಂದಿನ ಕೌನ್ಸಿಲಿನಲ್ಲಿ ಮಂಜೂರಾಗಿರುವ ಈ ಯೋಜನೆಯು ಆಚರಣೆಯಲ್ಲಿ ಬಂತೆಂದರೆ, ಪ್ರಾಥಮಿಕ ಶಿಕ್ಷಕರಿಗೆ ಅದು ಸಮ್ಮತವಾಗಬಹುದೇ?

ಸುವರ್ಣ ಕಮಿಟಿಯು ಬಹುಮತದಿಂದ ಶಿಫಾರಸು ಪಟ್ಟ ಈ ಹೆಡ್‌ಮಾಸ್ತರ ಅಲಾವನ್ಸ ಕೊಡುವದೆಂದರೆ, ಶಾಲಾ ಸಮಾರಾಧನೆಯಲ್ಲಿ ಬೇಕಾದವರ ಬಾಳಿಗೆ ಬಡಿಸಿದ, ಬಾಡು ತಿಂದು ಹೊಟ್ಟೆ ತುಂಬಿದವರ ಬಗ್ಗೆಯಲ್ಲಿ ಮತ್ತಿಷ್ಟು ಊಟ ಕೊಡುವಷ್ಟೇ ವ್ಯವಹಾರ್ಯವಿರುವದೆಂಬುದು ಎಂಥ ಮನುಷ್ಯನಿಗೂ ತಿಳಿಯದಿರದು. ಅಸಿಸ್ಟಂಟ ಮಾಸ್ತರ ಮತ್ತು ಹೆಡ್‌ಮಾಸ್ತರರಲ್ಲಿ ಸಮಾನ ದರ್ಜೆಯಿರುತ್ತಿದ್ದು, ಪಗಾರದ ಹೆಚ್ಚು ಕಡಿಮೆ ಮಾನದಿಂದ ಹೆಚ್ಚು ಪಗಾರದವನು ಹೆಡ್‌ಮಾಸ್ತರನೂ, ಕಡಿಮೆ ಪಗಾರದವನು ಅಸಿಸ್ಟಂಟ ಮಾಸ್ತರನೂ ಆಗಬೇಕಾಗುವದು. ಇಷ್ಟರಿಂದಲೇ ಹೆಡ್‌ಮಾಸ್ತರರಿಗೆ ಅಲಾವನ್ಸು ಕೊಡುವದು ನಿಷ್ಕಾರಣವೆಂದು ಸಹಜವಾಗಿ ತಿಳಿಯುವಂತಿದ್ದರೂ, ಅದನ್ನು ಆಚರಣೆಯಲ್ಲಿ ತರುವ ಬಗ್ಗೆ ಶಿಫಾರಸು ಮಾಡುವದರ ಉದ್ದೇಶವೇನಿರುವದೋ ತಿಳಿಯದು. ಆದರೆ ಈ ಅಲಾವನ್ಸು ಪದ್ಧತಿಯಿಂದ ಹೆಡ್‌ಮಾಸ್ತರ ಅಸಿಸ್ಟಂಟರಲ್ಲಿಯ ಸಹಕಾರಕ್ಕೂ ಶಿಕ್ಷಣದ ಕಾರ್ಯಕ್ಕೂ, ಹಾಗೆಯೇ ಅವರ ಉನ್ನತಿಗೂ ಒದಗುವ ತೊಂದರೆಗಳನ್ನು ಕಮಿಟಿಯು ಬಹುಮತಕ್ಕೆ ಲಕ್ಷಿಸಿದವೇ? "ಶಿಕ್ಷಕರಿಗೆ ಸುವರ್ಣ ಕಮಿಟಿಯ ಸ್ಕೇಲಿನಂತೆ ಪಗಾರ ಕೊಡಲು ಇಪ್ಪತ್ತು ಲಕ್ಷ ರೂಪಾಯಿ ಹೆಚ್ಚಿಗೆ ವೆಚ್ಚ ಮಾಡುವದೆಂದರೆ ಅದರಿಂದಾಗುವ ಶಿಕ್ಷಣದ ಉನ್ನತಿಗೆ ಕಲ್ಪಿಸಿದಂತೆಯೇ ಸರಿ." ಹೀಗೆಂದು ಶಿಕ್ಷಣದ ಉನ್ನತಿಯ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಗೊಳಿಸುವ ಮಹಾಮಹರು ಶಿಕ್ಷಕರ ಅಸಂತುಷ್ಟತೆಯಿಂದ ಶಿಕ್ಷಣದ ಉನ್ನತಿಗೆ ಬಾಧಕವಿಲ್ಲೆಂದು ತಿಳಿದರೋ? ಅಥವಾ ಶಾಲಾ ಮಾಸ್ತರರಿಗೆಲ್ಲ ಹೆಚ್ಚು ಪಗಾರ ಯಾಕೆಂದು ಭಾವಿಸಿದರೋ?

ಬೋರ್ಡಿನವರು ಸುವರ್ಣ ಕಮಿಟಿಯ ಸ್ಕೇಲಿನಂತೆ ಪಗಾರ ಕೊಡಲು ಸಿದ್ಧರಿಲ್ಲವೆಂದೂ ಕೂಡ್ಲಿಗೆ ಈ ಹೆಚ್ಚಿನ ಖರ್ಚಿನ ಭಾರವು ಸರಕಾರದ ಮೇಲೆಯೇ ಬೀಳಬೇಕೆಂದೂ ಅದನ್ನು ಸರಕಾರವು ವಹಿಸಬೇಕೆಂದೂ ಕಮಿಟಿಯ ಬಹುಮತದವರಿಂದ ಸೂಚಿಸಲ್ಪಟ್ಟಿದೆ. ಇದರಿಂದ ತಿಳಿಯುವದೇನೆಂದರೆ ಸರಕಾರವು ಕೊಡುವದಿಲ್ಲ, ಬೋರ್ಡು ಸಿದ್ಧವಿಲ್ಲ. ಅಂದಬಳಿಕ ಪ್ರಾಥಮಿಕ ಶಿಕ್ಷಕರೇನು ಮಾಡಬೇಕು? ಅವರಿಗೆ ಮುಂದೇನು? ಈ ಪ್ರಶ್ನೆಗಳು ಸಹಜವಾಗಿ ಬಂದೇ ಬರುವವು. ಅವುಗಳಿಗೆ ಉತ್ತರವೇನೆಂದರೆ, ಶ್ರೀ ಭಗವಂತನು ಭಾರತ ವೀರನಾದ ಅರ್ಜುನನಿಗೆ ಉಪದೇಶ ಮಾಡಿದ "ಉದ್ಧರೇದಾತ್ಮನಾತ್ಮಾನಂ" ಈ ಮಹಾವಾಕ್ಯವನ್ನು ಸ್ಮರಿಸಿ, ಪ್ರತಿಯೊಬ್ಬ ಶಿಕ್ಷಕನೂ ಅದರಂತೆ ನಡೆಯಲೆತ್ನಿಸತಕ್ಕದ್ದು. ಇದರ ಹೊರತು ಅನ್ಯ ಉಪಾಯವು ಪ್ರಾಥಮಿಕ ಶಿಕ್ಷಕರಿಗೆ ಬೇರೆ ಕಂಡೋದಾಯವಿಲ್ಲ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ಸಿಂಗರವಾದ ಕೇಶದ ಮೇವನ್ನು ಯಾವ ಸ್ತ್ರೀಯು ತಾನೇ ಮೆಚ್ಚಿಕೊಳ್ಳಳು? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೋ.

ಕಾಮಿನಿಯಾ ಆಯಿಲ್ (ರಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತಲೇ ಮುಸುಕಿದ ಬೇನೆಯು ತಣ್ಣಗಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚಿಯ ತೊಳಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುತ್ತವೆ. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಸಲ ಒಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರು ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚು 0-14-0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! (ರಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಆಗಿದ್ದು ಆರಿಸಿ ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದ್ದು. ಇದರಲ್ಲಿ ಮದ್ಯದ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಿಂದ ಸೆಳಕೊಳ್ಳುವದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ

Address:- **The Anglo Indian Drug & Chemical Co.**

16, Market, **BOMBAY 2**

ಸರಕಾರದವು ಪಗಾರ ಹೆಚ್ಚಿಸಲಿ, ಹೆಚ್ಚಿಸದಿರಲಿ. ಶಿಕ್ಷಕರು ತಾವು ಕೈಕೊಂಡ ಪವಿತ್ರ ಕಾರ್ಯವನ್ನು ಮನಮುಟ್ಟಿ, ಪರಿಸ್ಥಿತಿಯನ್ನನುಸರಿಸಿ, ತಮ್ಮ ಕೈಲಾದಮಟ್ಟಿಗೆ ನೆರವೇರಿಸುವದು ಅತ್ಯಗತ್ಯವಾದದ್ದು. ಅದರಿಂದ ಶಿಕ್ಷಕರಲ್ಲಿ ಪುಣ್ಯಸಂಗ್ರಹವಾದರೂ ಆಗತಕ್ಕದ್ದು. ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಶಿಕ್ಷಕರು ಶಾಲೆಯ ಕೆಲಸ ನಡೆಯದ ವೇಳೆಯಲ್ಲಿ ಮತ್ತು ಸೂಟಿಯ ದಿನಗಳಲ್ಲಿ ನೂಲುವ, ನೇಯುವ ವ್ಯವಸಾಯಗಳನ್ನು ಕೈಕೊಳ್ಳುವದಲ್ಲದೆ, ತಮ್ಮ ಉಡಿಗೆ-ತೊಡಿಗೆಗಳಿಗಾಗಿ ಖಾದಿಯನ್ನೇ ಉಪಯೋಗಿಸಬೇಕು. ಕಡಿಮೆ ಪಗಾರದಿಂದ ಜೀವನವು ಕಷ್ಟಮಯವಾಗುವದೆಂದು ಸ್ವಲ್ಪವೂ ಎದೆಗುಂದದೆ, ಬಂದ ಕಷ್ಟಗಳನ್ನೆಲ್ಲ ಸಹಿಸಿ, ಕೇವಲ ಪರಮಾತ್ಮನೊಬ್ಬನನ್ನೇ ನಂಬಿ ನಡೆದರೆ ನಿಶ್ಚಯವಾಗಿಯೂ ಆ ಕರುಣಾಳು 'ಶಿಕ್ಷಕರ ಕಲ್ಯಾಣ ಮಾಡದಿರನು

ಎಲ್ಲ ತಾಲೂಕಾ ಮತ್ತು ಜಿಲ್ಲಾ ಸಂಘದವರು ಆದಷ್ಟು ಬೇಗನೆ ಮಹಾಸಭೆಯನ್ನು ನೆರವೇರಿಸಿ, ಅದರಲ್ಲಿ ಮೇಲ್ಕಾಣಿಸಿದ ಮುಂದಿನ ಕರ್ತವ್ಯದ ವಿವೇಚನದಿಂದ ಯೋಗ್ಯ ನಿರ್ಣಯಗಳನ್ನು ಮಾಡಿ, ಅವುಗಳನ್ನು ಅನುಷ್ಠಾನದಲ್ಲಿ ತರಲು ಯತ್ನಿಸಬೇಕೆಂದು ಪ್ರಾರ್ಥಿಸುವೆನು. ಅಲ್ಲದೆ ಪಗಾರ ಸಂಬಂಧ ಮಾಡಬೇಕೆಂದು ಠರಾವು ಮಾಡಿ, ಸರಕಾರಕ್ಕೂ ಕೌನ್ಸಿಲಿಗೂ ತಾರಿನ ಮೇಲೆ ತಾರು ಕಳಿಸಿದರೂ ಅದರಲ್ಲಿ ಹಿರೇ ಆಂದೋಲನವಾಗುವದು

ಜಾಹೀರ ನೋಟೀಸು.

ಹೊನ್ನಾವರ ಕಸಬಾದಲ್ಲಿ ಇರುವ ಕರಾಡೀ ಬ್ರಾಹ್ಮಣ ಜಾತಿಯ ಕೃಷ್ಣ ಗೋಪಾಲಭಟ್ಟ ಶಹಾಣೆ ಆದ ನಾನು ಇದರ ಮೂಲಕ ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ.—

ನಮ್ಮ ತಂದೆ ಗೋಪಾಲಕೃಷ್ಣ ಭಟ್ಟರಿಗೆ ೧ ಅನಂತ ಭಟ್ಟ, ೨ ನೇ ನಾರಾಯಣ ಭಟ್ಟ ೩ ನೇ ಕೃಷ್ಣಭಟ್ಟ ಆದ ನಾನು ಈ ಪ್ರಕಾರ ಇದ್ದು, ನಾವೆಲ್ಲರು ಅವಿಭಕ್ತರಾಗಿ ಇರುತ್ತೇವೆ. ನಮ್ಮ ವಾಸ್ತವ್ಯವು ಬಹು ಪುರಾತನ ಕಾಲದಿಂದ ಹೊನ್ನಾವರ ಕಸಬಾ ಮುಗಾರಕೇರಿಯಲ್ಲಿ ಇದ್ದು ಅಲ್ಲಿ ನಮ್ಮ ಪೂರ್ವಜರು ಮಾಲಿಕರಿಂದಾ ಹಕ್ಕು ಖರೀದಿ ವಗೈರೆ ರೀತಿಯಿಂದ ಪಡೆದಂತೆ ಕ್ರಮಾಗತವಾಗಿ ಅಲ್ಲಿ ನಾವು ಅವಿಭಕ್ತ ಕುಟುಂಬದ ಸಂಚಯದ ಹಣದಿಂದ ಇಮಾರತು ವಗೈರೆ ಕಟ್ಟಿಸಿ ವಾಸ್ತವ್ಯ ಮಾಡಿ ಬರುತ್ತಾ ಇದ್ದೇವೆ.

ಹೀಗಿರುವಲ್ಲಿ ನನ್ನ ಅಣ್ಣ ನಾರಾಯಣ ಭಟ್ಟರು, ನಮಗೆ ಮೋಸಪಡಿಸುವ ಇರಾದೆಯಿಂದ ಬೇರೆ ತರದ ವಹಿವಾಟಿನ ಬಗ್ಗೆ ನಮ್ಮ ವಿರುದ್ಧ ಬಹುದಿವಸದಿಂದ ಸಾಧಿಸಿ, ಆ ಮನೆಯ ಹಿಸ್ಸೆ ಕೂಡಾ ಪರಾಧೀನತೆ ಮಾಡಿ ಹಣಾ ಎಬ್ಬಿಸುವ ತಯಾರಿಯಲ್ಲಿ ಇದ್ದಂತೆ ತೋರುತ್ತದೆ. ಸದ್ರಿ ಹಿಸ್ಸೆಯ ಮನೆಯಲ್ಲಿ ನಮಗೆ, ಮೂವರು ಮಂದಿಗೆ ಸಮಸ್ತ ಹಕ್ಕು ಇರುವದರಿಂದ ನಾರಾಯಣ ಭಟ್ಟನಿಗೆ ಪಟ್ಟಿಗೆ ಏನೂ ಪೂರ್ಣ ಹಿತಸಂಬಂಧ ಹಕ್ಕು ಇರುವದಿಲ್ಲ. ಅವರು ನಮ್ಮ ವಿರುದ್ಧ ಏನಾದರೂ ಲೇಖಿ ದಸ್ತೈವಜು ವಗೈರೆ ಮಾಡಿ ಪರಾಧೀನತೆ ಮಾಡಿದಲ್ಲಿ, ಅವು ನಮಗೇನೂ ಬಾಧಿಸತಕ್ಕದ್ದಲ್ಲ. ಆ ಬಗ್ಗೆ ಉಳಿದ ಇಬ್ಬರು ಜವಾಬುದಾರರಲ್ಲ. ನಮಗೆ ಪಿತ್ರಾರ್ಜಿತದ ಸಾಲ ವಗೈರೆ ಏನೂ ಇರುವದಿಲ್ಲ. ಅವನು ಮಾಡಿದ ಮಾಡುವ ಲೇಖಿಗಳು ವಗೈರೆ ಅವನ ಅಂಶದ ಹಕ್ಕಿಗೆ ಪೂರ್ತಿ ಜವಾಬುದಾರಿ ಆಗಬೇಕಲ್ಲದೆ ನಮ್ಮ ಹಕ್ಕಿಗೆ ಬಾಧಕ ಬರಲಿಕ್ಕಿಲ್ಲವೆಂಬ ವಿವರ ತಿಳಿವಿರಲಿ.

ಹೊನ್ನಾವರ, ತಾ. 5-9-25. } (ಸಹಿ) ಕೃಷ್ಣ ಗೋಪಾಲ ಭಟ್ಟ ಶಹಾಣೆ.

ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ.

ಅನುವಾದಕ:— ವ್ಹಿ. ಎ ಹೊನ್ನೆ, ಬಿ.ಎ.

(ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು)

೫.

ಫೌಜದಾರರ ರಿಪೋರ್ಟು—ಮುಟ್ಟಿದ ಕೂಡಲೆ, ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಝಡ್ತಿಯ ವಾರಂಟನ್ನು ದಯಪಾಲಿಸಿದರು. ಅದರ ಪಟ್ಟೇವಾಲನು ಪೋಲೀಸ ಠಾಣೆಗೆ ಬಂದು, ಅದನ್ನು ಫೌಜದಾರರಿಗೆ ಕೊಟ್ಟನು. ಆ ಕಾಲಕ್ಕೆ ಅವರು ಆಕಳನ್ನು ಅಪಹರಿಸಿದ ಬಂದರು ಖಟ್ಲೆಯಲ್ಲಾದ ಆರೋಪಿಯ ಕೂಡ ಕಂಠಾಕ್ಷ ನಡಿಸಿದರು. ಆರೋಪಿಯು ಕೈಜೋಡಿಸಿಕೊಂಡು—"ಧನಿಯರೇ, ನಾನು ೧೦೦ ರೂಪಾಯಿಗಳನ್ನು ತಂದಿರುವೆನು. ಇದನ್ನು ಕೂಡಿಸಲಿಕ್ಕೆ ನಾನು ರಂಟೆ-ಕುಂಟೆಗಳನ್ನೂ ಎತ್ತು-ಕೋಣಗಳನ್ನೂ ಮಾರಿ ಬಿಡಬೇಕಾಯಿತು. ದಯಮಾಡಿ ಈ ರಕಮನ್ನು ಸ್ವೀಕರಿಸಿ ನನ್ನನ್ನು ಬಿಡುಗಡೆ ಮಾಡಿರಿ." ಎಂತ ಫೌಜದಾರರನ್ನು ಅಂಗಲಾಚಿ ಬೇಡಿಕೊಳ್ಳುತ್ತಿದ್ದನು. ಅದಕ್ಕವರು ೨೦೦ ರೂಪಾಯಿಗೆ ಒಂದು ಕಾಸು ಕಡಿಮೆಯಾದರೆ ತೆಗೆದುಕೊಳ್ಳಲಿಕ್ಕಿಲ್ಲೆಂತಲೂ, ಆ ರಕಮು ಸಾಯಂಕಾಲದ ಒಳಗಾಗಿ ಮುಟ್ಟದಿದ್ದರೆ, ಮರುದಿವಸವೇ ಆತನನ್ನು ವಿಚಾರಕ್ಕಾಗಿ ಕಳಿಸುವೆನೆಂತಲೂ ಉತ್ತರವನ್ನಿತ್ತರು. ಆದರೆ ಝಡ್ತಿ-ವಾರಂಟಿನ ಆಕಸ್ಮಿಕ ಆಗಮನದಿಂದಾದ ಆನಂದದ ಭರದಲ್ಲಿ ಅವರು ಕೂಡಲೇ ತಮ್ಮ ನ್ಯಾಯವಾದ ಬೇಡಿಕೆಯನ್ನು ಬಿಟ್ಟುಕೊಟ್ಟು, ೧೦೦ ರೂಪಾಯಿಗಳನ್ನು ಸ್ವೀಕರಿಸಿ, ಈ ಕೆಳಗಿನಂತೆ ಕಟ್ಟಕಡೆಯ ರಿಪೋರ್ಟನ್ನು ಬರೆದರು.—

"ವಿಚಾರಮಾಡಿ ನೋಡಲಾಗಿ, ಆರೋಪಿಯು ನಿರಪರಾಧಿಯೆಂತ ನನಗೆ ಕಂಡುಬಂದಿರುತ್ತದೆ. ಫಿರ್ಯಾದಿಯ ಆಕಳು ತನ್ನ ಕೊಟ್ಟಿಗೆಯಿಂದ ಬಿಡಿಸಿಕೊಂಡು, ಆರೋಪಿಯ ಕೊಟ್ಟಿಗೆಯನ್ನು ಹೊಕ್ಕು, ಅಲ್ಲಿ ಕೂಡಿ ಹಾಕಿದಂಥ ಮೇವನ್ನು ಅನ್ಯಾಯವಾಗಿ ತಿನ್ನಹತ್ತಿತು. ಅದ್ದರಿಂದ ಆರೋಪಿಯು ಆ ಆಕಳಿಗೆ ಶಿಕ್ಷೆ ಎಂತ ಅದನ್ನು ಕಟ್ಟಿಹಾಕಿದನು. ಇದರ ತಪ್ಪು ತಿಳುವಳಿಕೆಯಾಯಿತು."

ಆಕಳ ಕಳ್ಳನನ್ನು ಕಳಿಸಿ, ತರುವಾಯ ಫೌಜದಾರರು ಝಡ್ತಿಯ ವಾರಂಟನ್ನು ಬಹಳೇ ಲಕ್ಷಪೂರ್ವಕವಾಗಿ ಓದಿದರು. ಆಮೇಲೆ ತಮ್ಮ ಸರಕಾರೀ ಪೋಷಾಕನ್ನು ಧರಿಸಿ, ೧೮—೧೨ ಪೋಲೀಸರನ್ನು ಕೂಡಿಕೊಂಡು, ಬಹಳೇ ಅಟ್ಟಹಾಸದಿಂದ ಡಾಕ್ಟರರ ಮನೆಯ ಕಡೆಗೆ ಸಾಗಿದರು.

ಅಲ್ಲಿ ಮುಟ್ಟಿದ ಮೇಲೆ ಅವರು ಕಾಯಿದೆಯಂತೆ ತಪಾಸಣೆಗೆ ಸಾಕ್ಷಿಗಾಗಿ ಡಾಕ್ಟರರ ನೆರೆಹೊರೆಯವರಿಬ್ಬರನ್ನು ಕರೆದರು. ಮುಂಬಾಗಿಲಿನ ಒಳೆಯಲ್ಲಿ ನಿಂತು, ತಮ್ಮನ್ನು ಒಳಗೆ ಬಿಡಲು ಗಟ್ಟಿಯಾಗಿ ಒದರಹತ್ತಿದರು.

ಡಾಕ್ಟರ ದೇಸಾಯಿಯವರು ಬಹಳೇ ಆಶ್ಚರ್ಯಚಕಿತರಾಗಿ ಹೊರಗೆ ಬಂದರು. ಫೌಜದಾರರು ಅವರಿಗೆ ಝಡ್ತಿಯ ವಾರಂಟನ್ನು ತೋರಿಸಿ, ತಪಾಸಣೆಯು ಮುಗಿಯುವ ವರೆಗೆ, ಮನೆಯೊಳಗಿನ ಹೆಂಗಸರೆಲ್ಲ ಅಡಿಗೆಯ ಮನೆಯನ್ನು ಸೇರತಕ್ಕದೆಂದರು.

ಆಮೇಲೆ ಫೌಜದಾರರು ಮನೆಯನ್ನು ಹೊಕ್ಕು, ತಮ್ಮ ಕೆಲಸವನ್ನು ಪ್ರಾರಂಭಿಸಿದರು. ಪ್ರತಿಯೊಂದು ಕೋಣೆಯಲ್ಲಿದ್ದ ಯಾವತ್ತು ಟ್ರಂಕುಗಳನ್ನೂ, ಪೆಟ್ಟಿಗೆಗಳನ್ನೂ ಹೊರಗೊಯ್ದು ಅಂಗಳದಲ್ಲಿ ರಾಶಿ ಹಾಕಲು ಅವರು ಪೋಲೀಸರಿಗೆ ಹುಕುಂ ಮಾಡಿದರು. ಅಪ್ಪಿದ ಮೇಲೆ ಕೈ ಸಿಕ್ಕಂಥ ಪೆಟ್ಟಿಗೆಯ ಬೀಗಗಳನ್ನು ತೆಗೆಸಿ ಉಳಿದವುಗಳನ್ನು ಮುರಿಸಿದರು. ಆ ಮೇಲೆ ಅವರು ಎಲ್ಲ ಪೆಟ್ಟಿಗೆಗಳಲ್ಲಿದ್ದ ಸಾಮಾನನ್ನು ಕೆಳಗೆ ರಾಶಿಯಾಗಿ ಸುರಿಸಿ, ಅವುಗಳನ್ನು ಕಾಲಿನಿಂದ ಅತ್ತಿತ್ತ ಒದ್ದು ತಮ್ಮ ತಪಾಸಣೆಯನ್ನು ನಡಿಸಿದರು. ಶಾಲು-ಸೀರೆಗಳು, ಅಂಗಿ-ಕೋಟುಗಳು, ಕೈವಸ್ತ್ರ-ಕಾಲುಚೀಲ ಮೊದಲಾದವುಗಳು ಎಲ್ಲ ಕಡೆಗೂ ಬಿದ್ದುಕೊಂಡಿದ್ದವು. ಡಾಕ್ಟರರ ಹೊಸಯ ಪೆಟ್ಟಿಗೆಯಲ್ಲಿ ಅವರ ಕರುಣ ಪತಿಯ ಪ್ರೇಮ-ಪತ್ರಗಳ ಕಟ್ಟೊಂದು ದೊರೆಯಿತು. ಫೌಜದಾರರು ಅದನ್ನು ಕೈಯಲ್ಲಿ ತೆಗೆದುಕೊಂಡು "ಇದೊಂದು ರಾಜದ್ರೋಹದ ಜಾಗೂ ಒಳಸಂಚಿನ ಪುರಾವೆ ಇರಲಿಕ್ಕೆ ಬೇಕು" ಎನ್ನುತ್ತ ಅದನ್ನು ಬಹಳ ಜಾಗ್ರತೆಯಿಂದ ತಮ್ಮ ಅಂಗಿಯ ಕಿಸೆಯಲ್ಲಿ ಸೇರಿಸಿದರು. ಸಮೀಪದ ಪೆಟ್ಟಿಗೆಯಲ್ಲಿ ಧಾರವಾಡದ ಗೋಳೀಬಾರ ಪ್ರಕರಣದ ಮುಸ್ತೀಯ ಪತ್ರದ ರಿಪೋರ್ಟಿನ ಪ್ರತಿ ಒಂದು ಸಿಕ್ಕಿತು. ಫೌಜದಾರರು ಆನಂದಾತಿಶಯದಿಂದ ಅದನ್ನು ಕೂಡಲೆ ತೆಗೆದುಕೊಂಡರು. ಪೆಟ್ಟಿಗೆಗಳೊಳಗಿನ ಸಾಮಾನಿನ ತಪಾಸಣೆಯಾದಮೇಲೆ, ಫೌಜದಾರರು ಪ್ರತಿ ಒಂದು ಕೋಣೆಯನ್ನು ಒಂದೊಂದಾಗಿ ಪ್ರವೇಶಿಸಿ, ಕಪಾಟುಗಳನ್ನೂ, ಕೈಗೆ ಸಿಕ್ಕಿದ ಸಾಮಾನುಗಳನ್ನೂ ಒದೆದು ತೆಗೆದರು. ಡಾಕ್ಟರರ ಔಷಧಿ-ಪೇಟಿಗಳ ಪುಸ್ತಕವೂ, ಹಳೇ ಪತ್ರಗಳ ೨—೩ ಕಟ್ಟುಗಳೂ, ಮನೆಯ ಜಮಾ-ಖರ್ಚಿನ ಪುಸ್ತಕವೂ, ಮಹಾತ್ಮಾ ಗಾಂಧಿಯವರ ಕನ್ನಡಿ ಹಾಕಿದ ಭಾವಚಿತ್ರವೂ, ಟಿಳಕ, ಲಜಪತರಾಯ, ದಾಸ, ನೆಹರು ಸಾವರಕರ, ಅರವಿಂದ ಘೋಷ ಮೊದಲಾದವರ ಚಿತ್ರಗಳುಳ್ಳ ಮಾಸಿಕ ಪುಸ್ತಕವೂ ಜಾಗ್ರತೆಯಾಗಿ ಜಪ್ತ ಮಾಡಲ್ಪಟ್ಟವು. ಔಷಧಿಯ ಕಪಾಟನ್ನು ತೆರೆದು, ಜ್ವಾಲಾಗ್ರಾಹೀ ಪದಾರ್ಥವೇನಾದರೂ ಸಿಗುತ್ತದೋ ಎಂತ ಪ್ರತಿಯೊಂದು ಬಾಟ್ಲಿಯನ್ನು ಲಕ್ಷಪೂರ್ವಕವಾಗಿ ಪರೀಕ್ಷಿಸಹತ್ತಿದರು. ಅಲ್ಲಿ ಹೊರಮಗ್ಗಲಿಗೆ ತಂತಿಯ ಜಾಳಿಗೆಯುಳ್ಳ ಬಾಟ್ಲಿಯೊಂದು ಇತ್ತು. ಅದಕ್ಕೆ ಹಚ್ಚಿದಂಥ ಚೀಟಿಯ ಬರಹವು ಫೌಜದಾರರ ಕಣ್ಣಿಗೆ ವಿಷವಿತ್ತು.— ಯಾಕಂದರೆ ಅವರಿಗೆ ಇಂಗ್ಲೀಷ ಓದಲಿಕ್ಕೆ ಬರುತ್ತಿದ್ದಿಲ್ಲ. ಅದನ್ನು ತೆಗೆದುಕೊಂಡು ಬೆಳಕಿಗೆ ಹಿಡಿದು ಅವರು ತಪಾಸಣೆಯ ಸಾಕ್ಷಿಗಾರರನ್ನುದ್ದೇಶಿಸಿ ನುಡಿದದ್ದೇನಂದರೆ:— "ಅಗೋ ನೋಡಿರಿ, ಡಾಕ್ಟರರು ಇಂಥ ಪದಾರ್ಥಗಳ ಬೆನ್ನು ಹತ್ತಿರುವರೆಂಬುದು ನನಗೆ ಗೊತ್ತಿದ್ದಿಲ್ಲ. ಅವರು ಮದ್ಯಪಾನ ಮಾಡುವದಿಲ್ಲೆಂದು ನಾನು ತಿಳಿದಿದ್ದೆನು." ಫೌಜದಾರರು ಆ ಬಾಟ್ಲಿಯನ್ನು ಬಹಳೇ ಪ್ರೇಮಪೂರ್ವಕವಾಗಿ ನೋಡುತ್ತ, ಉಳಿದವರನ್ನುದ್ದೇಶಿಸಿ,— "ಇಕೋ, ಒಂದು ಹನಿ ತೆಗೆದುಕೊಳ್ಳಿರಿ," ಅಂದರು.

"ಬೇಡ, ನಾನು ಕುಡಿಯುವದಿಲ್ಲ" ಎಂತ ಅವರೊಳಗಿನವನೊಬ್ಬನು ಉತ್ತರವನ್ನಿತ್ತನು.

"ನಿಮಗೆ ದಣುವಾದಾಗ, ಸರಿಯಾಗಿ ತೆಗೆದುಕೊಂಡ ಒಂದು ಔಂಸ ಬ್ರ್ಯಾಂಡಿಯಷ್ಟು ಆರೋಗ್ಯಕರವಾದಂಥ ಪದಾರ್ಥವು ಮತ್ತೊಂದಿಲ್ಲ" ಅನ್ನುತ್ತ ಫೌಜದಾರರು ಆಡಿದಂತೆ ಬಾಯಿತೊಳೆಯಹತ್ತಿದರು.

ಆದರೆ, ಅದರ ರುಚಿಯು ತಾನು ಬೇರೆ ಏನನ್ನೋ ಕುಡಿದಂತೆ ಅವರಿಗೆ ಹತ್ತಿತು. ಆ ಬಾಟ್ಲಿಯನ್ನು ಜಪ್ತಿಯ ಸಾಕ್ಷೀಗಾರರ ಕೈಯಲ್ಲಿ ಕೊಟ್ಟು ಅದನ್ನು ನೋಡಲು ಹೇಳಿದರು. ಅವರು ಮೇಲೆ ಹಚ್ಚಿದಂಥ ಚೀಟಿಯನ್ನು ಓದಿ, ಫ್ರಾನ್ಸ ದೇಶದಲ್ಲಿ ತಯಾರಾದ ಅತ್ಯುತ್ತಮ ಮದ್ಯವೆಂತ ಹೇಳಿದರು.

ಆ ಮೇಲೆ ಫೌಜದಾರರು ಡಾಕ್ಟರರ ಮಲಗುವ ಕೋಣೆಯ ಕಡೆಗೆ ಸಾಗಿ ಪೋಲೀಸರನ್ನು ಕರೆದು. "ಗಾದಿಗಳನ್ನೂ, ತಲೆಗಿಂಬುಗಳನ್ನೂ ಬಿಚ್ಚಿರಿ. ಎಷ್ಟೋ ಪ್ರಸಂಗಗಳಲ್ಲಿ ಅವುಗಳೊಳಗೆ ಅಡಗಿಸಿಟ್ಟ ನಿಷಿದ್ಧ ವಸ್ತುಗಳನ್ನು ನಾನು ಶೋಧಿಸಿ ತೆಗೆದಿರುವೆನು," ಅಂ

ಪೋಲೀಸರು ಹಾಸಿಗೆಗಳನ್ನು ಅಂಗಳಕ್ಕೆ ಒಯ್ದು ಪ್ರತಿ ಒಂದನ್ನು ಬಿಚ್ಚಿ ಅದರೊಳಗಿನ ಹತ್ತಿಯನ್ನು ಕೆಳಗೆ ಕೆಡಹಿದರು. ಆದರೆ ಅದರೊಳಗಿಂದ ಬೇರೆ ಹೇಳುವಂಥ ಯಾವ ವಸ್ತುವೂ ಹೊರಬೀಳಲಿಲ್ಲ. ಗಾಳಿಯು ಅರ್ಧಕ್ಕಿಂತ ಹೆಚ್ಚು ಅರಳೆಯನ್ನು ಹಾರಿಸಿಕೊಂಡು ಹೋಗಿ ಅದನ್ನು ಗಿಡಗಳ ತುದಿಯ ಮೇಲೆಯೂ, ಬೀದಿಯ ಒಳಗಳಲ್ಲಿ ಹೋಗುತ್ತಿದ್ದ ಹಾದಿಕಾರರ ತಲೆಯ ಮೇಲೆಯೂ ಚೆಲ್ಲಿತು.

ಈ ರೀತಿಯಲ್ಲಿ ತಪಾಸಣೆಯು ಮುಗಿಯಿತು. ತರುವಾಯ ಫೌಜದಾರರು ಆಮೇಲೆ ಜಪ್ತಮಾಡಿದಂಥ ವಸ್ತುಗಳ ಪಟ್ಟಿಯನ್ನು ತಯಾರಿಸತೊಡಗಿದರು. ಆದರೆ ಅಷ್ಟರಲ್ಲಿ ಹೊಸ್ತಗಳೇನೂ ಈ ವರೆಗೆ ಸಿಗಲಿಲ್ಲವೆಂಬುದು ಅವರಿಗೆ ಆಕಸ್ಮಾತ್ ನೆನಪಾಯಿತು.

“ಪೋಲೀಸರೇ, ಎಲ್ಲ ಕಡೆಯಲ್ಲಿ ಹುಡುಕಿ ಹೊಸ್ತಗಳೇನಾದರೂ ಸಿಗುತ್ತವೆಯೋ ನೋಡಿರಿ,” ಎಂತ ಹುಕುಂ ಮಾಡಿದರು.

ಡಾಕ್ಟರರ ಸೇವಕನಾದ ತುಳಸಿರಿನ(?) ಭೀಮಪ್ಪನು ತನ್ನ ಊರಿಂದ ಬರುವಾಗ ಭಾರವಾದ ಬಡಿಗೆಯೊಂದನ್ನು ಸಂಗಡ ತಂದಿದ್ದನು. ಪೋಲೀಸರು ಕೂಡಲೆ ಅದನ್ನು ಕೈವಶ ಮಾಡಿಕೊಂಡರು. ಹಳೇ ರಕ್ತದ ಕಲೆ ಅನಿಸಬಹುದಾದ ಗುರುತೇನಾದರೂ ಅದರ ಮೇಲುಂಟೋ ಎಂತ ಫೌಜದಾರರು ಅದನ್ನು ಲಕ್ಷ್ಯಪೂರ್ವಕವಾಗಿ ಪರೀಕ್ಷಿಸಹತ್ತಿದರು. ಆದರೆ ಅಂಥ ಚಿನ್ಹವೇನೂ ಅದರ ಮೇಲಿರಲಿಲ್ಲ. ಇಷ್ಟಾದರೂ “ರಕ್ತದ ಕಲೆಯುಳ್ಳ ಭಾರವಾದ ಬಡಿಗೆಯೊಂದು” ಎಂತ ಆ ಹೊಸ್ತಯು ಜಪ್ತವಾದ ವಸ್ತುಗಳ ಮಾಲಿಕೆಯಲ್ಲಿ ಸೇರಿಸಲ್ಪಟ್ಟಿತು. ಆಶ್ಚರ್ಯವೇನಂದರೆ, ಮರು ದಿವಸ ಕೋರ್ಟಿನಲ್ಲಿ ಹಾಜರ ಆಗುವಾಗ, ಇದೇ ಬಡಿಗೆಯ ಮೇಲೆ ರಕ್ತದ ಸ್ಪಷ್ಟವಾದ ಕಲೆಗಳಿದ್ದವು! ತರುವಾಯ ಫೌಜದಾರರು ಜಪ್ತ ಮಾಡಿದಂಥ ವಸ್ತುಗಳ ಪಟ್ಟಿಯ ಮೇಲೆ ಸಾಕ್ಷಿಗಾರರ ಸಹಿ ಮಾಡಿಸಿದರು. ಡಾಕ್ಟರರಿಗೆ ತಿರಸ್ಕಾರಯುಕ್ತವಾದ ಲಷ್ಕರೀ ಶಿಸ್ತಿನ ಸಲಾಮು ಮಾಡಿ, ಜಯಶಾಲಿಯಂತೆ ಅವರು ಠಾಣೆಯ ಕಡೆಗೆ ತೆರಳಿದರು.

ಇಷ್ಟೆಲ್ಲ ಮುಗಿಯುವ ವರೆಗೆ ಡಾಕ್ಟರ ದೇಸಾಯಿಯವರು ಆಗಿಗೆ ಮನೆಯ ಬಾಗಿಲಿನ ಹೊರಬದಿಯಲ್ಲಿದ್ದ ಖುರ್ಚಿಯ ಮೇಲೆ ಸ್ವಸ್ಥವಾಗಿ ಕುಳಿತಿದ್ದರು. ಹೆಂಗಸರು ಒಳಬದಿಯಲ್ಲಿದ್ದರು. — ಮತ್ತು ಅವರಿಗೆ ಆ ಷಂಡರಿಂದ ಯಾವತರದ ಅಪಮಾನವನ್ನು ಆಗಗೊಡಬಾರದೆಂತ ಆ ಸ್ಥಳವನ್ನು ಅವರು ಕ್ಷಣಮಾತ್ರವೂ ಬಿಟ್ಟು ಕದಲಲಿಲ್ಲ.

ಫೌಜದಾರರ ಸ್ವಾರಿಯು ಹೋದ ಮೇಲೆ, ಡಾಕ್ಟರರು ತಮ್ಮ ಜಾಗವನ್ನು ಬಿಟ್ಟು ಹೊರಗೆ ಬಂದರು. ತರುವಾಯ ಸಾಕ್ಷಿಗಾರರು ಇನ್ನೂ ಅಲ್ಲಿಯೇ ಸುಳಿದಾಡುತ್ತಿದ್ದರು. “ನೀವು ಯಾವತ್ತು ಸಂಗತಿಯನ್ನು ನೋಡಿರುವಿರಲ್ಲವೇ?” ಎಂತ ಡಾಕ್ಟರರು ಅವರನ್ನು ಕೇಳಿದರು.

“ಹೌದು, ನಾವು ನೋಡಿರುವೆವು,” ಎಂತ ಅವರೊಳಗಿನವನೊಬ್ಬನು ಹೇಳಿದನು.

“ನಾನು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಭೆಟ್ಟಿಗೆ ಹೋಗುವವನಿದ್ದೇನೆ. ನೀವು ಕ್ಷಣಹೊತ್ತು ನನ್ನ ಸಂಗಡ ಅವರ ಬಂಗ್ಲೆಯವರೆಗೆ ಬರುವಿರಾ?”

“ಏನು ಕಾರಣ”? ಎಂತ ಒಬ್ಬನು ಕೇಳಿದನು.

“ನಾನು ಹೋಗಿ ಈ ಸಂಗತಿಯನ್ನು ಅವರಿಗೆ ತಿಳಿಸಬೇಕಾಗಿದೆ. ನನಗೆ ನ್ಯಾಯ ಸಿಗುವಂತೆ ಅವರು ಏನಾದರೂ ವ್ಯವಸ್ಥೆ ಮಾಡುತ್ತಾರೋ ನೋಡುವಾ.”

ಅವರಿಬ್ಬರೂ ಕ್ಷಣಹೊತ್ತು ಸ್ತಬ್ಧವಾಗಿ ನಿಂತರು. ಡಾಕ್ಟರರು ಆತುರತೆಯಿಂದ, “ತಮ್ಮ ಹೇಳಿಕೆ ಏನು? ನೀವು ನನ್ನ ಸಂಗಡ ಬರುವಿರೋ?” ಎಂತ ಪುನಃ ಕೇಳಿದರು.

ಅವರೊಳಗಿನವನೊಬ್ಬನು ಉತ್ತರ ಕೊಟ್ಟದ್ದೇನಂದರೆ:—“ಸ್ವಾಮೀ, ನೀವೇ ಮ್ಯಾಜಿಸ್ಟ್ರೇಟರ ಬಳಿಗೆ ಹೋಗಿ ಮಾತಾಡುವದು ಲೇಸೆಂತ ನನಗೆ ತೋರುತ್ತದೆ. ಅದು ಬಹಳೇ ಸಾಜೂಕ ವಿಷಯವು—ಮತ್ತು ಮೂರನೇಯವನ ಆಗತ್ಯವಿದೆಯೆಂತ ನನಗೇನೂ ತೋರುವದಿಲ್ಲ.

ಎರಡನೇಯವನು ಹೆಚ್ಚು ಸ್ಪಷ್ಟವಾಗಿ ಮಾತಾಡುವ ಮನುಷ್ಯನಾಗಿದ್ದನು. ತನ್ನ ಜೊತೆಯವನನ್ನು ತಡೆದು ಅಂದದ್ದೇನಂದರೆ,—“ನನಗೆ ಮುಚ್ಚಿ ಮಾತಾಡುವದು ತೋರುವದಿಲ್ಲ. ಸ್ವಾಮೀ, ನಿಮಗೆ ಸ್ಪಷ್ಟವಾಗಿ ಹೇಳುತ್ತೇನೆ. ಮ್ಯಾಜಿಸ್ಟ್ರೇಟರ ಕಡೆಗೆ ಹೋಗುವದರಿಂದ ನಿಮಗೆ ಏನೂ ಉಪಯೋಗವಾಗಲಿಕ್ಕಿಲ್ಲ. ಅದಲ್ಲದೆ— ನಾವು ಪೋಲೀಸರ ವಿರುದ್ಧ ಮಾತಾಡುವದಿಲ್ಲ — ನಾವು ಮಕ್ಕಳದಾರರೆವು. ನಾವು ಬಡವರಿದ್ದು, ತ್ಯಾಗಾದರೂ ಮಾಡಿ ನಮ್ಮ ಕುಟುಂಬ-ಪೋಷಣವನ್ನು ಸಾಗಿಸುತ್ತೇವೆ. ಪೋಲೀಸರ ಕೈಯಲ್ಲಿ ತಮ್ಮಂಥ ಸರಕಾರಿ ಅಧಿಕಾರಿಗಳೂ, ಧನಿಕರೂ, ಘನವಂತರೂ ಆದವರ ಸಂಗತಿಯೇ ಹೀಗಾಗಿರುವದನ್ನು ನೋಡಿಯೂ, ಪುನಃ ಅವರ ಅಸಂತೋಷಕ್ಕೆ ಗುರಿಯಾಗುವದು ಹುಚ್ಚುತನವೇ ಸರಿ. ನಮಗೆ ಅವರು ಮನೆಯ ಜಪ್ತಿಯನ್ನಲ್ಲದೆ ಏನೇನೂ ಮಾಡಿರುವದಿಲ್ಲ. ಆದರೆ ನಮಗೆ ಬೇಡಿಗಳನ್ನು ಹಾಕಿ, ದಾರಿಯ ಮೇಲೆಲ್ಲ ಯಮದೂತರಂತೆ ದಬ್ಬುತ್ತಲೂ, ತಿವಿಯುತ್ತಲೂ ಸಾರ್ವಜನಿಕ ಬೀದಿಗಳೊಳಗಿಂದ ಎಳೆದೊಯ್ಯಬಹುದು.”

ಡಾಕ್ಟರ ದೇಸಾಯಿಯವರು ಅವರ ಕಡೆಗೆ ಕ್ಷಣ ಹೊತ್ತು ತಿರಸ್ಕಾರದಿಂದ ನೋಡಿದರು. ಆಮೇಲೆ, “ನಿಮ್ಮ ಮನಸ್ಸಿನಂತೆಯೇ ಆಗಲಿ” ಅಂದರು.

“ನಮಸ್ಕಾರ ಸ್ವಾಮೀ” ಎನ್ನುತ್ತ ಅವರಿಬ್ಬರೂ ಹೊರಟರು.

ಆಮೇಲೆ ಡಾಕ್ಟರರು ಪೋಷಾಕು ಹಾಕಿಕೊಂಡು ಮ್ಯಾಜಿಸ್ಟ್ರೇಟರ ಬಂಗ್ಲೆಯ ಕಡೆಗೆ ನಡೆದರು. ಆ ಕಾಲಕ್ಕೆ ಸಾಹೇಬರು ಟೆನಿಸ್ ಸೂಟ್ ಧರಿಸಿ, ಕೈಯಲ್ಲಿ ಬ್ಯಾಟ್ ಹಿಡಿದುಕೊಂಡು ಕ್ಲಬ್ಬಿಗೆ ಹೋಗುವ ತಯಾರಿಯಲ್ಲಿದ್ದರು.

“ನಮಸ್ಕಾರ ಸ್ವಾಮೀ,” ಎನ್ನುತ್ತ ಸಲಾಮು ಮಾಡಿ ಡಾಕ್ಟರರು ಜಿಲ್ಹಾಧಿಕಾರಿಗಳ ಎದುರಿಗೆ ಹೋಗಿ ನಿಂತರು.

“ನಮಸ್ಕಾರ ಡಾಕ್ಟರರೇ, ಏನು ಬಂದಿರಿ?”

“ನಾನು ನ್ಯಾಯಸಂಪಾದನೆಗಾಗಿ ತಮ್ಮ ಕಡೆಗೆ ಬಂದಿರುವೆನು. ಫೌಜದಾರರು ಈ ಹೊತ್ತು ನನ್ನ ಮನೆಯನ್ನು ತಪಾಸಿಸುವ ನೆವದಿಂದ— ”

ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಅಷ್ಟಕ್ಕೇ ಅವರನ್ನು ತಡೆದು,—“ಯುರೋಪಿಯನ್‌ರನ್ನು ಕೊಂದ ಪ್ರಕರಣದಲ್ಲಿ ಈ ದಿವಸ ನಿಮ್ಮ ಇಬ್ಬರು ಹುಡುಗರ ದಸ್ತಗಿರಿ ಆಗಿರುತ್ತದಲ್ಲವೇ?”

“ಹೌದು ಸ್ವಾಮೀ, ಆಗಿರುತ್ತದೆ. ಆದರೆ ಫೌಜದಾರರು ಬರೇ ದ್ವೇಷದಿಂದಲೇ ಹಾಗೆ ಮಾಡಿರುವರು. ಈ ಹೊತ್ತೇ ಬೆಳಿಗ್ಗೆ—”

ಸಾಹೇಬರು ಸಿಟ್ಟಿನಿಂದ ಬೆಂಕಿಯಾದರು. “ಏನು ನಿಮ್ಮ ಧೈರ್ಯ? ನಾಡದು ನಿಮ್ಮ ಹುಡುಗರ ಖಟ್ಲೆಯನ್ನು ನಡಿಸತಕ್ಕವನು ನಾನೇ ಎಂಬುದು ಗೊತ್ತಿದ್ದರೂ ಕೂಡ, ಇಲ್ಲಿಗೆ ಬಂದು ನನ್ನನ್ನು ಒಲಿಸಲು ಪ್ರಯತ್ನಿಸುವ ಧೈರ್ಯವು ನಿಮಗೆ ಹ್ಯಾಗಾಯಿತು?” ಎಂದು ಗರ್ಜಿಸುತ್ತ ಸಾಹೇಬರು ಸ್ವಲ್ಪವೇ ಕ್ಷಣದಲ್ಲಿ ಅದೃಶ್ಯರಾದರು.

ಡಾಕ್ಟರ ದೇಸಾಯಿಯವರು ನಿಟ್ಟುಸಿರುಬಿಟ್ಟು ಅಸಮಾಧಾನಚಿತ್ತದಿಂದ ಮನೆಯ ಕಡೆಗೆ ತಿರುಗಿದರು.

(ಮುಂದೆ ಸಾಗುವದು.)

ಚುನಾವಣೆಯ ಹಬ್ಬ.

[ಮಂಗಳೂರಿನ ‘ಕಂಠೀರವ’ನು ಸ್ಥಳೀಕ ಮ್ಯುನಿಸಿಪಲ ಚುನಾವಣೆಯ ಕುರಿತು ಬರೆದ ಲೇಖದೊಳಗಿನ ಇವರತಿಗಿನ ಅವತರಣಗಳು ಬೋಧಪ್ರದವಿವೆ.]

ಊರಿಗೊಂದು ದೊಡ್ಡ ಹಬ್ಬ ಬಂದಿತು. ನವರಾತ್ರಿಯಲ್ಲ; ಶಿವರಾತ್ರಿಯಲ್ಲ; ಚೌತಿಯಲ್ಲ; ಅಷ್ಟಮಿಯಲ್ಲ. ಇದೊಂದು ಹೊಸ ಹಬ್ಬ. “ಮ್ಯುನಿಸಿಪಲ್ ಗಡಿಬಿಡಿಯ ಹಬ್ಬ” ಎಂದರೆ ಇದೇ !

ಈ ಹಬ್ಬದಲ್ಲಿ ಭಾಗಿಗಳಿಬ್ಬರು. ‘ಮತ’ ಕೊಡುವವರು; ಮತದಿಂದಲೇ ಸೋತು, ಗೆಲ್ಲುವವರು. ಇವರಿಬ್ಬರಲ್ಲಿಯೂ ಅನೇಕ ತರಗತಿಗಳಿವೆ. ದಾಕ್ಷಿಣ್ಯಕ್ಕಾಗಿ ಓಟು ಕೊಡುವವರು ಕೆಲವರು ; ‘ಲೇವಾದೇವಿ’ಯ ಸಂಬಂಧ ಕೊಡುವವರು ಕೆಲವರು; ಧನಿ ಹೇಳ್ತಾನೆಂಬ ನೆವದಿಂದ ಕೊಡುವವರು ಕೆಲವರು; ಶಿಫಾರಸಿನ ಮೇರೆಗೆ ಕೊಡುವವರು ಕೆಲವರು; ಬಂಧು ಬಾಂಧವರೆಂಬ ಪಾಶಬದ್ಧರಾಗಿ ಕೊಡುವವರು ಕೆಲವರು; ಜಾತಿನೀತಿಯನ್ನು ಬಿಡಲಾರದೆ ಕೊಡುವವರು ಕೆಲವರು; ಎಲ್ಲರಿಗೂ ಕೊಡುತ್ತೇನೆಂದು ಯಾರಿಗೂ ಕೊಡದವರು ಕೆಲವರು; ಇಬ್ಬರಿಗೆ ಕೊಡುತ್ತೇನೆಂದು ಮತ್ತೊಬ್ಬರಿಗೆ ಕೊಡುವವರು ಕೆಲವರು; ಹಿಂದುಸ್ಥಾನದ ಜಾತಿಸಂಖ್ಯೆಯನ್ನಾದರೂ ಗೊತ್ತುಮಾಡುವದು ಸುಲಭ. ‘ಮತಪ್ರದರ್ಶಕ’ರ ಜಾತಿಯನ್ನು ನಿರ್ಧರಿಸುವದು ಕಷ್ಟ!

ಇನ್ನು ಉಮೇದುವಾರರಲ್ಲಿ? ಹೀಗೆಯೇ; ಕೆಲವು ಜಾತಿ, ವಿದ್ಯಾವಂತರಾಗಿ, ಸ್ಥಾನಯೋಗ್ಯರಾಗಿ ಇದ್ದಿಬ್ಬರಿದ್ದರೆ, ದುಡ್ಡಿನ ಬಲದಿಂದ ಅವರನ್ನೂ ಗೆದ್ದು ಬಿಡುವೆವೆಂಬವರು ಕೆಲವರು; ಮಿತ್ರಮಂಡಲಿಯನ್ನೂ, ‘ಮಧ್ಯಸ್ಥ’ ಸಹಾಯಕರನ್ನೂ ನಂಬಿಕೊಂಡು ಕೆಲವರು; ಇಷ್ಟೂ ಅಲ್ಲದೆ ಇನ್ನೂ ಹಿಂದು ವಿಚಿತ್ರ ಜಾತಿ, ‘ಬಂಡತನ ಮುತ್ತಾಳನೇ ಮೂರು ವರ್ಷ ಕೌನ್ಸಿಲರನೆನ್ನಿಸಿದ. ನಾನು ಅವನಿಂದಲೂ ಕಡೆಯೇ?’ ಆ ಧರ್ಜಿ, ಈ ಉಮೇದುವಾರ ಮಹಾಶಯರಲ್ಲಿ ಹೆಡ್ಡರ್ಯಾರು? ಎಲ್ಲರೂ ಬುದ್ಧಿಶಾಲಿಗಳೇ. ಸೋಮಾರಿಗಳು ಯಾರು? ಎಲ್ಲರೂ ಕಾರ್ಯದಕ್ಷರೇ. ಆದರೆ, ಹಿಂದಿನ ಅನುಭವವು ನಮಗೇನನ್ನು ಕಲಿಸಿದೆ?

ಅದುಪರಿಂದ, ಮತದಾರರೇ! ಜೋಕೆ. ಚುನಾವಣೆಯಲ್ಲ ಜೋಕೆ!! ನಿಮ್ಮ ಓಟೇನೂ ನಿಮಗೆ ಸುಮ್ಮನೆ ಬರಲಿಲ್ಲ; ಅಥವಾ ಕರೆದಾಗಲೆಲ್ಲ ಅದು ನಿಮ್ಮ ಬಳಿಗೆ ಬರುವದಾಗಲೂ ಇಲ್ಲ. ಕಷ್ಟಪಟ್ಟು ನೀವು ತೆರಿಗೆಯನ್ನು ತೆರುವಂತೆ, ಕಷ್ಟಪಟ್ಟು ಆಲೋಚಿಸಿಯೂ ನೀವು “ಪ್ರತಿನಿಧಿ”ಗಳನ್ನು ಆರಿಸದಿದ್ದರೆ, ಮೂರು ವರ್ಷ ಕಾಲ ಬರುವ ಆ ನಿಮ್ಮ ಓಟಿನ ಹಕ್ಕು ವ್ಯರ್ಥ ! ನಿರರ್ಥಕ!! ಓಟಿನ ಬೆಲೆ ನಿಮಗೆ ತಿಳಿಯದೆಂದು ನಾವಿದನ್ನು ಹೇಳುವದಲ್ಲ. ಆದರೆ, ಜನ್ಮಸಿದ್ಧವಾದ ನಿಮ್ಮ ಸ್ವಾತಂತ್ರ್ಯವನ್ನು ನಿಮ್ಮ ಸ್ವತಂತ್ರದಂತೆ ಉಪಯೋಗಿಸಲು ಬೇರಾರ ಅಡ್ಡಿ ಏನು ? ಯೋಗ್ಯನಾದ ಒಬ್ಬ “ಪ್ರತಿನಿಧಿ”ಯ ಕೈಯಲ್ಲಿ ನಿಮ್ಮ ಕ್ಷೇಮಾಭಿವೃದ್ಧಿಗಳನ್ನು ಒಪ್ಪಿಸಿಕೊಡುವದಕ್ಕೂ, ನಿಮ್ಮ ಮೇಲೆ ಇತರರ ಪಾರುಪತ್ಯವೇ?

ಬಿಟ್ಟಿನಲ್ಲಿ ಹೇಳುವದಾದರೆ, ಅಪ್ರಯೋಜಕ ಶಿಖಾಮಣಿಗಳಾದ ಕೆಲಕೆಲವು ಕೌನ್ಸಿಲರುಗಳ ಉಚ್ಚಾಟನೆಯಾಗದೆ ಊರಿಗೆ ಸುಖವಿಲ್ಲ; ಸಮರ್ಥ ಕೌನ್ಸಿಲರರ ಚುನಾವಣೆ ಇಲ್ಲದೆ ಮ್ಯುನಿಸಿಪಾಲಿಟಿಗೆ ಹಿತವಿಲ್ಲ; ಕೌನ್ಸಿಲಿನಲ್ಲಿಯೂ ಬೇವರ್ಕಳೆಯಿಲ್ಲ “ಕೌನ್ಸಿಲರ್” “ಜನಪ್ರತಿನಿಧಿ”— ಎಂದರೆ ಸುಮ್ಮನೇನಾದೀತು? ದುಡಿಯಬೇಕು; ದಣಿಯಬೇಕು; ನಿಮ್ಮ ಹಿತವನ್ನು ಸಾಧಿಸುವಂತೆ ಕಾದಾಡಬೇಕು; ಸ್ವಾರ್ಥತ್ಯಾಗ ಮಾಡಬೇಕು, ಮಾತಿಗೆ ಮುಂಚಿತವಾಗಿ ಚುನಾಯಿಸುವದಂತೆ; ಕೌನ್ಸಿಲರನ “ಬಾಲ” ಬಂತೆಂದು ಎಂಥ ತಿರುಪುವುದಂತೆ! ಹೀಗೆಲ್ಲಿಯಾದರೂ “ನಿಮ್ಮ ಕಷ್ಟಾರ್ಜಿತವನ್ನು ಅವರ ಇಷ್ಟಾರ್ಥಕ್ಕೆ ಬಲಿ ಕೊಡಬೇಡಿ, ಕಂಡಿರಾ!”

ವಾಚಕ ಮಹನೀಯರೇ—

ನಿಮ್ಮ 'ವೃತ್ತ'ವು ಇನ್ನೊಂದು ವಾರದಲ್ಲಿ ೯ನೇ ವರ್ಷವನ್ನು ಮುಗಿಸಿ, ೧೦ನೇ ವರ್ಷದಲ್ಲಿ ಕಾಲಿಡುವದು. ಈ ವರೆಗೆ 'ವೃತ್ತ'ವು ಮಾರಗಾಣಿಸಿದ ದೇಶಸೇವೆಯನ್ನು ನೀವರಿತಿರುವಿರಿ. ವೃತ್ತಪತ್ರದ ಸ್ಥಿತಿಗತಿಯ ಜ್ಞಾನದಿಂದ 'ವೃತ್ತ'ವು ಪುರಸ್ಕರಿಸಿದ ಕಾರ್ಯವು ವಿಶೇಷ ಮಹತ್ವದ್ದೆಂದು ನೀವೇ ಒಪ್ಪುವಿರಿ. ಕಾಲಮಾನವು ವೃತ್ತಪತ್ರಗಳ ಸಂಗೋಪನಕ್ಕೆ ಅನುಕೂಲವಿಲ್ಲದಿರುವಾಗ, ತಾವೆಲ್ಲರೂ 'ವೃತ್ತ'ವನ್ನು ಬರಮಾಡಿಕೊಂಡು, ಔದಾರ್ಯದಿಂದ ಆಶ್ರಯವನ್ನಿತ್ತ ಬಗ್ಗೆ 'ವೃತ್ತ'ವು ತಮಗೆಲ್ಲರಿಗೆ ಕೃತಜ್ಞತಾಪೂರ್ವಕವಾಗಿ ಮನ್ನಣೆಗಳನ್ನರ್ಪಿಸುತ್ತದೆ. ಕರ್ನಾಟಕದ ರಾಷ್ಟ್ರೀಯ ಸಭೆ, ಸ್ವರಾಜ್ಯ ಪಕ್ಷದ ಹೋರಾಟ, ಆಳರಸರ ಚಲ್ಲಾಟ, ಮಹಾತ್ಮರ ಕಾರ್ಯಘೋಷಣೆ, ಧರ್ಮದಾಯ ಕಾಯಿದೆ ಇತ್ಯಾದಿ ಅಖಿಲ ಭಾರತೀಯ ರಾಜಕಾರಣದೊಳಗಿನ ಸ್ಥಿತ್ಯಂತರಗಳನ್ನು ಕಾಲಕಾಲಕ್ಕೆ 'ವೃತ್ತ'ವು ತಮಗೆ ಪೂರೈಸುತ್ತಲಿದೆ, ಸ್ಥಳಿಕ ವಾರ್ತೆಯನ್ನೂ, ಅದರೊಳಗಿನ ಮರ್ಮಗಳನ್ನೂ 'ವೃತ್ತ'ವು ಯಥಾಶಕ್ತಿ ತಮ್ಮದುರಿಗಿಟ್ಟು ಕೃತಾರ್ಥವಾಗಿದೆ. ಈ ಮುಂದೆ ಹೊಸ ಲೋಕಲ್ ಬೋರ್ಡು, ಜಂಗಲ ಕಮೀಟಿಯ ವಿಚಾರಣೆ, ಸ್ವರಾಜ್ಯ ಪಕ್ಷ ಹಾಗು ಆಳರಸರೊಳಗಿನ ಕಡು ಸಂಗ್ರಾಮ, ಮಹಾತ್ಮರ ಸ್ವಾತಂತ್ರ್ಯವಿಮೋಚನದ ಉಪಾಯಯೋಜನೆ, ಇತ್ಯಾದಿ ಮಹತ್ವದ ತರಂಗಗಳು ಎದ್ದೇಳುವವು. 'ವೃತ್ತ'ಕ್ಕೆ ತಾವೆಲ್ಲರೂ ಆಶ್ರಯವಿತ್ತು, ಭರತಖಂಡದೊಳಗಿನ ಪ್ರಚಲಿತ ರಾಜಕಾರಣವನ್ನೂ, ಪರಿಸ್ಥಿತಿಯನ್ನೂ, ಸ್ಥಳಿಕ ಸ್ಥಿತಿ-ಗತಿಯನ್ನೂ ಅರಿತುಕೊಂಡು ಸುಜ್ಞರಾಗಿ ತಾವು ದೇಶಕಾರ್ಯಕ್ಕನುಗುಣವಾಗಿ ನಡೆದುಕೊಳ್ಳಬೇಕಾಗಿ ಪ್ರಾರ್ಥನೆ ಇದೆ. 'ವೃತ್ತ'ವು ನಿಮ್ಮ ದೇಶೋದ್ಧಾರ ಕಾರ್ಯದ ಸಾಧನವನ್ನಾಗಿ ಮಾಡಿಕೊಳ್ಳಿರೆಂದು ತಮ್ಮೊಡನೆ ಬಿನ್ನೈಸುತ್ತದೆ. ಈ ಬಿನ್ನಹವನ್ನು ಮನ್ನಿಸಿ, ವಾರ್ಷಿಕ ಚಂದಾ ರೂಪಾಯಿ ೩-೮-೦ನ್ನು ಮನಿಆರ್ಡರಿನಿಂದ ರವಾನಿಸಿದರೆ, 'ವೃತ್ತ'ವು ತಮ್ಮೆಡೆಗೆ ನಿಯಮಿತವಾಗಿ ಸೇವೆಯನ್ನರ್ಪಿಸಲು ಸಿದ್ಧವಾಗಿ ಇರುವದು ವ್ಹಿ. ಪಿ. ಯಿಂದ ೪ ಆಣೆ ಹೆಚ್ಚು ಖರ್ಚ ಬರುವದರಿಂದ ತಾವೆಲ್ಲರೂ ಮನಿಆರ್ಡರದ್ವಾರಾ 'ವೃತ್ತ'ದ ಪೋಷಕ ದ್ರವ್ಯ ರೂಪಾಯಿ ೩-೦-೦ ನ್ನು ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ.

ಇತಿ ಮೆನೆಜರ.

— ಹೊಸದೊಂದು ಯಂತ್ರದ ಶೋಧ. ಚಿಕ್ಕ ಬಾಲಕರನ್ನು ಒಂದು ಯಂತ್ರದಲ್ಲಿ ಕೂಡ್ರಿಸಿ ಕೀಲಿ ಕೊಟ್ಟರಾಯಿತು. ಯಂತ್ರವು ಬಾಲಕನ ಮೈತೊಳೆದು ಬಿಡುತ್ತದೆ. ಯಂತ್ರದಲ್ಲಿ ಫೋನೋಗ್ರಾಫಿನ ಹಾಡುಗಳಿರುವದರಿಂದ ಚಿಕ್ಕ ಬಾಲಕರು ಯಂತ್ರದಲ್ಲಿ ಸಂತೋಷದಿಂದ ಹೋಗಿ ಕೂತುಕೊಂಡು ನಿರ್ಮಲರಾಗಿ ಬರುತ್ತಾರೆ!

— ಕಾನಪೂರ ಕಾಂಗ್ರೆಸಿಗೆ ಶ್ರೀಮತಿ ಸರೋಜಿನಿದೇವಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

— ಉಡುಪಿಯ ಅದ್ಮಾರ ಮಠದ ಆನೆಯು ಸದ್ಯಕ್ಕೆ ತೀರಿಕೊಂಡಿತು. ಈ ಆನೆಯು ಲೋಕ ಪ್ರಿಯವಿತ್ತು.

ಕಾನಡಾವೃತ್ತ

ಮಿತಿ ಕ್ರೋಧನ ಸಂ॥ ಭಾದ್ರಪದ ಬ॥ ೧೩ ಸೋಮವಾರ

ಖರ್ಚಿನ ಸ್ವರಾಜ್ಯ!

ಹೊಸ ಲೋಕಲ್ ಬೋರ್ಡುಗಳು.

ಹೊಸ ಲೋಕಲ್ ಬೋರ್ಡುಗಳ ಉಮೇದವಾರರ ನೇಮಣೂಕಿಯ ದಿನಗಳು ಮೊನ್ನೆ ಶನಿವಾರಕ್ಕೆ ಮುಗಿದವು ಉಮೇದವಾರರು ತಮ್ಮ ತಮ್ಮ ಉಮೇದಿಯಂತೆ ಅಲ್ಲಲ್ಲಿಯ ಮತದಾರ ಸಂಘಗಳಿಗೆ ಉಮೇದವಾರರಾಗಿ ನಿಂತಿರುವರು. ಲೋಕಲ್ ಬೋರ್ಡ ಅಂದರೇನು! ಅಲ್ಲಿ ಮಾಡತಕ್ಕ ಕೆಲಸಗಳ್ಯಾವವು? ತಾವೇನು ಮಾಡಬೇಕು? ಏನು ಮಾಡಲಿಕ್ಕೆ ಅಲ್ಲಿ ಅವಕಾಶವಿದೆ? ಎಂಬ ಸಂಗತಿಗಳನ್ನು ಉಮೇದವಾರರು ಅರಿತಿದ್ದರೆ, ಉಮೇದವಾರರ ಗದ್ದಲವು ಈಗ ಕೇಳಿ ಬರುವಷ್ಟು ಸಂಭವಿಸುತ್ತಿದ್ದಿಲ್ಲವೆಂದು ನಮಗ ತೋರುತ್ತದೆ "ನನಗೊಂದು ಖುರ್ಚಿ ಬೇಕು, ತಾಲೂಕಾ ಲೋಕಲ್ ಬೋರ್ಡಿನಲ್ಲಿ ಬೇಕು, ಅಲ್ಲಿ ಸಿಗದಿದ್ದರೆ ಜಿಲ್ಲಾ ಲೋಕಲ್ ಬೋರ್ಡಿನಲ್ಲಿ ಬೇಕು ವಿಧಿಘಟನೆಯಿಂದ ಎರಡರಲ್ಲೂ ಸಿಕ್ಕದರೇನಡ್ಡಿಯಿಲ್ಲ" ಎಂಬ ಆಲೋಚನೆಯಿಂದ ಅನೇಕ ಉಮೇದವಾರರು ತಮ್ಮ ತಮ್ಮ ಉಮೇದಿಯಿಂದ ಉಮೇದವಾರರಾಗಿ ನಿಂತಿರುವರು. ಉಮೇದವಾರರ ಉಮೇದಿಯ ಕುರಿತು ನಮ್ಮ ಆಕ್ಷೇಪವಿಲ್ಲ. ತಮ್ಮ ತಮ್ಮ ದೃಷ್ಟಿಯಂತೆ ಕಂಡ ಮಟ್ಟಿಗೆ ಉಮೇದವಾರರು ಸಾರ್ವಜನಿಕ ಹಿತಕ್ಕಾಗಿ ಉಮೇದಿಯಿಂದ ಮುಂದಾಗಿ ಬಂದಿರುವರು. ಅಜ್ಞಾನದಿಂದ ಅಧಿಕಾರಲೋಲುಪರಾಗಿ ಅವರು ಬಂದರೂ ಕ್ಷಮ್ಯವೇ. ಉಮೇದವಾರರ ಉಮೇದಿಯಿಂದ ಮತದಾರರಿಗೆ ಲಾಭವೂ ಇಲ್ಲ, ಹಾನಿಯೂ ಇಲ್ಲ ಚುನಾವಣೆಯಲ್ಲಿ ಉಮೇದವಾರರು ಆರಿಸಿ ಬರದಿದ್ದರೆ, ಉಮೇದವಾರರ ಇಲೆಕ್ಷನ್ ಉಮೇದಿಯು ಪೂರೈಸಿಕೊಂಡ ಸಮಾಧಾನವಾದರೂ ಸಿಗಲಿಕ್ಕೇನು ಅಡ್ಡಿ ಇಲ್ಲ. ಉಮೇದವಾರರು ಹೆಚ್ಚೆಚ್ಚಾಗಿ ಅಜ್ಞಾನದಿಂದ ಮುಂದಾಗಿ ಬಂದರೂ, ಇಲೆಕ್ಷನದ ಉರಿಯಲ್ಲಿ ಸಿಲುಕಿದ ಕೂಡಲೆ, ಮುಂದೆ ಅವರು ಸುಜ್ಞಾನಿಗಳಾಗುತ್ತಾರೆ ಆದಂತಿರಲಿ.

ಇಲೆಕ್ಷನವು ಈಗ ೧॥ ತಿಂಗಳು ದೂರವಿದೆ. ಉಮೇದವಾರರೆಲ್ಲರೂ ಮತದಾರರಿಗೆ "ಮತಗಳನ್ನು ನನಗೆ ಕೊಡಿರಿ; ನನಗೇನೇ, ಕೊಡಬೇಕು, ಎಲ್ಲ ವೋಟುಗಳನ್ನು ನನಗೇ ಕೊಡಬೇಕು," ಇತ್ಯಾದಿ ಒತ್ತಾಯವನ್ನು ಬಗೆಬಗೆಯಿಂದ ಮಾಡುವರು. "ನಾನು ಜಾತಿಯವನು; ನಾನು ನೆಂಟನು; ನಾನು ಊರವನು. ನಾನು ಇಂಥವನು; ಅಂಥವನು," ಇತ್ಯಾದಿ ಉಪಾಯಗಳಿಂದ ವೋಟುಗಳನ್ನು ಅಪಹರಿಸಲಿಕ್ಕೆ ಉಮೇದವಾರರು ಉಮೇದಿಯನ್ನು ಬಹುಮಟ್ಟಿಗೆ ವೆಚ್ಚಮಾಡುವರು. ಸ್ಥಳಿಕ ಪಕ್ಷಗಳೊಳಗಿನ ಕ್ಷುದ್ರ ಬುದ್ಧಿಯ ಧೂರ್ತ ಮಂದಿಗಳು ದುರುಪದೇಶಮಾಡಿ ವೋಟುಗಳನ್ನು ಸ್ಥಾನಾಂತರ ಮಾಡಲಿಕ್ಕೂ ಯತ್ನಗಳು ನಡೆಯುವವು ಸ್ಥಳಿಕ ಪಕ್ಷಗಳೆಂದು ನಾವು ಮುದ್ದಾಮು ಬರೆದಿರುವೆವು. ರಾಷ್ಟ್ರೀಯ ಪಕ್ಷ ಉದಾರಮತವಾದಿಗಳ ಪಕ್ಷ, ಅಸಹಕಾರಿಗಳ ಪಕ್ಷ, ಸ್ವತಂತ್ರ ಪಕ್ಷ, ಸ್ವರಾಜ್ಯ ಪಕ್ಷ, ರಾಜನಿಷ್ಠ ಪಕ್ಷ ಇತ್ಯಾದಿ ತಾತ್ವಿಕ ಪಕ್ಷಗಳ ಎಳೆದಾಟವು ನಮ್ಮ ಲೋಕಲ್ ಬೋರ್ಡಿನ ಚುನಾವಣೆಯಲ್ಲಿ ದೃಗ್ಗೋಚರವಾಗುವ ಲಕ್ಷಣಗಳು ನಮಗಿನ್ನೂ ತೋರುವದಿಲ್ಲವಾದುದರಿಂದ, ವ್ಯಕ್ತಿಸಾಮರ್ಥ್ಯದಿಂದ, ವ್ಯಕ್ತಿಗಳ ದುರ್ಬುದ್ಧಿಯಿಂದ, ವ್ಯಕ್ತಿಗಳ ಸ್ವಾರ್ಥಸಾಧನಕ್ಕಾಗಿ ತಲೆದೋರಿದ ಪಕ್ಷಗಳ ಉಲ್ಲೇಖ ಮಾತ್ರ ನಾವು ಮಾಡಿರುವೆವು. ಈ ಇಲೆಕ್ಷನಿನಲ್ಲಿ ವಿಶೇಷವಾಗಿ ಈ ಪಕ್ಷಗಳೇ ಅತ್ತಿತ್ತ ನಲಿದಾಡುವವು

ಮತದಾರರೇ, ನೀವೇ ವಿಚಾರ ಮಾಡಿರಿ. ನಂಟ-ಇಷ್ಟ ಮಿತ್ರ-ಜಾತಿ-ಪಕ್ಷ ಇವುಗಳನ್ನೆಲ್ಲ ಸರಿಸಿ ಇಲೆಕ್ಷನಿನಲ್ಲಿ ದಿಙ್ಮೂಢರಾಗಬೇಡಿರಿ. ಇಲೆಕ್ಷನಿನ ಸಾಧ್ಯವನ್ನು ನೋಡಿಕೊಂಡು ಸಾಧನವನ್ನು ಯೋಜಿಸಿರಿ. ನಮ್ಮ ಜಾತಿಯವರಾಗಲಿ ಆಪ್ತರಾಗಲಿ ಲೋಕಲ್ ಬೋರ್ಡಿನ ಕಾರ್ಯಕ್ರಮವನ್ನು ನಮಗೆ ಹಿತವಾಗಿ ನೆರವೇರಿಸಲು ಅಸಮರ್ಥರಾದರೆ, ಲೋಕಲ್ ಬೋರ್ಡಿನಿಂದ ನಮಗೆಂದೂ ಹಿತವಾಗದು. ನಮಗೆ ಸ್ವರಾಜ್ಯ ಸಿಕ್ಕಿದೆ; ಅದೆಂಥ ಸ್ವರಾಜ್ಯ! ಗಂಟು ಕಟ್ಟಿಕೊಳ್ಳುವ ಸ್ವರಾಜ್ಯವಲ್ಲ, ಗಂಟು ಖರ್ಚು ಮಾಡುವ ಸ್ವರಾಜ್ಯ! ಗಂಟು ಖರ್ಚು ಮಾಡಬೇಕಾದರೆ, ಗಂಟನ್ನು ಹುಟ್ಟುವಳಿ ಮಾಡಬೇಕು. ಇದೇ ಈ ಲೋಕಲ್ ಬೋರ್ಡುಗಳ ಮಹತ್ವದ ಕಾರ್ಯವು.

ಹೊಸ ಲೋಕಲ್ ಬೋರ್ಡುಗಳಿಗೆ ಹೊಸ ಅಧಿಕಾರಗಳು ದೊರಕಿವೆ. ಅಧಿಕಾರಗಳೆಂದರೆ, ನಮ್ಮಿಂದ, ಬಡ ಪ್ರಜೆಗಳಿಂದ ಹಣವನ್ನು ಒಟ್ಟುಹಾಕುವದು. ಆಳರಸರು ಎಲ್ಲ ತರದಿಂದಲೂ ಕರಗಳನ್ನು ಹೇರಿ ಈ ಮೊದಲೇ ಹಣವನ್ನು ಒಟ್ಟುಮಾಡಿಕೊಂಡಿರುವರು. ಇನ್ನೂ ಹೊಸ ಹೊಸ ಕರಗಳನ್ನು ಎತ್ತುವಳಿ ಮಾಡಹತ್ತಿದರೆ, ಪ್ರಜಾಕ್ಷೋಭವಾಗುವ ಭಯದಿಂದ

ಪ್ರಜಾಪ್ರತಿನಿಧಿಗಳ ಮೇಲೆಯೇ ಪ್ರಜಾಕ್ಷೋಭದ ಜವಾಬದಾರಿಯನ್ನು ಹೇರಿಹಾಕಿ, ಅವರು ಅಲಿಪ್ತರಾಗಿರುವರು. ಇಂಥ ಪ್ರಸಕ್ತಿಯಲ್ಲಿ ನಾವೇನು ಮಾಡಬೇಕು!

ಲೋಕಲ್ ಬೋರ್ಡುಗಳು ಖರ್ಚಿನ ಸ್ವರಾಜ್ಯವೆಂದು ಮತದಾರರು ಗ್ರಹಿಸಬೇಕು. ಲೋಕಲ್ ಬೋರ್ಡಿನ ಹೊಸ ಕಾಯಿದೆಯಂತೆ ಲೋಕಲ್ ಬೋರ್ಡ ಕ್ಷೇತ್ರವನ್ನು ದೇವೇಂದ್ರ ಲೋಕವನ್ನಾಗಿ ಏರ್ಪಡಿಸಲು, ಹಣ ದೊರೆತರೆ, ಹಾಗೆ ಮಾಡುವ ಅಧಿಕಾರವು ಲೋಕಲ್ ಬೋರ್ಡಿಗೆ ದೊರೆತಿದೆ. ಕುಬೇರನು ಹಣ ಕೊಟ್ಟರೆ ಹೊಸ ಕಾಯಿದೆಯಂತೆ ಕಾನಡಾ ಜಿಲ್ಹೆಯನ್ನು ಶೃಂಗರಿಸಲಿಕ್ಕೇನು ಅಡ್ಡಿ ಇಲ್ಲ; ಹಣ ದೊರೆಯದಿದ್ದರೆ ಮಾತ್ರ ಗೊಂದಲವಿದೆ. ಇದ್ದ ಸ್ಥಿತಿಯನ್ನು ಕಾಪಾಡಿಕೊಳ್ಳುವದು ಕಠಿಣವು. ಸರಕಾರವು ಈಗ ಲೋಕಲ್ ಬೋರ್ಡಿನ ಕ್ಷೇತ್ರದಲ್ಲಿ ಅಂದರೆ, ನಮ್ಮ ಕಾನಡಾ ಜಿಲ್ಹೆಯಲ್ಲಿ ಲೋಕಲ್ ಬೋರ್ಡಿಗೆ ವಹಿಸಿಕೊಟ್ಟ ಖಾತೆಗಳಿಗಾಗಿ ವೆಚ್ಚ ಮಾಡುವಷ್ಟು ಹಣವನ್ನು ಸಹ ಕೊಡಲಿಕ್ಕಿಲ್ಲ. ಅದರಿಂದ ಇದ್ದ ಸ್ಥಿತಿಯನ್ನು ಕಾಪಾಡುವ ಜವಾಬದಾರಿಯು, ಅದಕ್ಕಾಗಿ ಹೊಸ ಹೊಸ ಕರಗಳನ್ನು ಹೇರುವ ಜವಾಬದಾರಿಯು ಉಮೇದಿಯ ಉಮೇದವಾರರ ಮೇಲಿದೆ. ಮತದಾರರೇ, ಇದನ್ನು ಚನ್ನಾಗಿ ಲಕ್ಷದಲ್ಲಿಟ್ಟು ವರ್ತಿಸಿರಿ.

ಉಮೇದವಾರರು ಮತ ಬೇಡಬಂದಾಗ, ಅವರ ಪಾತ್ರಾಪಾತ್ರತೆಯನ್ನು ಚನ್ನಾಗಿ ವಿಮರ್ಶಿಸಿ ನೀವು ಮತದಾನ ವಚನವನ್ನೀಯಬೇಕು. ಖರ್ಚಿನ ಸ್ವರಾಜ್ಯದಿಂದ ನಮ್ಮ ಕಲ್ಯಾಣವಾಗದಿದ್ದರೆ ಅಡ್ಡಿಯಿಲ್ಲ. ಈಗ ಇದ್ದಷ್ಟು ಕಲ್ಯಾಣವು ಖರ್ಚಿನ ಸ್ವರಾಜ್ಯದಲ್ಲಿ ಹೆಚ್ಚು ಕರದ ಹೊರೆ ಬೀಳದೆ ಕಾಪಾಡಿಕೊಂಡರೂ ಅದೊಂದು ಇಷ್ಟವೇ. ಸರಕಾರವು ಈಗ ಲೋಕಲ್ ಬೋರ್ಡುಗಳಿಗೆ ಅರ್ಧ ಖರ್ಚು ಕೊಡಬೇಕೋ! [೩?] ಖರ್ಚು ಕೊಡಬೇಕೋ? ಎಂದು ಆಲೋಚಿಸುತ್ತಿರುವದಂತೆ ಈಗ ಸಿಗುವ ಖರ್ಚು [೩?]ಕ್ಕಿಂತ ಹೆಚ್ಚು ಇದ್ದು, ಪ್ರಜೆಗಳು ಒಂದೆರಡಾಂಕ ಮತ್ತು ಎರಡು ಮೂರಾಂಕಗಳ ಒಡದಾಟದೊಳಗ ಏನಾದರೂ ವ್ಯವಸ್ಥೆಯಾದರೂ, ಯಾಗದಿದ್ದರೂ ಸರಕಾರಕ್ಕೆ ಲಾಭವೇ; ಪ್ರಜೆಗಳಿಗೆ ಹಾನಿಯೇ. ಯಾಕಂದರೆ [೩?]ಕ್ಕೆ ಮಿಕ್ಕಿದ ಹಣವನ್ನು ಈಗ ಹೊಸ ಕರಗಳನ್ನು ಹೇರಿಕೊಂಡು ಪ್ರಜೆಗಳು ತೆರಬೇಕಲ್ಲವೇ? ಉಮೇದವಾರರು ಹೊಸ ಕರಗಳನ್ನೆತ್ತದೆ ಸರಕಾರದೊಡನೆ ಜಗಳಾಟ ನಡಿಸಿ, ಖರ್ಚಿನ ಹೊರೆಗಳನ್ನು ಆದಷ್ಟು ಹೊರಿಸಕೊಳ್ಳದಿದ್ದವರನ್ನು ನೋಡಿ ಆರಿಸಿಕೊಡಬೇಕು. ಉಮೇದವಾರರು ಸವಿ ಸವಿ ವಚನಗಳನ್ನು ಕೊಡಬಹುದು ಆದರೆ, ವಚನಗಳನ್ನು ಪಾರಗಾಣಿಸುವ ಸಾಮರ್ಥ್ಯವಿರುವ ಉಮೇದವಾರರನ್ನು ನೋಡಿ ಆರಿಸಿ ಕಳುಹಿಸಬೇಕು. ಇಲ್ಲದಿದ್ದರೆ, ಉಮೇದವಾರರ ಉಮೇದಿಯೇ ಪ್ರಜೆಗಳ ಬೆನ್ನಟ್ಟಿ ಸಾಕುಬೇಕು ಮಾಡುವದು. "ಹಣವಿರುವದಿಲ್ಲಾದರೆ, ಹೊಸ ಕರಗಳನ್ನೆತ್ತಿಬಿಡುವ;" ಎಂಬಂತೆ, ಪರಿವೆಯಿಲ್ಲದೆ, ಮತದಾರರ ಸ್ಥಿತಿಗತಿಯನ್ನು ವಿಚಾರಿಸದೆ ವರ್ತಿಸುವ ಉಮೇದವಾರರು ಜಾತಿಯವರಿದ್ದರೂ, ಇಷ್ಟಮಿತ್ರರಿದ್ದರೂ ಅವರಿಗೆ ಆರಿಸಿಕೊಡದೆ, ಸ್ವತಂತ್ರ ಬುದ್ಧಿಯ ಆಳರಸರೊಡನೆ ಯುಕ್ತಿವಾದ ಮಾಡಬಲ್ಲಂಥ ಕುಯುಕ್ತಿಗೆ ಪ್ರತಿ ಕುಯುಕ್ತಿಗಳನ್ನು ಯೋಜಿಸುವ ದಕ್ಷ ಉಮೇದವಾರರನ್ನೇ, ಮತದಾರರೇ, ನೀವು ಆರಿಸಿ ಕೊಡಬೇಕು. ಅಜಾಗ್ರತೆ ಮಾಡಿದರೆ, ದಿಙ್ಮೂಢರಾದರೆ ನಿಮ್ಮ ಕೈಯಿಂದ ನೀವೇ ನಿಮ್ಮ ಕೊರಳು ಕೊಯ್ದುಕೊಂಡಂತಾಗುವದಲ್ಲವೆ? ಈ ಆಲೋಚನೆಯಿಂದಲೇ ಆಳರಸರು ಖರ್ಚಿನ ಸ್ವರಾಜ್ಯವನ್ನು ಅರ್ಪಿಸುವರೆಂದು ನೆನಪಿನಲ್ಲಿಟ್ಟುಕೊಂಡು, ಸಮರ್ಥ ಉಮೇದವಾರರನ್ನೇ ಆರಿಸಿ ಕಳುಹಿಸಿರಿ. ಇಷ್ಟೇ ನಮ್ಮ ಹೇಳಿಕೆ.

ಸ್ಫುಟ ಸೂಚನೆಗಳು.

೧. ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸ್ವರಾಜ್ಯ ಪಕ್ಷದವರೂ, ಸ್ವತಂತ್ರರೂ ಒಕ್ಕಟ್ಟಾಗಿ ಆಳರಸರನ್ನು ಪುನಃ ಸೋಲಿಸಿರುವರು. ಮೊಂಟೆಗ್ಯೂ ಸ್ವರಾಜ್ಯವನ್ನು ತಿದ್ದುಪಡಿ ಮಾಡಲು ಸರಕಾರವು ನೇಮಿಸಿದ ಕಮಿಟಿಯವರು ಬಹುಮತದಿಂದ ಮಾಡಿದ ಶಿಫಾರಸುಗಳನ್ನು ವರಿಷ್ಠ ಕಾಯಿದೆ ಕೌನ್ಸಿಲು ಮಂಜೂರು ಮಾಡಬೇಕೆಂದು ಸರಕಾರದ ತರ್ಫೆನಿಂದ ಸರ್ ಅಲೆಕ್ಝಾಂಡರ ಮುಡಿಮನ್‌ರವರು ಕಳೆದ ಸೋಮವಾರ ತಾ. ೭ ನೇಗ ಸೂಚಿಸಲು, ಅದಕ್ಕೆದಿರಾಗಿ ಪಂಡಿತ ಮೋತೀಲಾಲ ನೆಹರೂರವರು ಉಪಸೂಚನೆಯನ್ನು ಸೂಚಿಸಿ ಮಂಜೂರು ಮಾಡಿಕೊಂಡರು. ಉಪಸೂಚನೆಯಲ್ಲಿ ರಾಜ್ಯಘಟನೆಗೆ ಮೂಲತತ್ವಗಳನ್ನು ಸಾರ್ವಭೌಮ ಸರಕಾರವು ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಜಾಹೀರು ಮಾಡಬೇಕೆಂದು ಲೋಕಪಕ್ಷದವರು ಶಿಫಾರಸು ಮಾಡಿರುವರು. ಭಾರತೀಯ ಸರಕಾರದ ಸ್ಥಿರ ಸೊತ್ತಿನ ಯಜಮಾನರು ಈಗಿನಂತೆ ಭಾರತ ಮಂತ್ರಿಗಳಿರಬಾರದು; ಸರ್ವಾಧಿಕಾರಿಗಳು ಸರಕಾರದ ಸರ್ವಸ್ವದ ಸರ್ವಾಧಿಪತಿಗಳಾಗಬೇಕು. ಸರ್ವಾಧಿಪತಿಗಳು ಪ್ರಜಾಪ್ರತಿನಿಧಿ ಸಂಸ್ಥೆಗಳಿಗೆ ಅಧೀನರಾಗಿದ್ದು, ಆ ಸಂಸ್ಥೆಗಳ ಮತದಂತೆ, ಸರಕಾರಿ ಹಣವನ್ನು ವೆಚ್ಚ ಮಾಡಬೇಕು. ಭಾರತ ಮಂತ್ರಿಗಳಿಗೆ ಅಸಾಮಾನ್ಯ ಪ್ರಸಂಗಗಳಲ್ಲಿ ಹಣವನ್ನು ಉಪಯೋಗಿಸಲು ಅಧಿಕಾರವಿರಬೇಕು. ಭಾರತ ಮಂತ್ರಿಗಳ ಆಲೋಚನಾ ಮಂಡಲವನ್ನು ಕಿತ್ತೊಗೆಯಬೇಕು. ಭಾರತ ಮಂತ್ರಿಗಳು ಸ್ವತಂತ್ರ ಸಾಮ್ರಾಜ್ಯ ಘಟಕಗಳ ಮಂತ್ರಿಗಳಂತೆ ಇರಬೇಕು. ವರಿಷ್ಠ ಕಾಯಿದೆ ಕೌನ್ಸಿಲು ಹಾಗು ಪ್ರಾಂತಿಕ ಕಾಯಿದೆ ಕೌನ್ಸಿಲುಗಳ ಸಭಾಸದರನ್ನು ಸಂಪೂರ್ಣವಾಗಿ ಪ್ರತಿನಿಧಿಗಳಿಂದ ಆರಿಸಿ ತೆಗೆಯಬೇಕು. ವರಿಷ್ಠ ಕಾಯಿದೆ ಕೌನ್ಸಿಲಿಗೆ ಸರಕಾರವು ಸಂಪೂರ್ಣವಾಗಿ ಸರ್ವ ವಿಷಯಗಳಲ್ಲಿಯೂ ಅಧೀನವಾಗಿರಬೇಕು. ಸೈನ್ಯವನ್ನು ಸಂಪೂರ್ಣವಾಗಿ ರಾಷ್ಟ್ರೀಯವಾಗಿ ಪರಿಣಮಿಸಬೇಕು. ಈ ಮೂಲತತ್ವಗಳಿಗನುಗುಣವಾಗಿ ಭರತ ಖಂಡದೊಳಗಿನ ಪ್ರಮುಖರ ಸಭೆ ಸೇರಿಸಿ ಘಟನೆಯನ್ನು ತಯಾರಿಸಬೇಕು.

೨. ಪಂಡಿತ ಮೋತೀಲಾಲ ನೆಹರೂರವರು ಈ ಉಪಸೂಚನೆಯನ್ನು ಲೋಕಪಕ್ಷದ ಸಭಾಸದರೊಡನೆ ಚರ್ಚಿಸಿ, ಐಕ್ಯಮತ್ಯದಿಂದ ಸೂಚಿಸಿದ್ದರು. ಪಂಡಿತ ನೆಹರುರವರ ಭಾಷಣವು ಅಪ್ರತಿಮವಾಯಿತು. ಮೋತೀಲಾಲರು ಮೊಂಟೆಗ್ಯೂ ಸ್ವರಾಜ್ಯ ಕಾಯಿದೆಯನ್ನು ಅನುಷ್ಠಾನದಲ್ಲಿ ತರುವದು ಅಸಾಧ್ಯವೆಂದು ಸ್ವತಃ ಸರ್ ಅಲೆಕ್ಝಾಂಡರ ಮುಡಿಮನ್‌ರವರೇ ಅಭಿಪ್ರಾಯಪಟ್ಟಿರುವರೆಂದು ಹೇಳಿ, ಸ್ವಾಯತ್ತತೆಯ ತತ್ವದ ಮೇಲೆ ರಾಜ್ಯಘಟನೆಯನ್ನೇರ್ಪಡಿಸಬೇಕೆಂದು ಪ್ರತಿಪಾದಿಸಿದರು. ಲೋಕನಿಯುಕ್ತ ಸಭಾಸದರು ಈ ತಮ್ಮ ತರಾವಿನ ಒಕ್ಕಣಿಕೆಯನ್ನು ತಯಾರಿಸುವಾಗ ಸಂಪೂರ್ಣ ಜವಾಬದಾರಿಯನ್ನು ಅರಿತುಕೊಂಡು ಯೋಜನೆಯನ್ನು ತಯಾರಿಸಿರುವರೆಂದು ಹೇಳಿ, ಇದನ್ನು ಮತ್ತೆ ಕುಗ್ಗಿಸುವದು ಅಸಾಧ್ಯವೆಂದು ಸ್ಪಷ್ಟವಾಗಿ ಹೇಳಿದರು. ಸರಕಾರವು ತಮ್ಮದೇ ಹಟ ಹಿಡಿದು ಬ್ರಿಟಿಶ ಪಾರ್ಲಿಮೆಂಟೇ ಭರತಖಂಡದ ಭವಿತವ್ಯತೆಯನ್ನು ನಿರ್ಣಯಿಸಬೇಕೆಂದು ಸಿದ್ಧಾಂತ ಹೂಡಿದರೆ, ಅದನ್ನು [ಅಳಿಗಳೆಯಲು?] ಬೇಕಾದಷ್ಟು ಕಷ್ಟಗಳನ್ನು ಸಹಿಸಲು ಪ್ರಜೆಗಳು ತಯಾರಿರುವರೆಂದು ನೆಹರೂರವರು ಸಾರಿ ಹೇಳಿದರು. ನಮ್ಮ ಧ್ಯೇಯದಂತೆ, ಬ್ರಿಟಿಶ ಪಾರ್ಲಿಮೆಂಟು ಅನುಕೂಲವಾಗಿ ನಡೆದು ದೇಶೋದ್ಧಾರ ಮಾರ್ಗದಲ್ಲಿ ನೆರವಾದರೆ, ಅಧಿಕಾರಿಗಳು ಸಂತೋಷದಿಂದ ಸಹಕಾರವನ್ನೀಯುವರೆಂದೂ, ವಿಪರೀತ ಬುದ್ಧಿಯನ್ನು ತಳೆದು ವಿರೋಧಿಸಿದರೆ, ಭಾರತೀಯರು ತಮ್ಮ ಹಕ್ಕುಗಳನ್ನು ಸಂಪಾದಿಸಿಕೊಳ್ಳುವರೆಂದೂ ಹೇಳಿ, ಬ್ರಿಟಿಶರು ಯುಕ್ತ ಕಂಡಂತೆ ವರ್ತಿಸಬೇಕಾಗಿ ಆಗ್ರಹಪೂರ್ವಕವಾಗಿ ಬಿನ್ನೈಸಿದರು. ಸ್ವರಾಜ್ಯ ಪಕ್ಷದವರೂ ಪಂಡಿತ ಮೋತೀಲಾಲರವರ ಸೂಚನೆಯನ್ನೇ ಹುರುಪಿನಿಂದ ಎತ್ತಿಹಿಡಿದರು. ಕೊನೆಗೆ, ಮತ ಎಣಿಕೆಯಾಗಲು, ೭೨ ಮತಗಳು ಅನುಕೂಲ, ೪೫ ಮತಗಳು ಪ್ರತಿಕೂಲ ಬಿದ್ದು ತರಾವು ಬಹುಮತದಿಂದ ಮಂಜೂರಾಗಿದೆ. ಸಾರ್ವಭೌಮ ಸರಕಾರವು ವರಿಷ್ಠ ಕಾಯಿದೆ ಕೌನ್ಸಿಲಿನ ರಾಷ್ಟ್ರೀಯ ಬೇಡಿಕೆಯನ್ನು ಮನ್ನಿಸಿ ರಾಷ್ಟ್ರೀಯ ಪ್ರತಿನಿಧಿಗಳಿಗೆ ಸ್ವಾಭಿಮಾನಪೂರ್ವಕ ಅವರ [illegible] ದೇಶೋದ್ಧಾರದ ಕಾರ್ಯದಲ್ಲಿ ನೆರವಾಗಲು ಇಂಬುಕೊಟ್ಟರೆ, ಬ್ರಿಟಿಶ ರಾಷ್ಟ್ರಕ್ಕೂ ಹಿತ; ಭರತಖಂಡಕ್ಕಂತೂ ಹಿತವೇ.

೩. ವರಿಷ್ಠ ಕಾಯಿದೆ ಕೌನ್ಸಿಲಿನ ಬುಧವಾರ ತಾ. ೯ ನೇ ಅಧಿವೇಶನದಲ್ಲಿ ಶ್ರೀ| ರಂಗಾಚಾರ್ಯರು ಮಹತ್ವದ ಕಾಯಿದೆಯನ್ನೊಂದು ಮಂಜೂರು ಮಾಡಿಕೊಂಡಿರುವರು. ಈಗಿನಂತೆ, ಸೈನ್ಯಾಧಿಕಾರಿಗಳು ದೊಂಬಿಯ ನೆವಮಾಡಿ ಗುಂಡು ಹಾರಿಸುವದು ಪ್ರಜಾಹಿತವಿಘಾತಕವೆಂದು ಶ್ರೀ| ರಂಗಾಚಾರ್ಯರು ಅಭಿಪ್ರಾಯಪಟ್ಟು, ಗುಂಡು ಹಾರಿಸುವ ಕ್ರಮವನ್ನು ಕಾಯಿದೆಯಿಂದ ನಿಶ್ಚಯಿಸಬೇಕೆಂದು ಹೇಳಿ, ಕಾಯಿದೆಯನ್ನು ತಯಾರಿಸಿದರು. ಗುಂಡು ಹಾರಿಸುವ ಮುಂಚೆ ಜನಸ್ತೋಮಕ್ಕೆ ಚದರಿಹೋಗಲು ಮುಂ

ಜಾಗ್ರತೆಯ ನ್ನೀಯಬೇಕು, ನಿರುಪಾಯವಾದರೆ ಮಾತ್ರ ಗುಂಡು ಹಾರಿಸಬೇಕು, ನ್ಯಾಯಾಧಿಕಾರಿಗಳ ಪರವಾನಿಗೆಯಿಲ್ಲದೆ ಗುಂಡು ಹಾಕಿ ಪ್ರಜೆಗಳಿಗೆ ನಷ್ಟಪಡಿಸಿದರೆ, ಸೈನ್ಯಾಧಿಕಾರಿಗಳ ಮೇಲೆ ದಿವಾಣಿ ಕೋರ್ಟಿನ ಮೊಕದ್ದಮೆ ನಡಿಸಲು ಪ್ರಜೆಗಳಿಗೆ ಅಧಿಕಾರವಿರಬೇಕು. ಹಿಂದುಸ್ಥಾನದೊಳಗಿನ ಜನಸ್ತೋಮದಲ್ಲಿ ದೊಣ್ಣೆಯ ಹೊರ್ತು ಇತರೆ ಶಸ್ತ್ರಗಳು ಇರುವದಿಲ್ಲೆಂದು ಶ್ರೀ। ರಂಗಾಚಾರ್ಯರು ಪ್ರತಿಪಾದಿಸಿ, ತಮ್ಮ ಕಾಯಿದೆಯು ಮಂಜೂರ್ ನಾದರೆ ಹೇಳಿದರು ಸರಕಾರದವರು ವಿರೋಧಿಸಿದರೂ, ಕಾಯಿದೆಯು ಮಂಜೂರಾಗಿದೆ ಇನ್ನು ಮುಂದೆ ಜನಸ್ತೋಮದ ಮೇಲೆ ಗುಂಡು ಹಾಕುವ ಪೂರ್ವದಲ್ಲಿ ಸೈನಿಕರು ಜಾಗ್ರತೆಯನ್ನು ಕೊಂಡು ನಡೆದರೆ, ಪ್ರಜೆಗಳ ಮೇಲೊಂದು ಉಪಕಾರವಾಗುವದು. ಇದಕ್ಕೂ ಮೀರಿದರೆ, ಪ್ರಜೆಗಳ ಕೈಯಲ್ಲಿ ಕಸ್ತ್ರ ವಿದ್ದಷ್ಟೇ ಅದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಮೋಘರಾಜನು ಘಕ್ಕನೆ ಹಿಂಜರಿದನು. ಬಿಸಿಲು ಕಾಯುತ್ತದೆ. ರಾತ್ರೆ ಮಂಜು ಬೀಳಲಿಕ್ಕೆ ಪ್ರಾರಂಭ ಪೈರಿಗೆ ಇನ್ನೂ ನೀರ ಒದಲಿಲ್ಲ. ಒಕ್ಕಲಿಗರು ಚಿಂತಾಕ್ರಾಂತರಾಗಿದ್ದಾರೆ. ಈ ವಾರದಲ್ಲಿ ಮಳೆ ೦ ೭೯ ಇಂಚು, ಈ ವರೆಗೆ ಅಂತು ೧೩೪—೯೩ ಇಂಚು ಮಳೆಯಾಯಿತು.

ಮುಂಬಯಿಯ ಕಿಲಿಕ್ ನಿಕ್ಸನ್ ಕಂಪನಿಯ ಉಗಿಹಡಗವು ನಿನ್ನೆ ೧೦ ಘಂಟೆಗೆ ಬಂದು ಮುಟ್ಟಿತು. ಸಾಮಾನು ಇಳಿದದ್ದು ವಿಶೇಷವಾಗಿ ಮೋರೀಸ ಸಕ್ಕರೆ ಹಾಗು ಚಹಾ ಡಬ್ಬೆ"

ಇಲ್ಲಿಯ ಪೋಲೀಸಿನವರು ಒಂದು ಜುಗಾರ ಮಂಡವನ್ನು ಹೆರವಟ್ಟೆಯಲ್ಲಿ ಹಿಡಿದರು. ವಿಚಾರಣೆ ನಡೆದದೆ.

ಕಡೆಕೋಡಿ, ಕಲಬಾಗ ಮುಂತಾದ ಗ್ರಾಮದವರು ಮತದಾನದ ರಾಜ್ಯದನ್ನ, ಮೇವಗಿರಿಯಲ್ಲಿ ಡಬೇಕಾಗಿ ಕಲೆಕ್ಟರರಿಗೆ ಮಾಡಿಕೊಂಡ ಅರ್ಜಿಗೆ ಕಲೆಕ್ಟರರವರು ಮತದಾನದ ಠಾಣ್ಯಗಳು ಈ ಮೊದಲೇ ಜಾಹೀರಾಗಿರುವದರಿಂದ ಈಗ ಬದಲು ಮಾಡಲಿಕ್ಕೆ ಬರುವದಿಲ್ಲವಾಗಿ ತಿಳಿಸಿರುವರು

ಈ ತಾಲೂಕಿನ ತರ್ಫೆನಿಂದ ಜಿಲ್ಲಾ ಲೋಕಲ್ ಬೋರ್ಡಿಗೆ ನಿಂತ ಉಮೇದವಾರರು—ಶ್ರೀ। ಮಹಾಬಲೇಶ್ವರ ಗಣಪತಿ ಭಟ್ಟ ಗೋಪಿ, ಗಣೇಶ ಗಣಪತಿ ಶಾಸ್ತ್ರಿ, ಜನಾರ್ಧನ ಶಿವ ಪಂಡಿತ, ರಾಮಕೃಷ್ಣ ಲಕ್ಷ್ಮೀನಾರಾಯಣ ಹೆಗಡೆ ತಾಲೂಕಾ ಲೋಕಲ್ ಬೋರ್ಡಿಗೆ ನಿಂತ ಉಮೇದವಾರರು—(ಕುಮಟಾ ಗ್ರೂಪ) ರಾ। ಪುಂಡಲೀಕ ಶೇಷಗಿರಿ ಶ್ಯಾನಭಾಗ, ಮಲ್ಲಾರಪ್ಪ ಬಸ್ತಯ್ಯ ಪೈ, (ಹೊಲನಗದ್ದೆ ಗ್ರೂಪ) ರಾ। ಮಾಧವ ಗಣಪಯ್ಯಾ ಶ್ಯಾನಭಾಗ, ಮಹಾದೇವ ತಿಂಬುರ ಭಟ್ಟ, ಪರಮೇಶ್ವರ ಶಿವರಾಮ ಹೆಗಡೆ, ರಾಮಕೃಷ್ಣ ಲಕ್ಷ್ಮೀನಾರಾಯಣ ಹೆಗಡೆ, ಗೋಪಾಲಕೃಷ್ಣ ಕುಪ್ಪ ಹೆಗಡೆ (ಮಾದನಗೇರಿ ಗ್ರೂಪ) ರಾ। ಹಮ್ಮಣ್ಣಾ ಸಂಣಪ್ಪ ನಾೈಕ, ಬೊಮ್ಮಯ್ಯಾ ಉದ್ದಂಡ ಗಾಂವಕಾರ, (ಗೋಕರ್ಣ ಗ್ರೂಪ) ರಾ। ಸೀತಾರಾಮ ಗಣಪತಿ ಭಾಗವತ, ಕೃಷ್ಣ ನಾರಾಯಣ ಭಟ್ಟ, ಗಣೇಶ ನರಸಿಂಹ ಭಟ್ಟ, ಸೀತಾರಾಮ ವಿಘ್ನೇಶ್ವರ ಭಟ್ಟ ಭಡತಿ, (ಮಿರ್ಜಾನ ಗ್ರೂಪ) ರಾ। ನಾಗೇಶ ಸೂರೋಜಾ ವಿ ರ್ಜಾನಕರ, ಶ್ರೀಧರ ಭಗವಂತ ಶ್ಯಾನಭಾಗ, ಸುಬ್ರಾಯ ಈಶ್ವರ ಹೆಗಡೆ, (ಊಟಿನ ಪಟ್ಟಣ ಗ್ರೂಪ) ರಾ। ವಿಶ್ವೇಶ್ವರ ತಿಮ್ಮಣ್ಣ ಹೆಗಡೆ, ಪರಮೇಶ್ವರ ಕೃಷ್ಣ ಭಟ್ಟ, ಜನಾರ್ದನ ವೆಂಕಟ ನಾೈಕ, (ಕೂಜಳ್ಳಿ ಗ್ರೂಪ) ರಾ। ರಾಮಚಂದ್ರ ಶ್ರೀನಿವಾಸ ಪೈ, ಗೋಪಾಲಕೃಷ್ಣ ರಾಮಕೃಷ್ಣ ಭಟ್ಟ, ಗಂಗಾಧರ ಗಣಪಯ್ಯ ಶ್ಯಾನಭಾಗ ರಾಮಭಟ್ಟ ಗಣಪಭಟ್ಟ, ಶಂಕರ ಪರಮಯ್ಯ ಹೆಗಡೆ, ಸುಬ್ರಾಯ ವೆಂಕಟರಮಣ ಭಟ್ಟ

ಸಾಭಾರ ಸ್ವೀಕಾರ

ಜಯಕರ್ನಾಟಕ— ಭಾದ್ರಪದ ಮಾಸದ ಸಂಚಿಕೆ ಸಂಪಾದಕ ಮತ್ತು ಪ್ರಕಾಶಕ—ಶ್ರೀ। ವೆಂಕಟರಾವ ಆಲೂರ, ಧಾರವಾಡ ವಾರ್ಷಿಕ ಚಂದಾ ರೂಪಾಯಿ ೩ ೦ ೦

ಸ್ವಧರ್ಮ— ಭಾದ್ರಪದ ಮಾಸದ ಸಂಚಿಕೆ. ಸಂಪಾದಕ—ಶ್ರೀ। ಸು... ಎಮ್ ಎ, ಕರ್ನಾಟಕ ಮಹಾ ವಿದ್ಯಾಲಯ, ಧಾರವಾಡ ವಾರ್ಷಿಕ ಚಂದಾ ರೂ ೨—೦—೦

ವಾಗ್ಭೂಷಣ— ಆಗಸ್ಟ ತಿಂಗಳ ಸಂಚಿಕೆ. ಸಂಪಾದಕ—ಶ್ರೀ ಎಸ್ ಎಸ್ ಬಸವನಾಳ ಎಮ್ ಎ, ಪ್ರಕಾಶಕ—ಶ್ರೀ। ಕೇ ಬಿ. ಅಂಗಲಗಿ, ಚಾಮುಂಡಿ ಮಂದಿರ, ಧಾರವಾಡ. ವಾರ್ಷಿಕ ಚಂದಾ ರೂಪಾಯಿ ೩ ೦

The Volunteer—Monthly. September issue Edited and published by Dr. N S Hardiker, at the "VOLUNTEER" office, Hubli Annual subscription Rs 3—0—0 only.

ಕಾರವಾರ— ಶ್ರೀ। ದತ್ತಾತ್ರಯ ರಾಮಚಂದ್ರ ಕಸಬೇಕರ, ಕಾರವಾರ, ಜನಾರ್ದನ ಪುರುಷೋತ್ತಮ ಸಾವಕಾರ, ಸುಂಕೇರಿ, ಗೋವಿಂದ ನಾಗೇಶ ನಾಯ್ಕ ಸುಂಕೇರಿ, ವೆಂಕಟೇಶ ಅಪ್ಪಾಜಿ ಕುಸ್ತೆಕರ, ಸದಾಶಿವಗಡ, ನೀಲಕಂಠ ವಿಷ್ಣು ವಾಗಳೆ, ಅಸನೋಟಿ, ಸೀತಾರಾಮ ಸುಬ್ರಾಯ ಶೆಟ್ಟಿ, ಚೆಂಡಿಯ ಇವರು ತಾಲೂಕಾ ಲೋಕಲ್ ಬೋರ್ಡಿಗೆ ಕೊಂಗ್ರೆಸ ತರ್ಫೆನ ಉಮೇದವಾರರಾಗಿಯೂ ಶ್ರೀ। ಗಣಪತಿ ಸದಾಶಿವ ಸಾತಿಕರ್ ಸುಬ್ರಾವ ರಾಮಚಂದ್ರ ತುಂದೀಪುರ ಇವರು ಜಿಲ್ಲಾ ಲೋಕಲ್ ಬೋರ್ಡಿಗೆ ಉಮೇದವಾರರಾಗಿಯೂ ನಿಂತಿರುವರು

ಯಾತ್ರಸ್ಥರಾದ ಬಡೋದೆಯ ಮಹಾರಾಣಿಯ ವರಾಡ ಸೌ। ಚಿಮಣಾಬಾಯಿ ಸಾಹೇಬ ಗಾಯಕವಾಡರವರು ಗೋಕರ್ಣದಿಂದ ಇಲ್ಲಿ ಬಂದು, ಗೋವಾ ಮಾರ್ಗವಾಗಿ ಮುಂದೆ ತೆರಳಿದರು. ಮಹಾರಾಣಿಯವರು ಇಲ್ಲಿಯ ಕಲೆಕ್ಟರ ಮಿ। ಭಿಡೇಯವರ ಬಂಗಲೆಯಲ್ಲಿ ಮುಕ್ಕಾಮು ಮಾಡಿದ್ದರು.

ರಾ। ಮಂಜುನಾಥ ವಿಠ್ಠಲ ಶ್ಯಾಣಿಕ ಮೊದಲಾದ ನಾಲ್ವರು ಮಿತ್ರಸಮಾಜ ಸಭಾ ಮಂದಿರದಲ್ಲಿ ಸರ್ ರಾಮಕೃಷ್ಣ ಗೋಪಾಲ ಭಾಂಡಾರಕರರವರ ನಿಧನದ ಬಗ್ಗೆ ತಾ. ೧೩ ನೇಗೆ ದುಃಖ ಪ್ರದರ್ಶಕ ಸಭೆಯನ್ನು ಸೇರಿಸುವವರಿದ್ದರು

ಮುಂಡಗೋಡ— ಇಲ್ಲಿಯ ಪ್ರಾಥಮಿಕ ಶಿಕ್ಷಣಹಿತೇಚ್ಛುಗಳೊಬ್ಬರು ಬರೆಯುವದೇನಂದರೆ:—ಇಲ್ಲಿಯ ಕನ್ನಡ ಶಾಲೆಯಲ್ಲಿ ಶಿಕ್ಷಕರು ಹೊತ್ತಿಗೆ ಸರಿಯಾಗಿ ಬರದೆ, ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಶಾಲೆಯ ಪಂಚರು ಲಕ್ಷ್ಯ ಕೊಡುವದಿಲ್ಲ. ವಿದ್ಯಾಧಿಕಾರಿಗಳು ಇತ್ತ ಲಕ್ಷ ಕೊಡಬೇಕು.

ಶಿರ್ಶಿ— ನಮ್ಮ ವರದಿಗಾರರೊಬ್ಬರು ತಾರೀಖ ೫ ೯ ೩೫ ನೇಗೆ ಬರೆದು ತಿಳಿಸುವದೇನಂದರೆ:—ನಗರದ ಮಾರ್ಗತೆಮ್ಮಾ ಎಂಬವಳಿಗೆ ೯ ತಿಂಗಳಾಗಿ ಪ್ರಸೂತ ವೇದನವಾದ ಸಂಗ್ತಿ ಇಲ್ಲಿಗೆ ಬಲೀ ಕಡೇಗೆ ವರ್ಗವಾಗಿ ಬಂದ ಕ್ಯಾಪ್ಟನ್ನ ಎನ್. ಎಮ್ ಚಪ್ಪಾಲ ಬಸ್ತ್ರಿಸ ಡಾಕ್ಟರ ಇವರಿಗೆ ತಿಳಿಸಲು, ಅವರು ಕೂಡಲೇ ಅವಳ ಮನೆಗೆ ಹೋಗಿ ಅವಳನ್ನು ಪರೀಕ್ಷೆಮಾಡಿ ನೋಡಲಾಗಿ ಶಸ್ತ್ರಕ್ರಿಯ ಮಾಡಿದ ಎನಹೂ ಅವಳಿಗೆ ಪ್ರಸೂತ ಮಾಡುವದು ಅಶಕ್ಯವೆಂತಾ ಅವರಿಗೆ ಕಂಡಿತು. ಸದ್ರಿಯವಳು ೩೫ ವರ್ಷ ಪ್ರಾಯದವಳಿದ್ದು ಗರ್ಭ ಬಹಳ ಅಸ್ವಸ್ಥಿತಿಯಲ್ಲಿದ್ದದ್ದರಿಂದ ಅವಳಿಗೆ ಒಪರೇಶನ್ ಮಾಡುವದು ಬಹಳ ಕಠಿಣ ಪ್ರಸಂಗವೆಂತ ತೋರಿದಾಗ್ಯೂ ಅವಳ ಗಂಡನಿಗೆ ಮತ್ತು ಆಪ್ತೇಷ್ಟರಿಗೆ ಸಮಜಾಯಿಷ ಕೊಟ್ಟು ಅವಳನ್ನು ಸದ್ರಿ ಡಾಕ್ಟರರು ಆಸ್ಪತ್ರಿಗೆ ಕರತಂದರು ನಾಡಿಕಯಾಗಿ ಇಂಥಾ ಸ್ಥಿತಿಯಲ್ಲಿ ಕೂಸನ್ನು ಕೊಂದು ಕತ್ತರಿಸಿ ತುಂಡುಗಳನ್ನುಮಾಡಿ ಹೊರಗೆ ತೆಗೆದು ತಾಯಿಯನ್ನು ಉಳಿಸುವ ಪ್ರಯತ್ನ ಬಹುತೇಕ ಅಸಿಸ್ಟಂಟ ಸರ್ಜನರು ಮಾಡುತ್ತಾರೆ ಆದರೆ ಸದ್ರಿ ಕ್ಯಾಪ್ಟನ್ನ ಚಪ್ಪಾಲ ಇವರು ಹಾಗೆ ಮಾಡದೆ ಕಿಟುವನ್ನೂ, ಬಾಳಂತಿಯನ್ನೂ ಜೀವದಿಂದ ಉಳಿಸುವ ಹೇತುವಿನಿಂದ ಸಿಝೇರಿಯನ ಸೆಕ್ಷನ್ ಒಪರೇಶನ ಅಂದರೆ ಗರ್ಭಿಣಿಯ ಹೊಟ್ಟೆಯನ್ನು ಕೊಯು ಹುಡುಗಿಯನ್ನು ಹೊರಗೆ ತೆಗೆದು ಪುನಃ ಅವಳ ಹೊಟ್ಟೆಯನ್ನು ಹೊಲಿದು ಉಭಯತರಿಗೂ ಜೀವದಾನವನ್ನು ಕೊಟ್ಟಿರುತ್ತಾರೆ ಸದ್ರಿ ಕೆಲಸವು ಬಹುಧೈರ್ಯದಿಂದ ಮಾಡಿ ಶಸ್ತ್ರಕ್ರಿಯೆಯಲ್ಲಿ ತಮ್ಮ ಹಸ್ತಲಾಘವವನ್ನು ಸದ್ರಿ ಡಾಕ್ಟರರು ತೋರಿಸಿದರು. ಈ ಕೆಲಸವು ಆಗೋಸ್ತ ತಾರೀಖ ೩೫ ನೇಗೆ ಆಯಿತು ಈ ವರೆಗೂ ಬಾಳಂತಿ ಕೂಸು ಕ್ಷೇಮದಲ್ಲಿದ್ದಾರೆ ಇಂಥಾ ಮಹತ್ವದ ಕೆಲಸವು ಶಿರ್ಶಿಯಲ್ಲಿ ಅಸ್ಪತ್ರೆಯಾದ ಲಾಗಾಯಿತು ಯಾರೂ ಮಾಡಿದ್ದಿಲ್ಲಾ ಎಂತ ಜನರು ಸದ್ರಿ ಡಾಕ್ಟರರನ್ನು ಕೊಂಡಾಡುತ್ತಾರೆ. ಹುಟ್ಟಿದ ಲಿಂಗವನ್ನು ಮತ್ತು ಇತರೆ ರೋಗಿಗಳನ್ನು ಇವರ ಬಳಿ ಕಡೆಗೆ ಅದ ಶೋಧಗಳಿಗನುಸರಿಸಿ ಒಪರೇಶನ್ನ ಬೇರೆ ಕಡೆಗೆ ಮಾಡಿರುವರೆಂದು ತಿಳಿಯುತ್ತದ

ಸುಂಕೇರಿ— ಎಲ್ಲಿ ನೋಡಿದಲ್ಲಿ ಜ್ವರವೇ ಜ್ವರ. ಜ್ವರಗ್ರಸ್ತರಿಗೆ ಕಲ ಎತ್ತಲಿಕ್ಕೇ ಆಗುವದಿಲ್ಲ ಮತ್ತು ಶೀಘ್ರವೇ ಬಹಳ ಶಕ್ತಿಹೀನರಾಗುತ್ತಾರೆ.

ಸದ್ಯಕ್ಕೆ ಜರುಗಲಿಕ್ಕಿರುವ ತಾ ಲೋ ಬೋರ್ಡಿನ ಚುನಾವಣೆಗಾಗಿ ರಾಷ್ಟ್ರೀಯ ದಕ್ಷದ ತರ್ಫೆನಿಂದ ಸುಂಕೇರಿ ವಾರ್ಡಗಾಗಿ ಶ್ರೀ। ಗೋವಿಂದ ನಾಗೇಶ ನಾಯಕ ಮತ್ತು ಶ್ರೀ। ಜನಾರ್ದನ ಪುರುಷೋತ್ತಮ ಸಾವಕಾರ ಹಾಗೂ ಕಾರವಾರ ವಾರ್ಡಗಾಗಿ ಶ್ರೀ। ಕಾಂಟಾ ಕೃಷ್ಣಶೆಟ್ಟಿ ಕೋಲವೇಕರ ಹೀಗೆ ಮೂವರು ನಿಂತಿರುವರು. ಚುನಾವಣೆಯ ಪರೀಕ್ಷೆಯ ಸಮಯವು ೧—೧॥ ತಿಂಗಳ ಮೇಲೆ ಬರುವದು. ಅಷ್ಟರೊಳಗೆ ಅವರು ತಮ್ಮ ದೇಶಾಭಿಮಾನವನ್ನು ದೇಶಪ್ರೇಮವನ್ನು ಪ್ರಕಟಿಸಿ, ಇವರಿಗೇ ಮತಕೊಟ್ಟು, ಸಹ್ಯಾತ್ಯರಿಗೆ ತಮ್ಮ ಮತಕೊಟ್ಟು, ತಮ್ಮ ಹಾಗೂ ಅಪ್ರತ್ಯಕ್ಷವಾಗಿ ದೇಶದ ಹಿತವನ್ನು ಬಯಸಿದ ಶ್ರೀಗುರುವಿನ ಅನುಗ್ರಹವನ್ನು ಹೊಂದಲಿ' ಈವರೆಗೆ ಗುಪ್ತ ಕಾರ್ಯದಲ್ಲಿ ಸ್ವೇಚ್ಛೆಯಿಂದ ಅಲ್ಪ ಸ್ವಲ್ಪ ಕಾರ್ಯಮಾಡುತ್ತಿದ್ದ ಇಲ್ಲಿಯ ಜನತೆಯು (ಮತದಾರರು) ಈಗಲೂ ಮುಂದಾಗಿ ತಮ್ಮ ತಮ್ಮ ಕಾರ್ಯಭಾಗವನ್ನು ಮಾಡಿ. ರಾಷ್ಟ್ರರಕ್ಷವನ್ನು ಮುಂದೊತ್ತುವ ಪುಣ್ಯವನ್ನು ಗಳಿಸ. ಪರೋ?

ಮಿ. ವ್ಹಿ. ಎಚ್. ನಾಯ್ಕ ಇವರಿಗೆ

ಜನರು ತೋರಿಸಿದ ಗೌರವದ ಬಗ್ಗೆ

ಒಂದೆರಡು ಮಾತುಗಳು.

ಮಿ. ವ್ಹಿ. ಎಚ್. ನಾಯಕರನ್ನು ಕಾರವಾರ ಜಿಲ್ಹೆಯ ಕಲಿತ ಜನರು ಅರಿಯದಿರುವದು ತೀರ ವಿರಳ. ಅವರ ೧ ವಿಜಾಪುರ ಜಿಲ್ಹೆಯ ಅಕ್ಟಿಂಗ ಕಲೆಕ್ಟರರಾಗಿ ನೇಮಕವಾಯಿತೆಂಬ ಸುದ್ದಿ ಧಾರವಾಡದಲ್ಲಿ ಹರಡಿದ ಕೂಡಲೇ, ಮಿತ್ರರಲ್ಲಿ ಒಂದೆರಡು ದಿವಸ ಅದರದೇ ಮಾತಾಗಿ ಹೋಯಿತು. ಎಲ್ಲಿ ಹೋದಲ್ಲಿಯೂ ನನಗೆ ಇದರ ಮಾತುಗಳೇ ಕೇಳಬಂದವು. ಎಲ್ಲಿಯೋ ಸೊಟ್ಟ ಸಣ್ಣದೊಂದು ಕನ್ನಡ ಶಾಲೆಯ ಮಾಸ್ತರರಾಗಿ ಕೂತಿದ್ದವರು “ಉದ್ಯೋಗೇ ಪುರುಷ ಲಕ್ಷಣಂ” ಎಂದು ನಡೆದು ಬಾರುತ್ತ ಬಂದು, — ಒಂದೆರಡು ದಿನಗಳ ಮಟ್ಟಿಗೆ ಆಗುವದಿಲ್ಲೇಕೆ?— ಒಂದು ಜಿಲ್ಹೆಯ ಕಲೆಕ್ಟರರಾಗಿ ಕೂತರು. ಜನರ ಬಾಯಲ್ಲಿ ಓಡಾಡಲಿಕ್ಕೆ ಇದೊಂದು ದೊಡ್ಡ ಮಾತು ನಿಜ. ಬಹಳ ಎಡಗಟ್ಟಿಗ ಹಾಗು ಪಟ್ಟ ಮಾಡುವ ಬ್ರಾಹ್ಮಣ ಅಧಿಕಾರಿಗಳು ತಮ್ಮ ಪಾಲ್ಮಿಕನ ಗಣೇಶನ ದಂಗೆಗಳಲ್ಲಿ ಈ ನಾಯ್ಕರನ್ನು ಗುರಿಯಿಟ್ಟು ಮಾತಾಡುವಾಗ ‘ಏನು ಉದ್ಧಟತನ’ ‘ಏನು ಕೆಲಸ ಮಾಡಿದೋ ನೀ!’ ಎಂದು ಬಾಯಿಬಿಚ್ಚಿ ಉದ್ಗಾರ ತೆಗೆದಿರುವರು. ಧಾರವಾಡದಲ್ಲಿಯ ವಿಶದ್ವೇಷದ ಬಹಳ ದೊಡ್ಡ ಬ್ರಾಹ್ಮಣ ಅಧಿಕಾರಿಗಳ ಕೂಡ ರಹಸ್ಯದ ಮಾತನಾಡುತ್ತಿರುವರು. ಮಿ. ನಾಯ್ಕರು ಸರಕಾರಿ ಖಾತೆಯಲ್ಲಿ ಕೆಲಸ ಮಾಡಿದ ಬಗ್ಗೆ ಬಲು ತಾರೀಫ ಮಾಡಿ ಹೇಳುತ್ತಿದ್ದರೆಂದು ಮೊನ್ನೆ ಮೊನ್ನೆ ನನ್ನ ಗೆಳೆಯರೊಬ್ಬರು ನನ್ನೊಡನೆ ಅಂದರು. ಒಮ್ಮೆ ನಾನು ಸಿದ್ಧಾಪುರದಿಂದ ಗೇರಸಪ್ಪೆಗೆ ಹೋಗುವಾಗ, ಕೆನರಾ ಖಾತೆಯ ನಾಯಕರಾದ ಜನಸಾಹೇಬರ ಫಾರೆಸ್ಟ ಕಾರಕೂನರೊಬ್ಬರ ಭೆಟ್ಟಿಯಾದರು. ಅವರೊಡನೆ ಮಾತಾಡುತ್ತ ದಾರಿಗುಂಟ ಹೋಗುವಾಗ, “ಮಿ. ನಾಯ್ಕರು ಎರಡು ಜನ ಅಧಿಕಾರಿಗಳಷ್ಟು ಕೆಲಸವನ್ನು ಒಬ್ಬರೇ ಮಾಡುವರು” ಎಂದು ಹೇಳಿದ ಸಂಗತಿಯು ಈ ಹೊತ್ತಿಗೂ ನನಗೆ ನೆನಪಿರುವದು. ಹಿಡಿದ ಕೆಲಸದಲ್ಲಿ ಮೈಮುರಿದು ದುಡಿಯುವದು ಇವರಿಗೆ ದೈವದತ್ತವಿರುವದು. ಇವರ ಜತೆಗೆ ಬುದ್ಧಿಮತ್ತೆಯು ಕೂಡ ವಿಶೇಷ ತರದಿಂದ ಹೊಂದಿಕೆಯಾಗಿರುವದು. ಇವುಗಳ ಮೂಲಕ ಅವರು ಬೆಳಕಿಗೆ ಬಂದರೆಂದು ಯಾರಾದರೂ ತಪ್ಪದೆ ಹಾಗೆಯೆ ಹೇಳಬಹುದು. ಅವರೆ, ಇವುಗಳಲ್ಲಿಯೇ ಪಕ್ಕಾಂತವೆಲ್ಲ ಅಡಕವಾಗಿರುವದೆಂದು ತಿಳಿಯಕೂಡದು. ಪೂರ್ತಿಮಾಡುವದಕ್ಕೆ ಇನ್ನಷ್ಟು ಮುಂದಕ್ಕೆ ಹೋಗಬೇಕಾಗುವದು. ಸಾಲದುದಕ್ಕೆ ಇವರು ಜನಜನಪ್ರಿಯರೆಂದು ಕೊನೆಗೆ ಹೇಳಬೇಕಾಗುವದು.

ಮಿ|| ನಾಯ್ಕರಿಗೆ ಅಕ್ಟಿಂಗ ಕಲೆಕ್ಟರರಾಗಿ ನೇಮಕವಾದ ಸುದ್ದಿ ಹತ್ತಿದ ಕೂಡಲೇ, ಅವರ ಅಸ್ತಿಕೆಗ ಒಳಪಟ್ಟಿರುವ ತಾಲೂಕುಗಳ ಜನರು ಒಂದೇ ಸಮನೆ ಅವರನ್ನು ಕಾಣಲಿಕ್ಕೆ ಬರಹತ್ತಿದರು. ಇತರ ಸಣ್ಣದೊಡ್ಡ ಜನರು ಕೂಡ ತಮಗಾದ ಆನಂದವನ್ನು ತೋರಿಸುವದಕ್ಕೆ ಬರ-ಹೋಗಹತ್ತಿದರು. ಹೀಗಾಗಿ ಹಗಲೆಲ್ಲ ಅವರಿಗೆ ತೆರಪೇ (ಬಿಡುವು) ಇರುತ್ತಿರಲಿಲ್ಲ. ಪ್ರತಿಷ್ಠಿತ ಧಾರವಾಡಿಗಳಲ್ಲಿ ಹಲವರು ತಮ್ಮ ಮಿತ್ರಮಂಡಲವನ್ನು ಮಾತ್ರ ಬಳಗೊಂಡ ವ್ಯಕ್ತಿವಿಷಯಕ ಆಮಂತ್ರಣಗಳನ್ನು ಕೊಟ್ಟು ಅವರಿಗೆ ಸತ್ಕರಿಸಿದರು. ಸಾರ್ವಜನಿಕ ರೀತಿಯಲ್ಲಿ ೧ ಮುಸಲ್ಮಾನ ಸಂಘ, ೨ ಮೊಚ್ಚೆಗಾರರ ಸಂಘ, ೩ ಕೊಸವೋಸ ಕ್ಲಬ್ಬು, ೪ ವಿದ್ಯಾರ್ಥಿವರ್ಧಕ ಸಂಘ, ೫ ಜಿಲ್ಹಾಧಿಪತಿಗಳ ಅಧ್ಯಕ್ಷತೆಯಲ್ಲಿ ನೆರೆದ ಬ್ರಾಹ್ಮಣೇತರ ಸಭೆ ಇವೆಲ್ಲವುಗಳು ಅವರನ್ನು ಬರಮಾಡಿಕೊಂಡು ಗೌರವಿಸಿದವು. ನಾನು ಬ್ರಾಹ್ಮಣೇತರ ಸಭೆಗೆ ಅಷ್ಟಿಷ್ಟಿ ಹೋಗಿದ್ದೆನು. ಮನ್ನಣೆಗೆ ಪಾತ್ರವಾದ ಸ್ಥಳಗಳಲ್ಲ ವಿಶದ್ವೇಷದ ಬ್ರಾಹ್ಮಣ ಅಧಿಕಾರಿಗಳು ಕೂಡ ಬಂದಿದ್ದರು. ಆ ಸಭೆಯಲ್ಲಿ ಮಿ|| ನಲವಡಿ ವಕೀಲರು, ಮಿ|| ನಾಯ್ಕರು ಎಲ್ಲ ಖಾತೆಗಳಲ್ಲಿ ಹೆಸರಾಗಿಯುವ ಹಾಗೆ ಕೆಲಸ ಮಾಡಿದ್ದನ್ನು, ಸರಕಾರಿ ವಕೀಲರಾದ ಮಿ|| ಹುಲಕೋಟಿಯವರು, ಮಿ|| ನಾಯ್ಕರ ವಿದ್ಯಾರ್ಥಿದೆಸೆಯ ತೇಜಸ್ವಿತೆಯನ್ನು, ಅವರಿಗೆ ಈಗ ದೊರೆತಿರುವ ಜವಾಬುದಾರಿ ಸ್ಥಳದ ಮಹತ್ವವನ್ನು, ರಾವಬಹಾದ್ದೂರ ಬಿ ಎಚ್. ಪಾಟೀಲ ವಕೀಲರು. ಮಿ|| ನಾಯ್ಕರಂಥ ಉದಾಹರಣೆಗಳು ಮುಂಬಯಿ ಇಲಾಖೆಯಲ್ಲಿ ಅತಿ ವಿರಳವಾಗಿ ಸಿಕ್ಕರೂ ಸಿಗಬಹುದೆಂಬ, ತಮ್ಮ ಕರ್ನಾಟಕದ ಮಟ್ಟಿಗಂತು ಇಲ್ಲವೇ ಇಲ್ಲವೆಂಬ, ಹಾಗು ತಮಗೆಲ್ಲ ಇಷ್ಟೆಲ್ಲಾ ಆನಂದವಾಗಿರುವಾಗ ನಮ್ಮ ಮಾತಿನ ಸಮಾಜದ ಬಂಧುಗಳಿಗೆ ತಾನೆ ಎಷ್ಟೆಲ್ಲಾ ಆನಂದವಾಗಿರಲಿಕ್ಕಿಲ್ಲವೆಂಬ ಮಾತನ್ನು, ಮಿ|| ವೆಂಕಟೇಶ ಸಾಹೇಬರು ಯೋಗ್ಯ ಮನುಷ್ಯರಿಗೆ ಯೋಗ್ಯ ಸ್ಥಳ ಕೊಟ್ಟ ಬಗ್ಗೆ ತಮಗೆ ತುಂಬ ಆನಂದವಾಗುವದೆಂಬ ಮಾತನ್ನು ಮಿ|| ನಾಯ್ಕರ ಗೌರವಪರವಾಗಿ ಮಾತಾಡಿದರು. ಅವರು ವಿಜಾಪುರಕ್ಕೆ ಪಯಣ ಬೆಳೆಸುವ ದಿನ ಸ್ಟೇಶನ್ನದಲ್ಲಿ ರಿವಾನ ಬಹಾದ್ದೂರ ದೊಡ್ಡ ಮೋರಬಾದ ಘೋರ್ಪಡೆ ಪ್ರತಿಷ್ಠಿತ ಹಲವು ಜನರು ಅವರನ್ನು ಗೌರವಿಸಿ ಕಳುಹಿಸಿದರು. ಧಾರವಾಡ ಬ್ಯಾಂಕಿನ ಮಾಜಿ ರೆಜಿಸ್ಟ್ರಾರರಾದ ಮಿ|| ಪಾಟೀಲ ವಕೀಲರು ಅಷ್ಟಗಿ ಬಳಿಯ ಮುತ್ತುಮುತ್ತಲಿನ ಹಳ್ಳಿಯ ಗೊಂಗಡಿಯ ಜನರನ್ನು ಕೂಡ ತಮ್ಮಲ್ಲಿ ಸೇರಿಸಿಕೊಂಡು, ಅಷ್ಟಗೇರಿ ಸ್ಟೇಶನ್ನದಲ್ಲಿ ಅವರನ್ನು ಇಳಿಸಿಕೊಂಡು ಬಹಳ ಗೌರವವನ್ನು ಮಾಡಿದರಂತೆ. ನನ್ನ ಸೀನಿಯರ ಬಿ ಎ ವರ್ಗದ ವಿದ್ಯಾರ್ಥಿಗಳೊಬ್ಬರು ಅಲ್ಲಿಯೇ ಕೆಲವು ತಿಂಗಳ ಹಿಂದೆ ಬಂದು ಆದ ಬ್ರಿಗೇಡಿಯರ ರಾಮಕೃಷ್ಣ’ ಎಂದು ಹೆಸರನ್ನು ಕೂಡ ಇಟ್ಟಿರುವರೆಂದು ಹೇಳುತ್ತಿದ್ದರು. ಇಷ್ಟೆಲ್ಲದರ ಮುಖಕ್ಕೆ ಬಹುಜನರನ್ನು ಗಳಿಸಿಕೊಳ್ಳುವ ಒಂದು ವಿಶೇಷ ಗುಣವು ಇರುವದು ಎಂಬ ಸಂಗತಿಯು ಒಡೆದು ಕಾಣುವದು. ಇಲ್ಲಿ ರಾವಬಹಾದ್ದೂರ ಪಾಟೀಲರು ಹೇಳಿದ ಒಂದು ಮಾತು ನೆನಪಿಗೆ ತಪ್ಪದೆ ಬರುವದು. “ನಾಯಕರ ಸಮಾಜದ ಬಂಧುಗಳಿಗೆ ಎಷ್ಟೆಲ್ಲಾ ಆನಂದವಾಗಿರಲಿಕ್ಕಿಲ್ಲ” ಎಂಬ ಮಾತು ಇದ್ದರೂ ಇದ್ದಿರಬಹುದು. ಯಾಕಂದರೆ ಮಿ|| ನಾಯ್ಕರಿಗೆ ಈಗ ೧೫ ವರ್ಷಗಳಿಂದೀಚೆ ವಿಲಾಯತಿಗೆ ಹೋದ ಬಗ್ಗೆ ಬಹಿಷ್ಕಾರದ ಕೋಳಿಯಲ್ಲಿ ಹಾಕಿರುವರು ತಮ್ಮ ಸಮಾಜದ ಕೆಲವು ವಿಧುನಿಕ ಕಂಠದಾಬಾದುಕರ ಮನಸ್ಸು ಯಾವಾಗ ತಿರುಗುತ್ತದೆ, ನೋಡಬೇಕು.

ಮಿ|| ನಾಯ್ಕರು ಕರ್ನಾಟಕದ ಏಕೀಕರಣ ವಿಷಯದಲ್ಲಿ ತನಕರಿಸುತ್ತಿರುವ ಮನುಷ್ಯರೊಬ್ಬರು ಈ ತನಕರಿಸುವಿಕೆಯು ಇವರಲ್ಲಿ ಬಹಳ ವರ್ಷಗಳಿಂದಲೂ ನಡದೇ ಇರುವದು. ಇದರ ಸುದರ್ಶನವು ಇವರ ಬಹುಮಾನಿಗಳು ದ ಹಾಗೂ ಸರಕಾರದ ಗೌರವಕ್ಕೆ ಪಾತ್ರನಾಗಿರುವ ಅನೇಕ ಜನರಲ್ಲಿ ಆಗಿರುವದು. ಅಂತೇ ಅಂಥವರ ಜಾಹೀರ ವ್ಯಾಖ್ಯಾನವನ್ನು ಕರ್ನಾಟಕದ ಏಕೀಕರಣದ ವಿಷಯದಲ್ಲಿ ಈಗ ತಾನೇ ಕೇಳುತ್ತಿರಬಹುದು. ಕರ್ನಾಟಕದ ಇತಿಹಾಸವನ್ನು ಬರೆಯುವದಕ್ಕೆ ಸಾಧನಗಳನ್ನು ಕೂಡ ಕಲೆಹಾಕಹತ್ತಿರುವರು. ಅಂತೇ ಶ್ರೀಯುತ ಕಡಾಮ ವಕೀಲರು ಒಮ್ಮೆ ಜಾಹೀರ ಸಭೆಯಲ್ಲಿ ಇದು ತೋರಿಸಿರುವರು. ನನ್ನ ಸ್ನೇಹಿತರಾದ ಎಷ್ಟೋ ಜನ ಮಿ|| ನಾಯ್ಕರು ಕರ್ನಾಟಕದ ಇತಿಹಾಸವನ್ನು ಬರೆಯುವ ನಿಧ್ದೇಶ ಎಂಬ ಮಾತನ್ನು ಎತ್ತಿರುವರು. ನನ್ನ ಮಿತ್ರರಲ್ಲೋರ್ವರಾದ ಶ್ರೀಯುತ ಶ್ರೀನಿವಾಸರಾಯರು ತಮ್ಮ ‘ಸ್ವದೇಶ’ ಪತ್ರದಲ್ಲಿ ಮಿ|| ನಾಯ್ಕರು ಕನ್ನಡ ನಾಡಿನ ಉಜ್ವಲ ಅಭಿಮಾನಿಗಳೆಂದು ಬರೆದದ್ದು ಅಕ್ಷರಶಃ ನಿಜವಿರುವದು. ಇನ್ನು ಅವರಿಗೆ ಇರುವ ೧೦ ವರ್ಷಗಳ ಸರ್ವಿಸಿನಲ್ಲಿ ಜನಹಿತದ ಕೆಲಸಗಳನ್ನು ಹೆಚ್ಚು ಹೆಚ್ಚಾಗಿ ಸಾಧಿಸಿ ಜನರನ್ನು ಗೆಲಿಸಿಕೊಳ್ಳಲೆಂದೂ, ಅವರಿಗೆ ಇಂದಲ್ಲ ನಾಳೆ ಕಾಯಂ ಆಗಿಯೇ ಜಾಗವು ದೊರೆಯಲೆಂದೂ ಮನಃಪೂರ್ವಕವಾಗಿ ಬಯಸಿ ಈ ಪುಟ್ಟ ಲೇಖವನ್ನು ಪೂರ್ತಿಮಾಡುವೆನು.

೧೨-೯-೩೫. ಧಾರವಾಡ. — ಹಿರಿಯ ನಾಡವರ ಸಾಮಾಜಿಕ.

ವೃತ್ತಸಾರ.

— ಕಲಕತ್ತೆಯ ‘ಹಾಕ್ ಎಂಡ ಕಂಪನಿ’ ಎಂಬ ಕಂಪನಿಯಲ್ಲಿ ಒಂದು ಪಕ್ಷಪಾತದ ಕಳವು ಮೂವರು ಪಾರ್ಸಿ ಜನ ಉಂಗುರಗಳ ಖರೇದಿ ಮಾಡಲು ಕಂಪನಿಗೆ ಹೋಗಿದ್ದರು. ಪರೀಕ್ಷಿಸಿ ನೋಡನೋಡುತ್ತ ಒಂದು ಉಂಗುರ ಕಾಣೆ! ಪೋಲೀಸರನ್ನು ಕರೆದು ಅಲ್ಲಿಂದಲ್ಲೇ ಅವರ ತಪಾಸ ಮಾಡಿದರೂ ಎಲ್ಲಿಯೂ ಪತ್ತೆಯಿಲ್ಲ. ಕಂಪನಿಯ ನೌಕರನೊಬ್ಬನು ವೇಷಧಾರಿ ಗಿರಾಕಿಗಳಲ್ಲೊಬ್ಬನು ನುಂಗಿರಬೇಕೆಂದು ಅನುಮಾನಿಸಿದನು. ಕೂಡಲೆ ‘ಕ್ಷ’ಕಿರಣ ಯಂತ್ರದ ಸಹಾಯದಿಂದ ಹೊಟ್ಟೆ ಪರೀಕ್ಷಿಸಿ ನೋಡಲು, ಹೊಟ್ಟೆಯಲ್ಲಿ ಉಂಗುರವಿದ್ದದ್ದು ತೋರಿತು. ಕಳ್ಳನ ಚಮತ್ಕಾರವೋ? ಹೊಟ್ಟೆಯಲ್ಲಿ ಹೋದ ಉಂಗುರದ ಪತ್ತೆಯನ್ನು ಶಸ್ತ್ರಕ್ರಿಯೆ ಮಾಡದೆ ಹೊರಗಿಂದಲೇ ಹಚ್ಚುವ ‘ಕ್ಷ’ ಕಿರಣದ ಚಮತ್ಕಾರವೋ?

— ಕಲ್ಕತ್ತೆಯ ಮ್ಯುನಿಸಿಪಾಲಿಟಿಯ ನೌಕರನು ಕಲ್ಕತ್ತೆಯ ಹೈಕೋರ್ಟ ಜಡ್ಜರ ಮೇಲೆ ಫಿರ್ಯಾದು ಮಾಡಿರುವನು. ಜಡ್ಜರು ತನಗೆ ನಿಷ್ಕಾರಣವಾಗಿ ಹೊಡೆದರೆಂಬುದೇ ಫಿರ್ಯಾದಿಗೆ ಕಾರಣ!

— ಉಡುಪಿ ತಾಲೂಕ ಅಮ್ಲಾಡಿ ಗ್ರಾಮದ ನಾಗಶೆಟ್ಟಿ ಗಾಣಿಗನೆಂಬುವನು ತನ್ನ ಹೆಂಡತಿಯ ವ್ಯಭಿಚಾರ ಕರ್ಮಗಳನ್ನು ಸಹಿಸಲಾರದೆ ಹೆಂಡತಿಯನ್ನು ಕೊಂದುಬಿಟ್ಟನು. ಈ ಕಾರಣ ಆತನ ಮೇಲೆ ಫೌಜದಾರಿ ಮೊಕದ್ದಮೆಯಾಗಿ ಆತನಿಗೆ ೬ ತಿಂಗಳ ಕಠಿಣ ಶಿಕ್ಷೆಯಾಗಿದೆ.

— ಅಮೃತಸರದ ಒ.ಸಿ ಪೋಲೀಸರಿಗೂ, ದರೋಡೆಖೋರರಿಗೂ ಘೋರ ಕದನ ಅಮೃತಸರದ ಹೊರಅಲ್ಲಿ ಕ್ಷೆ ಗಾಮದಲ್ಲಿ ದರೋಡೆ ಬಿದ್ದಿರುವದೆಂದು ಪೋಲೀಸರಿಗೆ ಮಧ್ಯರಾತ್ರಿ ಸುದ್ದಿ ಹತ್ತಿತು. ಕೂಡಲೇ ಪೋಲೀಸ ಸುಪರಿಂಟೆಂಡೆಂಟರು, ಸಬ್ ಇನಸ್ಪೆಕ್ಟರ, ೪ ಮಂದಿ ಹೆಡ್‌ಕಾನಸ್ಟೇಬಲ ಹಾಗು ೩೦ ಮಂದಿ ಪೋಲೀಸರೊಂದಿಗೆ ಕೂಚ ಮಾಡಿದರು. ದರೋಡೆಖೋರರು ಪೋಲೀಸರ ಮೇಲೆ ಗುಂಡು ಹಾರಿಸಿದರು ಪೋಲೀಸರಿಗೂ ದರೋಡೆಖೋರರಿಗೂ ಮುಂಜಾವು ೫ ಘಂಟೆವರೆಗೆ ಭೀಕರ ಸಂಗ್ರಾಮವಾಯಿತು. ನಾಲ್ಕು ಮಂದಿ ಪೋಲೀಸರಿಗೆ ಗಾಯಗಳಾದವು. ದರೋಡೆಖೋರರ ಹತ್ತರ ಶಸ್ತ್ರಗಳೂ, ಗುಂಡುಸಾಮಗ್ರಿಯೂ ದೊರಕಿದವು. ಬೆಳಗಿನ ಸಮಯ ದರೋಡೆಖೋರರು ಓಡಿಹೋದರು, ೬ ಜನರನ್ನು ಪೋಲೀಸರು ಕೈದು ಮಾಡಿರುವರು. ತಪಾಸು ಇನ್ನೂ ನಡೆದದೆ.

— ಬಂಗಾಲದ ಖಾದಿ ಪ್ರತಿಷ್ಠಾನದವರು ಪ್ರತಿ ದಿನ ೧೦೦೦ ರೂಪಾಯಿಗಳ ಖಾದಿಯನ್ನು ತಯಾರಿಸುತ್ತಿರುವರು.

— ಸೊಲ್ಲಾಪುರದಲ್ಲಿ ಹಿಂದೂ ಹುಡುಗರು ಶಾಲೆಯಾಗ ಹತ್ತಿರುವರು ಕಳೆದ ೯ ನೇ ತಾರೀಖಿಗೆ ಇಬ್ಬರು ಗಂಡು ಹುಡುಗರು ಕಾಣೆ! ಇದೆಂಥ ಬೆಡಗು! ಪೋಲೀಸರು ಎಲ್ಲಿರುವರು?

— ಜಪಾನ ದೇಶದ ವಿದ್ಯಾಭ್ಯಾಸಗಳನ್ನು ತಿಳಕೊಂಡು ಬರುವದಕ್ಕಾಗಿ ನಿಜಾಮ ಪ್ರಾಂತದ ವಿದ್ಯಾಧಿಕಾರಿಗಳಾದ ನವಾಬ ಎಸ್ ಆರ್ ಮಸೂದರವರು ಜಪಾನಿಗೆ ಹೋಗಿ ಮರಳಿ ಬಂದಿರುವರು. ಅಲ್ಲಿ ವಿದ್ಯಾಭ್ಯಾಸಕ್ಕೆ ಚಿಕ್ಕ ಮಕ್ಕಳ ೩ನೇ ವರ್ಷ ಪ್ರಾಯದಲ್ಲಿ ಪ್ರಾರಂಭವಾಗುತ್ತದೆ. ೬ ವಯಸ್ಸಿಗಳಾಗುವ ವರೆಗೆ ಬಾಲಕರಿಗೆ ‘ಕಿಂಡರ್‌ಗಾರ್ಟನ’ ಎಂಬ ಸಾಮಗ್ರಿಗಳ ಸಹಾಯದಿಂದ ಚಿಕ್ಕ ಬಾಲಕರಿಗೆ ಪ್ರತ್ಯಕ್ಷ ಜ್ಞಾನದಾನ ಮಾಡುತ್ತಾರೆ. ೬ ವರ್ಷ ಪ್ರಾಯವಾದ ಬಳಿಕ, ಮಕ್ಕಳು ಪ್ರಾಥಮಿಕ ಶಾಲೆಗೆ ಹೋಗುತ್ತಾರೆ. ಪ್ರಾಥಮಿಕ ಶಿಕ್ಷಣವು ೧೩ ವರ್ಷ ಪ್ರಾಯವಾಗುವವರೆಗೆ ನಡೆಯುತ್ತದೆ. ಪ್ರಾಥಮಿಕ ಶಿಕ್ಷಣವು ಕಡ್ಡಾಯದ್ದು. ಎಲ್ಲ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು ಪಡೆಯಲೇಬೇಕು. ಅಲ್ಲಿ ೩೦ ಸಾವಿರ ಪ್ರಾಥಮಿಕ ಶಾಲೆಗಳಿವೆ. ೯೦ ಲಕ್ಷ ಮಕ್ಕಳುಗಳಿರುವರು ೧೦೦ಕ್ಕೆ ೯೯ ರಷ್ಟು ಹುಡುಗರೂ, ೯೮ರಷ್ಟು ಹುಡುಗಿಯರೂ ವಿದ್ಯಾರ್ಜನ ಮಾಡುತ್ತಿರುವರು. ಸ್ವರಾಜ್ಯದ ಪ್ರಭಾವವಿದು!!

ವಿವಿಧ ಸಂಗ್ರಹ.

ಬ್ರಿಟಿಶ ಅಂಗಡಿಕಾರರ ಚಿಂತೆ!

ಬ್ರಿಟಿಶ ಅಂಗಡಿಕಾರರಿಗೆ ಇನ್ನೊಂದು ಚಿಂತೆಯು ಸಂಭವಿಸಹತ್ತಿದೆ. ಕರ್ನಲ್ ವುಡ್ಸ್ ಎಂಬವರು ಬ್ರಿಟಿಶ ವ್ಯಾಪಾರದ ಕಾನ್‌ಸ್ಟಾಂಟಿನೋಪಲ್‌ದೊಳಗಿನ ಕಾರ್ಯಪರ್ತಿಗಳು. ಕಾನ್‌ಸ್ಟಾಂಟಿನೋಪಲ್‌ವು ತುರ್ಕಸ್ತಾನದ ರಾಜಧಾನಿಯು. ಕರ್ನಲ್ ವುಡ್ಸರವರು ತುರ್ಕಸ್ತಾನದೊಳಗಿನ ಪರಿಸ್ಥಿತಿಯನ್ನು ಸಮಾಲೋಚಿಸಿ, ವರದಿಯನ್ನೊಂದು ತಯಾರಿಸಿರುವರು. ಈ ವರದಿಯನ್ನು ಇಂಗ್ಲಂಡದೊಳಗಿನ ಬ್ರಿಟಿಶ ವ್ಯಾಪಾರಿಗಳ ಸಂಸ್ಥೆಯವರು ಪ್ರಕಟಿಸಿರುವರು. ಅದರೊಳಗೆ ಕರ್ನಲ್ ವುಡ್ಸರವರು ಬರೆದಿರುವದೇನಂದರೆ.— ತುರ್ಕಸ್ತಾನವು ರಾಷ್ಟ್ರೀಯ ಭಾವನಾಮಯವಾಗಿದೆ. ಅಲ್ಲಿಯ ಅಧಿಕಾರಿಗಳೂ, ಪ್ರಜೆಗಳೂ ಸಾಹಚರ್ಯದಿಂದ ದೇಶೋದ್ಧಾರಕ್ಕಾಗಿ ಹೆಣಗುತ್ತಿರುವರು. ಸ್ವದೇಶದೊಳಗಿನ ಉದ್ಯೋಗ-ಧಂದೆಗಳನ್ನು ಉದ್ಧರಿಸಲು ಅಲ್ಲಿ ಉಪಾಯಯೋಜನೆ ನಡೆದದೆ. ಪ್ರಜೆಗಳ ಅನುಕೂಲತೆಗಳಿಗೆ ಅವಶ್ಯವುಳ್ಳ ಹೊಸ ಉದ್ಯೋಗಗಳನ್ನು ಅಲ್ಲಿಯ ಸರಕಾರವು ಸ್ಥಳಿಕ ಸಾಹಿತ್ಯಗಳ ಪೂರೈಕೆಯ ಮಾನದಿಂದ ನಿರ್ಮಿಸಹತ್ತಿದೆ. ಹೊಸ ಉದ್ಯೋಗಗಳನ್ನು ಕೈಕೊಳ್ಳುವ ಗಟ್ಟಿಗರಿಗೆ ಸರಕಾರವು ಪ್ರೋತ್ಸಾಹವನ್ನೀಯಹತ್ತಿದೆ. ತುರ್ಕಸ್ತಾನದೊಳಗಿನ ಮುಖ್ಯ ಹೊರೆಯು ಬೇಸಾಯವು. ಅದರ ಏಳ್ಗೆಗಾಗಿ ಸರಕಾರವು ವಿಶೇಷ ಯತ್ನ ಮಾಡುತ್ತಿದೆ. ಭಿನ್ನ ಭಿನ್ನ ಪ್ರಕಾರದ ಬೆಳೆ ಬೆಳಿಸುವ ಬೇಸಾಯಗಾರರಿಗೆ ಸರಕಾರವು ಅವಶ್ಯವಿದ್ದಲ್ಲಿ ಹಣವನ್ನೂ ಪೂರೈಸುತ್ತದೆ. ಇದರಿಂದ ಕಚ್ಚಾಸಾಮುಗ್ರಿಗಳನ್ನು ತಮ್ಮಲ್ಲಿ ಒಯ್ದು ಪಕ್ಕಾ ಮಾಲು ತಯಾರಿಸಿ ಮಾರಾಟ ಮಾಡುವ ಪರದೇಶ ವರ್ತಕರ ಗೋಣು ಮುರಿದದೆ. ಬ್ರಿಟಿಶ ವರ್ತಕರಿಗೆ ವಿಶೇಷ ಹಾನಿ. ಉಣ್ಣೆಯ ಬಟ್ಟೆಗಳನ್ನು ತುರ್ಕಸ್ತಾನದಲ್ಲಿ ಧರಿಸುವ ಹುರುಪಿನ ಮಂದಿಗಳು ಹೇರಳ. ಇಂಗ್ಲಂಡದಿಂದ ಈ ಬಟ್ಟೆಗಳ ಪೂರೈಕೆಯಾಗುತ್ತಿತ್ತು. ವ್ಯಾಪಾರದಲ್ಲಿ ಇಟಾಲಿ ದೇಶವು ಇಂಗ್ಲಂಡದ ಪ್ರತಿಸ್ಪರ್ಧಿಯಾಗಿದೆ. ಇಟಾಲಿಯೊಳಗಿನ ಅರಿವೆಗಳೇ ವಿಶೇಷವಾಗಿ ತುರ್ಕರು ಖರೇದಿ ಮಾಡುತ್ತಿರುವರು. ಅವರ ಮುಂದೆ ಬ್ರಿಟಿಶ ವರ್ತಕರ ತಾಯುಕ್ತಿ ಸಾಗದು. ಉಣ್ಣೆ ಬಟ್ಟೆಗಳ ವ್ಯಾಪಾರವೂ ಚನ್ನಾಗಿ ನಡಿಯುವದಿಲ್ಲ. ಫ್ರಾನ್ಸ ದೇಶವು ಉಣ್ಣೆಯ ಬಟ್ಟೆಗಳನ್ನು ತುರ್ಕರಿಗೆ ಪೂರೈಸಹತ್ತಿದೆ. ಅದರಿಂದ ಬ್ರಿಟಿಶ ವರ್ತಕರು ಪೆಚ್ಚಾಡುತ್ತಿರುವರು. ಹಿಂದುಸ್ಥಾನ ದೇಶದಲ್ಲಿ ಅಧಿಕಾರಿಗಳು ಬ್ರಿಟಿಶರ ಸ್ವಾಧೀನವಿರುವದರಿಂದ ಬ್ರಿಟಿಶ ವರ್ತಕರಿಗೆ ತಮ್ಮ ಮನಸ್ಸಿನಂತೆ ವ್ಯಾಪಾರ ನಡಿಸಲು ಅನುಕೂಲವಾಗುತ್ತದೆಂದು ಈ ರಿಪೋರ್ಟಿನ ವಾಚನದಿಂದ ಗೊತ್ತಾಗುವದು. ಇದರಮೇಲಿಂದ ಬ್ರಿಟಿಶ ವರ್ತಕರು ತಮ್ಮ ಅಧಿಕಾರವನ್ನು ಯಾವ ಬಗೆಯಿಂದ ಪ್ರಯೋಗಿಸುತ್ತಾರೆಂದು ಗೊತ್ತಾಗುವದು.

* * *

ಮೋಟಾರಿನ ಆಮದು.

ಮುಂಬಯಿಯ ಕಸ್ಟಮ ಆಫೀಸಿನ ಕಲೆಕ್ಟರರು ಕಳೆದ ವರ್ಷದ ಮೋಟಾರು ಆಮದಿನ ಮಾಹಿತಿಯನ್ನು ಪ್ರಕಟಿಸಿರುವರು. ಮುಂಬಯಿಯ ಬಂದರದಲ್ಲಿ ಕಳೆದ ವರ್ಷ, ಅಂದರೆ ೧೯೩೪ ನೇ ಇಸ್ವಿ ಮಾರ್ಚ ೩೧ ನೇಗೆ ಅಂತ್ಯವಾಗುವ ವರ್ಷದಲ್ಲಿ ೩,೫೮೭ ಮೋಟಾರುಗಳು ಆಮದಾದವು. ಅವುಗಳ ಕಿಮ್ಮತ್ತು ರೂ. [illegible] ಕೋಟಿ, ೩೭ ಲಕ್ಷ. ಇಷ್ಟಕ್ಕೂ ಮುಂಚಿನ ವರುಷದಲ್ಲಿ, ಅಂದರೆ ೧೯೩೩ ನೇ ಇಸ್ವಿಯ ಮಾರ್ಚ ೩೧ ನೇಗೆ ಅಂತ್ಯವಾಗುವ ವರ್ಷದಲ್ಲಿ ೧,೫೫೬ ಮೋಟಾರುಗಳು [illegible] ಅವುಗಳ ಕಿಮ್ಮತ್ತು ರೂ. ೧೩ ಕೋಟಿ, ೬೯ ಲಕ್ಷ. ಇದರ ಮೇಲಿಂದ ಮೋಟಾರುಗಳ [illegible] ಮಾನದಿಂದ ೩ ಪಟ್ಟು [illegible] ಮಾನದಿಂದ ೫ ಪಟ್ಟು ಬೆಳೆಯುತ್ತಿರುವದು. ಈ ಮೋಟಾರುಗಳು [illegible] ಬಂದಿಲ್ಲ. ಯುನೈಟೆಡ್ ಸ್ಟೇಟ್ಸ ಆಫ ಅಮೇರಿಕಾ, ಅಂದರೆ, ಅಮೇರಿಕೆಯ ಸಂಯುಕ್ತ ಸಂಸ್ಥಾನ ದೇಶದೊಳಗಿಂದ [illegible], ಇಂಗ್ಲಂಡದೊಳಗಿಂದ [illegible], ಅಮೇರಿಕೆಯ ಕೆನಡಾ ದೇಶದೊಳಗಿಂದ [illegible], ಇಟಾಲಿ ದೇಶದೊಳಗಿಂದ ೧೬೪, ಫ್ರಾನ್ಸ ದೇಶದೊಳಗಿಂದ ೧೬೮, ಇತರ [illegible] ೧೯೩೪ ನೇ ಇಸ್ವಿಯಲ್ಲಿ ಬ್ರಿಟಿಶ ಮೋಟಾರುಗಳು [illegible] ಬಂದಿದ್ದವು, ಅವು ಕಳೆದ ವರ್ಷ ೭೪೬ ಆದವು. ಕೆನಡಾ ದೇಶದೊಳಗಿಂದ ೧,೧೩೭ ಮೋಟಾರುಗಳು ೧೯೩೪ ರಲ್ಲಿ ಬಂದಿದ್ದವು, ಕಳೆದ ವರ್ಷ ೧೯೬೭ ಆದವು. ಇಟಾಲಿಯೊಳಗಿಂದ ೯೦, ಜರ್ಮನಿದೊಳಗಿಂದ ೮೦. ಇವುಗಳ ಬದಲು, ಕಳೆದ ವರುಷ ೧೬೬, ೧೮೮ ಹೀಗೆ ಮೋಟಾರುಗಳು ಆಮದಾದವು. ಸಂಯುಕ್ತ ಸಂಸ್ಥಾನದ ಅಂಕೆಯಲ್ಲಿ ಹೇರಳಸ್ಪಂದ ಫೇರಫಾರು ಕಂಡುಬರುವದಿಲ್ಲ. ಒಂದೇ ವರ್ಷ ನೋಡಿರಿ! ಇಂಗ್ಲಂಡದೊಳಗಿಂದ ಆಮದಾದ ೭೪೬ ಮೋಟಾರುಗಳ ಬೆಲೆಗಿಂತ, ಕೆನಡಾ ದೇಶದೊಳಗಿನ ೧೯೬೭ ಮೋಟಾರುಗಳ ಬೆಲೆಗಿಂತ ಕಡಿಮೆ ಇತ್ತು. ಇಷ್ಟಾಗಿಯೂ ಬ್ರಿಟಿಶ ವರ್ತಕರು ಕೆಲ ಕಾಲಿನಲ್ಲಿ ತಮ್ಮ ಮೋಟಾರುಗಳ ಬೆಲೆಯನ್ನು [illegible] ರಷ್ಟು ತಗ್ಗಿಸಿದ್ದರಂತೆ. ಮೋಟಾರು [illegible] ೨೧೩ ಆಮದಾದವು. ಮುಂಚಿನ ವರ್ಷದಲ್ಲಿ ೬೯ ಮಾತ್ರ ಆಮದು ಆಗಿದ್ದವು. ಸಾಧಾರಣ ೩ ಪಟ್ಟು ಬೆಳೆಕೆಯಾಯಿತು.

* * *

ಸಕ್ಕರೆಯೂ, ಶರೀರಸಾಮರ್ಥ್ಯವೂ.

ಅಮೇರಿಕೆಯವರು ಸಕ್ಕರೆಯೊಳಗಿನ ಒಂದು ಗುಣವನ್ನು ಸದ್ಯಕ್ಕೆ ಕಂಡುಹಿಡಿದಿರುವರು. ಶಾರೀರಿಕ ಸಾಮರ್ಥ್ಯ ಬೆಳಸಲಿಕ್ಕೆ ಸಕ್ಕರೆಯು ಬಹುಮಟ್ಟಿಗೆ ಉಪಯೋಗವಿರುವದೆಂದು ತಜ್ಞರು ಕಂಡುಹಿಡಿದಿರುವರು. ರಶಿಯಾ ದೇಶದಲ್ಲಿ ಜೋರ್ಜ ಹೆಕೆನ್‌ಸ್ಮಿಥ್ ರೆಂಬ ವಿಖ್ಯಾತ ಜಟ್ಟಿಗಳಿರುವರು. ಅವರ ಶರೀರ ಸಾಮರ್ಥ್ಯವು ಅದ್ವಿತೀಯವಿದೆ. ದಣುವಾರಿಸಿಕೊಳ್ಳಲು ಮೈಯಲ್ಲಿ ಚಾಪಲ್ಯವನ್ನುಂಟುಮಾಡಲು ಅವರು ನಾಲ್ಕಾರು ಚಿಟಕೆ ಸಕ್ಕರೆಯನ್ನು ಬಾಯಲ್ಲಿ ಹಾಕಿಕೊಳ್ಳುತ್ತಾರೆ. ಸಕ್ಕರೆಯಲ್ಲಿ ಕಾರ್ಬನ್, ಹ್ಯಾಡ್ರೋಜನ್, ಒಕ್ಸಿಜನ್ ಈ ಮೂರು ಪದಾರ್ಥಗಳ ಮಿಶ್ರ ಮಿಶ್ರಣವಿದೆ. ಶರೀರದಲ್ಲಿ ನೆಣವಿದ್ದರೆ. ಸಾಮರ್ಥ್ಯವು ಹೆಚ್ಚು. ನೆಣವನ್ನು ಕಾರ್ಬೋಹ್ಯಾಡ್ರೇಟದಲ್ಲಿ ರೂಪಾಂತರ ಮಾಡಿದರೆ ಶರೀರಕ್ಕೆ ಹೆಚ್ಚು ಉಪಯೋಗವಾಗುತ್ತದೆ. ಸಕ್ಕರೆಯು ಕಾರ್ಬೋಹ್ಯಾಡ್ರೇಟ ಪದಾರ್ಥವು. ಅದರಿಂದ ಶರೀರಪೋಷಣಕ್ಕೆ ಸಾಮರ್ಥ್ಯಸಂವರ್ಧನಕ್ಕೆ ವಿಶೇಷ ಉಪಯೋಗವಾಗುತ್ತದೆ. ಬಹಳ ಪರಿಶ್ರಮದ ಕೆಲಸ ಮಾಡುವಾಗ ಸಕ್ಕರೆಗಿಂತ ಶರೀರಕ್ಕೆ ಹೆಚ್ಚು ಉಪಯುಕ್ತ ಪದಾರ್ಥವು ಬೇರೊಂದಿಲ್ಲವೆಂದು ಅಮೇರಿಕೆಯೊಳಗಿನ ಆಯುರ್ವೇದವಿಶಾರದರು ಅಭಿಪ್ರಾಯಪಟ್ಟಿರುವರು. ಅಮೇರಿಕೆಯೊಳಗಿನ ಓಡುವ ಶರ್ಯತ್ತಿನ ಮುಲ್ಲರ ಮೇಲೆ ಪ್ರತ್ಯಕ್ಷ ಪ್ರಯೋಗ ಮಾಡಿ ನೋಡಲಾಯಿತು. ಓಡುವಾಗ ನಮ್ಮ ರಕ್ತದೊಳಗೆ ಇದ್ದಷ್ಟು ಸಕ್ಕರೆಯ ಪ್ರಮಾಣವು ಓಡಿದ ಮೇಲೂ ಇದ್ದಲ್ಲಿ ದಣುವಾಗುವದಿಲ್ಲ. ಅಂದರೆ, ಶರ್ಯತ್ತಿಗೆ ಓಡುವ ಮೊದಲು, ಶರ್ಯತ್ತಿನಿಂದ ವೆಚ್ಚವಾಗುವಷ್ಟು ಸಕ್ಕರೆಯನ್ನು ತಿಂದು ಪೂರೈಸಿಕೊಂಡರೆ, ಓಡಾಟದಿಂದ ಮನುಷ್ಯನಿಗೆ ದಣುವಾರಿಸಿಕೊಳ್ಳುವ ಪ್ರಸಂಗ ಬರುವದಿಲ್ಲ. ಅಷ್ಟರಿಂದ ಶಾರೀರಿಕ ಶ್ರಮ ಮಾಡುವ ಮಂದಿಗಳು ಸಕ್ಕರೆಯ ಪೂರೈಕೆಯನ್ನು ತಕ್ಕಷ್ಟು ಮಾಡಿಕೊಳ್ಳಬೇಕು. ನಮ್ಮ ಸನಾತನ ಪದ್ಧತಿಯಂತೆ, ಪ್ರಯಾಣ ಮಾಡಿ ಬಂದವರಿಗೆ ಬೆಲ್ಲ-ನೀರು ಕೊಡುವ ಮಾರ್ಗವಾದರೂ ಇದೇ ಅಲ್ಲವೇ?

* * *

ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್‌ಗಳ ಪೂರೈಕೆ.

ಸಿಲ್ಪಶಾಯರದ ಶಿಕ್ಷಣ ಮಂಡಳದವರು ಸದ್ಯಕ್ಕೊಂದು ಠರಾವು ಪಾಸುಮಾಡಿರುವರು. ದೂರ ದೂರ ಇರುವ ಮನೆಗಳಿಂದ ವಿದ್ಯಾರ್ಜನ ಮಾಡಲು ಬರುವ ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್‌ಗಳನ್ನು ಉಚಿತವಾಗಿ ಪೂರೈಸಬೇಕು. ವಿದ್ಯಾರ್ಥಿಗಳ ತಾಯಿ-ತಂದೆಗಳು ಸ್ಕಾಲರಶಿಪ್‌ಗಳ ದುರುಸ್ತಿಯನ್ನು ತಮ್ಮ ಖರ್ಚಿನಿಂದ ಮಾಡಿಸಬೇಕು. ಸ್ಕಾಲರಶಿಪ್‌ಗಳನ್ನು ಕೊಂಡುಕೊಳ್ಳಲು ಮಂಡಳದವರು ಹಣವನ್ನು ಮಂಜೂರು ಮಾಡಿರುವರು.

* * *

ಸ್ವದೇಶಿ ಪ್ರದರ್ಶನ.

ಪುಣೆಯಲ್ಲಿ ಸದ್ಯಕ್ಕೊಂದು ಸ್ವದೇಶಿ ಪ್ರದರ್ಶನವು ತೆರೆಯಲ್ಪಟ್ಟಿದೆ. ಇದರಲ್ಲಿ ಖಾದಿಯು ತಯಾರಾಗುವ ಕ್ರಮಗಳನ್ನೆಲ್ಲ ತೋರಿಸುತ್ತಾರೆ. ಆಂಧ್ರ ದೇಶದೊಳಗಿಂದ ಬಂದ ಖಾದಿಯ ಅರಿವೆಗಳು ಅಪ್ರತಿಮವಿವೆ. ಬೆಳಗಾವಿಯ ಕೊಂಗ್ರೆಸ ಮಂಡಳದವರು ನಿರ್ಮಿಸಿದ ಖಾದಿಯ ಭಾಂಡಾರದಲ್ಲಿ ತರತರದ ಖಾದಿಯು ದೊರಕುವದು. ಗ್ವಾಲ್ಹೇರ ಹಾಗು ಕಲಕತ್ತಾ ಪಟ್ಟಣಗಳೊಳಗಿಂದ ಬಂದ ಮಣ್ಣಿನ ಪಾತ್ರೆಗಳನ್ನು ನೋಡಿ, ಗಿರಾಕಿಗಳು ಮರುಳಾಗುತ್ತಾರೆ. ಓಗಲೇ ಕಂಪನಿಯವರ ಗಾಜಿನ ಸಾಮಾನುಗಳು ಇಡೀ ಪ್ರದರ್ಶನಕ್ಕೆ ಅಲಂಕಾರಭೂತವಾಗಿರುವವು. ಕಿರ್ಲೋಸ್ಕರ ಬಂಧುಗಳ ಪಂಪುಗಳು ಹೆಸರಾಗಿವೆ. ಪುಣೆಯೊಳಗಿನ ಭಾರತ ಹೊಲಿಗೆಯ ಕಂಪನಿಯವರು ತಯಾರಿಸಿದ ಗಂಜಿಫ್ರಾಕ್, ಕಾಲುಚೀಲ ಇತ್ಯಾದಿ ಸಾಮುಗ್ರಿಗಳು ಅಂದವಾಗಿವೆ. ನಿಕ್ಕವೂ ಹೇರಳ ಮಂದಿಗಳು ಪ್ರದರ್ಶನವನ್ನು ಸೇರಿಕೊಂಡು ಸಾಮುಗ್ರಿಗಳನ್ನು ಖರೇದಿ ಮಾಡುತ್ತಿರುವರು.

— ಹೇಯದಾಳದಲ್ಲಿ ಪ್ರೊ॥ ಧೋಂಡೋ ಕೇಶವ ಕರ್ವೆಯವರು ಸ್ತ್ರೀ ವಿಶ್ವವಿದ್ಯಾಲಯದ ಮೇಲೆ ಉಪನ್ಯಾಸವನ್ನಿತ್ತರು. ಸ್ತ್ರೀ ವಿದ್ಯಾಪೀಠಕ್ಕೆ ೩೨೩ ರೂಪಾಯಿ ದ್ರವ್ಯಸಹಾಯ ದೊರೆಕಿದೆ.

— ಕಲಕತ್ತೆಯಲ್ಲಿ 'ಇಂಡಿಯನ್ ಲ್ಯಾಂಡ ಸೇವಿಂಗ ಸೊಸೈಟಿಯ ತರ್ಫೆನಿಂದ ಈಸಾಡುವ ಶರ್ಯತ್ತುಗಳಾದವು. ಈ ಶರ್ಯತ್ತಿನಲ್ಲಿ ೧೧ ಮಂದಿಗಳು ಸೇರಿದ್ದರು, ಇಬ್ಬರು ಯುರೋಪಿಯನ್ನರಿದ್ದರು. ೨೨ ಮೈಲು ಈಸಿ ಹೋಗಬೇಕಾಗಿತ್ತು. ಮನರಂಜನ ಬೋಸ, ಪ್ರಫುಲ್ಲ ಘೋಷ ಚಟರ್ಜಿ, ಮತಿಲಾಲ ದತ್ತ ಈ ಮೂವರು ಅನುಕ್ರಮವಾಗಿ ೧-೨-೩ನೇ ಸ್ಥಾನಗಳನ್ನು ಪಡೆದರು. ಇಬ್ಬರು ಯುರೋಪಿಯನ್ನರು ೬-೭ನೇ ನಂಬರು ಬಂದರು. ಮೊದಲನೇ ನಂಬರು ಬಂದ ಮನರಂಜನ ಬೋಸರವರು ೪ ತಾಸು ೨೬ ಮಿನಿಟುಗಳಲ್ಲಿ ೨೨ ಮೈಲು ಈಸಿಹೋದರು.

— ವಿಧಿಘಟನೆ! ಆಫ್ರಿಕಾದೊಳಗಿನ ಜೋಹಾನ್ಸಬರ್ಗ ಪಟ್ಟಣದೊಳಗಿನ ಬೆಲ್ಜಿಯಂ ಎಂಬಲ್ಲಿ ವಜ್ರದ ಗಣಿಯಿದೆ. ಅಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಅತ್ಯಂತ ಬಡ ಹುಡುಗನಿಗೆ ದೊಡ್ಡದೊಂದು ವಜ್ರ ದೊರಕಿತು. ವಜ್ರವನ್ನು ಆತನ ತಂದೆಯು ೩೯,೦೦೦ ರೂಪಾಯಿಗಳಿಗೆ ಮಾರಿ, ಒಂದು ಗ್ರಾಮವನ್ನೂ, ಮೋಟಾರು ಒಂದನ್ನೂ ಖರೀದಿ ಮಾಡಿ ಖುಶಾಲಿನಿಂದ ಸಂಸಾರ ಮಾಡುತ್ತಿರುವನು. ಭಿಕ್ಷಾಪತಿಯಾಗಿದ್ದವನು ಸಹಸ್ರಾಧಿಪತಿಯಾದನು. ಹೋಲಿಕೆ!

— ಕೊಡಗಿನ ಹಾತೂರ ಗ್ರಾಮದಲ್ಲಿ ಶ್ರೀ॥ ಕೊಕ್ಕಂಡ ಅಪ್ಪಯ್ಯರೆಂಬವರೊಬ್ಬರಿರುವರು. ಅವರಿಗೆ ೯೩ ವರುಷ ವಯಸ್ಸು. ಆದರೂ ಸೂಜಿಗೆ ದಾರ ಹಾಕುವಷ್ಟು ಸೂಕ್ಷ್ಮ ದೃಷ್ಟಿ ಅವರಿಗಿದೆ. ಕಳೆದ ೪೦ ವರುಷಗಳಿಂದ ಅವರಿಗೆ ಕಾಯಿಲೆ ಸಹ ಇಲ್ಲ. ಸುದೈವಿ ಆಳು!

— ಜರ್ಮನಿಯ ಜೋನ ಜಾರ್ಜ ಸ್ಟೀನ ಎಂಬ ಇಂಜಿನಿಯರರೊಬ್ಬರು ಹೊಸ ಪ್ರಕಾರದ ನೀರುಮುಳುಕ ಹಡಗಗಳನ್ನು ತಯಾರಿಸಿರುವರು. ಈ ಹಡಗಗಳಲ್ಲಿ ಹೋಗಿ ಕುಳಿತುಕೊಂಡು ೩೦ ಸಾವಿರ ಫೂಟು ಆಳ ಹೋಗಬೇಕಾದ ಶೋಧ ಮಾಡಬಹುದು.

— ಪುಣೆಯಲ್ಲಿ ಸೇರಿದ ಮಹಾರಾಷ್ಟ್ರೀಯ ಶಿಕ್ಷಣ ಪರಿಷತ್ತಿನ ಅಧ್ಯಕ್ಷರಾದ ಪೈಂಪ್ರಂಧದ ನವಾಬ ಸಾಹೇಬರು ಮಹಾರಾಷ್ಟ್ರೀಯ ಶಿಕ್ಷಣ ಪ್ರಸಾರಕ್ಕಾಗಿ ೧೫ ಸಾವಿರ ರೂಪಾಯಿಗಳನ್ನರ್ಪಿಸಿರುವರು.

— ತಾಸಿಗೆ ೧೫೦ ಮೈಲು ಓಡುವ ಉಗಿಬಂಡಿಯೊಂದು ಜರ್ಮನಿಯಲ್ಲಿ ತಯಾರಾಗಿದೆ! ೨೦೦ ಮೈಲು ಓಡುವ ಉಗಿಬಂಡಿಯು ಅಮೇರಿಕೆಯಲ್ಲಿ ತಯಾರಾಗಿದೆ!!

— ಸಿಂಹಲದ್ವೀಪದ ಕಟುಕುರುಂದಿ ಎಂಬ ಗ್ರಾಮದಲ್ಲಿ ಒಂದು ಗಂಡು ಕರು ಹುಟ್ಟಿದೆ. ಅದಕ್ಕೆ ೩೨ ಹಲ್ಲುಗಳೂ ಇದ್ದವು. ಕಿವಿಯೊಳಗಿನ ಕೂದಲು ಕಾಲ್ಬೆರಳಿಗೆಯ ವರೆಗೆ ಬಂದಿದ್ದವು. ೩೬ ತಾಸುಗಳಲ್ಲಿ ಮೃತಹೊಂದಿತು.

— ಮಳೆಗಾಲದಲ್ಲಿ ಮೈಲಿಗೆ ೪ ಆಣೆ, ಬೇಸಿಗೆಯಲ್ಲಿ ಮೈಲಿಗೆ ೩ ಆಣೆಯಂತೆ ಸರಕಾರಿ ಕೆಲಸ ಮಾಡುವ ಗಾಡಿಗಳಿಗೆ ಬಾಡಿಗೆ ಕೊಡಬೇಕೆಂದು ದಕ್ಷಿಣ ಭಾಗದ ಕಮಿಶನರರು ಪ್ರಕಟನೆಯನ್ನು ಹೊರಡಿಸಿರುವರು.

— ಮುಂಬಯಿಯಲ್ಲಿ ಕಳೆದ ಸಪ್ಟಂಬರ ೫ನೇಗೆ ಹಿಂದುಸ್ಥಾನದ ಪಿತಾಮಹರೆಂಬ ಸಾರ್ಥ ಬಿರುದು ಧರಿಸಿದ ವರವೃದ್ಧ ದಾದಾಭಾಯಿ ನವರೋಜಿಯವರ ಶತಸಾಂವತ್ಸರಿಕ ಜಯಂತ್ಯುತ್ಸವವು ನೆರವೇರಿತು. ಮುಖ್ಯರು ಸಭಾಪತಿಗಳಿದ್ದರು. ಸಮಸ್ತ ಪಕ್ಷದವರು ಒಂದೆಡೆಗೆ ಸೇರಿದ ಅಪೂರ್ವ ನೋಟವು ಮುಂಬಯಿಪುರಸ್ಥರಿಗೆ ಲಭಿಸಿತು.

— ತ್ರಾವಣಕೋರದ ದರ್ಬಾರವು ಸಂಸ್ಥಾನದೊಳಗಿನ ಕೆರೆ-ಬಾವಿಗಳನ್ನು ಸಮಸ್ತ ಪ್ರಜೆಗಳು ಉಪಯೋಗಿಸಬಹುದೆಂದು ಹುಕುಮು ಮಾಡಿರುವದು.

ಅಂಕೋಲಾ ತಾಲೂಕಾ ಲೋಕಲ ಬೋರ್ಡ ಇಲೆಕ್ಷನ ಪೂರ್ವರಂಗದ ಸ್ಪಷ್ಟೀಕರಣ.

'ಕಾನಡಾವೃತ್ತ'ದ ಕಳೆದ ಸಂಚಿಕೆಯಲ್ಲಿ ಆ ಪತ್ರದ ಬಾತಮೀದಾರರು ಅಂಕೋಲೆಯೊಳಗಿನ ಲೋಕಲ್ ಬೋರ್ಡ ಚುನಾವಣೆಗಳ ಬಗ್ಗೆ ಒಂದು ಪತ್ರವನ್ನು ಬರೆದಿರುವರು. ಅವರ ಈ ಪತ್ರದಿಂದ ಜನರಲ್ಲಿ ಗೈರ ಸಮಜೂತಿಯಾಗುವ ಸಂಭವವಿದ್ದದರಿಂದ, ಮುಖ್ಯ ಚಳವಳಿಯಲ್ಲಿ ಮೊದಲಿಂದ ಕಡೆಯ ವರೆಗೆ ನಮ್ಮ ಅಂಗವಿದ್ದದರಿಂದ, ಈ ಚಳವಳಿಯ ಆರಂಭದ ಹಕೀಕತೆಯನ್ನು ಜನರ ಮುಂದೆ ಇಡಬೇಕೆಂತ ನಮ್ಮ ಆಲೋಚನೆಯಾಗಿ, ಆ ಪ್ರಕಾರ ನಡೆದ ಸಂಗತಿಯನ್ನು ಸ್ವಲ್ಪದರಲ್ಲಿ ಕೆಳಗೆ ವಿವರಿಸುತ್ತೇವೆ. ಲೋಕಲ್ ಬೋರ್ಡ ಚುನಾವಣೆಗಳು ಸಮೀಪ ಬಂದದ್ದರಿಂದ ಸ್ಥಾನಿಕ ಸ್ಥಿತಿಯನ್ನು ಲಕ್ಷಿಸಿ ಇಲೆಕ್ಷನಗಳನ್ನು ರಾಷ್ಟ್ರೀಯ ಪಕ್ಷದ ತರ್ಫೆನಿಂದ ಹ್ಯಾಗೆ ನಿರ್ವಹಿಸಲಿಕ್ಕೆ ಯಾವ ರೀತಿಯಿಂದ ಮುಂದುವರಿಸಬೇಕೆಂಬುದನ್ನು ಠರಾಯಿಸುವ ಬಗ್ಗೆ ನಾವು ಕೆಳಗೆ ಸಹಿ ಮಾಡಿದವರು ಅದೇ ಪ್ರಕಾರ ಶ್ರೀ॥ ವಿಶ್ವನಾಥ ಪ್ರಭು ಮತ್ತು ಶ್ರೀ॥ ಶ್ಯಾಮರಾವ ಶೇಣ್ವಿ ಮುಂತಾದವರು ಒಂದು ಇನ್ಫಾರ್ಮಲ್ ಸಭೆಯಲ್ಲಿ ಕೂಡಿಕೊಂಡು ಚರ್ಚೆಗೆ ಪ್ರಾರಂಭ ಮಾಡಿದರು. ಆದರೆ "प्रथमग्रासे मक्षिकापात." ಎಂಬ ಸಂಸ್ಕೃತ ಉಕ್ತಿಯಂತೆ ಚರ್ಚೆಯ ಪ್ರಾರಂಭದಲ್ಲಿಯೇ ಶ್ರೀ॥ ವಿಶ್ವನಾಥ ಪ್ರಭು ಮತ್ತು ಶ್ಯಾಮರಾವ ಶೇಣ್ವಿ ಇವರು ಅಂಕೋಲಾ ಇಂಗ್ಲಿಷ ಸ್ಕೂಲ ಕಮಿಟಿಯ ಮೆಂಬರರು ಉಮೇದವಾರರಾಗಿ ನಿಂತರೆ, ಇಲೆಕ್ಷನದಲ್ಲಿ ಮತ ಕೊಡಲಿಕ್ಕೆ ಪಾತ್ರರಿಲ್ಲೆಂಬರ್ಥದ ಠರಾವನ್ನು ಮುಂದೆ ತಂದರು. ಆದರೆ, ಲೋಕಲ್ ಬೋರ್ಡ ಇಲೆಕ್ಷನಕ್ಕೂ ಮತ್ತು ಶಾಲಾ ಕಮಿಟಿ ಮೆಂಬರರಿಗೂ ಇಲ್ಲಿ ಏನು ಸಂಬಂಧವಿದೆಯೆಂದು ಕೇಳಲು, ಶಾಲಾ ಕಮಿಟಿಯ ಮೆಂಬರರು ಸ್ವಯಂಭೂ ಕಮಿಟಿಯ ಮೆಂಬರರಿದ್ದದರಿಂದ ಲೋಕಲ್ ಬೋರ್ಡ ಇಲೆಕ್ಷನದಲ್ಲಿ ಅವರಿಗೆ ಮತ ಕೊಡಬಾರದೆಂಬ ಬಾದರಾಯಣ ಸಂಬಂಧ ಜೋಡಿಸಿ ತಮ್ಮ ಠರಾವು ಮಾನ್ಯ ಮಾಡಬೇಕೆಂದು ಹಟ ಹಿಡಿದರು. ಆದರೆ, ಇಲ್ಲಿಯ ಇಂಗ್ಲಿಷ ಶಾಲೆಯು ಖಾಸಗಿ ಕಮಿಟಿಯವರದಿರುವದೋ, ಅಥವಾ ಸಾರ್ವಜನಿಕವಿರುವದೋ ಎಂಬ ಪ್ರಶ್ನವು ವಾದಗ್ರಸ್ತವಿರುವದೆಂತ ಸೂಚಿಸಿ, ಶ್ರೀ॥ ವಿಶ್ವನಾಥ ಪ್ರಭುಗಳು ತಂದ ಠರಾವು ಅಸಂಬಂಧವಿರುವದೆಂತ ನಮ್ಮಲ್ಲಿ ಕೆಲವರು ಆ ಠರಾವಿಗೆ ವಿರೋಧಿಸಿದರು. ಆದರೆ, ಶ್ರೀ॥ ವಿಶ್ವನಾಥ ಪ್ರಭು ಇವರು ಹಟ ಹಿಡಿದು ಕುಳಿತದ್ದರಿಂದ, ತಡಜೋಡಿಯ ಅವಶ್ಯಕತೆಯನ್ನು ಕಂಡು, ಶಾಲಾ ಕಮಿಟಿಯ ಮೆಂಬರರು ಒಂದಾನು ವೇಳೆ ಉಮೇದವಾರರಾಗಿ ನಿಂತರೆ, ಅವರ ಚುನಾವಣೆಯನ್ನು ನಾವು ರಾಷ್ಟ್ರೀಯ ತರ್ಫೆನಿಂದ ಪುಷ್ಟೀಕರಿಸುವದಿಲ್ಲೆಂತ ಆಶ್ವಾಸನ ಕೊಟ್ಟು, ಶ್ರೀ॥ ವಿಶ್ವನಾಥ ಪ್ರಭು ಇವರಿಗೆ ತಮ್ಮ ಠರಾವನ್ನು ಪರತ ತೆಗೆದುಕೊಳ್ಳಲಿಕ್ಕೆ ಹೇಳಿದೆವು. ಆದರೆ, ಸ್ಕೂಲ ಕಮಿಟಿಯ ಮೆಂಬರರಿಗೆ ಮತ ಕೊಡಲಿಕ್ಕೆ "ಪಾತ್ರ"ರಿದ್ದಾರೋ, ಇಲ್ಲವೋ ಎಂಬ ಪ್ರಶ್ನದ ನಿಕಾಲಿ ಕೊಟ್ಟ ಹೊರತು, ಮುಂದರಿಸಲಿಕ್ಕೆ ಏನೂ ಉಪಾಯವಿಲ್ಲೆಂತ ಹೇಳಿ ತಮ್ಮ ಮೂಲ ಠರಾವಿಗೇ ಬಿಗಿಹಿಡಿದು ಕುಳಿತುಕೊಂಡಿದ್ದರಿಂದ ಶ್ರೀ॥ ವಿಶ್ವನಾಥ ಪ್ರಭು ಇವರು ತಮ್ಮ ಉತ್ಕಟ ತತ್ವಗಳನ್ನೂ ಧ್ಯೇಯಗಳನ್ನೂ ಬಿಟ್ಟು ಕೊಡಲಿಲ್ಲವಾದರೂ, ಸಾಮಾನ್ಯ ತಿಳುವಳಿಕೆಯ ದೃಷ್ಟಿಯಿಂದ (from a common sense point of view) ಈ ಠರಾವು ಅಸಂಬಂಧವಿದೆಯೆಂದು ಠರಾಯಿಸಿ, ಅದನ್ನು ನಾಪಾಸ ಮಾಡಿದರು. ಈ ಪ್ರಕಾರ ಒಂದು ವಿಘ್ನವು ದೂರವಾಗಿ ಪುನಃ ಚರ್ಚೆಗೆ ಪ್ರಾರಂಭವಾಗುವಷ್ಟರಲ್ಲಿ ಇನ್ನೂ ಅನೇಕ ವಿಘ್ನಗಳು ಆಕಾಶಮಂಡಲದಲ್ಲಿ ಒಂದರ ಹಿಂದೊಂದು ತಲೆದೋರಹತ್ತಿದವು. ಸದ್ಯದ ನಮ್ಮ ಅಂಕೋಲೆಯ ಸ್ಥಿತಿಯಲ್ಲಿ ರಾಷ್ಟ್ರೀಯ ಪಕ್ಷದ ಉಮೇದವಾರರನ್ನು ಹ್ಯಾಗೆ ಹುಡುಕಿ ತೆಗೆಯುವದೆಂಬ ಪ್ರಶ್ನವು ಚರ್ಚೆಗೆ ಬಂತು. ಇಲ್ಲಿ ಬೆಳಗಾಂವ ಕಾಂಗ್ರೆಸದಲ್ಲಿ ಪಾಸಾದ ಠರಾವಿನಂತೆ ನೂಲನ್ನು ಕಳಿಸುವ ಮೆಂಬರರಾಗಲಿ ಅಥವಾ ಸ್ವರಾಜ್ಯ ಪಾರ್ಟಿಯ ಮೆಂಬರರಾಗಲಿ, ವೋಟರ ಜನರೊಳಗೆ ಯಾರೂ ಇಲ್ಲದ್ದರಿಂದ, ಯಾರಿಗೆ ರಾಷ್ಟ್ರೀಯ ಪಕ್ಷದವರೆನ್ನಬೇಕು, ಯಾರಿಗೆ ಅನ್ಯದಾರರು ಎಂಬ ಕಠಿಣ ಪ್ರಶ್ನವು ವಿಚಾರಣೆಗೆ ಬಂತು. ಅದೇ ಪ್ರಕಾರ ರಾಷ್ಟ್ರೀಯ ಪಕ್ಷದ ಉಮೇದವಾರರೆಂತ, ಕಿರಿಯ ಅನಾನುಭವಿಕ ಯುವಕ ಜನರನ್ನೂ ಅಥವಾ ಅಜ್ಞಾತ ವ್ಯಕ್ತಿಗಳನ್ನೂ ಲೋಕಲ ಬೋರ್ಡಗಳಲ್ಲಿ ಕಳುಹಿಸಿ ಕೊಡುವದು ಇಷ್ಟವೋ ಅಥವಾ ಲೋಕಲ ಬೋರ್ಡಿನ ಹೊಸ ಜವಾಬದಾರಿಗಳನ್ನೂ, ಸ್ಥಾನಿಕ ಗರಜುಗಳನ್ನೂ ಅರಿತುಕೊಂಡು ಈಗಿನ ಸ್ಥಿತಿಯಲ್ಲಿ ಸ್ವಲ್ಪವಾದರೂ ಸುಧಾರಣೆಯನ್ನು ಒದಗಿಸಿ ಕೊಟ್ಟು, ಲೋಕಸೇವೆಯನ್ನು ಕೃತಿಯಿಂದ ಮಾಡಿ ತೋರಿಸಲಿಕ್ಕೆ ಸಮರ್ಥರಿದ್ದ ಜನರನ್ನು ಆರಿಸಿ ಕಳುಹುವದು ಹೆಚ್ಚು ಶ್ರೇಯಸ್ಕರವೋ ಎಂಬ ಬಗ್ಗೆ ಮತಭೇದವಾಯಿತು. ಲೋಕಲ ಬೋರ್ಡ ಸಂಸ್ಥೆಗಳಲ್ಲಿ ಈಗ ಬಹು ಅಂತರದ ಸ್ವಾತಂತ್ರ್ಯವು ಸಿಕ್ಕಿದ್ದರಿಂದ ಈ ಸಂಸ್ಥೆಗಳಲ್ಲಿ ಕಾಯಿದೆ ಕೌನ್ಸಿಲುಗಳಂತೆ ಕೇವಲ ಸರಕಾರಕ್ಕೆ ವಿರೋಧಮಾಡುವದೆಸೆಯಿಂದಲೇ ಪ್ರತಿನಿಧಿಗಳನ್ನು ಕಳುಹಿಸುವದು ಅವಶ್ಯ ಇಲ್ಲದೆ, ವಿಧಾಯಕ ರೀತಿಯಿಂದ ಲೋಕಸೇವೆಯನ್ನು ಮಾಡುವ ಜನರನ್ನು ಸಹ ಕಳುಹಿಸುವದು ಅವಶ್ಯ ಇದ್ದದರಿಂದ ಅದೇ ಪ್ರಕಾರ ನಮ್ಮ ಅಂಕೋಲೆಯಲ್ಲಿ ಈ ತರದಂಥ ಲೋಕಲಬೋರ್ಡದ ಜವಾಬದಾರಿಗಳನ್ನು ಮೈಮೇಲೆ ತಕ್ಕೊಂಡು ಕೆಲಸ ಮಾಡಲಿಕ್ಕೆ ಪಾತ್ರರಿದ್ದ ೧೬ ಆನೆ ರಾಷ್ಟ್ರೀಯ ಪಕ್ಷದ ಮುಖಂಡರು ತೀರ ಕಡಿಮೆ ಇದ್ದದರಿಂದ ಸ್ಥಾನಿಕ ಸ್ಥಿತಿಗಳ ಕಡೆಗೆ ಲಕ್ಷ ಕೊಟ್ಟು, ಇಲ್ಲಿಯ ಪೆನಶನದರರಾದ ಶ್ರೀ॥ ಭಾಸ್ಕರರಾವ ಮುಂಜುವದಾರ ಇವರನ್ನೂ ಮತ್ತು ಸರಕಾರಿ ಕೊಂಟ್ರಾಕ್ಟರರಾದ ಶ್ರೀ॥ ವಿಶ್ವನಾಥ ಪ್ರಭು ಇವರನ್ನೂ ರಾಷ್ಟ್ರೀಯ ತರ್ಫೆನಿಂದ ನಿಲ್ಲಿಸಲಿಕ್ಕೆ ಹರಕತ ಇಲ್ಲೆಂತ ಕೆಲವರು ಸೂಚಿಸಿದರು. ಆದರೆ, ಪಕ್ಷಾಂಧತ್ವದಿಂದ ಕೆಲವರು ಶ್ರೀ॥ ಭಾಸ್ಕರರಾಯರು ಬೇಡವೆಂತ ಹೇಳತೊಡಗಿದರು. ಶ್ರೀ॥ ಭಾಸ್ಕರರಾಯರನ್ನು ತಕ್ಕೊಳ್ಳಬಹುದೋ ಅಥವಾ ತಕ್ಕೊಳ್ಳಬಾರದೋ ಎಂಬುವರ ಬಗ್ಗೆ ಬಹಳ ದಿವಸ ವಾದ ನಡೆದು, ಕಡೆಗೆ ಶ್ರೀ॥ ಭಾಸ್ಕರರಾಯರೇ ತಮಗೆ ಈ ರಾಷ್ಟ್ರೀಯ ಪಕ್ಷದವರ ಹುಡುಗಾಟಿಕೆಯ ಘೋಟಾಳೆಯಲ್ಲಿ ಸಿಕ್ಕಿಸುವದು ಬೇಡೆಂತ ಹೇಳಿದ್ದರಿಂದ ಈ ಪ್ರಶ್ನದ ನಿಕಾಲಿಯಾಯಿತು. ಆದರೆ, ಇತ್ತ ಶ್ರೀ॥ ಭಾಸ್ಕರರಾಯರ ಉಮೇದವಾರಿಯ ಬಗ್ಗೆ ಬಹಳ ನೇಟದಿಂದ ವಿರೋಧ ಮಾಡಿದ ಶ್ರೀ॥ ವಿಶ್ವನಾಥ ಪ್ರಭು ಮತ್ತು ಶ್ರೀ॥ ಶ್ಯಾಮರಾವ ಶೇಣ್ವಿ ಇವರು ಕೆಲವು ಹಳ್ಳಿವಾಡದೊಳಗಿನ ಪಟೇಲರನ್ನು ರಾಷ್ಟ್ರೀಯ ಪಕ್ಷದ ತರ್ಫೆನಿಂದ ನಿಲ್ಲಿಸಬೇಕೆಂತ ಸೂಚನೆಯನ್ನು ಮುಂದಕ್ಕಿಟ್ಟರು. ಆದರೆ ಪಾಟೀಲರು ಪೆನಶನರರಕ್ಕಿಂತ ವಿಶೇಷವಾಗಿ ಸರಕಾರದ ಹಂಗಿನೊಳಗೆ ಇದ್ದದರಿಂದ, ಈ ಸರಕಾರದ ಹಂಗಿನ ದೋಷವು ಕೇವಲ ಸ್ವಾರ್ಥ ಜಾತಿಯ ಉಮೇದವಾರರಿಗೆ ಇರುತ್ತದೋ ಅಥವಾ ಎಲ್ಲಾ ಜಾತಿಗಳಿಗೂ ಇ

ಯಾಗಿ ಇರುತ್ತದೋ ಎಂತ ಕೇಳಿ ಶ್ರೀ॥ ವಿಶ್ವನಾಥ ಪ್ರಭುಗಳ ಸೂಚನೆಯನ್ನು ನಮ್ಮೊಳಗಿನ ಕೆಲವರು ವಿರೋಧಿಸಿರು. ಅದೇ ಪ್ರಕಾರ ಇಲ್ಲಿಯ ರಾಷ್ಟ್ರೀಯ ಪಕ್ಷದ ಒಬ್ಬ ತರುಣ ಹೋತಕರು ಉಮೇದವಾರರಾದ ಶ್ರೀ॥ ಮುಕೇಪ್ರಭು ಇವರನ್ನು ರಾಷ್ಟ್ರೀಯ ಪಕ್ಷದ ತರ್ಫೆನಿಂದ ನಿಲ್ಲಿಸಬೇಕೆಂತ ಸರ್ವಸಮ್ಮತಿಯಿಂದ ಠರಾಯಿಸಿದರು. ಆದರೆ, ಶ್ರೀ॥ ವಿಶ್ವನಾಥ ಪ್ರಭು ಇವರಿಗೆ ಈ ಉಮೇದವಾರನು ಪಸಂತ ಆಗದೇ ತಮ್ಮ ಜಾತಿಯ ಒಬ್ಬ ರಾ॥ ರಾಮಕೃಷ್ಣ ವಿಠ್ಠಲ ಭಟ್ಟ ಇವರನ್ನು ಅವರ ಬದಲಾಗಿ ನೇಮಿಸಬೇಕಾಗಿ ಒತ್ತಾಯಮಾಡಹತ್ತಿದರು. ಇದಕ್ಕೂ ನಮ್ಮೊಳಗಿನ ಕೆಲವರು ವಿರೋಧಿಸಿದ್ದರಿಂದ ಯಾವ ಉಮೇದವಾರನನ್ನು ನಿಲ್ಲಿಸಬೇಕೆಂತ ಪ್ರಶ್ನವನ್ನು ಕೂಡ ತಹಕೂಬ ಇಟ್ಟು, ನೊಮಿನೇಶನ ಪತ್ರಿಕೆಗಳನ್ನು ತುಂಬಿ ಅದನಂತರ ಇಲೆಕ್ಶನದ ಸಲುವಾಗಿ ನಿಂತ ಉಮೇದವಾರರ ಲಿಸ್ಟನ್ನು ತಕ್ಕೊಂಡು ಅವರ ಪೈಕಿ ಯಾರಿಗೆ ರಾಷ್ಟ್ರೀಯ ಪಕ್ಷದಿಂದ ಪ್ರಸಿದ್ಧಿ ಕರಿಸಬೇಕೆಂಬುವದನ್ನು ಠರಾಯಿಸಿ, ಜನರೊಳಗೆ ಹಸ್ತಪತ್ರಿಕೆಗಳಿಂದ ಈ ಹೆಸರುಗಳನ್ನು ಘೋಷಿತ ಮಾಡಬೇಕೆಂತಲೂ ವ ತ್ತು ಜೋರಿನ ಚಳವಳಿಯನ್ನು ಎಬ್ಬಿಸಬೇಕೆಂತಲೂ ಸೂಚನೆಯನ್ನು ಮಾಡುವದರಲ್ಲಿ ಬಂತು. ಈ ಕ್ರಮವು ಹೆಚ್ಚು ನ್ಯಾಯವೆಂತ ಎಲ್ಲರೂ ಒಪ್ಪಿ ಸರ್ವಸಮ್ಮತಿಯಿಂದ ಈ ಸೂಚನೆಯನ್ನು ಮಾನ್ಯಮಾಡಿದರು. ಊರಲ್ಲಿ ಸಹ ಈ ವರುಷ ರಾಷ್ಟ್ರೀಯ ತರ್ಫೆನಿಂದ ಬಲವತ್ತರವಾದ ಚಳವಳಿಯು ಹೊರಡುವದೆಂದು ಸುದ್ದಿಯು ನಾಲ್ಕೂ ದಿಕ್ಕಿನಲ್ಲಿ ಹಬ್ಬಿತು. ಆದರೆ, ಇಷ್ಟರಲ್ಲಿ ಅದ ಮರು ದಿವಸವೇ ಶ್ರೀ॥ ಶ್ಯಾಮರಾವ ಶೆಣೈ ಇವರು ಸ್ಕೂಲ ಕಮೀಟಿಯ ಮೆಂಬರರಾದ ಶ್ರೀ॥ ಶೇಷಗಿರಿ ಕಾಮತ್ತ ಇವರ ಕಡೆಗೆ ಹೋಗಿ ತಮ್ಮ ರಾಷ್ಟ್ರೀಯ ಪಕ್ಷದ ಪ್ರಯತ್ನಗಳೆಲ್ಲಾ ನಿರರ್ಥಕವೆಂತಲೂ ಮತ್ತು ಅದಕ್ಕೆ ತಮ್ಮ ಜಾತಿಯ ಉಮೇದವಾರರನ್ನೇ ಕಳಿಸುವ ಪ್ರಯತ್ನ ಮಾಡಬೇಕೆಂತ ಹೇಳಿ ಶ್ರೀ॥ ಶೇಷಗಿರಿ ಕಾಮತರನ್ನು ಉಮೇದವಾರರಾಗಿ ನಿಲ್ಲಲಿಕ್ಕೆ ಆಗ್ರಹದ ವಿನಂತಿಯನ್ನು ಮಾಡಿದರು. ಆದರೆ, ಶ್ರೀ॥ ಶೇಷಗಿರಿ ಕಾಮತ ಇವರು ಸ್ಕೂಲ ಕಮೀಟಿಯ ಮೆಂಬರರ ಮೇಲೆ ನಿಂದ್ಯಾಸ್ಪದ ಠರಾವು ತಂದು, ಈಗ ೧೫ನೇ ಲೋಕಲ ಬೋರ್ಡದ ಮೆಂಬರರಾಗಲಿಕ್ಕೆ ಯಾಕೆ ಆಗ್ರಹ ಮಾಡುತ್ತೀರಿ ಎಂತ ಕೇಳಲು, ಆ ಠರಾವು ತಂದದ್ದು ನಾನಲ್ಲ, ಮತ್ತು ಶ್ರೀ॥ ವಿಶ್ವನಾಥ ಪ್ರಭುನೂ ಅಲ್ಲ ಎಂತ ಹೇಳಿದರಂತೆ. ಈ ಪ್ರಕಾರ ರಾಷ್ಟ್ರೀಯ ಪ್ರಯತ್ನಗಳು ನಿರರ್ಥಕವಾಯಿತೆಂತ ಶ್ರೀ॥ ಶ್ಯಾಮರಾಯರು ಹೇಳಿದ ಸುದ್ದಿಯು ವಿದ್ಯುದ್ವೇಗದಿಂದ ನಾಲ್ಕೂ ಕಡೆಗೆ ಹಬ್ಬಿ, ಈ ರಾಷ್ಟ್ರೀಯ ಪಕ್ಷದವರು ಶೇಷಗಿರಿ ವ್ಯಾಪಾರವನ್ನು ನಡಿಸಿದ್ದಾರೆಂತಲೂ ಮತ್ತು ರಾಷ್ಟ್ರೀಯ ತತ್ವಗಳನ್ನು ಬಹಿರಂಗದಲ್ಲಿ ಉಚ್ಚರಿಸಿ ಒಳಗಿಂದ ತಮ್ಮ ಜಾತಿಯ ಜನರನ್ನೇ ಸೇರಿಸುವ ಶ್ರೀ॥ ಶ್ಯಾಮರಾವ ಮತ್ತು ಶ್ರೀ॥ ವಿಶ್ವನಾಥ ಪ್ರಭು ಇವರ ಪ್ರಯತ್ನ ನಡೆದಿರುವದೆಂತಲೂ ಒಂದೇ ಸವನೆ ಕೋಲಾಹಲವಾಯಿತು. ಅದ್ದರಿಂದ ನಮ್ಮಲ್ಲಿನವರ ರಾಷ್ಟ್ರೀಯ ತರ್ಫೆನಿಂದ ನಡಿಸಿದ ಪ್ರಯತ್ನಗಳು ವ್ಯರ್ಥವಾಗಿ, ಈಗ ತಮ್ಮ ತಮ್ಮ ಜಾತಿಯ ಜನರನ್ನೇ ಬೋರ್ಡುಗಳಿಗೆ ಕಳುಹಿಸುವ ಪ್ರಯತ್ನಗಳು ನಡೆದಿರುವವು. ತಮಗೆ ಜಾತಿಯ ಅಭಿಮಾನವಿಲ್ಲೆಂತ ಹೇಳಿ ಜನರಲ್ಲಿ ಗೈರಸಮಜೂತಿ ಮಾಡುವದರ ಬದಲಾಗಿ, ತಮಗೆ ಜಾತಿಯ ಅಭಿಮಾನವಿರುತ್ತದೆಂತ ಸತ್ಯವಿದ್ದದ್ದನ್ನ ಶ್ರೀ॥ ವಿಶ್ವನಾಥ ಪ್ರಭು ಮತ್ತು ಶ್ರೀ॥ ಶ್ಯಾಮರಾಯರು ಹೇಳಿದ್ದರೆ ಈ ಸ್ಥಿತಿಯು ಯಾಕಾಗುತ್ತಿತ್ತು? ಜಾತಿಯ ಅಭಿಮಾನವು ಯಾರಿಗೆ ಇಲ್ಲ? ನಮ್ಮ ಸದ್ಯದ ಸಾಮಾಜಿಕ ಸ್ಥಿತಿಯಲ್ಲಿ ಜಾತಿಯ ಅಭಿಮಾನವು ಪ್ರತಿ ಒಬ್ಬರಿಗೆ ಇರುವದು ಸಹಜವು. ಆದರೆ ತಮಗೆ ಅಭಿಮಾನವಿಲ್ಲೆಂತ ಹೇಳಿ ಜನರಲ್ಲಿ ಗೈರಸಮಜೂತಿ ಮಾಡುವದರಿಂದ ಎಷ್ಟು ಮುಷ್ಕಿಲ ವರಿಣಾಮಗಳು ಒದಗತವೆಂಬುದು ಮೇಲಿನ ವೃತ್ತಾಂತದಿಂದ ಜನರ ನಿದರ್ಶನಕ್ಕೆ ಬರುವದು. ಅದ್ದರಿಂದ ಅಂಕೋಲೆಯೊಳಗಿನ ಎಲ್ಲಾ ಮತದಾರರು ಮೇಲಿನ ಎಲ್ಲಾ ಸಂಗತಿಗಳ ಮೇಲಿಂದ ಆಸಬಾಸ ನೋಡು ತಾವು ರಾಷ್ಟ್ರೀಯ ಪಕ್ಷದವರೆಂತ ಹೇಳಿ ಯಾರೂ ತಮ್ಮ ಕಡೆಗೆ ಮತವನ್ನು ಬೇಡಬಂದರೆ ಅವರ ಮಾತುಗಳಿಗೆ ನಂಬಿಸದೆ ನಿಸ್ವಾರ್ಥ ಬುದ್ಧಿಯಿಂದ ಜನರ ಹಿತವನ್ನು ಮಾಡುವವರನ್ನೇ ಆರಿಸಿಕೊಡಬೇಕಾಗಿ ವಿಜ್ಞಾಪನೆ ಇರುವದು.

ಅಂಕೋಲಾ ೧೨-೯-೩೭
[illegible]
[illegible]
[illegible]
[illegible]

ಅಂಕೋಲೆಯ ಬಾತಮಿ ಪತ್ರ.
ಮತ್ತೂ ಆರಿಸಪ್ರಾನಗಳು,
ಮತ್ತೂ ಕುಭಾಂಡಗಳು.
ಶಾಂತಾನ್ತಃಪಾಪಂ ಪ್ರತಿಹತಮಮಂಗಲಮ್
(ನಮ್ಮ ಬಾತಮಿದಾರರಿಂದ)

ಲೋಕಲ ಬೋರ್ಡ ಇಲೆಕ್ಶನದ ಕಾದಾಟದ ಕಾಮನರಾಗುವ ಉಮೇದವಾರರನ್ನು ಆರಿಸಿ ಅವರ ನೋಂದಣಿ ಅರ್ಜಿಗಳನ್ನು ದಾಖಲು ಮಾಡುವ ಕೆಲಸವು ಇಂದಿಗೆ ಮುಗಿಯಿತು. ಅಂಕೋಲೆಯೊಳಗೆ ಈ ಕದನಕ್ಕಾಗಿ ಎರಡು ಪಕ್ಷಗಳು ತಮ್ಮ ಯುಕ್ತಿ-ಪ್ರಯುಕ್ತಿಯ ಮತ್ತು ಕಾರಸ್ಥಾನಗಳ ಅಸ್ತ್ರಶಸ್ತ್ರಗಳಿಂದ ಸಜ್ಜವಾಗಿ ಬಂದಕ್ಕೊಂಡು ಎದುರಾಗುತ್ತಲಿವೆ. ಒಂದು ಪಕ್ಷವು ಸಮ್ರಾಜ್ಯ ಪಕ್ಷವು, ಮತ್ತೊಂದು ಪಕ್ಷವು ರಾಷ್ಟ್ರೀಯ ಪಕ್ಷವು. ವಿಲಾಯತಿಯೊಳಗಿನ ಪಕ್ಷಗಳ ಹೆಸರಿನಿಂದ ಅವುಗಳ ಗುರ್ತು ಹಿಡಿಯಬೇಕಾದರೆ ಮೊದಲನೇದು ಕಾನ್ಸರ್ವೇಟಿವ್, ಅಂದರೆ, ಸರಕಾರಪಕ್ಷಪಾತಿಯಾದ ಸಂಗವು, ಎರಡನೇದು ಲಿಬರಲ್, ಅಂದರೆ, ಲೋಕಪಕ್ಷಪಾತಿ ಹೊಸ ಸಂಗವು. ಸುಲಭ ಭಾಷೆಯಿಂದ ಹೇಳುವದಾದರೆ, ಒಂದು ರಾಜರ ಪಕ್ಷವು, ಮತ್ತೊಂದು ಲೋಕಪಕ್ಷವು ಇನ್ನು ಉಮೇದವಾರರ ಅರ್ಜಿಗಳನ್ನು ತಪಾಸ ಮಾಡಿದ ನಂತರ ಯಾರ ಯಾರ ಉಮೇದವಾರಿಯು ಪಾರ ಹೋಗುವದೆಂದು ಮುಂದಿನ ವಾರ ತಿಳಿಯುವದು. ಹೊಸ ಲೋಕಲ ಬೋರ್ಡಿನ ಕಾಯಿದೆಯ ಕಲಮುಗಳಿಗೆ ವಿಸಂಗತವಾಗದಂತೆ ಇಲೆಕ್ಶನದ ನಿಯಮಗಳನ್ನು ಓದಿದರೆ, ದೊಡ್ಡದೊಂದು ಬ್ರಹ್ಮಘೋಟಾಳೆಯು ಹೊರಬೀಳುವದೋ ಏನೋ! ಸರ್ವಜ್ಞನೇ ಬಲ್ಲ. ಇನ್ನು ಬಂತ ಎರಡು ಕುಂಭಾಂಡಗಳು: "ಮೋರೆಗೆ ಹುಣ್ಣ ಕಟ್ಟುವದು," "ತಕ್ಕಡಿ ಹಿಡಿಯುವವರು," ಎಂದು ಕೇವಲ ನಿರಾಧಾರವಾಗಿ ರಚಿಸಲ್ಪಟ್ಟಿರಿ, ಅವುಗಳಿಂದ ಪರಿಣಾಮ ಉಂಟಾಗಿಲ್ಲ. ಅವುಗಳನ್ನು ಉಂಟುಮಾಡಿದವನು ಸಿದ್ಧಮಾಡಲಿಕ್ಕೆ ಕರೆದರೂ ಮೋರೆ ಅಡಗಿಸಿ ಹೋದನು. ಉಮೇದವಾರರನ್ನು ಆರಿಸಲಿಕ್ಕೆ ಮತ್ತು ಅಂಕೋಲಾ ಕಸಬೆಯಲ್ಲಿ ಯಾವ ಜನರ ಮತಗಳು ಹೆಚ್ಚು ಪ್ರಮಾಣದಿಂದ ಇವೆಯೋ ಅಂಥ ವಾಮ್ಮೆ ವೈಶ್ಯ ಬ್ರಾಹ್ಮಣ ಒಂಥವರ ಒಬ್ಬ ಸದ್ಗೃಹಸ್ಥರಿಗೆ ಅವರ ಕೀರ ಕಡಿಮೆ ಪ್ರಮಾಣದ ಮತದಾರರಿರುವ ಬಾವಿಕೇರಿ ಗ್ರೂಪಿನಲ್ಲಿ ಉಮೇದವಾರರಾಗಿ ನಿಲ್ಲಿಸಲಿಕ್ಕೆ ದೊಡ್ಡ ಕಾರಸ್ಥಾನ ನಡಿಸುವದರಲ್ಲೇ ಹೊತ್ತು ಕಳೆದು ಹೋದದರಿಂದ ಕುಭಾಂಡದ ರಚನೆಯಾಗಿಲ್ಲ. ಇನ್ನು ಮುಂದೆ ಅವು ದಿನೇ ದಿನೇ ಹೆಚ್ಚು ಪ್ರಮಾಣದಿಂದ ಹೊರಬೀಳುವವೆಂದು ಅಂದಾಜಿದೆ. ಇಲ್ಲಿಯ ಪ್ರಸಿದ್ಧ ವಕೀಲ ರಾ॥ ಶೇಷಗಿರಿರಾವ ಕಾಮತರವರು ಯಾವ ಪಕ್ಷದ ತರ್ಫೆನಿಂದ ಕಸಬಾ ಗ್ರೂಪಿಗೆ ಉಮೇದವಾರರಾಗಿ ನಿಲ್ಲುವರೆಂದು ಸುದ್ದಿ ಇದೆ. ಮತ್ತೆ ಯಾವ ಪಾರ್ಟಿಗೆ ಯಾವ ಉಮೇದವಾರರು ನಿಂತಿದ್ದಾರೆಂದು ೧೫ ನೇ ತಾರೀಖಿಗೆ ಹೊರಬೀಳುವದು. ಶ್ರೀಯುತ ಶ್ಯಾಮರಾವ ಶೆಣೈ ಮತ್ತು ಶ್ರೀಯುತ ವಿಶ್ವನಾಥ ಪ್ರಭು ಬಿ. ಎ. ರವರು ಲೋಕಪಕ್ಷದ ತರ್ಫೆನಿಂದ ರಾಷ್ಟ್ರೀಯ ಉಮೇದವಾರರೆಂದು ತಾಲೂಕಾ ಬೋರ್ಡ್ ವ ಜಿಲ್ಲಾ ಬೋರ್ಡುಗಳ ಉಮೇದವಾರಿಯಲ್ಲಿ ದಾಖಲಾಗಿರುವರೆಂದು ಖಾತ್ರಿಯ ವರ್ತಮಾನ ತಿಳಿಯುತ್ತೇವೆ. ಒಟ್ಟಿಗೆ ಈ ಚುನಾವಣೆಯ ಕದನಕ್ಕಾಗಿ ಎರಡೂ ಸಂಗಡದವರು ತಮ್ಮ ತಮ್ಮ ಕಂಪಿಗಳನ್ನು ಪೃಥಕ್ ಪೃಥಕ್ ಊದಿದರೆಂಬ ಸಂಗತಿಯು ನಿಜವು. ಗೋಪಿಗಳ ಸಂಗಡ ಕೃಷ್ಣಲೀಲೆಯನ್ನು ಮಾಡುವ ದೇವಕೀನಂದನನು ಎರಡೂ ಸಂಗಡಗಳನ್ನು ನಾಶಪಡಿಸುತ್ತೇನೆಂದು ಯಾರೊಬ್ಬರ ಹತ್ತರ ಹೇಳಿದ್ದು ನಿಜವೋ ಎಂತ ೧೫ ನೇ ತಾರೀಖಿಗೇ ತಿಳಿಯುವದು.

ಅಮೇರಿಕನ್ ಉಪಾಯ.
ಎಂಬ್ರೋಸಿಯಾ.

AMBROSIA
ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತದೆ. ಚಲೋ ಆಹಾರ ದೊರಕದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳ ಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ಕ್ಕೆ ರೂಪಾಯಿ ೨—೦—೦

ಏಜಂಟರು— ವೀರಯುಲ ಏಜನ್ಸಿ,

ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨

ಜಾಹೀರನಾಮೆ.

ಶ್ರೀ ಮದ್ರಾಮಚಂದ್ರಾಪುರ ಶ್ರೀ ಸಂಸ್ಥಾನಾಧಿಕಾರಸ್ಥಾನದಿಂದ—

ಸಮಸ್ತ ವಿದ್ವಚ್ಛಿರೋಮಣಿಗಳಿಗೆ,

ಸಂಧ್ಯಾವಂದನಾದಿ ನಿತ್ಯ ಕರ್ಮಾದಿಗಳಲ್ಲಿ ಮಾಡುವ ಮಾರ್ಜನ ವಿಧಿ ನಿರೂಪಣೆ ಪ್ರಸಂಗದಲ್ಲಿ,

೧

प्रशस्तमुदकं ब्रह्म मुखालयेनाभिमन्त्र्य च ॥ आपोहिष्ठादिभिर्मन्त्रैर्दर्भैः शिरसि मार्जयेत् ॥१॥

स्पृष्ट्वा चाभिष्टुवंतोयं मूर्ध्नि ब्रह्ममुखेन च॥ आपोहिष्ठादिभिर्मन्त्रैर्दर्भैः शिरसि मार्जयेत् ॥२॥

ಇವೆರಡೂ ಭಿನ್ನ ಭಿನ್ನ ಮಹಾಸ್ಮೃತಿಗಳ ಶ್ಲೋಕಗಳಾಗಿರುತವೆ ಇವುಗಳಲ್ಲಿ ಪ್ರಯೋಗ ಮಾಡಿರುವ **मूर्ध्नि, ब्रह्ममुख,** ಈ ಶಬ್ದಗಳು ಯಾವ ಸ್ಥಾನಗಳಿಗೆ ಸಂಜ್ಞೆಯಾಗಿರುತ್ತವೆ. ಅಥವಾ ಬೇರೆ ಯಾವದಾದರೂ ಅರ್ಥಗಳಾಗುತವೆಯೋ?

ಮತ್ತೂ ಸಕಲ ಮಹಾಜನಗಳೂ ಕೂಡಾ ಪ್ರದೋಷ ಕಾಲದಲ್ಲಿ ಪಠಿಸುವ ನಾರದ ಪುರಾಣಾಂತರ್ಗತವಾದ ಶ್ರೀ ಮಹಾಗಣಪತಿ ಸ್ತೋತ್ರದಲ್ಲಿ ಸೇರಿರುವ.

೨

अष्टानां ब्राह्मणानां च लिखित्वा यः समर्पयेत् ॥ तस्य विद्या भवेत्सर्वा गणेशस्य प्रसादतः॥१॥

ಈ ಶ್ಲೋಕದಲ್ಲಿ (**अष्टभ्यो ब्राह्मणेभ्यश्च**) ಯೆಂಬದಾಗಿ ಚತುರ್ಥಿ ವಿಭಕ್ತ್ಯಂತ ಪಾಠವು ಕೂಡಾ ತೋರುತ್ತದೆ ಆದರೆ ಸಪ್ರಮಾಣವಾದ್ದು, ಷಷ್ಠಿ ವಿಭಕ್ತ್ಯಂತವೋ? ಚತುರ್ಥಿ ವಿಭಕ್ತ್ಯಂತವೋ?

ಈ ವಿಷಯಗಳನ್ನು ಯೋಗ್ಯ ಶಾಸ್ತ್ರಾರ್ಥ ವಿಚಾರದಿಂದ ಸಪ್ರಮಾಣವಾಗಿ ನಿರೂಪಣೆ ಮಾಡಿ ಈ ಕೆಳಗೆ ವಿವರಿಸಿದವರ ವಿಳಾಸಕ್ಕೆ ಬರುವ ಆಶ್ವಯುಜ ಶು| ೧೦ (ವಿಜಯಾ ದಶಮಿ) ಯೊಳಗೆ ಕಳಿಸಿ ಕೊಡಬೇಕು. ಅದೇ ಆಶ್ವಯುಜ ಬಹುಳದಲ್ಲಿ ಶ್ರೀ ಶ್ರೀ ಮಹಾಸಂನಿಧಿಯ ಮುಂದೆ ಬಂದು ಈ ವಿಷಯಗಳನ್ನು ನಿರೂಪಣೆ ಮಾಡಿ ಸಮಾಧಾನ ಕೊಟ್ಟಲ್ಲಿ ಅವರವರ ಶಾಸ್ತ್ರಾರ್ಥನಿರೂಪಣಾನುಸಾರವಾಗಿ, ಉತ್ತಮ, ಮಧ್ಯಮಾದಿ ತರತಮಭಾವವನು ತಿಳಿದು ಯೋಗ್ಯ ಬಹುಮಾನವನ್ನು ಕೂಡಾ ಕೊಡಬೇಕೆಂತ ನಿಶ್ಚಯಿಸಿಗುತ್ತದೆ.

ಕ್ರೋಧನ ಸಂ| ಭಾದ್ರಪದ ಶು ೧೪ಯು ಗುರುವಾರ, ಶೆಕ್ಕಾರರಘೋತ್ತಮ ಮಠ, ಜಿಲ್ಹಾ ಉತ್ತರ ಕಾನಡಾ. ತಾ ಹೊನ್ನಾವರ. ಪೋಸ್ಟ— ಮುಲ್ಲಾಪುರ.	ಶ್ರೀ; ಶ್ರೀ; ಮಹಾ ಸನ್ನಿಧಾನದ ಅಪ್ಪಣೆ ಪ್ರಕಾರ. ಗಂಗಾಧರಶಾಸ್ತ್ರಿ ಪಾರುಪತಗಾರ.

ಅಂಗಡಿ (ತಾ. ಕಾರವಾರ) ಎಜ್ಯುಕೇಶನ ಸೊಸೈಟಿ.

ಸಭ್ಯ ಗೃಹಸ್ಥರೇ,

ಕಾರವಾರ ತಾಲೂಕ ಪೈಕಿ ಶಿವೇಶ್ವರ-ಅಂಗಡಿ ಮತ್ತು ಇದಕ್ಕೆ ಹೊಂದಿರುವ ಸುತ್ತುಮುತ್ತಲಿನ ಹತ್ತು ಊರುಗಳ ಜನಸಂಖ್ಯೆ ಸುಮಾರು ಹಂಬತ್ತು ಸಾವಿರ ಇದ್ದು, ಸದ್ರಿ ಊರುಗಳ ಪ್ರಾಥಮಿಕ ಶಾಲೆಗಳಲ್ಲಿ ಸುಮಾರು 700 ಹುಡುಗರು ಕಲಿಯುತ್ತಿರುವರು. ಆದರೆ, ಇಂಗ್ಲೀಷ ಕಲಿಸುವ ಶಾಲೆಗಳು ಇಲ್ಲದ್ದರಿಂದ ಧನವಂತರಲ್ಲಿ ಹಲವರು ಮಾತ್ರ ಬೇರೆ ಊರುಗಳಿಗೆ ಹೋಗಿ ಇಂಗ್ಲೀಷ ವಿದ್ಯಾಭ್ಯಾಸವನ್ನು ಮಾಡುತ್ತಿರುವರು. ಉಳಿದ ಶ್ರೀಮಂತ ಮ ಬಡವರ ಮಕ್ಕಳ ಇಂಗ್ಲೀಷ ಶಿಕ್ಷಣವನ್ನು ಹೊಂದುವದು ಶಕ್ಯವಿರುವದಿಲ್ಲ. ಆದ್ದರಿಂದ ಸದ್ರಿ ಊರುಗಳಲ್ಲಿ ಹಿಂದು, ಮುಸಲ್ಮಾನ, ಕ್ರಿಸ್ತಿ ವಗೈರೆ ಎಲ್ಲಾ ಧರ್ಮಗಳ ಹಾಗೂ ಎಲ್ಲಾ ಜಾತಿಗಳ ಜನರಿದ್ದರೂ ಇಂಗ್ಲೀಷ ಬಲ್ಲವರು ಒಬ್ಬರೂ ಸಹ ಇಲ್ಲವೆಂಬದನ್ನು ದುಃಖದಿಂದ ಹೇಳಬೇಕಾಗುತ್ತದೆ. ಇಂಗ್ಲೀಷ ಶಾಲೆಯು ಸಮೀಪದಲ್ಲಿ ಇಲ್ಲದಿರುವದೂ, ಜನರ ಬಡತನ ಸ್ಥಿತಿಯೂ ಇದಕ್ಕೆ ಕಾರಣವಾಗಿರುತ್ತದೆ

ಈ ಕಾರಣ "ಅಂಗಡಿ" ಯಲ್ಲಿ ಒಂದು ಎಜ್ಯುಕೇಶನ ಸೊಸೈಟಿಯನ್ನು ಸ್ಥಾಪಿಸಿ, ಅದರಿಂದ ಇಂಗ್ರೇಜಿ ಶಿಕ್ಷಣದ ಕ್ಲಾಸನ್ನೂ, ಧಂದೆ ಶಿಕ್ಷಣದ ಕ್ಲಾಸನ್ನೂ ತೆಗೆಯಬೇಕೆಂದು ನಿಶ್ಚಯಿಸಿದ್ದೇವೆ. ಈ ಕಾರ್ಯಕ್ಕೆ ಸುಮಾರು ಹತ್ತು ಸಾವಿರ ರೂಪಾಯಿಗಳು ಬೇಕಾಗುವದೆಂದು ಅಂದಾಜ ಮಾಡಲ್ಪಟ್ಟಿದೆ ಸದ್ರಿ ಊರುಗಳ ಜನರು ಬಹುಕರ ಬಡ ಒಕ್ಕಲಿಗರಾಗಿದ್ದರೂ, ಈ ಮಹತ್ವದ ಕಾರ್ಯಕ್ಕೆ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಅಭಿವಚನ ಕೊಟ್ಟಂತೆ, ಸುಮಾರು 500 ರೂಪಾಯಿ ವಸೂಲು ಆಗಿರುವದು ಆದರೆ, ಉಳಿದ ಹಣದ ಪೂರೈಕೆಯು ಪರಊರುಗಳಲ್ಲಿರುವ ವಿದ್ಯಾಭಿಮಾನಿ ಮತ್ತು ಧನಿಕರ ಆಶ್ರಯದಿಂದ ಭರತಿ ಆಗಿ ಸದ್ರಿ ಸೊಸೈಟಿ ಕೆಲಸ ನಡೆಯಬೇಕಾಗಿರುವದರಿಂದಲೇ ನಾನು ಘಟ್ಟದ ದೆಸೆಯಿಂದ ಕಾನಡಾ ಜಿಲ್ಹಾ, ಧಾರವಾಡ, ಬೆಳಗಾವ, ಪುಣೆ, ಮುಂಬೈ ಮೊದಲಾದ ಊರುಗಳಿಗೆ ಹೋಗುವದನ್ನು ನಿಶ್ಚಯಿಸಿರುವೆನು. ಆದ್ದರಿಂದ ಎಲ್ಲಾ ಸುಶಿಕ್ಷಿತ ಮ ಧನವಂತ ಜನರು ಈ ನಮ್ಮ ಬಡ ಸಂಸ್ಥೆಗೆ ಹಸ್ತಪರಹಸ್ತ ಉದಾರ ಆಶ್ರಯವನ್ನು ಕೊಟ್ಟು, ಬಡ ಬಂಧುಗಳಿಗೆ-ಜ್ಞಾನವಂತರನ್ನಾಗಿ ಮಾಡಿ ಯಶಸ್ಸನ್ನು ಹೊಂದುವಿರೆಂದು ನಂಬಿದ್ದೇನೆ.

ಈ ಸೊಸೈಟಿಯ ಸಲ್ಲಾಗಾರ ಕಮಿಟಿಯ ಮಂಡಲದಲ್ಲಿ ಮೆ| ಕಲೆಕ್ಟರ, ಅಸಿ| ಕಲೆಕ್ಟರ, ರಿಜಿಸ್ಟ್ರಾರ, ಅಸಿ|| ರಿಜಿಸ್ಟ್ರಾರ, ಪ್ರೊಫೆಸರ, ವಕೀಲ, ಕೌನ್ಸಿಲ್ ಮೆಂಬರ, ಪೆನಶನರ ವಗೈರೆ 34 ಮಂದಿ ಸಭ್ಯ ಗೃಹಸ್ಥರಿರುವರು. ಈ ಸಂಸ್ಥೆಗೆ ಹಿಮ್ಮಲೀ ೧೦೦ ಅಥವಾ ಅದಕ್ಕಿಂತ ಹೆಚ್ಚು ರೂಪಾಯಿಗಳನ್ನು ಕೊಟ್ಟವರು ಪೆಟ್ರನ್ ಎಂತಲೂ, ೫೦ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚು ರೂಪಾಯಿಗಳನ್ನು ಕೊಟ್ಟವರು ಲೈಫ್ ಮೆಂಬರರೆಂತಲೂ, ೨೫ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚು ಕೊಟ್ಟವರು ಸಿಂಪಥಾಯಜರರೆಂತಲೂ, ವರ್ಷಕ್ಕೆ ೫ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿಗೆ ಕೊಡುವವರು ಸಾಧಾರಣ ಸಭಾಸದರೆಂತಲೂ ನಿರ್ಣಯವಾಗಿರುತ್ತದೆ. ವರ್ಗಣಿ ಕೊಟ್ಟವರ ಹೆಸರುಗಳನ್ನು ವರ್ತಮಾನಪತ್ರಗಳಲ್ಲಿ ಪ್ರಸಿದ್ಧಿಸಲ್ಪಡುವದು.

ನಮ್ರ ಸೇವಕ,

R. B Shet Dubi

ಅಂಗಡಿ (ಕಾರವಾರ) 5 9-1925.	ಒನರರಿ ಸೆಕ್ರೆಟರಿ, ಅಂಗಡಿ ಎಜ್ಯುಕೇಶನ ಸೊಸೈಟಿ, ಮತ್ತು ಒನರರಿ ಆರ್ಗನೈಝರ ಕೊ. ಸೊಸೈಟಿ

ದಿ ಎಡ್ವಾನ್ಸ ಮೋಟರ ಟ್ರೇನಿಂಗ ಕ್ಲಾಸ

ಧಾರವಾಡ ಮತ್ತು ಕುಮಟಾ.

ಈ ನಮ್ಮ ಟ್ರೇನಿಂಗ ಕ್ಲಾಸಿನಲ್ಲಿ ಡ್ರಾಯ್ವಿಂಗ ಮಾಡಲಿಕ್ಕೂ, ರಿಪೇರಿ ಮಾಡಲಿಕ್ಕೂ ಕಲಿಸಿ ಮೂರು ತಿಂಗಳಲ್ಲಿ ಲೈಸನ್ಸ ಸಹ ತೆಗಿಸಿ ಕೊಡಿಸಲಾಗುತ್ತದೆ. ಬೇಕಾದವರು ಇದರ್ಲಾಭ ತಕ್ಕೊಳ್ಳಬಹುದು. ವಿಶೇಷ ಮಾಹಿತಿ ಸವಕ್ಷ ಯಾ ಪತ್ರದ್ವಾರಾ.

ಸರದಾರ ಹೊಟೆಲ, ಮೋರಿ ಕಟ್ಟಾದ, ಧಾರವಾಡ	ಪತ್ತೆ— ಅನಂತರಾವ ಮಂಗೇಶರಾವ ಚಿತ್ರಾಪುರ, ಮೊಟರ ಏಜಂಟ್ಸ ಆಫೀಸ— ಕುಮಟಾ.

धातु क्षीणता व कमजोरपणा यांसाठीं

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात पचन शक्ति सुधारून परसाकडे साफ होतें. त्याप्रमाणें प्रत्येक प्रकारची अशक्तता दूर होऊन शरीर तेजदार व बळवान होतें. किं. ४० गोळ्याच्या डबीस रु. १.

रमण विलासिनी गोळ्या. रात्रौ फक्त १ गोळी दुधाबरोबर खाल्याने इच्छेप्रमाणें वीर्यस्तंभन होते. किं. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असता सर्व रोग नाश पावून खरें पुरुषत्व प्राप्त होतें. किं. डबीस रु. १.

कुमटा एजंट :— माधव सांतप्पा शेणवी केळेकेरी.

राजवैद्य नारायणजी केशवजी वैद्यः— १९३ काळबादेवी रोड मुंबई नं. २.

ನಮ್ಮ ಪ್ರೆಸ್ಸಿನಲ್ಲಿ

ಗೇಣಿ ಬಾಕಿ ದಾವೆಯ ಫಾರ್ಮುಗಳು ತಯಾರಿವೆ.

ವಕಾಲತ, ಅನುಲಜಾರಿ ಮೊದಲಾದ ಕೋರ್ಟ ವ್ಯವಹರಣೆಯ ಹಾಗೂ ಕಸ್ಟಮ್ ಖಾತೆಯ ಫಾರ್ಮುಗಳು ಅಗ್ಗವಾಗಿ ಸಿಗುತವೆ.

ಮೆನೇಜರ,

ಸ್ಟಾರ ಒಫ್ ಕೆನರಾ ಪ್ರೆಸ್, ಕುಮಟಾ

ಎಲ್ಲಾ ರೋಗಗಳಿಗೆ ದಿವ್ಯೌಷಧ!

ವಾತಹಾರಿ ತೈಲ.

ಕ್ರಿಯ ೫ ತೋಲೆ ಬಾಟ್ಲಿ ೧ ಕ್ಕೆ ೦—೧೨—೦. ಊಂಚಿ ಸುವಾಸಿಕ ಕಾಬೂಲೀ ಹಿಂಗು ೩ ತೋಲೆ ಡಬ್ಬಿ ೧ ಕ್ಕೆ ೧—೮—೦, ಹಿಂಗಿನ ಅರ್ಕ .॥. ತೊಲೆಯ ಬಾಟ್ಲಿ ೧ ಕ್ಕೆ ೦—೮—೦ ರಕ್ತ ಶುದ್ಧಿ ಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೨೦ ತೋಲೆಯ ಡಬ್ಬಿ ೧ ಕ್ಕೆ ೧—೪—೦, ೧ ತೋಲೆಯ ಹಿಂಗಿನ ಡಬ್ಬಿಗಳು ಡಜನ್ ೧ ಕ್ಕೆ ೨—೦—೦ ತಲೆಗೆ ಹಾಕುವ ಸುವಾಸಿಕ ಮಸ್ತಕರಾಜ ತೈಲ ೫ ತೋಲೆಯ ಬಾಟ್ಲಿ ೧ ಕ್ಕೆ ೦—೧೨—೦ ಹುಳದ ಔಷಧ ತೋಲೆ ೧ ಕ್ಕೆ ೦—೮— ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಊಂಚಿ ಊದಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು ಟಪಾಲ ಖರ್ಚ ಪ್ರತ್ಯೇಕ

ಕೆರೇಕರ ಕಾಬೂಲೀ ಹಿಂಗಿನ ದುಕಾನ.

ಬವಳಿಬಾಜಾರ, ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧ ರಾಗದ ಕೈಪೆಟ್ಟಿಗೆ ಕಿಂ. ೩೧, ೪೦, ೬೦, ೭೫, ೧೦೦.
೨. „ ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೨೦, ೧೪೦.
೩. ತಬಲೆ ಜೋಡಿ ಕಿಂ. ೧೬, ೧೮, ೨೦, ೨೫.
೪. ಹಾರ್ಮೋನಿಯಮ ಗ್ಯಾಡ (ಮರಾಠಿ) ಕಿಂ. ೧॥, ತಬಲೆ ಗ್ಯಾಡ್ ಕಿಂ. ೧೨ ಆ.

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಧುಕ್ಕಟ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:- ಗೋಪಾಳ ಸಖಾರಾಮ ಮತ್ತು ಕಂಪನಿ, ವಿಠ್ಠಲವಾಡಿ ಎದುರಿಗ, ೨೬೨ ಕಾಳಬಾದೇವಿ, ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ



ಕಳೆದ ೪-೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ-ತಾಳಗುಪ್ಪೆ, ಶಿವಮೊಗ್ಗಾ-ಹರಿಹರ-ದುಗ್ಗಾವತಿ, ಶಿವಮೊಗ್ಗಾ-ಕಳೂರಕಟ್ಟೆ, ಸಾಗರ-ಸೊರಬ-ಶಿರಾಳಕೊಪ್ಪ, ಸಾಗರ-ತೀರ್ಥಹಳ್ಳಿ, ಸಾಗರ-ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸುತ್ತಿದ್ದೇವೆ. ದಕ್ಷಿಣ ಕನ್ನಡ ಜಿಲ್ಹೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ ಹಾಗು ಬೆಳಂಗಡಿ ಈ ಕಡೆಗೆ "ಕಾರ್ಕಳ ಮೋಟರ ಸರ್ವಿಸಿನ" ವಿದ್ಯಮಾನವೂ, ಬಳ್ಳಾರಿ ಜಿಲ್ಹೆಯ ಹರಪನಹಳ್ಳಿಗೆ "ಲಕ್ಷ್ಮೀ ಮೋಟರ ಸರ್ವಿಸಿನ" ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುತೇವೆ.

ಉತ್ತರ ಕನ್ನಡ ಜಿಲ್ಹೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ ಸಾಗರ, ಹರಿಹರ ಮತ್ತು ಮೇಲ್ಕಂಡ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ, ಜೋಗ, ಸಿದ್ಧಾಪುರ, ಶಿರ್ಶಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾರಂಭ ಮಾಡಿರುತೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	ಬೆಳಿಗ್ಗಿನ ೭ ಘಂಟೆಗೆ.
ಶಿರ್ಶಿಗೆ ಸೇರುವದು—	„ ೧೦ „
ಶಿರ್ಶಿಯಿಂದ ಬಿಡುವದು ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧ „
ಸಾಗರಕ್ಕೆ ಸೇರುವದು (ಸಿದ್ಧಾಪುರ ಮಾರ್ಗವಾಗಿ)—	ಸಾಯಂಕಾಲ ೬ „
ಸಾಗರದಿಂದ ಶಿರ್ಶಿ ಕಡೆಗೆ ಹೊರಡುವದು—	ಬೆಳಿಗ್ಗಿನ ೬ „
ಸಿದ್ಧಾಪುರದ ಮೇಲಾಗಿ ಶಿರ್ಶಿಗೆ ಸೇರುವದು—	„ ೧೧ „
ಶಿರ್ಶಿಯಿಂದ ಕುಮಟೆಗೆ ಹೊರಡುವದು—	ಮಧ್ಯಾಹ್ನ ೨ „
ಕುಮಟೆಗೆ ಸೇರುವದು—	ಸಾಯಂಕಾಲ ೫ „

N B.— ಈ ಮೇಲಿನ ಲೈನುಗಳ ವಿನಹ ಶಿರಶಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ ಪ್ರಾರಂಭಿಸುವ ಯೋಜನೆ ಸಹಾ ಇದೆ. ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ

SHIMOGA, 22—11—1924. } **M. MANJAPPA, PROPRIETOR.**

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೆಟಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು ೬೦ ೩೦ ವರ್ಷದ ಮುದುಕರ ಶಾಮುವಿನಂತ ಕಾಂತಿ ತರುಣರಂತೆ ಪ್ರವರ್ಧಮಾನವಾಗುವದು. (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಷ್ಯಂಡನಪುಂಸಕತ್ವವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು — ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವದು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚ ಹೆಚ್ಚು ಬೀಳುವದಿಲ್ಲ. ಹತ್ತು ಬಾಟಲಿಗಳ ಕಿಮ್ಮತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚ ಬೇರೆ ಬೀಳುವದು. ವಿಪಿಂಟರ ಕಡಿಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦ ಹತ್ತಕ್ಕೆ ೧೩—೧—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು ಪೋ. ನಿಪ್ಪಾಣಿ, ಜಿ. ಬೆಳಗಾಂವ

ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ.

ಅನುವಾದಕ: — ವ್ಹಿ. ಎ. ಹೊನ್ನೆ, ಸಿರ್ಸಿ.

(ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು.)

೩.

ಸಾಯಂಕಾಲದ ಸಮಯ ಡಾಕ್ಟರ ದೇಸಾಯಿಯವರು ತಮ್ಮ ಪತ್ನಿ-ಪುತ್ರಿಯರೊಂದಿಗೆ ಮನೆಯ ಒಳ ಚಾವಡಿಯಲ್ಲಿ ಕುಳಿತಿದ್ದರು. ಅವರ ಮುಖಗಳ ಮೇಲಿನ ವ್ಯಥಾ ಆರೋಪವೂ, ಅವರು ಹೊಂದಿದ ಅಪಮಾನವೂ ಆ ಇಡೀ ಕುಟುಂಬವನ್ನು ಮನೋ ವ್ಯಥೆಯಲ್ಲಿ ಮುಳುಗಿಸಿತ್ತು.

ರಾತ್ರಿಯು ಹೆಚ್ಚುತ್ತ ಹೋಯಿತು. ಊಟದ ವ್ಯವಸ್ಥೆಯೇನೂ ಆಗಲಿಲ್ಲ. ಹಸಿವೆಯಂತೂ ಯಾರಿಗೂ ಇರಲಿಲ್ಲ. ಸ್ವತಃ ಡಾಕ್ಟರರೇ ತಲೆನೋವಿನಿಂದ ನರಳುತ್ತಿದ್ದರು. ಅವರು ಒಂದು ಮಂಚದ ಮೇಲೆ ಮಲಗಿದ್ದರು. ಅವರ ಮಗಳು ಹಣೆಗೆ ಅಮೃತಾಂಜನವನ್ನು ಹಚ್ಚಿ ತಿಕ್ಕುವದರಲ್ಲಿ ತೊಡಗಿದ್ದಳು. ಸೊಸೆಯು ಬೀಸಣಿಗೆಯಿಂದ ಗಾಳಿಯನ್ನು ಹಾಕುತ್ತಿದ್ದಳು.

ಹೊರಚಾವಡಿಯಲ್ಲಿ ಯಾರೋ—"ಡಾಕ್ಟರರೇ—" ಡಾಕ್ಟರರೇ" ಎಂತ ಕರೆಯುವದು ಕೇಳಿಸಿತು.

ಯಾರೆಂಬುದನ್ನು ನೋಡಲು ಸೇವಕನಾದ ಭೀಮಪ್ಪನು ಹೊರಗೆ ಹೋದನು. ಅವನು ತಿರುಗಿ ಬಂದು,— "ಸ್ವಾಮೀ, ರೋಗಿಯನ್ನು ತೋರಿಸುವದಕ್ಕಾಗಿ ತಮ್ಮನ್ನು ಕರಕೊಂಡು ಹೋಗಲು ಯಾರೋ ಬಂದಿರುವನು." ಎಂದನು.

"ನಾನು ಈಗ ಅಸ್ವಸ್ಥನಿದ್ದೇನೆ ಎಂತ ಅವರಿಗೆ ಹೇಳು. ಅವರು, ಬೇರೊಬ್ಬ ಡಾಕ್ಟರರನ್ನು ಕರಕೊಂಡು ಹೋಗಲಿ" ಎಂತ ಡಾಕ್ಟರ ದೇಸಾಯಿಯವರು ನುಡಿದರು.

"ಒಳ್ಳೇದು ಸ್ವಾಮೀ; ಎನ್ನುತ್ತ ಸೇವಕನು ಹೊರಗೆ ಹೋದನು.

ಅರ್ಧ ಘಂಟೆಯು ಕಳೆಯಿತು. ಆ ಮೇಲೆ ಪುನಃ— "ಡಾಕ್ಟರರೇ, ಡಾಕ್ಟರರೇ" ಎಂತ ಕರೆಯುವದು ಕೇಳಿಸಿತು.

ಭೀಮಪ್ಪನು ಪುನಃ ಹೊರಗೆ ಹೋದನು. ಅವನು ತಿರುಗಿ ಬಂದು—"ಸ್ವಾಮೀ ಆಗ ಬಂದವರೇ ಪುನಃ ಬಂದಿರುವರು. ಈ ಸಾರೆ ಅವರಿಗೆ ಭೆಟ್ಟಿಯಾಗದೇ ಹೋಗುವದಿಲ್ಲವೆನ್ನುತ್ತಾರೆ" ಅಂದನು.

"ಒಳ್ಳೇದು, ಅವರನ್ನು ಒಳಗೆ ಕರಕೊಂಡು ಬಾ," ಎಂತ ಡಾಕ್ಟರರು ಸ್ವಲ್ಪ ಬೇಸರಪಟ್ಟು ಹೇಳಿದರು.

ಹೆಂಗಸರು ಮರೆಯಾದರು. ಆ ಗೃಹಸ್ಥರು ದೈನ್ಯಪೂರ್ವಕವಾಗಿ ವಂದಿಸುತ್ತ ಒಳಗೆ ಬಂದರು. ಆ ಮೇಲೆ— "ಸ್ವಾಮೀ, ನಾವು ಬಹಳ ಸಂಕಟದಲ್ಲಿದ್ದೇವೆ. ಪ್ರಸಂಗವು ಕಠಿಣವಿದೆ ಎಂದರು".

"ಯಾರು ಅಸ್ವಸ್ಥರಿದ್ದಾರೆ?"

ಆ ಗೃಹಸ್ಥರು ಮಾತಾಡದೆ ತಲೆ ತಗ್ಗಿಸಿಕೊಂಡು ನಿಂತರು.

"ಅಸ್ವಸ್ಥರು ಯಾರು? ಸಂಕಟವೇನು?" ಎಂತ ಡಾಕ್ಟರರು ಪುನಃ ಪ್ರಶ್ನಿಸಿದರು.

"ಸ್ವಾಮೀ, ಏನು ಹೇಳಬೇಕೆಂಬುದೇ ನನಗೆ ತಿಳಿಯುವದಿಲ್ಲ."

ಇಂಥ ವಿಲಕ್ಷಣವಾದ ಉತ್ತರವನ್ನು ಕೇಳಿ ಡಾಕ್ಟರರು ಆಶ್ಚರ್ಯಚಕಿತರಾಗಿ, "ತಾವು ಯಾರು?" ಎಂತ ಕೇಳಿದರು.

"ನಾನು ಪೋಲೀಸ ಠಾಣೆಯೊಳಗಿನ ಕಾರಕೂನನು. ನನ್ನ ಹೆಸರು ಪುಟ್ಟಪ್ಪಾ ಪಾಟೀಲ. ಫೌಜದಾರರು ಬಹಳ ಅಸ್ವಸ್ಥರಿದ್ದಾರೆ. ಈ ಹೊತ್ತು ನಡೆದಂಥ ಯಾವತ್ತು ಸಂಗತಿಯ ವಿಷಯವಾಗಿ ಅವರಿಗೆ ಅತೀವ ದುಃಖವೂ ಪಶ್ಚಾತ್ತಾಪವೂ ಆಗಿರುವದು. ದಯಮಾಡಿ ತಾವು ಅವರನ್ನು ಕ್ಷಮಿಸುವಿರಾ?"

"ಅವರಿಗೇನಾಗಿದೆ?" ಎಂತ ಡಾಕ್ಟರರು ವಿಚಾರಿಸಿದರು.

"ಅವರಿಗೆ ತಲೆಯಲ್ಲಿಯೂ ಎದೆಯಲ್ಲಿಯೂ ಬಹಳ ಶೂಲೆ ಎದ್ದಿದೆ. ಸ್ವಾಮೀ, ದಯಮಾಡಿ ಹಿಂದೆ ಆದದ್ದನ್ನೆಲ್ಲ ಮರೆತು ಅವಶ್ಯವಾಗಿ ಬರ್ರಿ"

"ಈ ಊರಲ್ಲಿ ನನ್ನ ಹೊರತು ಬೇರೆ ಡಾಕ್ಟರರಿರುವರು. ಅವರ ಪೈಕಿ ಒಬ್ಬರ ಹತ್ತರ ಹೋಗಿರಿ."

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದ ಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೋ.

ಕಾಮಿನಿಯಾ ಆಯಿಲ್ (ರಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಕದ ಬೇನೆಯು ತಣ್ಣಗಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆದು ಕೊಂಡಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅದರ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ, ಅನೇಕ ಸಾವಿರಾರು ಗೃಹಸ್ಥರ ಅನುಮೋದಕವಾದ ಮಾನಪತ್ರಗಳೂ ದೊರೆತಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚು 0-14-0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! (ರಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು. ಜಾಗ್ರತವಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದ್ದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಿಂದ ಸೆಳೆಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ

Address:- **The Anglo Indian Drug & Chemical Co,**

16, Market, **BOMBAY 2**

ಕಾರಕೂನರು ತನ್ನ ಕಿಸೆಯೊಳಗಿಂದ ನೋಟು ವ ನಾಣ್ಯಗಳಿಂದೊಡಗೂಡಿದ ೧೦೦ ರೂಪಾಯಿಗಳನ್ನು ಹೊರಗೆ ತೆಗೆದರು. ಅದನ್ನು ಡಾಕ್ಟರರ ಕಾಲಬಳಿಯಲ್ಲಿರಿಸಿ, — "ಸ್ವಾಮಿ, ದಯಮಾಡಿರಿ" ಎಂದರು.

ಹಣವನ್ನು ಕಂಡ ಕೂಡಲೆ ಡಾಕ್ಟರರಿಗೆ ಸಿಟ್ಟು ತಲೆಗೇರಿತು. ಅವರು ಗದ್ದರಿಸಿದ ನಂತರ — "ಹಣದ ಆಶೆಯನ್ನು ತೋರಿಸಿ, ನನ್ನನ್ನು ಮರುಳು ಮಾಡಲು ನೀವು ಬಂದಿರುವಿರೋ? ಪ್ರತಿ ಒಬ್ಬರೂ ಪೋಲೀಸರಂತೆಯೇ ದುಡ್ಡಿಗೆ ಬಾಯಿಬಿಡುವವರೆಂತ ತಿಳಿದಿರುವಿರೋ? ಒಂದು ಲಕ್ಷ ರೂಪಾಯಿ ಕೊಟ್ಟರೂ ಕೂಡ ನಾನು ಬರಲಿಕ್ಕಿಲ್ಲ. ಸ್ವಾಮಿ, ಈ ಕ್ಷಣವೇ ಇಲ್ಲಿಂದ ಎದ್ದು ಹೋಗಿರಿ."

ಕಾರಕೂನರು ಹಣವನ್ನು ತೆಗೆದುಕೊಂಡು ಹೊರಟರು.

ಗಡಿಯಾಳದಲ್ಲಿ ೯ ಬಡಿಯಿತು. ಡಾಕ್ಟರರ ಹೆಂಡತಿಯು ತನ್ನ ಗಂಡನಿಗೆ.. "ತುಸು ಹಾಲನ್ನು ಕುಡಿಯುವಿರಾ? ಸ್ವಲ್ಪ ಬಿಸಿ [illegible]" ಅಂದಳು.

ಡಾಕ್ಟರರು— "ಒಳ್ಳೇದು" ಎಂದರು.

ಅವಳು ಅಡಿಗೆ ಮನೆಗೆ ಹೋಗಿ ಬೆಂಕಿಯನ್ನು ಮಾಡಿದಳು. ಹಾಲು ಸ್ವಲ್ಪ ಬಿಸಿಯಾಗುವಷ್ಟರೊಳಗೆ ಹಿಂಬಾಗಿಲಿನಲ್ಲಿ ಗಾಡಿಯು ಬಂದು ನಿಂತ ಸಪ್ಪಳವು ಕೇಳಿಸಿತು. ಕ್ಷಣ ಹೊತ್ತಿನಲ್ಲಿ ದಾಸಿಯಿಂದೊಡಗೂಡಿದ ತರುಣಿಯೊಬ್ಬಳು ಒಳಗೆ ಬಂದಳು.

"ಅವ್ವಾ, ತಾವು ಯಾರು?" ಎಂತ ಡಾಕ್ಟರರ ಪತ್ನಿಯು ಕೇಳಿದಳು.

"ಇವರು ಪರಮೇಶ್ವರ ಫೌಜದಾರರ ಹೆಂಡತಿಯು," ಎಂತ ದಾಸಿಯು ಉತ್ತರವನ್ನಿತ್ತಳು.

"ತಮಗೆ ಬೇಕಾದವಳು ನಾನೇ" ಎಂತ ಡಾಕ್ಟರರ ಹೆಂಡತಿಯು ಹೇಳಿದಳು. ಆ ತರುಣಿಯು ಅಡಿಗೆ ಮನೆಯ ಒಳಗೆ ಬಂದು, ಡಾಕ್ಟರರ ಹೆಂಡತಿಯ ಎರಡೂ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡಳು.

ಅವಳು ಬಹಳೇ ಗಾಬರಿಗೊಂಡು "ಇದೇನು?" ಎಂತ ಆಶ್ಚರ್ಯದಿಂದ ಕೇಳಿದಳು.

"ಅವ್ವಾ, ನನ್ನ ಯಜಮಾನರು ಸಾಯುತ್ತಾರೆ"

"ಅಂದರೆ, ಅವರು ಅಷ್ಟು ಅಸ್ವಸ್ಥರಿದ್ದಾರೆಯೋ?"

"ಅವ್ವಾ, ಹೌದು. ನಾವು ಬೇರೆ ಡಾಕ್ಟರರನ್ನು ಯಾಕೆ ಕರೆಯುವದಿಲ್ಲವೆಂತ ತಮ್ಮ ಯಜಮಾನರು ಹೇಳುತ್ತಾರೆ. ಆದರೆ ಅವ್ವಾ, ಬೇರೆ ಡಾಕ್ಟರರಿಂದ ಅವರಿಗೆ ಏನೂ ಉಪಯೋಗವಾಗಲಿಕ್ಕಿಲ್ಲ. ಯಾಕಂದರೆ, ಏನಾಗಿದೆ ಎಂಬುವದೇ ಅವರಿಗೆ ಸರಿಯಾಗಿ ತಿಳಿಯಲಿಕ್ಕಿಲ್ಲ. ನನ್ನ ಯಜಮಾನರು ಇಲ್ಲಿ ಏನನ್ನೋ ಕುಡಿದ ಕಾರಣದಿಂದ ಅವರಿಗೆ ಈ ಗತಿಯಾಗಿದೆ.

"ಇಲ್ಲಿ ಏನೋ ಕುಡಿದರು! ಅವರು ಏನೂ ಕುಡಿಯಲಿಲ್ಲ," ಎಂತ ಡಾಕ್ಟರರ ಅರ್ಧಾಂಗಿಯು ಅಂದಳು.

"ಹೌದು, ಅವರು ಕುಡಿದರು. ದಯಮಾಡಿ ನೀವು ನನ್ನನ್ನು ತಮ್ಮ ಯಜಮಾನರ ಬಳಿಗೆ ಕರಕೊಂಡು ಹೋಗುವಿರಾ? ಅಂದರೆ ಅವರಿಗೆ ನಾನು ಎಲ್ಲಾ ಹೇಳುವೆನು. ನಾನು ಪರಕೀಯಳಾದರೂ ಈ ಪ್ರಸಂಗದಲ್ಲಿ ಅವರೊಡನೆ ಮಾತನಾಡಲು ಅನುಮಾನ ಮಾಡಲಿಕ್ಕಿಲ್ಲ.

ಅವಳು ಆ ತರುಣಿಯನ್ನು ಡಾಕ್ಟರರ ಬಳಿಗೆ ಕರೆದೊಯ್ದಳು.

"ಸ್ವಾಮೀ, ನನ್ನ ಯಜಮಾನರಿಗೆ ದಯೆಯನ್ನು ತೋರಿಸಿ, ಅವರ ಪ್ರಾಣವನ್ನು ಉಳಿಸಿರಿ," ಎಂತ ಆ ತರುಣಿಯು ದೀನ ವಾಣಿಯಿಂದ ಬೇಡಿಕೊಂಡಳು.

ಡಾಕ್ಟರರ ಹೆಂಡತಿಯು ಆಮೇಲೆ ಎಲ್ಲವನ್ನು ತಿಳಿಸಿ ಹೇಳಿದಳು.

"ಇಲ್ಲಿ ಏನನ್ನೋ ಕುಡಿದ [illegible] ಏನು ಕುಡಿದಿರಬಹುದು?" ಎಂತ ಡಾಕ್ಟರರು [illegible] ಚಕಿತರಾಗಿ ನುಡಿದರು.

"ಸ್ವಾಮೀ, ತಮ್ಮ ಔಷಧದ ಕಪಾಟನ್ನು ತಪಾಸಿಸುವ ಕಾಲಕ್ಕೆ ಅವರಲ್ಲಿ ಬ್ರ್ಯಾಂಡಿ ಎಂತ ಚೀಟಿಹಚ್ಚಿದ ಬುಟ್ಲಿಯೊಂದು ಸಿಕ್ಕಿತು. ಅವರು ಬ್ರ್ಯಾಂಡಿಯೇ ಎಂತ ಅದರೊಳಗಿನ ಕೆಲವಂಶವನ್ನು ಕುಡಿದ ನಂತರ ಅವರು ನನಗೆ ಹೇಳುತ್ತಿದ್ದರು. ಅದರೆ ಅದು ಬ್ರ್ಯಾಂಡಿಯೇ ಅಲ್ಲವೆಂತ ಈಗ ಅವರಿಗೆ ಅನುಮಾನ ಬಂದಿರುತ್ತದೆ"

"ಬ್ರ್ಯಾಂಡಿ ಎಂತ ಚೀಟಿ ಹಚ್ಚಿದ ಬಾಟ್ಲೀ? — ಸ್ವಲ್ಪ ತಡೆಯಿರಿ" ಎನ್ನುತ್ತ ಡಾಕ್ಟರರು ಎದ್ದರು. ಅವರು ಔಷಧ ದ ಕಪಾಟಿನ ಹತ್ತರ ಹೋಗಿ ಆ ಬಾಟ್ಲಿಯನ್ನು ತಪಾಸಿಸಿದರು.

ತಿರುಗಿ ಬಂದು ಅವರು, "ಅಯ್ಯೋ ದೇವರೆ! ಅದು ವಿಷವನ್ನು ಕುಡಿದಿರುವರವ್ವಾ" ಎಂತ ನಿಟ್ಟುಸಿರು ಬಿಟ್ಟರು.

ಆ ಬಡ ತರುಣಿಯು ಗಲ್ಲಗಳ ಮೇಲಿಂದ ಕಣ್ಣೀರು ವಿಶಲ್ಯಕಾರವಾಗಿ ಹರಿಯಹತ್ತಿತು.

"ಅವ್ವಾ, ನೀವು ಗಾಡಿಯನ್ನು ತಂದಿರುವಿರೋ?"

"ಹೌದು, ಸ್ವಾಮೀ, ತಂದಿರುವೆನು."

"ಹಾಗಾದರೆ ತಮ್ಮ ಗಾಡಿಯಲ್ಲಿ ಕೂತು ನಾನು ತಾವು ಹೋಗುವೆನು ಅದನ್ನು ತಿರುಗಿ ಕಳಿಸುವವರೆಗೆ ಮಾಯಮಾಡಿ ಇಲ್ಲಿಯೇ ಇರಿ," ಎನ್ನುತ್ತ ಡಾಕ್ಟರರು ಆ ವಿಷದಿಂದ ಔಷಧದ ಪೆಟ್ಟಿಗೆಯೊಂದನ್ನು ತೆಗೆದುಕೊಂಡು ಹೋಗಲು ಸಿದ್ಧರಾದರು.

"ಸ್ವಾಮೀ, ನನ್ನ ಯಜಮಾನರು ಬದುಕುವ ಆಶೆಯುಂಟೇ?" ಎಂತ ಆ ತರುಣಿಯು ಗದ್ಗದಿಸುವಂಥ ದೀನ ವಾಣಿಯಿಂದ ಕೇಳಿದಳು.

"ಅದೆಲ್ಲ ದೇವರ ಮೇಲೆ ಅವಲಂಬಿಸಿರುತ್ತದೆವ್ವಾ" ಅನ್ನುತ್ತ ಡಾಕ್ಟರರು ಕೋಣೆಯೊಳಗಿಂದ ತಟ್ಟನೆ ಹೊರಟು ಹೋದರು.

ಮೂರು ತಿಂಗಳಲ್ಲಿ ಅವರು ರೋಗಿಯ ಶುಶ್ರೂಷೆಯಲ್ಲಿಯೇ ಕಳೆದರು. ಆನಂದದಲೇ ಪರಮೇಶ್ವರ ಫೌಜದಾರರು ಪಾಪಕ್ಕೆ ಪ್ರಾಯಶ್ಚಿತ್ತವನ್ನು ಪಡೆದು ಪಾರಾದರು.

ಸ್ವಲ್ಪ ದಿವಸಗಳಲ್ಲಿಯೇ ದುರ್ಯೋಧನನನ್ನು ಹೊಡೆದ ಪ್ರಕರಣದ ನಿಮಿತ್ತವಾಗಿ ಡಾಕ್ಟರರ ಮಕ್ಕಳು ದೋಷಮುಕ್ತರಾದರು.

\+ × ×

ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡುವವರು ಮಾನವೀ ಧರ್ಮವು ಅಪಕಾರಕ್ಕೆ ಅಪಕಾರವನ್ನು ಮಾಡುವದು ಪಾಶವೀ ಗುಣವು ಉಪಕಾರಕ್ಕೆ ಅಪಕಾರವನ್ನು ಮಾಡುವದು ರಾಕ್ಷಸೀ ರೀತಿಯು; ಮತ್ತು ಅಪಕಾರಕ್ಕೆ ಉಪಕಾರವನ್ನು ಮಾಡುವದು ದಿವ್ಯವಾದಂಥ ದೈವೀ ಲಕ್ಷಣವು. ಮೊದಲಿನ ಮೂರು ಗುಣಗಳ ಅನುಭವವು ನಮಗೆ ಸಮಾಜದಲ್ಲಿ ಆಗಾಗ ಆಗುತ್ತಿರುತ್ತದೆ. ಆದರೆ, ಡಾಕ್ಟರ ದೇಸಾಯಿಯವರಲ್ಲಿದ್ದ ನಾಲ್ಕನೇ ಗುಣವನ್ನು ಕಾಣುವದು ಮಾತ್ರ ಅಪರೂಪವೇ. ನಿರಪರಾಧಿಯಾದ ತನ್ನ ತನು-ಮನ-ಧನಗಳಿಗೆ ಅನೇಕ ರೀತಿಯಾಗಿ ಹಾನಿಯನ್ನುಂಟು ಮಾಡಿದಂಥ ಆ ದುಷ್ಟ ಫೌಜದಾರರನ್ನು ಸಾಮಾನ್ಯ ಜನರಾದರೆ ಕಣ್ಣೆತ್ತಿ ಸಹ ನೋಡುತ್ತಿದ್ದಿಲ್ಲ. ಆದರೆ, ದೇಸಾಯಿಯವರು ಮಾಡಿದ್ದನ್ನೆಲ್ಲ ಮರೆತು, ಶತ್ರುವನ್ನು ಸಹ ಲೆಕ್ಕಿಸದೆ ಅಪಕಾರಕ್ಕೆ ಉಪಕಾರವನ್ನು ಮಾಡಿ ಮಾನವಕೋಟಿಯಲ್ಲಿ ದೇವಪಂಕ್ತಿಯನ್ನು ಪಡೆದರು. ಡಾಕ್ಟರರೆಂದರೇ, ಪರೋಪಕಾರೀ ಪ್ರಾಣಿಯು. ಅದರಲ್ಲಿಯೂ ಅವರಲ್ಲಿ ಈ ದಿವ್ಯ ಗುಣವಿದ್ದರಂತೂ ಕೇಳುವದೇನು! ಆದ್ದರಿಂದಲೇ ಡಾಕ್ಟರ ದೇಸಾಯಿಯವರು ತಮ್ಮ ಕಡು ಹಗೆಯಾದ ಫೌಜದಾರರನ್ನು ಉದ್ಧಾರ ಮಾಡಿದಂತೆ ಕರುಣದಿಂದ ಕ್ಷಮಿಸಿ, ಅವರನ್ನು ನಿರಪೇಕ್ಷ ಬುದ್ಧಿಯಿಂದ ಯಮನ ದವಡೆಯೊಳಗಿಂದ ಪಾರು ಮಾಡಿದರು. ಮತ್ತು ಇದರ ಇಷ್ಟ ಪರಿಣಾಮವು; ಪರಮೇಶ್ವರರ ಮನಸ್ಸಿನ ಮೇಲಾಗದೇ ಇರಲಿಲ್ಲ. ಹೆಂಡತಿಯ ಆಗ್ರಹವೂ ಹೆಚ್ಚಾಯಿತು. ಆದ್ದರಿಂದ ಅವರು ಸ್ವತಃ ಆ ಮಾರ್ಗಕ್ಕಾಗಿ ಪಶ್ಚಾತ್ತಾಪಪಟ್ಟು ತಮ್ಮ ಜಾಗಕ್ಕೆ ರಾಜೀನಾಮೆಯನ್ನಿತ್ತು ಸ್ವದೇಶೀ ಅಂಗಡಿಯೊಂದನ್ನು ಸ್ಥಾಪಿಸಿದರು. ಈಗ ಅದು ಉರ್ಜಿತಾವಸ್ಥೆಯಲ್ಲಿರುವದು.

(ಸಂಪೂರ್ಣ)

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತದೆ. ಚಲೋ ಆಹಾರ ದೊರೆಯದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, [illegible]ರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೨—೦—೦

ಏಜಂಟರು:— ವಿಕ್ಟೋರಿಯಾಲ ಏಜನ್ಸಿ,

ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨

ದಿ ಎಡ್ವಾನ್ಸ ಮೋಟರ

ಟ್ರೇನಿಂಗ ಕ್ಲಾಸ

ಧಾರವಾಡ ಮತ್ತು ಕುಮಟಾ.

ಈ ನಮ್ಮ ಟ್ರೇನಿಂಗ ಕ್ಲಾಸಿನಲ್ಲಿ ಡ್ರಾಯ್ವಿಂಗ ಮಾಡಲಿಕ್ಕೂ, ರಿಪೇರಿ ಮಾಡಲಿಕ್ಕೂ ಕಲಿಸಿ ಮೂರು ತಿಂಗಳಲ್ಲಿ ಲೈಸನ್ಸ ಸಹ ತೆಗಿಸಿ ಕೊಡಲಾಗುತ್ತದೆ. ಬೇಕಾದವರು ಇದರ ಪ್ರಯೋಜನ ಪಡಕೊಳ್ಳಬಹುದು. ವಿಶೇಷ ಮಾಹಿತಿ. ಸಮಕ್ಷ ಯಾ ಪತ್ರದ್ವಾರಾ.

ಪತ್ತೆ—

ಸರದಾರ ಹೊಟೆಲ, ನೋರಿ ಕಾಂಪೌಂಡ, ಧಾರವಾಡ.	ಅನಂತರಾವ ಮಂಗೇಶರಾವ ಶಿಶಿಕ್ಷ್ಟಲ, ಮೋಟರ ಏಜಂಟ್ಸ. ಆಫೀಸ — ಕುಮಟಾ.

ವಿವಿಧ ಸಂಗ್ರಹ.

ವೀರ ಸ್ತ್ರೀಯ ಪ್ರಸಂಗಾವಧಾನ!

ಜಮಶೇದಜೆಪುರದಲ್ಲಿ ಟಾಟಾ ಕಂಪನಿಯವರ ಉಕ್ಕಿನ ಕಾರಖಾನೆಯಿದೆ. ಅವರೊಳಗೆ ಮದ್ರಾಸ ಪ್ರಾಂತದವರೊಬ್ಬರು ಅಧಿಕಾರಿಗಳಿರುವರು. ಅಧಿಕಾರಿಗಳು ನಿತ್ಯದಂತೆ ಕಚೇರಿಗೆ ಹೋಗಿದ್ದರು. ಅವರ ಹೆಂಡತಿಯು ಮನೆಯಲ್ಲಿ ಒಬ್ಬೊಂಟಿಗಳೇ ಮಲಗಿದ್ದಳು. ಮಧ್ಯಾಹ್ನದ ಸಮಯ. ಒಬ್ಬ ಮುಸಲ್ಮಾನನು ಒಳಹೊಕ್ಕನು. ಸ್ತ್ರೀಯೊಡನೆ ಪ್ರೇಮಾಲಾಪಗಳನ್ನು ಮಾಡಿ ಪಶುತುಲ್ಯ ವಿಕಾರಗಳನ್ನು ಪ್ರದರ್ಶಿಸಿದನು. ಸ್ತ್ರೀಯ ಮೈಮೇಲೆ ಆಭರಣಗಳಿದ್ದವು. "ಆಭರಣಗಳನ್ನೂ ಕೊಡಬೇಕು, ಇಲ್ಲದಿದ್ದರೆ, ನಿನ್ನ ತಲೆ ಕಡಿಯುವೆನೆಂ"ದು ಆತನು ಬೆದರಿಸಿದನು. ಸ್ತ್ರೀಯು ಹೌಹಾರದೆ, ಸಾವಧಾನ ಚಿತ್ತದಿಂದಿದ್ದಳು. ಆತನೊಡನೆ ಮೃದು ಭಾಷಣದಿಂದ್ಲೇ ಮಾತಾಡಿದಳು; ಪತಿಗಳಿಗೂ, ತನಗೂ ಸೇರಬರುವದಿಲ್ಲೆಂದು ಧ್ವನಿಸಿ ನುಡಿದಳು. "ನನ್ನಲ್ಲಿದ್ದ ಎಲ್ಲ ದ್ರವ್ಯವೂ ನಿನ್ನದೇ" ಎಂದು ಅವಳು ಮೈಮೇಲಿನ ಆಭರಣಗಳನ್ನೆಲ್ಲ ಕೆಳಕ್ಕಿರಿಸಿದಳು. ಒಳಹೋಗಿ ಪೆಟ್ಟಿಗೆಯೊಳಗಿನ ಹಣವನ್ನೆಲ್ಲ ಮುಸಲ್ಮಾನನ ಮುಂದೆ ಸುರಿದಳು. ಮುಸಲ್ಮಾನನಿಗೆ ಭಾಗ್ಯ ಬಂದಂತಾಯಿತು. ಬಹು ಸಂತೋಷಪಟ್ಟನು. ಆತನು ಹಣವನ್ನೆಲ್ಲ ಲೆಕ್ಕ ಮಾಡಲು ಮಗ್ನನಾದನು. ಈ ಸಮಯ ನೋಡಿ, ಆ ವೀರ ಸ್ತ್ರೀಯು ಸೆರಗಿನಲ್ಲಿ ಅಡಗಿಸಿಟ್ಟುಕೊಂಡಿದ್ದ ಖಡ್ಗದಿಂದ ಆತನನ್ನು ಇರಿದಳು. ಕೂಡಲೆ, ಆತನು ಎಚ್ಚರದಪ್ಪಿ ಬಿದ್ದನು. ಪೋಲೀಸರಿಗೆ ತಿಳಿಸಲು, ಆತನು ಅವರ ಸ್ವಾಧೀನವಾಗಿರುವನು. ಸ್ತ್ರೀಯಳ ಸಾಹಸವನ್ನೂ, ಪ್ರಸಂಗಾವಧಾನವನ್ನೂ ಕೊಂಡಾಡಿದಷ್ಟು ಕಡಿಮೆ!

* * *

ಜಪಾನದ ಪ್ರಗತಿ.

ಜಪಾನದಲ್ಲಿ ಕುರುಡರೂ ಕೂಡ ಸುಸಂಸ್ಕೃತರಾಗಿರುವರು. ಕುರುಡರಿಗಾಗಿ ದೇಶದಲ್ಲಿ ಸರಕಾರವೂ ಅನೇಕ ಸಾಹುಕಾರರೂ ಶಾಲೆಗಳನ್ನು ತೆರೆದಿರುವರು. ಟೋಕಿಯೋ ಪಟ್ಟಣದಲ್ಲಿ ಉತ್ತಮ ತರಗತಿಯ ಕುರುಡರ ಶಾಲೆಯಿದೆ. ಅಂತು ಜಪಾನದಲ್ಲಿ ೧೦೦ಕ್ಕೆ ಮಿಕ್ಕಿ ಕುರುಡರ ಶಾಲೆಗಳಿವೆ. ಕುರುಡರಿಗಾಗಿ ಹೊಸ ಪ್ರಕಾರದ ಒಂದು ಬ್ಯಾಬಲ ಗ್ರಂಥವು ಛಾಪಿಸಿ ತಯಾರಾಗಿದೆ. ಓಸಾಕಾ ಕಂಪನಿಯವರು ಕುರುಡರಿಗಾಗಿ ಒಂದು ವಾರಪತ್ರಿಕೆಯನ್ನೂ ಪ್ರಕಟಿಸುತ್ತಿರುವರು. ಈ ಪತ್ರಿಕೆಯ ಕುರುಡ ವರ್ಗಣಿದಾರರು ೨೦೦೦ ಮಂದಿ. ಪತ್ರಿಕೆಯ ಸಂಪಾದಕರು ಕೆನ್ನೋಸುಕೆ ನಾಕಾ ಮೊರಾ ಎಂಬವರು ಅವರೂ ಅಂಧರು! ಜಪಾನದಲ್ಲಿ ವೃತ್ತಪತ್ರಗಳ ಪ್ರಸಾರವು ಹೇರಳವಾಗಿದೆ ೧೯೨೦ ಜನಸಂಖೆಯದ್ದರಾಯಿತು; ಒಂದು ಪತ್ರಿಕೆಯಾಗಲೊಲ್ಲದೇಕೆ? — ಅವರಕ್ಕೊಂದು ವೃತ್ತಪತ್ರ ಬೇಕು. ಜಪಾನದಲ್ಲಿ ಅಂತು ೬,೧೬೭ ವೃತ್ತಪತ್ರಿಕೆಗಳಿವೆ. ಅವುಗಳಲ್ಲಿ ೪,೩೬೦ ಸರಕಾರಕ್ಕೆ ಜಾಮೀನು ಕೊಟ್ಟು ಹೊರಡುತ್ತವೆ. ಅವುಗಳಲ್ಲಿ ೮೩೩ ದಿನಪತ್ರಿಕೆಗಳು; ೩೬೦ ವಾರಪತ್ರಿಕೆಗಳು; ೩,೧೬೪ ತ್ರೈಮಾಸಿಕಗಳು. ಜಾಮೀನು ಕೊಡದ ಪತ್ರಿಕೆಗಳು ೧,೮೧೭. ಅವುಗಳಲ್ಲಿ ೧೫೮ ದೈನಿಕಗಳು; ೧೧೩ ವಾರಪತ್ರಿಕೆಗಳು; ೧,೫೪೬ ತ್ರೈಮಾಸಿಕಗಳು.

* * *

ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿ

ಈ ಮುಂಚೆ ಜಾಹೀರಾದಂತೆ, ತಾ. ೧೩-೯-೨೫ ನೇಗೆ ಗದಗಿನಲ್ಲಿ ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಸಭೆ ಸೇರಿತು. ಕಾರ್ನಾಡ ಶ್ರೀ| ಸದಾಶಿವರಾಯರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಮೊಟ್ಟ ಮೊದಲು, ಶ್ರೀ| ಸರೋಜಿನಿ ದೇವಿಯವರಿಗೆ ಕಾನಪೂರದ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ಬಹುಮತದಿಂದ ಆರಿಸೋಣಾಯಿತು. ಮೂಲಿನ ಠರಾವಿನ ವಿಷಯ ವಿಚಾರವಾಗಿ, ಈ ವಿಷಯ ಹೆಚ್ಚು ಚರ್ಚೆ ಮಾಡಬಾರದೆಂದು ನಿರ್ಣಯವಾಯಿತು. ಪಾಟಣಾದಲ್ಲಿ ನಾಳೆ ತಾ. ೨೨ ನೇಗೆ ಅಖಿಲ ಭಾರತ ಕೊಂಗ್ರೆಸ ಕಮಿಟಿಯು ಸೇರಲಿಕ್ಕಿದೆ. ಆ ಸಭೆಯಲ್ಲಿ ಮತದಾನದ ಸೂಚನೆಯನ್ನಿತ್ತು ಈ ಸಭೆಯು ಶಿಫಾರಸು ಮಾಡಬೇಕಾಗಿತ್ತು. ವರ್ಷಕ್ಕೆ ೪ ಆಣೆ ಅಥವಾ ೨೦೦೦ ಗಜ ನೂಲು ಕೊಡುವ ೧೮ ವರ್ಷ ಪ್ರಾಯದ ಸ್ತ್ರೀ-ಪುರುಷರು ರಾಷ್ಟ್ರೀಯ ಸಭೆಯ ಧ್ಯೇಯವನ್ನಂಗೀಕರಿಸಿದ್ದಲ್ಲಿ ರಾಷ್ಟ್ರೀಯ ಸಭೆಯ ಸಭಾಸದರಾಗಬೇಕೆಂದು ಶ್ರೀ| ಶ್ರೀನಿವಾಸರಾವ ಕೌಜಲಗಿಯವರು ಸೂಚಿಸಿದರು. ಈ ಸೂಚನೆಗೆ ಶ್ರೀ| ಪುರೋಹಿತರೂ, ಶ್ರೀ| ಗುತ್ತಲರವರೂ ಎರಡು ಉಪಸೂಚನೆಗಳನ್ನು ಸೂಚಿಸಿದರು. ಶ್ರೀ| ಪುರೋಹಿತರಿಗೆ ಶ್ರೀ| ಶ್ರೀನಿವಾಸರಾಯರ ಸೂಚನೆಯು ಮಾನ್ಯವಿತ್ತು; ಆದರೆ, ಸಾರ್ವಜನಿಕ ಅಥವಾ ರಾಷ್ಟ್ರೀಯ ಸಭೆಗಳಿಗೆ ಸೇರುವಾಗ ಕೊಂಗ್ರೆಸ ಸಭಾಸದರು ಖಾದಿಯ ಉಡಿಗೆ-ತೊಡಿಗೆಗಳನ್ನು ಧರಿಸಬೇಕೆಂಬುದೊಂದು ಹೆಚ್ಚಿನ ಶರ್ತನ್ನು ಶ್ರೀ| ಪುರೋಹಿತರು ಸೂಚಿಸಿದರು. ಇದರ ಮೇಲೆ ಬಹಳ ವಾದ-ವಿವಾದವಾಗಿ, ಉಪಸೂಚನೆಯು ಬಿದ್ದುಹೋಯಿತು. ಶ್ರೀ| ಗುತ್ತಲರು ವರ್ಗಣಿಯ ರಕಮನ್ನು ಇಮ್ಮಡಿಸಿದ್ದರು: ಅಂದರೆ, ೮ ಆಣೆ ಅಥವಾ ೪೦೦೦ ಗಜ ನೂಲು ಕೊಡಬೇಕಾಗಿಯೂ, ನೂಲು ಕೊಟ್ಟು ರಾಷ್ಟ್ರೀಯ ಸಭೆಯ ಸಭಾಸದರಾದವರು ಸಾರ್ವಜನಿಕ ಸಭೆಗಳಲ್ಲಿ ಖಾದಿಯ ಉಡಿಗೆ-ತೊಡಿಗೆಗಳನ್ನು ಧರಿಸಬೇಕೆಂದು ಶರ್ತವನ್ನಿಟ್ಟಿದ್ದರು ಇದರ ಮೇಲೆಯೂ ಚರ್ಚೆಯಾಗಿ, ಉಪಸೂಚನೆಯು ಬಿದ್ದುಹೋಗಿ ಶ್ರೀ| ಕೌಜಲಗಿ ಶ್ರೀನಿವಾಸರಾಯರ ಮೂಲ ಸೂಚನೆಯೇ ಮಂಜೂರಾಯಿತು. ಇಷ್ಟರಲ್ಲಿ ಸಾಯಂಕಾಲವಾದ್ದರಿಂದ ಸಭೆಯು ಕರ್ನಾಟಕ ಏಕೀಕರಣ ಪ್ರಶ್ನೆಯ ವಿಚಾರಕ್ಕಾಗಿ ರಾತ್ರಿ ೧೦|| ಘಂಟೆಗೆ ಕೂಡಬೇಕೆಂದು ನಿಶ್ಚಯವಾಗಿ, ವಿಸರ್ಜನವಾಯಿತು. ರಾತ್ರಿ ಕೂಡಿದ ಸಭೆಯಲ್ಲಿ ಶ್ರೀ| ಸದಾಶಿವರಾವ, ಕೌಜಲಗಿ ಶ್ರೀನಿವಾಸರಾವ, ಮುದವೇಡಕರ ಕೃಷ್ಣರಾವ, ಕೇ. ಗುರುರಾಜರಾವ, ದತ್ತೋಪಂತ ಮುಜಲಿ, ದಿವಾಕರ ರಂಗನಾಥರಾವ ಮೊದಲಾದವರ ಉಪಮಂಡಲವೊಂದನ್ನು ನೇಮಿಸಿ, ಈ ಉಪಮಂಡಲದವರು ಕರ್ನಾಟಕ ಏಕೀಕರಣ ಕಾರ್ಯವನ್ನು ೧ ವರುಷದ ವರೆಗೆ ನಡೆಸಬೇಕೆಂದು ಗೊತ್ತಾಯಿತು. ಆಂಧ್ರ ವಿದ್ಯಾಪೀಠದಲ್ಲಿ ಬಳ್ಳಾರಿ, ಅನಂತಪುರ ಇತ್ಯಾದಿ ಕನ್ನಡ ಭಾಗಗಳನ್ನು ಸೇರಿಸುವದರಿಂದ ಭಾಷಾವಾರ ಪ್ರಾಂತರಚನೆಗೂ, ವಿದ್ಯಾಪೀಠ ರಚನೆಗೂ ಬಾಧೆ ತಟ್ಟುತ್ತದೆಂದು ಸಭಿಕರ ಅಭಿಪ್ರಾಯವಾಗಿ, ಮದ್ರಾಸ ಸರಕಾರವು ಮಾಡಲಿಕ್ಕಿದ್ದ ಈ ಯೋಜನೆಯ ನಿಷೇಧ ಮಾಡೋಣಾಯಿತು. ಉಪಮಂಡಲದವರು ಬಳ್ಳಾರಿ, ಅನಂತಪುರ ಜಿಲ್ಲೆಗಳನ್ನು ಆಂಧ್ರ ವಿದ್ಯಾಪೀಠದಲ್ಲಿ ಸೇರದಂತೆ ಯತ್ನಮಾಡಬೇಕಾಗಿಯೂ ನಿರ್ಣಯವಾಯಿತು. ಮದ್ರಾಸದಲ್ಲಿ ತಾ. ೨೮ ನೇಗೆ ವಿದ್ಯಾಪೀಠದ ಕಾಯಿದೆಯ ಮಸೂದೆಯ ಚರ್ಚೆಯಾಗಲಿಕ್ಕಿದೆ. ಆ ಕಾಲಕ್ಕೆ ಉಪಮಂಡಲದವರು ಶಿಷ್ಟಮಂಡಲವೊಂದನ್ನು ಕಳುಹಬೇಕಾಗಿಯೂ ಗೊತ್ತಾಯಿತು.

* * *

ಹೈಕೋರ್ಟ ನ್ಯಾಯಮೂರ್ತಿಗಳ ದರ್ಪ!

ಕಲಕತ್ತೆಯ ಹೈಕೋರ್ಟಿನಲ್ಲಿ ಮಿ| ಪೇಜಂಬವರು ನ್ಯಾಯಮೂರ್ತಿಗಳಿರುವರು. ಇವರ ಮೇಲೆ ಆಲಿಪುರದೊಳಗಿನ ಪೋಲೀಸ ಕೋರ್ಟಿನಲ್ಲಿ ಖಟ್ಲೆಯಾಗಿದೆ. ಖಟ್ಲೆಯ ಹಕೀಕತು ಹೀಗೆ:--ಆಗಸ್ಟ ತಾ. ೨೫ನೇಗೆ ಕಲಕತ್ತೆಯ ಮ್ಯುನಿಸಿಪಾಲಿಟಿಯವರು ನೀರಿನ ಹಾಸಲು ಬಾಕಿ ಇಟ್ಟುಕೊಂಡ ಜನರ ನೀರಿನ ಪೂರೈಕೆಯನ್ನು ತಡೆಯಲು ಸಬ್ ಓವ್ಹರಸಿಯರ ರಾ| ಚಕ್ರವರ್ತಿಯವರಿಗೆ ಹುಕುಮು ಕೊಟ್ಟರು. ಹೈಕೋರ್ಟಿನ ನ್ಯಾಯಮೂರ್ತಿಗಳೂ ಈ ಹಾಸಲನ್ನು ಕೊಟ್ಟಿದ್ದಿಲ್ಲ. ಆದರಿಂದ ಹುಕುಮಿನಂತೆ ರಾ| ಚಕ್ರವರ್ತಿಯವರು ನ್ಯಾಯಮೂರ್ತಿಗಳ ಉಪವನಕ್ಕೆ ಹೋಗುವ ನೀರಿನ ನಳವನ್ನು ಕತ್ತರಿಸಿಬಿಟ್ಟರು. ಈ ವಿಷಯ ಖುಲಾಸೆ ಮಾಡಲು ಬರಬೇಕೆಂದು ಸಬ್ ಓವ್ಹರಸಿಯರರು ಪೌಕಶಿ ಮಾಡಲು ಸಾಹೇಬರ ಪರಿವಾರದವನೊಬ್ಬನು ೧೦ ಘಂಟೆಗೆ ಬರಹೇಳಿದನು. ಅದರಂತೆ, ಆತನು ಹೋಗಿ ನ್ಯಾಯಮೂರ್ತಿಗಳಿಗೆ ಹಕೀಕತನ್ನು ನಿವೇದಿಸಿದನು. ನ್ಯಾಯಮೂರ್ತಿಗಳಿಗೆ ಹಕೀಕತು ಕೇಳಿಕೊಳ್ಳುವಷ್ಟು ಸಮಾಧಾನವಿದ್ದಿಲ್ಲ. ಒಮ್ಮೆಲೇ ಹಿಯ್ಯಾಳಿಸಹತ್ತಿದರು. ಕೆಪಿಹಿಡಿದು, ಕಾಲಿನಿಂದ ಒದೆದು ಹೊರ ತಳ್ಳುತ್ತೇವೆಂದು ನ್ಯಾಯಮೂರ್ತಿಗಳು ನುಡಿದರು. "ನಾನೇನೂ ತಪ್ಪು ಮಾಡಲಿಲ್ಲ; ಹುಕುಮಿನಂತೆ ನಾನು ವರ್ತಿಸುತ್ತಿದ್ದೇನೆ" ಎಂದು ರಾ| ಚಕ್ರವರ್ತಿಯವರು ನುಡಿಯಲು, ನ್ಯಾಯಮೂರ್ತಿಗಳಿಗೆ ಪಿತ್ತ ಕೆಣಕಿ, ರಾ| ಚಕ್ರವರ್ತಿಯವರನ್ನು ಒದೆದು ಹೊರ ಹಾಕಿದರು ಖಟ್ಲೆಯ ಸಮಯ ಪಕೀಲರ ಮಾರ್ಫತ ನ್ಯಾಯಮೂರ್ತಿಗಳು ಪಶ್ಚಾತ್ತಾಪ ವ್ಯಕ್ತಮಾಡಿ, ಪ್ರಕರಣನ್ನು ಮುಗಿಸಿಕೊಂಡರು. ಎಂಥ ಅಹಂಕಾರ! ಎಂಥ ಅಧಿಕಾರಮದ!!

—ಧಾರವಾಡ ಜಿಲ್ಲೆಯ ಹುಡಿಗದಾದ ಶ್ರೀ| ವೀರಭದ್ರಪ್ಪ ಅಲಮಟ್ಟ ಪತ್ತಾರರೆಂಬುವರು ಕೈಯಿಂದ ಹತ್ತಿ ಅರಿಯುವ ಒಂದು ರಾಟಿಯನ್ನು ತಯಾರಿಸುವರು. ಅದರಿಂದ ಒಬ್ಬ ಮನೆಯಲ್ಲಿ ಕೂತಲ್ಲಿಯೇ ದಿನಾ ನಾಲ್ಕು ಮಣ ಹತ್ತಿಯನ್ನಾದರೂ ಅರಿಯಬಲ್ಲನು. ಕಾಳು ಒಡೆಯದೆ, ಗುಂಜು ಉಳಿಯದೆ, ಹಸನಾದ ಹತ್ತಿಯು ತಯಾರು ಮಾಡಲಿಕ್ಕೆ ಈ ರಾಟಿಯಿಂದ ಬಹಳ ಅನುಕೂಲ. ಶ್ರೀ| ವೀರಭದ್ರಪ್ಪನವರು ನೇಯುವ ಮಗ್ಗವನ್ನೂ ತಯಾರಮಾಡಿರುವರು — ಖಾದಿ ಪ್ರತಿಷ್ಠಾನಸಂಸ್ಥೆಯವರು ಕಲಕತ್ತೆಯಲ್ಲಿ ಖಾದಿಯ ಪ್ರದರ್ಶನವನ್ನು ಹೂಡಿರುವರು. ಪ್ರತಿಷ್ಠಾನದ ೧೦೦೦೦ ನೂಲುಗಾರರು ಒಂದೇ ದಿವಸ ೭ ಮಣ ನೂಲು ತೆಗೆದಿದ್ದರು. ಇದನ್ನು ಪ್ರದರ್ಶನದಲ್ಲಿಟ್ಟಿದ್ದರು. ತರತರದ ಕೈಮಾಟಗಳೂ, ತರತರದ ನೂಲೂ ಅಲ್ಲಿ ಕಾಣುತ್ತಿತ್ತು. ಮಹಾತ್ಮರೂ, ಡಾ| ಪ್ರಫುಲ್ಲಚಂದ್ರರಾಯರೂ, ಶ್ರೀಮತೀ ಅಪರ್ಣಾದೇವಿಯರೂ ತೆಗೆದ ನೂಲೂ ಅಲ್ಲಿತ್ತು. ಬಂಗಾಲದಲ್ಲಿ ಬಹು ಶೀಘ್ರದಿಂದ ನೂಲುವ ಮಿ| ಉಮ್ಮನ ಕಾಷ್ಟುವಾಲರು ತಮ್ಮ ಹಸ್ತಕೌಶಲ್ಯವನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸುತ್ತಿದ್ದರು. ಪ್ರದರ್ಶನವನ್ನು ಸಂದರ್ಶಿಸಲು ಟಿಕೇಟು ಇರುವದಿಲ್ಲ. ಸಾವಿರಾರು ಮಂದಿಗಳು ಪ್ರದರ್ಶನ ಮಂಟಪಕ್ಕೆ ತಂಡುಗಟ್ಟಿ ಹೋಗುತ್ತಿರುವರು.

ವಾಚಕ ಮಹನೀಯರೇ—

ಇದು ೭ ನೇ ವರ್ಷದ ಕೊನೆಯ ಸಂಚಿಕೆಯು. ವಾಡಿಕೆಯಂತೆ, ಒಂದು ವಾರ 'ವೃತ್ತ'ವ ವಿಶ್ರಾಂತಿಗೈದು, ಹೊಸ ವರುಷದ ಹೊಸ ಹುರುಪಿನಿಂದ ತಾ ೫–೧೦–೧೯೨೫ ನೇ ಸೋಮವಾರಕ್ಕೆ ಪುನಃ ತಮ್ಮೊಡನೆ ಬಂದು ಸೇರುವದು. 'ವೃತ್ತ'ದ ಸೇವೆಯನ್ನು ಈ ವರೆಗೆ ನೀವು ಸವಿಮಾಡಿಕೊಂಡಂತೆ, ಮುಂದಿನ ವರ್ಷವಾದರೂ, ಆಶ್ರಯವನ್ನಿತ್ತು ಸಾಕಿ ಸಲಹಿರೆಂದು 'ವೃತ್ತ'ವು ಕೋರುತ್ತದೆ. 'ವೃತ್ತ'ದ ಸ್ಥಿತಿಗತಿಯನ್ನು ನೀವರಿತಿರುವಿರಿ. 'ವೃತ್ತ'ದ ತಪಸ್ಸನ್ನೂ, ಅಸಿಧಾರಾವ್ರತವನ್ನೂ ನೀವು ಪ್ರತ್ಯಕ್ಷ ಅನುಭವಿಸಿರುವಿರಿ. ಮುಂದಿನ ಕಾರ್ಯವನ್ನೂ, ಸೇವೆಯನ್ನೂ ನೀವು ಆಲೋಚಿಸಿ, 'ವೃತ್ತ'ಕ್ಕೆ ಸಂಗೋಪನ ಮಾಡಿಕೊಳ್ಳಬೇಕು. 'ವೃತ್ತ'ವು ಈಗ ೮ ನೇ ವರ್ಷದಲ್ಲಿ ಕಾಲಿಟ್ಟಿರುವದು. ಪ್ರಾಯದಿಂದ 'ವೃತ್ತ'ವು ಬೆಳೆದಂತೆ, ನಿಮ್ಮ ಆಶ್ರಯವೂ ಬೆಳೆದರೆ 'ವೃತ್ತ'ವು ವಿಶೇಷ ಸಾಮರ್ಥ್ಯದಿಂದ, ಸಾಹಸದಿಂದ ನಿಮ್ಮ ಸೇವೆ ಮಾಡಬಲ್ಲದು. ಆದರಿಂದ 'ವೃತ್ತ'ದ ಅರಿಕೆ ಇಷ್ಟೇ:– ಈ ವರೆಗೆ ನನ್ನನ್ನು ಕಾಪಾಡಿಕೊಂಡಂತೆ, ಇನ್ನು ಮುಂದೆಯೂ ನನಗೆ ಆಶ್ರಯವನ್ನಿತ್ತು ಕಾಪಾಡಿರಿ. ಸರ್ವಸ್ವವನ್ನೂ ನಿಮ್ಮೆಡೆಗೆ ನಾನು ಅರ್ಪಿಸುವೆನು. ನಾನು ಯಾರ ದಾಕ್ಷಿಣ್ಯಕ್ಕೂ ಬಲಿಬೀಳದೆ, ಯಾವ ಆಶೆಗೂ ಮೋಹಗೊಳ್ಳದೆ, ಸ್ವತಂತ್ರ ಬುದ್ಧಿಯಿಂದ, ಪ್ರಾಮಾಣಿಕ ಬುದ್ಧಿಯಿಂದ ಸಮಯೋಚಿತವಾಗಿ ನಿಮ್ಮ ಸೇವೆಗೆ ಯಾವಾಗಲೂ ಬದ್ಧಕಂಕಣನಾಗಿದ್ದೇನೆ. ವರ್ಷಕ್ಕೆ ಬರೇ ೩–೦–೦ ರೂಪಾಯಿಗಳಿಂದ ನಾನು ನಿರ್ವಾಹ ಸಾಗಿಸಬಲ್ಲೆನು; ಅಷ್ಟರಿಂದನ್ನು ನನಗೆ ಕೊಟ್ಟು ಪೋಷಿಸಿರಿ. ಕಾರಣಾಂತರದಿಂದ ನನಗೆ ಆಶ್ರಯವನ್ನೀಯಲಾರದವರು ಹಾಗೆ ಮುಂದಾಗಿ ನನಗೆ ತಿಳಿಸಿದ್ದಲ್ಲಿ ನಾನು ಅವರಲ್ಲಿ ಅತಿಥಿಯಾಗಿ ಬರಲಿಕ್ಕಿಲ್ಲ.

ಇತಿ ಮ್ಯಾನೇಜರ.

ತ್ವರೆ ಮಾಡಿರಿ ! ತ್ವರೆ ಮಾಡಿರಿ !!

ಜಾಹಿರಾತುದಾರರು ತ್ವರೆಮಾಡಬೇಕು !

ಬನ್ನೂರು ರಾಮಾ ತಿಮ್ಮಣ್ಣ ಪಂಡಿತರಿಂದ ದೃಗ್ಗಣಿತ ಪ್ರಕಾರ ಗುಣಿಸಿ ಪರಿಶೋಧಿಸಲ್ಪಟ್ಟ

ಕ್ಷಯ ಸಂ। ದ ಪಂಚಾಂಗವು

ಅಚ್ಚಿನಲ್ಲಿದೆ !

ಪಂಚಾಂಗದಲ್ಲಿ ಜಾಹಿರಾತು ಕೊಡುವವರಿಗೆ ಏರ್ಪಾಟು ಮಾಡಿದೆ !

ಈ ಪಂಚಾಂಗವು ಕಾನಡಾ ಜಿಲ್ಲೆಯೊಳಗಿನ ಹಳ್ಳಿ ಹಳ್ಳಿಗಳಲ್ಲಿಯೂ, ಸಾಗರ-ಶಿವಮೊಗ್ಗಾ ಮೊದಲಾದ ಮೈಸೂರು ಪ್ರಾಂತದಲ್ಲಿಯೂ ಸುಪ್ರಸಿದ್ಧವಿದೆ.

ಜಾಹೀರಾತು ಕೊಡಬಿಚ್ಛಿಸುವವರು ಬರುವ ಅಕ್ಟೋಬರ ತಾರೀಖು ೧೫ರೊಳಗೆ ಈ ಕೆಳಗಿನ ಪತ್ತೆಯ ಮೇಲೆ ಪತ್ರವ್ಯವಹಾರ ಮಾಡಿ ದರಪತ್ರ ತರಿಸಿಕೊಳ್ಳಬಹುದು.

ಪತ್ತೆ— ಮೆನೆಜರ, "ಸ್ಪಿರಿಟ ಆಫ್ ಕೆನರಾ ಪ್ರೆಸ" ಕುಮಟಾ (ಉ. ಕಾ.)

ಕಾನಡಾವೃತ್ತ.

ಮಿತಿ ಕ್ರೋಧನ ಸಂ। ಅಶ್ವೀನ ಶು। ೩ಗೆ ಸೋಮವಾರ.

ರಾಷ್ಟ್ರಾಭಿಮಾನ.

ಮಹಾತ್ಮರ ಮೀಮಾಂಸೆ.

ಮಹಾತ್ಮರು ಕಲಕತ್ತೆಯಲ್ಲಿ ರಾಷ್ಟ್ರಾಭಿಮಾನದ ಚರ್ಚೆಯನ್ನು ಮಾಡಿದ ಹಕೀಕತನ್ನು ಶ್ರೀ। ಮಹಾದೇವ ದೇಸಾಯಿಯವರು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಕೊಟ್ಟಿರುವರು. ರಾಷ್ಟ್ರಾಭಿಮಾನವುಳ್ಳವರು ವರ್ಣದ್ವೇಷದಿಂದ ಪ್ರೇರಿತರಾಗುತ್ತಾರೆಂಬ ಭಾವನೆಯು ನಮ್ಮ ಆಳರಸರಲ್ಲಿ ತಲದೋರಿದೆ. ಕೆಲ ಅಜ್ಞರು ಸಹ ಬ್ರಿಟಿಶರ ದ್ವೇಷ ಮಾಡಿದರೆ, ದೊಡ್ಡ ದೇಶಾಭಿಮಾನವಾಯಿತೆಂದು ಭಾವಿಸುತ್ತಾರೆ. ಬ್ರಿಟಿಶರ ಅಂಕೆಯನ್ನು ಅಂಗೀಕಾರಪೂರ್ವಕವಾಗಿ ಅಲ್ಲಗಳೆಯುವವರು ಬ್ರಿಟಿಶರನ್ನು ಪ್ರೀತಿಸುವ ಬಗೆ ಹೇಗೆ? ಬ್ರಿಟಿಶ ರಾಜ್ಯಪದ್ಧತಿಯು ತಿರಸ್ಕಾರಯುಕ್ತವಾಗಿದ್ದರೆ, ಬ್ರಿಟಿಶರೂ ತಿರಸ್ಕೃತರಾಗಿರಲೇ ಬೇಕು; ಎಂಬದೊಂದು ಸಿದ್ಧಾಂತವು ಅನೇಕರಲ್ಲಿ ಬೇರೂರಿಕೊಂಡಿದೆ. ಈ ಪ್ರಶ್ನೆಯನ್ನು ಕಲಕತ್ತೆಯ ಸಿದ್ಧೇಶ್ವರ ಸಭಾಮಂದಿರದಲ್ಲಿ ಮಹಾತ್ಮರು ಚರ್ಚಿಸಿದರು.

ಮಹಾತ್ಮರು ಸ್ವಾನುಭವದಿಂದ ಈ ಪ್ರಶ್ನೆಯನ್ನು ನಿರೂಪಿಸಿದರು. ೩೦ ವರ್ಷಗಳಿಂದ ನಾನೀ ಪ್ರಶ್ನೆಯನ್ನು ವಿಚಾರಿಸುತ್ತಿದ್ದೇನೆ ರಾಷ್ಟ್ರಾಭಿಮಾನಕ್ಕೂ ವರ್ಣದ್ವೇಷಕ್ಕೂ ಸಂಬಂಧವೇನಿಲ್ಲ ಬ್ರಿಟಿಶ ರಾಜ್ಯಪದ್ಧತಿಯನ್ನು ತಿರಸ್ಕರಿಸುವಾಗ, ನಿಷೇಧಿಸುತ್ತಿರುವಾಗ, ಬ್ರಿಟಿಶರನ್ನು ಸ್ನೇಹಭಾವದಿಂದ ನಡಿಸಿಕೊಳ್ಳುವದು ಸಾಧ್ಯವಿದೆ. ಆದರಿಂದ ನಮ್ಮ ವಿಚಾರದಲ್ಲಿ, ಧೋರಣದಲ್ಲಿ, ರಾಷ್ಟ್ರಾಭಿಮಾನದಲ್ಲಿ ಕೊರತೆಯಾಗುವದಿಲ್ಲ. ದ್ವೇಷದಿಂದ ಎಂದೂ ಒಳಿತಾಗಲಾರದು. ದ್ವೇಷಭಾವದಿಂದ ಯಾವದೇ ರಾಷ್ಟ್ರವು ಪ್ರೇರಿತವಾಗಿದ್ದರೆ, ಭೂಮಂಡಲವು ಮುಂದರಿಯಲಾರದು. ಜಗತ್ತಿಗೆ ವೈಮನಸ್ಸು ಬೇಕಾಗಿಲ್ಲ. ದ್ವೇಷಭಾವದಿಂದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಒದಗಿದ ವಿಪನ್ನಾವಸ್ಥೆಯನ್ನು ಲಕ್ಷಿಸಿರಿ; ದಣಿವಾರಿಸಿಕೊಂಡರೆ ಪಾಶ್ಚಾತ್ಯ ರಾಷ್ಟ್ರಗಳಿಗೆ ಸಾಕಾಗಿದೆ. ದ್ವೇಷಭಾವದ ವಿಷಾರಿ ಘೂತ್ಕಾರಗಳಿಂದ ಮಾನವ ಕೋಟಿಯು ಕಲ್ಯಾಣವಾಯಿತೇ? ಇದನ್ನು ವಿಚಾರಿಸಿರಿ. ಮಾಶ್ಚಾತ್ಯರ ಅವನತಿಯಿಂದ ಬೋಧಗಳಿತು ಭರತ ಖಂಡವು ಆ ಮಾರ್ಗವನ್ನು ತೊರೆದು ಭಿನ್ನ ಮಾರ್ಗವನ್ನು ಕ್ರಮಣ ಮಾಡಲಿ.

ಮಹಾತ್ಮರು ಮುಂದರಿಯುತ್ತಾರೆ: ಸಭಿಕರೇ, ನೀವೇ ವಿಚಾರ ಮಾಡಿರಿ. ನಾವು ಬ್ರಿಟಿಶರ ದ್ವೇಷ ಬಗೆಯುವದೆಂದರೆ ಏನು! ನಾವು ೩೦ ಕೋಟಿ ಪ್ರಜೆಗಳು; ಬ್ರಿಟಿಶರು ೧ ಕೋಟಿ. ನಾವು ಸ್ವರಾಜ್ಯ ಸಂಪಾದನೆ ಮಾಡಬೇಕಾದರೆ, ೩೦ ಕೋಟಿ ಜನರು ೧ ಕೋಟಿ ಜನರ ಮೇಲೆ ದ್ವೇಷ ಬಗೆಯುವದು ನಮಗೆ ನಾಚಿಕೆಗೇಡಿತನವಲ್ಲವೇ! ೩೦ ಮಂದಿಗಳಿಗೆ ಒಬ್ಬನ ಮೇಲೆ ದ್ವೇಷ! ಇದು ಧರ್ಮವೇನು ! ದ್ವೇಷಹಿಡಿಯುವದೇ ಆದರೆ, ಕೇಡು ಮಾಡುವವರ ಮೇಲೆ ಹಿಡಿಯಬೇಡಿರಿ; ಕೇಡಿಗೆ ತಿರಸ್ಕಾರಮಾಡಿರಿ; ಕೇಡುಮಾಡುವವರ ವಿಷಯ ಯಾವಾಗಲೂ ಸ್ನೇಹಭಾವವನ್ನೇ ತಳೆಯಿರಿ. ಬ್ರಿಟಿಶ ಆಡಳಿತೆಯ ವಿಷಯ ನಾನು ಮರೆಮಾಚದೆ ಟೀಕೆ ಮಾಡಿದ್ದೇನೆ; ಆದರೆ, ಬ್ರಿಟಿಶರ ವಿಷಯ ಯಾವಾಗಲೂ ಪ್ರೇಮಭಾವವನ್ನೇ ತಳೆದಿರುವೆನು. ಪ್ರೇಮವೆಂದರೆ, ಪ್ರೇಮಪಾತ್ರದಲ್ಲಿರುವ ದೋಷಗಳನ್ನು ಮುಚ್ಚಿಕೊಂಡಿರುವದಲ್ಲ. ಇದೇನು ನಿಜವಾದ ಪ್ರೇಮವಲ್ಲ. ಮಾನವನು ಸದೋಷ ಪ್ರಾಣಿಯು; ಸ್ಖಲನಶೀಲನು. ಆದರಿಂದ ಅತನನ್ನು ದ್ವೇಷಿಸುವದು ನನ್ನ ಧರ್ಮವೇ? ನಾನು ಮಾನವನಲ್ಲವೇ! ಈಗಿನ ರಾಜ್ಯಪದ್ಧತಿಯು ರಾಕ್ಷಸೀ ಪದ್ಧತಿಯೆಂದು ನಾನು ಹೇಳಿರುವೆನು; ಈಗಲೂ ನಾನು ಹಾಗೇ ಹೇಳುತ್ತೇನೆ. ಬ್ರಿಟಿಶರಮೇಲೆ ನಾನು ದ್ವೇಷ ಮಾಡಹತ್ತಿದರೆ, ಪದ್ಧತಿಯ ಮೇಲಿನ ನನ್ನ ಕಟಾಕ್ಷವು ಬಯಲಾಗಿ ಕಾರ್ಯಹಾನಿಯಾಗುವದು. ಆದರಿಂದ ಬ್ರಿಟಿಶರಿಗೆ ಸ್ನೇಹಭಾವದಿಂದ ನಡಿಸಿಕೊಂಡು ಬಂದು, ಅವರ ಮನಃಪೂರ್ತಿಯಿಂದ ನನ್ನ ಮತಕ್ಕೆ ಕ್ರಮವಾಗಿ ಅವರನ್ನು ಸೇರಿಸಿಕೊಳ್ಳುವದು ನನ್ನ ಧರ್ಮವು. ಅಸಹಯೋಗದಲ್ಲಿ ದ್ವೇಷಕ್ಕೆ ಇಂಬಿಲ್ಲ. ಸತ್ಯಾಗ್ರಹಿ, ಅಸಹಯೋಗಿ ಎಂದು ಹೇಳಿಸಿಕೊಂಡು ಪರರ ದ್ವೇಷ ಮಾಡುವವರು ನಾಮಧಾರಿ ಅಸಹಯೋಗಿಗಳು.

ಮಹಾತ್ಮರು ರಾಷ್ಟ್ರಾಭಿಮಾನವನ್ನೂ, ಪರಸ್ಪರ ಪ್ರೀತಿಯನ್ನೂ ಸಂಪಾದಿಸುವ ಬಗೆಯನ್ನು ಈ ಪ್ರಕಾರ ಅರುಹಿದರು. ರಾಷ್ಟ್ರಾಭಿಮಾನಕ್ಕೆ ದ್ವೇಷವು ಅವಶ್ಯವಿರುವದಿಲ್ಲ. ನಿಜವಾದ ರಾಷ್ಟ್ರಾಭಿಮಾನವು ವರ್ಣದ್ವೇಷದ ಸಂಗಡ ಎಂದೂ ಅಭಿವೃದ್ಧಿ ಹೊಂದಲಾರದು. ರಾಷ್ಟ್ರಾಭಿಮಾನವೆಂದರೇನು! ಯಾಕೆ ನಾವು ರಾಷ್ಟ್ರಾಭಿಮಾನಿಗಳಾಗಬೇಕು! ನಮ್ಮ ರಾಷ್ಟ್ರವು ಬಂಧನದಿಂದ ವಿಮೋಚನವಾಗಬೇಕು; ಆದರೆ, ಪರಸ್ಪರಗೆ ಹಾನಿಯಾಗದಂತೆ, ಪರರಾಷ್ಟ್ರಗಳಿಗೆ ಅಪಮಾನವಾಗದಂತೆ ನಮ್ಮ ಬಂಧವಿಮೋ

...ಗಬೇಕು. ಹಿಂದುಸ್ಥಾನದ ಬಂಧವಿಮೋಚನದಿಂದ ಇಂಗ್ಲಂಡವೇ ನಾಮಶೇಷವಾಗುತ್ತಿದ್ದರೆ, ಆಂಗ್ಲರೆ ನಿರ್ನಾಮವಾಗುತ್ತಿದ್ದರೆ ನನಗೆ ಹಿಂದೀ ಸ್ವಾತಂತ್ರ್ಯವು ಬೇಕಾಗಿದ್ದರೆ, ಆ ಸ್ವಾತಂತ್ರ್ಯಕ್ಕಾಗಿ ನಾನು ಯಾಕೆ ಯತ್ನಿಸುತ್ತೇನೆ! ನಮ್ಮ ರಾಷ್ಟ್ರಸ್ವಾತಂತ್ರ್ಯದಿಂದ ರಾಷ್ಟ್ರಗಳು ಬುದ್ಧಿಗಲಿಯಬೇಕೆಂದು, ಮಾನವಕೋಟಿಯು ಕಲ್ಯಾಣವಾಗಬೇಕೆಂದು ನಾನು ಬಯಸುತ್ತೇನೆ. ದೇಶಾಭಿಮಾನದಿಂದ ನಾವು ಏನು ಕಲಿಯುತ್ತೇವೆ! ವ್ಯಕ್ತಿಯು ಮನೆಯ ಹಿತಕ್ಕಾಗಿ ಆತ್ಮಾರ್ಪಣ ಮಾಡಬೇಕು; ಮನೆತನವು ಗ್ರಾಮದ ಹಿತಕ್ಕಾಗಿ ಆತ್ಮತ್ಯಾಗ ಮಾಡಬೇಕು; ಗ್ರಾಮವು ಜಿಲ್ಲೆಗಾಗಿ, ಜಿಲ್ಲೆಯು ಪ್ರಾಂತಕ್ಕಾಗಿ, ಪ್ರಾಂತವು ದೇಶಕ್ಕಾಗಿ ಸರ್ವಸ್ವವನ್ನು ಅರ್ಪಿಸಬೇಕು. ದೇಶಸ್ವಾತಂತ್ರ್ಯದ ಅರ್ಥವೇನು! ಅವಶ್ಯವಿದ್ದರೆ ಭೂತಲದ ಹಿತಕ್ಕಾಗಿ ಆತ್ಮಾರ್ಪಣ ಮಾಡಲು ಸಿದ್ಧವಾಗಿರಬೇಕು; ಇದೇ ನನ್ನ ರಾಷ್ಟ್ರಾಭಿಮಾನವು. ಈ ವಿಚಾರದಿಂದ ರಾಷ್ಟ್ರಸ್ವಾತಂತ್ರ್ಯದ ಕಾ[illegible]ಟದಲ್ಲಿ ನಾನು ಸೇರಿಕೊಂಡಿದ್ದೇನೆ. ಈ ರಾಷ್ಟ್ರಾಭಿಮಾನದಿಂದಲೇ ನೀವೆಲ್ಲರೂ ಪ್ರೇರಿತರಾಗಿ; ವರ್ಣದ್ವೇಷಕ್ಕೆ ಇಂಬುಗೊಡಬೇಡಿರಿ.

ಮಹಾತ್ಮರು ಮಾಡಿದ ರಾಷ್ಟ್ರಾಭಿಮಾನದ ವ್ಯಾಖ್ಯೆಯಿದು! ಲೋಕೋತ್ತರ ಪುರುಷರ ಲೋಕೋತ್ತರ ವಿಚಾರಸರಣಿಯಿದು!! ಮಹಾತ್ಮರ ರಾಷ್ಟ್ರಾಭಿಮಾನವು ರಾಷ್ಟ್ರಸ್ವಾತಂತ್ರ್ಯದ ಕಾದಾಟವು ಹಿಮಾಚಲವನ್ನು ದಾಟಿ ಭೂಮಂಡಲದ ಮೇರೆಗಟ್ಟಿದೆ. ಭೂಮಂಡಲದಲ್ಲಿ ಬ್ರಿಟಿಶರೂ, ಭಾರತೀಯರೂ ಬಾಂಧವರೇ. ಕಾಲಮಾನದಿಂದ, ದೇಶಭೇದದಿಂದ, ಮಾನವನ ಸ್ಖಲನಶೀಲ ಗುಣದಿಂದ, ಅಜ್ಞಾನದಿಂದ ರಾಷ್ಟ್ರಾಭಿಮಾನದ ವಿಸ್ತಾರವು ತೋರಿಯದೆ, ರಾಷ್ಟ್ರಾಭಿಮಾನದ ಕ್ಷೇತ್ರವನ್ನು ಸಂಕೋಚಿಸಲಾಗಿ, ರಾಷ್ಟ್ರವರ್ಧಕರು ಬಾಲಕರನ್ನು ನಾವು ದ್ವೇಷಿಸುತ್ತೇವೆ. ಇದರಿಂದ ಎಂದೂ ರಾಷ್ಟ್ರಕ್ಕೆ ಹಿತವಿಲ್ಲ. ಸಂಕುಚಿತ ರಾಷ್ಟ್ರಾಭಿಮಾನವು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿಶೇಷವಾಗಿ ಪ್ರಾದುರ್ಭೂತವಾದ್ದರಿಂದ ಮಹಾಯುದ್ಧಪ್ರಸಂಗವು ಒದಗಿಬಂದು, ಇಡೀ ಯುರೋಪಖಂಡವೇ ಬಳಲುತ್ತಿದೆ. ಈ ಪ್ರಕಾರವನ್ನು ನಾವು ಕಣ್ಣಾರೆ ಕಾಣುತ್ತಿರುವಾಗ, ಪರಸ್ಪರ ದ್ವೇಷಮಾಡಿ, ರಾಷ್ಟ್ರಕಲ್ಯಾಣ ಮಾಡುವ ಇಚ್ಛೆ ಹಿಡಿಯುವದು ಎಂದೂ ಕಲ್ಯಾಣಪ್ರದವಲ್ಲ. ಮಹಾತ್ಮರ ನಿರೂಪಣವನ್ನು ವಾಚಕರೆಲ್ಲರೂ ಪರ್ಯಾಲೋಚಿಸಿ ತಕ್ಕ ದಾರಿಯಿಂದ ರಾಷ್ಟ್ರಾಭಿಮಾನ ಹಿಡಿದು ರಾಷ್ಟ್ರಕಾರ್ಯ ಮುಂದರಿಸಬೇಕಾಗಿಯೂ ಭಾರತೀಯರು ಇಡೀ ಭೂತಲಕ್ಕೆ ಆದರ್ಶಭೂತರಾಗಿ ದಿಗಂತ ಕೀರ್ತಿಯನ್ನು ಹೊಂದಬೇಕಾಗಿಯೂ ಪ್ರಾರ್ಥಿಸಿ, [illegible] ಈ ಸೇವೆಯನ್ನು ಮುಗಿಸುವೆವು.

ಸ್ಫುಟ ಸೂಚನೆಗಳು.

೧. ಮಹಾತ್ಮರ ಸಂಭಾಷಣದೊಳಗಿನ ಒಂದು ಮಾತನ್ನು ಮುಖ್ಯವಾಗಿ ನಮ್ಮ ಅರಸರು ಲಕ್ಷ್ಯದಲ್ಲಿಡತಕ್ಕದ್ದು. ಓಕ್ಸ್‌ಫರ್ಡಿನ ಸಭಾಮಂದಿರದೊಳಗಿನ ಸಭೆಯಲ್ಲಿ ಇಂಪೀರಿಯಲ್ ಲ್ಯಾಬ್ರರಿಯ ಲ್ಯಾಬ್ರೇರಿಯನ್‌ರಾದ ಮಿ। ಜೆಮ್ಸನ್‌ರವರು ಮಹಾತ್ಮರಿಗೆ ಒಂದು ಸವಾಲು ಕೇಳಿದರು: “ಭಾರತೀಯರಿಗೆ ಸ್ವತಃ ರಾಜ್ಯ ಮಾಡುವ ಸಾಮರ್ಥ್ಯವಿಷ್ಟೆ. ಇಂಥ ಸ್ಥಿತಿಯಲ್ಲಿ ಬ್ರಿಟಿಶರಿಗೆ ಸಮಾನರಾಗಿ ರಾಜಕೀಯ ಸ್ವಾತಂತ್ರ್ಯವನ್ನು, ರಾಜಕೀಯ ಸಮಾನತೆಯನ್ನೂ ಸಂಪಾದಿಸಲು ಹೆಣಗಾಡುವದರಿಂದ ವರ್ಣದ್ವೇಷಕ್ಕೆ ಪುಟ ದೊರೆಯುತ್ತದಲ್ಲವೇನು?” ಇದು ಮಿ। ಜೆಮ್ಸನ್‌ರವರ ಸವಾಲು. ಮಹಾತ್ಮರು ನುಡಿದದ್ದೇನಂದರೆ, “ರಾಜ್ಯಕಾರಭಾರದ ಸಾಮರ್ಥ್ಯವು ಪ್ರಾಪ್ತವಾಗುವವರೆಗೆ ಬ್ರಿಟಿಶರ ಅಧೀನವಾಗಿ ನಾವಿರಬೇಕೆಂಬ ತತ್ವವು ತಪ್ಪು ಗ್ರಹಿಕೆಯು. ಆಗಿನ ರಾಜ್ಯಪದ್ಧತಿಯನ್ನು ವಿರೋಧಿಸಿಯೇ ನಾವು ಸಾಮರ್ಥ್ಯವಂತರಾಗಬಲ್ಲೆವು. ಭಾರತೀಯರು ರಾಜ್ಯಧುರೆಯನ್ನು ನಡಿಸಲು ಅಸಮರ್ಥರೆಂದು ಹೇಳುವವರು, ಅಪ್ರತ್ಯಕ್ಷವಾಗಿ, ಅಹೇತುಕವಾಗಿ ತಮ್ಮ ವರ್ಣದ್ವೇಷವನ್ನೇ ಹೊರಗೆಡಹುತ್ತಿರುವರೆಂದು ನನಗೆ ತೋರುತ್ತದೆ. ಭೂತಲದ ಕಾರಭಾರವನ್ನೆಲ್ಲ ನಡಿಸಲು ಬ್ರಿಟಿಶರು ಅವತೀರ್ಣರಾಗಿರುತ್ತಾರೆಂಬ ತಿಳುವಳಿಕೆಯು ಅಹಂಕಾರದ್ದು. ಈ ಅಹಂಕಾರವನ್ನು ಅಳಿಸಲು ನಾನು ಆತ್ಮಾರ್ಪಣ ಮಾಡಿರುವೆನು. ಬ್ರಿಟಿಶರು ಈ ಗ್ರಹಿಕೆಯನ್ನು ತೊರೆದ ಹೊರತು ಭರತಖಂಡದಲ್ಲಿ ಶಾಂತತೆಯು; ಭೂತಲದಲ್ಲಿಯೂ ಯಾವಾಗಲೂ ಶಾಂತತೆಯಿರುವದಿಲ್ಲ. ಮನಸ್ವಿ ಕಾರಭಾರ ನಡಿಸುವದು ಹಿಂದುಸ್ಥಾನದ ಹಕ್ಕು. ಪರಸ್ಥರ್ಯಾರೂ ನನ್ನ ದೇಶದಲ್ಲಿ ಬಲಾತ್ಕಾರದಿಂದ ಶಾಂತತೆಯನ್ನು ಸ್ಥಾಪಿಸಿದರೆ, ನನ್ನ ಅಂತಃಕರಣವು ತಲ್ಲಣಿಸುತ್ತದೆ.” ಮಹಾತ್ಮರ ವಿಚಾರಗಳಿವು. ಸುರಾಜ್ಯವನ್ನಾಗಲಿ, ಅರಾಜಕತೆಯನ್ನಾಗಲಿ ನಡಿಸುವ ಅಧಿಕಾರವು ಸಂಪೂರ್ಣವಾಗಿ ಭಾರತೀಯರದು. ಆದ್ದರಿಂದಲೇ ಸುರಾಜ್ಯಕ್ಕಿಂತ ಸ್ವರಾಜ್ಯವೇ ಮೇಲಾದದ್ದೆಂದು ರಾಷ್ಟ್ರಭಕ್ತರು ಬೋಧಿಸುತ್ತಾರಲ್ಲವೆ?

---

೨. ಪರಿಷತ್ ಕಾಯಿದೆ ಕೌನ್ಸಿಲಿನ ಲೋಕಪಕ್ಷದ ಸಭಾಸದರಲ್ಲಿ ವಿಲಕ್ಷಣವಾದ ಪ್ರೇಮವುಂಟಾಗುತ್ತಿದೆ. ಹಿಂದೀ ರಾಜ್ಯಘಟನೆಯ ಮೂಲ ತತ್ವಗಳನ್ನು ಬ್ರಿಟಿಶ ಪಾರ್ಲಿಮೆಂಟು ನಿರ್ದೇಶಿಸಿ, ಸ್ವರಾಜ್ಯ ಘಟನೆಯನ್ನು ಪ್ರಮುಖ ಭರತಪುತ್ರರ ಆಲೋಚನೆಯಿಂದ ತಯಾರಿಸಬೇಕೆಂಬ ಪಂಡಿತ ಮೋತಿಲಾಲ ನೆಹರೂರವರ ಸೂಚನೆಯು ಅರಸರ ವಿರೋಧಕ್ಕೆ ಸಿಕ್ಕು ಹಾಕದೆ ಮಂಜೂರಾಗಿತ್ತಷ್ಟೆ! ಈ ಸೂಚನೆಯು ಕಾಯಿದೆಯಂತೆ ಹಿರಿಯರ ಸಭೆಯಲ್ಲಿ ಹೋಗಿ ಅರಸರ ನಿರೀಕ್ಷಣೆಯಂತೆ ಅಲ್ಲಿ ನಾಮಂಜೂರಾಗಿದೆ. ಸರಕಾರವು ಈಗ ಈ ಠರಾವನ್ನು ಮಂಜೂರು ಮಾಡಲಿಕ್ಕಿಲ್ಲವೆಂದು ಅರಸರ ಧೋರಣದ ಮೇಲಿಂದ ಹೇಳಬಹುದು. ಪಂಡಿತ ಮೋತಿಲಾಲರ ಠರಾವನ್ನು ಸರಕಾರವು ತಿರಸ್ಕರಿಸಿದಲ್ಲಿ ಅವನ್ನು ಎತ್ತಿಹಿಡಿದ ಸಭಾಸದರು ಮುಂದೇನು ಮಾಡಬೇಕು? ತಮ್ಮ ಸ್ವಾಭಿಮಾನವನ್ನು ಹೇಗೆ ಪ್ರದರ್ಶಿಸಬೇಕು? ಎಂಬ ಚಿಂತೆಯಲ್ಲಿ ಸ್ವರಾಜ್ಯ ಪಕ್ಷದ ನಾಯಕರಾದ ಪಂಡಿತ ಮೋತಿಲಾಲ ನೆಹರೂರವರೂ, ಸ್ವತಂತ್ರ ಪಕ್ಷದ ಧುರೀಣರಾದ ಬೆರಿಸ್ಟರ ಜಿನ್ನಾರವರೂ ಮಗ್ನರಾಗಿರುವರು. ರಾಷ್ಟ್ರೀಯ ಪಕ್ಷದ, ಅಂದರೆ, ಸ್ವರಾಜ್ಯ-ಸ್ವತಂತ್ರ ಪಕ್ಷಗಳ ಸಭಾಸದರು ಅರಸರ ನಿರಂಕುಶ ಪ್ರಭುತ್ವದ ನಿಷೇಧವೆಂದು ತಮ್ಮ ಸಭಾಸ್ಥಾನಕ್ಕೆ ರಾಜೀನಾಮೆಯನ್ನೀಯಬೇಕೆಂಬ ವಿಚಾರ ನಡೆದಿದೆ. ಸ್ವರಾಜ್ಯ ಪಕ್ಷದವರು ಈ ಯೋಜನೆಗೆ ಅನುಮತಿಯನ್ನಿತ್ತಿರುವರು. ಸ್ವತಂತ್ರ ಪಕ್ಷದವರಲ್ಲಿ ಕೆಲವರು ಅನುಮತಿಯನ್ನು ಪ್ರದರ್ಶಿಸಿದರೆ, ಉಳಿದವರು ವಿರೋಧ ಮಾಡುತ್ತಾರೆ. ಹೀಗೆ ಸ್ವತಂತ್ರರು ಠರಾವಿಗೆ ಬೆಂಬಲವನ್ನೀಯುವಾಗ ಒಕ್ಕಟ್ಟಾಗಿದ್ದರೂ, ನಿಷೇಧವನ್ನು ಕೃತಿಯಲ್ಲಿ ರೂಪಾಂತರಿಸುವಾಗ, ಪುನಃ ಸ್ವತಂತ್ರ ಒಡ್ಡಿಯಿಂದ ಚದರಿ ಹೋಗಿರುವರು. ಆದರೂ, ಬೆರಿಸ್ಟರ ಜಿನ್ನಾರವರು ಈ ಯೋಜನೆಗೆ ಅನುಕೂಲರಾಗಿರುವರೆಂದು ಜಾಹೀರಾಗಿರುವದರಿಂದ ಸ್ವತಂತ್ರರು ಸ್ವರಾಜ್ಯ ಪಕ್ಷದವರೊಡನೆ ನಿಷೇಧ ಪ್ರದರ್ಶನದಲ್ಲಿಯೂ ಒಕ್ಕಟ್ಟಾಗುವರೆಂದು ಹೇಳಬಹುದು. ನಾಳಿದ್ದು ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ಸಭೆಯು ಪಾಟಣಾದಲ್ಲಿ ಸೇರುವದಿದೆ. ಆ ಸಭೆಯಾದ ಬಳಿಕ, ಈ ವಿಷಯ ನಿರ್ಣಯವಾಗುವದಿದೆ. ಸ್ವರಾಜ್ಯ-ಸ್ವತಂತ್ರರ ಐಕ್ಯಮತವು ಎಷ್ಟರ ಮಟ್ಟಿಗೆ ಕೃತಿಯಲ್ಲಿ ರೂಪಾಂತರಿಸುತ್ತದೆಂದು ನೋಡುವ.

---

೩. ಇಲ್ಲಿಯ ಅಗಬೋಟ ಕಂಪನಿಯ ಏಜಂಟರಾದ ಮಿ। ಆಲ್ಫ್ರೆಡ್ ಫರ್ನಾಂಡಿಸರವರನ್ನು ನಾವು ಮನಃಪೂರ್ವಕ ಅಭಿನಂದಿಸುವ ಸುಯೋಗವು ಪ್ರಾಪ್ತವಾಗಿದೆ. ಅಗಬೋಟ ಮಾಲನ್ನು ಇಳಿಸಿಕೊಂಡು ತಕ್ಷಣ ಅಫೀಸಿಗೆ ತರುವಾಗ ಮಧ್ಯದಲ್ಲಿ ಕಳವು ಮಾಡಿದ ಬಗ್ಗೆ ಹರಕಂತ್ರ ಜಾತಿಯ ಗೋಳಿ ಬಿನ್ ಪುರುಷ ಇವಗೆ ಕಠಿಣ ಸಜೆಯಾದ ಹಕೀಕತು ವಾಚಕರಿಗೆ ವಿದಿತವಿದೆ. ಈ ಖಟ್ಲೆಯಿಂದ ಹರಕಂತ್ರ ಜಾತಿಯಲ್ಲಿ ವಿಶೇಷ ಕಲ್ಲೋಲವಾಯಿತು. ಪಠೇಕರನ್ನು ಬಹಿಷ್ಕರಿಸುವ ತೀರ್ಮಾನವು ಇಲ್ಲಿಯ ಪ್ರತಿಷ್ಠಿತರ ಬೆಂಬಲದಿಂದ ಗೊತ್ತಾಗಿತ್ತೆಂದೂ, ಈ ತೀರ್ಮಾನಕ್ಕನುಸರಿಸಿ, ಈ ಹಂಗಾಮಿನಲ್ಲಿ ಅಗಬೋಟಿಯಿಂದ ಬಂದ ಮಾಲನ್ನು ಇಳಿಸಿಕೊಳ್ಳದೆ ಪಠೇಕರನ್ನೂ, ಅಗಬೋಟಿಯು ಏಜಂಟರನ್ನೂ ಕಣ್ಣಿಗೆ ಕಾಣುವ ದೊಡ್ಡದೊಂದು ಕುಹಕದ ರಚನೆಯಾಗಿತ್ತೆಂದೂ ಏಜಂಟರ ತಿಳುವಳಿಕೆಗೆ ಬಂದು, ಮಿ। ಫರ್ನಾಂಡಿಸರವರು ಆ ಕುಹಕಕ್ಕೆ ಬಲು ಸ್ಥೈರ್ಯದಿಂದ, ದೂರ ದೃಷ್ಟಿಯಿಂದ ಇದಿರಾಗಿ ಬಹಿಷ್ಕಾರದ ಹಬ್ಬಾಕೆಗೆ ಬಲಿಬಿದ್ದ, ದುರ್ಬುದ್ಧಿಗೀಡಾದ ಹರಕಂತ್ರರ ಗೋಣನ್ನು ಮುರಿದು ಬಿಟ್ಟರು. ಬಹಿಷ್ಕಾರದ ಸುಳಿವು ಹತ್ತಿದ ಕೂಡಲೆ, ಅವರು ಪಟ್ಟಿಗೆ ಕಂಪನಿಗೆ ಬರೆದು, ಪಡಾವುಗಳನ್ನೂ, ಅವಕ್ಕೆ ಅವಶ್ಯವಾದ ಖಲಾಸಿಗಳನ್ನೂ ತರಿಸಿಕೊಂಡು ಕೆಲಸ ನಡಿಸಿದರು. ಇದನ್ನು ನೋಡಿದ ಕೂಡಲೆ ಹರಕಂತ್ರರು ದಿಕ್ಕುಗಾದರು! ಏಜಂಟರೊಡನೆ ಪಶ್ಚಾತ್ತಾಪ ಪ್ರದರ್ಶಿಸಿ ಇತ್ತ ಬೋಟಿಯ ಕೆಲಸ ಮಾಡಲುದ್ಯುಕ್ತರಾಗಿರುವರಂತೆ! ಇತ್ತ ಬಂದ ಮಾಲು ಕಳವಿಲ್ಲದೆ ಬಂದು ಮುಟ್ಟುವದು. ಈ ಕಳವಿನಿಂದ ಕಂಪನಿಯು ಬಂದರ್ನ ಬಂದ ಅಪಕೀರ್ತಿಯನ್ನು ಮಿ। ಆಲ್ಫ್ರೆಡ್ ಫರ್ನಾಂಡೀಸರವರು, ಇಷ್ಟು ಬಂದ ಅಲ್ಪಾವಧಿಯಲ್ಲಿಯೇ ಹೋಗ

ಲಾಭಿಸಲು ಪ್ರಯತ್ನಿಸಿದ ಓಗ್ಗೆ ನಾವು ಅವರನ್ನು ಅನ್ನೊವ್ವ, ಮನಃಪೂರ್ವಕ ಅಭಿನಂದಿಸಿ, ವರ್ತಕರು ಅವರಿಗೆ ಈ ಸತ್ಕಾರ್ಯದಲ್ಲಿ ಮನಃಪೂರ್ವಕ ನೆರವಾಗಬೇಕೆಂದು ಬಿನ್ನೈಸುವೆವು. ಹರಕಂತ್ರರಾದರೂ, ಗೋಳಿ ಬಿನ್ ಪುಕ್ಕ ಈತನ ಅಪರಾಧವನ್ನು ಲಕ್ಷಿಸಿ ಆತನಿಗೊದಗಿದ ಶಿಕ್ಷೆಯು ಪಾಪಕ್ಕೆ ಸಿಕ್ಕಿದ ಪ್ರಾಯಶ್ಚಿತ್ತವೆಂದು ನೆನೆಸಿ, ಆತನಿಗೆ ಪ್ರಾಪ್ತವಾದ ಶಿಕ್ಷೆಯನ್ನು ವರ್ತಕರ ಮೇಲೆ ಹೊರಿಸದೆ, ಇಂಥ ಕೃತ್ಯಗಳಿಗೀಡಾಗದಂತೆ ತಮ್ಮ ಜಾತಿಯವರಿಗೆ ಬೋಧಿಸಿ, ಪ್ರಾಮಾಣಿಕತನದಿಂದ ನಡೆಯಬೇಕಲ್ಲದೇ, ಯಾಕೆಂದರೆ, ಕಳುವಿನಿಂದ ಬಂದ ದಡ ಹೆಸರು ಕೆಟ್ಟುಹೋದಲ್ಲಿ ಸರಕಾರಿನ ಅಪ್ಪಣೆ— ಕಷ್ಟ ಕಾಗ್ಗಿ ಕೂಲಿಕಷ್ಟ ಮಾಡಿ ಜೀವಿಸುವ ನಿಮ್ಮಂಥ ಕೂಲಿಕಾರರಿಗೆ ಹಾಲು ಕೊಡುವ ಆಕಳ ಕೆಚ್ಚಲು ಕೊಯ್ದಂತಾಗುವದಲ್ಲವೇ? ಇದಕ್ಕೂ ಹೆಚ್ಚಿಗೆ ಇನ್ನೇನು ಹೇಳಬೇಕು?

ಸ್ಥಾನಿಕ ವೃತ್ತಾಂತ.

ಕುಮಟಾ— ಮೇಘರಾಜನ ಕೃಪೆ ಸುಳುಸಿಲ್ಲ; ಬೆಳೆಯ ಕಳವು ಮುರಿಯಿತು. ಈಗ ತೆನೆ ಬಿಡುವ ಸಮಯ. ಒಕ್ಕಲಿಗರು ಮೇಘರಾಜನ ಹಾದಿಯನ್ನು ಪರೀಕ್ಷಿಸಿ ಕಂಗೆಟ್ಟರು ಮೊದಲು ನೆರೆ, ಈಗ ಬಿಸಿಲು. ಅಂತು ಪೀಕಲಾಟ.

ಬೆಕ್ಕಾಳ್ಳಿಯಲ್ಲಿ ಕಳೆದ ಶುಕ್ರವಾರ ಸಾಯಂಕಾಲ ೫ ಘಂಟೆ ಸುಮಾರಿಗೆ ಒಂದು ಹುಲಿಯು ಊರಲ್ಲಿ ಬಂದು ಒಂದು ಆಕಳನ್ನು ಮುರಕೊಂಡು ನಡೆಯಿತು. ಏನು ಕಾಲ!

ಇಲ್ಲಿಯ ಶ್ರೀ ಶಾಂತೇರಿ ಕಾಮಾಕ್ಷಿ, ಶ್ರೀ ಕಾಮೂರ ಕಾಮಾಕ್ಷಿ, ಶ್ರೀ ವೆಂಕಟರಮಣ ದೇವಾಲಯಗಳಲ್ಲಿ ಶ್ರೀ ಕುಡಾನವಮಿಯ ಪ್ರೀತ್ಯರ್ಥ ಘಟಸ್ಥಾಪನೆಯಾಗಿ, ಪುರಿಕೀರ್ತನ, ಭಜನೆ, ಇತ್ಯಾದಿಗಳು ನಡೆದಿರುತ್ತವೆ. ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಬೆಂಗಳೂರ ಅತ್ತ ಕಡೆಯ ಶ್ರೀ ನಂಜುಂಡ ಗುಪ್ತರೆಂಬ ಹರಿದಾಸರು ಕೀರ್ತನ ಮಾಡುತ್ತಿರುವರು. ಇವರ ಕೀರ್ತನದ ಶೈಲಿಯು ಕಥಾಪ್ರಚುರವಾಗಿದ್ದ, ಕೀರ್ತನೆಯೊಡನೆ ನರ್ತನವನ್ನೂ ಮಾಡುತ್ತಾರೆ. ಕೀರ್ತನ ಕಾಲವಲ್ಲಿ ನರ್ತನ ಸೇವೆ ಮಾಡುವ ಹರಿದಾಸರು ಇಲ್ಲಿಗೆ ಬಂದುದು ಇದೇ ಮೊದಲು ಎಂದು ಬಲ್ಲವರು ಹೇಳುತ್ತಾರೆ.

ಕಾಜಿ ಸೈದ ಇಸ್ಮಾಯಿಲ ಕಾಜಿ ಸೈದ ಅಲ್ಲಿ, ಮಹಮ್ಮದ ಇಸ್ಮಾಯಿಲ ಯಾನೆ ಬಡೇಸಾಹೇಬ ಮ| ಹಜರತ ಸಾಹೇಬ ಹೀಗೆ ಇಬ್ಬರು ನಮ್ಮ ತಾಲೂಕಾ ಲೋಕಲ್ ಬೋರ್ಡಿಗೆ ಉಮೇದವಾರರಾಗಿಯೂ, ಮುಶ್ರಿ ಮಿ| ಮೊಹಿದ್ದಿನ ಸಾಹೇಬ ಬಿನ್ ಹಸನ ಸಾಹೇಬ ಕಾಶಿಮುಜಿ, ಭಟಕಳ ಹಾಗು ಮಿ| ಅಬಿದಿನ ಮ| ಇಬ್ರಾಹಿಮ ಸಾಹೇಬ, ಕುಮಟಾ ಇವರೀರ್ವರು ಜಿಲ್ಹಾ ಲೋಕಲ್ ಬೋರ್ಡಿಗೂ ಮುಸಲ್ಮಾನರ ಕಡೆಯಿಂದ ಉಮೇದವಾರರಾಗಿ ನಿಂತಿರುವರು.

ಹೊಸ ಮ್ಯುನಿಸಿಪಾಲಿಟಿಯ ಪ್ರಥಮ ಸಭೆಯು ತಾ. ೨-೧೦-೩೫ ನೇಗೆ ಸೇರಿ ಅಧ್ಯಕ್ಷರನ್ನಾರಿಸಬೇಕೆಂದು ಜಿಲ್ಹಾಧಿಪರು ನೋಟೀಸು ಹೊರಡಿಸಿರುವರು.

"ಸಮಾಜಹಿತೇಚ್ಛು"ಗಳೊಬ್ಬರು ಬರೆಯುವದೇನಂದರೆ:— ನಮ್ಮ ನಾಮಧಾರಿ ಸಮಾಜದ ಹಿತಚಿಂತಕರಲ್ಲೊಬ್ಬರಾದ ಸಣ್ಣಯ್ಯ ನಾಯ್ಕರು ಕಳೆದ ತಾ ೩ ನೇ ಗುರುವಾರಕ್ಕೆ ನಿಧನ ಹೊಂದಿದರು. ಇವರು ಹಾಸ್ಯಕಲೆ, ಯಕ್ಷಗಾನ, ನಾಟಕ ಇತ್ಯಾದಿಗಳಲ್ಲಿ ಪ್ರವೀಣರಿದ್ದರು. ಅನೇಕರು ಶಿಫಾರಸು ಪತ್ರಗಳನ್ನು ಕೊಟ್ಟಿದ್ದರು. ಅವರ ಆತ್ಮಕ್ಕೆ ಸದ್ಗತಿಯನ್ನೀಯಲೆಂದು ಪರಮಾತ್ಮನೊಡನೆ ಪ್ರಾರ್ಥನೆ.

ಅಂಕೋಲಾ— ಒಬ್ಬರು ತಿಳಿಸುವದೇನಂದರೆ.— ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನವು ಬಹಳ ಪುರಾತನದ್ದು. ಶ್ರೀ ದೇವರಿಗೆ ಸೀಮೆ ದೇವರೆಂದು ಭಕ್ತಿಯಿಂದ ಜನರು ಕರೆಯುತ್ತಾರೆ. ಶ್ರಾವಣ ಮಾಸದಲ್ಲಿ ಪ್ರತಿ ಶನಿವಾರಕ್ಕೆ ಶೂದ್ರಾದಿ ಭಕ್ತ ಜನರು ತೀರ್ಥ-ಪ್ರಸಾದಗಳನ್ನೊಯ್ದು ಊರತು ಅನ್ನಗ್ರಹಣ ಮಾಡುವದಿಲ್ಲ. ಪ್ರತಿ ಶನಿವಾರಕ್ಕೆ ದೇವಾಲಯದಲ್ಲಿ ಶ್ರೀ ದೇವರ ದರ್ಶನ ಪಡೆಯುವ ಭಕ್ತ ಜನರ ಗಲಾಟೆಯು ವಿಶೇಷ. ಶ್ರೀ ದೇವರಿಗೆ ಅರ್ಪಿಸಿದ ತೆಂಗಿನ ಫಲಗಳನ್ನು ಒಡೆಯ ಕೊಡತಲೀಕ್ರ ಅಯ್ಯಗಳೆಂಬ ಪ್ರತ್ಯೇಕ ಪೂಜಾರಿಗಳು ನೇಮಕರಾಗಿರುವರು. ಮೊದಲು ತೆಂಗಿನಕಾಯಿ ಒಡೆಯ ಬಗ್ಗೆ ಭಕ್ತ ಜನರು ಸಂತೋಷದಿಂದ ಕೊಟ್ಟ ದಕ್ಷಿಣೆಯನ್ನು ಇವರು ಸ್ವೀಕರಿಸುತ್ತಿದ್ದರು; ಈಗ ಇವರೊಂದು ನಿಯಮ ಮಾಡಿರುವರು. ತೆಂಗಿನಕಾಯಿ ಒಡೆದ ಕೆಲಸಕ್ಕಾಗಿ ಮುಕ್ಕಾಲು ಆಣೆ ದಕ್ಷಿಣೆ ಕೊಡಬೇಕು ಇಲ್ಲದಿದ್ದ ಬಡಬಗ್ಗರು ಸಂಕಟಕ್ಕೊಳಗಾಗಿರುವರು. ಹೀಗೆ ನಡೆದರೆ, ಶ್ರೀ ದೇವರ ಪ್ರಸಾದ ಪಡೆಯುವ ಬಡ ಭಕ್ತರ ಸ್ತೋಮವು ಕುಗ್ಗಿ ಹಾನಿಯಾಗುವದು; ಅಯ್ಯಗಳು ಜಾಗ್ರತೆ ಪಡೆಯಬೇಕು.

ಕಾರವಾರ— ಕಳೆದ ತಾ. ೧೭ ನೇಗೆ ಮಿತ್ರ ಸಮಾಜ ಸಭಾ ಮಂದಿರದಲ್ಲಿ ಡಾ| ರಾಮಕೃಷ್ಣ ಗೋಪಾಳ ಭಾಂಡಾರಕರರ ನಿಧನದ ಪ್ರೀತ್ಯರ್ಥ ಮಿ| ಕಾಟನೀಸರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ವಕೀಲ ಮಿ| ಕ್ಯಾನಭಾಗರವರು ಡಾ| ಭಾಂಡಾರಕರರ ಜೀವನ ಚರಿತ್ರೆಯನ್ನೂ, ವಿಚಾರಗಳನ್ನೂ ಅರುಹಿದರು; "ವಿದ್ವಾನ್ ಸರ್ವತ್ರ ಪೂಜ್ಯತೆ" ಈ ನಾಣ್ಣುಡಿಯು ಅವರಿಂದ ಸಾರ್ಥಕವಾಗಿದ್ದಿತು. ಸಮಾಜಸೇವಕ, ಪ್ರಾಚ್ಯವಿದ್ಯಾಸಂಶೋಧಕ, ಸ್ತ್ರೀಯರ ಉದ್ಧಾರಕ ಹೀಗೆ ಪರಿಶೋಧಕರಾಗಿದ್ದರು. ಮಾಡಿದ ಸೇವೆಯು ವಿಶೇಷವೆಂದರು. ಇವರಿಗೆ ನಿಧನದ ಸಮಯದಲ್ಲಿ ೭ ಮಂದಿ ಮೊಮ್ಮಗಳಂದಿರು ಇರುವರು. ೫ ಮೊಮ್ಮಗಳಂದಿರು ಮುಂಬಯಿ ಯುನಿವ್ಹರ್ಸಿಟಿಯ ಬಿ. ಎ., ಪರೀಕ್ಷೆಯಲ್ಲಿ ತೇರ್ಗಡೆಯಾದವರು; ಇಬ್ಬರು ಎಮ್. ಎ., ಪರೀಕ್ಷೆಯಲ್ಲಿ ತೇರ್ಗಡೆಯಾದವರು. ವಿಧವಾ ವಿವಾಹದ ತತ್ವವು ಇವರಿಗೆ ಮಾನ್ಯವಿತ್ತು. ದುರ್ದೈವದಿಂದ ಮಗಳೊಬ್ಬಳು ವಿಧವೆಯಾಗಲು, ಬೇಗನೆ ಬ್ಬರೊಡನೆ ಅವಳ ಮದುವೆ ಮಾಡಿದರು. ರಾಜಕಾರಣದಲ್ಲಿ ಇವರು ಅಲಿಪ್ತರಿದ್ದರು. ಮಿ| ಕಾಟನೀಸರವರು ಸಮಯೋಚಿತ ಸಮಾರೋಪ ಮಾಡಿದರು. ಕಾರವಾರ ಬೋಯ್ ಸ್ಕೌಟದ ಹುಡುಗರು ಸಭೆಯಲ್ಲಿ ವ್ಯವಸ್ಥೆಯನ್ನಿಟ್ಟು ಚಾಲಕರಿಗೆ ನೆರವಾದರು.

ಇಲ್ಲಿಯ ಸಹಕಾರಿ ಸಂಘದವರು ಭಷ್ಟ್ರ ಕ್ಷ್ಮಾಕ ಕೋರ್ಟಿನಲ್ಲಿ ಮೆಂಬರರಿಂದ ಸಾಲ ವಸೂಲ ಮಾಡಿಕೊಳ್ಳಲು ಮಾಡಿದ ದಾವೆಗಳೆಲ್ಲಾ ಕೋರ್ಟಿಗೆ ವಿಚಾರಣೆಯ ಅಧಿಕಾರವಿಲ್ಲೆಂದು ತಿರುಗಿಸಲ್ಪಟ್ಟಿವೆ. ಇದಕ್ಕೆ ಹೊಣೆಗಾರರ್ಯಾರು?

ದುರುಸ್ತಿ— ಇದೇ ಪತ್ರಿಕೆಯ ೧೧ ನೇ ಪುಟದ ೩ ನೇ ಕಾಲಮಿನಲ್ಲಿ ಪ್ರಕಟಿಸಿರುವ ಮುಖಕಾರಿಯ ೧೭-೧೮ ನೇ ಪಂಗ್ತಿಯ. ದ್ವಿಕಾಚಿತಾರ್ಥಾ ಎಂಬ ಶಬ್ದದ ಬದಲು ದ್ವಿಕಚ್ಛತಾರ್ಥಾ ಎಂತಲೂ, ೨೯ ನೇ ಪಂಗ್ತಿಯಲ್ಲಿ ರೂಪನಿಷ್ಪತ್ತಿ ಶಬ್ದದ ಬದಲು ರೂಪಾನಿಷ್ಪತ್ತಿ ಎಂತಲೂ, ೩೩ ನೇ ಪಂಗ್ತಿಯ ತಪಮಾನಭೂತೆ ಶಬ್ದದ ಬದಲು ತಪಮಾನಭೂತೆ ಎಂತಲೂ, ಹಾಗು ೩ ನೇ ಕಾಲಮಿನ ೧೬ ನೇ ಪಂಗ್ತಿಯ ಮನ್ದೀಲತ್ವಮ್ ಶಬ್ದದ ಬದಲು ಮನ್ದಿತ್ವಂ ಎಂತಲೂ ಓದಬೇಕು.

ವೃತ್ತಸಾರ.

—ಅಮೇರಿಕೆಯಲ್ಲಿ ಒಂದು ಜಾತಿಯ ಗಿಡಕ್ಕೆ ನೂರು ವರ್ಷಗಳಿಗೊಮ್ಮೆ ನಯನಮನೋಹರವಾದ, ಸುಗಂಧಭರಿತ ಹೂ ಬಿಡುತ್ತದಂತೆ! ನೂರು ವರ್ಷಕ್ಕೊಮ್ಮೆ ಹೂ ಬಿಟ್ಟದ್ದನ್ನು ನೋಡಿದ ಪುಣ್ಯಾತ್ಮನ್ಯಾರಿದ್ದ!

ರಶಿಯಾ ದೇಶದಲ್ಲಿ ಸೈನ್ಯ ಕೊಂಡು ಬಾಂಬು ಸಾಗಿಸುತ್ತಿರುವಾಗ ಮಧ್ಯದಲ್ಲಿ ಸ್ಫೋಟವಾಗಿ ಅನೇಕರು ನಿಧನ ಹೊಂದಿದರು.

— ಮಾನವ ದೇಹದಲ್ಲಿರುವ ಜೀವನಕಳೆಯು 'ಎನರ್ಜಿ' ಎಂಬ ರಸಾಯನ ದ್ರವ್ಯವನ್ನು ಇತರ ಉಪಾಯಗಳಿಂದ ಕಾಲದಲ್ಲಿ ಕಾಪಾಡಿಕೊಂಡರೆ ಮಾನವನು ೧೦೦೦ ವರ್ಷಗಳವರೆಗೆ ಬದುಕಬಹುದಂತೆ! ಜರ್ಮನ ಶಾಸ್ತ್ರಜ್ಞರ ಶೋಧ!

ಮದ್ರಾಸ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಾದ ಡಾ| ಸ್ವಾಮಿಕನ್ನು ಪಿಳ್ಳೆ ಯವರು ಕಳೆದ ತಾ. ೧೦ ನೇಗೆ ಕ್ರೈಸ್ತ ಮತಸ್ಥರಾದರು. ಅಧ್ಯಕ್ಷರು ಸಂಸ್ಕೃತ—ತಮಿಳ—ಲೆಟಿನ್ ಭಾಷೆಗಳಲ್ಲಿ ಪಂಡಿತರು. ಕ್ರಿಸ್ತಿ ಧರ್ಮದವರಿದ್ದರೂ ಡಾ| ಸ್ವಾಮಿಕನ್ನು ಪಿಳ್ಳೆಯವರು ಹಿಂದೂ ಆಚಾರಗಳನ್ನೇ ಪಾಲಿಸುತ್ತಿದ್ದರು.

— ಮಧ್ಯಪ್ರಾಂತದೊಳಗಿನ ಕಾರಂಜಾ ಗ್ರಾಮದ ಕಸಾಯಿತಿಯ ದೇವಾಲಯದ ದುರ್ಗಾದೇವಿಯ ಕೊರಳಿಗೆ ಕೆಲವು ಮಹಮ್ಮದೀಯ ಅಧಮರು ಎಲುಬುಗಳನ್ನು ಹಾಕಿದರಂತೆ! ಮಹಮ್ಮದೀಯ ಬಾಂಧವರೇ, ಹಿಂದು-ಮುಸ್ಲಿಂ ಐಕ್ಯಕ್ಕೆ ತಗಲುವ ಆಘಾತವನ್ನು ಲಕ್ಷಿಸಿರಿ.

— ಮುಂಬಯಿಯ ಸೆಕೆನಲ ಬೇಂಕಿನವರು ಜಬಲಪೂರ ಇಂಪೀರಿಯಲ್ ಬೇಂಕಿಗೆ ೩ ಪೇಟಿ ಚಿನ್ನ ಕಳುಹಿದ್ದು, ಅದು ಊಗಿಬಂಡಿಯಲ್ಲಿ ಕಳವಾಗಿರುವದೆಂದು ಸುದ್ದಿ.

— ಕೋರಿಯಾ ದೇಶದ ದಕ್ಷಿಣ ಬದಿಯ ಪಂಜೆಯ ಮೇಲೆ ಘೋರ ಬಿರುಗಾಳಿ ಎದ್ದು ಹಲವು ದಗಬೋಟುಗಳು ಮುಳುಗಿದವು; ೨ ಊಗಿಬಂಡಿಗಳು ಜಾರಿ ಬಿದ್ದವು; ೨೫೦ ಮನೆಗಳು ನೆಲಸಮವಾದವು. ೫೦ ಮನೆಗಳು ಹಾರಿ ಹೋದವು.

—೧೯೩೫ನೇ ಇಸವಿಯಲ್ಲಿ ಮೆಚ್ಚುಗೆಯ ಆಟಿಸ್ಟ ಹಡಗು ಅಟ್ಲಾಂಟಿಕ ಮಹಾಸಾಗರದಲ್ಲಿ ೧೦ ಲಕ್ಷ ರೂಪಾಯಿ ಚಿನ್ನ ಸಹಿತ ಮುಳುಗಿತ್ತು. ಅದನ್ನೀಗ ಹೊರ ತೆಗೆಯುವ ಕೆಲಸವನ್ನು ಫ್ರೆಂಚ ಕಂಪನಿಯವರು ವಹಿಸಿಕೊಂಡಿರುವರು.

...ಕಾ ಖಂಡದಲ್ಲಿ ಪೋರ್ಚುಗೀಜ ಪ್ರದೇಶದಲ್ಲಿ ಕ್ರಿಂ ...ದವರೂ ರೀಫರೂ ಘನಘೋರ ಸಂಗ್ರಾಮ ...ರುವರು. ಈಗಲೇ ಅರಬ್ಬ ಯುದ್ಧಮಾಡುವ ...ವಿದ್ದವರಿಂದ ಫ್ರೆಂಚಸೈನ್ಯರು ಗುಹೆಯಿಂದ ...ತಯಾರಿಸುವಡಿ ರಸ್ತೆಗೆ ಇಳಿಯಾಗುತ್ತಿರುವರು.

...ರ ಅಂಜನಿಯರರಾಗಿದ್ದ ಶ್ರೀ॥ ಗಜಾನನ ಸದಾಶಿವ ...ವರು ತಮ್ಮ ಹುಟ್ಟುಗುರುತ ದಾಗ, ಶ್ರೀ॥ ಅಪ್ಪಂ ...ಗು ಶ್ರೀ॥ ಹಂಪೇಕರರೊಡನೆ ವಿಶ್ರಾಂತಿಸನ್ನು ಮೋ... ...ಕಾಣಿಸಿ ಉತ್ಸಾಹದಿಂದ ವಿಹರಿಸಿ ಹಿಂತಿ ...ವಾಗ ಧಕ್ಕನೆ ಬಿರುಗಾಳಿ ಬಂದು ದೋಣಿಯ ...ಸಿ ಹಾಕಿ ಬಿಟ್ಟಿತು. ಎಲ್ಲರೂ ಜಲಶಯನಾದಿರು ...ದಿದರು ವಿಧ್ವಂಸನೆ ಅದೆಂಥ ಪಿಸ್ಸ ಆಟ!

...ಮಹಮ್ಮದೀಯರ ಧರ್ಮಗ್ರಂಥವಾದ ಕುರಾನದಲ್ಲಿ ...ಬಡ್ಡಿ ತೆಗೆದುಕೊಳ್ಳಬಾರದೆಂದು ಆಜ್ಞೆಯಿದೆ. ಅದ ...ಸರಕಾರ ಸೇವಿಂಗ್ಸ ಬ್ಯಾಂಕಿನಲ್ಲಿಟ್ಟ ಹಣಕ್ಕೆ ...ಮ್ಮದೀಯರು ಬಡ್ಡಿಯನ್ನು ತೆಗೆಯದ, ಅದು ಅದ ...ಕ್ಕೆ ಸರಕಾರ ಖಾತೆಯಲ್ಲಿ ಜಮಾ ಆಗುವದು ...ಜಮೆ ಆಗುವ ರಕಮನ್ನು ಮಹಮ್ಮದೀಯರಿಗೆ ...ಣಕ್ಕೆ ಉಪಯೋಗಿಸಬೇಕೆಂದು ಸರಕಾರವು ...ದೆ. ಸಂತೋಷದ ಸುದ್ದಿ.

...ಂಗಳೂರಿನಲ್ಲಿ ನೀರಿನ ಅಭಾವ ಪಟ್ಟಣದೊಳಗ ...ವನಗಳು ಬಾಡುತ್ತಿವೆ. ಮಳೆ ಮುಗಿಯುವಷ್ಟ ...ನೀರಿನ ಗೋಳಾಟವಾಗಹತ್ತಿದರೆ, ಮುಂದಿನ ಗತಿ ...?

...॥ ಮಾ॥ ಗೋಪಾಳ ಕೃಷ್ಣ ಗೋಖಲೆಯವರ ...ಕ್ಕಾಗಿ ೧॥ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ ...ಮಂದಿರವನ್ನೊಂದು ಸ್ಥಾಪಿಸಬೇಕಾಗಿಯೂ ಈ ...ದಲ್ಲಿ ಕೈ॥ ಮಾ॥ ಗಳ ಸಂಸ್ಥಾಯು ಕಲಿಸಬೇ... ...ದೂ ನಿಶ್ಚಯವಾಗಿಯದೆ. ಸಭಾಮಂದಿರದ ಕೆಲ ...ಸುವ ಸಮಾರಂಭವು ಮುಂಬಯಿಯ ಪ್ರಸಿ... ...ಟ ಲಲುಭಾ ಸಾಮಳದಾಸರವರ ನೇತೃತ್ವದಲ್ಲಿ ...ಂತು.

...ಂದಾಪುರದಲ್ಲಿ ಬಾಲವಿಧವಾ ಕುಟುಂಬನಿವಾಸವಾ ...ವೊಂದು ಸ್ಥಾಪಿತವಾಗಿರುವದು. ವಿಧವೆಯರು ವಿಧ ...ಗೆ ಸನಾಥ ಮಾಡಿದ ಪುಣ್ಯ ಪಡೆಯಬಹುದು.

...ಖಿಲ ಭಾರತೀಯ ದೇಶಬಂಧು ಸ್ಮಾರಕ ನಿಧಿಗೆ ...ಸಾವಿರ ರೂಪಾಯಿಗಳನ್ನು ಭಾಟಿಯಾ ಗೃಹಸ್ಥರು ...ಸಿದ್ದಾರೆ. ಔದಾರ್ಯವಂತರು ತಮ್ಮ ಹೆಸರು ...ನ ದಾನ ಮಾಡಿರುವರು.

...ಪ್ರಾಂತದಲ್ಲಿ ಝಘಲೋ ಎಂಬ ನಿಮ್ಮಣ... ಈತನಿ ...ಂ ವರುಷ ವಯ. ಅವನಿಗೆ ೩೭ ಜನ ಹೆಂಡಂ ...ಝಘಲೋನು ನಿರ್ಮಾಣನಿದು. ಈಗಲೂ ಸ... ...ನೆ. ಈತನಿಗೆ ಇಟಲಿ-ಅಮೇರಿಕೆಯವರು ...ಗೆ ಬರಲು ನಿಮಂತ್ರಣಕೊಡಿರುವರು.

...ಕೋಲಾ ತಾಲೂಕ ಲೋಕಲ್ ಬೋರ್ಡ ಇಲೆಕ್ಷನ್.

ಶ್ರೀ॥ ವಿಶ್ವನಾಥ ಪ್ರಭುರ ಮುಲಾಖತು.

...ಮ್ಮ ಪತ್ರದ ಖಾಸ ಬಾತಮೀದಾರರು ಶ್ರೀ॥ ವಿಶ್ವನಾ ...ಭುರ ಮುಲಾಖತನ್ನು ತಕ್ಕೊಂಡು ಅಲ್ಲಿಯ ಲೋ॥ ...ಇಲೆಕ್ಷನದವರನಾಗಿ ಬರೆದ ವೃತ್ತ'ದೊಳಗಿನ ಖಾಸ ...ಪ್ರ ಮತ್ತು ಇತರ ಪತ್ರವ್ಯವಹಾರದ ವಿಷಯವಾಗಿ ...ದ ಸಂಗ್ರಹಿಸಿದ ಮಾಹಿತಿಯನ್ನು ಇತರರಿಗೆ ಅಲ್ಪ ...ಸಂಕ್ಷೇಪಿಸಿ ಪ್ರಕಟಿಸಿರುವೆವು. ಇದೇ ವಿಷಯ ...ಮರಾವ ಕೀಣಿಯವರೂ ಒಂದು ಪತ್ರ ಬರೆದು ...ಸಿರುವರು. ಸ್ಥಳಸಂಕೋಚದ ಮೂಲಕ ಅ... ...ಕಟಿಸಲಾಗಲಿಲ್ಲ. ಸಂ. ಕಾ. ವೃ.]

...— ತಮ್ಮ ಪತ್ರದೊಳಗೆ ನಿಮ್ಮ ಅಂಕೋಲಾ ಲೋಕಲ ಬೋರ್ಡ ಚುನಾವಣೆಯನ್ನು ಲಕ್ಷಿಸಿ ಪ್ರಸಿದ್ಧವಾದ ವೃತ್ತಾಂತವನ್ನೂ, ಪತ್ರವ್ಯವಹಾರವನ್ನೂ ನೀವು ಲಕ್ಷಪೂರ್ವಕ ಓದಿದ್ದೀರೋ? ನಿಮ್ಮಲ್ಲಿಯ ಕಾರಸ್ಥಾನಗಳ ಅಭಿಪ್ರಾಯವೇನು?

ಉತ್ತರ—ಕಾನಡಾ 'ವೃತ್ತ' ದ ಸಂಪಾದಕತ್ವವನ್ನು ಎರಡು ವರ್ಷಗಳ ಹಿಂದೆನಾನು ಬಿಟ್ಟಂದಿನಿಂದ ಅದರೊಳಗಿನ ಸಂಪಾದಕೀಯ ಲೇಖಗಳನ್ನು ಬರೇ ಕಾಲಕಳೆಯಲಿಕ್ಕಾಗಿ ಒಮ್ಮೊಮ್ಮೆ ಓದುತ್ತೇನೆ. ಆದರ ವೃತ್ತಾಂತವನ್ನು ನಾನು ಬಹಳ ಲಕ್ಷಗೊಟ್ಟು ಪ್ರಸ್ತುತ ವಿಷಯದ ವೃತ್ತಾಂತವನ್ನು ಅವಲೋಕಿಸಿದ್ದೇನೆ. ಈ ಲೇಖಗಳೂ, ಪತ್ರಗಳೂ ಪ್ರತ್ಯಕ್ಷ ಚುನಾವಣೆಯು ಹೀಗ್ಗೆ ನಡೆದ ಹೋರಾಟದ ಲಕ್ಷಣಗಳು. ಕಾರಸ್ಥಾನಗಳಾದರೂ ಅದರ ಒಂದು ಅಂಗವೇ. ಇವೆಲ್ಲವುಗಳ ಮಹತ್ವವು ಚುನಾವಣೆಯು ಮುಗಿದ ನಂತರ ತನ್ನಿಂದ ತಾನೇ ಲೋಪವಾಗುವದು. ಸದ್ಯಕ್ಕೆ ಮಾತ್ರ ನಿಮ್ಮ ಕರ್ತವ್ಯವು ಇಷ್ಟೇ: ಅರಸಕ್ಕಿದ್ದು ಜನತೆಯ ಹಿತಕ್ಕೆ ಮತ್ತು ಲೋಕಕಲ್ಯಾಣ ಕಾರ್ಯಕ್ಕೆ ಧಕ್ಕೆ ಬೀಳದಂತೆ, ಚಿತ್ತಸ್ಥಿರತೆಯನ್ನು, ವಿಶೇಷತಃ ಸಾರ್ವಜನಿಕ ಜೀವನದ ನೀತಿಮತ್ತೆಯನ್ನು ನಿಷ್ಠೆಯಿಂದ ಕಾಪಾಡಿ ಈ ಚಳವಳವನ್ನು ಮುಂದರಿಸಬೇಕು. ಈ ಊರಲ್ಲಿ, ಮರಾಠ್ಯಾದಿಯವರು ನಾನಿದಾರಿ ಹೇಳುವ ತತ್ವದಂತೆ ಪ್ರತಿಪಕ್ಷಗಳ ಮೇಲೆ ದುಷ್ಟ ಹೇತುಗಳನ್ನು ಆರೋಪಿಸಿದ ಸಾಧ್ಯಕ್ಕಿಂತ ಸಾಧನವನ್ನು ಬಹಿರಂಗವಾಗಿ ಆಡಬೇಕೆಂಬ ಸಂಗತಿಯು ಒಂದೆರಡು ಪ್ರಮುಖ ವ್ಯಕ್ತಿಗಳಿಗೆ ಪಸಂತ ವಿಲ್ಲದದ್ದು ದ ದೈವವು. ಈಗಲ್ಲದೆ ಇನ್ನೊಂದು ಚುನಾವಣೆಯಲ್ಲಾದರೂ ಅಂಥ ಕಾರ್ಯಸಾಧು ನೀತಿಪ್ರವೃತ್ತಿಗೆ ಅಂತು ದೊರೆಯಲಿಕ್ಕಿಲ್ಲೆಂತ ನನ್ನ ಅಭಿಮತ.

ಪ್ರ. ನೀವು ಹೇಳಿದ್ದು ನಿಜವು. ಚುನಾವಣೆಯಂಥ ಚಳವಳದಲ್ಲಿ ನಿಮ್ಮಂಥ ಲೋಕಪಕ್ಷಪಾತಿ ಮುಂದಾಳುಗಳ ಮೇಲೆ ಕೆಸರು ಹಾರಿಸುವವರ ಉದ್ದೇಶವು ನನಗೆ ತಿಳಿಯುತ್ತದೆ. ಆದರೆ ನಿಮ್ಮ ಮಿತ್ರರೊಳಗಿನ ನಾಡಕರ್ಣಿಯವರೂ, ಶ್ರೀ॥ ಪಿಕಳೆಯವರೂ ಬರೆದ ವಿಸ್ತೃತ ಪತ್ರದೊಳಗಿನ ಟೀಕೆ ಯೆಬಗ್ಗೆ ನಿಮ್ಮ ಅಂಬೋಣವೇನು?

ಉ. ನಾನು ಮೇಲೆ ಹೇಳಿದಂತೆ ಈ ಪತ್ರವಾದವೂ ಒಂದು ದೊಡ್ಡ ಕಾರಸ್ಥಾನವದೆ. ತಮ್ಮ ಪಕ್ಷದ ವಿಜಯವನ್ನು ಯಾವದೇ ಸಾಧನದಿಂದ ಸಾಧಿಸಲಿಚ್ಛಿಸುವ ಒಂದು ಪಕ್ಷದ ಉದ್ದೇಶಕ್ಕೆ ನನ್ನ ಮಿತ್ರರು ಬಲಿಬಿದ್ದಿದ್ದಾರೆಂದು ಈ ಪತ್ರವನ್ನು ಓದಿ ನನಗೆ ಸ್ಪಷ್ಟವಾಗಿ ಕಾಣುತ್ತದೆ. ನಾಡಕರ್ಣಿ-ಪಿಕಳೆರವರ ಪತ್ರದೊಳಗೆ ಅಷ್ಟು ತೀರ ವಿಪರ್ಯಸ್ತ ವಿಧಾನಗಳೂ ನಿರಾಧಾರ ಆರೋಪಗಳೂ ತುಂಬಿದ್ದು, ಅಲ್ಲಿಯ ರಾಷ್ಟ್ರೀಯ ಕಾರ್ಯದಲ್ಲಿ ಅವಿಶ್ರಾಂತ ದುಡಿಯುವ ನನ್ನ ಸಹಕಾರಿ ಬಾಂಧವರಾದ ಶ್ರೀ॥ ಶಾಮರಾವ ಕೀಣಿಯವರ ಮೇಲೂ ಹೊಂದಿದ್ದುವಲ್ಲ. ಅವುಗಳನ್ನು ತಮ್ಮ ಮಿತ್ರರ "ಸ್ಪಷ್ಟೀಕರಣ"ದೊಳಗಿಂದ ಪೃಥಕ್ಕರಣ ಮಾಡುವದೆಂದರೆ, ಅದೊಂದು ನಿರುದ್ಯೋಗಿಗಳಿಗೆ ಉದ್ಯೋಗವಾಗುವದು. ಪ್ರಾರಂಭದಿಂದ ಕಡೆಯತನಕ ಈ ಪತ್ರವನ್ನು ಓದಿದರೆ ಅದರ ಅಂತ್ಯದ ವಿನಂತಿಯನ್ನು ಲಕ್ಷಿಸಿದರೆ ಲೇಖಕರ ಈ ಲೇಖನದ ಉದ್ದೇಶವು ಸ್ಪಷ್ಟವಾಗುತ್ತದೆ. ಅವರಿಗೆ ಶ್ರೀ॥ ಶಾಮರಾಯರೂ ಶ್ರೀ॥ ವಿಶ್ವನಾಥ ಪ್ರಭುರೂ ಮುಂದರಿಯಗುವದು ಬೇಕು. ಹ್ಯಾಗೂ ಮಾಡಿ ರಾಷ್ಟ್ರೀಯರ ಮಾನ್ಯತೆಯನ್ನು ಸಹ ಹಿಗಳೆದು ಲೋಕಲ ಬೋರ್ಡ ಸಂಸ್ಥೆಗಳನ್ನು ಕೈವಶಮಾಡಿಕೊಳ್ಳುವ ಕಾಂಗ್ರೆಸಿನ ಉದ್ದೇಶವನ್ನು ಸಹ ಬದಿಗಿಟ್ಟು ಬೇಕಾದ ಕಳ್ಳವನ್ನು ನಡಿಸಿ ದೇವ್ ಸಾದ ಶ್ರೀ॥ ಮುಳುಮುದಾರರೂ ಅವರ ಮಂಡಲವೂ ಅಧಿಕಾರಾರೂಢರಾದರಾಯಿತು. ಇಷ್ಟೇ ಈ ಪತ್ರದ ಅಭಿಪ್ರಾಯವು. ಅಂಥ ಪತ್ರಗಳಿಗೆ ಉತ್ತರವನ್ನು ಕೊಟ್ಟು ಸಂಭಾವಿತ ಮಾಡುವದಕ್ಕಿಂತ ಅವುಗಳನ್ನು ಅನವ್ಯಾಖ್ಯಾನದಿಂದ ದುರ್ಲಕ್ಷಿಸುವದು ಪಕ್ಷಕ ಉತ್ತಮವು. ಆದಕ್ಕಾಗಿ ನಾನು ಆವರ ಪತ್ರಕ್ಕೆ ಉದ್ದ ಉದ್ದ ಉತ್ತರ ಕೊಡಲಿಚ್ಛಿಸುವದಿಲ್ಲ. ಪತ್ರವ್ಯವಹಾರದೊಳಗಿನ ನನ್ನ ಮೇಲಾದ ವ್ಯಕ್ತಿ ವಿಷಯಕ ಟೀಕೆಗೆ ನಾನು ಎಷ್ಟು ವರೆಗೆ ಉತ್ತರ ಕೊಟ್ಟಿದ್ದೇನೆ?

ಪ್ರ. ಈ ಚುನಾವಣೆಯೊಳಗೆ ಅಲ್ಲಿಯ ರಾಷ್ಟ್ರೀಯ ಪಕ್ಷದ "ಅನನುಭವಿಕ" ಮತ್ತು ಎಳೆ ಪ್ರಾಯದವರಿಗೆ ಇಷ್ಟೊಂದು ಸ್ವತಂತ್ರ ಮತ್ತು ಕಾಂಗ್ರೆಸಿನ ಧ್ಯೇಯಕ್ಕೆ ವಿಸಂಗತವಾದ ಸಾಧ್ಯವನ್ನು ಸಾಧಿಸುವದರಲ್ಲಿ, ನೀವು ಮತ್ತು ಶ್ರೀ॥ ಶಾಮರಾಯರು ದಾಕ್ಷಿಣ್ಯ ಪ್ರವರ್ತಕರೋ? ಅದರಿಂದ ಪರರ ಕಾರಸ್ಥಾನಕ್ಕೆ ಬಲಿಬಿದ್ದು ನಿಮ್ಮಲ್ಲಿಯ ರಾಷ್ಟ್ರೀಯ ಪಂಗಡವೇ ಉಧ್ವಸ್ತವಾಗುವದಿಲ್ಲವೇ? ಅದರ ಪೂರ್ವಾಪರ ವೃತ್ತಾಂತವೇನು?

ಉ. ನಾನು ಮತ್ತು ಶಾಮರಾಯರು ಆರಂಭದಲ್ಲಿ ಈ ಕೆಲಸವನ್ನು ಈ ಸಾರೆ ನಾವು ಕೈಕೊಳ್ಳದೆ ಬರೆಯ ಪ್ರೇಕ್ಷಕರಾಗಿರಬೇಕೆಂದು ಮಾಡಿದ್ದೆವು. ಆದರೆ ತಮ್ಮ ಮಿತ್ರ ಶ್ರೀ॥ ಪಿಕಳೆಯವರು, ನಮಗೆ ನಮ್ಮ ಮತವು ಯೋಗ್ಯವಲ್ಲೆಂದು ಹೇಳಿ ಅವರ ನಾಡಕರ್ಣಿ ಮಿತ್ರಂಪಂಗಡ ಸಭೆಗೆಂದು ಕರೆದರು. ಅದರೂ ಶ್ರೀ॥ ಸುಬ್ಬರಾವ ನಾಡಕರ್ಣಿಯವರು ಊರೊಳಗಿನ ಪ್ರಮುಖರಿಗೆ ಖಾಸ ಆಮಂತ್ರಣ ಕೊಡುತ್ತೇವೆಂದು ಹೇಳಿ ಒಂದು ಸಭೆ ಕರೆಸಿದರು. ಇದು ಮೊದಲನೇ ಮೀಟಿಂಗು.

ಈ ದಿವಸ ರಾ॥ ರಾ॥ ಕೃಷ್ಣರಾವ ನಾಡಕರ್ಣಿಯವರೂ ಹಾಜರಿದ್ದರು. ಸ್ವಲ್ಪ ಹೊತ್ತಿನಮೇಲೆ ಶ್ರೀ॥ ಮುಳುಮುದಾರರೂ ಬಂದರು ಪ್ರಾಸ್ತಾವಿಕ ಚರ್ಚೆಯನ್ನು ಮಾಡಿ ಯಾರು ಯಾರು ಉಮೇದವಾರರಾಗಬೇಕೆಂದು ಠರಾಯಿಸುವದರೊಳಗೆ ನಮ್ಮಲ್ಲಿಯ ಎಲ್ಲ ಸಾರ್ವಜನಿಕ ಮೀಟಿಂಗುಗಳೊಳಗೆ ಮುಂದಾಳುಗಳಿಕ್ಕೆ ಅಭ್ಯರಿದ್ದ ಶ್ರೀ॥ ಮುಳುಮುದಾರರು ಸಭೆಯೊಳಗಿಂದ ಎದ್ದು ನಡೆದರು. ಹೀಗಿದ್ದರೂ ರಾ॥ ಸುಬ್ಬರಾವ ನಾಡಕರ್ಣಿಯವರು, ನಾಗೂ ರಾ॥ ರುದ್ರ ನಾಡಕರ್ಣಿ ಇವರು ಶ್ರೀ॥ ಮುಳುಮುದಾರರ ಮಾತೆಯ ಮತ್ತು ಅಧ್ಯಕ್ಷತೆಯ ಸಿದ್ಧಾಂತಗಳನ್ನು ಮುಂದಿಟ್ಟು ಉಮೇದವಾರರ ಒಂದು ಪಟ್ಟಿಯಾದಿಯನ್ನು ತಯಾರಿಸಿ ಅದರೊಳಗೆ ಘನಶ್ಯಾಮರನ್ನೂ, ನೇಮಿಸ್ತಾರನ್ನೂ, ರಾಷ್ಟ್ರೀಯರನ್ನೂ ಸೇರಿಸಿದ್ದು ನನ್ನ ನೆನಪಿನಲ್ಲಿದೆ. ಈ ಮೊದಲಿನ ಸಭೆಯಲ್ಲಿ ನಾನಾಗಲಿ ಶ್ರೀ॥ ಶ್ಯಾಮರಾಯರಾಗಲಿ ಯಾವದೇ ಹೆಸರಿಗೆ ವಿರೋಧ ಮಾಡಿಲ್ಲ. ಬಹುಸಮ್ಮತ ಕೆಲಸವಾದರಾಯಿತೆಂದು ತಿಳಿದು ನಾವು ಸಭೆ ಮುಗಿದನಂತರ ಹೊರಗೆ ಬರಲು ಕೆಲವು ಹೆಸರುಗಳಿಗೆ ಶ್ರೀ॥ ಪಿಕಳೆಯವರೇ ಸಕಾರಣ ಮತ್ತು ಯೋಗ್ಯ ವಿರೋಧವನ್ನು ವ್ಯಕ್ತಪಡಿಸಿದರು. ಈ ಮೊದಲಿನ ಸಭೆಯ ನಂತರ ಎಷ್ಟುವರೆಗೆ ಸಭೆ ಕೂಡಿದವು ಏನೇನು ಚರ್ಚೆಯಾಯಿತು ಎಂಬ ಸಂಗತಿಗಳನ್ನು ನಾನು ಈ ಸಭೆಯ ಸಭಾಸದರು ಬಾಯಿಂದಲೇ ಹೆಚ್ಚಾಗಿ ಕೇಳಿದ್ದಲ್ಲದೇ ದ ನಂತರ ಎಷ್ಟೋ ಸಭೆಗಳಾದರೂ ಮತ್ತೆ ಎರಡೇ ಸಭೆಗೆ ನಾನು ಹಾಜರಿದ್ದೆನು. ಉಳಿದ ಸಭೆಗಳ ಮತ್ತು ಇತರೇ ಮಾತುಕತೆಯ ಕಾಲಕ್ಕೆ ನಾನು ಊರಲ್ಲಿ ಸಹ ಹಾಜರಿದ್ದಿಲ್ಲ. ಈ ಮಳೆಗಾಲದಲ್ಲಿ ಸರಿಯಾಗಿ ೩ ದಿವಸ ಒಂದೇ ಸಹನೆ ಊರಲ್ಲಿ ಇರಲಿಕ್ಕೆ ನನಗೆ ಶಕ್ಯವಾಗಿಲ್ಲ. ಹೀಗಿರುತ್ತ ನಾಡಕರ್ಣಿ-ಪಿಕಳೆಯವರ ಪತ್ರದ ಮೇಲಿಂದ ನಾನು ಎಲ್ಲ ಸಭೆಗಳಿಗೆ ಹಾಜರಿದ್ದಂತೆ ಸೂಚಿಸಿದ್ದು, ಒಂದು ವಿಚಿತ್ರವಾದ ಅಸತ್ಯವೆಂದು ನನಗೆ ತೋರುತ್ತದೆ. ಪತ್ರದೊಳಗಿನ ಬಹಳ ವಿಧಾನಗಳು ಅರ್ಧೋಕ್ತಿಯಿಂದ, ವಿಪರ್ಯಾಸದಿಂದ, ಅಸತ್ಯದಿಂದ ಸಹ ತುಂಬಿದ್ದವೆಂದು ಹೇಳಲಿಕ್ಕೆ ನನಗೆ ವಿಷಾದವಾಗುತ್ತದೆ. ಅವರು ಹೇಳುವ ಪ್ರಥಮಗ್ರಾಸವು ಸಹ ನಿಜವಲ್ಲ. ಬೇಕಾದರೆ ಅದಕ್ಕೆ ದ್ವಿತೀಯ ಗ್ರಾಸವೆಂದು ಹೇಳಬಹುದು. ಈ ಗ್ರಾಸದೊಳಗೆ ಸೇರಕೊಂಡ ಅಂಗ್ಲಿಷ ಬಹಳಕ ಸಂಬಂಧದ ಚಕೀಕತ ಎರಡನೇ ಮೀಟಿಂಗದಲ್ಲಿ ನಡೆದಿತ್ತು. ಈ ಮೀಟಿಂಗದ ಪೂರ್ವದಲ್ಲಿ ನನ್ನ ಖಾಸಗಿ ಆಫೀಸಿನಲ್ಲಿ ಪಿಕಳೆಯವರು ರಾತ್ರಿ ಹೊತ್ತಿಗೆ ಒಂದುಗ ಒಂದು ಸಂಗತಿಯನ್ನು ಹೊರಗೆಡಹಿದ್ದರು. ಅದೇನೆಂದರೆ ಶ್ರೀ॥ ಮುಳುಮುದಾರರಿಗೆ ಮುಂದರಿಯಗಬೇಕಷ್ಟೇ ಅಲ್ಲ ಅವರಿಗೆ ಅಧ್ಯಕ್ಷರಾಗಿ ಮಾಡಬೇಕು. ಅದರ ಕಾರಣವು ಬಹಳ ಬೋಧಪ್ರದವದು. ಅದೇನೆಂದರೆ, ಶ್ರೀ॥ ಸುಬ್ಬರಾವ ನಾಡಕರ್ಣಿ ಎನ್ನುವ ತಮ್ಮ ಜಾತಿಯ ಜನರಿಗೆ ಬಹಳ ವರ್ಷದಿಂದ ತಮ್ಮ ಕೈಯಲ್ಲಿದ್ದ ಅಧ್ಯಕ್ಷಪದದ ರಕ್ಷಣೆಯನ್ನು ಬೇರೆ ಜಾತಿಯವರ ಕೈಯಲ್ಲಿ ಕೊಡಲಿಕ್ಕಿಲ್ಲಗರು.

ಂಭಾಷಣದೊಳಗೆ ಶ್ರೀ ಬಿಕಳೆಯವರು ಈ ಸಂಗತಿಯನ್ನು ಹೊರಗೆ ಹಾಕಿದರು. ನಿರುಪಾಯವಾಗಿ ಇದನ್ನು ನಗೆ ಪ್ರಕಟಿಸಬೇಕಾಗಿದೆ. ಇದೊಂದು ಅವರ ಪ್ರಾಮಾಣಿಕತೆಯ ಗುಣವೆಂದು ನಾನೂ, ಆಗ್ಗೆ ಹಾಜರಿದ್ದ ಶ್ರೀ ಶ್ಯಾಮರಾಯರೂ ಮೆಚ್ಚಿದೆವು. ಅನಂತರ ಯಾವ ತತ್ವದ ಮೇಲೆ ನಾವು ಉಮೇದವಾರರನ್ನು ಆರಿಸಬೇಕೆಂದು ಚರ್ಚೆ ಮಾಡಲಿಕ್ಕೆ ಎರಡನೇ ಸಭೆ ಕೂಡಿತ್ತು. ಇದು ಅವರು ತಿಳಿದ ಮತ್ತುಕಾಯಕದ ಸಭೆಯು. ಪ್ರಾಂತಿಕ ದೃಷ್ಟಿಯಿಂದ ರಾಷ್ಟ್ರೀಯ ತತ್ವದ ಮೇಲೆ ಉಮೇದವಾರರನ್ನು ಆರಿಸುವಂತೆ ಸ್ಥಾನಿಕ ದೃಷ್ಟಿಯಿಂದ ಯಾರನ್ನು ನಾವು ಪ್ರತಿರೋಧಿಸಬೇಕೆಂದು ಚರ್ಚಿಸುವಾಗ ಇಲ್ಲಿಯ ಇಂಗ್ಲಿಷ ಶಾಲಾ ಕಮಿಟಿಯ ಸಭಾಸದರ ವಿಷಯವನ್ನು-ಶ್ರೀ ಶ್ಯಾಮರಾಯರು ಪ್ರಸ್ತಾಪಿಸಲು ನಾನು ಸಹ ಅವರನ್ನು ಯಾಕೆ ವಿರೋಧಿಸಬೇಕೆಂದು ಬಲವತ್ತರ ಕಾರಣಗಳ ತಾತ್ವಿಕ ಚರ್ಚೆಯನ್ನು ಮಾಡಿದ್ದು ನಿಜವು. ಆದರೆ, ಈ ಚರ್ಚೆಯು. Theoretical discussion ತಾತ್ವಿಕ ಚರ್ಚೆ ಎಂತ ಎಲ್ಲರೂ ಒಪ್ಪಿದ್ದಾರೆ. ಚರ್ಚೆಯಲ್ಲಿ ಶ್ರೀ ಸುಬ್ಬರಾವ ನಾಡಕರ್ಣಿ ಇವರ ಕೂಡ ನಮ್ಮ ವಾದ-ವಿವಾದಗಳಾಗಿ ಅವರು ತಂದ ಸಮರ್ಥನದ ಕಾರಣಗಳ ಸ್ವತಂತ್ರ ವಿಷಯವನ್ನು ಮತ್ತೊಮ್ಮೆ ಯಾವಾಗಾದರೂ ಚರ್ಚಿಸಿದರಾಯಿತೆಂತ ನಿರ್ಣಯಿಸಿದ್ದು. ಶ್ರೀ ನಾಡಕರ್ಣಿಯವರೇ ಮರೆತದ್ದು ಆಶ್ಚರ್ಯಕರವು. ಈ ವಿಷಯು ಯಾ ಯಾವದೇ ವಿಷಯ ತಪ್ಪು ಮಾಡಿದ್ದು ಉಪಸೂಚನೆ ತಂದದ್ದೂ, ಹಟ ಹಿಡಿದದ್ದೂ, ಭಾಷಾ ಗೌರವವೋ, ಭಾಷಾವಿಪರ್ಯಾಸವೋ ನೀವೇ ನೋಡಿರಿ. ಇದನ್ನು ಹಿಡಿದತ್ತಿ ತೆಗೆದದ್ದು ನಡೆಯುತ್ತದೆ. ನಮ್ಮ ಬಗ್ಗೆ ಪ್ರತಿಪಕ್ಷಿಗಳ ಮನಸ್ಸಿನಲ್ಲಿ ದ್ವೇಷದ ಬೆಂಕಿಯನ್ನು ಎಬ್ಬಿಸಿ ಚುನಾವಣೆಯಲ್ಲಿ ನನಗೆ ಕೆಡಹಿಸುವದೇ ಇದರ ಉದ್ದೇಶವೆಂದು ಹೇಳುವದು ಅಯಥಾರ್ಥವೋ? ಇದೊಂದು ಕಾದಸ್ಥಾನವು. ಅನಂತರ ನನಗೆ ‹ಸರಕಾರಿ ಕಂಟ್ರಾಕ್ಟರರೆಂಬ› ಕಿತಾಬನ್ನು ಅರ್ಪಿಸುವ ಸಭೆಯಲ್ಲಿ ನಾನೇನು ಹಾಜರಿಲ್ಲ. ಹಾಜರಿಲ್ಲದ ಅವರು ವಂಚಕರಾಗಬಾರದು, ಅಪರಾಗಬಾರದು ಎಂತ ನಾನು ಹಟ ಹಿಡಿದಿದ್ದೇನೆಂದು ಯಾರಾದರೂ ಬರೆದರೆ ಅದು ಒಂದು ಹಾಸ್ಯಾಸ್ಪದ ಅಸತ್ಯವು.

ಪ್ರಶ್ನೆ ಕಡೆಯಿರಿ, ನಿಮಗೆ ಸರಕಾರಿ ಕಂಟ್ರಾಕ್ಟರರೆಂಬ ಬಿರುದು ಯಾರು ಅರ್ಪಿಸಿದರು? ಇದರ ಅರ್ಥವೇನು? ಪೆನ್ಶನರರಂತೆ ಇದೊಂದು ವರ್ಗವದೆಯೋ?

ಉ. ಈ ಕಿತಾಬು ಪೆನ್ಶನರರ ದಂಗ್ತಿಯಲ್ಲಿ ನನಗೆ ಕೂಡ್ರಿಸಲಿಕ್ಕೆ ನನ್ನ ಗೃಹಾಜರಿಯ ಒಂದು ಕಮಿಟಿಯ ಸಭೆಯಲ್ಲಿ ನನಗೆ ಕೊಟ್ಟದ್ದಾರಂತೆ. ಫಾರೆಸ್ಟ ಕಾಮಗಿರಿ ನಡಿಸುವ ಧಂದೆಗಾರರಲ್ಲಿ ಸರಕಾರಕ್ಕೆ ಬೆಟ್ಟದೊಳಗಿಂದ ಕಟ್ಟಿಗೆ ತಂದುಕೊಡುವ ಕಂಟ್ರಾಕ್ಟರರು ಮತ್ತು ಸ್ವತಂತ್ರ ಕಟ್ಟಿಗೆಯ ವ್ಯಾಪಾರಕ್ಕೆ ಬೆಟ್ಟವನ್ನು ಯಾ ಮರಗಳನ್ನು ಕ್ರಯಕ್ಕೆ ಪಡೆಯುವವರು ಹೀಗೆ ಎರಡು ವರ್ಗಗಳಿದ್ದುವೆ. ಇವುಗಳೊಳಗೆ ನಾನು ಈ ಧಂದೆಯನ್ನು ಕೈಕೊಂಡಂದಿನಿಂದ ಬರೇ ಕಟ್ಟಿಗೆಯ ವ್ಯಾಪಾರಿಯಾಗಿ ಮರಗಳನ್ನು ಕ್ರಯಕ್ಕೆ ತಕ್ಕೊಂಡ ಕಟ್ಟಿಗೆಯ ವ್ಯಾಪಾರಿಯಾಗಿರುವೆನಲ್ಲದೆ, ಸರಕಾರಿ ಕಂಟ್ರಾಕ್ಟನ್ನು ಇನ್ನು ತನಕ ತಕ್ಕೊಂಡಿಲ್ಲ, ಇನ್ನು ನಮ್ಮಲ್ಲಿಯ ಜಮೀನ ಬೆಟ್ಟವೆಲ್ಲ ಸರಕಾರಿ ಮಾಲಕಿಯ ಸಂಪತ್ತಾಗಿದ್ದು ಅದನ್ನು ಕ್ರಯಕ್ಕೆ ಪಡೆಯುವದು ಯಾ ನಾಶ ಮಾಡುವದು ಕಂಟ್ರಾಕ್ಟ ಆಕ್ಟಿನಂತೆ ವಿಕ್ರೀ ಕರಾರು ಆಗುತ್ತದೆಂದು ಹೇಳಿದರೆ, ನಮ್ಮಲ್ಲಿ ಸರಕಾರಿ ಕಂಟ್ರಾಕ್ಟರರೆಲ್ಲರು ತೀರ ಅಧಿಮಯರಾಗುವರು. ಹಪ್ತೆಬಂದಿಯಿಂದ ತೀರ್ವ ಕೊಡತಕ್ಕದ್ದೆಂದು Land Revenue Code ಶರ್ತಿಗೆ ಒಳಪಟ್ಟ ನಾವು ಜಮೀನದಾರರಾಗುವದು ಸಹ ಸರಕಾರಿ ಕಂಟ್ರಾಕ್ಟಎಂದು ಹೇಳಿದರೆ, ಇದೊಂದು ವಿತಂಡ ವಾದವೆಂದು ಹೇಳುವರಲ್ಲವೇ? ನನಗೆ ಶ್ರೀ. ಮುಜುಮುದಾರರ ಪೆನಶನರೀ ದೋಸ್ತಿಯಲ್ಲಿ ಕೂಡ್ರಿಸಲಿಕ್ಕೆ ಉಂಟುಮಾಡಿದ ಇದೊಂದು ಕವನವು. ನಾನು ಬರೇ ಕಟ್ಟಿಗೆಯ ವ್ಯಾಪಾರಿಯಾಗಿದ್ದು ಡಿಪೋದಲ್ಲಿ ಕಟ್ಟಿಗೆಯನ್ನು ಕೊಂಡುಕೊಳ್ಳುವದರ ಬದಲು, ಬೆಟ್ಟದಲ್ಲಿ ಮಾರಿ ಕಿಮ್ಮತ್ತು ತೀರ್ವೆಯಂತೆ ಹಪ್ತೆಯಿಂದ ಸರಕಾರಕ್ಕೆ ಕೊಡುವ ಕರಾರದಮೇಲೆ ಸಟ್ಟೆ ಮಾಡಿ ನಾನು ಕಟ್ಟಿಗೆ ವ್ಯಾಪಾರ ನಡಿಸಿದ್ದೇನೆ. ನಾನೆಂಥ ವ್ಯಾಪಾರಿ? ನನ್ನ ಮಿತ್ರರಾದ ಶ್ರೀ ಸುಬ್ರಾವ ಹಳದೀಪುರಕರ ಕಾರವಾರ ಇವರು ಅಲ್ಲಿಯ ಹಳೇ ದೊಡ್ಡ ಕಟ್ಟಿಗೆಯ ವ್ಯಾಪಾರಿಗಳು. ಅವರು ಸರಕಾರಿ ಕಂಟ್ರಾಕ್ಟರರಿದ್ದದ್ದು ನನಗೇನೂ ಗೊತ್ತಿಲ್ಲ. ಹಳೆ ಬೆಟ್ಟವನ್ನೇ ಅವರು ಕ್ರಯಕ್ಕೆತಕ್ಕೊಂಡು ಲಕ್ಷಗಟ್ಲೆ ಕಟ್ಟಿಗೆಯ ವ್ಯಾಪಾರ ನಡಿಸುತ್ತಾರೆ ಅವರೂ ರಾಷ್ಟ್ರೀಯರಲ್ಲಾದರೆ ಮತ್ತೇನು ಕೇಳುವದದ? ಇವರ ಮೇಲಿಂದ ನಿಮಗೆ ಸರಕಾರಿ ಕಂಟ್ರಾಕ್ಟರರೆಂಬ ಕಿತಾಬಿನ ಅರ್ಥವು ಹೊಳೆಯುವದು. ಇಂಗ್ರಜಿಯಲ್ಲಿ ಹೇಳುವಂತೆ, 'This is giving the dog a bad name to hang it.'

ಪ್ರ. ಶ್ಯಾಮರಾವ - ಶೇಷ ಕಾಮತ ಕಿಪ್ಪಾಯಿಯ ಹಕೀಕತು ಏನು? ಇದರ ವಿಷಯ ಬರೆದ ಸಂಗತಿಗಳು ನಿಜವೋ? ರಾ॥ ಮಾತರ್ ಪ್ರಭುರ ಉಮೇದವಾರಿಯ ವಾದವೇನು?

ಉ. ಈ ಕಿಪ್ಪಾಯಿಯು ನಾನು ಊರಲ್ಲಿ ಇಲ್ಲದಾಗ ಆಗಿತ್ತು. ಇದನ್ನು ಶ್ರೀ ಶ್ಯಾಮರಾಯರು ಬುದ್ಧಿಪುರಸ್ಸರ ನಮ್ಮ ಪ್ರತಿಪಕ್ಷಿಗಳ ಕಾರಸ್ಥಾನಗಳನ್ನು ಅರಿತುಕೊಳ್ಳಬೇಕೆಂತಲೇ ಕೈಕೊಂಡಿದ್ದರು. ಮತ್ತು ಅದರ ಉದ್ದೇಶವು ಬಹಳೇ ಸಫಲವಾಗಿದೆ. ಆ ದಿಶೆಗೆ ನಾಡಕರ್ಣಿಯವರ ಮುಜುಮುದಾರ ಪಕ್ಷಪಾತಿ ಹಿಡ-ಬಿಡ ಎಂಬವದು ಮತ್ತೊಂದೆಡೆಗೆ ಅದೇ ದಿವಸ ತಿಳಿದುಬಂದ ಮುಜುಮುದಾರ-ಕಾಮತರ (coalition) ಸಂಯುಕ್ತ ಪಕ್ಷದ ಏರ್ಪಾಟು ಇಂಥ ಗುಪ್ತ ಮತ್ತು ಅನಪೇಕ್ಷಿತ ಘಟನೆಗಳಿಂದಿಯ ಹಾಗೂ ಆಗ್ಗೆ ಅಸಂಭವನೀಯವಾಗಿದ್ದ ಮತ್ತು ಧಕ್ಕನೆ ಕೂಡಿಬಂದ ಮುಜುಮುದಾರ-ಕಾಮತರಿಗೆಳೆತನವು ಇವುಗಳ ಮರ್ಮವನ್ನು, ಸತ್ಯತೆಯನ್ನೂ ತಿಳಕೊಳ್ಳಲಿಕ್ಕೆ ಶ್ರೀ ಶ್ಯಾಮರಾವರು ರಾ॥ ಕಾಮತರ ಮನೆಗೆ ಹೋಗಿ ಮಾತುಕತೆ ನಡಿಸಿ ಈ ಪೊಳ್ತು ಕಾರಸ್ಥಾನದ ಮರ್ಮವನ್ನೆಲ್ಲ ತಿಳಕೊಂಡು ಈ ಕಿಪ್ಪಾಯಿಯಲ್ಲಿ ನಡೆದ ಎಲ್ಲ ಸಂಗತಿಗಳನ್ನು ಶ್ರೀ ಶ್ಯಾಮರಾಯರಕಡೆಯಿಂದಲೂ, ಅಲ್ಲಿ ಹಾಜರಿದ್ದ ಶ್ರೀ ರಾಮನಾಯ್ಕ ಭಾಸಗೋಡರವರಿಂದಲೂ ನಾನು ಕೇಳಿದ್ದೇನೆ. ಪ್ರಸ್ತುತ ನಾಡಕರ್ಣಿ-ಬಿಕಳೆ ಪತ್ರದಲ್ಲಿ ಈ ವಿಷಯ ಬರೆದ ಹಕೀಕತು ಪ್ರತಿಪಕ್ಷಿಗಳು ಉಂಟುಮಾಡಿದ ಕಲ್ಪಿತ ಕವನವಾಗಿದ್ದು ತೀರ ನಿರಾಧಾರವಾಗಿದೆಂದು ಮನಗಂಡಿದ್ದೇನೆ. ನಿಮ್ಮ ಬಾತಮಿದಾರರು ಹೇಳಿದ ಬಿಸ್ಕಿಟ ಕಾವೆಯೊಳಗೆ ಈ ವೃತ್ತಾಂತವು ಅಂದವಾಗಿ ಸೇರುತ್ತಿತ್ತು. ಶ್ರೀ ಶ್ಯಾಮರಾಯರು ಅಟ್ಟ ರಾಷ್ಟ್ರೀಯರಾಗಿದ್ದು, ಅವರ ರಾಷ್ಟ್ರೀಯತನಕ್ಕೆ ಕುಂದುತರಬೇಕೆಂತ ಇದೆಲ್ಲ ಬಟಾಬಯಲವು. ಇಷ್ಟು ಏಕೆ? ಈ ಕಿಪ್ಪಾಯಿಯ ಮರುದಿವಸ ನಾನು ಕಾರವಾರದಿಂದ ಬಂದು ಮೋಟಾರಿನಿಂದ ಇಳಿದು ನನ್ನ ಪೇಡಿಯಲ್ಲಿ ಕಾಲುತೊಳ್ಳುವಷ್ಟರೊಳಗೆ ಶ್ರೀ ರಾಮ ನಾಡಕರ್ಣಿಯವರು ಭರ ಬಾಜಾರದೊಳಗೆ ಧೃಡವಾಗಿಯೊಳಗೆ ನಿಂತು ಶ್ರೀ ಕೇಟ್ಯಾಪುವರು ರಾ॥ ಕಾಮತರ ಕಾಲಿನಮೇಲೆ ಬಿದ್ದು ನಿನ್ನೆ ಹೊರಳಾಡಿದರೆಂದು ನನಗೆ ಕೂಗಿ ಹೇಳಿದೊಗಿಲ್ಲವೇ? ಇದನ್ನು ನಾನು ಏನೂ ಸಾಬೀತುವರಿಲ್ಲೆಂದು ನಾನು ಅಗಲೇ ಅವರಿಗೆ ಹೇಳಿಬಿಟ್ಟಿದ್ದೇನೆ. ಜೋಲನೆಮಲಿ ಬೋರೆಕೊ ಸುನನೇವಾಲಾ ಬಾತುರದಿನಾ' ಎಂಬ ಗಾದೆ ದಾಡು ನಾಥ ಮರೆಯಕೂಡದು. ಶ್ರೀ ಮಾರ್ತಪ್ರಭುರ ಬಗ್ಗೆ ಸಹ ವ್ಯಕ್ತಿವಿಷಯಕ ದ್ವೇಷವನ್ನುಂಟುಮಾಡಲಿಕ್ಕೆ ಅರ್ಧೋರ್ಧ ಸಂಗತಿಯನ್ನು ಬರೆದು ರಾಗಿಕಾಳಿನಿಂದ ಪರ್ವತವನ್ನು ನಿರ್ಮಿಸುವ ಪ್ರಯತ್ನವಾಗಿದೆ. ಉಮೇದವಾರರ ಪಾತ್ರಾಪಾತ್ರತೆಯಬಗ್ಗೆ ಹಾಗೂ ರಾಷ್ಟ್ರೀಯರ ಮತಪತ್ರಿಕೆಯನ್ನು ಬರೆದು ತಯಾರಿಸುವಬಗ್ಗೆ ಕೂಡಿಸಿದ ಅಂತ್ಯದ ಸಭೆಯಲ್ಲಿ ಈ ಚರ್ಚೆ ಇದರ ಪೂರ್ಣ ಹಕೀಕತನ್ನು ಶ್ರೀ ಬಿಕಳೆಯವರಿಗೆ ತಿಳಿಸಿ. ಈ ದಿವಸ ನಾಡಕರ್ಣಿಯವರ ಚರ್ಚೆ ಇತ್ತು ಬಿದ್ದಾಸೀನ್ಯವು ಮೆಲ್ಲಮೆಲ್ಲನೆ ಬೆಳೆಬೆಳೆದು ಕೆಲಸ ನಡೆಯುವಾಗಲೇ ಮೂರೂ ನಾಡಕರ್ಣಿಯವರು ಗೊತ್ತಿಲ್ಲದೆ ಅದೃಶ್ಯರಾದರು. ಶ್ರೀ ಬಿಕಳೆಯವರು ಕೊನೆತನಕ ಇದ್ದರು. ಸಭೆಯಲ್ಲಿ ತಯಾರಾದ ಮತಪತ್ರಿಕೆಗಳ ಮೇಲೆ ಎಲ್ಲರ ಸಹಿಯಾಗಬೇಕೆಂದು ನಿರ್ಣಯಿಸಿದ್ದರಿಂದ ಟಿಪ್ಪಣೆಯನ್ನು ಹಾಗೇ ಇಟ್ಟು ಮುಗಿಸಬೇಕಾಯಿತು. ಆ ನಂತರ ಸಾಯಂಕಾಲ ಶ್ಯಾಮರಾಯರ ಅಂಗಡಿಯಲ್ಲಿ ಉಮೇದವಾರಿಗಳಾದ ನಂತರವೇ ನಾವು ಮುಂದರಿಸುವ, ಅವರು ಈ ಕೆಲಸ ತಡಹೊಡು ಇಡುವಾ ಎಂತ ಶ್ರೀ ನಾಡಕರ್ಣಿಯವರು ಹೇಳಿದ್ದಕ್ಕೆ ಎಲ್ಲರೂ ಒಪ್ಪಿದ್ದರು. ಈಗ ನಾಮಿನೇಶನ್‌ಗಳು ದಾಖಲಾದ ಮೇಲೆ ಮುಂದಿನ ವಿಚಾರ ಮಾಡುವಾ ಎಂತ ಶ್ರೀ ಸುಬ್ಬರಾವ ನಾಡಕರ್ಣಿಯವರಿಗೆ ತಿಳಿಸಿದರೂ, ಅವರು ಲಕ್ಷವೇ ಕೊಡುವದಿಲ್ಲ. ಇದರ ರಂಗವನ್ನು ನೀವಾಗಿ ಅರಿತುಕೊಳ್ಳಿರಿ.

(ಅಪೂರ್ಣ.)

ವಿಮರ್ಶೆ.

ಲೋಕರಹಸ್ಯ—ಸಪ್ಟಂಬರ ತಿಂಗಳ ಕೆ. ಶ್ರೀ ಕೇ. ನಾರಾಯಣರಾಯರು ಪ್ರಕಟಿಸುವ ಮಾಸಪತ್ರಿಕೆಯಿದು. ಈ ಸಂಚಿಕೆಯು "ಕಪ್ಪಾರ ಸಮಾಜ!" ಎಂಬ ಸಾಮಾಜಿಕ ಕಥೆಯೊ ಪ್ರಕಟವಾಗಿದೆ. 'ಕೃಷಿ' ಸದರಿನಲ್ಲಿ ಬಸಾಯದಿಂದ ಸಂಪಾದನೆ ಮಾಡುವ ಕ್ರಮಗಳು, ದ್ವಪ್ರಕರಣದಲ್ಲಿ ಮೂತ್ರ ಪರೀಕ್ಷೆಯು ಮುಚಿತ್ರವಿಚಿತ್ರವಳಿ, ಅಡಿಗೆಯ ವಿಷಯ, ಚೇಲಾಭ, ಜ್ಯೋತಿಷ್ಯ, ಪ್ರಚಲಿತ ವಿಷಯ ಇತ್ಯಾದಿ ವಿಷಯಗಳು ಸುಗಮವಾಗಿ ವಿವೇಚಿಸಲ್ಪಟ್ಟವೆ. ಇದರ ಮುದ್ರಣವು ಅಂದವಾಗಿರುವದು. ವಾರ್ಷಿಕ ವರ್ಗಣಿ ರೂಪಾಯಿ ೩-೮-೦. ವೀರರಾಜೇಂದ್ರಪೇಟೆ, ಕೊಡಗು.

ರಂಗಭೂಮಿ—ಮಂಗಳೂರಿನ ಶ್ರೀ ದ ಕೃಷ್ಣ ಭಾರದ್ವಾಜರವರು ಶ್ರೀ ಗಣೇಶ ಚತುರ್ಥಿಗೆ ಪ್ರಕಟಿಸುತ್ತಿರುವ ನೂತನ ಮಾಸಪತ್ರಿಕೆ, ರಂಗಭೂಮಿಯು ರಂಗಭೂಮಿಯ ವಿಷಯಗಳನ್ನು ಚರ್ಚಿಸಿ ರಂಗಭೂಮಿಯನ್ನು ಉದ್ಧರಿಸಲು ಟೊಂಕಕಟ್ಟಿರುವದು. ನಾಟಕ ರಂಗಭೂಮಿಯ ಈಗಿನ ದುಸ್ಥಿತಿಯನ್ನು ಹೇಳಬೇಕಾಗಿಲ್ಲ, ಪಾಶ್ಚಿಮಾತ್ಯರ ಕೂಡಲೇ ಪ್ರಕಾಂಡ ಪಂಡಿತರು ವಿಚಾರಿಸಲದಲ್ಲಿ ಉಂಟು ಅದನ್ನು ಹೋಗಲಾಡಿಸಿ ರಂಗಭೂಮಿಯನ್ನು ಉನ್ನತಿಗೆ ನಟಿಸಲು ಗದಗಿನ ಶ್ರೀ ದತ್ತಾತ್ರಯ ನಾಟಕ ಮಂಡಳಿಯ ಒಡೆಯರಾದ ಶ್ರೀ ಸದಾಶಿವರಾವ ಗರೂಡರ ಭಾರದ್ವಾಜರಿಗೆ ಆಶ್ರಯವನ್ನಿತ್ತದ್ದು ಅಭಿನಂದನೀಯ. ರಂಗಭೂಮಿಯಲ್ಲಿ ದಿವಂಗತ ಶ್ರೀ ಚಾಮರಾಜೇಂದ್ರ ಒಡೆಯರ್ ಬಹಾದ್ದೂರ ಹಾಗು ಈಗಿನ ಮಹಿಸೂರ ಮಹಾರಾಜಾಧಿರಾಜ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹಾದ್ದೂರ ಮತ್ತು ಕೊಣ್ಣೂರ ಕಂಪನಿ, ಗುಬ್ಬಿ ರತ್ನಾವಳಿ ಥಿಯೇಟ್ರಿಕಲ್' ಕಂಪನಿಗಳೊಳಗಿನ ಅಭಿನಯಕಾರರ ಚಿತ್ರಸಹಿತ ಚಿತ್ರಗಳಿದ್ದು, ಸಂಬಂಧಿಸಿದ ವಿವಿಧ ವಿಷಯಗಳಿಂದ ಸಂಚಿಕೆ ನನೀಯವಾಗಿದೆ. ಮುದ್ರಣವು ಮುದ್ದಾಗಿದೆ. ಚಂದಾ ರೂಪಾಯಿ ೩—೦—೦. ಪತ್ತೆ:— ವ್ಯವಸ್ಥಾಪಕರು, 'ರಂಗಭೂಮಿ' ಆಫೀಸು, ಮಂಗಳೂರು.

1925-26

—[Star of Kanara Press, Kumta.]—

ಶ್ರೀ ವಿಶ್ವನಾಥ ಪ್ರಭುರ ಮುಲಾಖತು.

(ಮುಂತರಿದದ್ದು.)

ಪ್ರಶ್ನೆ— ಅಂಕೋಲೆಯಲ್ಲಿ ಲೋಕಪಕ್ಷಕ್ಕೂ, ಅಧಿಕಾರಿಯ ಪಕ್ಷಕ್ಕೂ ಬಹಳ ಜೋರದಿಂದ ಕಾದಾಟವು ನಡೆದಂತೆ ಕಾಣುತ್ತದೆ. ಇದರೊಳಗೆ ಜಾತಿ ತತ್ವದ ಹೋರಾಟವು' ಎಲ್ಲಿ ಎಷ್ಟಿರೆಂಬುದು ಶೋಧಿಸಿದರೆ ತಿಳಿಯಬರುವದಿಲ್ಲ. ಎರಡೂ ಬಂಗಡಗಳಲ್ಲಿ ಮುಂದುವರಿದವರೂ, ಹಿಂದುಳಿದವರೂ ಉಮೇದವಾರರಾಗಿ ನಿಂತಿದ್ದರು. ಮತದಾರರಿಗೆ ತಮ್ಮ ತಮ್ಮ ಬಂಗಡದ ತತ್ವಗಳನ್ನು, ಉದ್ದೇಶಗಳನ್ನು, ಕರ್ತವ್ಯಗಳನ್ನು ಶಾಂತವಾಗಿ ಸಭ್ಯತೆಯಿಂದ ಬೋಧಿಸಿ ಚುನಾವಣೆಯ ಧರ್ಮಯುದ್ಧವನ್ನು ನಡೆಸಲಿಕ್ಕಾಗುತ್ತದೆಂದು ತೋರಿಸುವ ಜವಾಬದಾರಿಯನ್ನು ಲೋಕಪಕ್ಷವು ಕೈಕೊಳ್ಳಬೇಕೆಂದು ನನ್ನ ನಂಬಿಗೆಯಿದೆ.

ಉತ್ತರ— ಹೌದು. ಈ ಕಾದಾಟವು ಲೋಕಪಕ್ಷದ ಮತ್ತು ಪುರಾತನ ಅಧಿಕಾರಿ ಪಕ್ಷದ ನಡುವೆ ನಡೆಯುತ್ತಿದೆ. ಜಾತಿತತ್ವದ ಕೋಲಾಹಲವು ನಮ್ಮ ಮಿತ್ರರ ಪಕ್ಷದಲ್ಲಿ ಮೊದಲಾಗಿ ತಲೆದೋರುತ್ತಿದೆ. ಸಾರ್ವಜನಿಕ ಕಾರ್ಯಗಳಲ್ಲಿ ಜಾತಿ ತತ್ವವು ಹತ್ತಿರದ್ದೊಂದು ವೈರಿಯಾಗಿದೆ. ಈ ವೈರಿಯನ್ನು ಸೋಲಿಸಿ ಉತ್ತಮ ನಾಗರಿಕ ಜನದ ತತ್ವವನ್ನು ಸ್ಥಾಪಿಸುವದು ಈಗಿನ ಎಲ್ಲ ಚಳವಳಿಗಳ ಉದ್ದಿಷ್ಟವಾಗಿರಬೇಕಾಗಿದೆ. ನೀವು ಹೇಳುವಂತೆ ನಮಗೆ ಬಹಳ ಸಹನಶೀಲತೆಯಿಂದ ಇದನ್ನು ಧರ್ಮಯುದ್ಧದಂತೆ ನಡಿಸಿ ಸಂಪಾದಿಸಬೇಕಾಗಿದೆ. ಮತದಾರರೊಳಗೆ ನಿಜವಾದ ಜಾಗ್ರತೆಯುಂಟಾದರೆ, ನಮ್ಮ ಕಾರ್ಯವು ಮೂರು ಪಾಲು ಕೊನೆಗಂಡಂತಾಗುವದು. ನಮ್ಮ ಬಂಗಡದ ವಿಜಯವು ಉಳಿದ ಒಂದು ಪಾಲು. ಇಷ್ಟೇ ಮಹತ್ವವನ್ನು ನಾನು ಈ ಚುನಾವಣೆಗೆ ಕೊಟ್ಟಿದ್ದೇನೆ. ಇನ್ನು ಈ ಚುನಾವಣೆಯಲ್ಲಿ ಮುಖಂಡರ ಪರೀಕ್ಷೆಯಾಗುವದು. "वसंत समये प्राप्ते काकः काकः पिकः पिकः" ಎಂಬ ಗಾದೆ ಮಾತಿನಂತೆ ಈಗ ವಸಂತ ಸಮಯವು ಪ್ರಾಪ್ತವಾಗಿದೆ. ಕಾಗೆಗಳು ಯಾವವು, ಕೋಗಿಲೆಗಳು ಯಾವವು ಎಂಬುವದು ದಿನೇ ದಿನೇ ಸ್ಪಷ್ಟವಾಗುವದು. ಕೆಲವು ಕಾಗೆಗಳಿಗೆ ಕೋಗಿಲೆಗಳ ಗುಂಪಿನಲ್ಲಿ ಸೇರ್ಪಡೆಯಾಗಿ ಕೋಗಿಲೆಗಳೆಂದು ಹೇಳಿಸಿಕೊಳ್ಳುವದು ಇನ್ನು ಮುಂದೆ ಅಸಾಧ್ಯವಾಗುವದು. ಮತದಾರರಿಗೆ ನನ್ನ ಹೇಳಿಕೆಯು ಇಷ್ಟೇ. ನಿಮಗೆ ತಿಳಿಸದೆ ನಿಮ್ಮ ಸಹಿಗಳನ್ನು, ಹೆಬ್ಬೆಟ್ಟುಗಳನ್ನು ಕಳ್ಳತನದಿಂದ ಪಡೆದ ವಕೀಲರ ಕಾಗೆಗಳಿಗೆ ನಂಬಬೇಡಿರಿ. ಅಂಥವರು ದೊಡ್ಡ ಅಧಿಕಾರಿಗಳೊಳಿದ್ದಾರೆ. ಅವರ ದೊಡ್ಡ ದೊಡ್ಡ ಮಾತುಗಳಿಂದ ಮೋಸಹೋಗಬೇಡಿರಿ. ಅನುಭವಿಕರೂ, ಪಾತ್ರರೂ ಎಂತ ಕಾಣುವವರು ತಕ್ಕರು. ಅಂಥವರಿಗೆ ಮಾರಬೇಡಿ. ಪಾಲಿಸುವ ಕೊನೆಗೆ ಬಿದ್ದ ಕಾತರ ಅವರು ನಿಮ್ಮನ್ನು ಮರೆಯುವರು. ನಿಮ್ಮ ನಿಜವಾದ ಹಿತವು ಲೋಕಪಕ್ಷದ ಉಮೇದವಾರರಿಂದಲೇ ಸಾಧಿಸಲ್ಪಡುವದು ಎಂಬದೇ ನಿಮ್ಮ ನಿಜವಾದ ಪರೀಕ್ಷೆ. ನೀವು ಮತದ ಬುದ್ಧಿಯಿಂದಲೇ ಎಷ್ಟು ಸುಳ್ಳು ಮತ್ತು ನಿಂದ್ಯ ವದಂತಿಗಳನ್ನು, ಕಷ್ಟಗಳನ್ನು, ಅಧಿಕಾರಿಗಳ ಸಿಟ್ಟನ್ನು ಸಹಿಸಿ ಲೋಕಪಕ್ಷದವರು ಕರ್ತವ್ಯಕ್ಕೆ ಎಚ್ಚರಾಗಿದ್ದಾರೆ. ಅವರಿಗೆ ನಿಮ್ಮ ಮತದಾನವನ್ನು ಅರ್ಪಿಸಿ ಉಪಕರಿಸುವದೂ, ನಿಮ್ಮ ಪ್ರತಿನಿಧಿಗಳಾಗಿ ಅವರನ್ನು ಆರಿಸುವದೂ ನಿಮ್ಮ ಕರ್ತವ್ಯವದೆ. ಇದನ್ನಷ್ಟು ಹಾರ್ದಿಕದಿಂದ ಎಲ್ಲ ಮತದಾರ ಬಾಂಧವರಿಗೆ ಆದರಪೂರ್ವಕ ಮತ್ತು ಆಗ್ರಹಪೂರ್ವಕ ನನ್ನ ಬಿನ್ನಹವಿದೆ.

[* * ಟೀಪು:— ಅಂಕೋಲಾ ತಾಲೂಕ ಲೋಕಲ್ ಬೋರ್ಡಿನ ವಿಷಯವಾಗಿ ಇನ್ನೂ ಅನೇಕ ಪತ್ರಗಳು ನಮ್ಮ ಕಡೆಗೆ ಬಂದಿವೆ. ಆದರೆ, ಎರಡೂ ಪಕ್ಷಗಳ ಕಡೆಯಿಂದ ಪ್ರಸಿದ್ಧವಾದ ವರ್ತಮಾನಪತ್ರಗಳು ಸಾಕಷ್ಟು ಮತ್ತು ಶ್ರೀ ವಿಶ್ವನಾಥ ಪ್ರಭುರವರ ಹೇಳಿಕೆಗಳು ಪ್ರಕಟವಾದದರಿಂದ ಇನ್ನು ಈ ವಿಷಯ ಪತ್ರಗಳನ್ನು ಪ್ರಕಟಿಸುವದಕ್ಕೆ, ವಾದಕ್ಕೆ ತೀಕ್ಷ್ಣ ಸ್ವರೂಪ ಬಂದು, ಸಾರ್ವಜನಿಕ ಅಹಿತವಾಗುವದೆಂಬ ಭೀತಿಯಿದೆ. ಕಾರಣ ಇನ್ನು ಈ ವಿಷಯ ಯಾವದೇ ಪತ್ರವ್ಯವಹಾರವನ್ನು ನಾವು ಪ್ರಕಟಿಸಲಾರೆವು. ಇತ್ತಿಡೆಗೆ ಕ್ಷಮಿಸಬೇಕು. ಇಲೆಕ್ಷನಿನ ಹೋರಾಟದಲ್ಲಿ ಸಾರ್ವಜನಿಕ ಹಿತಕ್ಕೆ ಬಾಧೆ ತಟ್ಟದಂತೆ ವ್ಯಕ್ತಿಗಳ ದ್ವೇಷಕ್ಕೆ ಎಡೆಗೊಡದಂತೆ ಅಂಕೋಲೆಯವರು ನಡೆಸಿಕೊಳ್ಳಬೇಕೆಂದು ನಮ್ಮ ಬಿನ್ನಹವು.

ಸಂ. ಕಾ. ವೃ.]

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದ ಮುಕುಟವನ್ನು ಯಾವ ನಾರಿಯು ತಾನೇ ಬಯಸಲೊಲ್ಲಳು? ಇಂಥಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದದ್ದೋ.

ಕಾಮಿನಿಯಾ ಆಯಿಲ್ ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ತೊಡೆದುಕೊಳ್ಳುವದರಿಂದ ಮಸ್ತಕದ ಬೇಸಿಗೆ ಶಾಂತವಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು. ಅದಲ್ಲದೆ, ಅವು ದಟ್ಟವಾಗಿ ಬೆಳೆದು ಕಪ್ಪಾಗುವವು. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುತ್ತದೆ.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕೂದಲನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ವೈಸೂರ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಅಲ್ಲದೆ ಸಾವಿರಾರು ಗ್ರಾಹಕರು ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸ ೩ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚು 0-14-0

ಅತಿ ಮನೋಹರವಾದ ಸುರಭಿಯು

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಹೌದಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡುತ್ತಿದ್ದು ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವಾಭಾವಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಿಂದ ಸೆಳೆಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0.

Address:- **The Anglo Indian Drug & Chemical Co.**

16, Market, **BOMBAY** 2

ಶ್ರೀ। ವಿಶ್ವನಾಥ ಪ್ರಭುರ ಸಂಭಾಷಣೆ.

(ಮುಂದರಿದದ್ದು.)

ಪ್ರಶ್ನೆ — ಇಂಗ್ಲೇಂಡಿನಲ್ಲಿ ಲೋಕಪಕ್ಷಕ್ಕೂ, ಅಧಿಕಾರಿಗಳ ಪಕ್ಷಕ್ಕೂ ಬಹಳೇ ಬೇಧವಿದ್ದ ಕಾದಾಟವು ನಡೆದಂತೆ ಕಾಣುತ್ತದೆ. ಇದರೊಳಗೆ ಜಾತಿ ತತ್ವದ ಭಾಷೆಯು ಎಲ್ಲಿ ಎದ್ದಿದೆಂದು ಶೋಧಿಸಿದರೆ ದೊರೆಯುವದಿಲ್ಲ. ಎರಡೂ ಪಂಗಡಗಳಲ್ಲಿ ಮುಂದಾದವರೂ, ಹಿಂದುಳಿದವರೂ ಉಮೇದವಾರರಾಗಿ ನಿಂತರೆ. ಮತದಾರರಿಗೆ ತಮ್ಮ ತಮ್ಮ ಪಂಗಡದ ತತ್ವಗಳನ್ನು, ಉದ್ದೇಶಗಳನ್ನೂ, ಕರ್ತವ್ಯಗಳನ್ನೂ ಶಾಂತವಾಗಿ ಯುಕ್ತಿಯಿಂದ ಬೋಧಿಸಿ ಚುನಾವಣೆಯ ಧರ್ಮಯುದ್ಧವನ್ನು ನಡಿಸಲಿಕ್ಕಾಗುತ್ತದೆಂದು ತೋರಿಸುವ ಅವಕಾಶವನ್ನು ಲೋಕಪಕ್ಷವು ಕೈಕೊಳ್ಳಬಹುದೆಂದು ನನ್ನ ಬಿನಗೆಯಿದೆ.

ಉತ್ತರ — ಅಹುದು. ಈ ಕಾದಾಟವು ಲೋಕಪಕ್ಷದ ಮತ್ತು ಪುರಾತನ ಅಧಿಕಾರಿ ಪಕ್ಷದ ನಡುವೆ ನಡೆಯುತ್ತಿದೆ. ಜಾತಿತತ್ವದ ಕೋಲಾಹಲವು ನಮ್ಮ ಮಿತ್ರರ ಪತ್ರದ ಮೂಲದಲಾಗಿ ಕಲೆಬೇರುತ್ತಿದೆ. ಸಾರ್ವಜನಿಕ ಕಾರ್ಯದಲ್ಲಿ ಜಾತಿ ತತ್ವವು ಇತ್ತಲಾಗಿ ದೊಡ್ಡದೊಂದು ವೈರಿಯಾಗಿದೆ. ಈ ವೈರಿಯನ್ನು ಸೋಲಿಸಿ ಉತ್ತಮ ನಾಗರಿಕತನದ ತತ್ವವನ್ನು ಪ್ರಸ್ಥಾಪಿಸುವದು ಈಗಿನ ಎಲ್ಲ ಚಳವಳಿಗಳ ಉದ್ದಿಷ್ಟವಾಗಬೇಕಾಗಿದೆ. ನೀವು ಹೇಳುವಂತೆ ನಮಗೆ ಬಹಳೇ ಸಹನಶೀಲತೆಯಿಂದ ಇದನ್ನು ಧರ್ಮಯುದ್ಧದಂತೆ ನಡಿಸಿ ನೆರವೇರಿಸಬೇಕಾಗಿದೆ. ಮತದಾರರೊಳಗೆ ನಿಜವಾದ ಜಾಗ್ರತೆಯುಂಟಾದರೆ, ನಮ್ಮ ಕಾರ್ಯವು ಮೂರು ಪಾಲು ಕೊನೆಗಂಡಂತಾಗುವದು. ನಮ್ಮ ಪಂಗಡದ ವಿಜಯವು ಉಳಿದ ಒಂದು ಪಾಲು. ಇಷ್ಟೇ ಮಹತ್ವವನ್ನು ನಾನು ಈ ಚುನಾವಣೆಗೆ ಕೊಟ್ಟಿದ್ದೇನೆ. ಇನ್ನು ಈ ಚುನಾವಣೆಯಲ್ಲಿ ಮುಖ್ಯವಾದ ಪರೀಕ್ಷೆಯಾಗ್ಗುವದು. "वसंत समये प्राप्ते काकः काकः पिकः पिकः" ಎಂಬ ಗಾದೆ ಮಾತಿನಂತೆ ಈಗ ವಸಂತ ಸಮಯವು ಪ್ರಾಪ್ತವಾಗಿದೆ. ಕಾಗೆಗಳು ಯಾವವು, ಕೋಗಿಲೆಗಳು ಯಾವವು ಎಂಬುವದು ದಿನೇ ದಿನೇ ಸ್ಪಷ್ಟವಾಗುವದು. ಕೆಲವು ಕಾಗೆಗಳಿಗೆ ಕೋಗಿಲೆಗಳ ಗುಂಪಿನಲ್ಲಿ ಸೇರ್ಪಡಿ ಕೋಗಿಲೆಗಳೆಂದು ಹೇಳಿಸಿಕೊಳ್ಳುವದು ಇನ್ನು ಮುಂದೆ ಅಶಕ್ಯವಾಗುವದು. ಮತದಾರರಿಗೆ ನನ್ನ ಹೇಳಿಕೆಯು ಇಷ್ಟೇ. ನಿಮಗೆ ಅಕ್ಷಿಸಿ ನಿಮ್ಮ ಸಭೆಗಳನ್ನೂ, ಕಚೇರಿಗಳನ್ನೂ ತಳ್ಳತನದಿಂದ ಹುಗಲೇ ತಕ್ಕೊಳ್ಳುವ ಕಾಗೆಗಳಿಗೆ ನಂಬಬೇಡಿರಿ. ಇಂಥವರು ಪ್ರಂಬಿದರೂ ಅಧಿಕಾರಕ್ಕೇರಲಾರದಿದ್ದಾರೆ. ಇವರ ಉದ್ದ ಉದ್ದ ಮಾತುಗಳಿಂದ ಮೋಸಹೋಗಬೇಡಿರಿ. ಅನುಭವಿಕರೂ, ಪಾತ್ರರೂ ಎಂತ ಕಾಣುವವರು ತಕ್ಕರು. ಇಂಥವರಿಗೆ ಮಂಬಿರಿ. ದಾರಿಯು ಕೊನೆಗೆ ಬಿದ್ದ ಕಾಲಕ್ಕೆ ಅವರು ನಿಮ್ಮನ್ನು ಮರೆಯುವರು. ನಿಮ್ಮ ನಿಜವಾದ ಹಿತವು ಲೋಕಪಕ್ಷದ ಧಿಟ್ಟ ಉಮೇದವಾರರಿಂದಲೇ ಸಾಧಿಸಲ್ಪಡುವದು. ಇದರೇ ನಿಮ್ಮ ನಿಜವಾದ ಸಂಪದವು. ನೀವೆ ಮಾತಾವ ಬುದ್ಧಿಯಿಂದಲೇ ಎಷ್ಟು ಸುಳ್ಳು ಮತ್ತು ನಿಂದ್ಯ ಪ್ರಯೋಗಗಳನ್ನೂ, ಕಷ್ಟಗಳನ್ನೂ, ಅಧಿಕಾರಗಳ ಸಿಟ್ಟನ್ನೂ ಸಹಿಸಿ ಲೋಕಪಕ್ಷದವರು ಕರ್ತವ್ಯಕ್ಕೆ ಎಚ್ಚರಾಗಿದ್ದಾರೆ. ಅವರಿಗೆ ನಿಮ್ಮ ಮತವನ್ನು ಅರ್ಪಿಸಿ ಉಪಕರಿಸುವದೂ, ನಿಮ್ಮ ಪ್ರತಿನಿಧಿಗಳಾಗಿ ಅವರನ್ನು ಆರಿಸುವದೂ ನಿಮ್ಮ ಕರ್ತವ್ಯವಿದೆ. ಇದನ್ನಷ್ಟು ಹೇಳಿರೆಂದು ಎಲ್ಲ ಮತದಾರ ಬಾಂಧವರಿಗೆ ಆದರಪೂರ್ವಕ ಮತ್ತು ಆಗ್ರಹಪೂರ್ವಕ ನನ್ನ ಬಿನ್ನಹವಿದೆ.

[*.* ಟೀಪು:— ಇಂಗ್ಲೆಂಡಿನ ಪಾರ್ಲಮೆಂಟ ಚುನಾವಣೆ ಬೋರ್ಡಿನ ವಿಷಯವಾಗಿ ಇನ್ನೂ ಅನೇಕ ಪತ್ರಗಳು ನಮ್ಮ ಕಡೆಗೆ ಬಂದಿವೆ. ಆದರೆ. ಎರಡೂ ಪಕ್ಷಗಳ ತರ್ಫೆನಿಂದ ಶ್ರೀ। ಸಂಭ್ಯಾನ ತತ್ತ್ವತ್ರಯ ನಾಡಕರ್ಣಿ ಮತ್ತು ಶ್ರೀ। ವಿಶ್ವನಾಥ ಪಾಂಡುರಂಗ ಪ್ರಭು ಇವರ ಹೇಳಿಕೆಗಳು ಪ್ರಕಟವಾದ್ದರಿಂದ ಇನ್ನು ಈ ವಿಷಯ ಪತ್ರಗಳನ್ನು ಪ್ರಕಟಿಸಿದ್ದಲ್ಲಿ, ವಾದಕ್ಕೆ ತೀಕ್ಷ್ಣ ಸ್ವರೂಪ ಬಂದು, ಸಾರ್ವಜನಿಕ ಅಹಿತವಾಗುವದೆಂದು ಭೀತಿಯಿದೆ. ಕಾರಣ ಇನ್ನು ಈ ವಿಷಯ ಯಾವದೇ ಪತ್ರವ್ಯವಹಾರವನ್ನು ನಾವು ಪ್ರಕಟಿಸಲಾರೆವು. ಇತ್ತಟ್ಟವರು ಕ್ಷಮಿಸಬೇಕು. ಇಲೆಕ್ಷನಿನ ಹೋರಾಟದಲ್ಲಿ ಸಾರ್ವಜನಿಕ ಹಿತಕ್ಕೆ ಬಾಧೆ ತಟ್ಟದಂತೆ ವ್ಯಕ್ತಿಗಳ ದ್ವೇಷಕ್ಕೆ ಅಂಬುಗೊಡದಂತೆ ಇಂಕೋಲೆಯವರು ನಡಕೊಳ್ಳಬೇಕೆಂದು ನಮ್ಮ ಬಿನ್ನಹವಿದೆ.

ಸಂ. ಕಾ. ವೃ.]

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದ ಮುಡಿಯನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತದೆ. ಈ ಆಯಿಲ್ ಹಚ್ಚಿಕೊಳ್ಳುತಲೇ ಮಸ್ತಿಷ್ಕದ ಬೇನೆಯು ಶೀಘ್ರವಾಗಿ ಮತ್ತು ಉಲ್ಲಾಸದಿಂದ ಪ್ರಥ ಕ್ಷೀಣವಾಗುತದೆ. ಕೂದಲುಗಳು ಇದನ್ನು ತೊಡೆಯ ಕೆಳಗಿದ ಹುಳಿ ಎಂದಿಗೂ ಜಗುಳಿ ಬಿದ್ದು ಹೋಗಲಾರವು. ಆದರೆ, ಅವು ದೀರ್ಘವಾಗಿ ಬೆಳದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುತ್ತದೆ.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕೇಶವನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರು ಉತ್ತಮೋತ್ತಮವಾದ ಪ್ರಮಾಣಪತ್ರಗಳೂ ದೊರಕಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚ 0-14-0

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಆತ್ಯುತ್ತಮವು ಜಪಾನಿಗೆ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಅಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ಪಟ್ಟಿಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೇ ಇರಲಿ, ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಿಂದ ಸೆಳಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4 0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0.

Address:- **The Anglo Indian Drug & Chemical Co.**

16, Market, **BOMBAY 2**

ವಿವಿಧ ಸಂಗ್ರಹ.

[illegible] ಮಜ್ಞ

ಈ ಕಲಿಯುಗದಲ್ಲಿ [illegible] ಯಜ್ಞವು ಜ[illegible]ಗ[illegible] [illegible] ಸಂ[illegible] ಯನೇಗೆ ಬಿ[illegible] [illegible] ಜಿಲ್ಲೆಯ [illegible] ವ ಪಲ್ಲಿ ನಕೆ[illegible] [illegible] ಈ ಯಜ್ಞ[illegible] [illegible]ಪಿಗಳು ಪ್ರಸಿದ್ಧ [illegible] ಮಹಾ[illegible] [illegible] ಭರಾ[illegible] ಈ ಯಜ್ಞವ [illegible] ವಾಣ ಕಟ್ಟಿ [illegible] [illegible] ಅವರ [illegible] ಈ [illegible] ಕಿ[illegible]ಗೆ [illegible] ಗಿಂದ [illegible] [illegible] 'ಸರ್ವೇ [illegible] ಕು[illegible]

***

ದಕ್ಷ ಭಿಕ್ಷುಕರು !

ಶ್ರೀವ[illegible] ಗಿರಿದಾ[illegible] [illegible] ಯಲ್ಲಿ [illegible] ದೇನಂದರೆ.— [illegible] ವಾರ ಮುಂಜಾನೆ [illegible] ನಮಾರಕ್ಕೆ ಧಾರ ವಾಡ ಕಿಲ್ಲೆಯಲ್ಲಿರುವ [illegible] ಗರಿಬಾಳ ಗಿರಿ ಯಾಳನಲ್ಲಿ ನಮ್ಮ ನೆರೆಮನೆಯ ಬಾಗಿಲಲ್ಲಿ [illegible] ವರ್ಷದ [illegible] ಹುಡುಗಿಯು [illegible] ತಾಡಿ ಭಿಕ್ಷೆ ಬೇಡುವದನ್ನು ನಾನು ಅಟ್ಟದ ಮೇಲೆ ನಿಂತು ಕಣ್ಣಾರೆ ನೋಡಿದೆನು [illegible] ಯಿಂದ ಕೇಳಿದೆನು. ಅವೇ ಅವರ [illegible] ನೆಗೆ ಬಂದು ಆ ಮನೆಯನ್ನು [illegible] ಕೆಂಪು ಕೈಸನ್ನೆ ಮಾಡಿ ಮೂಕರ ಧ್ವನಿಯಂ ತೆ ಕೆಟ್ಟ ಧ್ವನಿಮಾಡಿ [illegible] ಕೇಳಿ ನನಗೆ ಪರಮಾಶ್ಚರ್ಯವಾಯಿತು. ಆಗ ಇವ ಳನ್ನು ಪರೀಕ್ಷಿಸಬೇಕೆಂದು ಅಟ್ಟದ ಮೇಲೆಯೇ ನಿಂತು [illegible] ಮನೆಯ ಮುಂದೆ ಹ್ಯಾಗೆ ಮಾಡು [illegible] ನೋಡುವಲ್ಲಿ [illegible] ಕೂಡ [illegible] ನಟಿಸಿದಳು. ಕೂಡಲೇ ನಾನು ಕೆಳಗಿಳಿದು ಹೋಗಿ ಭಿಕ್ಷೆನೀಡುತ್ತೇನೆಂದು ಅವಳನ್ನು ಕರೆದು ನಿನ್ನ ಹೆಸ ರೇನೆಂದೆನು. ನನ್ನ ಮುಂದೆಯೂ ಕೂಡ ಅವಳು ಮೂಕಳಂತೆ ನಟಿಸಿದಳು. ಕೂಡಲೇ ನಾನು ಅವಳ ದಕ್ಷತನವನ್ನು ಹೋಗಲಾಡಿಸಬೇಕೆಂದು [illegible] ದಿಂದ ಲತ್ತೆಗಳನ್ನು ಕೊಟ್ಟೆನು. ಅವರೂ, ಬಾಯಿ ಬಿ ಡಬಿಟ್ಟು ಗಟ್ಟಿಯಾಗಿ ಅಳಲಿಕ್ಕೆ ಹತ್ತಿದಳು. ಜನರು ಗುಂಪಾಗಿ ನೆರೆದರು. ಭಿಕ್ಷೆ ನೀಡಲಾರದೆ ಇವರು ಹೊಡೆಯುತ್ತಾರಲ್ಲಾ ಎಂದು ಜನರು ಎಲ್ಲಿ ಅನ್ನುತ್ತಾ ರೋ ಎಂಬ ಅಂಜಿಕೆಯಿಂದ ಮತ್ತಷ್ಟು ಧೈರ್ಯ ಮಾಡಿ ಮತ್ತೆರಡು ಲತ್ತೆಗಳನ್ನು ಕೊಟ್ಟ ಕೂಡಲೇ ಅವಳು 'ಹಾ ಹೊಡೆಯುತ್ತೀರಿ, ನನ್ನಪ್ಪನ ಕರ ಕೊಂಡು ಬರುತ್ತೇನೆ' ಎಂದು ಅಳುತ್ತಾ ಮಾತಾಡಿದ್ದ ನ್ನು ಕೇಳಿದ ಕೂಡಲೇ ಜನರು ಹೊಟ್ಟೆ[illegible] ನಕ್ಕರು [illegible] ಭಿಕ್ಷುಕರು ಎಷ್ಟು ತಕ್ಕರಿರುತ್ತಾ [illegible] ಬಾಲಿಕೆಯೂ ಕೂಡ ಜನರ [illegible] ದಕ್ಕ[illegible] ಮೇಲೆ ಅವಳ ತಂದೆ-ತಾಯಿ ಗಳು ಇನ್ನೆಷ್ಟರಮಟ್ಟಿಗೆ ಇರಬಹುದೆಂಬುದು ಇದರ ಮೇಲಿಂದ ತಿಳಿಯಬಹುದು. ? ಹಿಂದಕ್ಕೆ 'ಮುಂಬಯಿ [illegible]' ಪತ್ರದಲ್ಲಿ ಹಿಬ್ಬರು ಒಬ್ಬ ತಕ್ಕ ಕುಂಟ ಭಿಕ್ಷುಕನ ವಿಷಯಕ್ಕೆ ಬರೆದಿದ್ದ ಸಂಗತಿ ಯು ನೆನಪಿನಲ್ಲಿರಬಹುದು. ಇನ್ನಾದರೂ ಭಿಕ್ಷುಕ ರ ವಿಷಯಕ್ಕೆ ಎಚ್ಚರಿಕೆಯಿರಲಿ ! ಇಂಥ ದಕ್ಕ ಭಿಕ್ಷುಕರಿಂದಲೇ ಹಿಂದುಸ್ಥಾನವು ದಿನ ದಿನಕ್ಕೆ ಕ್ಷೀಣ ದೆಸೆಯನ್ನು ಹೊಂದುತ್ತಾ ನಡೆದಿದೆ [illegible] ಗಳಲ್ಲಿ ಪ್ರಯಾಣ ಮಾಡುತ್ತಾ ಭಿಕ್ಷೆಬೇಡುವ ಭಿಕ್ಷು ಕರ್ಲ್ಲಂದಲ್ಲಿ ಇಂಥ ತಕ್ಕರು ಅನೇಕರಿರುವಂತೆ ಕಂಡುಬರುತ್ತದೆ

***

ತಿಬೇಟದೊಳಗಿನ ಸ್ತ್ರೀಯರು

ತಿಬೇಟ ದೇಶವು ನಮ್ಮ ಭಾರತ ವರ್ಷಕ್ಕೆ ಹೊಂದಿ ರುವದು. ಅಲ್ಲಿಯ ಸ್ತ್ರೀಯರ ಸ್ಥಿತಿಯು ಚಿತ್ರವೇ ಚಿತ್ರವಿದೆ. ಸ್ತ್ರೀಯರೂ, ಪುರುಷರಂತೆ [illegible] [illegible] ವಲ್ಲಿ ನಡೆದುಕೊಳ್ಳುತ್ತಾರೆ. ಪುರುಷ ರಂತೆ ಅವರೂ ವ್ಯಾಪಾರಮಾಡುವರು. [illegible] ಕ[illegible]ಗಳಲ್ಲಿ ಪುರುಷರೊಡನೆ ಸೇರಿಕೊಂಡು ದುಡಿಯುವರು. ಧರ್ಮದಲ್ಲಿಯೂ ಅವರಿಗೆ ಸಮಾನ ಹಕ್ಕು. ಇಲ್ಲಿಯ ಒಂದು ಮಠದ [illegible] ಒಬ್ಬ ಸ್ತ್ರೀಯಳ ಕೈಯಲ್ಲಿದೆ. ದೇವಾಂಶವೆಂದು [illegible] ಗೆ ಸ್ತ್ರೀ-ಪುರುಷರು ಪೂಜಿಸುತ್ತಾರೆ. ಸ್ತ್ರೀ-ಪುರು ಷರು ನಿರ್ಭೀಡೆಯಿಂದ [illegible], ನರ್ತ[illegible] ಮಾಡುತ್ತಾರೆ. ಅಲ್ಲಿಯ [illegible] ಒಬ್ಬ ಪುರುಷನು ಅನೇಕ ಸ್ತ್ರೀಯರಿಗೆ ಮ ದುವೆ ಮಾಡಿಕೊಳ್ಳುವಂತೆ, ಅಲ್ಲಿ ಒಬ್ಬ ಸ್ತ್ರೀಯು ಅನೇಕ ಪುರುಷರನ್ನು [illegible] [illegible] ಒಬ್ಬ ಸ್ತ್ರೀ[illegible] [illegible] ನಡೆಸಿಕೊಳ್ಳುವ ಸಂಪ್ರದಾಯ ವಿದೆ. ಇದನ್ನು ಕೇಳಿ ಅನೇಕರಿಗೆ ನಾರೀಮಣಿ ದ್ರೌಪದಿ ಯು ನೆನಪಾಗಬಹುದು. ಈ ಸ್ತ್ರೀಯರು ಹಿರೇಅಣ್ಣನ ಅಧಿಕಾರಕ್ಕೊಳಪಟ್ಟವರು. ಅವರಲ್ಲಿ ಹುಟ್ಟುವ ಮಕ್ಕಳೆಲ್ಲರೂ ಹಿರೇಯಣ್ಣನವೆಂದು ಗ್ರಹಿಕೆ. ಸ್ತ್ರೀ ಯರು [illegible], [illegible] ಮಾಡು ತ್ತಾರೆ. [illegible] ಶೀಲ [illegible] ವೆಂದು ಅಲ್ಲಿ ಭಾವನೆಯು [illegible] "ನಾನು [illegible] [illegible] ನನ್ನ ಗಂಡನ ಪರೋಕ್ಷದಲ್ಲಿ[illegible] ಆದರೂ, ನನ್ನ ಅತ್ತೆಯು ನನ್ನ ಕಡೆಯಿಂದಲೇ ಕೆಲ ಸ ಮಾಡಿಸ[illegible]." ಇದು ಒಬ್ಬ ಸ್ತ್ರೀಯಳು ತನ್ನ ಚರಿತ್ರೆಯಲ್ಲಿ ಬರೆದ [illegible] ಶ್ರೀಮಂತರಲ್ಲಿ [illegible], ಲಕ್ಷಾಧೀಶರ ಅರ್ಧಾಂಗಿಯಾಗಿ [illegible] ಯುಳ್ಳವಳಾಗಿ ವೈಮುರಿದು ದುಡಿಯುವ ಗೃಹಿಣಿಯು ಧನ್ಯಳಲ್ಲವೇ?

***

ಮತ್ಸ್ಯ ಲಕ್ಷಣ.

ಮುಂಬಯಿಯ ನೆರೆಹೊರೆಯಲ್ಲಿ ಜುಹು ಎಂಬ ದೊಂದು ಗ್ರಾಮವಿದೆ. ಈ ಗ್ರಾಮವು ಸಮುದ್ರ ದಂ ಡೆಗುಂಟ ಇದ್ದು ಇಲ್ಲಿಯ ಹವೆಯು ಸಾವಧಾನ ಕರವಿದೆ. ಸಾಹುಕಾರರು ಬಂಧಮುಕ್ತರಾದೊಡನೆ ಇಲ್ಲಿ ಕೆಲಕಾಲ ವಾಸವಾಗಿದ್ದರು. ಈ ಗ್ರಾಮದಲ್ಲಿ [illegible] ಬಯಿಯ ಅನೇಕ ಸಾವುಕಾರರು ಉಳಕೊಂಡು [illegible] ಕಳೆಯುತ್ತಿರುವರು. ನೆರೆಯ ಸಮುದ್ರದ ಲ್ಲಿ [illegible] ಸ್ನಾನವನ್ನೂ ಮಾಡುತ್ತಿರುವರು. [illegible] ಸಮುದ್ರದಲ್ಲಿ ದೊಡ್ಡ ದೊಡ್ಡ ಮೀನುಗಳಿ [illegible], ಇವು ಜಳಕ ಮಾಡುವವರಿಗೆ ಕಡಿಯುತ್ತವೆ. [illegible] [illegible] ಧವಾರ [illegible]. [illegible]ನೇಗೆ ಶೇಟ ಮಾಧವಜಿ ಧ[illegible] ಮುರಾರಜಿಯವರು ಬೆಳಿಗ್ಗೆ ಜಳಕ ಮಾಡು ತ್ತ[illegible], [illegible] ನೀರಿನಲ್ಲಿ ನಿಂತುಕೊಂಡಿದ್ದರು. ಅಷ್ಟರಲ್ಲಿ ಮೀನ ಬಂದು ಎಡೆಗೆ ಕಚ್ಚಿ ದೊಡ್ಡ ದೊಂದು ಘಾಯ ಮಾಡಿಬಿಟ್ಟಿತು. ಶೇಟಜಿಯವರಿಗೆ ಕೆಲಕಾಲದ ವರೆಗೆ ಉಸುರಾಡಬರಲಿಲ್ಲ. ವೈದ್ಯರಾದ ರು ಬಂದು ಉಪಚಾರ ನಡೆಸಿದರು. ಈಗ ಶೇಟಜಿಯ ವರಿಗೆ ಸ್ವಲ ಸ್ವಸ್ಥವಾಗಿದೆ. ಅಲ್ಲಿ ಮೀನುಗಳು ಹೀಗೆ ಅನೇಕರಿಗೆ ಕಚ್ಚಿ ಮಾನವರಕ್ತದ ರುಚಿ ಕೊಂಡಿವೆ. ಹಿಂದೆ ಎರಡು-ಮೂರಾವೃತ್ತಿ ಇಂಥ ಅಪಘಾತಗ ಳು ಸಂಭವಿಸಿವೆ.

***

ರೈತನ ಅತ್ಯಾಚಾರ.

[illegible] ತಾಲೂಕಕ್ಕೆ ಸೇರಿದ ಸಿಂಗೋಲಿ ಗ್ರಾ ಮದಲ್ಲಿ [illegible] ರೈತರ [illegible] ಬಾಕಿ ಬಿದ್ದಿ [illegible] ಅದರ ವಸೂಲಿಗಾಗಿ ಅಲ್ಲಿಯ ಶಿರಸ್ತೇದಾರರು [illegible] ಗಿದ್ದರು. ಒಬ್ಬ ರೈತನು [illegible] ರೂ ಪಾಯಿ ಬಾಕಿ ಇಟ್ಟುಕೊಂಡಿದ್ದನು. ಅತನ ದರ [illegible] ಜಪ್ತಿಯಾಗಿ ಅದನ್ನು ಸಿಪಾಯಿಗ ಳು ಗ್ರಾಮ ಚಾವಡಿಗೆ ತಂದರು. ಜಪ್ತಿಯ ಕೃತ್ಯ ನೋಡಿ ರೈತನು ಸಂತಪ್ತನಾದನು ಥಟ್ಕನೆ ಹೋಗಿ ಶಿರಸ್ತೇದಾರರ [illegible] ಚೆ[illegible] ಕಿವಿದು ಬಿಟ್ಟನು. ಶಿರಸ್ತೇದಾರರು ದೈವಶಾಲಿಗಳು, ಅವರಿಗೆ ದೊಡ್ಡ ಘಾಯವಾಗದೆ, ಅವರು ಪಾರಾದರು ! ಈ ಅತ್ಯಾ ಚಾರಕ್ಕಾಗಿ ರೈತನಮೇಲೆ ಖಟ್ಲೆ ನಡೆದದೆ. ಆ ಪ್ರಕ ರಣದಿಂದ ಅಲ್ಲಿಯ ಅಧಿಕಾರಿಗಳು ತಕ್ಕ ಬೋಧ ಪಡೆಯಬೇಕು.

***

ಕೃತ್ರಿಮ ವೃಷ್ಟಿ.

ಮುಂಬಯಿಯ 'ಟಾಯಿಮ್ಸ್ ಆಫ್ ಇಂಡಿಯಾ' ಪತ್ರಿಕೆಯಲ್ಲಿ ಹೊಸದೊಂದು ಶೋಧದ ಹಕೀಕತು ಪ್ರಸಿದ್ಧವಾಗಿದೆ. ವಿಲಿಯಮ್ ಹೇಟ ಎಂಬವರು ಒಂದು ಯಂತ್ರಕಲೆಯಿಂದ ಬೇಕಾದಾಗ, ಬೇಕಾ ದಲ್ಲಿ, ಬೇಕಾದಷ್ಟು ಮಳೆ ಸುರಿಸುವ ಹಂಚಿಕೆಯನ್ನು ಶೋಧಿಸಿ ತೆಗೆದಿರುವರು. ಒಂದು ಇಂಚು ಮಳೆ ಸು ರಿಸಬೇಕಾದರೆ, ಸಾಧಾರಣ [illegible] ಡಾಲರ್ ಖರ್ಚಾ ಗಲುತ್ತದಂತೆ. ಮಳೆಯಿಲ್ಲದಾಗ ಈ ಹಂಚಿಕೆಯು ಉಪ ಯೋಗ ಮಾಡಬಹುದು. ಆದರೆ, ಬೆಳೆಗಿಂತ ಈ ಮಳೆಗೇ ಹೆಚ್ಚು ಬೆಲೆ ತೆರಬೇಕು. ಬೆಳೆ ನಾಶವಾಗಿ ಲುಕ್ಸಾನವನ್ನಾದರೂ ಸಹಿಸಬಹುದು, ಕೃತ್ರಿಮ ಮಳೆ ಯಿಂದ ಬೆಳೆ ಮಾಡುವದು ಮತ್ತೂ ಹಾನಿಕರವು. ಮಿ॥ ಹೇಟರವರು ತಮ್ಮ ಶೋಧದ ಖರ್ಚನ್ನು ಕಡಿ ಮೆ ಮಾಡುವ ಹಂಚಿಕೆ ಹುಡುಕಿ ತೆಗೆದರೆ, ಒಕ್ಕಲಿಗ ರಿಗೊಂದು ಲಾಭವಾಗಬಹುದು. ಇದೇ ತರದ ಶೋ ಧವನ್ನು ಹೆಟಫೀಲ್ಡ ಎಂಬವರು ಇತ್ತ [illegible] ವರುಷಗ ಳಿಂದ ಮಾಡುತ್ತಿರುವರು

***

ಜಪಾನದ ಮೇಲೆ ಅಗ್ನಿನಾರಾಯಣನ ದಾಳಿ!

ಸಪ್ಪಕ್ಕೆ ಜಪಾನದೊಳಗಿನ ಪಾರ್ಲಿಮೆಂಟ ಸಭಾಮಂದಿರಗಳು, ಥಕ್ಕನೆ ಬೆಂಕಿ ಬಿದ್ದು ಸುಟ್ಟು ಬೂದಿಯಾದವು. ಹ್ಯಾಗೆ ಬೆಂಕಿ ಹತ್ತಿತು ಎಂಬುದೇನು ತಿಳಿಯಲಿಲ್ಲ. ವಿದ್ಯುದ್ದೀಪದ ತಂತಿ ಸುಡದು ಬೆಂಕಿ ಬಿತ್ತೆಂದು ಹಲವರು, ಕಿಡಿಗೇಡಿಗಳು ಬೆಂಕಿ ಹಚ್ಚಿರಬೇಕೆಂದು ಕೆಲವರು ಹೀಗೆ ತರ್ಕ. ಬೆಂಕಿ ಹತ್ತಿದಾಗ ಬಲವಾದ ಗಾಳಿ ಬೀಸಹತ್ತಿತು. ಅಗ್ನಿನಾರಾಯಣನಿಗೆ ವಾಯುದೇವರು ನೆರವಾದ ಕೂಡಲೆ, ಅಗ್ನಿನಾರಾಯಣನ ಪ್ರತಾಪವನ್ನು ಸಹಿಸುವವರಾರು? ಪಾರ್ಲಿಮೆಂಟ ಸಭಾಮಂದಿರಗಳೂ, ಅದರೊಳಗಿನ ಮಹತ್ವದ ಕಾಗದಪತ್ರಗಳೂ ಸುಟ್ಟು ಬೂದಿಯಾದವು. ಸುಮಾರು ೨೨ ಲಕ್ಷ ಯೆನ, ಅಂದರೆ, ೬೦ ಲಕ್ಷ ರೂಪಾಯಿಗಳ ಹಾನಿ! ನೆರೆಹೊರೆಯ ‘ಜಪಾನ ಟೈಮ್ಸ್’ ಪತ್ರಿಕೆಯ, ಮುದ್ರಣಾಲಯಕ್ಕೆ ಅಗ್ನಿನಾರಾಯಣನು ಕೈಹಾಕುತ್ತಿದ್ದನು, ಸೈನಿಕರು ಮರಳಾತವನ್ನು ಸೂಡಿ, ಅಗ್ನಿನಾರಾಯಣನಿಗೆ ಹಿಂಜರಿಸಿಬಿಟ್ಟರು. ಬಳಿಕ ಅಗ್ನಿನಾರಾಯಣನು ತನ್ನ ಹಾವಳಿಯನ್ನು ಭೂತಲದಲ್ಲೆಲ್ಲ ತಿಳಿಯಗೊಡಬಾರದೆಂಬ ಉದ್ದೇಶದಿಂದಲೋ ಏನೋ, ವಾರ್ತಾವಾಹಕ ಮಂದಿರದ ಮೇಲೆ ಹಾರಲುದ್ಯುಕ್ತನಾದನು. ಅಲ್ಲಿಯೂ ಸೈನಿಕರು ಅಡ್ಡಗಟ್ಟಿದರು. ಅಷ್ಟಕ್ಕೆ ಅಗ್ನಿನಾರಾಯಣನು ಶಮನಾಥನಾಗಬೇಕಾಯಿತು. ೨-೩ ದಿನಗಳಲ್ಲಿ ಪಾರ್ಲಿಮೆಂಟಿನ ಸಭಾಪತಿಗಳಾದ ಪ್ರಿನ್ಸ ಟೊಕುಗಾವಾರವರ ಗೃಹದಲ್ಲಿ ಅಗ್ನಿನಾರಾಯಣನು ಪುನಃ ಅವತೀರ್ಣನಾಗಿ ಇಡೀ ಮನೆಯ ನ್ನಷ್ಟ ಆಹುತಿ ಕೊಂಡನು. ಎಂಥ ಸಂತಾಪವಿದು?

* * *

ಇದು ಪ್ರಜಾವಾತ್ಸಲ್ಯ

ಕಳೆದ ಸಪ್ಟಂಬರ ತಿಂಗಳ ೧೪ ನೇ ತಾರೀಖಿಗೆ ಬಲ್ಗೇರಿಯಾ ರಾಷ್ಟ್ರದ ರಾಜಧಾನಿಯಾದ ಸೋಫಿಯಾನಗರದಲ್ಲಿ ಒಂದು ಚಮತ್ಕಾರವು ಸಂಭವಿಸಿತು. ರಾಜ್ಯಾಧಿಪತಿಗಳಾದ ಬೋರಿಸ್ ದೊರೆಗಳು ಮೋಟಾರಿನಲ್ಲಿ ಕುಳಿತು ವಿಹರಿಸುತ್ತಿದ್ದರು. ಎದುರುಗಡೆಯಿಂದ ಒಂದು ಕುದುರೆ ಗಾಡಿಯು ಓಡುತ್ತಿತ್ತು. ಗಾಡಿಗೆ ಎರಡು ಕುದರೆಗಳಿದ್ದವು, ಗಾಡಿಯಲ್ಲಿ ತಂದೆ ತಾಯಿ ಮಕ್ಕಳು ಕೂತುಕೊಂಡಿದ್ದರು, ಮೋಟಾರಿನ ಭರ್ರನೆ ಕೇಳಿದ ಕೂಡಲೆ ಕುದರೆಗಳು ಬೆದರಿ ಓಡಹತ್ತಿದವು. ಬೋರಿಸ್ ದೊರೆಗಳು ಇದನ್ನು ಕಂಡೊಡನೆ ತಮ್ಮ ಮೋಟಾರನ್ನು ನಿಲ್ಲಿಸಿ, ಹೊರಗೆ ಧುಮುಕಿ ಕುದುರೆಗಳನ್ನು ಥಕ್ಕನೆ ಗಟ್ಟಿಯಾಗಿ ನಿಲ್ಲಿಸಿಬಿಟ್ಟರು. ಚಿಕ್ಕಮಕ್ಕಳು ಗಾಬರಿಯಾಗಿದ್ದರು. ದೊರೆಗಳು ಅವರನ್ನು ಶೌರ್ಯದಿಂದ, ಧೈರ್ಯದಿಂದ ಕಾಪಾಡಿದರು. ಇದೇ ಪ್ರಜಾವಾತ್ಸಲ್ಯವು.

* * *

ಅದ್ಭುತ ಶೋಧಗಳು

ಅಮೇರಿಕೆಯಲ್ಲಿ ಫ್ರೆಡರಿಕ್ ಕೀಸಲರ್ ಎಂಬವರು ಒಂದು ಶೋಧ ಹಚ್ಚಿರುವರು. ಆಕಾಶದಲ್ಲಿ ಆಧಾರವಿಲ್ಲದೆ ಉಳಿಕೊಳ್ಳುವದು ಅಸಾಧ್ಯವೆಂದು ಈವರೆಗಿನ ಗ್ರಹಿಕೆ, ಈಗ ಮಿ। ಕೀಸಲರ್‌ರವರು ಆಕಾಶದಲ್ಲಿ ಪಟ್ಟಣಗಳನ್ನು ನಿರ್ಮಿಸಬಹುದೆಂದು ಅಭಿಪ್ರಾಯಪಟ್ಟಿರುವರು. ಈ ಪಟ್ಟಣಗಳು ವಾಯುಮಂಡಳದಲ್ಲಿ ತೇಲುತ್ತಿರುವವು. ಇಂಥ ನಗರವೊಂದನ್ನು ತಯಾರಿಸಲು, ಅಮೇರಿಕೆಯ ರಾಜಧಾನಿಯಾದ ನ್ಯೂಯೋರ್ಕ ಪಟ್ಟಣದೊಳಗಿನ ಕಂಪನಿಯವರೊಪ್ಪಿರುವರು ಮಿ। ಕೀಸಲರ್‌ರವರಿಗೆ ಹೇಳಿರುವರು. — ಪ್ರೊ। ಮೆಕ್ಸಮಿಲಿಯನ್ ಲಿಸ್ಟ್ಸಗೆಸೆನರರೆಂಬವರು ಮಿಯಮಿಯಲ್ಲಿ ಸಪ್ರಯೋಗ ಒಂದು ಶೋಧವನ್ನು ತೋರ್ಪಡಿಸುತ್ತಿರುವರು, ಕಳವು, ಕೊಲೆ ಇತ್ಯಾದಿ ಅಪಕೃತ್ಯಗಳಿಗೀಡಾದ ಮಂದಿಗಳ ಜ್ಞಾನಕರ್ಮೇಂದ್ರಿಯಗಳನ್ನು ಅವರು ತಮ್ಮ ಸ್ವಾಧೀನಪಡಿಸಿಕೊಳ್ಳಬಲ್ಲರು, ಅವರ ಮನೋಭಾವನೆಗಳನ್ನು ಗ್ರಹಿಸಬಲ್ಲರು. ಕಳ್ಳರು ಕದ್ದೊಯ್ದ ಸಾಮಗ್ರಿಗಳ ಸ್ಥಳವನ್ನು ತಪ್ಪದೆ ಕಂಡುಹಿಡಿಯಬಲ್ಲರು, ಸಾರಾಂಶದಿಂದ ಹೇಳಬೇಕಾದರೆ ಯಾವದೇ ಮಾನವನ ಸಮಗ್ರ ಇಂದ್ರಿಯಗಳನ್ನು ತಮ್ಮ ಚಿತ್ತಾಕರ್ಷಕ ಶಕ್ತಿಯಿಂದ ಸ್ವಾಧೀನಪಡಿಸಿಕೊಂಡು ಅವರ ಮನೋಮಂಡಲದಲ್ಲಿ ನಡೆಯುತ್ತಿರುವ ಸಮಸ್ತ ವ್ಯಾಪಾರಗಳನ್ನು ಅವರು ಅರಿತುಕೊಳ್ಳಬಲ್ಲರು. ಇದು ಅದ್ಭುತ ಶೋಧವಲ್ಲವೇ? ಪ್ರೊ। ಮಿಥೇ ಎಂಬವರು ಜರ್ಮನ್ ರಸಾಯನಶಾಸ್ತ್ರಜ್ಞರು ಪಾರದದ ಅಣುವಿನಲ್ಲಿ ವಿದ್ಯುಚ್ಛಕ್ತಿಯನ್ನು ಬಿಟ್ಟರೆ ಒಂದು ಪ್ರಕಾರದ ಪದಾರ್ಥ ಹುಟ್ಟಿ ಚಿನ್ನವಾಗುತ್ತದೆಂದು ಅವನು ಕಂಡುಹಿಡಿದಿರುವನು. ಈ ಶೋಧ ಹಚ್ಚಿ ಒಂದು ವರುಷವಾಯಿತು. ಚಿನ್ನ ಅಗ್ಗವಾಗಲು ಇದೇ ಕಾರಣವೇನು? ಆದ್ರೆ ಈ ಶೋಧದಂತೆ ಚಿನ್ನ ಮಾಡಬೇಕಾದರೆ, ವಿಪರೀತ ಖರ್ಚು ತಗಲುತ್ತದೆ. ಒಂದು ರೂಪಾಯಿಯಷ್ಟು ಚಿನ್ನ ತಯಾರಿಸಲಿಕ್ಕೆ ಸಾವಿರಾರು ರೂಪಾಯಿ ಖರ್ಚ ಮಾಡಬೇಕು. ಈಶನಿರ್ಮಿತ ಒಂದು ರೂಪಾಯಿ ಬೆಲೆಯ ಚಿನ್ನಕ್ಕೆ ಮಾನವನು ಪ್ರತಿಸೃಷ್ಟಿ ಮಾಡಬೇಕಾದರೆ ಸಾವಿರಾರು ರೂಪಾಯಿ ಖರ್ಚ ಮಾಡಬೇಕು. ಮಾನವನಿಗೂ, ಪರಮಾತ್ಮನಿಗೂ ಇರುವ ಭೇದವಿದು! ಸ್ವೀಡಿಶ್ ನಾಡ ಒಂದು ಗ್ರಾಮದಲ್ಲಿ ಆನೆಯ ಅಸ್ಥಿಪಂಜರ ದೊರಕಿದೆ. ಅದರ ಕಾಲಿನ ಮೂಳೆ ೫೦ ಮಣ ಭಾರ, ಒಂದು ಹಲ್ಲು ೭ ಶೇರು ಭಾರ. ಎಂಥ ದೊಡ್ಡ ಪ್ರಾಣಿ! — ಜಪಾನದ ಮ... ಪಟ್ಟಣವಾದ ಟೋಕಿಯೋ ಪಟ್ಟಣದಲ್ಲಿ ಪುರಾತನವಾದ ಒಂದು ಅರಮನೆಯಿದೆ. ಅದರ ಅಡಿಗೆ ೧೬ ಪೂಟು ಅಗೆಯಲು ೧೬ ಅಸ್ಥಿಪಂಜರಗಳು ದೃಷ್ಟಿಗೋಚರವಾದವು. ಎಲ್ಲವೂ ಕೈ ಮುಗಿದುಕೊಂಡು ನೆಟ್ಟಗೆ ನಿಂತುಕೊಂಡಿದ್ದವು. ಪತ್ರುವ ... ಹಳೇ ಸಾಂಗರು ಹರಸಿಕೊಂಡಿದ್ದವಂತೆ. ಇದೆಂಥ ಚಮತ್ಕಾರ! ಚೀನ ದೇಶದೊಳಗಿನ ಬ್ರಾಂಗಶ್ಯಾ ಗ್ರಾಮದಲ್ಲಿ ಒಂದು ಪ್ರಾಣಿಯು ಮಗಿಲಲ್ಲಿ ಕಾಲುತ್ತಿದೆ. ೫ ಅಡಿ ಎತ್ತರ, ಅದರ ತಲೆ ಗುಡಾಳ ಒಣಗಿದ್ದು, ಬಾಲ ಹಸುರು ಬಣ್ಣದ್ದು. ಈ ಪ್ರಾಣಿಯು ಚೀನ ದೇಶದ ಜನರ ಕಲ್ಪನೆಯದಾಗಿ, ಅಲ್ಲಿಯ ಜನರು ಪ್ರೇಮದೇವರಂತೆ ಗ್ರಹಿಸಿ ಉಪಾಸನೆ ಮಾಡುತ್ತಿರುವರು. — ಫ್ರಾನ್ಸ ದೇಶದಲ್ಲಿ ಜನಸಂಖ್ಯೆಯ ಪ್ರಮಾಣವು ಹೀಗಿದೆ. ೧೬ ವರುಷಗಳಲ್ಲಿ ಹುಟ್ಟಿದ ಗಂಡಸು, ೧೯ ಜನ ಹೆಂಗಸರು. ಇದರಿಂದ ಸ್ತ್ರೀಯರು ದುರಾಚಾರಕ್ಕೆ ಪ್ರವೃತ್ತರಾಗಹತ್ತಿರುವರಂತೆ.

* * *

ಒಂದು ಪ್ರೇಮಯುದ್ಧ!

ಲಂಡನದಲ್ಲಿ ಒಬ್ಬ ನವ ತರುಣನ ಹರೆಯದವನಿಗೆ ಇಬ್ಬ ಯುವತಿಯರು ಮನಸ್ಸಿನಲ್ಲಿ ವರಿಸಿದ್ದರು. ಕಾಯಿದೆಯಂತೆ ಇಬ್ಬರ ಮದುವೆ ಮಾಡಿಕೊಳ್ಳಲು ಪ್ರತಿಬಂಧವಿದೆ. ಆದರಿಂದ ಇಬ್ಬರೂ ಯುವತಿಯರೂ ಒಂದು ಪ್ರತಿಜ್ಞೆ ಮಾಡಿದರು. ಆರಾವರ್ಗ ಇಬ್ಬರೂ ಮುಷ್ಟಿಯುದ್ಧ ಮಾಡಬೇಕು, ಗೆದ್ದವಳು ಹರೆಯದವನ ಅರ್ಧಾಂಗಿಯಾಗಬೇಕು. ಮೂರು ಸರ್ತಿ ಮುಷ್ಟಿಯುದ್ಧವಾಯಿತು. ನಾಲ್ಕನೇ ಸರ್ತಿ ಮುಷ್ಟಿಯುದ್ಧ ನಡೆಯಲು ಇಬ್ಬರು ಒಂದು ಬದಿಯಿಂದ ಕಣ್ಣೀರು ಸುರಿಸುತ್ತ ಮತ್ತೊ ಯುದ್ಧ ಮಾಡುತ್ತಿದ್ದಳು. ಕೊನೆಗೆ ಸೋತಳು. ಪುರಾಣದಲ್ಲಿ ಸ್ತ್ರೀಪ್ರಾಪ್ತಿಗಾಗಿ ಹೋರಾಡುವವರು ಶೌರ್ಯ ಪ್ರಕಟ ಮಾಡಿದ ಉಲ್ಲೇಖಗಳಿವೆ. ಈಗಿನ ಯುಗದಲ್ಲಿ ಸ್ತ್ರೀಯರ ಸಂಖ್ಯೆ ಹೆಚ್ಚಾದಾಗ, ಪುರುಷಪ್ರಾಪ್ತಿಗಾಗಿ ಸ್ತ್ರೀಯರು ಶೌರ್ಯ ಪ್ರಕಟ ಮಾಡಬೇಕಾಗಿದೆ!

ಶ್ರೀಮದ್ರಾಮಚಂದ್ರಾಪುರ ಶ್ರೀಸಂಸ್ಥಾನಾಧಿಕಾರಸ್ಥಾನದಿಂದ.

ವೇ॥ ಶಾ॥ ಸಂಪನ್ನರಾದಂಥ ಸಕಲವಿದ್ವನ್ಮಂಡಳಿಯವರಿಗೆ—

ಕಳೆದ ತಾರೀಖ ೨೧ ಮಾಹೆ ಸಪ್ಟಂಬರ ೧೯೩೬ ನೇ ಸೋಮವಾರದ ಕಾನಡಾವೃತ್ತದಲ್ಲಿ ಕೆಲವು ಶಾಸ್ತ್ರನಿಯಮಗಳಿಂದಲೂ, ಶಬಲಸಾರವಾದ ದೃಷ್ಟಾಂತಗಳಿಂದಲೂ, ತೋರಿಸಿದ (ಪ್ರಕಟಿಸಿದ) ‘ತುಳಸೀ ವಿಯೋಗ ವಿಘ್ನಾಸ’ವೆಂಬ ಹೆಸರಿನ ಕಾವ್ಯದ ಮೇಲಿನ ಆಕ್ಷೇಪಗಳನ್ನು ಪರಿಹರಿಸಿಕೊಳ್ಳುವ ಉದ್ದೇಶದಿಂದ ನಿರೂಪಣೆ ಮಾಡಿದ ವಿಷಯಗಳೆಲ್ಲ ಸಕಲರಿಗೂ ವಿದಿತವಾಗಿರುವ ಸಂಗತಿಯೇ ಸರಿಯಷ್ಟೆ.

ಆದರೆ ಈ ಶಾಸ್ತ್ರದ ನಿಯಮಗಳಾಗಲಿ, ಅವುಗಳ ದೃಷ್ಟಾಂತಗಳೇ ಆಗಲಿ, ಈ ಕಾವ್ಯದ ಮೇಲಿನ ಆಕ್ಷೇಪಗಳಿಗೆ ಸಂಬಂಧವಾಗುವದಿಲ್ಲ, ಬೇರೆ ದೃಷ್ಟಾಂತಗಳಿಗೆ ಸಮನ್ವಯವಾಗುತ್ತದೆ ಎಂಬ ಬಗ್ಗೆ ಏನೆಂದೂ, ನಿರೂಪಣೆ ಮಾಡದೆ ಕಾನಡಾ ಧುರೀಣದಲ್ಲಿ ಕಳೆದ ತಾ. ೨೯ ಮಾಹೆ ಸಪ್ಟಂಬರ ೧೯೩೬ನೇ ಮಂಗಳವಾರ ಭಾರತೀಕೃಷ್ಣ ತೀರ್ಥ ರಚಕವಿಯೆಂಬ ಹೆಸರಿನಿಂದ ಒಬ್ಬರು ಪಂಡಿತರು ಪ್ರಕಟಿಸಿರುವ ವಿಷಯಗಳೆಲ್ಲಾ ಸಂಪೂರ್ಣ ಮನನವಾಯಿತು. ಆದಾಗ್ಯೂ ವಿಶೇಷ ಶಾಸ್ತ್ರಾರ್ಥ ವಿಚಾರದಲ್ಲಿ ಬರುವ ಅಶ್ವಿಜ ಬಹುಳ ೫ (ಪಂಚಮಿಯ) ದಿವಸ ಸನ್ನಿಧಾನದ ಮುಂದೆ ನಿರೂಪಣೆ ಮಾಡಿ ಆಕ್ಷೇಪಗಳನ್ನು ಪರಿಹರಿಸಿಕೊಳ್ಳಬೇಕು ಎನ್ನುವ ಬಗ್ಗೆ ಮುಚ್ಚಳದ ಕೋರಿಕೆ ಮೇಲೆ ವಿವರಿಸಿದ ಕಾನಡಾವೃತ್ತದಲ್ಲಿಯೇ ಪ್ರಕಟಿಸಿರುವದು ಸರಿಯಷ್ಟೆ.

ಪರಂತು ಸದರಿ ಬ॥ ೫ (ಪಂಚಮಿಯ) ದಿವಸದ ಅವಧಿಯ ಸ್ಥಾನಗೆಡು ಆ ಬಗ್ಗೆ ಬರುವ ತಾರೀಖ ಬ॥ ೭ (ಸಪ್ತಮಿ) ಯು ಆನುಕೂಲ್ಯಕ್ಕೆ ಸರಿಯಾದ ಅಕ್ಟೋಬರ ತಾರೀಖ ೮ಕ್ಕೆ ಇರಲು. ಕೆಲವು ಶಿಷ್ಯಸಂತತಿಯವರು, ಶ್ರೀ ಶ್ರೀ ಮ. ಸಾನ್ನಿಧಾನದಲ್ಲಿ ಅರಿಕೆಮಾಡಿಕೊಂಡಿದ್ದರಿಂದ ಸದರಿ ಆರಿಕೆಯಂತೆ ಸದರಿ ತಾರೀಖ ೮ರವರೆಗೂ ಉತ್ತ ೩ ದಿವಸ ಪ್ರಯುಕ್ತ, ಕೆಲವು ವಿದ್ವಾಂಸರ ಮುಖ್ಯ, ಈ ಶಿಷ್ಯರ ಶಿಷ್ಯಸಂತತಿಯವರ ಮಹಾಸಭೆಯು ನಡೆಯುವ ಪ್ರಮಾಣಾನ್ತರದಿಂದ ಸದರಿ ದಿವಸ ಧುರೀಣ ಪತ್ರದಲ್ಲಿ ನಿರೂಪಣೆ ಮಾಡಿದ ವಿಷಯಗಳನ್ನು, ಬೇಕಾದ ಪ್ರಮಾಣಗಳೊಡನೆ ಶ್ರೀಮತ್ಸನ್ನಿಧಿ ಮುಂದೆ ಸಮರ್ಥನೆ ಮಾಡಿಕೊಡಬೇಕಾಗಿ ಹಾಲಿ ನಿರೂಪಣೆ ಮಾಡಿ ಕಳಿಸಿದವರಿಗೂ, ಇನ್ನು ಮುಂದೆ ಕಳಿಸಿಕೊಡುವವರಿಗೂ ಕೂಡಾ ಸೂಚಿಸಲಾಗುತ್ತದೆ.

ಪುನಃ ವಿಶೇಷ ಸೂಚನೆಯೇನಂದರೆ—

ಮೇಲೆ ವಿವರಿಸಿದ ಕಳೆದ ೨೯ನೇ ತಾರೀಖಿನ (ಮಂಗಳವಾರದ) ಕಾನಡಾ ಧುರೀಣದ ಸಂಚಿಕೆಯಲ್ಲಿ ಟೀಕೆಯ ಕಲಂ ೫ನೇ ದ್ದಾರದಲ್ಲಿ ವಿವರಿಸಿರುವ ಸಂಗತಿಗಳನ್ನೆಲ್ಲಾ ಸಂಪೂರ್ಣ ಅಭಿಪ್ರಾಯವಾಡಿಕೊಂಡಿದ್ದು ಯಿತು.

ಶ್ರೀ ಸಾಕ್ಷಾನದ ಕಡೆಯಿಂದ ನಿರೂಪಣೆ ಮಾಡಿ ಕಾನಡಾ ವೃತ್ತದಲ್ಲಿ ಪ್ರಕಟಿಸಿರುವ ಶಾಸ್ತ್ರನಿಯಮಗಳನ್ನು, ಮತ್ತೂ ಕೆಲವು ದೃಷ್ಟಾಂತಗಳನ್ನು ಕೂಡಾ ಸಂಪೂರ್ಣ ಅಮೂಲಾಗ್ರವಾಗಿ ಮನನ ಮಾಡಿಕೊಂಡಿರುವ ಧುರೀಣವು, ಮೇಲೆ ವಿವರಿಸಿರುವ ದಿವಸ ನೆರೆಯುವ ಮಹಾಸಭೆಗೆ ತಪ್ಪದೆ ಆಗಮಿಸುವದನ್ನು ಬೆಳಸಿ ಮಾಡಿದ ಟೀಕೆಯನ್ನು ಸಾರ್ಥಕಪಡಿಸಬೇಕಾಗಿ ಮುಂದಾಗಿಯೇ ಸೂಚಿಸಿಯದೆ. ನೆನಪಿರಲಿ.

ಈ ಎಲ್ಲಾ ವಿಷಯಗಳನ್ನೂ ಕೂಡಾ ಕಳೆದ ತಾ. ೨೧ನೇ ಸೋಮವಾರದ ಕಾನಡಾ ವೃತ್ತದಲ್ಲಿ ಸೂಚಿಸಿದಂತೆ ಸಮುಸ್ತರೂ ತಿಳಕೊಳ್ಳಬೇಕು, ಎಂತ ಕೋರುವ,

ಕಸ್ರೀಧನ ಸಂ। ಅಶ್ವೀಜ ಬ॥ ೧॥ ೨, ಶನಿವಾರ ಕೇಶ್ವರ ರಘೂತ್ತಮನ ಮಠ, ಜಿ ॥ ಕಾನಡಾ ತಾ—ಕೊನ್ನಾವರ ಪೋ—ಮಲ್ಲಾಪು—	ಗಂಗಾಧರ ಶಾಸ್ತ್ರಿ, ಪಾರುಪತ್ತಗಾರ. ಶ್ರೀಸಂಸ್ಥಾನ.

ಕಾನಡಾವೃತ್ತ.

ಮಿತಿ ಕ್ರೋಧನ ಸಂ। ಅಶ್ವೀನ ಬ। ೩ಗೆ ಸೋಮವಾರ

ಹೊಸ ಧೋರಣ.

ಇಂದಿಗೆ 'ವೃತ್ತ'ವು ಹೊಸ ಸಂವತ್ಸರದಲ್ಲಿ ಅಡಿಯನ್ನಿಟ್ಟು ವಾಚಕರ ಸೇವೆಗೆ ಬಂದಿರುವದು. ಹೊಸ ವರುಷದಲ್ಲಿ ಉಂಟಾದ ರಾಷ್ಟ್ರಕಾರ್ಯದ ಹೊಸ ಧೋರಣವನ್ನು 'ವೃತ್ತ'ವು ಇಂದಿಗ ಜಾಹೀರುಪಡಿಸುವದು. ಪಾಟನಾದಲ್ಲಿ ಕಳೆದ ತಾ. ೨೪ ೨೫ ನೇಗೆ ಜರುಗಿದ ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಯ ಸಭೆಯಲ್ಲಿ ಉಂಟಾದ ಹೊಸ ಮನ್ವಂತರವನ್ನು ವಾಚಕ ಮಹಾಶಯರೆಲ್ಲರೂ ಗ್ರಹಿಸಿ, ಅದಕ್ಕನುಗುಣವಾಗಿಯಾದರೂ ವರ್ತಿಸಿ ರಾಷ್ಟ್ರಪುರುಷನ ಸಾಮರ್ಥ್ಯವನ್ನು ಅಭಿವೃದ್ಧಿಗೈಯ್ಯಲಿ

ಹೊಸ ಧೋರಣದ ಸಂದೇಶವೇನು? ವಾಚಕ ಮಹಾಶಯರಿರಾ, ಕೇಳಿರಿ. ಕರ್ನಾಟಕ ರಾಷ್ಟ್ರೀಯ ಸಭೆಯಲ್ಲಿ ಮತಾಧಿಕಾರವು ನೂಲಿನ ಮೇಲಿತ್ತು. ೨೦೦೦ ಗಜ ನೂಲನ್ನು ಪೂರೈಸುವವರು ಮಾತ್ರ ರಾಷ್ಟ್ರೀಯ ಸಭೆಯ ಪಟದಮೇಲೆ ದಾಖಲಾಗುತ್ತಿದ್ದರು. ಈ ಯೋಜನೆಯು ಅವ್ಯವಹಾರ್ಯವೆಂದು ಅನೇಕ ರಾಜಕಾರಣಿಗಳು ಆಗಲೇ ಆಕ್ಷೇಪಿಸಿದ್ದರು. ಆದರೂ, ಮಹಾತ್ಮರ ಹಾಗು ದಾಸ-ನೆಹರೂರವರ ಉಪದೇಶದಿಂದ, ಕರಾರುನಾಮೆಯಿಂದ ಮತದಾನದ ಯೋಜನೆಯು ಮಂಜೂರಾಯಿತು. ನೂಲಿನ ಶರ್ತಿಗೆ ಒಳಪಟ್ಟು ಯತ್ನ ಮಾಡಿನೋಡಿ, ಅದು ಅವ್ಯವಹಾರ್ಯವೆಂದು ಪ್ರತ್ಯಕ್ಷ ಸಿದ್ಧವಾದರೆ, ಅದನ್ನು ಬದಲಿಸಬಹುದೆಂದೂ ಆಗಲೇ ಆಶ್ವಾಸನ ದೊರಕಿತ್ತು. ಬೆಳಗಾವಿಯ ರಾಷ್ಟ್ರೀಯ ಸಭೆಯಲ್ಲಿ ಐಕ್ಯಮತ್ಯದ ಠರಾವು ಮಂಜೂರಾದದ್ದು ನಿಜವಾದರೂ ಠರಾವಿನಲ್ಲಿ ಪ್ರತಿಬಿಂಬಿತವಾದ ಐಕ್ಯವು ಅಂತರಂಗದಲ್ಲಿ ಉದ್ಭೂತವಾಗದಿದ್ದದರಿಂದ ನೂಲಿನ ಠರಾವು ಅನುಷ್ಠಾನದಲ್ಲಿ ತರಲು ಅನೇಕರು ಮನಃಪೂರ್ವಕವಾಗಿ ದುಡಿಯಲಿಲ್ಲ. ರಾಷ್ಟ್ರೀಯ ಸಭೆಯಲ್ಲಿ ಠರಾವನ್ನು ಹುಟ್ಟಿಸಿಸಿಂದ ಸ್ವಾಗತೀಕರಿಸಿದ ರಾಷ್ಟ್ರೀಯ ಸಭಾಭಿಮಾನಿಗಳೇ, ರಾಷ್ಟ್ರೀಯ ಸಭೆಯು ಮುಗಿದ ಬಳಿಕ, ನಿರುತ್ಸಾಹಿಗಳಾದರು. ಈ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ಸಭೆಯ ಮತದಾರರ ಸಂಖ್ಯೆಯು ಕ್ರಮವಾಗಿ ಕುಗ್ಗುತ್ತ ನಡೆಯಿತು. ಇಂದಿಗೆ ಪಟದ ಮೇಲೆ ೧೧ ಸಾವಿರ ಸಹ ಮತದಾರರಿರುವದಿಲ್ಲ. ಲಕ್ಷಾವಧಿ ಮತದಾರರೆಲ್ಲಿ? ಈಗಿನ ಸಾವಿರ ಮತದಾರರೆಲ್ಲಿ?

ಈ ಪರಿಸ್ಥಿತಿಯಿಂದ ಮತಾಧಿಕಾರವನ್ನು ಬದಲಿಸುವದು ಸಹಜಪ್ರಾಪ್ತವಾಯಿತು. ಮಹಾತ್ಮರಿಗೂ ಈ ವಿಷಯ ಪುನರಾಲೋಚಿಸುವ ಸಮಯವು ಒದಗಿ ಬಂದಿರುವದೆಂದು ಮನವರಿಕೆಯಾಯಿತು. ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಯು ಪಾಟನಾದಲ್ಲಿ ಸೇರಿ ಸಿಂಧಿನ ಳ ಅಣೆಯ ವರ್ಗಣಿಯ ಹಕ್ಕನ್ನು ಪುನಃ ಪ್ರಸ್ಥಾಪಿಸಿರುವದು ಈ ವಿಷಯ ಬಹಳೇ ಚರ್ಚೆಯಾಯಿತು. ಕೇಸ್ ಪಂಡಿತ ಮೋತಿಲಾಲರವರ ಠರಾವು ಮಂಜೂರಾಗಿ, ರಾಜಕಾರಣಿಗಳ ದೊಡ್ಡದೊಂದು ಆಕ್ಷೇಪವು ದೂರವಾಯಿತು. ರಾಷ್ಟ್ರೈಕ್ಯ ದೃಷ್ಟಿಯಿಂದ ಇದೊಂದು ಮಹತ್ವದ ಕಾರ್ಯವು

ಇನ್ನೊಂದು ಸ್ಥಿತ್ಯಂತರವು ರಾಷ್ಟ್ರೀಯ ಸಭೆಯ ರಾಜಕಾರಣದಲ್ಲಿ ಆವಿರ್ಭವಿಸಿತು. ಬೆಳಗಾವಿಯಲ್ಲಿ ರಾಷ್ಟ್ರೀಯ ಸಭೆಯ ವಿಧಾಯಕ ಕಾರ್ಯಕ್ರಮವನ್ನು ಅಂದರೆ ಖಾದಿ ಪ್ರಚಾರ, ಹಿಂದೂ-ಮುಸಲ್ಮಾನರ ಐಕ್ಯ, ಅಸ್ಪೃಶ್ಯತಾನಿವಾರಣ ಮುಂತಾದ ಸಾತ್ವಿಕ ಉಪಾಯಗಳಿಂದ ನವ್ಯ ರಾಜಕಾರಣವನ್ನು ಮುಂದಿಟ್ಟು ಕಾಯಿದೆ ಕೌನ್ಸಿಲು ಪರರಾಷ್ಟ್ರಗಳಲ್ಲಿ ನಡೆಯುವ ಭಾರತೀಯ ರಾಜಕಾರಣವನ್ನು ಉಪೇಕ್ಷಿಸಿತ್ತು. ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಯು ಸ್ವರಾಜ್ಯ ಪಕ್ಷದ ಧೋರಣವನ್ನು ಮನ್ನಿಸಿ ಸ್ವರಾಜ್ಯ ಪಕ್ಷದ ಧೋರಣವೇ ರಾಷ್ಟ್ರೀಯ ಸಭೆಯ ವರ್ತಿಸಬೇಕಾದ ರೀತಿ, ಈ ಕಾಲದಲ್ಲಿ ಸಮಯೋಚಿತ ಮಾರ್ಗವೆಂದು ಸೂಚಿಸಬಹುದೆಂದೂ ನಿರ್ಣಯಿಸಿದೆ. ಇದರಿಂದ ರಾಷ್ಟ್ರೀಯ ಸಭೆಯು ಅಲಿಪ್ತತೆಯನ್ನು ತ್ಯಜಿಸಿ, ವ್ಯವಹಾರಿಕ ರಾಜಕಾರಣ ರಂಗಸ್ಥಳದಲ್ಲಿ ಅವತೀರ್ಣವಾಗಿದೆ. ಇನ್ನು ಮುಂದೆ ಕಾಯಿದೆ ಕೌನ್ಸಿಲುಗಳಲ್ಲಿ ಪರರಾಷ್ಟ್ರಗಳಲ್ಲಿ ನಡೆಯುವ ಆಧುನಿಕ ರಾಜಕಾರಣವನ್ನೆಲ್ಲ ರಾಷ್ಟ್ರೀಯ ಸಭೆಯು ನಿರೀಕ್ಷಿಸಿ, ಪ್ರಸಂಗಿಕ ಲೋಕಮತವನ್ನೂ ಉಪದೇಶವನ್ನೂ ಪ್ರಚುರಗೊಳಿಸುವದು. ರಾಷ್ಟ್ರೀಯ ಸಭೆಯ ಮೇಲಿನ ದೊಡ್ಡ ಆಕ್ಷೇಪವು ಇದರ ಮೂಲಕ ದೂರವಾಗಿದೆ

ಪಾಟಣಾದಲ್ಲಿ ಸೇರಿದ ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಯ ನಿರ್ಣಯಗಳಿಂದುಂಟಾದ ಸ್ಥಿತ್ಯಂತರವಿದು. ಳ ಆಣೆ ಕೊಡುವವರು ರಾಷ್ಟ್ರೀಯ ಸಭೆಯ ಧ್ಯೇಯವನ್ನು ಮನ್ನಿಸುವವರು ರಾಷ್ಟ್ರೀಯ ಸಭಾಸದರಾಗಲು ಈಗ ಪ್ರತ್ಯವಾಯವೇನಿಲ್ಲ. ಆಧುನಿಕ ರಾಜಕಾರಣವನ್ನು ರಾಷ್ಟ್ರೀಯ ಸಭೆಯು ಕೈಕೊಂಡದ್ದರಿಂದ ಸಮಸ್ತ ಪಕ್ಷಗಳ ರಾಜಕಾರಣಿಗಳೂ ಸೇರಿಕೊಂಡು, ರಾಷ್ಟ್ರೀಯ ಸಭೆಯ ಸಾರದ ಹಿತವನ್ನು ಭಾರತೀಯ ರಾಜಕಾರಣದ ವ್ಯಾಸಪೀಠವನ್ನಾಗಿ ಪರಿಣಮಿಸಲು ಬೇಕಷ್ಟು ಇಂಬು ದೊರಕಿದೆ. ಗಾಂಧಿ-ನೆಹರೂರವರ ಪ್ರೇರಣೆಯಿಂದ, ಆಶೀರ್ವಾದದಿಂದ ಮಹತ್ವದ ಸ್ಥಿತ್ಯಂತರಗಳು ಭಾರತೀಯ ಪ್ರಜೆಗಳ ವಿಮೋಚನೋಪಾಯವೆಂದು ಕೈಕೊಳ್ಳಲ್ಪಟ್ಟಿವೆ. ಉದಾರ ಮತವಾದಿಗಳಿಗೂ, ಸ್ವತಂತ್ರ ಪಕ್ಷದವರಿಗೂ ಹೊಸ ಘಟನೆಯಂತೆ ರಾಷ್ಟ್ರೀಯ ಸಭೆಯಲ್ಲಿ ಸೇರಿಕೊಂಡು ಭಾರತೀಯ ಸ್ವರಾಜ್ಯದ ಆಕ್ರಮಣ ಮಾಡಲು ಬೇಕಷ್ಟು ಅವಕಾಶವಿದೆ. ಸ್ವರಾಜ್ಯ ಪಕ್ಷವು ಸದ್ಯಕ್ಕೆ ರಾಷ್ಟ್ರೀಯ ಸಭೆಯ ರಾಜಕಾರಣದ ಸೂತ್ರಧಾರವಾಗಿದ್ದರೂ ಉದಾರ ಮತವಾದಿಗಳೂ, ಸ್ವತಂತ್ರರೂ ತಮ್ಮ ತಮ್ಮ ಮತಗಳು, ಕಾರ್ಯಗಳು ಪೋಷಕೋದ್ಧಾರಕವೆಂದು ರಾಷ್ಟ್ರೀಯ ಸಭೆಯವರಿಗೆ ಮನಗಾಣಿಸಿದರೆ, ಅವರ ಕಾರ್ಯಧೋರಣವನ್ನು ಲಕ್ಷಿಸಿ, ರಾಷ್ಟ್ರೀಯ ಸಭೆಯು ರಾಜಕಾರಣ ಧೋರಣದಲ್ಲಿ ಬದಲಾವಣೆಗಳನ್ನು ಮಾಡಲು ಸಮರ್ಥವಿದೆ. — ಹಕೆ — ಯಾವಾಗಲೂ ತತ್ಪರವಿದೆ. ಕೌನ್ಸಿಲು ಪ್ರವೇಶ-ಕೌನ್ಸಿಲು ಸನ್ಯಾಸ ಪಕ್ಷಗಳ ವಾದಾಟದಲ್ಲಿ ಮಹಾತ್ಮರಂಥ ಕೌನ್ಸಿಲು ಸನ್ಯಾಸಿಗಳೂ ಕೂಡ ಕೌನ್ಸಿಲು ಪ್ರವೇಶಕರ ಲೋಕಮತಕ್ಕೆ, ಪ್ರತಿಷ್ಠೆಗೆ ತಲೆಬಗ್ಗಿಸಲಿಲ್ಲವೇ? ರಾಷ್ಟ್ರೀಯ ಸಭೆಯಲ್ಲಿ ಸ್ವತಂತ್ರರು ಬರಲಿ, ಉದಾರ ಮತವಾದಿಗಳು ಬರಲಿ, ನೇಮಸ್ತರು ಬರಲಿ, ರಾಜನಿಷ್ಠರೂ ಬರಲಿ; ಬರಬೇಕಾದರೆ ಮಾತ್ರ ಸ್ವರಾಜ್ಯ ಪ್ರಾಪ್ತಿಮಾಡಿಕೊಳ್ಳಬೇಕೆಂಬ ಒಂದೇ ಅಭಿಲಾಷೆಯಿಂದ ಬರಲಿ ಅಂದರೆ ರಾಷ್ಟ್ರೀಯ ಸಭೆಯು ಅವರನ್ನೆಲ್ಲರನ್ನೂ ಸಂತೋಷದಿಂದ, ಆದರದಿಂದ ಬರಮಾಡಿಕೊಂಡು, ಅವರವರ ರಾಜಕಾರಣವನ್ನು ರಾಷ್ಟ್ರೀಯ ಸಭೆಯೊಳಗಿನ ಪ್ರಜೆಗಳಿಗೆ ಮನಗಾಣಿಸಿ ನಡಿಸಲು ಉಪಾಯ ಯೋಜನೆ ಮಾಡಿದೆ. ಯಾರ ಯೋಜನೆಯು ಕಾರ್ಯಕ್ಷಮವೋ ಅದು ರಾಷ್ಟ್ರೀಯ ಸಭೆಯ ಮನವರಿಕೆಯಾಗುವದೋ, ಆ ಯೋಜನೆಯನ್ನು ಎಲ್ಲರೂ ಮತಭೇದಗಳನ್ನೆಲ್ಲ ಹಿಂದೊತ್ತಿ, ಐಕ್ಯಮತ್ಯದಿಂದ ಪುರಸ್ಕರಿಸಿದರಾಯಿತು. ಇದಕ್ಕಾಗಿಯೇ ರಾಷ್ಟ್ರೀಯ ಸಭೆಯು ಮತಾಧಿಕಾರವನ್ನು ಬದಲಿಸಿದೆ, ಕಾರ್ಯಕ್ಷೇತ್ರವನ್ನೂ ರೂಪಾಂತರಿಸಿದೆ. ಅಖಿಲ ಭರತಖಂಡದೊಳಗಿನ ಸಮಸ್ತ ಪ್ರಜೆಗಳೂ ರಾಷ್ಟ್ರೀಯ ಸಭೆಯಲ್ಲಿ ಪ್ರಾದುರ್ಭೂತವಾದ ಸ್ಥಿತ್ಯಂತರವನ್ನು ಲಕ್ಷಿಸಿ, ರಾಷ್ಟ್ರೀಯ ಸಭೆಯಲ್ಲಿ ಸೇರಿಕೊಂಡು ಭಾರತೀಯ ಸ್ವರಾಜ್ಯಪ್ರಾಪ್ತಿಯ ಮಾರ್ಗಕ್ರಮಣ ಮಾಡಲು ಪರಮಾತ್ಮನು ಪ್ರೇರಣೆಯನ್ನೀಯಲೆಂದು ನಾವು ಮನಃಪೂರ್ವಕ ಪ್ರಾರ್ಥಿಸುವೆವು

ಸ್ಫುಟ ಸೂಚನೆಗಳು.

೧. ಬೆಳಗಾವಿಯಲ್ಲಿ ಸೇರಿದ ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯು ಕೌನ್ಸಿಲು ಸನ್ಯಾಸಿ ವಿಧಾಯಕ ಕಾರ್ಯಕ್ರಮ ಪುರಸ್ಕರ್ತರಿಗಾಗಿ ಒಂದು ಹೊಸ ಯೋಜನೆಯನ್ನು ತಯಾರಿಸಿರುವದು. ಅಖಿಲ ಭಾರತೀಯ ನೂಲುಗಾರರ ಸಂಸ್ಥೆ ಎಂಬದೊಂದು ಹೊಸ ಸಂಸ್ಥೆಯನ್ನು ನಿರ್ಮಿಸಿ, ಈ ಸಂಸ್ಥೆಯ ಕೈಕೆಳಗೆ ಖಾದಿಯ ಪ್ರದರ್ಶನದ ಸಮಸ್ತ ಅಧಿಕಾರವು ವಹಿಸಲ್ಪಟ್ಟಿದೆ ೨೦೧೦ ಗಜ ನೂಲು ಪೂರೈಸುವವರು ಈ ಸಂಸ್ಥೆಯ ಸಭಾಸದರಾಗಬಹುದು. ಈ ಸಂಸ್ಥೆಯ ನಾಯಕರು ಮಹಾತ್ಮರೆಂದು ಹೇಳಬೇಕಾಗಿಲ್ಲ. ಈ ಸಂಸ್ಥೆಯ ಸಭಾಸದರಾಗಲಿಕ್ಕೆ ತಿಂಗಳಿಗೆ ಸ್ವಂತ ನೂತ ೧೦೦೦ ಗಜ ಅಥವಾ ವರ್ಷಕ್ಕೆ ೨೦೦೦ ಗಜ ನೂಲು ಕೊಟ್ಟರಾಯಿತು. ಈ ಸಂಘದ ಸಭಾಸದರು ರಾಷ್ಟ್ರೀಯ ಸಭೆಯ ಸಭಾಸದರೆಂದು ಎಣಿಸಲ್ಪಡುವರು. ಇದೆಂಥ ದೊಡ್ಡ ಅಧಿಕಾರವು ಈ ಸಂಸ್ಥೆಗೆ ಕೊಡಲ್ಪಟ್ಟಿದೆ. ಈ ಸಂಸ್ಥೆಯವರು ಖಾದಿಯ ಪ್ರಸಾರ ಕಾರ್ಯವನ್ನು ಮನಸಪಟ್ಟು ಕೈಕೊಂಡು ದೇಶದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲಿಚ್ಛಿಸುವರು. ಕೌನ್ಸಿಲು ಸನ್ಯಾಸಿ ರಾಜಕಾರಣಿಗಳಿಗೆ ಈ ಸಂಸ್ಥೆಯಿಂದ ದೇಶಕಾರ್ಯವನ್ನು ನೆರವೇರಿಸಲು ದೊಡ್ಡ ಅವಕಾಶ ದೊರಕಿದೆ. ಕೌನ್ಸಿಲು ಪ್ರವೇಶಕರೊಡನೆ ಕಲಹ ಹೂಡಿ ನಿರರ್ಥಕ ವಾದ ಹೂಡದೆ, ಸುಮ್ಮಗೆ ಸ್ವಂತ ಆಲೋಚನೆಯಂತೆ ಕೌನ್ಸಿಲು ಸನ್ಯಾಸಿಗಳು ಖಾದಿಯ ಪ್ರಸಾರ ಮಾಡಿ ರಾಷ್ಟ್ರಪುರುಷನ ಸೈನ್ಯ ಬೆಳಿಸಿ, ತಮ್ಮ ಮಹತ್ವ ಕಾರ್ಯಕ್ಷಮತೆಯನ್ನು ಪ್ರತ್ಯಕ್ಷವಾಗಿ ಸಿದ್ಧಪಡಿಸಲಿಕ್ಕೆ ಇದೊಂದು ಸುಸಂಧಿಯು ಪ್ರಾಪ್ತವಾಗಿದೆ. ಅಖಿಲ ಪ್ರಜೆಗಳೂ ಈ ಕಾರ್ಯದಲ್ಲಿ ನೆರವಾಗಿ ಮಹಾತ್ಮರ ಖಾದಿ ಪ್ರಸಾರದ ಆಶೆಯನ್ನು ಸಂಪೂರ್ಣವಾಗಿ ಪೂರೈಸಬೇಕೆಂದು ನಮ್ಮ ಬಿನ್ನಹ.

---

೨. ಈ ವಾರದಲ್ಲಿ ನಮ್ಮ ಕುಮಟೆಯಲ್ಲಿ ದೇಸಾಯಿ ಹಾಗು ಮುಲಕಿ ಖಾತೆಯ ಅಧಿಕಾರಿಗಳು ಬಂದಿರುವರು. ಮುಲಕಿ ಖಾತೆಯ ರಾ| ಬ| ಕೊಯಿಮತ್ತೂರರವರು ಬಂದು ೨-೩ ದಿನಗಳಾದವು. ಕಲೆಕ್ಟರ ಮಿ| ಭಿಡೇಯವರು ಇಂದು ಬಂದು ನಾಳೆ ಹೋಗುವರು. ದೇಸಾಯಿ ಖಾತೆಯ ಡೆಪ್ಯುಟಿ ಡಾಯರೆಕ್ಟರರಾದ ಮಿ| ಗೋಖಲೆಯವರೂ, ಡಾಯರೆಕ್ಟರರಾದ ಡಾ| ಮೆನ್‌ರವರೂ ನಿನ್ನೆ ಬಂದಿರುವರು. ಡಾ| ಮೆನ್‌ರವರು ನಿನ್ನೆ ಇಲ್ಲಿಯ ದೇಸಾಯಿ ಪ್ರಯೋಗ ಹೊಲದೊಳಗಿನ ಪ್ರಯೋಗಗಳನ್ನು ಕಣ್ಣಾರೆ ಕಂಡರು. ಅವರ ಸನ್ಮಾನಕ್ಕೆ ಒಂದು ಸಭೆಯೂ ಆಯಿತು. ಈ ಸಭೆಯ ಹಕೀಕತವನ್ನು ನಾವು ಇನ್ನೊಂದೆಡೆಯಲ್ಲಿ ಕೊಟ್ಟಿರುವೆವು. ಡಾ| ಮೆನ್‌ರವರ ಪರಿಚಯವನ್ನು ನಾವು ವಾಚಕರಿಗೆ ಹಿಂದೇ ವಾಕ್ಯದಿಂದ ಮಾಡಿಕೊಡುವೆವು. ಪ್ರಜಾಹಿತಕ್ಕಾಗಿ, ಪ್ರಜಾಹಿತವಾಗದೇ ಕೆಂದು ತಳ್ಮಳಗೊಳ್ಳುವ ಅಧಿಕಾರಿಗಳ್ಯಾರಾದರೂ ಇದ್ದರೆ, ಅವರು ಡಾ| ಮೆನ್‌ರೇ ಎಂದು ನಾವು ಎದೆತಟ್ಟಿ ಹೇಳುವೆವು; ಇಷ್ಟು ಅವರ ಅಂತಃಕರಣವು ನಿರ್ಮಲವಿದೆ. ಅಂತೆಯೇ ಇವರು ನಿನ್ನಿನ ಸಭೆಯಲ್ಲಿ, ಜನರೆಲ್ಲರೂ ಸುಖದಿಂದಿದ್ದರೆ, ಸುಸ್ಥಿತಿಯಲ್ಲಿದ್ದರೆ ಸರಕಾರಕ್ಕೂ ಲಾಭವಿದೆಂದು ಹಿತ್ತಿ ಹೇಳಿದರು. ದೇಸಾಯಿಗಾರರಿಗೆ ದೇಸಾಯಿ ಸಾಮುಗ್ರಿಗಳನ್ನು ಸ್ವಲ್ಪ ಬಡ್ಡಿದರದಿಂದ ಪೂರೈಸಿ ಅವರು ಸ್ಥಿತಿವಂತರಾದರೆ, ಸರಕಾರದ ಶಿರ್ವೆಯೂ, ಇತರ ಕರಗಳೂ ಕಷ್ಟವಿಲ್ಲದೆ ವಸೂಲಾಗುವವೆಂದು ಡಾ| ಮೆನ್‌ರವರ ಅಭಿಪ್ರಾಯ. ಪಟ್ಟಣದವು, ಸರಕಾರಿ ಅಧಿಕಾರಿಗಳು ಲಕ್ಷದಲ್ಲಿಡತಕ್ಕದ್ದು. ದೇಸಾಯಕ್ಕೆ ತಗಲುವ ಗೊಬ್ಬರ-ಸೊಪ್ಪು ಇತ್ಯಾದಿಗಳನ್ನು ಉಚಿತವಾಗಿ ಕೊಂಡರೆಯಲ್ಲದೆ ದೇಸಾಯಿಗಾರರಿಗೆ ಪೂರೈಸಿದರೆ, ದೇಸಾಯಿಗಾರರು ಪೈರು ಬೆಳಿಸಿ ಕೃತಜ್ಞತೆಯಿಂದ ರಂಜಾರ್ಥವನ್ನು ರಾಜನಿಗೆ ತೆರದೆ ಬಿಡುವರೇ?

---

೩. ಇದೇ ಸಮಯ ನಮ್ಮ ಮುಲಕಿ ಖಾತೆಯ ಧೋರಣದ ಕುರಿತು ನಾಲ್ಕು ಮಾತು ಬರೆಯಬೇಕಾಗಿದೆ. ಮೊನ್ನೆ ಕವಿನಾಗೆ ಇಲ್ಲಿಯ ತಾಲೂಕ ಕಚೇರಿಯಲ್ಲಿ ಅಣೆವಾರಿಯ ಕಮೀಟಿ ಕೂಡಿತ್ತು. ಈ ಕಮಿಟಿಯ ಘಟನೆಯ ಕುರಿತು ನಾವು ಈ ಮೊದಲೇ ವಾಚಕರಿಗೆ ಅರುಹಿದೆವು. ಈ ಸಭೆಯಲ್ಲಿ ರಾ| ಬ| ಕೊಯಿಮತ್ತೂರರು ಆಡಿದ ಕೆಲವು ಸಂಗತಿಗಳ ವಿಷಯ ಮಗೆ ಇಂದಿಗೆ ವಿಮರ್ಶಿಸಬೇಕಾಗಿದೆ. ಸ್ಥಳಗಳು ಬಂಜರು ಬಿದ್ದಲ್ಲಿ ಅಥವಾ ದೇಸಾಯಿಗಾರರ ಅಜಾಗ್ರತೆಯಿಂದ ಬೆಳೆ ನಷ್ಟವಾದಲ್ಲಿ ಅದನ್ನು ಅಣೆವಾರಿಯ ಸಮಯ ಕಮಿಟಿಯವರು ಆಲೋಚಿಸಲಾರರೆಂದು ಸ್ಪಷ್ಟವಾಗಿ ಹೇಳಿ, ನೆರೆಹಾವಳಿ, ಬಿಸಿಲು ತಾಪ ಇತ್ಯಾದಿ ಸೃಷ್ಟಿದೇವತೆಯ ಕೋಪದಿಂದ ಬೆಳೆ ನಷ್ಟವಾದರೆ, ಅಣೆವಾರಿ ಕಮಿಟಿಯವರು ಆ ಕುರಿತು ಸಹಾನುಭೂತಿ ಪೂರ್ವಕವಾಗಿ ಪರ್ಯಾಲೋಚಿಸುವರೆಂದರು. "ದೇಸಾಯಿಗಾರರ ಅಜಾಗ್ರತೆ," ಎಂಬ ಶಬ್ದದ ಅರ್ಥವು ನಮಗೆ ತಿಳಿಯದು. ಯಾವನೇ ಒಕ್ಕಲಿಗನು ಬುದ್ಧ್ಯಾ ಅಜಾಗ್ರತೆಮಾಡಿ ಬೆಳೆಯನ್ನು ಎಂದೂ ನಷ್ಟಪಡಿಸಿಕೊಳ್ಳಲಾರನು. ಯಾಕಂದರೆ, ಇದರೊಳಗೆ ಆತನ ಸ್ವಾರ್ಥವೇನಿಲ್ಲ. ಮೂಗು ಕೊಯ್ದುಕೊಂಡು ಪರರಿಗೆ ಅಪಶಕುನ ಮಾಡುವ ದುರ್ಬುದ್ಧಿಯನ್ನು ಆತನು ಎಂದೂ ಕಲಿಯಲಾರನು. ಸರಕಾರಕ್ಕೆ ಕೊಡತಕ್ಕ ಶಿರ್ವೆಯನ್ನು ತಪ್ಪಿಸಲು ತನ್ನ ಹೆಂಡರು ಮಕ್ಕಳನ್ನು ಉಪವಾಸ ಕೆಡಹುವ ಆತ್ಮಘಾತಕ ಉಪಾಯವನ್ನು ಆತನು ಎಂದೂ ಯೋಜಿಸುವನೇ? ಇದು ಮಾನವ ಸ್ವಭಾವಕ್ಕೆ ಎಂದೂ ಸರಿಹೋಗುವದಲ್ಲ. ಬೆಳೆಯು ನಷ್ಟವಾದರೆ ಅಜಾಗ್ರತೆಯಿಂದ ನಷ್ಟವಾಗದೆ ನಿರುಪಾಯದಿಂದ ಅಪರಿಹಾರ್ಯ ಕಾರಣಗಳ ಮೂಲಕ ನಷ್ಟವಾಗಿರಬೇಕೆಂದು ರಾವಬಹಾದ್ದೂರರೂ ಅಣೆವಾರಿ ಕಮಿಟಿಯವರೂ ಆಲೋಚಿಸಿ, ಅವರಿಗೂ ಅವಶ್ಯವಿದ್ದಲ್ಲಿ ಶಿರ್ವೆ ಮಾಫಿ-ತಹಕೂಬಿಗಳನ್ನಿತ್ತು ನೆರವಾದರೆ, ಬಡರೈತರಿಗೊಂದು ಉಪಕಾರವಾಗುವದು.

---

೪. ಭೂಮಿ ಬಂಜರು ಬಿದ್ದಲ್ಲಿ ಪ್ರಜೆಗಳಿಗೆ ನೆರವಾಗದಿರುವದು ಇದೊಂದು ದೊಡ್ಡ ತಪ್ಪು. ನೂರಾರು ರೂಪಾಯಿಗಳನ್ನು ಕೊಟ್ಟು ಕ್ರಯಕ್ಕೆ ಕೊಂಡ ಆಸ್ತಿಯನ್ನು ಪ್ರಜೆಗಳು ಉಪಾಯವಿದ್ದಲ್ಲಿ ಎಂದಾದರೂ ಬಂಜರು ಕೆಡಹುವರೇ? ಬಂಜರು ಬೀಳಲಿಕ್ಕೆ ಭೂಮಿಯ ಪರಿಸ್ಥಿತಿಯು ಕಾರಣವಾಗಿರಬೇಕೆಂದ. ಯಾರಾದರೂ ಹೇಳುವರು ಭೂಮಿಯ ಸ್ಥಿತಿಯನ್ನು, ಅವುಗಳಿಗೊದಗುವ ಅಡಚಣಿಗಳನ್ನು ವಿಚಾರಿಸಿ, ಅವನ್ನು ಸಾಗುಮಾಡಲು ಅನುಕೂಲ ಮಾಡಿಕೊಡುವದು ಪ್ರಜಾಪಕ್ಷದ ಸರಕಾರದ ಕರ್ತವ್ಯವಲ್ಲವೇ? ಸರಕಾರಕ್ಕೆ ಶಿರ್ವೆಯ ಲುಕ್ಸಾನು ಮಾಡಬೇಕೆಂದು ಯಾರೂ ಸ್ವತಃ ಭೂಮಿಗಳನ್ನು ಬಂಜರು ಕೆಡಹುವದಿಲ್ಲ. ಬಂಜರು ಬಿದ್ದ ಭೂಮಿಗೆ ಶಿರ್ವೆ ತಹಕೂಬಿ ಸಿಗದೆಂದು ಸರಕಾರದ ಧೋರಣವಾದರೆ, ಅದರಂತೆ ಕೃತಿಯಾದರೆ ಬಂಜರುಬಿದ್ದ ಭೂಮಿಗಳು ೪-೫ ವರ್ಷಗಳಲ್ಲಿ ಲಿಬಹುಸ್ಟ್ಟಿಗೆ ಸಾಗು ಆಗದಿದ್ದೀತು. ಯಾಕಂದರೆ, ಸರಕಾರವೇ ಶಿರ್ವೆಯ ವಸೂಲಿಯಾಗಬೇಕೆಂದು ಬಂಜರ ಬಿದ್ದ ಸ್ಥಳಗಳ ಸ್ಥಿತಿಯನ್ನು ವಿಚಾರಿಸಿ, ತಕ್ಕ ಉಪಾಯಯೋಜನೆಯನ್ನು ಮಾಡುವದು. ಪ್ರಜೆಗಳೂ ತಮ್ಮ ಸುಸ್ಥಿತಿಯಾಗಲು ಸರಕಾರಕ್ಕೆ ನೆರವಾಗುವದು. ಸರಕಾರವೂ, ಪ್ರಜೆಗಳೂ ಸಾಹಚರ್ಯ ಮಾಡಿದ ಬಳಿಕ, ಯಾವ ಕಾರ್ಯವು ತಾನೇ ಸಾಧಿಸದು? ಈಗಿನಂತೆ ಬಂಜರು ಹಾಕಿದ ಜವಾಬದಾರಿಯನ್ನು ಪ್ರಜೆಗಳ ಮೇಲೆ ಹೊರಿಸುವದರಿಂದ ಸರಕಾರವು ತಟಸ್ಥ ನಿಂತು ಪ್ರಜೆಗಳಿಗೇ ಈ ಕುರಿತು ಯತ್ನ ಮಾಡಬೇಕೆನ್ನುತ್ತದೆ. ಸರಕಾರದ ಸಹಾಯದ ಹೊರತು, ಸಾಮಾನ್ಯ ಪ್ರಜೆಗಳು ಏನು ಮಾಡಬಲ್ಲರು? ಶಿರ್ವೆಯು ಹಪ್ತೆಬಂದಿಯಂತೆ ವಸೂಲಾಗಹತ್ತಿದರೆ ಸರಕಾರಕ್ಕೂ ಬಂಜರು ಸ್ಥಳಗಳ ವಿಷಯ ಉಪಾಯ ಯೋಜನೆ ಮಾಡಲು ಕಳಕಳವಾಗುವದಿಲ್ಲ ಆದ್ದರಿಂದ, ಸರಕಾರವು ಬಂಜರು ಸ್ಥಳಗಳಿಗೂ ಶಿರ್ವೆ ತಹಕೂಬಿಯಾಗುವಂತೆ ವ್ಯವಸ್ಥೆ ಮಾಡಿ ಅವು ಬಂಜರು ಬೀಳುವ ಕಾರಣವನ್ನು ಹೇಳುವಲ್ಲಿ ಅಧಿಕಾರಿಗಳಿಂದ ತಿಳಕೊಂಡು ಪ್ರಜೆಗಳಿಗೆ ಪ್ರತಿಫಲ ಸಿಗುವಂತೆ ವ್ಯವಸ್ಥೆ ಮಾಡಬೇಕು. ಯಾಕಂದರೆ, ಡಾ| ಮೆನ್‌ರವರು ನುಡಿದಂತೆ, ಪ್ರಜೆಗಳು ಸೌಖ್ಯದಿಂದಿದ್ದರೆ, ಸರಕಾರಕ್ಕೆ ಸೌಖ್ಯವಲ್ಲವೇ?

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದಲ್ಲಿ ಮಳೆ ಸ್ವಲ್ಪ ಸ್ವಲ್ಪ ಹನಿಸಿತು. ಬೆಳೆಯು ಬಿಸಿಲು ತಾಪದಿಂದ ಬಾಡುತ್ತಿದೆ. ಕೋಡಕಣಿ-ಮೂರೂರ ಗ್ರಾಮಗಳಲ್ಲಿ ಮಳೆಬಿದ್ದ ಸುದ್ದಿಯಿದೆ. ಧಕ್ಕನೆ ಮಳೆನಿಂತು, ಎಲ್ಲ ಬರುವಾಗ ಗಾಳಿ ಮುರಿಯಿತೆಂಬಂತೆ ಅವಸ್ಥೆಯಾಗಿದೆ. ನೇಯು ಮೂಲಕ ಅನೇಕ ಗ್ರಾಮಗಳೊಳಗೆ ತಡವಾಗಿ ಬೀಜ ಬಿತ್ತಲಾಯಿತು. ಈಗ ಮಳೆಯಿಲ್ಲ!

ಕೆರವಳ್ಳಿಯಲ್ಲಿ ಹಿಡಿದ ಜುಗಾರ ಮಂಡಳಿ ಕಂಪನಿಯು ಸ್ವತವೆಂದು ಆರೋಪಿಗಳಿಗೆಲ್ಲ ಮೆಜಿಸ್ಟ್ರೇಟರು ಬಿಟ್ಟು ಕೊಟ್ಟಿರುವರು.

ಶ್ರೀಮಧ್ವಜಯಂತಿಯ ಉತ್ಸವವು ಶನಿವಾರ ಸುಮುಹೂರ್ತದಲ್ಲಿ ಶ್ರೀ ಮನ್ಮಧ್ವಾಚಾರ್ಯರ ಧ್ವಜಚಿತ್ರದ ಮೆರವಣಿಗೆ ಇತ್ಯಾದಿ ಸಂಭ್ರಮಗಳಿಂದ ವಾಡಿಕೆಯಂತೆ ಸಾಂಗವಾಗಿ ನೆರವೇರಿತು.

ರಾವಬಹಾದ್ದೂರ ವ್ಹಿ. ವ್ಹಿ. ಕಲ್ಯಾಣಪುರಕರ, ಎಮ್. ಬಿ. ಬಿ. ಎಸ್, ಡಿ.ಟಿ. ರವರು ಇಲ್ಲಿ 'ನವಜೀವನ' ವೆಂಬ ಚಿಕಿತ್ಸಾಲಯವನ್ನು ಹೊರಡಿಸಿರುವರು. ವಿಜಯಾದಶಮಿಯ ಸುಮುಹೂರ್ತದಲ್ಲಿ 'ನವಜೀವನ' ದ ಉದ್ಘಾಟನವಾಯಿತು. ಊರ ಸದ್ಗೃಹಸ್ಥರು ನಿಮಂತ್ರಣ ಮೇರೆಗೆ ಸಮಾರಂಭಕ್ಕೆ ಚಿತ್ತೈಸಿದ್ದರು.

ಮಹಾತ್ಮರು ಇದೇ ಬರುವ ನವಂಬರ ತಿಂಗಳಿನಲ್ಲಿ ಕರ್ನಾಟಕಕ್ಕೆ ಅನುಗ್ರಹಿಸುವರು. ನಮ್ಮ ಜಿಲ್ಲೆಯಲ್ಲಿ ಸಂಚರಿಸುವ ವಿಚಾರವಿರುವದಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಅಧ್ಯಕ್ಷರು ಜಾಹೀರಪಡಿಸಿರುವರು. ಮಹಾತ್ಮರ ದರ್ಶನಲಾಭವನ್ನು ಕೊಳ್ಳಲು ಅವರಿಗೆ ಪರಮ ಪ್ರಿಯವಾದ ವಿಧಾಯಕ ಕಾರ್ಯಕ್ರಮವನ್ನು ಜಿಲ್ಲಾ ಪ್ರಜೆಗಳು ಕೈಕೊಳ್ಳಲಿ.

ಕಳೆದ ಅಕ್ಟೋಬರ ೨ನೇ ತಾರೀಖು ಗಾಂಧಿ ಜನ್ಮದ ಪ್ರಯುಕ್ತ, ಅಂದು ೯ ಘಂಟೆಗೆ ಕಾಸನಾಕ್ಷಿ ದೇವಸ್ಥಾನದಲ್ಲಿ ಕಾಂಗ್ರೆಸ್ ಪ್ರೇಮಿಗಳು ಸೇರಿ ಮಹಾತ್ಮರಿಗೆ ದೇಶೋದ್ಧಾರಕ್ಕಾಗಿ ಆಯುರಾರೋಗ್ಯವನ್ನೀಯಲು ಭಗವಂತನಲ್ಲಿ ಪ್ರಾರ್ಥಿಸಿದರು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಡೆಯಿಂದ ಇಲ್ಲಿ ಬಿಟ್ಟು ಕಳಿಸಿದ ವಾಡಲು ಬಂದ ಶ್ರೀ ಜೋಗಳೇಕರರು ಖಾದಿಯ ಪ್ರಚಾರ ವಿಷಯ ಬೇಕಾದ ಮಾಹಿತಿಯನ್ನು ಕಾವ್ಯ ಪೂರೈಸುತ್ತೇವೆಂದು ಹೇಳಿ ಖಾದಿಯ ಪ್ರಚಾರ ಮಾಡಲು ಸಭಿಕರಿಗೆ ಉತ್ತೇಜಿಸಿದರು.

ಮೊನ್ನೆ ೩ನೇ ತಾರೀಖಿಗೆ ಇಲ್ಲಿಯ ತಾಲೂಕ ಕಚೇರಿಯಲ್ಲಿ ಒಂದು ಸಭೆಸೇರಿತ್ತು. ಪ್ರಾಂತ ಆಫೀಸರ ರಾ|ಬ| ಕೋಯಿಮುತ್ತೂರರವರು ಅಧ್ಯಕ್ಷರಾಗಿದ್ದರು. ಬೆಳೆಯ ಅಣೆವಾರಿಯನ್ನು ನಿಶ್ಚಯಿಸಲು ಮುಖಂಡರನ್ನು ಸಭಿಕರಿಗೆ ಆರಿಸಿಕೊಡಬೇಕೆಂದು ಹೇಳುವಾಗ, ಅಣೆವಾರಿ ಕಮಿಟಿಯು ಬಂದುದುಬಿದ್ದ ಹಾಗು ಗೈತರ ಅಜಾಗ್ರತೆಯಿಂದೊದಗಿದ ನಷ್ಟವನ್ನು ವಿಚಾರಿಸದೆ, ನೆರೆಹಾವಳಿ ಇತ್ಯಾದಿ ದೈವದುರ್ವಿಲಾಸದಿಂದ ರೈತರಿಗೊದಗಿದ ನಷ್ಟವನ್ನು ವಿಚಾರಿಸಿ ಅಣೆವಾರಿಯನ್ನು ನಿಶ್ಚಯಿಸಿ, ಯುಕ್ತ ಕಂಡಲ್ಲಿ ತೀರ್ವೆ ಮಾಫಿ ಶಫಾರಸು ಮಾಡುವದೆಂದರು. ಹೋದ ವರುಷ ಕೆಲವು ಗ್ರಾಮಗಳಲ್ಲಿ ಕೊಟ್ಟ ತಹಕೂಬಿಯ ವಸೂಲಿಯು ವಿಷಯವೂ ವಿಚಾರವಾಗುವದೆಂದರು. ಬಳಿಕ ರಾ| ತಿಮ್ಮಣ್ಣಾ ರಾಮುಹಗಡೆ, ವರಸಿಂಹರಾವ ದೀವಗಿ, ಜಿ. ಆರ್. ಮಾಸೂರ ಇವರ ಚುನಾವಣೆಯಾಯಿತು. ಬಳಿಕ ಸಭೆಯು ವಿಸರ್ಜನವಾಯಿತು. ಮಾರನೇ ದಿನ ಪ್ರಾಂತ ಆಫೀಸರರು ಕೆಲ್ಪಕಾವರ್, ದೇವಳಗರ್ಬುನಿ ಆಕ್ಕಸಾಲೆಗೆ ಬೆಳೆ ನೋಡಲು ಹೋಗಿದ್ದರು.

ನಿನ್ನೆ ಸಾಯಂಕಾಲ ೩ ಘಂಟೆಗೆ ಇಲ್ಲಿಯ ಬೇಸಾಯ ಪ್ರಯೋಗ ಹೊಲದ ಪ್ರಯೋಗಗಳ ನಿರೀಕ್ಷಣೆಯಾಯಿತು. ಡಾಯರೆಕ್ಟರ ಡಾ|| ಮೆನ್, ಡಾ|| ಡಾ|| ವಿ|| ಗೋಖಲೆ ಇತ್ಯಾದಿ ಅಧಿಕಾರಿಗಳೂ, ಊರವರೂ ಹೊಲದಲ್ಲಿ ಹೋಗಿ ಪ್ರಯೋಗಗಳನ್ನು ನೋಡಿ ಬಂದರು. ಬಳಿಕ, ಪ್ರಯೋಗ ಹೊಲದ ಕಚೇರಿಯಲ್ಲಿ ಊರವರು ಸಭೆಸೇರಿದರು. ಡಾ|| ಮೆನ್‌ರು ಅಧ್ಯಕ್ಷರಿದ್ದರು. ಎಸ್ಟೇಟ್‌ದಲು ಶಿಗ್ಗಾಂವದ ರಾ|| ರಾಮಕೃಷ್ಣ ಹೆಗಡೆಯವರು ಬೇಸಾಯ ಪ್ರಯೋಗ ಹೊಲದಿಂದ ಉಂಟಾದ ಲಾಭಗಳನ್ನು ವಿವರಿಸಿದರು. ಪ್ರಯೋಗ ಹೊಲದವರು ಕೊಟ್ಟ ಕಬ್ಬಿನ ಬೀಜ ಬಹಳೇ ಉಪಯೋಗವಾಯಿತೆಂದರು. ಆದರೆ, ಅವ್ರ ನಾಮುರುತ್ತ ಅದಲ್ಲಿ ಸ್ಥಳಿಕ ಒಡಿಗರಿಗೆ ಸರಿ ಮಾಡಲು ಬರುವದಿಲ್ಲೆಂದರು. ಬೀಜದ ಕೊರತೆಯಿಂದ ದನಗಳ ಸಂತತಿಯು ಬೆಳೆಯುತ್ತಿದ್ದದರಿಂದ, ಬೀಜದ ಎತ್ತನ್ನು ಕಳಿಸಬೇಕೆಂದರು. ರಾ| ದೀವಗಿ ನರಸಿಂಗರಾಯರು ಕೆಲವು ಅನುಭವಗಳನ್ನು ಹೇಳಿದರು. ಮಾಣಿಕೆರೆ ರಾ| ವಿಷ್ಣು ರಾಮಭಟ್ಟರು ಅಪ್ರಿಯ ಸತ್ಯ ಸಂಗತಿಗಳನ್ನಿಷ್ಟು ವಿನಂತಿಸಿದರು. ಗೊಬ್ಬರ, ರೆಂಟೆ ಗಳ ಉಪಯೋಗದಿಂದ ಬೇಸಾಯಗಾರರಿಗೆ ಲಾಭವಾಗುವದಾಗಿದೆ, ಆದರೆ, ಅವನ್ನು ಪೂರೈಸಿಕೊಳ್ಳಲು ಸ್ವಲ್ಪ ಬುದ್ಧಿಯಿಂದ ಹಣದ ಪೂರೈಕೆಯಾಗಬೇಕು. ಈಗಿನ ಸಹಕಾರಿ ಸಂಘಗಳಲ್ಲಿ ಹಣ ಕೊಳ್ಳಹೋದರೆ ಬಡ್ಡಿ ತೆರಲಿಕ್ಕೆ ಆಸ್ತಿಯನ್ನು ಮಾರಬೇಕಾಗುವದೆಂದರು. ಬೇಸಾಯಗಾರರಿಗೆ ಹಣ ಪೂರೈಕೆಯ ವಿಚಾರವಾಗದೆ, ಈ ಪ್ರಯೋಗ ಹೊಲಗಳನ್ನು ನಡೆಸುವದು ನಿರರ್ಥಕವೆಂದೂ ಇಂಥ ಪ್ರಯೋಗಗಳಿಂದ ಬೇಸಾಯಗಾರರಿಗೆ ಏನೂ ಪ್ರಯೋಜನವಿಲ್ಲೆಂದರು. ಡಾ| ಮೆನ್‌ರವರು ಸಮಾರೋಪ ಮಾಡುವಾಗ ಅಂತಃಕರಣಪೂರ್ವಕ ನಾಲ್ಕು ಮಾತು ಆಡಿದರು. ಬೇಸಾಯಗಾರರಿಗೆ ಬೇಸಾಯ ಸಾಮುಗ್ರಿಗಳನ್ನು ಪೂರೈಸಲು ಸರಕಾರವು ಅರ್ಥ ಬಂಡವಲನ್ನು ಪೂರೈಸುವದಲ್ಲದೆ ಸ್ವಲ್ಪ ಬಡ್ಡಿಯ ದರ ಬೀಳುವಂತೆ ಉಪಾಯಯೋಜನೆ ಮಾಡಬೇಕಾಗಿಯೂ, ಅವರಿಗ ಹುಟ್ಟುವಳಿಯಾದರೆ, ಅವರು ಸ್ಥಿತಿವಂತರಾಗಿದ್ದರೆ, ಸರಕಾರಕ್ಕೆ ತೀರ್ವೆ ಮುಂತಾದ ರಾಜಾಭರ್ತಿ ತೊಂದರೆಯಲ್ಲದೆ ಸಿಗುವದೆಂದೂ, ಪ್ರಜೆಗಳು ಸುಖಿಯಿರಬೇಕೆಂದು ತಮ್ಮ ಆಕಾಂಕ್ಷೆಯಿರುವದೆಂದೂ ಮಾತಾಡಿದರು. ಡಾಕ್ಟರರ ನುಡಿಗಳನ್ನು ಕೇಳಿ, ಇಂಥ ಲೋಕಹಿತಕಾರಿ ಅಧಿಕಾರಿಯ ದರ್ಶನವಾದಬಗ್ಗೆ ಜನರಿಗೆ ಅತ್ಯಾನಂದವಾಯಿತು. ಇಂಥವರು ಅಧಿಕಾರಿಗಳಿದ್ದರೆ ಪ್ರಜೆಗಳಿಗೆ ಬಹಳ ಸುಖವಾಗುವದು. ಡಾಕ್ಟರ ಮೆನ್‌ರವರು ಈ ಹೊತ್ತು ಶಿರಸಿಗೆ ಹೋಗಿ ನಾಳೆ ಬೆಳಿಗ್ಗೆ ಶಿರಸಿಯಿಂದ ಹುಬ್ಬಳ್ಳಿಗೆ ತೆರಳುವರು.

ಹೊಸ ಮ್ಯುನಿಸಿಪಾಲಿಟಿಯ ಸಾಧಾರಣ ಸಭೆಯು ಕಳೆದ ೨ನೇ ತಾರೀಖಿಗೆ ಮ್ಯುನಿಸಿಪಾಲಿಟಿಯ ಸಭಾಮಂದಿರದಲ್ಲಿ ಕೂಡುವದಿತ್ತು. ಕೋರಂ ಕೂಡದಿದ್ದದರಿಂದ ಸಭೆ ಸೇರಲಿಲ್ಲ.

ನಿನ್ನೆಯಿಂದ ಇಲ್ಲಿಯ ಗಿಬ್ಸ ಹ್ಯಾಸ್ಕೂಲಿನಲ್ಲಿ ವಾರ್ಷಿಕ ಸಮ್ಮೇಲನಕ್ಕೆ ಪ್ರಾರಂಭವಾಗಿದೆ. ರಾ| ಬ| ಕಲ್ಯಾಣಪೂರಕರರು ಸಭಾಧ್ಯಕ್ಷರು. ಜಿಲ್ಹಾಧಿಪತಿ ರಾ| ವ್ಹಿ. ಎಸ್. ಭಿಡೆಯವರು ಈ ಹೊತ್ತು ೪ ಘಂಟೆಗೆ ವಿದ್ಯಾರ್ಥಿಗಳಿಗೆ ಬಹುಮಾನ ಹಂಚುವರು. ರಾತ್ರಿ ನಾಟಕಾಭಿನಯಗಳೂ ನಡೆಯುವವು. ನಿನ್ನೆ ಕವಾಯತು ವಗೈರೆ ವ್ಯಾಯಾಮಗಳು ನಡೆದವು.

ಕೆಡತ್ರೋಳಿಕಾ— ಕಳೆದ ವಿಜಯಾ ದಶಮಿಯ ದಿನ ಇಲ್ಲಿಯ ಶ್ರೀ ಸಿದ್ಧ್ಯಾರಣ್ಯ ವಾಚನಾಲಯದ ವಾರ್ಷಿಕೋತ್ಸವವು ವಿಜೃಂಭಣೆಯಿಂದ ನಡೆಯಿತು. ಸಾರ್ವಜನಿಕ ರೀತಿಯಿಂದ ನಡೆಸಲ್ಪಡುವ ಈ ವಾಚನಾಲಯವು ಸ್ಥಾಪಿತವಾಗಿ ಈ ವಿಜಯಾ ದಶಮಿಗೆ ಒಂದು ವರ್ಷವಾಯಿತು. ಈ ಹಳ್ಳಿಯಲ್ಲಿ ಇದೊಂದೇ ಸಂಸ್ಥೆ ಇದ್ದು ಉಪಯುಕ್ತವಾಗುವಷ್ಟು ಈ ವಾಚನಾಲಯದ ಪ್ರಗತಿಯಾಗಿದೆ. ಹಳ್ಳಿಯಲ್ಲಿ ಜ್ಞಾನಪ್ರಸಾರಕ ಸಂಸ್ಥೆ ಬೇಕಿದೆ. ಇಂಥ ಸಂಸ್ಥೆಗೆ ಸಹಾಯ ಪ್ರೋತ್ಸಾಹ ಕೊಟ್ಟು ಹಳ್ಳಿಯಲ್ಲಿ ಜ್ಞಾನಪ್ರಸಾರ ಮಾಡಿದ ಶ್ರೇಯಸ್ಸನ್ನು ಗಳಿಸಿಕೊಳ್ಳಬೇಕೆಂದು ವಾಚನಾಲಯದ ಚಾಲಕರು ಪ್ರಾರ್ಥಿಸಿಕೊಳ್ಳುತ್ತಾರೆ.

ಗೋಕರ್ಣ— ವರ್ಷಾಂತ ವಿಜಯಾ ದಶಮಿ (ಶಿಲೋಲ್ಲಂಘನ) ಉತ್ಸವವು ಸಾಂಗವಾಯಿತು. ಈಗ ಹೊಸ ಯಾತ್ರಾರ್ಥಿಗಳಿಂದ ಹೊಸ ಶಿಕ್ಷಣ ಆರಂಭವಾಗಿದೆ. ಮೊದಲಿನ ವಿದ್ಯಾಭ್ಯಾಸ ಅರಸಿಗಾಗಿ ನವಮಾನ ಮಹಾಜನರಿಗಳು ಲೋಪವಾದವು. ಇಲ್ಲಿಯ ಶ್ರೀ ಮಹಾಬಲೇಶ್ವರ ದೇವಸ್ಥಾನದ ಮೊಕ್ತೇಸರ ರಾವಜೀ ಟೇಂಬಲ್ ಕಮಿಟಿಯವರು ನಿದ್ರಾವಸ್ಥೆಯಲ್ಲೇ ಇದ್ದಾರೇನು?

ಗುಂಡಬಾಳಾ— (ತಾ. ೧೯-೯ ೩೫) ಅರೆಕೊಲ ತಾಲೂಕ ಅಕ್ಷ್ವೆ ಗ್ರಾಮದ ಪೈಕಿ ಅಂಗಡಿ ವೈಲ ಭೈರೇಶ್ವರ ಮಂಜಭಟ್ಟ ಖಾಕರ ಇವರಲ್ಲಿ ಕಳೆದ ತಾ ೧೭-೯-೩೫ ನೇಗೆ ಒಂದು ಆಕಳು ಜೈನಾಗಿ ಕರುವಿನ ಬಾಯಿಯು ಮಂಗನ ಬಾಯಿಯಂತೆ ಆಗಿ ಹಲ್ಲುಗಳು ೩, ಬಾಲ ಇಲಿ ಬಾಲದಂತೆ ಆಗಿ ಕಾಲುಗಳು ಬಂದೂ ಇದ್ದದೇ ಅಸಹಿತ. ಆದರೆ, ಆ ಕರುವು ಆ ದಿವಸವೇ ೧-೩ ತಾಸಿನವೇಳೆ ನಿಧನ ಹೊಂದಿತು.

ಕುಂಭಾರವಾಡಾ— ಕಳೆದ ಜುಲೈ ತಾ. ೧೩ ನೇ ಸಂಚಿಕೆಯಲ್ಲಿ ಇಲ್ಲಿಯ ಹೆಡ್ ಕೊನ್‌ಸ್ಟೇಬಲನು ರೈತರಿಗೆ ನಡಿಸಿಕೊಳ್ಳುವ ವಿಷಯ ಒಬ್ಬ ರೈತನು ಮಾಡಿದ ದೂರು ನಿರಾಧಾರವಿರುವದೆಂದು ಡಿ| ಮೆಜಿಸ್ಟ್ರೇಟರು ಚಾಕಶಿಸಿ ತಿಳಿಸಿರುವರ. ಮಾಗೆ ಬರೆದ ಪತ್ರವು ಹೆಡ್ ಕೊನ್‌ಸ್ಟೇಬಲನಿಗೆ ಆಗದ ಯಾರೊಬ್ಬರು ಬೇರೊಬ್ಬನ ಹೆಸರಿನಿಂದ ಪತ್ರ ಬರೆದಿರಬೇಕಾಗಿಯೂ ಡಿ| ಮೆಜಿಸ್ಟ್ರೇಟರು ಸೂಚಿಸುತ್ತಾರೆ.

ಇಲ್ಲಿಯ ಪ್ರಸಿದ್ಧ ಸಾಧುಗಳಾದ ಶ್ರೀ ಶಾಂಡಿಲ್ಯ ಮಹಾರಾಜರು ಇಲ್ಲಿಂದ ೩೦ ಮೈಲಿನ ಮೇಲಿರುವ ಉಳವಿ ಬದಿಯ ಮಹಾಮುನಿಗವಿ ಎಂಬ ಗುಡ್ಡದೊಳಗೆ ಒಬ್ಬರೇ ವಾಸಮಾಡುತ್ತಾರೆ.

ಹೊನ್ನಾವರ— (ತಾ. ೩೭-೯-೩೫) ನೀಳ್ಗೆ ರಾಜನು ಈ ಹೊತ್ತಿನಿಂದ ದಯಪಾಲಿಸಿರುವನು. ಕಂಗಾಲ ಸ್ಥಿತಿಯುಳ್ಳ ಒಕ್ಕಲಿಗರಿಗೆ ಸ್ವಲ್ಪ ಧೈರ್ಯ ಬಂತು. ಈವರೆಗೆ ಬಿದ್ದ ಮಳೆ ೧೪೧ ಇಂಚು. ಊರಲ್ಲಿ ಕೆಲಕೆಲವು ಕಡೆಯಲ್ಲಿ ಸಿಡುಬು, ಮೈಲಿ ಉಪದ್ರವ ಇದೆ.

ಕುಂದಾಪುರದ ಶ್ರೀ| ಶಿವರಾಮ ಕಾರಂತರು ಇಲ್ಲಿಯ ಶ್ರೀ ಹತ್ತು ಜನರ ಮಠದಲ್ಲಿ ಪ್ರಾಚೀನ ಭಾರತ ಮತ್ತು ಆಗಿನ ಸ್ಥಿತಿ ಎಂಬ ವಿಷಯದ ಮೇಲೆ ೨ ದಿನ ಉಪನ್ಯಾಸ ಮಾಡಿ ಕುಮಟೆ ಕಡೆಗೆ ತೆರಳಿದರು.

ಹಲಗೇರಿ ಕರ್ನಾಟಕ ನಾಟಕ ಕಂಪನಿಯವರು ಇಲ್ಲಿ ಬಂದು ತಾ. ೨೭ ನೇಗೆ ಬಾಲಕೃಷ್ಣಲೀಲಾ ಎಂಬ ನಾಟಕವನ್ನು ಆಡಿ ತೋರಿಸಿದರು.

ಮುಂಬಯಿಯಿಂದ ಅಕ್ಟೋಬರ ೩ ನೇ ತಾರೀಖಿಗೆ ಪಟ್ಟ ಉಗಿಹಡಗವು ಇಲ್ಲಿ ಬಂದರ ಮಾಡಿತು.

ಭಟಕಳ— ಇಲ್ಲಿಯ ೪ ಜನ ವ್ಯಾಪಾರಿಗಳು ತಾ ೩೫-೯-೩೫ನೇಗೆ ಬರೆದು ತಿಳಿಸುವದೇನಂದರೆ— ಇಲ್ಲಿಯ ಉಪ್ಪಿನ ಸಪ್ಲಾಯಿ ಡಿಪೋಕ್ಕೆ ನಿನ್ನೆ ೩೩೦ ಚೀಲ (೧|| ಮಣದ್ದು) ಉಪ್ಪು ಬಂದಿದೆ. ಅಲ್ಲಿಯವರು ಬಂದರು ಹೋಗಿ ೧೦—೧೦ ಚೀಲ ಕೇಳಿದರೆ, ಹಿಂದಿನಿಂದ ಹೇಳುತ್ತೇನೆಂತ ಹೇಳಿದರು. ತಿರಕೋಳ ಅಂಗಡಿಯವರಿಗೆ ೧—೧ ಚೀಲ ಉಪ್ಪು ಖಾಲಿ ಚೀಲ ಪರತ ತೆಗೆದುಕೊಂಡು ರೂ ೨-೩-೦ ಯಂತೆ ಮಾರಿದರು.

ಹೈಗುಂದ— (ತಾ. ೨೭-೯-೧೯೩೫) ಮಾವಿನಕರ್ವೆ, ಮೊಳಕೋಡ, ಮಡುಕಳಿ, ಜಲವಳ್ಳಿ, ಕೆರವಳ್ಳಿ ವಗೈರೆ ಗ್ರಾಮಗಳಿಗೆ ಹೋಗಿ ಅಲ್ಲಿ ಬೆಳೆ ಸ್ಥಿತಿ ನೋಡಿಕೊಂಡು ಹೆರಂಗಡಿ ರೈತರ ವಿನಂತಿ ಮೇರೆಗೆ ಶ್ರೀ|| ಶಾಸ್ತ್ರಿ—ಬಸ್ರೂರ ಮುಂತಾದವರು ಹೇರಂಗಡಿಗೆ ಬಂದು ಉಪ್ಪೋಣಿ ಸಳೆಗಿ, ಕುದ್ರಿಗೆ, ಹೇರಂಗಡಿ ವಗೈರೆ ಗ್ರಾಮಗಳನ್ನು ಹಾಗೂ ಕಳೆದ ನೆರೆಯಲ್ಲಿ ಮುರಿದು ಹೋದ ಕುದ್ರಿಗೆ ಕಟ್ಟನ್ನು ನೋಡಿದರು.

ಹೇರಂಗಡಿಯಲ್ಲಿ ಅಂದೇ ಮಧ್ಯಾಹ್ನ ರೈತರ ಸಭೆಯಾಯಿತು. ೧೨ ಗ್ರಾಮಗಳ ೩೦೦ ಜನ ರೈತರು ಸಭೆಗೆ ಸೇರಿದ್ದರು. ಕೂಡಿದ ರೈತರ ಪೈಕಿ ಕೆಲವರು ತಮ್ಮ ತಮ್ಮ ಗ್ರಾಮದ ಬೆಳೆ ಸ್ಥಿತಿ ಮತ್ತು ರೈತರ ಅಡಚಣೆ ಕುರಿತು ಹೇಳಿದರು.

ಶ್ರೀ| ಶಾಸ್ತ್ರಿಯವರು ಈ ವರುಷವೂ ಕಳೆದ ೨ ವರುಷಕ್ಕಿಂತ ಬೆಳೆ ಕೀಳಕಟ್ಟ ಬಗ್ಗೆ ಪಶ್ಚಾತ್ತಾಪಪಟ್ಟು ರೈತರು ಮುಂದೆ ತ್ಯಾಗ ನಡೆಯಬೇಕೆಂಬ ಬಗ್ಗೆ ಸ್ಫೂರ್ತಿದಾಯಕವಾಗಿ ಭಾಷಣ ಮಾಡಿದರು. ಸಭೆಯಲ್ಲಿ ಮುಂಬಹುದಾದ ಮುಖ್ಯ ಠರಾವುಗಳು

ಈ ವರುಷ ಕಳೆ ರೋಗದಿಂದಲೂ ಈಗ ಮಳೆ ಇಲ್ಲದ್ದರಿಂದಲೂ ಇಲ್ಲಿ ಬೆಳೆ ತೀರ ಕೆಟ್ಟು ರೈತರು ತೀರ

ಶೋಚನೀಯ ಸ್ಥಿತಿಯಲ್ಲಿದ್ದಾರೆ. ಕಳೆದ ೨ ವರುಷ ಸಹ ಬೆಳೆ ಸಿಗಲಿಲ್ಲ. ಈ ವರುಷದ ಸ್ಥಿತಿ ಹೀಗೆ.

ಎತ್ತು—ದೀಟಕ್ಕೆಕೊಟ್ಟ ತಗಾಯಿ ಮಾಫಿ ಮಾಡಬೇಕಾಗಿಯೂ ತಗಾಯಿ ಕೊಂಡು ಜಮೀನು ದುರುಸ್ತ ಮಾಡಿದವರ ಜಮೀನು ಈ ವರುಷ ನೆರೆಯಿಂದ ನಾದುರುಸ್ತ ಆದಂಥವರಿಗೆ ತಗಾಯಿ ಮಾಫಿ ಮಾಡುವಂತೆ ಆಗಬೇಕಾಗಿಯೂ ಸುಗ್ಗಿಗೆ ಬೀಜದ ಪುರವಠಿ ಏನೂ ಇಲ್ಲದ್ದರಿಂದ ಬೀಜದ ಪುರವಠಿಯ ಬಗ್ಗೆ ಸರಕಾರದಿಂದ ಏನಾದರೂ ವ್ಯವಸ್ಥೆ ಆಗುವದು ಅಗತ್ಯ ಉಂಟಾಗಿಯೂ, ೧೯೩೦ ಕಾಳೀಪುರ ಗೆರಸಪ್ಪಾ ಸೀಮೆಯ ರೈತರಿಗೆ ಮಾಫಿಯಿಂದ ಸಿಗಬೇಕಾಗಿಯೂ ಕೂಡಾ ಠರಾವುಗಳು ಆದವು.

ಜಿಲ್ಲಾ ಕೋ| ಕಮಿಟಿ ಅಧ್ಯಕ್ಷ ಶ್ರೀ| ಕಲ್ಯಾಣಪುರಕರರು ತಮಗೆ ಅನಿವಾರ್ಯ ಕಾರಣಗಳ ಮೂಲಕ ಸಭೆಗೆ ಬರಲು ಅನುಕೂಲ ಆಗದ ಬಗ್ಗೆ ಹಾಗೂ ಸಹಾನುಭೂತಿಪರ ಸಂದೇಶ ಸಭೆಗೆ ಕಳುಹಿಸಿದ್ದರು.

ಇತ್ತಕಡೆ ರೈತರಸ್ಥಿತಿ ತೀರ ಶೋಚನೀಯವಾಗಿದೆ ಕಾರ ಬೆಳೆ ಮಾಡುವರೇ ಹಿಂದೆ ೨ವರುಷ ಹಾಗೂ ಈ ವರುಷ ಸಹ ಬೆಳೆ ಹೋದ್ದರಿಂದ ಈಗ ಜೀವನ ಸಾಗಿಸುವದೇ ಕಷ್ಟವಾಗಿ ಅದೆ. ಇಂಥ ರೈತರಿಗೆ ಸರಕಾರದಿಂದ ಏನು ವ್ಯವಸ್ಥೆ ಆಗುತ್ತದೋ ನೋಡುವದುಂಟು. ಮೆ|| ಕಲೆಕ್ಟರ ಸಾಹೇಬರು ಈ ಕಡೇಗೆ ಬರುವದು ತೀರ ಅಗತ್ಯ ಉಂಟು.

ಸಿದ್ದಾಪುರ— ಶ್ರೀ ಶಾರದಾ ಉತ್ಸವದ ವೇಳ್ಯಾ ಅಂದರೆ ತಾ ೨೬-೯-೨೫ನೇ ಶನಿವಾರ ಶ್ರೀ|| ಪುತ್ತುಭಟ್ಟರು, "ವಿಶ್ವಾಮಿತ್ರ ತಪಸ್ಸು" ಎಂಬ ವಿಷಯದ ಮೇಲೆ ರಾಷ್ಟ್ರೀಯ ಶಾಲೆಯಲ್ಲಿ ಕೀರ್ತನೆ ಮಾಡಿದರು.

ತಾ ೨೭-೯-೨೫ನೇ ದಿವಸ ಸಾಯಂಕಾಲ ರಾಷ್ಟ್ರೀಯ ಶಾಲೆಯಲ್ಲಿ ನೂಲಿನ ಸ್ಪರ್ಧೆ ನಡೆಯಿತು. ಭಗಿನೀ ವರ್ಗದವರೂ ಭಾಗ ತೆಗೆದುಕೊಂಡಿದ್ದರು. ಅವರಲ್ಲಿ, ಸೌ| ಲಕ್ಷ್ಮೀಬಾಯಿ ಗುಣೆ, ಸೌ| ಕಮಲಾಬಾಯಿ, ವೆಂಕುಬಾಯಿ ಚಿತ್ರಭಾನು ಈ ಮೂವರಿಗೆ ಶುದ್ಧ ಖಾದಿ ಖಣವು ನಂಬ್ರವಾರ ಬಹುಮಾನವಾಗಿ ಹಂಚಲ್ಪಟ್ಟವು. ಇವರು ಅರ್ಧ ತಾಸಿನಲ್ಲಿ ೩೫ನೇ ನಂಬ್ರದ ನೂಲು ೧೦೪ಯಾರ್ಡು ತೆಗೆದಿದ್ದರು.

ತೇರೂರಿನಲ್ಲಿ ಒಂದು ಖೂನಿಯಾಗಿರುವದಾಗಿ ತಿಳಿಯುತ್ತದೆ. ಅದರ ತಪಾಸು ನಡೆದಿದೆ.

ಮೇಘರಾಜನು ಚಿಕ್ಕ್ಯಸಿರುವನು ಮೂರು ನಾಲ್ಕು ದಿನ್ನದಿಂದ ಮಳೆ ಬೀಳಲು ಪ್ರಾರಂಭವಾಗಿದೆ.

ಪ್ರಸಿದ್ಧ ವ್ಯಾಪಾರಿಗಳಾದ ಕುಂಬಾರಕೊಳ್ಳ ಈರಪ್ಪ ಶೆಟ್ರು ಮೇಲಿನ ಖಟ್ಲೆಯ ಅಪೀಲ ನಿಕಾಲಿಯು ತಾ ೧೯-೮-೨೫ಕ್ಕೆ ಆಯಿತು. ಅಪೀಲಿನಲ್ಲಿ ಸದ್ರಿ ಆರೋಪಿಯುವಗೆ ೩ವರ್ಷ ಶಿಕ್ಷೆಯೂ, ಒಂದು ಸಾವಿರರೂಪಾಯಿ ದಂಡವೂ ವಿಧಿಸಲ್ಪಟ್ಟಿತು. ಆರೋಪಿಯನ್ನು ಮುಂಬಯಿಯ "ಕೊಲಾಬಾ ಪ್ರಿಜನ್"ನಲ್ಲಿ ಇಟ್ಟಿದ್ದರು ಆರೋಪಿಯು ತಾ ೨೫-೯-೨೫ನೇದಿವಸ ವಾಯುಮುಪ್ಪನದಿಂದ ಮೃತಪಟ್ಟಿರುವನಾಗಿ ತಿಳಿಯುತ್ತದೆ. ಆರೋಪಿಯು ತೀರಿ, ಅವನ ಉತ್ತರ ಕ್ರಿಯಾದಿ ಸಂಸ್ಕಾರ ಮುಗಿದವರೂ, ಆರೋಪಿಯ ಅಸ್ಥಿಯನ್ನು ಸರಕಾರದವರು ವಾರಿಸದಾರರಿಗೆ ಬಿಟ್ಟುಕೊಡಲಿಲ್ಲವಾಗಿ ತಿಳಿಯುತ್ತದೆ

ಇಟ್ಗಿ ತಾರಗೋಡವೆಂಬಲ್ಲಿ ಒಬ್ಬ ಹೆಂಗಸಿಗೆ ಒಂದು ಹೆಣ್ಣು ಶಿಶುವು ಹುಟ್ಟಿದೆ ಅದರ ಶಿಶುವಿಗೆ ಮಾತ್ರ ಮೂತ್ರದ್ವಾರವೇ ಗುದದ್ವಾರವಾಗಿ ಬಿಟ್ಟಿದೆ. ದೇವರ ಲೀಲೆ !

ತಾ ೧೫-೯-೨೫ಕ್ಕೆ ಲೋಕಲ್ ಬೋರ್ಡಿನ ಸಂಬಂಧ ಉಮೇದವಾರರು ಕೊಟ್ಟ ನೊಮಿನೇಶನ್ ಪೇಪರುಗಳ ತಪಾಸಾಗಿ, ಜಿ. ಲೋ. ಬೋರ್ಡಿಗೆ ೬ಜನ ಉಮೇದವಾರರೂ, ತಾ. ಲೋ. ಬೋರ್ಡಿಗೆ ೧೭ಜನ ಉಮೇದವಾರರೂ ನಿಂತಿರುವರಾಗಿ ತಿಳಿದು ಬಂದಿದೆ. ಜಿ. ಲೋ. ಬೋರ್ಡಿನ ಎರಡು ಮೆಂಬರರಜಾಗಕ್ಕೆ, ೬ಜನ ಉಮೇದವಾರರೂ, ತಾ ಲೋ. ಬೋರ್ಡಿನ ೧೦ಜಾಗಕ್ಕೆ. ೧೭ಜನ ಉಮೇದವಾರರೂ ನಿಂತಿದ್ದು ನೋಡಿದರೆ-ಇದು ಜನ ಜಾಗ್ರತೆಯ ಲಕ್ಷಣವೋ? ಅಥವಾ ಐಕ್ಯದ ಅಭಾವವೋ? ಎಂದು ಊಹಿಸಲು ಸ್ವಲ್ಪ ಕಠಿಣವಾಗಿಯದೆ ಇರಲಿ, ಚುನಾಯಿತರು ಮಾತ್ರ ಇವರು ತಮ್ಮ ಸಮಾಜದವರು, ಇವರು ತಮ್ಮ ಸಂಬಂಧಿಕರು, ಎಂಬ ಮುಂತಾದ ಈ ವಿಚಾರಕ್ಕೆ ಬೀಳದೆ, ಜನರ ಹಿತವನ್ನು ಮಾಡುವಂಥವರಿಗೇ ಮತಕೊಟ್ಟು, ತಮ್ಮ ಮತಾಧಿಕಾರದ ಯೋಗ್ಯ ಉಪಯೋಗವನ್ನು ಮಾಡಿಕೊಂಡರಾಯಿತು.

ವೃತ್ತಸಾರ.

— ಆಂಧ್ರದೇಶದಲ್ಲಿ ನವರಾತ್ರಿಯ ಕಾಲದಲ್ಲಿ ನಡೆಯಲಿಕ್ಕಿದ್ದ ದಕ್ಷಿಣ ಹಿಂದುಸ್ಥಾನದ ಪ್ರಸಿದ್ಧ ಗಾಯಕರ ಗಾಯನದ ಒಂದು ಸ್ಪರ್ಧೆಗೋಸ್ಕರ ಹೊರಟ ಕವಿವರ್ಯ ರವೀಂದ್ರನಾಥರು ಅಸ್ವಸ್ಥದ ಕಾರಣದಿಂದ ಅರ್ಧದಾರಿಯಿಂದಲೇ ಹಿಂದಿರುಗಿ ಹೋಗಬೇಕಾಯಿತು.

— ಕಾಶ್ಮೀರದ ಮಹಾರಾಜರು ಕಳೆದ ತಿಂಗಳ ತಾ ೨೩ಕ್ಕೆ ಕಾಲವಾದರು.

— ಶ್ರೀಮತಿ ಸರೋಜಿನಿ ದೇವಿಯವರು ಕಾನಪುರದಲ್ಲಿ ಜರುಗಲಿಕ್ಕಿದ್ದ ರಾಷ್ಟ್ರೀಯ ಸಭೆಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು. ಸರೋಜಿನಿ ದೇವಿಯವರ ಪರಿಚಯವು ನಮ್ಮ ವಾಚಕರಿಗಿರುವದು

— ಸಿಮ್ಲಾದಲ್ಲಿ ಸ್ತ್ರೀಯರು ಸಭೆ ಸೇರಿ ಪಂಡಿತ ಮಾಲವೀಯರಿಗೆ ಮಾನಪತ್ರವನ್ನರ್ಪಿಸಿದರು. ಪಂಡಿತ ಮಾಲವೀಯರು ಮೀಸೆ ಬೋಳಿಸಿದ ಬಗ್ಗೆ ಸ್ತ್ರೀಯರು ಆಕ್ಷೇಪ ತಕ್ಕೊಂಡರು. ಸಾರ್ವಜನಿಕ ಜೀವಿದ್ದಲ್ಲಿ ಈ ವಿಷಯ ಆಲೋಚಿಸ ತಕ್ಕ ಉಪಾಯಯೋಜನೆ ಮಾಡುತ್ತೇವಾಗಿ ಪಂಡಿತಜೀಯವರು ಅಭಿವಚನವನ್ನಿತ್ತರು.

— ಉಡುಪಿಯಲ್ಲಿ ಒಂದು 'ಜ್ವಾಯಿಂಟ ಸ್ಟಾಕ' ಕಂಪನಿಯನ್ನು ಸ್ಥಾಪಿಸುವ ವಿಚಾರವದೆ ಈ ಕಂಪನಿಯವರು ಶ್ರೀಮನ್ಮಧ್ವಾಚಾರ್ಯರ ಗ್ರಂಥಗಳ ಪ್ರಕಾಶನ ಹಾಗು ಅವುಗಳ ಕನ್ನಡ ಭಾಷಾಂತರ ಕೂಡಾ ಧರ್ಮಕಾರ್ಯ ಮಾಡುವದಿರುತ್ತದೆ ಕಂಪನಿಯ ಭಂಡವಲು ೨೦ಸಾವಿರ ರೂಪಾಯಿ. ೧೦ ರೂಪಾಯಿಗೊಂದು ಪಾಲು. ಮಧ್ವಮತಾಭಿಮಾನಿಗಳು ಧರ್ಮಕಾರ್ಯಕ್ಕೆ ಸಹಾಯ ಮಾಡಬೇಕು.

— ಮೈಸೂರು ಅರಮನೆಯಲ್ಲಿ ಕರ್ನಾಟಕದ ಮನಮೋಹನ ಚಂದ್ರನೆಂಬ ೯ವರ್ಷ ಪ್ರಾಯದ ಚಿಕ್ಕ ಬಾಲಕನು ತನ್ನ ಕರ್ಣಮಧುರ ಗಾಯನದಿಂದ ರಾಜ ಮನೆತನದ ಮನರಂಜನ ಮಾಡಿದನು. ಬೆಳಗಾವಿಯ ರಾಷ್ಟ್ರೀಯ ಸಭೆಯಲ್ಲಿ ಮನಮೋಹನ ಚಂದ್ರನು ಮನಮೋಹನ ಮಾಡಿದ್ದನು.

— ಕಳೆದ ವರ್ಷದಲ್ಲಿ [illegible] ೪೦ ಲಕ್ಷ ರೂಪಾಯಿಗಳ ದಾನಧರ್ಮ ಮಾಡಿದರು. [illegible] ೧ ಕೋಟಿ ರೂಪಾಯಿಗಳ [illegible] ಯೋಜನೆಯು ತಯಾರಾಗುತ್ತದೆ !

— ಮುಂಬಯಿ ಕಾಯದೆ ಕೌನ್ಸಿಲಿನ ಮುಂದಿನ ಅಧಿವೇಶನದಲ್ಲಿ ಸ್ವರಾಜ್ಯ ಪಕ್ಷದವರು ಕೈಕೊಳ್ಳುವ ಧೋರಣದ ವಿಷಯ ಇದೇ ಬರುವ ೩೦ ನೇ ತಾರೀಖಿಗೆ ಚರ್ಚೆಯಾಗಿ ನಿರ್ಣಯವಾಗುವದಿದೆ.

— ಮುಂಬಯಿಯಲ್ಲಿ ಗಿರಣಿಗಳ ಅರಿವೆಯ ಮೇಲಿನ ದಾಸ್ತಾನು ಬಿದ್ದದ್ದರಿಂದ ಗಿರಣಿಯವರು ಸಂಬಳವನ್ನು ತಗ್ಗಿಸಿದರು. ಅದರಿಂದ ಕೂಲಿಕಾರರು ಸಂಪು ಮಾಡಿರುವರು.

— ಮದ್ರಾಸದಲ್ಲಿ ಸೇರಿದ ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯು ಹಿಂದುಸ್ಥಾನ ಸರಕಾರದ ಚೀನದ ವಿಷಯ ಧೋರಣವನ್ನು ನಿಷೇಧಿಸಿತು. ಚೀನದಲ್ಲಿ ಪ್ರಜೆಗಳ ಸ್ವರಾಜ್ಯ ಕಾಂಕ್ಷೆಯನ್ನು ದಬ್ಬಿಹಾಕಲು ಭಾರತೀಯ ಸೈನಿಕರನ್ನು ಉಪಯೋಗಿಸಬಾರದೆಂದು ಕಮಿಟಿಯವರ ಹೇಳಿಕೆ

— ವರಿಷ್ಠ ಕಾಯದೆ ಕೌನ್ಸಿಲಿನ ಅಧ್ಯಕ್ಷರಾದ ಶ್ರೀ| ವಿಠಲಭಾಯಿ ಪಟೇಲರವರು ಮುಂಬಯಿಗೆ ಆಗಮಿಸಿದಾಗ ಮುಂಬಾಪುರಸ್ಥರು ಸಭೆಸೇರಿ ಅವರಿಗೆ ಮನ್ನಿಸಿದರು.

— ಕಳೆದ ಪಕ್ಷದಲ್ಲಿ ಗದಗಿನಲ್ಲಿ ದೊಡ್ಡ ಮಳೆ ಆಣೆಕಲ್ಲುಗಳು ಬಿದ್ದವು

— ಧಾರವಾಡದೊಳಗಿನ ಕರ್ನಾಟಕ ಕಾಲೇಜಿಗೆ ಕನ್ನಡ ಅಧ್ಯಾಪಕರಿಲ್ಲದೆ, ಅಲ್ಲಿಯ ಕನ್ನಡ ವಿದ್ಯಾರ್ಥಿಗಳ ತೊಂದರೆಯಾಗಿತ್ತು. ಸದ್ಯಕ್ಕೆ ಕನ್ನಡ ಅಧ್ಯಾಪಕರು ನೇಮಿಸಲ್ಪಟ್ಟಿರುವರು.

— ಬಾಗಲಕೋಟೆಯ ಮ್ಯುನಿಸಿಪಾಲಿಟಿಯವರು ದೇಶಭಕ್ತ ಕೌಜಲಗಿ ಶ್ರೀನಿವಾಸರಾಯ ಹಾಗು ದಿವಾಕರ ರಂಗನಾಥರಾಯರಿಗೆ ಮಾನಪತ್ರಗಳನ್ನರ್ಪಿಸಿದರು.

ವಿನಂತಿ.

ಕಾನಡಾ ಜಿಲ್ಲಾ ಪ್ರಾಥಮಿಕ ಶಿಕ್ಷಕ ಸಂಘದ ಜಿಲ್ಲಾ ಅಧಿವೇಶನವು ಇದೇ ಅಕ್ಟೋಬರ ತಿಂಗಳ ೧೮ನೇ ತಾರೀಖಿನ ದಿವಸ ಮ| ರಾ| ಶ್ರೀಯುತ ಎಮ್. ಡಿ ಕರ್ಕಿ, ಎಮ್, ಎ, ಸಿ.ಯವರ ಅಧ್ಯಕ್ಷತೆಯಲ್ಲಿ ಶಿರ್ಸಿಯಲ್ಲಿ ಕೂಡುವದು. ಕಾರಣ ಎಲ್ಲ ಶಿಕ್ಷಕರೂ ಶಿಕ್ಷಣಾಭಿಮಾನಿಗಳೂ ಚಿತ್ತೈಸಬೇಕಾಗಿ ಸವಿನಯ ವಿನಂತಿ

ತಾ ೩ ೧೦-೧೯೨೫. } **ಗ. ತಿ. ಭಡತಿ,**
ಸಕ್ರೆಟರಿ, ಪ್ರಾ|| ಶಿ|| ಸಂಘ,
ಜಿಲ್ಲಾ ಕಾನಡಾ.

ನೋಟೀಸು.

ಹೊನ್ನಪ್ಪ ಕೃಷ್ಣಾ ಹಾಗೂ ಗೋವಿಂದ ವರಮಯ್ಯಾ ರಾಯಪ್ಪ ಶೆಟ್ಟಿ ಕೃಷ್ಣಪ್ಪಾ ಪಗ್ಯೆರೆ ಅಚ್ವೆಕೋಡಿ ಇವರಿಗೆ— ಈ ಕೆಳಗೆ ಸಹಿ ಮಾಡುವವನಾದ ನಾನು ಇದರ ಮೂಲಕ ತಿಳಿಸುವದಿ ಕುವದೇನಂದರೆ, ನೀವು ಗೇಣಿದಾರರಿಗೆ ಕೊಡತಕ್ಕ ಗೇಣ ಬಾಕಿ ಕೊಡದಿದ್ದರಿಂದ ಗೇಣಿದಾರರು ದಾವೆಗಳನ್ನು ಮಾಡಿದ್ದಾರೆ; ಇನ್ನೂ ಬರುವದೆಂತ ತೋರುತ್ತದೆ. ಈ ಶಿವಾ ಅನಾವಶ್ಯಕ ಸಾಲ ಬೆಳೆಸಿದ್ದರಿಂದ ಅದ್ಯಾವದಕ್ಕೂ ನಾನಾಗಲಿ ನನ್ನ ಕುಟುಂಬದ ಆಸ್ತಿಯಾಗಲಿ ಯಾವದೇ ರೀತಿ ಜವಾಬದಾರ ಆಗಲಿಕ್ಕಿಲ್ಲ. ಆ ಸಂಬಂಧ ಲಾಭ-ಲುಕ್ಸಾನಿಗೆ ನೀವೇ ಜವಾಬದಾರ ಇರತಕ್ಕದ್ದು.

ಕುಮಟಾ, ತಾ. 30–9–1925

S. K Naik.

Some aspects of Karwar life
Some constructive proposals

(By A Karwarian)

To readers of Kanara News, I need not present the topography of Karwar, because the circulation of the paper for its greater part is restricted to Kanara District and Karwar is its head quarters So Kanara people for whose information, this article is written, are supposed to be well acquainted with this place, having some occasion or other to come down here inspite of want of transportation facilities With this self complacent presumption I proceed

II

Karwar has no other importance except that it is the seat of Government and as such it is a place predominantly swarmed by Government servants for whose having no interest in the growth and development of the town, culturally economically and socially, its various problems of public importance are sadly neglected The various public institutions owe their present standing and stability, to some non-officials or retired Government pensioners or at all if any Government servants have shown, whether in the past or at present, any interest in public activities, they are few and far between but the generality of workers are drawn chiefly from the above two classes. That clearly shows that these Government servants with an instinct and a bent of mind for public welfare have practically to suppress their legitimate desires and aspirations, while in service and hold the full play of their talents in abeyance in point Its successful presidents have been pensioned Government servants such as Rao Bahadur R R Gangolli and Mr V V Wagh or Dewan Bahadur Yennemadi To quote one more instance in support of my observation the Secretary of our General Library is Mr G A Hattangadi a pensioned school-master By the way, I may say, in the untimely death of Mr V V Wagh, we have lost a social worker a versatile personality known for his uncompromising love of truth

III

The appeal issued by Prof Karve is before me and I am afraid but a few to it He himself visited this place some days back This indefatigable worker regardless of the personal discomforts is devoting himself, heart and soul for the emancipation of women One thing struck me most was that the education imparted in his University is to say in his own words "So framed as to suit the needs of the generality of Indian girls and women For instance Algebra and Geometry are made optional while Domestic Science and Hygiene are made compulsory subjects in all the Examinations and music and painting are included in the list of optional subjects to be studied in the Colleges This is surely the kind of education required by our girls The present education, which they receive in Secondary schools and Colleges, along with making them unfitting them, tends to deteriorate their physique and make them unfit to bear the pangs of motherhood creditably My experience is that the more a girl is uneducated and mentally not worked the more robust and healthy she is But we want neither mere physical growth nor simple cultural attainments at the sacrifice of health We want a harmonious blending of these ends and I think that the efforts of Mr Karve deserve greater encouragement, as his scheme of studies for girls, contemplates both the ends of education. I, hereby, appeal to the enlightened Karwar Public as also the Kanara public to start similar organisations for the enlightenment of our sisters who are still groping in the dark

IV

The Karwar Urban Co operative Bank an institution which owes its present stability and growth to the almost personal interest which, Mr D B Nadkarni, a local pleader of outshining ability, evinces in its affairs is doing some good work in Karwar From a modest beginning it has assumed its present position It has a permanent building of its own estimated at Rs 10,000/- and a reserve thereabouts So much about the institution itself But, whether the great question of bringing relief to the indebted and stimulating trade and business has been rightly tackled by it or not is to be seen Viewed from this light, I think it has not solved the problem to any appreciable extent No doubt, it has financed trading people here and has fostered a spirit of venture in commercial undertaking (!) as is evidenced by a multiplication of shops exhibiting finished Western products such as glass-ware, earthen ware patent medicines and such other novelties catering for the most fastidious tastes of men The liberal hand which has financed such kind of traders, has also extended its benevolent help to some of the Motor Companies My point is that by starting such shops or companies we are in no way increasing our productive capacity or earning power By this I mean that people have not tapped our natural resources They have not tried to find whether there are possibilities of extensive and intensive agricultural cultivation whether the raw materials at our disposal by the application of our modern scientific methods, can be turned out into finished products such as we import from foreign countries I may point out some instances Manufacture of sugar from sugar canes and making of

uits or some such things from .et potatoes, a large quantity of ich is annually exported to mbay from this place. Preserva n of mango juice. There is great pe here for leather industry and rniture making There are many re still But one great difficulty ant of technical skill and expert ice Our University turns out too ny brain workers and thus this ciency of men skilled in various nches of industry is never made Let our young men think twice fore they rush up to the university ntres for higher education

Thus I am growing pessimestic out the so called usefulness of h Co operative societies to relieve e indebtedness of the poor and hance the collective material re rces of the people in general I not write this in disparagement such institution because I know resources utilised on the lines I ve indicated above will conduce the betterment of the people at rge

V

We have a model general library Karwar. It commands a good and tractive situation It is doing good d commendable work in educating d enlightening the public mind on e various topics and this t ceives the unstinted monetary tronage from the reading public ecently a full set of Encyclopædia itannica is added to it and thus utility is enhanced But I have strike a discordant note The here of its utility is restricted to e so called educated class only e the English knowing public of arwar, and I think the authorities uld do well to introduce Vernalar papers for the edification of ose people who had not the luxury knowing English. A separate al institution for the purpose will t be desirable because the English owing gentry will benefit by this novation So, this proposal I hope ll commend itself to our responsible men in Karwar.

VI

The ensuing Local Board elections have caused a stir in the otherwise placid atmosphere of Karwar So long this place was marked for its communal concord, amity and harmony But now the Non Brahmins, especially the Konkan Mahrattas, seem to be infected by the communal canker prevailing in other parts of our country. Some of them freely indulge in incriminations of the worst type against Brahmins and thus the elections will be fought on communal and party lines. So far, as I can gather, the grievance is that the Brahmins are preponderating in every sphere of life to their total exclusion though they have a legitimate share. But they seem to forget Brahmins have attained to their present position of power and prestige, simply by their inherent qualities of head and heart which this class lacks to a considerable degree This is clearly established by the fact that inspite of the facilities which this particular class receives from the Government in matters of education and appointments in Government Service they do not seem to make any headway in these fields Here too they can not blame Brahmins for their backwardness So, my sincere advice to them is, that it would be to their immense advantage if they, instead of abusing and villifying the Brahmins, set themselves to the task of reforming themselves, they may hope to dethrone the Brahmins from their present pedestal of power and prestige

Secondly, I have a word to say to the voters. Voters, do not respect personalities but principles. Return in large numbers the people nominated by the Congress Committees Let Democracy assert itself Further the cause of swaraj by voting for those who will serve your interest best Let no other considerations distract you

VII

As I have already said, majority of literate men are employed in the Government service and naturally that outspokenness and healthy growth of fearless independence are conspicuously absent A mentality of abject slavishness and subservience to men in "authority" seem to pervade the very atmosphere we breathe Johukumism is rampant and thus Karwar is lagging behind all other towns in point of national endeavours A few spasmodic efforts are made now and them to revive the drooping spirits of men but that has no salutary effects on men whose minds are functioning in an atmosphere of self-complacency and self adulation Movements may come and movements may go but Karwar *will go on for ever unaffected by* them

BANDE-MATARAM.

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು ಇದು ಸ್ತ್ರೀಸೌಂದರ್ಯವನ್ನುಂಟುಮಾಡುತದೆ ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರ ತವ ಚಲೋ ಆಹಾರ ದೊರಕದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ. ಮುಟ್ಟಾಗುವಾಗ ಶೂಲಿ ಏಳುವದು, ಮಟ್ಟು ಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತ್ತದೆ

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೨—೦—೦

ಏಜಂಟರ — ವೀರಿಯುಲ ಪಿಜನ್ನಿ,

ಪ್ರಿನ್ಸೆಸ ಸ್ಟ್ರೀಟ ನ. ೦ಬಯಿ ನಂಬರ ೩

ನಾವು ಎಲ್ಲ ನಮೂನೆಯ,

ಖಾತ್ರಿಯ ಉತ್ತಮ ಕನ್ನಡಕ

ಗಳನ್ನು ಯೋಗ್ಯ ಕಿಮ್ಮತಿಗೆ ತರಿಸಿಕೊಡುವೆವು ಪರ ಊರಿನ ಗೃಹಸ್ಥರು ಯಾವ ನಮೂನೆಯ ಕನ್ನಡಕಗಳು ಬೇಕೆಂಬದನ್ನು ತಿಳಿಸಬೇಕು. ಮತ್ತು ಆರ್ಡರಿನ ಸಂಗಡ ೧ ರೂಪಾಯಿ ಮುಂಗಡ ಕಳಿಸಿದ್ದಲ್ಲಿ ಬೇಕಾದ ನಮೂನೆಯ ಕನ್ನಡಕಗಳು ದೊರಕುವವು. ಅನುಭವದಿಂದ ಖಾತ್ರಿಯಾಗುವದು.

ಆಪಟೇ ಸನ್ಸ,

ಕನ್ನಡಕ ವ್ಯಾಪಾರಿಗಳು, ಬಜಾರ ಪೇಠ

ಕಾರವಾರ

ವಿಶೇಷ] ಅನುಭವಸಿದ್ಧ [ಪಥ್ಯಪಿಶಿ

ವನೌಷಧಿಮೂಲಿಕೆಗಳು

ವಾಯುದುಮ್ಮಾನ (ನಿಮೋನಿಯಾ) ವಾಂತಿ ಭ್ರಾಂತಿ (ಕೊಲೆರಾ) ಅರ್ಧಾಂಗವಾಯು (ಪೆರಾಲಿಸಿಸ್) ಹುಚ್ಚು ನಾಯಿ ನರಿ ಕಡಿತ, ಸರ್ಪಸುತ್ತು ಹೊಟ್ಟೆಯಲ್ಲಿ ಕತ್ತಿಮ ವಿಷಹಾಕಿದ್ದು (ಕೈಮಸಗು) ವಗೈರೆ ರೋಗಗಳಿಗೆ ಒಂದೇ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು. ಇವು ಬಹುಕಾಲದಿಂದ ಅನುಭವ ತಕ್ಕೊಂಡು ಹಾಗು ಪ್ರತಿನಿತ್ಯ ಈಕಡೆಗೆ ಒಳಕೆಯಲ್ಲಿದ್ದು ಬಿದ್ದಾಗುವ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕೆಲವು ಔಷಧಿಗಳ ದ್ರಾವಕ (Tincture) ಸಹ ಅಗಾವ ಸೂಚಿಸಿದರೆ ಕಳುಹುವೆವು.

ವಾಯುದುಮ್ಮಾನದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ಕ್ಕೆ ೦ ೨-೦.

ಕೊಲೆರಾದ ಬಗ್ಗೆ " " " ೬-೨ ೦

ಅರ್ಧಾಂಗ ವಾಯುವಿನ ಬಗ್ಗೆ ೧ ಇಸಮಿಗೆ ಸಾಲುವಷ್ಟು ॥ ಶೇರು ೧-೫-೦

ಪ್ರಕೃತಿ ತಿಳಿಸಬೇಕು.

ನಾಯಿ ಕಡತದ ಬಗ್ಗೆ ೦ ೪ ೦

ಸರ್ಪಸುತ್ತಿನ ಬಗ್ಗೆ ೦ ೨ ೦

ಹೊಟ್ಟೆಯಲ್ಲಿ ಕತ್ತಿಮ ಔಷಧಿ ಬಿದ ಬಗ್ಗೆ ತೊಲೆ ೧೦ ಕ್ಕೆ ೦-೮-೦

ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾತ್ತಲ ಕ್ಕೆ ೧-೦-೦

ಮೋರಾವಳಾ (ನೆಲ್ಲಿಕಾಯಿ ಗುಳಂಬ)

ರಾತ್ತಲ ೧ ಕ್ಕೆ ೧-೪ ೦

ರಾತುಗಟ್ಟಲೆ ಯಾ ಅದಕ್ಕೂ ಹೆಚ್ಚು ತರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲ ಖರ್ಚ ಪ್ರತ್ಯೇಕ. ವಿಶೇಷ ಮಾಹಿತಿ ಪತ್ರದ್ವಾರಾ. ಅನುಪಾನಪತ್ರ ಔಷಧಿ ಸಂಗಡ.

ಎನ್. ಜಿ. ಹೆಗಡೆ, ಮಾಸ್ತೇರಿ,

ಪೋಸ್ಟ—ಬಂಕಿಕೊಡ್ಲ, ಜಿ. ಉತ್ತರ ಕಾನಡಾ

ಶಿವ ಕ್ರಾಯ! ಸುಲಭ ಕ್ರಯ!!

ಡಾ. ಕ್ಕ ರಜೀ ಬಿ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕ ಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಿಸ್ಪಟ್ಟ ಕಫ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಜನರು ತಮ್ಮ ಗಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸಿಸೆ ಪ್ರಕ್ಷಟ ಕಳಿಸಲಾದೀತು

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ. ಪಿ. ೪ ಅಣೆ ಡಜನ್ ೧ ಕ್ಕೆ ರೂ. ೨-೮-೦ ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೧, ಪೋರ್ಟಟೌನ, ಮದರಾಸ

ಕಿರ್ಲೋಸ್ಕರ ಪಂಪ.

——<>——

ಬಾವಿಯೊಳಗಿನ ನೀರನ್ನು ಮೇಲಕ್ಕೆ ತರುವದರಲ್ಲಿ

ಕಿರ್ಲೋಸ್ಕರ ನೀರಿನ ಪಂಪು ಮೇಲೆಂದ್ದಿರುತ್ತದೆ ಸಣ್ಣ ಮಕ್ಕಳು, ಅಬಲೆಯರು ಈ ಪಂಪಿನಿಂದ ನೀರನ್ನು ಒಂದೇ ನಿಮಿಷದಲ್ಲಿ ಮೇಲಕ್ಕೆ ತರುವರು. ಪ್ರಪಂಚದಲ್ಲಿ ಮಿಕ್ಕ ಅಡಚಣೆಗಳಲ್ಲಿ ನೀರಿನ ತೊಂದರೆಯು ಸ್ವಾಭಾವಿಕವು. ಈ ಅಡಚಣೆಯು ಮೇಲಿನ ಉಪಾಯದಿಂದ ದೂರಾಗುವದು

ಪರದೇಶದಿಂದ ಬರುವ ಪಂಪುಗಳು ಬಹು ತುಟ್ಟಿ ಇರುವದರಿಂದ ಮಧ್ಯಮ ಜನರಿಗೆ ಅವುಗಳನ್ನು ಕೊಳ್ಳಲಾಗುವದಿಲ್ಲ. ಇದನ್ನು ತಿಳಿದು ನಾವು ಈ ಪಂಪನ್ನು ಬಹು ಅಗ್ಗದಿಂದ ಕೊಡುತ್ತಿರುವೆವು ಇಲ್ಲದೆ, ಈ ಪಂಪಿನ ಬಿಡಿ ಭಾಗಗಳು ನಮ್ಮ ಕಾರಖಾನೆಯಲ್ಲಿಯೇ ತಯಾರಾಗುತ್ತಿರುವದರಿಂದ ಬೇಡಿದಾಗ ದೊರೆಯುತ್ತವೆ.

ಕೇ. ಬಿ. ಜೋಶಿ ಮುಂಬೈ ಇವರು ನಮ್ಮ ಸೋಲ ಏಜಂಟರು.

ಕರ್ನಾಟಕ ತರುಣರಲ್ಲಿ ಸ್ವಾವಲಂಬನವನ್ನುಂಟುಮಾಡುವ

ಕಿರ್ಲೋಸ್ಕರ ಪಾತ್ರೆ ಎಂಬ ಮಾಸಪತ್ರವನ್ನು ತರಿಸಿಕೊಳ್ಳಿ.

ವಾರ್ಷಿಕ ವಂದಾ ೧॥ ರೂಪಾಯಿ ಮಾದರಿ ಸಂಚಿಕೆ ಪುಕ್ಕಟೆ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ; ಜಿಲ್ಲಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ಶಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳನ್ನೇಲ್ಲ, ನಿವಾರಣವಾಗುವದು ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವೆ. ಅದರಿಂದ ಎಲ್ಲ ಪ್ರಕಾರದ ವೇದನೆಗಳು, ಸೆಳವು, ಬೇಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅರಿಯುವವರು ಅದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಅಣೆ ವ್ಹಿ. ಪಿ. ಖರ್ಚ ಬೇರೆ.

ಅಮೃತಾಂಜನ ಡಿಪೊ, ಫೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta

Reg No. B 1270 **Monday, October 12th, 1925**

ವರ್ಷ ೧೦. ಸಂಚಿಕೆ ೨.

ಕಾನಡಾವೃತ್ತ.

THE KANARA NEWS.

...ದ ವರ್ಗಣಿ.
...ಯಲ್ಲಿ ಅಗಾವು
...ರೂಪಾಯಿ 2-4-0.
...ರಿಯಿಂದ
ರೂ. 3-0-0.
...ಅಂಚೆವೆಚ್ಚ ಸೇರಿ
...ರೂಪಾಯಿ 3-2-0.
...ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ।

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

...ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಸ್ಮಾಲ
ಪೈಕಿನ (೧೫ ಏಟ್ ಉದ್ದ)
ಆ ಸಾಲುಗಳವರೆಗೆ ರೂ. 1-0-
ಆ ನಂತ್ರ ಪ್ರತಿಸಾಲಿಗೆ 0-2-0.
ಹಲಿಂಗದ ಸಾಲು ಎಷ್ಟು
ಹೊತ್ತಿರುವದೋ ಆ ಮಾನ
ದಿಂದ ಅಷ್ಟು ಸಾಲುಗಳು ಹಿಡಿ
ಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ
ಪತ್ರದ್ವಾರ ಯಾ ಸಮಕ್ಷ ತಿಳಿ
ಸಲ್ಪಡುವದು.

(ಕುಮಟಾ—ಕಾನಡಾವೃತ್ತ, ಸೋಮವಾರ, ತಾರೀಖು ೧೨ ಮಾಹೆ ಅಕ್ಟೋಬರ ಸನ್ ೧೯೨೫ ನೇ ಇಸವಿ)

...हिंदुस्थानातील रहिवाशास ज्याप्रमाणे
...थानची हवा त्याप्रमाणेंच हें औषध हिं
...नातील लोकास ज्यास्त फायदेशीर आहे.

...द्राक्षासव- दीड रतलची किंमत २ रुपये;

रामबाण औषधें

मळ्हि चाळविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

...पिण्यास रुचिकर.

कॅटलॉग मागवा,

...फार्मास्युटिकल वर्क्स लिमिटेड.
मुंबई नं. १३

...ಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!
ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ
ಔಷಧಿಯ ಕ್ರಯ ವಾಪಸು.
...ಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋ...
..., ಪರಮಾನಂದ ಮೊದಲಾದ ಸುಖಜೀವನಕ್ಕೆ
ಬೇಕಾದ ಆರೋಗ್ಯ ವೃದ್ಧಿ.

...ಸೂರ್ಯ] **ಅಗಸ್ತ್ಯ** [ನೋಂದ ಕಲ್ಪ.

...ಸರ್ವಾರ್ಥಚಿಂತಾಮಣಿಲೇಹ

ರಿಜಿಸ್ಟರಾದದ್ದು
...ಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ
...ಗೆ ಗುಣಕಾರಿಯಾದದ್ದು. ಮೇಹ ಮೊದಲಾದವಿಷ್ಟ
..., ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾ
... ಯುವಕರಿಗೂ ಜ್ಞಾನಿ ವಿಜ್ಞಾನಿಗಳಿಗೂ
...ರೋಗಗಳಲ್ಲಿ ಖಚಿತವಾದ ಔಷಧಿ
...ಸೇರು ಸಾಕ್ಷಿಪತ್ರಗಳು ಇದ... ಸೇವಿಸಬಹುದು.
1 ಸೇರು ಡಬ್ಬಿ ಒಂದಕ್ಕೆ 3—0—0
½ ಸೇರು ಡಬ್ಬಿ ಒಂದಕ್ಕೆ --9—0
ವಿ. ಪಿ. ಖರ್ಚು ಪ್ರತ್ಯೇಕ . ಹೆಚ್ಚು ಮಾಹಿತಿ
ಬರೆಕೊಳ್ಳಿರಿ

:-ದೇವಣ್ಣ ನಾರಾಯಣ ಸೇಟ್,
ಸರಾಫ್, ಗೋರೆಪೇಟ್ಟೆ, ಮಂಗಳೂರು, (ದ. ಕ

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಪದ್ಧತಿನಲ್ಲಿ ಕೊಡುವೆವು.

R. S. KASARGOD, *B. A.*

Jewellers, KUMTA.

ಆರ್. ಎಸ್. ಕಾಸರಗೋಡ, ಬಿ ಏ.,
ರತ್ನಾಭರಣ ವ್ಯಾಪಾರಿ, ಕುಮಟಾ.

धातु क्षीणता व कमजोरपणा यांसाठीं

मदन मंजरी गोळया. (रजिस्टर्ड)

या दिव्य गोळया रक्त व वीर्य सुधारून त्य ची चांगली वाढ करतात. पचन शक्ति सुधारून परसाकडे साफ होतें. त्याचप्रमाणें प्रत्येक प्रकारची अशक्तता दूर होऊन शरीर तेजदार व बलवान होतें. किं. ४० गोळयांच्या डबीस रु. १.

रमण विलासिनी गोळ्या. रात्रौ फक्त १ गोळी दुधाबरोबर खाल्यानें इच्छेप्रमाणे वीर्यस्तंभन होतें. किं. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पाऊन त्वरे पुरुषत्व प्राप्त होतें. किं. डबीस रु. १.

कुमटा एजंट — माधव सांतप्पा शेणवी येलेकरी.

राजवैद्य नारायणजी केशवजी ब्रँच:— १९३ काळबादेवी रोड मुंबई नं. २.

ತ್ವರೆ ಮಾಡಿರಿ ! ತ್ವರೆ ಮಾಡಿರಿ !!

ಜಾಹಿರಾತುದಾರರು ತ್ವರೆಮಾಡಬೇಕು !

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರಿಂದ ದೃಗ್ಗಣಿತ ಪ್ರಕಾರ ಗುಣಿಸಿ ಸಂಶೋಧಿಸಲ್ಪಟ್ಟ

ಕ್ಷಯ ಸಂವತ್ಸರದ ಪಂಚಾಂಗವು

ಅಚ್ಚಿನಲ್ಲಿದೆ !

ಪಂಚಾಂಗದಲ್ಲಿ ಜಾಹಿರಾತು ಕೊಡುವವರಿಗೆ ಏರ್ಪಾಟು ಮಾಡಿದೆ !

ಈ ಪಂಚಾಂಗವು ಕಾನಡಾ ಜಿಲ್ಲೆಯೊಳಗಿನ ಹಳ್ಳಿ ಪಳ್ಳಿಗಳಲ್ಲಿಯೂ, ಸಾಗರ-ಶಿವಮೊಗ್ಗಾ ಮೊದಲಾದ ಮೈಸೂರು ಪ್ರಾಂತದಲ್ಲಿಯೂ ಸುಪ್ರಸಿದ್ಧವಿದೆ ಜಾಹಿರಾತು ಕೊಡಲಿಚ್ಛಿಸುವವರು ಬರುವ ಅಕ್ಟೋಬರ ತಾರೀಖು ೧೫ರೊಳಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿ ದರ ಪತ್ರ ತರಿಸಿಕೊಳ್ಳಬಹುದು

ಪತ್ರ—ಮೆನೆಜರ, "ಸ್ಟಾರ ಅಫ್ ಕೆನರಾ ಪ್ರೆಸ್" ಕುಮಟಾ (ಉ. ಕಾ)

ನಮ್ಮ ಪ್ರೆಸ್ಸಿನಲ್ಲಿ

ಗೇಣಿ ಬಾಕಿ ದಾವೆಯ ಫಾರ್ಮುಗಳು ತಯಾರಿವೆ.

ವಕಾಲತ, ಅನುಲಜಾರಿ ಮೊದಲಾದ ಕೋರ್ಟ ವ್ಯವಹರಣೆಯ ಹಾಗೂ ಕಸ್ಟಮ್ ಖಾತೆಯ ಫಾರ್ಮುಗಳು ಅಗ್ಗವಾಗಿ ಸಿಗುತವೆ.

ಮೆನೇಜರ,

ಸ್ಟಾರ ಒಫ್ ಕೆನರಾ ಪ್ರೆಸ್ ಕಾರವಾರ

ಎಲ್ಲಾ ನೋವುಗಳಿಗೆ ದಿವ್ಯೌಷಧ!

ವಾತಹಾರಿ ತೈಲ.

ಕ್ರಯ ೫ ತೊಲಿ ಬಾಟ ೧ ಕ್ಕೆ ೦—೧೨—೦ ಉಂಚಿ ಸುವಾಸಿಕ ಕಾಬೂಲೀ ಹಿಂಗು ೧೦ ತೊ ಡಬ್ಬಿ ೧ ಕ್ಕೆ ೧—೮—೦ ಹಿಂಗಿನ ಅರ್ಕ ,॥ ತೊ ಲೆಯ ಬಾಟ್ಲಿ ೧ ಕ್ಕೆ ೦—೮—೦. ರಕ್ತಶುದ್ಧಿಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಚವನಪ್ರಾಶ ೨೦ ತೊಲೆ ಯ ಡಬ್ಬಿ ೧ ಕ್ಕೆ ೧—೪—೦ ೧ ತೊಲೆಯ ಹಿಂಗಿ ಡಬ್ಬಿಗಳು ದಜನ್ ೧ ಕ್ಕೆ ೨—೦—೦ ತಲೆ ಹಾಕುವ ಸುವಾಸಿಕ ಮಸ್ತಕರಾಜ ತೈಲ ೫ ತೊಲೆ ಯ ಬಾಟ್ಲಿ ೧ ಕ್ಕೆ ೦—೧೨—೦ ಹವಾ ಪ್ರೋಫ್ ತೊಲೆ ೧ ಕ್ಕೆ ೦—೮— ಇದಲ್ಲದೆ, ನೀಲಗಿರಿ ತೈಲ ಎಲ್ಲಾ ತರದ ಉಂಚಿ ಊದಬತ್ತಿಗಳು ಯೋಗ್ಯ ಕಿ ಮತಿಗೆ ಸಿಗುವವು. ಟಪಾಲ ಖರ್ಚು ಪ್ರತ್ಯೇಕ

ಕೆರೇಕರ ಕಾಬೂಲೀ ಹಿಂಗಿನ ದುಕಾನ

ಜವಳಿಬಾಜಾರ, ಕುಮಟಾ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧. ರಾಗದ ಕೈಪೆಟ್ಟಿಗೆ ಕಿಂ. ೩೧, ೪೦, ೬೦ ೭೫ ೧೦೦.
೨ „ ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೩೦, ೧೪೦.
೩. ತಬಲೆ ಜೋಡಿ ಕಿಂ. ೧೬, ೧೮, ೨೦, ೩೫.
೪. ಹಾರ್ಮೋನಿಯಮ ಗ್ಯಾಡ (ಮರಾಠಿ) ಕಿಂ. ೧॥, ತಬಲೆ ಗ್ಯಾಡ ಕಿಂ. ೧॥ ೮.

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:— **ಗೋಪಾಳ. ಸಖಾರಾಮ ಮತ್ತು ಕಂಪನಿ. ವಿಠ್ಠಲವಾಡಿ ಎದುರಿಗೆ, ೨೬೨ ಕಾಳಬಾದೇವಿ, ಮುಂಬಯಿ.**

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ



ಕಳೆದ ೪-೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಅಗುಂಬೆ, ಶಿವಮೊಗ್ಗಾ-ಸಾಗರ-ತಾಳಗುಪ್ಪ, ಶಿವಮೊಗ್ಗಾ-ಹರಿಹರ-ದಾವಣಗೆರೆ-ಸನ್ನಗಿರಿ, ಶಿವಮೊಗ್ಗಾ-ಕಳೂರಕಟ್ಟೆ, ಸಾಗರ-ಸೊರಬ-ಶಿರಾಳಕೊಪ್ಪ, ಸಾಗರ-ತೀರ್ಥಹಳ್ಳಿ, ಸಾಗರ-ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸುತ್ತಿದ್ದಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ ಹಾಗು ಬೆಳ್ತಂಗಡಿ ಈ ... " ... ಮೋಟರ ಸರ್ವಿಸಿನ " ವಿದ್ಯಮಾನವೂ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಗ " ಲಕ್ಷ್ಮಿ " ಮೋಟರ ಸರ್ವಿಸಿನ " ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುವೆವು.

ಉತ್ತರ ಕನ್ನಡ ಜಿಲ್ಲೆಯ ... ಜೋಗ (Gersoppa Falls), ಶಿವಮೊಗ್ಗಾ ಸಾಗರ, ಹರಿಹರ ಮತ್ತು ... ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ ..., ..., ..., ..., ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾರಂಭ ಮಾಡಿದೆ. ...

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	ಬೆಳಿಗ್ಗಿನ 2½ ಘಂಟೆಗೆ.
ಶಿರಸಿಗೆ ಮುಟ್ಟುವದು	„ ೧೦ „
ಶಿರಸಿಯಿಂದ ... —	ಮಧ್ಯಾನ್ಹ ೧ „
ಸಾಗರಕ್ಕೆ ... —	ಸಾಯಂಕಾಲ ೬
ಸಾಗರದಿಂದ ... — ...	ಬೆಳಿಗ್ಗಿನ ೬ „
ಸಿದ್ದಾಪುರದ ... ಶಿರಸಿಗೆ ಮುಟ್ಟುವದು— ...	„ ೧೧ „
ಶಿರಸಿ ... — ...	ಮಧ್ಯಾನ್ಹ ೨ „
ಕುಮಟೆಗೆ ಮುಟ್ಟುವದು— ...	ಸಾಯಂಕಾಲ ೫ „

N. B. — ... ಶಿರಸಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ ... ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ

SHIMOGA.
22—11—1934.

M. MANJAPPA.
PROPRIETOR

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಬಹುರುಚಿಯುಳ್ಳದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವವು. ೬೦ ೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪ್ರಸರ್ಧಮಾನವಾಗುವದು. (ನಿಜವಾಗಿ ಒಂದೇ ಸಪಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಕಸಿಯು ಹೋಗಿ ಪ್ರಾಕೃತವಾದ ಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚೆನ್ನಾಗಿ ಆಗುತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಶುದ್ಧ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ ಆರರ ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಕೊಡುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦ ಡಜನಿಗೆ ೧೩—೦—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು ಪೋ. ನಿಪ್ಪಾಣಿ ಜಿ ಬೆಳಗಾಂವ

A TALK
with the Agricultrists.

To,

The Editor of the 'Kanara News'

Sir,

Dr. Harold Mann, the Director of Agriculture visited this place '*en-route*' to Kumta on 3rd Oct. 1925 at about 4 p m. and had a talk with agriculturists who had assembled to greet the popular Director and lay their difficulties and grievances before him. The conversations lasted for about an hour, during which the Director elicited information and answered queries regarding sugar cane cultivation, mango grafts, and the use of bone powder as manure and such other topics of agricultural importance. The Director concluded his conversations by asking the agriculturists if they had any grievances and if they wanted any facilities for the benefit of agriculture. Some agriculturists including myself wanted to submit certain grievances for the favourable consideration of the Director but as the Director was in a hurry to go we could not enlighten him on the subject fully and to our satisfaction. I therefore take this opportunity of laying some of these grievances before him with a request that the same may be favourably considered by the Director and that steps may be taken for their early redress:-

(1 The agriculturists who are on account of their poverty and indebtedness are not able to cultivate their lands efficiently and undertake improvements, are neglected by Government and receive little encouragement from them. The agriculturists therefore pray that the Director be pleased to move the Government in the matter and get them to adopt a more liberal policy in granting monetary aid to poor agriculturists in the shape of takavi loans etc

(2) Fines are imposed upon the agriculturists by the Revenue Department on various pretexts, which form an additional burden on the highly taxed agriculturists The agriculturists therefore pray that Government be pleased to stop collecting from the agriculturists, all impositions other than the Revenue assessment.

(3) The restrictions of the Forest Department are a great source of

(CONTINUED ON PAGE 11.)

ಪ್ರಿಯರಿಗೆ ... [illegible]

ಕಾಮಿನಿಯಾ ತೈಲ. ರಿಜಿಸ್ಟರ್

[illegible]

ಕಾಮಿನಿಯಾ ಆಯಿಲ್ (ರಿಜಿಸ್ಟರ್)

[illegible]

ಕ್ರಯ:— ಸಿದ್ದೆಗೆ ರೂಪಾಯಿ 1-0-0, ಸಿದ್ದೆ 3ಕ್ಕೆ ರೂಪಾಯಿ 2-10-0 ... ಟಪಾಲ್ 0-14-0

[illegible]

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್.)

[illegible]

... 1 ಕ್ಕೆ 0-8-0; 1 ... 1 ಕ್ಕೆ 0-12-0; ½ ... 1 ಕ್ಕೆ 2-0-0. ... 0-4-0

... 1 ಕ್ಕೆ 0-12-0.

Address:- **The Anglo Indian Drug & Chemical Co.**

16, Market, **BOMBAY 2**

ವಿವಿಧ ಸಂಗ್ರಹ.

ಒಂದು ಅಬ್ರು ಲುಕ್ಸಾನಿಯ ಖಟ್ಲೆ.

ನಾಗಪುರದೊಳಗಿನ 'ಪ್ರಣವೀರ' ಪತ್ರಕರ್ತರು ಪ್ರಕಟಿಸಿದ ಒಂದು ಲೇಖನದಲ್ಲಿ ಅಲ್ಲಿಯ ತಹಶೀಲದಾರರಾದ ರಾ| ಜಗತಾಪರಾವ ನಾಯುಡುರವರು ಪ್ರಜೆಗಳಿಂದ ಲಂಚ ತಿನ್ನುತ್ತಾರೆಂದು ಧ್ವನಿಸಿದ್ದರು. ತಹಶೀಲದಾರರು 'ಪ್ರಣವೀರ' ಪತ್ರಕರ್ತರ ಮೇಲೆ ಅಬ್ರುಲುಕ್ಸಾನಿಯ ಫಿರ್ಯಾದವನ್ನು ದಾಖಲ ಮಾಡಿ ಲಂಚದ ಪ್ರಕಾರವು ಸಂಪೂರ್ಣವಾಗಿ ನಿರಾಧಾರವಾದದ್ದೆಂದರು. ಆರೋಪಿಯ ಮೇಲೆ ಚಾರ್ಜು ಹಾಕಿ ಮೆಜಿಸ್ಟ್ರೇಟರು ಒಟ್ಟಾವಿ ಪುರಾವೆ ಕೇಳಿದರು. ಆಗ ಮಾತ್ರ ನಿಜವಾದ ನಾಟಕವು ರಂಗಸ್ಥಳಕ್ಕೆ ಬಂತು. ಲಂಚ ತಿನ್ನುವದನ್ನು ಸಿದ್ಧಪಡಿಸುವದು ಒಂದು ಪ್ರಕಾರದಿಂದ ಬಹಳ ಕಠಿಣ ಕೆಲಸ. ಲಂಚ ತಿನ್ನುವದು ಶಾಸನಾರ್ಹವಿದ್ದಂತೆ, ಲಂಚ ಕೊಡುವದೂ ಶಾಸನಾರ್ಹವೇ. ತಾನು ತಹಶೀಲದಾರರಿಗೆ ಲಂಚ ಕೊಟ್ಟಿದ್ದೇನೆಂದು ಸಾಕ್ಷಿದಾರರು ಹೇಳುವ ಬಗೆ ಹೇಗೆ? ಆಗ 'ಪ್ರಣವೀರ' ಪತ್ರಕರ್ತರು ಒಂದು ಯುಕ್ತಿಯನ್ನು ಹುಡುಕಿ ತೆಗೆದರು. ಮಧ್ಯಪ್ರಾಂತ ಸರಕಾರಕ್ಕೆ ಅವರು ಅರಿಕೆ ಮಾಡಿಕೊಂಡಿದ್ದೇನಂದರೆ —"ನನ್ನ ಮೇಲೆ ತಹಶೀಲದಾರರು ಲಂಚ ತಿಂದ ಆರೋಪ ಸಿದ್ಧ ಮಾಡುವ ಪ್ರಸಂಗ ಒಂದಿದೆ. ಲಂಚ ಕೊಟ್ಟವರಿಗೆ ಸರಕಾರವು ಪೀನಲ್ ಕೋಡಿನಂತೆ ಶಾಸನ ಮಾಡದೆ ಕ್ಷಮೆ ಮಾಡುತ್ತೇವಾಗಿ ಜಾಹೀರು ಪಡಿಸಿದ್ದಲ್ಲಿ, ನನ್ನ ಮೇಲಿನ ಆರೋಪವು ನಿರಾಧಾರವಾದದ್ದೆಂದು ನಾನು ಸಿದ್ಧಪಡಿಸುತ್ತೇನೆ." ಮಧ್ಯಪ್ರಾಂತ ಸರಕಾರವು ಪ್ರಣವೀರ' ಪತ್ರಕರ್ತರ ಬಿನ್ನಹವನ್ನು ಮನ್ನಿಸಿದ ಕೂಡಲೆ, ಮೆಜಿಸ್ಟ್ರೇಟ ಕಚೇರಿಯಲ್ಲಿ ಲಂಚ ಕೊಟ್ಟವರ ತಂಡು ಬಂದು ನಿಂತು, ತಹಶೀಲದಾರರ ಸಭ್ಯತನವೆಲ್ಲ ಹೊರಬಿತ್ತು; ಅಬ್ರುಲುಕ್ಸಾನಿಯು ನಿರಾಧಾರವಾದದ್ದೆಂದು ಸಿದ್ಧವಾಯಿತು. ಆರೋಪಿಗಳು ದೋಷಮುಕ್ತರಾದರೆಂದು ಹೇಳಬೇಕೇನು? ಲಂಚ ತಿನ್ನುವ ರಾ| ಜಗತಾಪರವರು, ಲಂಚ ತಿನ್ನುತ್ತಾರೆಂಬ ಧ್ವನಿಯು ಅಬ್ರುಲುಕ್ಸಾನಿಯ ಖಟ್ಲೆಯಿಂದ ಸ್ಪಷ್ಟವಾಗಿ ಮೂಡಿದೆ. ಪ್ರಾಂತಿಕ ಸರಕಾರವು ಇಂಥವರನ್ನು ಮುಂದೆ ಯಾವ ರೀತಿಯಿಂದ ನಡಿಸಿಕೊಳ್ಳುತ್ತದೆ, ಎಂಬದು ಕಾಣಬೇಕು.

***

ಅಳರಸರ ಪರಸ್ಪರ ದಾನ !

ಲೆಪ್ರಸಿ ರಿಲೀಫ ಫಂಡ ಯಾನೆ ಕುಷ್ಠರೋಗ ನಿವಾರಣಾ ನಿಧಿಯ ಜೋಳಿಗೆಯು ಆಳರಸರ ಆಶ್ರಯದಲ್ಲಿ ಇತ್ತೀ ಹಿಂದುಸ್ಥಾನದಲ್ಲಿ ತಿರುಗಿಸಲ್ಪಟ್ಟಿತ್ತು. ಈ ನಿಧಿಗೆ ಅನೇಕ ಮಹಾನುಭಾವರು ಪಟ್ಟಿಕೊಟ್ಟಿರುವರು. ಮಧ್ಯಪ್ರಾಂತದ ಅಧಿಪರಾದ ಸರ್ ಮೊಂಟೆಗ್ಯೂ ಬಟ್ಲರರವರು ೧ ಸಾವಿರ ರೂಪಾಯಿಗಳನ್ನು ಅರ್ಪಿಸಿದರೆಂದು ಇತ್ತೀ ಪ್ರಾಂತದಲ್ಲಿ ಜಾಹೀರಾಯಿತು. ಸ್ವರಾಜ್ಯ ಪಕ್ಷದವರೆಂದರೆ, ಆಳರಸರ ಮರ್ಮಗಳನ್ನೆಲ್ಲ ಹುಡುಕಿ ತೆಗೆದು ಅವರನ್ನು ಸೋಲಿಸಲು ಟೊಂಕ ಕಟ್ಟಿದವರು. ಪ್ರಾಂತಿಕ ಕಾಯಿದೆ ಕೌನ್ಸಿಲಿನೊಳಗಿನ ಸ್ವರಾಜ್ಯ ಪಕ್ಷದ ಸಭಾಸದರೊಬ್ಬರು ಮಧ್ಯಪ್ರಾಂತ ಸರಕಾರಕ್ಕೆ ಒಂದು ಸವಾಲನ್ನು ಕೇಳಿದರು: ಪ್ರಾಂತಾಧಿಪರು ಅರ್ಪಿಸಿದ್ದೆಂಬ ೧ ಸಾವಿರ ರೂಪಾಯಿಗಳು ಎಲ್ಲಿಯವು? ಸರಕಾರಿ ಕೋಶದೊಳಗಿನವೋ? ಅಥವಾ ಪ್ರಾಂತಾಧಿಪರ ಸ್ವಂತ ದೊಕ್ಕಸದೊಳಗಿನವೋ? ಈ ಪ್ರಶ್ನೆಗೆ ಸರಕಾರವು ಉತ್ತರವನ್ನಿತ್ತಿದ್ದರೆ, ಪ್ರಜೆಗಳ ಸಂಶಯವು ದೂರವಾಗ್ಗಿ, ಸ್ವರಾಜ್ಯ ಪಕ್ಷದ ಸಭಾಸದರಿಗೆ ಪ್ರಾಂತಾಧಿಪರ ಔದಾರ್ಯದ ಚಿಕಿತ್ಸೆ ಮಾಡಿದ ಬಗ್ಗೆ ನಾಚಿಕೆಯಾಗುತ್ತಿತ್ತು. ಪ್ರಾಂತಿಕ ಸರಕಾರವು ಈ ಪ್ರಶ್ನೆಯನ್ನು ಕೇಳುವದು 'ಸ್ಕೆಂಡಲಸ್' (scandalous) ಅಂದರೆ, ಲಜ್ಜಾಸ್ಪದವೆಂದು ಸಾರಿ ಹೊಡೆದು ಸವಾಲನ್ನೇ ಕಿತ್ತೊಗೆದು ಬಿಟ್ಟಿರುವದಂತೆ. ಈ ಪ್ರಕಾರದಿಂದ ಮಧ್ಯಪ್ರಾಂತದ ಲೆಪ್ರಸಿ ಪ್ರಾಂತಾಧಿಪರು ಕೊಟ್ಟ ೧೦೦೦ ರೂಪಾಯಿಗಳ ದಾನವು ಪರಸ್ಪರ ಸರಕಾರಿ ಕೋಶದೊಳಗಿನದೆಂಬ ಪ್ರವಾದವು ಇನ್ನೂ ಸ್ಪಷ್ಟವಾಯಿತು. ಪ್ರಶ್ನೆ ಕೇಳುವ 'ಸ್ಕೆಂಡಲಿಗೆ' ಈ ದಾನವು ಪರಸ್ಪರ ಸರಕಾರಿ ಕೋಶದೊಳಗಿನದೆಂಬ 'ಸ್ಕೆಂಡಲ್' ಬಹು ದೊಡ್ಡದಾಗಿದೆ. ಈ ಲೋಕಾಪವಾದವನ್ನು ಪ್ರಾಂತಿಕ ಸರಕಾರವು ದೂರಮಾಡಬೇಕಾದರೆ ಆಳರಸರು ಸರಕಾರಿ ಕೋಶದೊಳಗಿಂದ ತಮ್ಮ ಔದಾರ್ಯದ ಜಾಹೀರಾತು ಹಚ್ಚಿಕೊಳ್ಳುತ್ತಾರೆಂದು ಸಾಮಾನ್ಯ ನಿಯಮವಾಗಿ ಬಿಟ್ಟದೆ. ಪ್ರಾಂತಿಕ ಸರಕಾರವು ತಕ್ಕ ಸಮರ್ಥನೆ ಮಾಡಿಕೊಳ್ಳಲಿ.

***

ಈ ದುಂದುಗಾರಿಕೆ ನೋಡಿರಿ !

ಪಟಿಯಾಳಾ ಸಂಸ್ಥಾನದ ಮಹಾರಾಜರಿಗೆ ತಿಂದು ಸ್ಥಾನ ಸರಕಾರವು ರಾಷ್ಟ್ರಸಂಘದ ಪ್ರತಿನಿಧಿಗಳನ್ನಾಗಿ ನೇಮಿಸಿದೆ. ಇಂಥ ರಾಜಸ ಸ್ಥಾನದ ಕೆಲಸ ತೀರಿಸಿಕೊಂಡು ಮೊನ್ನೆ ತಾ ೧೦ನೇಗೆ ಹಿಂದುಸ್ಥಾನಕ್ಕೆ ಮರಳುವ ರಾಷ್ಟ್ರದ ಪಕ್ಕ ಹೋಗುವ ಮೊದಲು ಮಹಾರಾಜರು ಲಂಡನದಲ್ಲಿದ್ದರು. ಅಲ್ಲಿ ರಾಜೇಸಾಹೇಬರು ಸವ್ಹಾಯ್ ಹೊಟೇಲಿನಲ್ಲಿದ್ದರು, ೧೨೦ ಕೋಣೆಗಳನ್ನು ಬಾಡಿಗೆಗೆ ಪಡೆದಿದ್ದರು, ಅವರೊಡನೆ ೫೫ ಮಂದಿಗಳ ಪರಿವಾರವಿದೆ; ಹಿಂದುಸ್ಥಾನದಿಂದ ಹೋಗುವಾಗ ೨೩೦ ಟ್ರಂಕು ಸಾಮಾನು ಇತ್ತು; ಇಂಗ್ಲಂಡದಲ್ಲಿ ಇನ್ನು ೧೦೦ ಟ್ರಂಕು ಸಾಮಾನು ಖರೇದಿಯಾಯಿತು; ಮಹಾರಾಜರು ಹೇರಳ ಹಣಕೊಟ್ಟು ೧೦—೨೦ ಬೇಟೆ ನಾಯಿಗಳನ್ನು ಕೊಂಡರು. ರಾಷ್ಟ್ರಸಂಘದ ಅಧಿವೇಶನಕ್ಕಾಗಿ ಜಿನವಾ ಪಟ್ಟಣಕ್ಕೆ ಹೋಗುವಾಗ ಮಹಾರಾಜರು ೩೨೦ ಟ್ರಂಕು ಸಾಮಾನವನ್ನೆಲ್ಲ ರಾಜೇಸಾಹೇಬರೊಡನೆ ಬಿಟ್ಟುಹೋಗಿದ್ದರು ಆದರೂ, ಕಿರಕೋಳ ಸಾಮಾನು ಲಂಡನ್ ಸ್ಟೇಶನಿಗೆ ಒಯ್ಯಲಿಕ್ಕೆ ೨೦ ಮೋಟಾರುಗಳು ತಗಲಿದವು. ಮಹಾರಾಜರ ದರಬಾರು ! ದೊಡ್ಡಸ್ತನ ನೋಡಿರಿ! ಸವ್ಹಾಯ್ ಹೊಟೇಲಿನ ಮಹಾರಾಜರ ಸ್ನಾನಗೃಹದಲ್ಲಿ ಒಂದು ಚಿತ್ರವೇಧಕ ವ್ಯವಸ್ಥೆಯಿತ್ತು ವೃಷ್ಟಿಯಂತೆ ನೀರು ಒಂದು ಬೆಳ್ಳಿಯ ಕಾರಂಜಿಯೊಳಗಿಂದ ಸುರಿಯುತ್ತಿತ್ತು ಒಂದೇ ಕಾಲಕ್ಕೆ ತಣ್ಣೀರು, ಬಿಸಿನೀರು, ಬಿದ್ದಾಗಿನ ನೀರು, ಉಗುರು ಬೆಚ್ಚಗಿನ ನೀರು ಹೀಗೆ ೬ ಪ್ರಕಾರಗಳ ನೀರಿನ ವೃಷ್ಟಿಯು ಬೇಕಾದ್ದಲ್ಲಿ ಒಂದೇಸಲ ಬೀಳಲಿಕ್ಕಾ ಸ್ನಾನಗೃಹದಲ್ಲಿ ವ್ಯವಸ್ಥೆಯಿತ್ತು. ರಾಷ್ಟ್ರಸಂಘದ ಮಹಾರಾಜರ ಖರ್ಚನ್ನು ತೆರುವವರಾರು? ಹಿಂದೀ ಪ್ರಜೆಗಳೋ? ಸಂಸ್ಥಾನದ ಪ್ರಜೆಗಳೋ? ತೆರುವದು ಪ್ರಜೆಗಳೇ; ಯಾಕೆಂದರೆ, ಲೋಕೋಪಕಾರಕ್ಕಾಗಿಯೇ ಮಹಾರಾಜರು ಸಪತ್ನಿಕರಾಗಿ ಲಂಡನದಲ್ಲಿ ವಿಲಾಸ ಮಾಡಿದರು.

***

ಇದೆಂಥ ಬೆದರಿಕೆ !

ಆಫ್ರಿಕೆಯಲ್ಲಿ ಒಂದು ಜಾತಿಯಿದೆ, ಈ ಜಾತಿಯವರಿಗೆ ಜಳಕ ಮಾಡುವದೆಂದರೆ ಬಹು ಭೀತಿ, ಈ ಜಾತಿಯವರು ಜಳಕ ಮಾಡುವದು ಇಡೀ ಜನ್ಮದಲ್ಲಿ ಮೂರಾವರ್ತಿ! ಮೊದಲನೇ ಜಳಕವು ತಾಯಿಯ ಹೊಟ್ಟೆಯೊಳಗಿಂದ ಹೊರಬಿದ್ದೊಡನೆ ಕೂಸಿರುವಾಗ! ಎರಡನೇ ಜಳಕವು ಮದುವೆಯ ಸಮಯ!! ಮೂರನೇ ಜಳಕವು ಮಡಿದ ತರುವಾಯ!!! ಈ ಜಾತಿಯಲ್ಲಿ ಹೆಂಡತಿ ಸತ್ತರೆ ಎರಡನೇ ಮದುವೆ ಮಾಡಿಕೊಳ್ಳಲಿಕ್ಕೆ ಅಡ್ಡಿ ಇಲ್ಲ; ಆದರೆ, ಮದುವೆಯ ಸಮಯ ಜಳಕ ಮಾಡಬೇಕಾಗುತ್ತದೆಂದು ಈ ಜಾತಿಯವರು ಎರಡನೇ ಮದುವೆಯನ್ನೇ ಮಾಡಿಕೊಳ್ಳಲೊಪ್ಪುವದಿಲ್ಲ!!

***

ಇದು ಮೋಗಲಾಯಿ !

ನಿಜಾಮ ಸಂಸ್ಥಾನದೊಳಗಿನ ಯರವಾಳಾ ಎಂಬಲ್ಲಿ ಒಂದು ಹುಲಿಯ ಉಪದ್ರವವು ವಿಶೇಷವಾಯಿತು. ಕೇರಳ ದನಗಳು ಆಹುತಿಯಾದವು. ಜನರಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಸಮಯ ಸಾಧಿಸಿ, ಬಹು ಶೌರ್ಯದಿಂದ ಜನರು ಆ ಹುಲಿಯನ್ನು ಹಿಡಿದು ಕೊಂದರು. ಇಷ್ಟರ ತನಕ ಅಲ್ಲಿಯ ಕೋತವಾಲ ಸಾಹೇಬರು ಸುಮ್ಮಗಿದ್ದರು; ಹುಲಿಯನ್ನು ಕೊಂದ ಸುದ್ದಿಯಾದ ಕೂಡಲೆ, ಕೋತವಾಲ ಸಾಹೇಬರು ಹಳ್ಳಿಗೆ ಬಂದು,' ಸರಕಾರಿ ಅಪ್ಪಣೆಯಿಲ್ಲದೆ ಹುಲಿಯ ಬೇಟೆಯಾದದ್ದು ಅಪರಾಧವೆಂದು ಜನರಿಗೆ ಎಚ್ಚರಿಕೆ ಕೊಟ್ಟು, ಹುಲಿಯ 'ಚರ್ಮವನ್ನು ಜಪ್ತಮಾಡಿ ಒಯ್ದು ಬಿಟ್ಟರು. ಇದೆಂಥ ನ್ಯಾಯ?

***

ಒಂದು ಚಮತ್ಕಾರ !

ಅನೇಕ ಶಾಸ್ತ್ರಜ್ಞರು ಭೂಮಂಡಲದ ಉತ್ತರ ಧ್ರುವವನ್ನು ಶೋಧಿಸಲು ಅಲ್ಲಿ ಉದ್ಯಾನ ಮಾಡುತ್ತಿರುವರು. ಇಷ್ಟರಲ್ಲಿ ಕೆಪ್ಟನ್ ಅಮುಂಡ ಸೇನರವರು ಅಲ್ಲಿ ಹೋಗಿದ್ದರು. ಆಗ ಅಲ್ಲಿ ೬೨೦ ಅಡಿ ಉದ್ದವಾದ ಒಂದು ಕಟ್ಟಿಗೆಯ ತುಂಡವು ಅವರಿಗೆ ದೃಗ್ಗೋಚರವಾಯಿತು. ಇದು ೫ ಸಾವಿರ ವರುಷ ಪ್ರಾಯದ್ದಿರಬೇಕು. ಈ ಸಂಗಕ್ಕೆ ಹಚ್ಚಿದ ಹಳದಿ ಮಣ್ಣಿನ ಲೇಪವು ಇನ್ನೂ ಹಾರಿಹೋಗಿಲ್ಲ. ಇದನ್ನು ಕೇಳಿ ಯುರೋಪಿಯನ್ ಶಾಸ್ತ್ರಜ್ಞರು ಚಕಿತರಾಗಿರುವರು. ಕಟ್ಟಿಗೆಯ ತುಂಡವು ೫೦೦೦ ವರುಷಗಳವರೆಗೆ ಬಾಳಬೇಕಾದಿದ್ದರೆ ಆ ಕಟ್ಟಿಗೆಯೆಂಥದು? ಅದಕ್ಕೆ ಹಚ್ಚಿದ ಹಳದಿ ಮಣ್ಣಿನ ಲೇಪವೆಂಥದು? ಎಲ್ಲಾ ಚಮತ್ಕಾರವೇ !!

***

ಕೋರ್ಟಿನಲ್ಲಿ ವಕೀಲರ ಮುಷ್ಟಿಯುದ್ಧ !

ಮಧ್ಯಪ್ರಾಂತದ ಉಮರಾವತಿ ಪಟ್ಟಣದಲ್ಲಿ ಎರಡು ಫಿರ್ಯಾದುಗಳ ವಿಚಾರವಾಗುತ್ತಿದೆ. ಒಂದು ಫಿರ್ಯಾದಿಯೊಳಗಿನ ಆರೋಪಿಯರು ಇನ್ನೊಂದು ಫಿರ್ಯಾದಿಯೊಳಗಿನ ಫಿರ್ಯಾದಿಯರು; ಹಿಂದಿನೊಳಗಿನ ಫಿರ್ಯಾದಿಗಳು ಇನ್ನೊಂದರೊಳಗಿನ ಆರೋಪಿ

ಯರು, ಹೀಗೆ ಪರಸ್ಪರ ಭೀಯರ್ಾದಿಗಳವು. ಹಿಂದು ಕರ್ಥೀನ ವಕೀಲರು ಸುಪ್ರಸಿದ್ಧ ಶ್ರೀ ದಾದಾಸಾಹೇಬ ಖಾಪರ್ಡೇಯವರು. ಇನ್ನೊಂದು ಕರ್ಥೀನವರು ಸ್ಮೈಥ್ವಿಡ್ಡೀನ ಖಾನಸಾಹೇಬರವರು. ಅತ್ತಟ್ಟಿನ ವಕೀಲರು ತಮ್ಮ ತಮ್ಮೊಳಗೆ ವಾದ ಮಾಡಿಕೊಳ್ಳುತ್ತಿದ್ದಾಗ, ಬಾಬಾಸಾಹೇಬರವರು ಸ್ಮೈಥ್ವಿಡ್ಡೀನ ಸಾಹೇಬರಿಗೆ "ಮಿ। ಸ್ಮೈಥ್ವಿಡ್ಡೀನ" ಎಂದು ಸಂಬೋಧಿಸಿದರು. "ಮಿ।" ಎಂದು ತನಗೆ ಸಂಬೋಧಿಸುವದು ಅಪಮಾನಾಸ್ಪದವೆಂದು ಸ್ಮೈಥ್ವಿಡ್ಡೀನ ಸಾಹೇಬರು ನುಡಿದರು. ನಿಮಗೇನು ಸರಕಾರಿ ಬಿರುದು ಪ್ರಾಪ್ತವಾಗಿಲ್ಲ. ಅಂಥಲ್ಲಿ "ಮಿ। ಎಂದು ಸಂಬೋಧಿಸಿಕೊಳ್ಳುವದು ಅಪಮಾನವಾಗಲಾರದು" ಎಂದು ಶ್ರೀ। ಖಾಪರ್ಡೇಯವರು ಉದ್ಗರಿಸಿದರು. ಇದನ್ನು ಕೇಳಿದ ಕೂಡಲೆ, ಸ್ಮೈಥ್ವಿಡ್ಡೀನ ಸಾಹೇಬರಿಗೆ ಪಿತ್ತ ಕೆರಳಿದಂತಾಗಿ ಕೈಗಳನ್ನು ಸಾವರಿಸಿಕೊಂಡು, "ಹೊರಗೆ ಬನ್ನಿರಿ; ನಿಮಗೆ ತೋರಿಸುತ್ತೇನೆ" ಎಂದರು. ಬಾಬಾಸಾಹೇಬರು ವೀರ ಮರಾಠೇ ಪರಂಪರೆಯವರು. ಅವರೂ ಸಾಹೇಬರೊಡನೆ ಮುಷ್ಟಿಯುದ್ಧ ಮಾಡಲು ತಯಾರಾದರು. ಬಾಬಾಸಾಹೇಬರ ವೀರ ಮುದ್ರೆಯ ಅವತಾರ ನೋಡಿದ ಕೂಡಲೆ, ಸ್ಮೈಥ್ವಿಡ್ಡೀನರು ತಣ್ಣಗಾದರು. ಮೆಜಿಸ್ಟ್ರೇಟರು ಮಧ್ಯಸ್ಥಿಕೆ ಮಾಡಿ, ಖಟ್ಲೆಯ ಪ್ರಕರಣವನ್ನು ಮುಂದರಿಸಿದರು. ಇದೆಂಥ ಬಗಳ?

* * *

ಅದ್ಭುತ ಶಕ್ತಿಯ ಮಹಂತರು.

ಕಳೆದ ಆಗಸ್ಟಿನ ಕು। ೧೯ ಮಿಗೆ ಮುಂಬಯಿಯ ಹೆರೆಯ ಮಾಹಿಂಗಾದಲ್ಲಿ ಸುಮಾರು ೧೦-೨೦ ಸಾವಿರ ಜನರು ಸೇರಿದ್ದರು. ಅದ್ಭುತ ಸಾಮರ್ಥ್ಯವುಳ್ಳ ಮಹಂತರೊಬ್ಬರು ಅಲ್ಲಿ ಆಗಮಿಸುವವರಿದ್ದರೆಂಬ ಸುದ್ದಿ ಹರಡಿತ್ತು. ಅವರ ಹೆಸರು ನಾಗಬಾವಾರಾಮ ರತನದಾಸ. ಅವರು ಚಿತ್ರಕೋಟದವರಂತೆ. ದಮ್ಮು, ಕ್ಷಯ ಇತ್ಯಾದಿ ವಿಕಾರಗಳನ್ನೆಲ್ಲ ಅವರು ದಿವ್ಯಶಕ್ತಿಯಿಂದ ವಾಸಿಮಾಡುವರು. ಈ ಸುದ್ದಿ ಕೇಳಿ, ಕರಾಚಿ, ಕಾಠೇವಾಡ, ನಾಗಪುರ, ಕೊಲಾಬಾ, ರತ್ನಾಗಿರಿ ಇತ್ಯಾದಿ ಕಡೆಗಳಿಂದ ಸಾವಿರಾರು ಜನರು ಮಾಟುಂಗಾದೊಳಗಿನ ಬೈಲಲ್ಲಿ ಸೇರಿದ್ದರು. ಮುಂಬಯಿಯಿಂದ ೭ ಸಾವಿರ ಜನರು ಹೋಗಿದ್ದರು. ಮದ್ದನ್ನು ಅವರು ಹಾಲಿನಲ್ಲಿ ಸೇರಿಸಿಕೊಡುತ್ತಾರೆಂದು ತಿಳಿದದ್ದರಿಂದ ಅನೇಕರು ಹಾಲನ್ನು ಕೊಂಡೊಯ್ದಿದ್ದರು. ಸಾಯಂಕಾಲ ೭॥ ಘಂಟೆಗೆ ಮಹಂತರು ಬಂದು ಮದ್ದನ್ನು ಹಂಚಹೇಳಿದರು. ಮದ್ದು ಸೇವಿಸುವವರು ಮದ್ಯ ಹಾಗು ಮಾಂಸಗಳನ್ನು ತ್ಯಜಿಸಬೇಕಾಗಿ ಕಟ್ಟಪ್ಪಣೆ ಮಾಡಿದರು. ಅವರು ಕೊಟ್ಟದ್ದು ಬಿಳೇ ಪುಡಿ; ಅದನ್ನು ಹಾಲಿನಲ್ಲಿ ಹಾಕಿ ಬೆಳದಿಂಗಳಲ್ಲಿ ಹಿಡಿಯಬೇಕೆಂದರು. ಅಂದು ಹುಣ್ಣಿವೆಯ ತಿಂಗಳ ಬೆಳಕು; ಬೈಲು ಪ್ರದೇಶ. ಬೆಳಗಿನ ೪ ಘಂಟೆಯ ವರೆಗೆ ಜನರು ಮದ್ದನ್ನು ಹಿಡಕೊಂಡು, ಬಳಿಕ ಅದನ್ನು ಕುಡಿದು ಮನೆಗೆ ತೆರಳಿದರು. ಅನೇಕರು ರೋಗಮುಕ್ತರಾದರೆಂದು ಮಾರನೇ ದಿನವೇ ಸುದ್ದಿ ಹಬ್ಬಿತು! ಇದೆಂಥ ಚಮತ್ಕಾರ!

* * *

ಚೇಳು ಕಡಿತಕ್ಕೆ ಸುಲಭೋಪಾಯ.

ಚೇಳು ಕಚ್ಚಿದಲ್ಲಿ ಬಿಸಿಮಾಡಿದ ಎಣ್ಣೆಯನ್ನು ಹಚ್ಚಿದರೆ, ಬಹು ಬೇಗ ಗುಣವಾಗುತ್ತದೆ. ಕೈಗೆ ಕಚ್ಚಿದರೆ, ಕೈಯನ್ನು ೨೦ ನಿಮಿಷ ಬಿಸಿ ಎಣ್ಣೆಯಲ್ಲಿ ಹಿಡಿದರಾಯಿತು. ವೇದನೆಗಳು ಮಾಯವಾಗುತ್ತವೆ; ಇನ್ನೆಲ್ಲಿಯೂ ಕಚ್ಚಿದರೆ, ಹತ್ತಿಯನ್ನು ಬಿಸಿ ಎಣ್ಣೆಯಲ್ಲಿ ತೋಯಿಸಿ ತಿನ್ನುವ ಎಲೆಯ ಮೇಲಿಟ್ಟು ಗಟ್ಟಿಯಾಗಿ ಕಟ್ಟಬೇಕು. ಪ್ರಸಂಗ ಬಂದವರು ಈ ಉಪಾಯದಿಂದ ಗುಣಹೊಂದಬಹುದು.

* * *

ಹೊಗೆಸೊಪ್ಪಿಗೆ ಪ್ರತಿಬಂಧ.

ಇಡೀ ಹಿಂದುಸ್ಥಾನದಲ್ಲಿ ೩೩ ಕೋಟಿ ಪ್ರಜೆಗಳಿದ್ದರೆ, ಬೀಡಿ ರೂಪದಿಂದ, ಪುಡಿ ರೂಪದಿಂದ, ವೀಳ್ಯದ ರೂಪದಿಂದ ಹೊಗೆಸೊಪ್ಪು ಸೇವಿಸುವವರು ೨೦ ಕೋಟಿ ಮಂದಿಗಳಂತೆ! ಬರ್ಹೋದೆಯ ಸರಕಾರದವರು ಹಿಂದು ಕಟ್ಟಳೆ ಮಾಡಿ ಚಿಕ್ಕ ಬಾಲಕರು ಹೊಗೆಸೊಪ್ಪು ಸೇವಿಸದಂತೆ ನಿರ್ಬಂಧ ಮಾಡಿ, ಈ ವ್ಯಸನದ ಮೂಲೋಚ್ಛೇದನ ಮಾಡಿರುವರು. ಅದರೂ, ಈ ಚಟವನ್ನು ಚಿಕ್ಕ ಬಾಲಕರು ನಾಟಕಗೃಹಗಳಲ್ಲಿ, ಜಾತ್ರೆಯಲ್ಲಿ, ಸಭೆಗಳಲ್ಲಿ ಪ್ರೋತ್ಸಾಹಿಸಿಕೊಳ್ಳುತ್ತಾರೆಂದು ಅಲ್ಲಿಯ ಅಧಿಕಾರಿಗಳಿಗೆ ಕಂಡುಬಂದಿದೆ. ಅದರಿಂದ ಕಮೀಶನರರು ಒಂದು ಹುಕುಮು ಹೊರಡಿಸಿರುವರು: ಚಿಕ್ಕ ಬಾಲಕರು ಬೀಡಿ ಸೇದುವಾಗ ಗೊತ್ತುಹಚ್ಚಿಕೊಟ್ಟವರಿಗೆ ತಕ್ಕ ಪಾರಿತೋಷಕವು ಕೊಡಲಾಗುವದು. ಈ ಉಪಾಯದಿಂದ ಕಣ್ಗಾವಲು ಮಾಡಿ ಧೂಮ್ರಪಾನ ಮಾಡುವ ವ್ಯಸನಾಧೀನ ಹುಡುಗರ ನಿಗ್ರಹ ಪ್ರವೃತ್ತರಾಗಿದ್ದಾರೆ.

* * *

ಪ್ರಾಣಿಗಳ ಆಯುರ್ಮಾನ.

ಮಂಗಳೂರಿನ 'ಸುವಾಸಿನಿ' ಮಾಸಪತ್ರಿಕೆಯ ವಿಚಿತ್ರ ವಿಷಯಸಂಗ್ರಹದಲ್ಲಿ ಪ್ರಾಣಿವರ್ಗದ ಆಯುರ್ಮಾನವು ಈ ರೀತಿ ಕೊಡಲ್ಪಟ್ಟಿದೆ:— "ಪ್ರಾಣಿವರ್ಗದಲ್ಲಿ ಜೇಡರ ಹುಳಗಳು ೧-೨ ವರ್ಷ ಬಾಳುವವು. ಜೇನು ಹುಳಗಳಲ್ಲಿ ರಾಣಿಯು ೫ ವರುಷವೂ, ಇತರ ಹುಳಗಳು ೧॥ ತಿಂಗಳು ಮಾತ್ರವೂ ಬಾಳುವವು. ಇರಿವೆಗಳು ೧೫ ವರುಷ; ಕಪ್ಪೆ ೪೦ ವರುಷ ಬದುಕುವವು. ೪೫೦ ವರ್ಷ ಬದುಕಿದ ಆಮೆಗಳುಂಟು. ಕೋಳಿಯು ೧೫-೨೦ ವರ್ಷಗಳೂ, ಹಂಸವು ೧೦೦ ವರುಷವೂ, ಬಕವು ೭೦ ವರುಷವೂ, ಗಿಳಿಯು ೧೦೬ ವರುಷವೂ ಬದುಕಿದ್ದುದೂ ಇದೆ. ಕುದುರೆಗಳು ೪೦-೫೦ ವರ್ಷಗಳ ತನಕವೂ, ಕುರಿ ೨೦ ವರುಷವೂ, ನಾಯಿ ೨೮ ವರುಷವೂ, ಬೆಕ್ಕು ೨೩ ವರ್ಷವೂ, ಆನೆ-ತಿಮಿಂಗಿಲುಗಳು ೩೦೦ ವರ್ಷ ಕಾಲಕ್ಕೂ ಬದುಕಿದ ದಾಖಲಾತು ಇದೆ"

* * *

ನೇಮಸ್ತರೂ, ಸರಕಾರವೂ.

ಅಹಮ್ಮದನಗರದ ಶ್ರೀ। ಜಿ. ಕೇ. ಚಿತಳೇಯವರು ನೇಮಸ್ತರು ಅವರು ಸ್ವರಾಜ್ಯ ಪಕ್ಷಕ್ಕೆ ಸೇರಿಕೊಂಡು ಸ್ವರಾಜ್ಯ ಪಕ್ಷದ ಉಮೇದವಾರರಾಗಿ ಕೌನ್ಸಿಲ್ ಆಫ್ ಸ್ಟೇಟ ಎಂಬ ಹಿರಿಯರ ಸಭೆಯ ಸದಸ್ಯತ್ವಕ್ಕೆ ನಿಂತಿರುವರು "ನಾನು ನೇಮಸ್ತನೆಂದು ಸ್ವರಾಜ್ಯ ಪಕ್ಷಕ್ಕೆ ಯಾಕೆ ಸೇರಿದೆ?" ಎಂಬ ಪ್ರಶ್ನೆಗೆ ಉತ್ತರ ಕೊಡುವಾಗ, ಅವರು ನೇಮಸ್ತರಿಗೆ ಸರಕಾರವು ನಡಿಸಿಕೊಂಡ ಪ್ರಕಾರವನ್ನು ಬಣ್ಣಿಸಿರುವರು: "ಸರಕಾರದ ಧೋರಣವು ಕೆಲ ದಿನಗಳ ಹಿಂದೆ ಉದಾರ ಮತವಾದಿ ನೇಮಸ್ತರನ್ನು ಸ್ವಪಕ್ಷಕ್ಕೆ ಸೇರಿಸಿಕೊಳ್ಳುವದಿತ್ತು. ವಿಶೇಷವಾಗಿ ಸರಕಾರದ ಯೋಜನೆಗೆ ಲೋಕಮತದ ಬೆಂಬಲ ಬೇಕಾದಾಗ ನೇಮಸ್ತರನ್ನು ಸರಕಾರವು ಬಳಿಯಲ್ಲಿ ಕರೆಕೊಳ್ಳುತ್ತಿತ್ತು. ಈಗಿನ ಭವನೆಗಳ ಮೇಲಿಂದ ಪ್ರಚಲಿತ ಸರಕಾರವು ಪ್ರಮುಖ ಉದಾರ ಮತವಾದಿ ಲೋಕನಾಯಕರನ್ನು ಬಹಾಲರೆಂದೇ ಭಾವಿಸಿ ಅವರ ಕೃತ್ಯಗಳನ್ನೆಲ್ಲ ಅವನಂಬಿಗೆಯಿಂದಲೂ, ಸಂಶಯದಿಂದಲೂ ಎಣಿಕೆ ಮಾಡುತ್ತದೆ. ಸರಕಾರವು ತನ್ನ ಬೆಂಬಲಕ್ಕಿದ್ದವರ ಸಹಕಾರ ಬೇಡುತ್ತದೆ; ಆದರೆ, ಆ ಸಹಕಾರವು ಸರಿಕರೆಂದು ಬೇಕಾಗಿಲ್ಲ ಸರಕಾರಕ್ಕೆ ಬೇಕಾದ ಸಹಕಾರವು ಸೇವಕಭಾವದ್ದು ಅಂಥ ಸಹಕಾರವನ್ನು ಸ್ವಾಭಿಮಾನಿ ಪುರುಷನು, ಎಷ್ಟೂ ನೇಮಸ್ತನಾಗಿದ್ದರೂ, ಸಹಕಾರಕ್ಕಾಗಿ ಆತುರಗೊಳ್ಳುತ್ತಿದ್ದರೂ ಎಂದೂ ಅಂಗೀಕರಿಸನು" ಮುಂದೆ ಶ್ರೀ। ಚಿತಳೇಯವರು ನ ತಿದರ್ದೇನಂದರೆ, ಸ್ವರಾಜ್ಯ ಪಕ್ಷಕ್ಕೂ, ತಮ್ಮಂಥ ನೇಮಸ್ತರಿಗೂ ಮೂಲ ತತ್ವಗಳಲ್ಲಿ ಭೇದವೇನಿಲ್ಲದ್ದರಿಂದ ತಾವು ಸ್ವರಾಜ್ಯ ಪಕ್ಷಕ್ಕೆ ಸೇರಿಕೊಂಡಿರುವೆವೆಂದು ಖುಲಾಸೆ ಮಾಡಿರುವರು. ಸ್ವರಾಜ್ಯ ಪಕ್ಷದ ಕಾರ್ಯಕ್ರಮದ ವಿಷಯ ಸರಕಾರದ ಅಂತರಂಗದ ಕುರಿತು ಇನ್ನೇನು ಹೇಳಬೇಕು?

ಜಾಹೀರ ನೋಟೀಸು.

ದರಖಾಸ್ತ ನಂಬರು ೬೬-೧೯೨೫ನೇ ಪೈಕಿ.

ವಿಕ್ರಯದ ಜಾಹೀರನಾಮೆಯನ್ನು ಗೊತ್ತುಪಡಿಸುವ ಬಗ್ಗೆ ನೇಮಿಸಿದ ದಿವಸ ನೋಟೀಸು (ಆ. ೨೧, ಕಾ. ೬೬)

(ಸ್ಟಾಂಪ್ ನಂಬರು ೨೮ ಪರಿಶಿಷ್ಟ ೪, ತಖ್ತ್ಯಾ ೧)

ಕುಮಟಾ ಇಲ್ಲೆಯ ಸಬಜಜ್ಜ ಕೋರ್ಟಿನಲ್ಲಿ.

ಮು-ಶ್ಯಾಮರಾವ ಕುಮಟಾ ಇಲ್ಲ ಸ್ಸಾ॥.

ದಿವಾಣೀ ಮೊಕದ್ದಮೆ ನಂಬರು ೧೪೩ ಸನ್ ೧೯೧೨ ನೇ ಪೈಕಿ.

ವ್ಯಾನರ ಶ್ರೀಪಾದ ದೇವರಾವ ನಾಡಕರ್ಣಿ ರಕ್ಷಕ ತಾಯಿ ರುಕ್ಮಾಬಾಯಿ ಕೋಂ ದೇವರಾವ ನಾಡಕರ್ಣಿ ಸಾ॥ ಕುಮಟಾ.	ವಾದಿ
ವ। ರಾ। ಕಾಳಕರ್ಣಿ	
ಮಂಗೇಶ ದೇವರಾವ ನಾಡಕರ್ಣಿ ಮೃತ ವಾರಿಸದಾರರ ಮಕ್ಕಳು (A) ಸಂಜೀವ ಕೂಡಾ	ಪ್ರತಿವಾದಿ

ಪ್ಯೆಸಲಿನ ಮಣೆಯವಾದ (A) ಸಂಜೀವ ಮಂಗೇಶ ನಾಡಕರ್ಣಿ ಇವನಿಗೆ—

ಸದರೀ ದಾವೆಯಲ್ಲಿ ಹುಕುಮನಾಮೆಯು ಪಡೆದವಳಾದ ರುಕ್ಮಾಬಾಯಿ ಕೋಂ ದೇವರಾವ ಇವಳು ಸದ್ರಿ ದರಖಾಸ್ತ ನಂಬರಿದಲ್ಲಿ ಜಪ್ತಿ ಮಾಡಿದ, ನಿಮ್ಮ ಬಾಬ್ತು ನಾಗರಬೈಲ, ಗೋಕರ್ಣ, ಹನೇಹಳ್ಳಿ, ಊಗ ಈ ಗ್ರಾಮಗಳ ಸ್ಥಾವರಾಸ್ತಿಯ ವಿಕ್ರಯ ಮಾಡುವ ವಿಷಯದಲ್ಲಿ ಅರ್ಜಿ ಮಾಡಿರುವದರಿಂದ ನಿಮಗೆ ಈ ಲೇಖದ ಮೇಲಿಂದ ತಿಳಿಸುವದೇನಂದರೆ, ಸನ್ ೧೯೨೫ ಅಕ್ಟೋಬರ ತಿಂ।। ೩೧ ನೇ ತಾರೀಖಿನ ದಿವಸವನ್ನು ವಿಕ್ರಯದ ಜಾಹೀರನಾಮೆಯ ಶರ್ತುಗಳನ್ನು ಗೊತ್ತುಪಡಿಸುವ ಬಗ್ಗೆ ನೇಮಿಸಿದೆ.

ಈಹೊತ್ತು ತಾರೀಖು ೪ ಅಕ್ಟೋಬರ ತಿಂಗಳ ಸನ್ ೧೯೨೫ ನೇ ಇಸವಿಯ ದಿವಸ ನಮ್ಮ ಸಹಿ ಮಾಡಿ ಮತ್ತು ಕೋರ್ಟಿನ ಮೊಹರು ಮಾಡಿ ಕೊಡಲಾಯಿತು.

(ಕೋರ್ಟಿನ ಮೊಹರು)

A. G. Balvalli,

Clerk of the Court,

KUMTA.

ಕಾನಡಾವೃತ್ತ.

ಮಿತಿ ಕ್ರೋಧನ ಸಂ। ಆಶ್ವೀನ ಶು। ೧೦ಯು ಸೋಮವಾರ

ಮೋಸಲ್ ಗಡಿಬಿಡಿ.

ಬ್ರಿಟಿಶ-ತುರ್ಕರ ಹೋರಾಟ.

ಈಗಿನ ರಾಷ್ಟ್ರಸಂಘದಲ್ಲಿ ಮೋಸಲ್ ಪ್ರಕರಣವೆಂಬದೊಂದು ದೊಡ್ಡ ಗಲಭೆದ್ದಿದೆ ಈ ಪ್ರಕರಣವು ಸಮಾಧಾನಕರವಾಗಿ ನಿಕಾಲೆಯಾಗದಿದ್ದರೆ, ಬ್ರಿಟಿಶರಿಗೂ, ತುರ್ಕರಿಗೂ ಯುದ್ಧವಾಗುವ ಸಂಭವವಿರುವದೆಂದು ಬಲ್ಲವರು ಹೇಳುತ್ತಾರೆ. ಮೋಸಲ್ ಪ್ರಕರಣದಿಂದ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ವೈಮನಸ್ಸು ಉಂಟಾಗುವ ಲಕ್ಷಣಗಳು ತೋರುತ್ತಿವೆ. ಈ ಪ್ರಕರಣದಲ್ಲಿ ಬ್ರಿಟಿಶ ಮುತ್ಸದ್ದಿಗಳ ಅನೇಕ ಕಾರಸ್ಥಾನಗಳು ಒಳಗೊಂಡಿವೆ ಅವನ್ನೆಲ್ಲ ಮಿ। ಬ್ರೇಲ್ಸಫರ್ಡ ಎಂಬವರು ವಿಶದವಾಗಿ ಬಣ್ಣಿಸಿರುವರು. ಅವರ ಹೇಳಿಕೆಯನ್ನು ವಾಚಕರು ಪರಾಂಬರಿಸಬೇಕು

ರಾಷ್ಟ್ರಸಂಘದ ಘಟನೆಯ ವಿಷಯ ಈಗ ಯಾರಿಗೂ ಬಿಚ್ಚಿ ಹೇಳಬೇಕಾಗಿಲ್ಲ ರಾಷ್ಟ್ರಸಂಘವು ಅಖಿಲ ಭೂಮಂಡಲದೊಳಗಿನ ರಾಷ್ಟ್ರ ಪ್ರತಿನಿಧಿ ಸಂಸ್ಥೆಯೆಂದು ಖ್ಯಾತಿ ಪಡೆಯುತ್ತಿದ್ದರೂ ಅಂತರಂಗದಲ್ಲಿ ಅದೊಂದು ಬ್ರಿಟಿಶರ ಕೈಗೊಂಬೆಯೆಂದು ಮಿ। ಬ್ರೇಲ್ಸಫರ್ಡರವರು 'ನ್ಯೂ ಲೀಡರ' ಪತ್ರಿಕೆಯಲ್ಲಿ ಬರೆದ ಉದ್ಗಾರಗಳನ್ನು ಯಾರೂ ಅಲ್ಲಗಳೆಯಲಾರರು. ರಾಷ್ಟ್ರಗಳೊಳಗಿನ ಕಲಹಗಳನ್ನು ಪಂಚ ಫೈಸಲಿನಿಂದ ನಿರ್ಣಯಿಸಲು ಏರ್ಪಟ್ಟ ರಾಷ್ಟ್ರಸಂಘಕ್ಕೆ ಬ್ರಿಟಿಶರು ಇಜಿಪ್ತ, ಸೂಡಾನದಲ್ಲಿ ನಡಿಸಿರುವ ಪ್ರಜಾಪೀಡನೆಯು ಅರಿವಿಲ್ಲ, ಫ್ರಾನ್ಸ-ಸ್ಪೇನ ರಾಷ್ಟ್ರಗಳು ಮೊರೊಕ್ಕೋದೊಳಗಿನ ರಿಫ್‌ರ ಸ್ವಾತಂತ್ರ್ಯಾಪಹಾರ ಮಾಡಲು ನಡಿಸಿರುವ ಯುದ್ಧದ ಪರಿವೆಯಿಲ್ಲ; ಪರರಾಷ್ಟ್ರದವರು ಬಡ ಚೀನ ದೇಶದಲ್ಲಿ ನಿರಪರಾಧಿ ವಿದ್ಯಾರ್ಥಿಗಳ ಮೇಲೆ ಹೂಡಿದ ದಾಳಿಯ ಅನರ್ಥಗಳಿಗೂ ಅದರ ಲಕ್ಷ ಸೆಳೆಯದು; ಆದರೆ, ಮೋಸಲ್ ಪ್ರಕರಣವನ್ನು ಮಾತ್ರ ರಾಷ್ಟ್ರಸಂಘವು ವಿಚಾರಿಸಿ ತೀರಬೇಕು. ಯಾಕಂದರೆ, ಮೋಸಲ್ ಪ್ರಕರಣವು ಬ್ರಿಟಿಶರದು ಮೋಸಲಿನ ಅಪಹಾರ ಮಾಡಲು ಸಭ್ಯ ಪ್ರಕಾರಗಳಿಂದ ರಾಷ್ಟ್ರಸಂಘವೇ ನೆರವಾಗದಿದ್ದರೆ, ರಾಷ್ಟ್ರಸಂಘವು ಬ್ರಿಟಿಶರ ಕೈಗೊಂಬೆಯಾದದ್ದರ ಫಲವೇನು? ರಾಷ್ಟ್ರಸಂಘದ ಖರ್ಚನ್ನು ಬ್ರಿಟಿಶ ಸಾಮ್ರಾಜ್ಯವು ತೆರುತ್ತಿರೆ ಅದಕ್ಕೇನಾದರೂ ಪ್ರತಿಫಲ ದೊರೆಯಬೇಕಲ್ಲವೇ?

ಮೋಸಲ್ ಪ್ರದೇಶದ ಮಹತ್ವವೇನು? ಅದಕ್ಕೆ ಇಷ್ಟೆಲ್ಲ ಗಡಿಬಿಡಿ ಯಾಕೆ? ಪರಿಶ್ರಮವೇಕೆ? ಕುಯುಕ್ತಿಗಳ್ಯಾಕೆ? ಎಂದು ವಾಚಕರು ಪ್ರಶ್ನಿಸಬಹುದು ಮೋಸಲ್ ಪ್ರಾಂತವು ತುರ್ಕಸ್ಥಾನ ಹಾಗು ಇರಾಕ ಈ ಪ್ರಾಂತಗಳ ನಡುಮಧ್ಯದಲ್ಲಿದೆ, ಇರಾಕ ದೇಶವು ಬ್ರಿಟಿಶರದು ತುರ್ಕಸ್ಥಾನವು ತುರ್ಕರದು. ಮೋಸಲ್ ಪ್ರದೇಶವು ಬ್ರಿಟಿಶರ ಕೈವಶವಾದರೆ, ಬ್ರಿಟಿಶರಿಗೆ ಇರಾಕದ ಸಂರಕ್ಷಣೆ ಮಾಡಲು ಸೈನ್ಯ ಬೇಡ, ಮೋಸಲ್ ಪ್ರಾಂತದಲ್ಲಿ ತುರ್ಕಸ್ಥಾನದ ಬದಿಗೆ ದೊಡ್ಡ ದೊಡ್ಡ ಪರ್ವತಗಳ ಪಂಗಿಗಳಿಪ್ಪು, ಅವು ಇರಾಕ ದೇಶ ಹಾಗು ಮೋಸಲ್ ಪ್ರಾಂತಗಳನ್ನು ಪರರಾಷ್ಟ್ರಗಳ ದಾಳಿಯಿಂದ ರಕ್ಷಿಸಬಲ್ಲವು ತುರ್ಕಸ್ಥಾನದ ಕೈವಶವಾದರೆ ಬ್ರಿಟಿಶರಿಗೆ ಇರಾಕ ಪ್ರದೇಶದ ಸಂರಕ್ಷಣೆ ಮಾಡುವದು ಕಠಿಣ ಕೆಲಸವೊಂದು ಸ್ವಾಭಾವಿಕ ಅಡಚಣೆ ಇದನ್ನು ಹ್ಯಾಗಾದರೂ ಪರಿಹಾರ ಮಾಡಿಕೊಳ್ಳಬೇಕೆಂದು ಮೊನ್ನೆ ನಡೆದ ರಾಷ್ಟ್ರಸಂಘದ ಬೈಠಕಿನಲ್ಲಿ ತುರ್ಕಸ್ಥಾನದ ಪ್ರತಿನಿಧಿಗಳು ಇರಾಕ ಹಾಗೂ ಬ್ರಿಟಿಶ ಸರಕಾರಗಳೊಡನೆ ಅವಶ್ಯವುಳ್ಳ ಭದ್ರತೆಯ ಕರಾರನ್ನು ಬರಕೊಡಲು ತಯಾರಾದರು. ಆದರೂ ಬ್ರಿಟಿಶರು ಮೋಸಲ್ ಪ್ರಾಂತವನ್ನು ಬಿಡಲೊಲ್ಲರು. ಇದಕ್ಕೆ ಕಾರಣವೇನು?

ಮೋಸಲ್ ಪ್ರಾಂತದಲ್ಲಿ ಎಣ್ಣೆಯ ಗಣಿಗಳಿವೆ ಅವನ್ನು ಸ್ವಾಧೀನಪಡಿಸಿಕೊಳ್ಳಲು ಬ್ರಿಟಿಶರು ಹಾತೊರೆಯುತ್ತಿರುವರು. ಅದಕ್ಕಾಗಿಯೇ ತಮ್ಮ ರಾಷ್ಟ್ರಸಂಘದ ಸ್ವಾಧೀನದಲ್ಲಿ ಈ ಪ್ರಶ್ನೆಯಿಟ್ಟು ಈ ವಿಷಯ ಮೋಸಲ್ ದೇಶದಲ್ಲಿ ಚೌಕಶಿ ಮಾಡಲು ಒಂದು ಕಮೀಶನ್ನು ನೇಮಿಸಿದರು ಈ ಕಮೀಶನ್ನು ಮೋಸಲ್ ಪ್ರದೇಶದಲ್ಲಿ ತಿರುಗಾಡಿ ಪುರಾವೆಯನ್ನು ಸಂಗ್ರಹಿಸಿತು. ಪುರಾವೆಯಿಂದ ಮೋಸಲ್ ಪ್ರಜೆಗಳಿಗೆ ಬ್ರಿಟಿಶರ ಅಧಿರಾಜ್ಯವೇ ಬೇಕಾಗಿರುವದೆಂದು ಸಿದ್ಧವಾಗಿರುವದಾಗಿ ತಿಳಿಯಬರುತ್ತಿದೆ ಈಗ ಮೋಸಲಿನಲ್ಲಿ ಬ್ರಿಟಿಶ ಸೈನ್ಯವಿದ್ದು, ಬ್ರಿಟಿಶರ ಕಾರಭಾರ ನಡೆಯುತ್ತಿದ್ದಾಗ, ಬ್ರಿಟಿಶ ರಾಷ್ಟ್ರಕ್ಕೆ ಮನಸುಪ್ಪಿಗೆಯಿಲ್ಲದಿದ್ದರೂ ಸಾಕ್ಷಿಗಾರರು ಹಾಗೆ ಹೇಳುವದು ಎಂದಾದರೂ ಸಾಧ್ಯವೇ? ಎಂದು ಮಿ। ಬ್ರೇಲ್ಸಫರ್ಡರವರು ನುಡಿದು, ರಾಷ್ಟ್ರಸಂಘದ ಕಮೀಶನಿನ ಚೌಕಶಿಯು ಮೋಸಲ್ ಪ್ರದೇಶವನ್ನು ಅಪಹರಿಸುವ ಸಭ್ಯ ಉಪಾಯವೆಂದು ಧ್ವನಿಸುತ್ತಾರೆ. "ಲೋಕಮತದಂತೆ ಬ್ರಿಟಿಶರು ನಡೆಯಬಯಸುತ್ತಾರೋ! ಹಾಗಿದ್ದರೆ, ಸಮಸ್ತ ಪ್ರಜೆಗಳ ಮತ ಕೊಳ್ಳಿರಿ." ಎಂದು ತುರ್ಕೀ ಪ್ರತಿನಿಧಿಗಳು ರಾಷ್ಟ್ರಸಂಘಕ್ಕೆ ಸವಾಲು ಮಾಡುತ್ತಾರೆ. "ಮೋಸಲ್ ಪ್ರಜೆಗಳು ಅಜ್ಞರು; ಅವರಿಗೆ ಮತಕೊಡುವಷ್ಟು ಜ್ಞಾನವಿಲ್ಲ. ಮತವೆಂದರೇನೆಂಬದು ಅವರಿಗೆ ತಿಳಿಯದು," ಎಂದು ಬ್ರಿಟಿಶರ ಪ್ರತ್ಯುತ್ತರ "ಹಾಗಾದರೆ, ಒಂದು ಯುಕ್ತಿ ಮಾಡುವಾ; ಬ್ರಿಟಿಶಪತಾಕೆ, ತುರ್ಕಸ್ಥಾನದ ಪತಾಕೆ, ಇವೆರಡು ಪತಾಕೆಗಳಲ್ಲಿ ಯಾವದು ನಿಮಗೆ ಬೇಕೆಂದು ಮೋಸಲ್‌ದವರಿಗೆ ಕೇಳಿರಿ, 'ಅವರ ಮತಎಣಿಕೆ ಮಾಡುವಾ;" ಎಂದು ತುರ್ಕೀ ಪ್ರತಿನಿಧಿಗಳು ಮಾರುಉತ್ತರ ಕೊಟ್ಟರು. ಬ್ರಿಟಿಶರು ಈ ಅಹ್ವಾನಕ್ಕೆ ನಿರುತ್ತರರಾದಂತೆ ತೋರುತ್ತದೆ.

ಮೋಸಲ್ ಪ್ರಕರಣವು ಬ್ರಿಟಿಶರ ಹಕ್ಕಿನದೆಂದು ಬ್ರಿಟಿಶರ ಸಾಧನೆ. ಹಕ್ಕು ಹೇಗೆ! ಇರಾಕ ಪ್ರಾಂತವು ಬ್ರಿಟಿಶರದು; ಅದಕ್ಕೆ ಒಪ್ಪಿದ್ದು ಮೋಸಲ್ ದೇಶವು; ಎಂದು ಬ್ರಿಟಿಶರ ಈಗಿನ ಸಾಧನೆ. ಅದಕ್ಕೆ ತುರ್ಕೀ ಪ್ರತಿನಿಧಿಗಳು ಬ್ರಿಟಿಶರ ಹಳೇ ರಿಕಾರ್ಡನ್ನೇ ತೋರಿಸಿ, ಐತಿಹಾಸಿಕ ದೃಷ್ಟಿಯಿಂದಲೂ, ಭೂಗೋಲದ ದೃಷ್ಟಿಯಿಂದಲೂ ಮೋಸಲ್ ಪ್ರದೇಶವು ಪ್ರತ್ಯೇಕವಾಗಿದ್ದು ಎಂದೂ ಇರಾಕ ಸರಕಾರಕ್ಕೆ ಒಪ್ಪಿಗಿಲ್ಲವೆಂದು ಬ್ರಿಟಿಶರ ಆಧಾರದಿಂದಲೇ ಸಿದ್ಧಮಾಡಿ ತೋರಿಸಿದರು. ತುರ್ಕೀ ಪ್ರತಿನಿಧಿಗಳು ತರ್ಕದಲ್ಲಿಯೂ, ಮಾಹಿತಿಯಲ್ಲಿಯೂ ಬ್ರಿಟಿಶ ಪ್ರತಿನಿಧಿಗಳಿಗೆ ಸೋಲಿಸಿದರು ಆದರೂ, ಬ್ರಿಟಿಶರು ಮೋಸಲ್ ದೇಶವನ್ನು ಬಿಡಲೊಲ್ಲರು. ತೋಳನು ಕುರಿ ತಿನ್ನಲು ಯುಕ್ತಿ-ಪ್ರಯುಕ್ತಿಗಳನ್ನು ಮಾಡುವಂತೆ, ಬ್ರಿಟಿಶರು ಅದಕ್ಕಾಗಿ ಕೈಯೊಡ್ಡಿರುವರು.

ಮೋಸಲ್ ದೇಶದಲ್ಲಿ ಕ್ರಿಶ್ಚನ್ ಪ್ರಜೆಗಳಿರುವರು; ಅವರಿಗೆ ತುರ್ಕಸ್ಥಾನದವರು ಕ್ರೂರ ರೀತಿಯಿಂದ ನಡಿಸಿಕೊಳ್ಳುತ್ತಾರೆಂದು ದೊಡ್ಡದೊಂದು ಹೂಲಿಯೆದ್ದಿದೆ. ಕ್ರಿಶ್ಚನ್‌ರಿಗೆ ಮೋಸಲ್‌ದೊಳಗಿನ ಮುಸಲ್ಮಾನರು ಬಹಳ ದಣಿಸುತ್ತಾರೆ. ಮೋಸಲ್ ದೇಶವು ತುರ್ಕರ ವಶವಾದರೆ, ಕ್ರಿಶ್ಚನ್‌ರು ಗತಿಗೇಡಾಗುವರು; ಇತ್ಯಾದಿ ಕೋಲಾಹಲವನ್ನು ಬ್ರಿಟಿಶ ವೃತ್ತಪತ್ರಿಕೆಗಳಲ್ಲಿ ಈಗ ಬೇಕಷ್ಟು ಓದಬಹುದು. ತುರ್ಕಸ್ಥಾನದೊಳಗಿನ ಬ್ರಿಟಿಶ ಪ್ರಜೆಗಳಿಗೂ ಮಹಮ್ಮದೀಯರು ದಣಿಸುತ್ತಾರೆಂದೂ, ಮೋಸಲ್ ಬದಿಗೆ ೪೦ ಸಾವಿರ ಸೈನ್ಯವನ್ನು ತುರ್ಕರು ಕಳುಹಿ ಬಲಾತ್ಕಾರ ಮಾಡಲೆಳಸುತ್ತಾರೆಂದೂ ಬ್ರಿಟಿಶ ವೃತ್ತಪತ್ರಿಕೆಗಳ ಸುದ್ದಿಗಾರರು ಸುದ್ದಿಗಳನ್ನು ಉಂಟುಮಾಡುತ್ತಿರುವರು. ಹೇತುವೊಂದೇ: ತುರ್ಕರ ದುಷ್ಟತನವನ್ನು ಲೋಕದಲ್ಲಿ ಹೇಳಿ, ಮೋಸಲ್ ಪ್ರದೇಶವನ್ನು ಬಗಲಲ್ಲಿ ಸೇರಿಸುವದು. ರಾಷ್ಟ್ರಸಂಘದಲ್ಲಿ ತಮ್ಮ ಬದಿಗೆ ಮತಗಳನ್ನು ಪಡೆಕೊಳ್ಳಲು ಬ್ರಿಟಿಶರು ಇನ್ನೊಂದು ಕುಯುಕ್ತಿ ಮಾ

ತಿರುವರು ಫ್ರಾನ್ಸ, ಅಮೇರಿಕಾ, ಇಟಾಲಿ ಇತ್ಯಾದಿ ರಾಷ್ಟ್ರಗಳು ಬ್ರಿಟೀಶರಿಗೆ ಅನುಕೂಲವಾಗಿ ಮತ ಕೊಟ್ಟರೆ, ನನಗಿಷ್ಟು, ನಿಮಗಿಷ್ಟು, ಅವರಿಗಿಷ್ಟು, ಹೀಗೆ ಎಣ್ಣೆಯ ಗಣಿಗಳನ್ನು ಹಂಚುತ್ತೇವೆಂದು ಗುಪ್ತ ಕಹನಾಮೆಗಳು ನಡೆದಿರುವದಾಗಿ ಮಿ|| ಬ್ರೇಲ್ಸಫರ್ಡರವರು ಉಲ್ಲೇಖ ಮಾಡಿರುವರು. ಹೀಗೆಲ್ಲ ಯುಕ್ತಿ ಪ್ರಯುಕ್ತಿಗಳು ನಡೆದಿರುವಾಗ, ತುರ್ಕರು ಅವರೆಲ್ಲರಿಗೆ ಸಾವಧಾನ ಚಿತ್ತದಿಂದ ಇದಿರಾಗುತ್ತಿರುವರು. ಮೋಸಲ್‌ದ ಗಡಿಬಿಡಿಯು ಸಮಾಧಾನಕರವಾಗಿ ನಿರ್ಣಯವಾಗದಿದ್ದರೆ, ಬ್ರಿಟಿಶರು ಕೇವಲ ಸ್ವಾರ್ಥಪರಾಯಣರಾಗಿ ಮೋಸಲವನ್ನು ಬಗಲಲ್ಲಿ ಹಾಕಿದರೆ, ತುರ್ಕರು ಯುದ್ಧ ಸಾರಿ ಮಾಡುತ್ತಾರೇನೆಂದು ಅನೇಕರು ಭೀತಿಗೊಂಡಿರುವರು. ಈಗಲೇ ಈ ವಿಷಯ ರಾಷ್ಟ್ರಸಂಘದಲ್ಲಿ ಚರ್ಚೆ ನಡೆದು ಇತ್ಯರ್ಥವಾಗುವದಿದ್ದುದರಿಂದ ಸುಮ್ಮನೆ ಅನುಮಾನಸಾಗರದಲ್ಲಿ ಕೇಲಾಡುವದೇಕೆ?

ಸ್ಫುಟ ಸೂಚನೆಗಳು.

೧. ಸರ್ವಾಧಿಪತಿ ರೀಡಿಂಗ ದೊರೆಗಳ ಸರ್ವಾಧಿಪತಿತ್ವದ ಕಾಲವು ತೀರಬಂತು ಈ ಸಮಯ ನಾಲ್ಕು ಕಡೆಗಳಲ್ಲಿ ಸರ್ವಾಧಿಪತಿಗಳಿಗೆ ಕಳುವು ಹೊಡೆಯುವ ಸತ್ಕಾರ ಸಮಾರಂಭಗಳು ಅಲ್ಲಲ್ಲಿ ಜರಗುತ್ತಿರುವವು. ಮಂಗಳವಾರ ತಾ. ೬ ನೇ ರಾತ್ರಿ ಸಿಮ್ಲಾದೊಳಗಿನ 'ಭಾರತೀ ಕ್ಲಬ್'ರು ಸರ್ವಾಧಿಪತಿಗಳಿಗೆ ಔತಣವನ್ನಿತ್ತರು. ಆ ಸಮಯ ಸರ್ವಾಧಿಪತಿಗಳು ಸಾಹಚರ್ಯ, ಸ್ವಸಂತೋಷ ಇತ್ಯಾದಿ ಕಥೆಗಳನ್ನು ಹೇಳಿ, ಭಾರತ ಮಂತ್ರಿಗಳು ಸಾಹಚರ್ಯಕ್ಕಾಗಿ ಹಿಡಿದ ಕೈಯನ್ನು ಭಾರತೀಯ ಲೋಕನಾಯಕರು ಇನ್ನೂ ಹಿಡಿಯಲಿಲ್ಲೆಂದು ವ್ಯಸನಪಟ್ಟರು "ನಂಬಿಗೆಯಿಂದ ನಂಬಿಗೆ ಹುಟ್ಟುತ್ತದೆ; ಔದಾರ್ಯದಿಂದ ಔದಾರ್ಯ ಹುಟ್ಟುತ್ತದೆ" ಇತ್ಯಾದಿ ವೇದಾಂತ ಹೇಳಿ, ಬ್ರಿಟಿಶರು ಹೇಳಿದಂತೆ ಬ್ರಿಟಿಶರೊಡನೆ ಸಹಕಾರ ಮಾಡಿ ಭರತಖಂಡದ ಉದ್ಧಾರ ಮಾಡಿಕೊಳ್ಳಬೇಕೆಂದು ಬಯಸಿದರು. ಭಾರತಮಂತ್ರಿಗಳು ಸ್ವರಾಜ್ಯ ಯೋಜನೆ ಬೇಕೆಂದು ಹೇಳಿದ ಕೂಡಲೆ, ವರಿಷ್ಠ ಕಾಯಿದೆ ಕೌನ್ಸಿಲು ಸ್ವರಾಜ್ಯಯೋಜನೆಯನ್ನು ತಯಾರಿಸಿ, ಭಾರತ ಮಂತ್ರಿಗಳಿಗೆ ತಮ್ಮ ಅಭಿವಚನವನ್ನು ಕೃತಿಯಲ್ಲಿ ರೂಪಾಂತರಿಸಲು ಇಂಬುಗೊಟ್ಟು ಸಾಹಚರ್ಯದ ಕೈಯೊಡ್ಡಿರುವರು. ನಂಬಿಗೆಯಿಂದ ನಂಬಿಗೆ ಹುಟ್ಟುತ್ತದಾದರೆ, ಬ್ರಿಟಿಶರು ಭಾರತೀಯರನ್ನು ನಂಬಿ ಸ್ವರಾಜ್ಯವನ್ನು ಅರ್ಪಿಸಿ ನೋಡಬಹುದಲ್ಲವೇ?

---

೨. ಸಂಯುಕ್ತ ಪ್ರಾಂತದಲ್ಲಿ ಆಳರಸರು ದೊಡ್ಡದೊಂದು ಗಲಭೆಯನ್ನೆಬ್ಬಿಸಿರುವರು. ಲಖನೌವಲ್ಲಿ ಉಗಿಬಂಡಿಯೊಳಗೆ ದರೋಡೆಯಾಗಿ ನೂರಾರು ರೂಪಾಯಿಗಳು ಕಳವಿಗೆ ಹೋದವು. ಈ ಬಗ್ಗೆ ಪೋಲೀಸರೂ, ಆಳರಸರೂ ಚೌಕಶಿ ನಡಿಸುತ್ತಿರುವರು. ದರೋಡೆಕೋರರ ಪತ್ತೆ ಹಿಡಿಯುವ ಸಂಭ್ರಮದಲ್ಲಿ ಪೋಲೀಸರು ಕಾನಪೂರ ರಾಷ್ಟ್ರೀಯ ಸಭೆಯ ತಯಾರಿಗಾಗಿ ದುಡಿಯುತ್ತಿದ್ದ ಅನೇಕ ದೇಶಬಾಂಧವರನ್ನು ಸೆರೆಹಿಡಿಯುತ್ತಿರುವರು. ಕಾನಪೂರ ರಾಷ್ಟ್ರೀಯ ಸಭೆಯ ಸ್ವಯಂಸೇವಕ ಮಂಡಳದ ಶ್ರೀ ವೀರಭದ್ರ ತಿವಾರಿಯವರಿಗೆ ೨೭ ನೇ ತಾರೀಖಿಗೆ ಸೆರೆ ಹಿಡಿದರು. ಸಚೀಂದ್ರನಾಥ ವಿಶ್ವಾಸ, ರಾಮದತ್ತ ಶುಕ್ಲ ಎಂಬ ಇಬ್ಬ ವಿದ್ಯಾರ್ಥಿಗಳನ್ನೂ ಸೆರೆ ಹಿಡಿದಿರುವರು. ಇನ್ನೂ ಸಮಸ ೨೭ ಮಂದಿಗಳಿಗೆ ಬಂಧಿವಾಸವು ಪ್ರಾಪ್ತವಾಗಿದೆ. ಜಾಮೀನಿಯ ಮೇಲೆ ಬಿಡುಗಡೆ ಮಾಡ ಹೇಳಿದರೂ, ಯಾರಿಗೂ ಬಿಡುಗಡೆ ಮಾಡಲು ಮೆಜಿಸ್ಟ್ರೇಟರು ಒಪ್ಪಲಿಲ್ಲ. ಪಂಡಿತ ಜವಾಹರಲಾಲ ನೆಹರೂರವರು ಈ ವಿಷಯ ಸ್ವಾಗತ ಮಂಡಳದ ಸಭೆಯಲ್ಲಿ ಮಾತನಾಡುವಾಗ ಈ ಗಡಿಬಿಡಿಯು ರಾಜಕೀಯ ಸ್ವರೂಪದ್ದೆಂಬ ಅಭಿಪ್ರಾಯಪಟ್ಟರು. ಕಾಂಗ್ರೆಸ್ಸಿನಿಂದ ನಡೆವ ರಾಜಕಾರಣವನ್ನು ಸಹಿಸ್ಕರಿಸುವದು ಆಳರಸರಿಗೆ ಕಷ್ಟವಾಗಿರುವದರಿಂದ ಅಪ್ರತ್ಯಕ್ಷವಾಗಿ ರಾಷ್ಟ್ರೀಯ ಸಭೆಯ ಮೇಲೆ ಇದೊಂದು ವಿಘ್ನಸಂತೋಷಿ ಆಳರಸರ ಕುಹಕವೆಂದು ಹೇಳಿದರು. ಸೆರೆಬಿದ್ದ ದೇಶಕಾರ್ಯರತ ಮಹಾನುಭಾವರ ಸುಚರಿತ್ರ ಒಬ್ಬೊಬ್ಬರದ್ದಾಗಿಯೂ ದರೋಡೆಯಂಥ ನಿಂದ್ಯ ಪ್ರಕಾರದಲ್ಲಿ ಅವರೆಂದೂ ಪ್ರವೇಶಿಸಲಾರರೆಂದು ಎದೆ ತಟ್ಟಿ ಹೇಳುವರು. ಇನ್ನು ತನಕ ಸೆರೆ ಹಿಡಿದವರ ಮೇಲಿನ ಆರೋಪದ ಖುಲಾಸೆಯಾಗಿರುವದಿಲ್ಲ. ಇಂಥ ಪ್ರಸಕ್ತಿಯಲ್ಲಿ ಆಳರಸರು ಹಿಂದೀ ರಾಜಕಾರಣವನ್ನೇ ನಷ್ಟ ಮಾಡಲು ಯತ್ನಿಸುತ್ತಾರೆಂದು ಹೇಳಿದರೆ ಅದು ಯಥಾರ್ಥವಾಗುವದೇನು? ಇಂಥ ದಬ್ಬಾಳಿಕೆ ಭಾರತೀಯರ ಪರಿಚಿತವಾಗಿರುವದರಿಂದ ಅದರಿಂದ ಎದೆಗುಂದದೆ, ಪ್ರಾರಂಭಿಸಿದ ಕಾರ್ಯವನ್ನು ಜೊತೆಗಾರರು ಮತ್ತೂ ಕಟ್ಟರತೆಯಿಂದ, ದೀರ್ಘದೃಷ್ಟಿಯಿಂದ ಕೊನೆಗಾಣಿಸಬೇಕು ಮಾತ್ರ ನ್ಯಾಯವಾಗಿ ಹೇಳಬೇಕಾಗಿಲ್ಲ. ಇಂಥ ಕಷ್ಟಗಳಿಂದ ನಿಷ್ಕಾರಣವಾಗಿ ದೇಶಸೇವಕರಿಗೆ ಕ್ಲೇಶಗಳುಂಟಾಗುತ್ತವೆಂಬದೊಂದು ಮಾತ್ರ ವ್ಯಸನಕರವು. ಸ್ವರಾಜ್ಯಪ್ರಾಪ್ತಿಗಾಗಿ ನಾವು ಇಂಥ ಕಷ್ಟಗಳನ್ನು ಅನುಭೋಗಿಸಿಯೇ ತೀರಬೇಕು.

---

೩ ಪಾಶ್ಚಾತ್ಯರು ಯಾವಾಗಲೂ ಘೋಷಿಸಿದವರು. ಭೂಮಂಡಲದ ಉದ್ಧಾರಕ್ಕಾಗಿ, ಮಾನವ ಜಾತಿಯ ಕಲ್ಯಾಣಕ್ಕಾಗಿ ಹೋರಾಡುವವರು. ಮೊರೊಕ್ಕೊದಲ್ಲಿ ಬ್ರಿಟಿಶರು ಮೋಸಲ್ ಪ್ರಕರಣದ ಗಡಿಬಿಡಿಯನ್ನೆತ್ತಿದ್ದು ಮೋಸಲ್ ಪ್ರಜೆಗಳ ಹಿತಕ್ಕಾಗಿ, ಮೊರೊಕ್ಕೊದಲ್ಲಿ ಸ್ಪೇನದವರೂ, ಫ್ರೆಂಚರೂ ರಿಫ್‌ರೊಡನೆ ಹೂಡಿದ ಯುದ್ಧದ ಕಾರಣಗಳನ್ನು 'ಫೋರೀನ ಎಫೇರ್ಸ' ಪತ್ರಿಕೆಯಲ್ಲಿ ಮಿ|| ಗೋರ್ಡನ್ ಕನಿಂಗಹಮರು ಕೊಟ್ಟಿರುವರು. ರಿಫ್‌ರ ಪ್ರದೇಶವು ಲೋಹಪ್ರಚುರವದೆ. ಅದನ್ನು ಸ್ವಾಯತ್ತ ಮಾಡಿಕೊಳ್ಳಲು ಫ್ರೆಂಚ ಹಾಗೂ ಸ್ಪೇನದವರು ಹಾತೊರೆಯುತ್ತಿರುವರು. ಅಂತರಂಗವು ಸದ್ಯಕ್ಕೆ ರಿಫ್‌ರ ಸೇನಾನಾಯಕರಾದ ಅಬ್ದುಲ್ ಕರೀಮರೊಡನೆ ನಡೆದ್ದ ಕಹನಾಮೆಯಲ್ಲಿ ಸ್ಫುಟವಾಯಿತು. ಲೋಹದ ಗಣಿಗಳನ್ನು ಫ್ರಾನ್ಸ-ಸ್ಪೇನದವರಿಗೇ ಕೊಡಬೇಕು; ಅನ್ಯರಿಗೆ ಕೊಡಬಾರದು. ಅಲ್ಲಿಯ ಮುಲಕಿ ಅಧಿಕಾರಿಗಳು (civil officials) ಸ್ಪೇನದೇಶದವರಿರಬೇಕು; ಪೋಲೀಸ ಫೌಜು ಫ್ರೆಂಚದಿರಬೇಕು; ಈ ಶರ್ತುಗಳನ್ನು ಪಾಲಿಸಿದರೆ, ಫ್ರೆಂಚರೂ ಸ್ಪೇನದವರೂ ರಿಫ್‌ರಿಗೆ ಸ್ವಾತಂತ್ರ್ಯವನ್ನೀಯುವರು. ಇಷ್ಟು ಅಧಿಕಾರಗಳು ಫ್ರೆಂಚ—ಸ್ಪೇನರ ವಶವಾದ ಬಳಿಕ, ಸ್ವಾತಂತ್ರ್ಯ ಕೊಂಡು ಮಾಡುವದೇನು? ಅಬ್ದುಲ್ ಕರೀಮರು ಈ ಕಹನಾಮೆಯನ್ನು ಒಗೆದುಬಿಟ್ಟರೇನಾಶ್ಚರ್ಯ! ಫ್ರೆಂಚ ರಾಷ್ಟ್ರದ ಅಧಿಪತಿಗಳಾದ ಮಿ|| ಪೇನಲೀವರವರು ಅಬ್ದುಲ್ ಕರೀಮರ ಹಟದಿಂದ ಬಹಳ ವ್ಯಸನಪಟ್ಟು, ಇಂಥ ಪ್ರಸಕ್ತಿಯಲ್ಲಿ ಫ್ರೆಂಚರೂ, ಸ್ಪೇನಿಶ್‌ರೂ ಒಮ್ಮನಸ್ಸಿನಿಂದ ಒಕ್ಕಟ್ಟಿನಿಂದ ರಿಫ್‌ರಿಗೆ ನಿರುಪಾಯದಿಂದ ಇದಿರಾಗಬೇಕಾಯಿತೆಂದು ವ್ಯಸನಪ್ರದರ್ಶನ ಮಾಡುತ್ತಾರೆ. ಸ್ವಾತಂತ್ರ್ಯಪರಾರಕ ಕಹನಾಮೆಗೆ ಒಲಿದೊಗದಿದ್ದದ್ದು ಅಬ್ದುಲ್ ಕರೀಮನ ತಪ್ಪೆಂದು ಮಿ|| ಪೇನ ಲೀವರವರು ಡಂಗುರ ಸಾರಿದರೂ ವಿಚಾರಶೀಲರು, ಪಾಶ್ಚಾತ್ಯರ ಸಭ್ಯತನ ಬಲ್ಲಾದವರು ಎಂದೂ ಅಬ್ದುಲ್ ಕರೀಮರಿಗೆ ದೂರಲಾರರು. ರಾಷ್ಟ್ರದೊಳಗೆ ಇದ್ದ ಲೋಹ ಸಂಪತ್ತನ್ನು ಅರಹರಿಸಿಕೊಂಡು ರಾಜ್ಯಾಧಿಕಾರದ ಅಧಿಪತ್ಯವನ್ನು ಫ್ರೆಂಚ—ಸ್ಪೇನಿಶ್‌ರಿಗೆ ವಹಿಸಿ ಸ್ವಾತಂತ್ರ್ಯ ಸಾಗರದಲ್ಲಿ ಕೇಲಾಡುವದಕ್ಕಿಂತ ಫ್ರೆಂಚ—ಸ್ಪೇನಿಶ್‌ರೊಡನೆ ರಣರಂಗದಲ್ಲಿ ಶೌರ್ಯದಿಂದ ಕಾದಾಡಿ ಈ ಸಂಕಲ್ಪದಂತೆ ಸೋತು ಹೋದಲ್ಲಿ ಫ್ರೆಂಚ-ಸ್ಪೇನಿಶರ ದಾಸ್ಯತ್ವದಲ್ಲಿ ನರಳುವದು ವಿಶೇಷ ಶ್ರೇಯಸ್ಕರವಲ್ಲವೆ? ಫ್ರೆಂಚ-ಸ್ಪೇನಿಶ್‌ರ ಅಧಿರಾಜ್ಯಸ್ಥಾಪನೆಯಾದರೂ, ಅವರು ಇದಕ್ಕಿಂತ ಹೆಚ್ಚೇನು ರಾಷ್ಟ್ರಹಾನಿ ಮಾಡಬಲ್ಲರು? ರಿಫ್‌ರು ಕಾದಾಟದಲ್ಲಿ ಜಯಪ್ರದರಾಗಲೆಂದು ಪಾರತಂತ್ರ್ಯದಂಕದಲ್ಲಿ ನರಳುವ ಭಾರತೀಯರದೊಂದು ಪ್ರಾರ್ಥನೆ.

ಸ್ಥಾನಿಕ ವೃತ್ತಾಂತ.

ಕುಮಟಾ—ಕಳೆದ ವಾರದಲ್ಲಿ ಮೋಡ ಕವಿ ಕವಿದು ಬಂತು ೨೬ ದಿನ ಚಲೋ ಮಳೆ ಬಿತ್ತು. ತುಫಾನು ವಿಶೇಷವಾಗಿ ಇನ್ನೆ ಉಗಿಹಡಗವು ಬಂದರ ಮಾಡದೆ ಮುಂದರಿಯಿತು. ಪ್ರಯಾಣಿಕರ ಗೋಳು.

ಕಳೆದ ವಾರದಲ್ಲಿ ಮೋಟಾರ ಕಂಪನಿಯವರೊಳಗೆ ತೀಕ್ಷ್ಣ ಪೈಪೋಟಿಯಾಗಿ, ಶಿರ್ಸಿ ಮೋಟಾರ ಕ್ಲಾಸಿನ ಟಿಕೀಟಿನ ದರವು ೨ ರೂಪಾಯಿ ಇದ್ದದ್ದು ಇಳಿದು ೧೦-೧೨ ಆಣೆಯ ವರೆಗೂ ಬಂತು. ಇದೆಂಥ ಮೇಲಾಟ?

ಇಲ್ಲಿಯ ಹೊಸ ಮ್ಯುನಿಸಿಪಾಲಿಟಿಯು ಅಧ್ಯಕ್ಷರನ್ನು ಆರಿಸುವ ಸಭೆಯು ನಾಳೆ ಮಂಗಳವಾರಕ್ಕೆ ಮ್ಯುನಿಸಿಪಲ್ ಕಚೇರಿಯಲ್ಲಿ ಸೇರುವದು. ಮಂಗಳವಾರದ ಮಂಗಲ ಮುಹೂರ್ತದಲ್ಲಿ ಸೇರಿದ ಸಭೆಯು ನಗರ ದೇವಿಗೆ ಮಂಗಳದಾಯಕವಾಗಲಿ!

ಗಿಬ್ ಹ್ಯಾಸ್ಕೂಲಿನ ವಾರ್ಷಿಕ ಸಮ್ಮೇಲನದ ಕಾಗು ಬಹುಮಾನ ಹಂಚುವ ಸಮಾರಂಭವು ಕಳೆದ ಸೋಮವಾರಕ್ಕೆ ಡೌಲಿನಿಂದ ನೆರವೇರಿತು. ಸಮ್ಮೇಲನಕ್ಕೆ ಊರ ಸದ್ಗೃಹಸ್ಥರೂ, ಸರಕಾರಿ-ನಿಮ್‌ಸರಕಾರಿ ಗೃಹಸ್ಥರೂ ಹೋಗಿದ್ದರು. ಸ್ವಾಗತವರ ಪದ್ಯಗಳು, ಮನೋರಂಜಕ ಸಂವಾದಗಳು, ರಿಪೋರ್ಟು ವಾಚನ ಇತ್ಯಾದಿ ನಡೆದ ಬಳಿಕ, ರಾ|| ಬ| ಕಲ್ಯಾಣಪುರಕರರೂ, ಅಧ್ಯಕ್ಷರಾದ ಕಲೆಕ್ಟರ ಮಿ|| ಭಿಡೇಯವರೂ ಸಂದರ್ಭೋಚಿತ ನಾಲ್ಕು ಮಾತುಗಳನ್ನಾಡಿದರು. ಬೇಸಾಯ ಖಾತೆಯ ಡ್ಯಾರೆಕ್ಟರಾದ ಡಾ|| ಮೆನ್‌ರವರು ಅಂದು ಹಾಜರಿದ್ದರು. ಅಧ್ಯಕ್ಷರ ಬಿನ್ನಹದ ಮೇರೆಗೆ ಡಾ|| ಮೆನ್‌ರವರು ಸ್ಫೂರ್ತಿದಾಯಕ ಭಾಷಣ ಮಾಡಿ, ವಿದ್ಯಾರ್ಥಿಗಳ ಮಹತ್ವವನ್ನು ಹೇಳಿ, ಅವರು ತಮಗೆ ಅರಸಂತೋಷದಂತೆ ಪ್ರಾಪ್ತವಾದ ಬುದ್ಧಿಯನ್ನು ಲೋಕೋಪಕಾರಕ್ಕಾಗಿ ಉಪಯೋಗಿಸಿ ಪರಮಾವಧಿಯ ಸದುಪಯೋಗ ಮಾಡಬೇಕೆ

ನು ಉತ್ತೇಜಿಸಿದರು ಬಳಿಕ, ದಾಸ್ಯಗಿತ, ಇತ್ಯಾದಿ ಗಳು ನಡೆದು ಕಾರ್ಯಕ್ರಮವು ವಿಸರ್ಜನ ಹೊಂದಿತು

ಕಲಕತ್ತದಿಂದ ವಿ। ಛಿಡೇಯವರು ಮೊನ್ನೆ ದಿವಸ ಗುರುವಾರ ಕಾರವಾರಕ್ಕೆ ತೆರಳಿದರು ತೆರಳು ವಾಗ ಇಲ್ಲಿಯ ಶ್ರೀ ಶಾಂತೇರಿ ಕಾಮಾಕ್ಷಿ ಹಾಗು ಶ್ರೀ ವೆಂಕಟರಮಣ ದೇವಸ್ಥಾನಗಳಿಗೆ ಹೋಗಿ ಶ್ರೀ ದೇವರ ದರ್ಶನ ಪಡೆದರು.

ಇಲ್ಲಿಯ ಶ್ರೀ ಕಾಶಿ [illegible] ದೇವಾಲಯದಲ್ಲಿ ನಿನ್ನೆ ರಾತ್ರೆ ಸುಮಾರು ೪೦೦ ಜನರು ನೆರೆದಿದ್ದರು ಮಹಾಪೂಜೆಯು ಒಟ್ಟು [illegible] ಭಕ್ತಬಾಧೆಯಾಗಿತ್ತು ಅದನ್ನು [illegible] ಗಿ ನಿನ್ನೆ ದಿನ ಮುದ್ದಾಂ [illegible] ಹೊಂದಿದ ಭೂತವು ಸ್ವತ ಪಡೆದು ಶ್ರೀ [illegible] ಮೇಲೆ ಬಹಳ ಭೂತಟಿಕೆ [illegible] ಸ್ಥಾನದೊಳಗಿನ [illegible] ವಸ್ತುಗಳಿಗೆ ಪಟಳ ಹೆದರಿಸಿ [illegible] ಶ್ರೀ ದೇವರ [illegible] ಸ್ವಹಸ್ತಗಳಿಂದ ಭೂತಬಾಧೆ [illegible] ನಾಶ ಮಾಡಿದರು. ಇದನ್ನೆಲ್ಲ [illegible] ಪ್ರೇಕ್ಷಕರು ದೃಷ್ಟಿಗೋದರು ಕೊನೆಗೆ ಪ್ರಚಂಡ ಭೂತವು ಶ್ರೀದೇವಾಲಯದ ಆವಾರದಲ್ಲಿ [illegible] ಭೂತಬಾಧೆ [illegible] ಬಿಟ್ಟಂತಾಯಿತು. ಈ ಹೆಂಗಸಿಗೆ ಭೂತಬಾಧೆ ಬಿಡಿಸಲಿಕ್ಕಾಗಿ ಮುಲ್ಕಿ ಧರ್ಮಸ್ಥಳಗಳಿಗೆ [illegible] ತ! ಹೆಂಗಸು ೩೦-೩೫ ವರ್ಷ ಪ್ರಾಯ ದವಳು!

ಹುಬ್ಬಳ್ಳಿ. ತಿಳಿಸುವದೇನಂದರೆ — ಇದೇ [illegible] ೧೫ ನೇ ಗುರುವಾರ ಮಧ್ಯಾಹ್ನ ೧೧ ಘಂಟೆಗೆ ಇಲ್ಲಿ ಕೆನರಾ ಎಜ್ಯುಕೇಶನ ಸೊಸಾಯಿಟಿಯ ಸಾಧಾರಣ ಸಭೆ ಸೇರುವದಿದೆ. ಈ ಸಭೆಗಾಗಿ ಅಧ್ಯಕ್ಷರಾದ ರಾವಬಹಾದ್ದೂರ ಪುಂಡಲೀಕರಾವ ಎನ್ [illegible] ಕರ [illegible] ಯಿಂದ ಬಂದಿರುವರು ಈ ಸಭೆಯ [illegible] ಗರ್ಲ್ಸ್ ಹೈಸ್ಕೂಲ ಸಂಸ್ಥೆಯು ಸ ಧಾರಣೆಯ [illegible] ಹಸ್ತದ ರಚನೆವುಗಳು [illegible] ರಾವಬಹಾದ್ದೂರ ಪುಂಡಲೀಕರಾಯರು ಈ ಸಂಸ್ಥೆಯು ಉನ್ನತಿಗಾಗಿ ತನ ಮನಧನದಿಂದ ಸಹಾಯ [illegible] ಪುರುಷರು [illegible] ಬದ್ಧಯಿಂದ ರಾವಬಹಾದ್ದೂರರು ಎಲ್ಲ ವಿಷಯಗಳನ್ನು ವಿಚಾರಿಸಿ, ಗರ್ಲ್ಸ್ ಹೈಸ್ಕೂಲ ಹಾಗು ಕೆನರಾ ಎಜ್ಯುಕೇಶನ ಸೊಸಾಯಿಟಿಗಳು ಚಿರಸ್ಥಾಯಿಯಾಗುವಂತೆ ವಿಚಾರಿಸಿ ಮಾಡಬೇಕೆಂದು ನನ್ನ ಬಿನ್ನಹವಿರುವದು, ಇದಕ್ಕಿಂತ ಈಗ ಹೆಚ್ಚಿಗೆ ಏನು ಬರೆಯಲಿ?

ದುರುಸ್ತಿ—ಕಳೆದ ಸಂಚಿಕೆಯಲ್ಲಿ ರಾ। ಬ। ಪ್ರಿ. ಕಲ್ಯಾಣಪುರಕರರ ಮಗಂದಿರಾದ ಡಾ। ಆರ್ ವ್ಹಿ. ಕಲ್ಯಾಣಪುರಕರ, ಎಲ್ ಸಿ ಪಿ ಎಸ್, ಡಿ. ಪಿ. ಹೀಗೆ ಬರೆಯುವ ಬದಲು, ಮುದ್ರಕರ ತಪ್ಪಿನಿಂದ ರಾ। ಬ। ಪ್ರಿ. ಕಲ್ಯಾಣಪುರಕರ ಎಲ್ ಸಿ ಪಿ ಎಸ್ ಡಿ.ಪಿ ಎಂದು ಪ್ರಕಟವಾಗಿದೆ ವಾಚಕರು ಇದನ್ನು ತಿದ್ದಿ ಓದಬೇಕು.

ಸಾಭಾರ ಸ್ವೀಕಾರ

The Volunteer. Monthly October issue Edited & published by Dr. N S. Hardikar, "Volunteer" office, Hubli Annual subscription Rs 3/- only

A Scheme of Mass Education—By *A B Mande*, M. A. (Columbia U S A) Yong Men's Indian Association, Nagpur Mahal Price Re. 1/- *Copies can be had from the Manager—Saraswathi Press*, NAGPUR

ಗೌಡಸಾರಸ್ವತ ಸ್ಕೊಲರಶಿಪ್ ಲೀಗ

ಮುಂಬಯಿ — [illegible] ಷಿಕ ವರದಿ [illegible] ರಾ। ಕೃಷ್ಣ ಮಧ್ವನಾಭ ಪ್ರಭು, ಬಿ ಎ ಎಲ್. ಎಲ್ ಬಿ [illegible] ಸ್ಥಳ ಸಮಾಜ, ಗಿರ್ಗಾಂವ ಮುಂಬಯಿ

ಕಾರವಾರ—[illegible]

[illegible] ಕ್ಕಾಗಿ ಅರ್ಜಿ [illegible] ಸೇ [illegible] ಮೋಲು ಈ ಸಿದ್ಧಿಯು [illegible] ಬಂದ [illegible] ಕೊಡಿಸುವಷ್ಟು ಸಹ ಪ್ರಾಂತ [illegible] ಕೊಡಿಸದೆ [illegible] ವಿಕ್ರಮ್ಸ ನೆಜ [illegible] ಪ್ರಿಯತಲ್ಲಿ [illegible] ಮಾಡಿದರು ಮೆಜಿಸ್ಟ್ರೇಟರ ಹ [illegible] ಮೆಜಿಸ್ಟ್ರೇಟರು ಎಲ್ಲ [illegible] ವಿಚಾರವನ್ನು [illegible] ಮಾಡಿದರು ಆ [illegible] ಬಂದ ಹು [illegible] ಟೇಸನದ [illegible] ಕಾನಾವಳೆಗೆ ಎಂಬಲ್ಲಿ ಸಿಪಾಯಿ ವಾಗ [illegible] ಹುಕುಮುವನ್ನು [illegible] ಬಿಡ ಗಡಿ [illegible] ಫಿಗರು ಕೊಂಟೇನರ [illegible] ಅಪರಾಧಿಗಳಿಗೆ ಶಾಸನರಾಗಿದೆ [illegible] ದು ಬಜಾರ ಅಧಿಮಾನ [illegible] ಯರಿಗೆ ಸಹ ಫಯಿಸ [illegible] ದಿಯು ಹಕೀಕತು [illegible] ಸು [illegible] ಶೋಧವನ್ನಿತ್ತು। [illegible] ಪಡಿಸಿ ಅಪರಾಧಿಗಳ ವತ್ತಿ ಹಚ್ಚಿದ [illegible] ಬಿನ್ನ [illegible] ಮಾಡಿರುವರು ಅಪರಾಧಿಗಳ [illegible] ಮುಂದೆ ತಿನ್ನಿ, ನಿರಪರಾಧಿಗಳನ್ನು [illegible] ಮುಕ್ತವಾಗುತ್ತ ಅಪರಾಧವು

ಸಹಕಾರಿ ಸಂಘ [illegible] ಸಾಧಾರಣ ಸಭೆಯು ತಾ ೧೯-೧೦-೩೫ನೆ [illegible] ಸೇರಿ ವಿಡಿ ವಿ ನೆ [illegible] ಟಿಯು ಚ ನಾವಣೆಯಾಗುವದಿದೆ ಸಹಕಾರಿ ಸಂಘದ [illegible] ಸಾಲ [illegible] ಮೇಲಿ [illegible] ದಾವೆಗಳು ಪರತ ತೆಗೆದಿದ್ದಾರೆ

ಕಳೆದ ೩-೪ದಿನಗಳಿಂದ ಮಳೆ ಬೀಳಹತ್ತಿದೆ. ಹವೆ ಸಹ್ಲ ತಂಪು ಪ್ರಸನ್ನವಾಗಿಯದೆ

ಕುಂಕೇರಿ—ಪ್ರತಿ ವರ್ಷದಂತೆ ನವರಾತ್ರೆಗೆ ಇಲ್ಲಿ ಜರುಗುತ್ತಿರುವ ಸರಸ್ವತ್ಯುತ್ಸವವು ಈ ವರ್ಷವೂ ಸಾಂಗವಾಗಿ ನೆರವು ಮಹಾನವಮಿಯು ದಿವಸ ಮಹಾಪೂಜೆ ಯೊಂದಿಗೆ ಸಾಂಗವಾಗಿ ಕೊನೆಗಂಡಿತು.

ಆ ಹೊತ್ತು [illegible] ಶಾಲೆಗಳ ಮೇಲಧಿಕಾರಿಗಳು ಪಾಠಶಾಲೆಯ ಮಕ್ಕಳಿಗೆ ಭೆಟ್ಟಿಯನ್ನಿತ್ತು ಬುಕ್ಕವಳಕ್ಕೆ ಹಾಜರಿದ್ದರು! ಮರಳಿ ಹೋಗುವಾಗ ಕುಂಕೇರಿ-ಕಾರವಾರ ಮಾರ್ಗದ ದುಸ್ಥಿತಿಯು ಮಾಮಲೆ [illegible] ಉದ್ಧಾರ ಮಾಡುವಂತೆ ನಡೆಯಹತ್ತಲು, ಆ ಅಧಿಕಾರಿಗಳಲ್ಲೊಬ್ಬರು 'ಇದೆಂಥ ಮಾರ್ಗವು! ನೀವು ಕುಂಕೇರಿ ಜನರು [illegible] ಅಧಿಕಾರಿಗಳಿಗೆ ಅರ್ಜಿ ಮಾಡಿದ್ದಲ್ಲಿ ನಾನ [illegible] ನನ್ನ ಪ್ರಯತ್ನಿಸುವೆ [illegible] ಉದ್ಗರಿಸಿದರಂತೆ! ಕುಂಕೇರಿಯು ಎಚ್ಚರವಾಗಲಿ!

ಮಾರನೇ ದಿನ ರಾತ್ರಿ ಎಂದಿನಂತೆ ಶ್ರೀಮದ್ಭ ಜಯಂತಿಯು ಉತ್ಸಾಹದಿಂದ ನೆರವೇರಿಸಲ್ಪಟ್ಟಿತು.

ಭೆಟಿಕಳ—ಶ್ರೀ ಕ್ಷೇತ್ರ ಕೊಲ್ಲಾಪುರ (ಕರವೀರು) ಮಹಾಲಕ್ಷ್ಮೀ ದೇವಸ್ಥಾನದೊಳಗೆ ಈಗ ಹೊಸದಾಗಿ ಕಟ್ಟಿಸಿದ ವಿಚಿತ್ರಕರವಾದ ಸರಸ್ವತೀ (ಹಿಲಗ, ಮಂಟಪದ [illegible] ದ್ವಾರದ ಮೇಲ್ಭಾಗದಲ್ಲಿರುವ ಕಮಾಲಾಲಯ ಲಕ್ಷ್ಮೀ ಚಿತ್ರದ ಮೇಲ್ಗಡೆ ಯಲ್ಲಿ [illegible] ನವರಾತ್ರಿ ಅಷ್ಟಮಿ ತಿಥಿಯಾದ ಶಾರದಾ ಸ್ಥಾಪನೆಯ ಸಮಯ ಅತ್ಯಂತ ರಮಣೀಯ ವಾಗಿಯೂ, ಭವ್ಯವಾಗಿಯೂ ಇರುವ ಹೊಸ ಶ್ರೀ ಚಕ್ರವು ಅಕಸ್ಮಾತ್ ಒದಗಿ ಸ್ಥಾಪಿಸಲ್ಪಟ್ಟಿತು. ಇದು ಅತ್ಯಂತ ಸಾಹಸ ಭಕ್ತರಾಗಿದ್ದ ಬ್ರಹ್ಮಶ್ರೀ [illegible] ತಂತ್ರಿಗಳವರು (ತಂತ್ರಿಯವರು) ತಮ್ಮ [illegible] ಕಾಲದಲ್ಲಿ ಶ್ರೀ ಮಹಾಲಕ್ಷ್ಮೀ [illegible] ಕರವಾಗಿ ತಯಾರು ಮಾಡಿಸಿ ಇಟ್ಟಿದ್ದರಿತ್ತನೆ. ಈ ಶ್ರೀ ಚಕ್ರವು ಇಂಥಾ ಉತ್ಕೃಷ್ಟ ಸ್ಥಾನ, ಉತ್ಕೃಷ್ಟ ಕಾಲದಲ್ಲಿ ಪ್ರತಿಯಾಗಿ [illegible] ಸ್ಥಾಪಿತವಾಗಲಿಕ್ಕೆ ಕಾರಣವು ಶ್ರೀ ಮಹಾಕಾಂತಿಕೆಯ ಮಹಿಮಾತಿಶಯ ತಂತ್ರಿಗಳವರ ಪುಣ್ಯ [illegible] ಆಶೀರ್ವಾದ [illegible]

ಮುರ್ಡೇಶ್ವರ—(ತಾ. ೧೧-೧೦-೩೫) ಅತಿ [illegible] ಬಿಸಿಲು ಬಿದ್ದ ನಂತರ, ಈ ವಾರದಲ್ಲಿ ದಿನಾ ಒಂದು ತಾಸು ಅಥವಾ ಅರ್ಧ ತಾಸು ಸಣ್ಣ ಸಣ್ಣ ಮಳೆ ಬರುತ್ತ ಇದೆ ಬೆಳ್ಳಕ್ಕೆ ಭತ್ತಾರಿ [illegible] ಕಲವು ಕಡೆಯಲ್ಲಿ [illegible] ನಾಲ್ಕರಲ್ಲಿ ಮೂರು ಪಾಲು ಪೈರ ಭತ್ತಕ್ಕೆ [illegible] ದಿನದ ಹೆರದಣೆಗೆ [illegible] ಮಾರ್ಗದ ಇಕ್ಕೆಡೆಯಲ್ಲಿ ಬೆಳೆ ಚನ್ನಾಗಿ [illegible] ಗುಡ್ಡದ ಬದಿ ನೆರ ಹಳ್ಳಗಳಲ್ಲಿ ಅನೇಕ ಕಡೆಯಲ್ಲಿ ನೆಟ್ಟಿ ಮಾಡಿ [illegible] ಬೆಳೆಯುವೇ, [illegible] ಬಂದು ಸಹ, ಪೈರು ಕೆಟ್ಟು ನಾಲ್ಕನೇ [illegible] ಅಂಶ ಸಹ ಭತ್ತ ಹುಟ್ಟಲಿಲ್ಲೆಂದು ಒಕ್ಕಲಿಗರು [illegible] ರೆವಿನ್ಯೂ ಖಾತೆಯವರಿಂದ [illegible] ಲೆಕ್ಕು ನಡೆಯುತ್ತವಂತೆ ನಾಳೆ ತಾರೀಕು ೧೬ನೇಗೆ ಮೆ। ಡ್ರೆ। ಕಲೆಕ್ಟರ ಸಾಹೇಬರು ಇಲ್ಲಿಗೆ ಚಿತ್ತೈಸುವರೆಂದು ಹೇಳುತ್ತಾರೆ.

ಶ್ರೀ ಮೃಡೇಶ್ವರ ದೇವಸ್ಥಾನಕ್ಕೆ ವರ್ಷಕ್ಕೆ ೩೩೦ ರಷ್ಟು-ಅದರ ೧೯೩೦ ರಿಂದ [illegible] ಸರಕಾರೀ ಇಸ್ತಿ ಇದ್ದು ಅದರಿಂದ ನಡೆಯುವ ಸಿಬ್ಬಂದಿಗಳ [illegible] ಸರಕಾರೀ [illegible] ಗಳಿಸಿರುತ್ತವೆ [illegible] ಗಿನ ಎಲ್ಲ ಕಮ್ಮಿಕಡೆಗೆ ಕೆಡಿಸುತ್ತಿಂದು [illegible] ಗಳನ್ನ ಹಚ್ಚಿ ಕಾದಿತ ಮ ಕರ್ತವ್ಯವು ದೇವಸ್ಥಾನ ಪರಿಪಾಲಕರದು ಇದೆ ಇತ್ತ, ಎಷ್ಟ ದಿವಸ [illegible] ರಿಂದ ಇದಕ್ಕಾಗಿ ಮೊದಲು ೧೬ ಹಾಡು ಎಷ್ಟ ಪ್ರಥಮದ ಬದಲು ೧೩ ಹಾಡುಗಳನ್ನು ಮಾತ್ರ

ರತೆ ಮೊಕ್ತೇಸರರು ಸರಕಾರಿ ಪರಿಚಾರಕರಿಗೆ ಕೊಡುತ್ತ ಬರುತ್ತಿದ್ದರಂತೆ. ಈ ಸರಕಾರೀ ನಂದಾದೀಪಗಳ ಹೊರತು ಊರ ಭಕ್ತರು ನಾಲ್ಕು ನಂದಾದೀಪಗಳನ್ನು ಇಟ್ಟಂಥವು ಪ್ರತ್ಯೇಕವಾಗಿ ಇದ್ದಾವೆ ಈ ಬಗ್ಗೆ ನಾಲ್ಕು ಹಾಡು ಎಣ್ಣೆ ಆ ನಂದಾದೀಪಗಳನ್ನು ಉರಿಸುವವರು ಪರಿಚಾರಕರಿಗೆ (ಕೀರ್ತಿಶಾಂತಿ ಭಟ್ಟರಿಗೆ) ಕೊಡುತ್ತಾರಷ್ಟೇ. ಈಗ ಈ ಪ್ರಕಾರ ಜನರಿಂದ ಬರಬೇಕಾಗುವ ನಾಲ್ಕು ಹಾಡು ಎಣ್ಣೆ "ಸರಕಾರಿ" ನಂದಾದೀಪ ೧೬ ರ ಬಗ್ಗೆ ಕೊಡುವ ೧೨ ಹಾಡು ಎಣ್ಣೆಯಲ್ಲಿ ವಜಾ ಮಾಡಿ ಬಾಕಿ ೮ ಹಾಡು ಮಾತ್ರ ಕೊಡಬೇಕೆಂದು ಆತನಿಗೆ ಮೊಕ್ತೇಸರ ಮೆ|| ಅವಿಗೆರ ರಾಮಚಂದ್ರ ಭಟ್ಟರು ಹಟಹಿಡಿದ್ದು, ಕಳೆದ ಜನವರಿಯಿಂದ ೮ ತಿಂಗಳಲ್ಲಿ ೮ ಹಾಡು ಮಾತ್ರ ಕೊಟ್ಟು, ಕಳೆದ ಸಪ್ಟಂಬರದಿಂದ ಎಣ್ಣೆ ಕೊಡದೆ ಈ ವರ್ಷದ ಬಾಬತು ಬರುವ ಡಿಸೆಂಬರ ಅಖೇರಕ್ಕೆ ಇನ್ನು ಕೊಡತಕ್ಕದ್ದಿಲ್ಲವೆಂದು ಹೇಳಿದ್ದರಿಂದ, ಪರಿಚಾರಕರು ನಿರುಪಾಯವಾಗಿ ಇದೇ ಅಕ್ಟೋಬರ ೧ನೇ ತಾರೀಕಿಗೆ "ಸರಕಾರೀ" ನಂದಾದೀಪಗಳನ್ನೇ ಹಚ್ಚಲಿಲ್ಲವೆಂತಲೂ, ಶ್ರೀ ದೇವರ ದಯೆಯಿಂದ ಮಂಜಿನ ರಾತ್ರೆ ಹಚ್ಚಿದ ಒಂದು ದೀಪ ಮಾತ್ರ ಇತ್ತೆಂತಲೂ. ನಂತರ ಸಾಯಂಕಾಲಕ್ಕೆ ಒಂದು ಕಾಲು ಹಾಡು ಎಣ್ಣೆಯನ್ನು ಮಹಿಮಾಟದಾರರು 'ಕಡವಾಗಿ' ಎಂದು ಕೊಟ್ಟರೆಂತಲೂ, ಇದನ್ನೆಲ್ಲ ನೋಡಿದ ಗೋಳಿನ ಅನೇಕ ಭಕ್ತರು ಹೇಳುತ್ತಾರೆ. ಅಂತೂ 'ದೇವರು ಕೊಟ್ಟರೂ ಪೂಜಾರಿ ಕೊಡನು' ಎಂಬ ಗಾದೆ, ಇದರ ಇತ್ಯರ್ಥವನ್ನು ಯಾರು ಮಾಡಬೇಕು? ತಮ್ಮ ಬುಡ್ಡಿ ರಿಯಿಂದ ನಿಸ್ತೀಕ ಹಣಾ ಕೊಡುವ ಮೆ|| ಮಹಾಲ್ಕರೀ ಸಾ|| ರಾಗಲೀ, ದೇವಸ್ಥಾನದ ಇತರ ಮೊಕ್ತೇಸರರಾಗಲೀ ಈ ಕುರಿತು ತಕ್ಕ ವಿಚಾರ ಮಾಡ್ಯಾರೇನು?

ಸಿದ್ದಾಪುರ—ಸಿದ್ದಾಪುರ ತಾಲೂಕಾ ಲೋಕಲ್ ಬೋರ್ಡಿಗೂ, ಜಿಲ್ಹಾ ಲೋಕಲ್ ಬೋರ್ಡಿಗೂ ನಿಂತ ಉಮೇದವಾರರ ಲೀಸ್ಟು.

ಜಿ. ಲೋ. ಬೋರ್ಡಿಗೆ

ಶ್ರೀ|| ಅಣ್ಣಾಜಿ ಬಸಪ್ಪ ಗೌಡಾ, ಕೊಸೂರ (ಬಿಡ್ಗ
" ಬೀರಗೌಡಾ ಕಟ್ಟೀಗೌಡಾ ಹರಗಾರ, (ಮೀನ.
" ಚನ್ನಬಸಪ್ಪ ಫಕೀರಪ್ಪಗೌಡಾ ಹಗ್ಗೋಡಮನೆ.(ಹುಲಿ
" ಗೋಪಾಲ ರಾಮಚಂದ್ರ ದೇವ, ಸಿದ್ದಾಪುರ, (ನಿಶಾನೆ
" ಕೃಷ್ಣಪ್ಪ ನಾಗಪ್ಪ ಹೆಗಡೆ ಕಲ್ಲಗದ್ದೆ, (ಗಣಪತಿ.
" ಸೀತಾರಾಮ ವೆಂಕಟ್ರ ಹೆಗಡೆ ಮಗೆಗಾರ (ಸೂರ್ಯ

ತಾ. ಲೋ. ಬೋರ್ಡಿಗೆ

ಸಿದ್ದಾಪುರ ಗ್ರೂಪ ರಾಖೀ ತಾಲೂಕ ಕಚೇರಿ.

ಶ್ರೀ|| ಅಣ್ಣಾಜಿ ಬಸಪ್ಪ ಗೌಡಾ ಕೊಸೂರ. (ಬಿಡ್ಗ
" ದೇವಯ್ಯ ವೀರಯ್ಯ ಗೌಡಾ ಕೊಸೂರ (ಆನೆ
" ಗೋಪಾಲ ರಾಮಚಂದ್ರ ದೇವ (ನಿಶಾನೆ

ಮಾವಿನಗುಂಡಿ ಗ್ರೂಪ ರಾಖೀ ಧರ್ಮಶಾಲಾ

ಶ್ರೀ|| ಮಲ್ಲಿಕಾರ್ಜುನ ಶಿವಬಸಪ್ಪಗೌಡಾ ಕೆಳಜ್ಜರ
" ರಾಮಚಂದ್ರ ಮಂಜಯ್ಯ ಹೆಗಡೆ ಸಾಲಕ್ಕೆ

ಕ್ಯಾದ್ಗಿ ಗ್ರೂಪ. ರಾಖೀ ದೇವಸ್ಥಾನ.

ಶ್ರೀ||ಹನ್ಮಂತ ನಾಗೇಶರಾವ ಹಿರೇಕೋಡ ಬಿಗ್ಗೆ,
" ರಾಮಯ್ಯ ತಿಮ್ಮಪ್ಪ ಹೆಗಡೆ ದೊಡ್ಮನೆ.

ಬಿದ್ರಕಾನ ಗ್ರೂಪ. ರಾಖೀ ದೇವಸ್ಥಾನ.

ಶ್ರೀ||ಚನ್ನಬಸಪ್ಪ ಮುರಿಗೆಯ್ಯ ಗೌಡಾ ಕೋಲಸಿ,(ಕತ್ತಿ
" ಸುಬ್ರಾಯ ರಾಮಯ್ಯ ಹೆಗಡೆ ಹೀನಗಾರ, (ಕೃ
" ವೆಂಕಟರಮಣ ಗಣಪಯ್ಯ ಹೆಗಡೆ ಉಳ್ಳಾನೆ, (ಗಾಡಿ.

ಬಾಳೆಕೊಪ್ಪ ಗ್ರೂಪ ರಾಖೀ ಗ್ರಾಮಚಾವಡಿ.

ಶ್ರೀ|| ದೇವರು ತಿಮ್ಮಪ್ಪ ಹೆಗಡೆ ಹೊನ್ನೆಸರು, (ಸವಾ-
" ರಾಮಪ್ಪ ಪರಮಯ್ಯ ಹೆಗಡೆ ಹೊನ್ನೆಹದ್ದು, (ಮರ,
" ಸುಬ್ರಾಯ ಕೃಷ್ಣಯ್ಯ ಹೆಗಡೆ ಕಶಿಗೆಸವಾಲ, (ಹಕ್ಕಿ.
" ಸುಬ್ರಾಯ ನರಸಪ್ಪ ಹೆಗಡೆ ಬ್ಯಾರಗಲ್, (ಕುದುರೆ.

ಕ್ಯಾದ್ಗಿ ಗ್ರೂಪ ರಾಖೀ ಧರ್ಮಶಾಲಾ.

ಶ್ರೀ|| ಗಣಪತಿ ರಾಮಯ್ಯ ಹೆಗಡೆ ಹಿರೇಕೈ, (ಮನುಷ್ಯ.
" ಕೃಷ್ಣಪ್ಪ ನಾಗಪ್ಪ ಹೆಗಡೆ ಕಲ್ಲಗದ್ದೆ, (ಗಣಪತಿ
" ನಾಗಪ್ಪ ಲಕ್ಷ್ಮೀನಾರಾಯಣ ಹೆಗಡೆ ಬಿಳ್ಳಿ ಕ್ಯಾದ್ಗಿ(ಸ್ಯಾಕಲ

* ಈ ಚಿನ್ಹೆಯ ಉಮೇದವಾರರು ಕೊಂಗ್ರೆಸ ಕಮಿಟಿಯವರಿಂದ ಸ್ವೀಕಾರಿಸಲ್ಪಟ್ಟವರು. ತಾ. ೩-೯-೩೬ ಸೇರಿದ್ದ ತಾಲೂಕಾ ಕೊಂಗ್ರೆಸ ಕಮಿಟಿಯವರು ದಯವಿಟ್ಟು ಜನರಿಗೆ ಜಿಲ್ಹಾ ವ ತಾಲೂಕಾ ಲೋಕಲ್ ಬೋರ್ಡಿಗೆ ಉಮೇದವಾರರಾಗಿ ನಿಲ್ಲಲು ಸ್ವೀಕಾರ ಮಾಡಿರುವದೋ ಆ ಜನರಿಗೇ ತಾ. ೬-೧೦-೩೬ನೇ ದಿನ್ಸ ಕೂಡಿದ ಪ್ರಮುಖ ಗೃಹಸ್ಥರು ಜಿಲ್ಹಾ ಲೋಕಲ್ ಬೋರ್ಡಿಗೆ ಉಮೇದವಾರರಾಗಿ ನಿಲ್ಲಲು ಮತ್ತೊಮ್ಮೆ ಸಂಪೂರ್ಣ ಬಹುಮತದಿಂದ ಸ್ವೀಕಾರ ಮಾಡುತ್ತಾರೆ. ಕಾಂಗ್ರೆಸದವರು ಈ ಕೆಳಗಿನ ಜನರಿಗೆ ಸ್ವೀಕಾರ ಮಾಡಿದ್ದಾರೆ. ಆದ್ದರಿಂದ ಎಲ್ಲ ಮತದಾರರೂ ಈ ಜನರೇ ಆರಿಸಿ ಬರುವಂತೆ ಪ್ರಯತ್ನಿಸಬೇಕಾಗಿ ತಾಲೂಕಾ ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿಗಳ ವಿನಂತಿ

ಶಿರಸಿ—ಕಾನಡಾ ಜಿಲ್ಹಾ ಪ್ರಾಥಮಿಕ ಶಿಕ್ಷಕರ ಸಮ್ಮೇಲನವು ನಾಳೆ ತಾ. ೧೫ನೇಗೆ ಶ್ರೀ|| ಮಂಜುನಾಥ ಭಟ್ಟ ಶಿಕ್ಷಕ ಎಮ್ ಎಲ್ ಸಿ ಇವರ ಅಧ್ಯಕ್ಷತೆಯಲ್ಲಿ ಕೂಡುವದಿದೆ.

ವೃತ್ತಸಾರ.

— ಮೈಸೂರ ವಿಶ್ವವಿದ್ಯಾಲಯವನ್ನು ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ರೂಪಾಂತರಿಸುವ ಆಲೋಚನೆಯಿಂದ ಕರ್ನಾಟಕ ಪ್ರಮುಖರಾದ, ಶ್ರೀ|| ಮುದವೀಡು ಕೃಷ್ಣರಾಯ ಕೌಜಲಗಿ ಶ್ರೀನಿವಾಸರಾವ ಮೊದಲಾದ ವೆಂಕಟ್ರಾಯರವರು ಮೈಸೂರಿಗೆ ಹೋಗಿರುವರು.

— ಹೊಸ ಥೀಕನ. ಒಂದು ಬಾಗಿಲಿನ ಮೊಳಕ್ಕೆ ಗಡಿಯಾರ ಕಟ್ಟಿಕೊಳ್ಳುವಂತೆ ದೆಹಲಿಯಲ್ಲಿ ದೀಪ ಹಚ್ಚುವ ಯೋಜನೆಯಾಗಿದೆ. ಮೊಣಕಾಲಿಗೆ ದೀಪ ಹಚ್ಚುವ ಪ್ರಘಾತವನ್ನು ಪ್ಯಾರಿಸ ಪಟ್ಟಣದ ಸೊಗಸುಗಾತಿಯರು ಪ್ರಚಾರದಲ್ಲಿ ತರುತ್ತಿರುವರು. ಮೊಣಕಾಲು ದೀಪದಿಂದ ಮೊಣಕೈ ಗಡಿಯಾರ ನೋಡಿ ನಡದಾಯಿತು !!

— ದಿಲ್ಲಿಯೊಳಗಿನ ಶ್ರೀರಾಮಲೀಲೆಯ ಮಹೋತ್ಸವಕ್ಕೆ ಹಿಂದೂ ಮುಸಲ್ಮಾನರೊಳಗೆ ಕಲಹ ಬಿದ್ದಿದೆ. ಸರಕಾರದವರು, ಇಬ್ಬರ ಸಹಕಾರದಿಂದ ನೆರವೇರಿಸಬೇಕೆಂದು ಸಲಹೆ ಕೊಟ್ಟಿದ್ದಾರೆ.

— ಕೋರನೂರ-ಸಿಲೋಂ ರೇಲ್ವೆಯೊಳಗಿನ ಕೂಲಿಯಾಳಾದ ಪಾಪೆಳೆ ಜಾತಿಯ ಹೆಣ್ಣಿಗೆ ೧೦|| ಮಣ ತೂಕದ ಚಿನ್ನದ ನಾಣ್ಯಗಳು ದೊರೆತವು. ನಾಣ್ಯಗಳು ಆರ ಮುದ್ರೆಯವು.

— ಕೊಡಗಿನ ವೀರರಾಜೇಂದ್ರ ಪೇಟೆಯಲ್ಲಿ ಶೃಂಗಾರಿಕ ಶಾಲೆಯು ಸ್ಥಾಪನೆಯಾಗಿದೆ.

— ಶ್ರೀ ಧನ್ವಂತರಿ ಪತ್ರಿಕೆಯ ಮಾನ್ಯ ಸಂಪಾದಕರಾದ ಶೃಂಗೇರಿಯ ವಿದ್ವಾನ್ ಕೇ. ಶೀ. ಪ. ಶಾಸ್ತ್ರಿಗಳು "ಶ್ರೀ ಶಾರದಾ" ಎಂಬ ಸಂಸ್ಕೃತ ಮಾಸಿಕ ಪತ್ರಿಕೆಯನ್ನು ವಿಜಯಾ ದಶಮಿಯ ಸುಮುಹೂರ್ತದಲ್ಲಿ ಹೊರಡಿಸುವವರಿದ್ದರು. ಈ ಮಾಸಿಕದಲ್ಲಿ ಆಯುರ್ವೇದ, ಸನಾತನ ಧರ್ಮ, ಸಂಸ್ಕೃತಸಾಹಿತ್ಯ ಇತ್ಯಾದಿ ವಿಷಯಗಳು ಚರ್ಚಿಸಲ್ಪಡುತ್ತವೆ. ಸಂಸ್ಕೃತಾಭಿಮಾನಿಗಳೂ ಸನಾತನ ಧರ್ಮಾಭಿಮಾನಿಗಳೂ, ಆಯುರ್ವೇದಾಭಿಮಾನಿಗಳೂ ಪ್ರೋತ್ಸಾಹವನ್ನಿತ್ತು 'ಶಾರದೆ'ಯನ್ನು ಪೋಷಿಸಬೇಕು.

— ೬-೬ ಜಮನಲಾಲಜಿ ಬಜಾಜರವರು ಬಿಕಾನೇರ ಸಂಸ್ಥಾನಕ್ಕೆ ಹೋಗಿರುವರು ಮಹಾರಾಜರ ಭೆಟ್ಟಿ ಕೊಂಡು, ಸಂಸ್ಥಾನದಲ್ಲಿ ಕೈಮಗ್ಗ ಕೈಮಗ್ಗಗಳ ಪ್ರಸಾರ ಮಾಡುವಂತೆಯೂ ಹಿಂದೀ ಭಾಷೆಯನ್ನು ಕಲಿಸುವಂತೆಯೂ ಮಹಾರಾಜರ ಮನವೊಲಿಸಿದರು.

— ಮುಂಬಯಿ ಸರಕಾರವು ಮದ್ಯಪಾನೋಚ್ಚಾಟನ ಕಾರ್ಯವನ್ನು ಸ್ಥಳಿಕ ಲೋಕಮತದಂತೆ ನಡಿಸಬೇಕೆಂದು ಕಾಯಿದೆ ಕೌನ್ಸಿಲಿನ ಸಭಾಸದರಾದ ಶ್ರೀ|| ಆರ್. ಜಿ. ಪ್ರಧಾನರವರು ಒಂದು ಕಾಯಿದೆಯನ್ನು ಸೂಚಿಸುವವರಿದ್ದರು. ಸದರ ಕಾಯಿದೆಯನ್ನು ಕಾಯಿದೆ ಕೌನ್ಸಿಲಿನಲ್ಲಿ ಸೂಚಿಸಲಾಗದೆಂದು ಪ್ರಾಂತಿಕ ಸರಕಾರವು ಪತ್ರಿಕಾಹಾಕಿದೆ. ಈಗ ಶ್ರೀ|| ಪ್ರಧಾನರು ಇನ್ನೊಂದು ಠರಾವಿನ ನೋಟೀಸು ಕೊಟ್ಟಿರುತ್ತಾರೆ. "ಬೇಸಾಯ ಹಾಗು ಅಬಕಾರಿ ಖಾತೆಗಳ ದಿವಾನರು ತಮ್ಮ ಅಧಿಕಾರವನ್ನು ತಕ್ಕ ರೀತಿಯಿಂದ ಉಪಯೋಗಿಸದ್ದರಿಂದ, ಆರ್ ಜಿ. ಪ್ರಧಾನರವರು ಮದ್ಯಪಾನ ಪ್ರತಿಬಂಧಕಕಾರಿಕಾ ಅಂಥ ಕಾಯಿದೆಯ ವಿಚಾರ ಕೂಡಾ ಮಾಡಬಾರದಂತೆ ಸರಕಾರಕ್ಕೆ ಆಲೋಚನೆ ಹೇಳಿದ್ದರಿಂದಲೂ ಕಾಯಿದೆ ಕೌನ್ಸಿಲಿಗೆ ದಿವಾನರ ನಂಬಿಗೆಯಿರುವದಿಲ್ಲ ಕಾರಣ ದಿವಾನರು ರಾಜೀನಾಮೆ ಕೊಟ್ಟು ಬಿಡುಗಡೆಯಾಗಬೇಕು." ಮುಂದಿನ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ಈ ವಿಷಯ ಚಿತ್ತವೇಧಕ ಚರ್ಚೆಯಾಗುವದಿದೆ.

— ಇಂಗ್ಲಂಡದಲ್ಲಿ ಮೋಟಾರ ಗಾಡಿಗಳ ಸ್ಪರ್ಧೆಯು ಕಳೆದ ಸಪ್ಟಂಬರ ತಾ. ೨೬ ನೇಗೆ ಜರುಗಿತು ಪಿ|| ಸಿಗ್ರೇವಿನ ಇವರು ೨೦೦೦ ಮೈಲು ಪ್ರದೇಶವನ್ನು ೨ ತಾಸು ೩೫ ಮಿನಿಟುಗಳಲ್ಲಿ ಮುಗಿಸಿ ಅಗ್ರಸ್ಥಾನವನ್ನು ಪಡೆದರು. ತಾಸಿಗೆ ೮೦ ಮೈಲು ಬಿತ್ತು.

— ಪಾಲಘಾಟ ಎಂಬಲ್ಲಿ ಒಬ್ಬ ಮಾದಿಗನು ಮುಸಲ್ಮಾನ ಧರ್ಮವನ್ನು ಸ್ವೀಕರಿಸಿ ಇಬ್ರಾಹಿಮ ಎಂದು ನಾಮಕರಣ ಮಾಡಿಕೊಂಡನು. ಆತನ ತಾಯಿ ಮುದುಕಿ ಮರಣದ ಮರುಗಿ ತಕ್ಕಹಕ್ಕ ಮಾಡಿಕೊಂಡಳು. ಮಗನಿಗೆ ಮುದುಕಿಯು ಸನಾತನ ಧರ್ಮಾಭಿಮಾನ ಕೇಳಿರಿ. ಮುಂದೆ ಇಬ್ರಾಹಿಮನು ಊರಲ್ಲಿ ಹುಲ್ಲು ಬಣವಿಗೆ ಬೆಂಕಿ ಹಚ್ಚಿದ ಬಗ್ಗೆ ಆತನ ಮೇಲೆ ಖಟ್ಲೆ ನಡೆದು ೯ ತಿಂಗಳ ಕಾರಾಗೃಹವಾಸವು ಪ್ರಾಪ್ತವಾಯಿತು.

— ಬೆಳ್ಗಾವಿಯಲ್ಲಿ ಜಿಲ್ಹಾ ಖಿಲಾಫತು ಸ್ಯಾರಕ್ಕ. ಖಿಲಾಫತ ಫಂಡಿನ ಪ್ರಚಾರಕ್ಕಾಗಿ ರೂಪಾಯಿ ೧೦೦೦೦೦ ಗಳನ್ನು ಅಲ್ಲೀ ಬಂಧುಗಳಿಗೆ ಅರ್ಪಿಸಬೇಕೆಂದು ತೀರ್ಮಾನವಾಗಿಯದೆ.

— ಕಲಕತ್ತೆಯ ನೆರೆಹೊರೆಯ ಚಾಂದಪುರದ ಸಣಬಿನ ಉಗ್ರಾಣಕ್ಕೆ ಬೆಂಕಿ ಬಿದ್ದು ೯೦೦೧೦ ಮಣ ಸಣಬು ಸುಟ್ಟು ಹೋರಿ. ೨ ಲಕ್ಷ ರೂಪಾಯಿಗಳ ನಷ್ಟ.

— ಮೈಸೂರ ಪ್ರಾಂತದ ಸಿಂಧುಗೇರಿ ಗಣಿಯಲ್ಲಿ ಕೆಲಸ ಮಾಡುತ್ತಿರುವಾಗ ಅಪಘಾತ ಬಿದ್ದ ನೂ ೧ ಕೂಲಿಕಾರರು ಮರಣಪಟ್ಟರು ಇಬ್ಬರು ಗಣಿಯಲ್ಲೇ ಮರಣಪಟ್ಟರು, ಮೂರನೆಯವನು ಆಸ್ಪತ್ರೆಯಲ್ಲಿ ಮರಣಹೊಂದಿದನು.

— ಪಾಶ್ಚಾತ್ಯ ಶಸ್ತ್ರ ವೈದ್ಯರ ಅಭಿಪ್ರಾಯ ಕೇಳಿರಿ! ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿ ವಿದ್ಯಾದಾನ ಮಾಡುವ ಯೋಜನೆಗಿಂತ ಬೈಲು ಪ್ರದೇಶದಲ್ಲಿ ಗಿಡಗಳ ನೆರಳಲ್ಲಿ ಶಿಕ್ಷಣದ ವಿಧಾನವು ಮಾಡುವದರಿಂದ ವಿದ್ಯಾರ್ಥಿಗಳ ಪ್ರಕೃತಿಯು ಸುದೃಢವಾಗಿರುತ್ತದೆಂದೂ ವಿದ್ಯಾರ್ಥಿಗಳಿಗೆ ಅನೇಕ ರೋಗ ಪ್ರಸಂಗವಾಗುವದಿಲ್ಲವೆಂದೂ ಇವರ ಅಭಿಪ್ರಾಯ. ಭರತ ಖಂಡದಲ್ಲಿ ಇಂಥ ವಿಧಾನವು ಮೊದಲೇ ಇತ್ತು. ಅಂತು ಪಾಶ್ಚಾತ್ಯರು ಸ ಧಾರ್ಮಿಕ ಭಾರತೀಯರ ಪುರಾಣ ಕಾಲದ ಸಮಾಜ ಸ್ಥಿತಿಯೇ ಶ್ರೇಷ್ಠತರವೆಂದು ಅಂಗೀಕರಿಸುತ್ತಿರುವರು. ಈ ಬಗೆಯು ಅಮಲಿನಲ್ಲಿ ಬಂದರೆ ವಿದ್ಯಾದಾನದ ಖರ್ಚು ಬಹಳ ತಗ್ಗುವದು.

— ಪಂಜಾಬದ [illegible] ಗುರುದ್ವಾರ ಕಲಹದ ಪ್ರಕರಣವು ಇನ್ನೂ ಸಂಪೂರ್ಣವಾಗಿ ನಿಕಾಲೆಯಾಗಲಿಲ್ಲ.

— ಮಹಾತ್ಮರು [illegible] [illegible]

— [illegible]

— [illegible]

— [illegible]

— [illegible]

— [illegible]

— [illegible]

— ಪೋರ್ಚುಗೀಸ್ ಹಿಂದುಸ್ಥಾನದ [illegible] ಗೋವೆಯ [illegible] ಮಹಾರಾಜರು ಈ ವರೆಗೆ [illegible] ಸಿಂಹಾಸನದಲ್ಲಿ ವಿರಾಜಮಾನರಾಗಿದ್ದರು.

— [illegible] ಸಂಸ್ಥಾನದೊಳಗಿನ ಕೋಲಾರದಲ್ಲಿ ಚಿನ್ನದ ಗಣಿ ಸಿಕ್ಕಿ ೪೩ ವರ್ಷಗಳಾದವು. ಈ ಗಣಿಯಲ್ಲಿ ೯೫ ಕೋಟಿ ರೂಪಾಯಿಗಳ ಚಿನ್ನ ದೊರಕಿತು. ಅವುಗಳಲ್ಲಿ ೩೨ ಕೋಟಿ ರೂಪಾಯಿಗಳ ಚಿನ್ನವು ಕಂಪನಿಯ ಭಾಗೀದಾರರಿಗೆ ಪಾಲಿಗೆ ಬಂದಿತು. ೫ ಕೋಟಿ ರೂಪಾಯಿಗಳು ಮೈಸೂರು ಸರಕಾರಕ್ಕೆ ಕೊಡಲ್ಪಟ್ಟವು. ಉಳಿದವು ಕಂಪನಿಯವರಿಗೆ ಮತ್ತು ಖರ್ಚಿಗೆ.

— ವಾಗವಾಡದಲ್ಲಿ ಮಳೆಯಿಲ್ಲದ ಬರಬಿದ್ದುದರಿಂದ ನೂರಾರು ಮಂದಿಗಳು ಸಿಂಧದೇಶಕ್ಕೆ ಹೋಗಿರುವರು.

— ಹೈದರಾಬಾದದ ಕಾಂಗ್ರೆಸ ಕಮಿಟಿಯವರು ಹರಿಜನೋದ್ಧಾರಕ್ಕಾಗಿ ನೆರವಾಗುತ್ತಿರುವರು.

— ಬ್ರಹ್ಮದೇಶದ ಎಣ್ಣೆ ಕಂಪನಿಯ ಎಣ್ಣೆ ತುಂಬಿದ ಒಂದು ಬೋಟಿಗೆ ಬೆಂಕಿ ಹತ್ತಿತು. ಬೆಂಕಿಯು ನೆರೆಯಲ್ಲಿದ್ದ ಇನ್ನೆರಡು ಹಡಗಗಳಿಗೆ ಹತ್ತಿ ಮೂರೂ ಹಡಗಗಳು ಸುಟ್ಟು ಹೋದವು.

— ಚೀನ ದೇಶದ ಪೀತ ನದಿಗೆ ದೊಡ್ಡ ನೆರೆಬಂದು ೧೫೦೦ ಚದರ ಮೈಲು ಭೂಮಿಯು ಜಲಮಯವಾಗಿ ಹೋಗಿ ೩೦ ಲಕ್ಷ ಮಂದಿಗಳು ನಿರಾಧಾರಿಗಳಾಗಿರುವರು.

— ಮದ್ರಾಸ ಪ್ರಾಂತಾಧಿಪರಿಗೆ ಮಾನಪತ್ರ ಕೊಡಬಾರದೆಂದು ರಾಜಮಹೇಂದ್ರಿಯ ಮ್ಯುನಿಸಿಪಾಲಿಟಿಯವರು ನಿರ್ಧರಿಸಿರುವರು.

— ಚಿಕ್ಕೋಡಿಯಲ್ಲಿ ಕೊಲ್ಹಾಪುರದ ಶ್ರೀ ಕುಲಕರ್ಣಿಯವರು ಶಾರೀರಿಕ ಶಿಕ್ಷಣ ಕೊಡುವ ವರ್ಗ ತೆರೆದಿರುವರು. ಮತ್ತು ಅದಕ್ಕಾಗಿ "ಶ್ರೇಯವರ್ಧಕ ಕ್ರೀಡಾಮಂಡಳ"ವೆಂಬ ಸಂಸ್ಥೆಯನ್ನೂ ಸ್ಥಾಪಿಸಿರುವರು.

ಕ್ಕೆ ಈ ವರ್ಷದ ೧೫ ಲಕ್ಷ ಐವನು ಉಳಿಸ್ಸಿಕೊಂಡಿರುವರೆಂದು ಅಂದಾಜಾಗಿದೆ.

— ಒಂಟಿಮಳದ ಶ್ರೀ ವಾಸುದೇವ ಗೋಪಾಳ ಬಾಗಿರು ಒಂದು ಬಾಕುವಿನಿಂದ ಉರುಲು ಹಾಕಿ ಹಬ್ಬಾದನು. ಹಿಡಿದು ಕೆಲವು ದಿವಸಗಳ ವರೆಗೆ ಸಾಕಿ, ಅದನ್ನು ಮದ್ರಾಸ ಸರಕಾರದ ವಸ್ತುಸಂಗ್ರಹಾಲಯಕ್ಕೆ ಕಳುಹಿಸಿದರು. ಹಬ್ಬಾವು ೨ ಮಾರು ಉದ್ದವಿದೆ.

— ಮೊರೊಕೊದೊಳಗಿನ ಯುದ್ಧದಲ್ಲಿ ಸ್ಪೇನದವರೂ, ಫ್ರೆಂಚರೂ ಜಯಪ್ರದರಾಗುತ್ತಿರಾರೆಂದು ಸುದ್ದಿಯು ಮೇಲೆ ಸುದ್ದಿ. ಈಗ ಬಹಳ ಮಳೆ ಸುರಿಯುತ್ತಿದೆ. ಆದರಿಂದ ಫ್ರೆಂಚ-ಸ್ಪೇನಿಶರಿಗೆ ಮುಂದರಿಯಲು ಅಡ್ಡಿಯಾಗಿರುವದಂತೆ ಸುಧಾರ ಸುದ್ದಿಗಳನ್ನು ತಿಳಕೊಳ್ಳುವದು ಕಠಿಣ.

— ಕಾಬೂಲಿನ ಬಿದಾಯ ಕವಂತ ಕೀಟ ಮುಕುಂದ ಜಿ ಲಂಕೋ ದಿಯವರು ಕಳೆದ ಸಪ್ಟಂಬರ ೧೫ನೇ ತಾರೀಖಿಗೆ ಸ್ವರ್ಗವಾಸಿಯಾದರು. ಸ್ವದೇಶಕ್ಕನುಸರಿಸಿ ೮॥ ಲಕ್ಷ ರೂಪಾಯಿ ಗಳ ಪತ್ರಿಯನ್ನು ಇವರು ಸಂಬಂಧಿಸಿದ್ದರು. ಇವರೊಳಗೆ ದಾಂಧರ್ಮಗಳನ್ನು, ಮಾಡಿರುವರು. ಇಂತಹವರ ತೀರ್ಥಯಾತ್ರೆಗೂ ದೇವಸ್ಥಾನಗಳಿಗೂ ನಾವು ೧ ಲಕ್ಷ ರೂಪಾಯಿಗಳ ವ್ಯವಹಾರವನ್ನು ಸರ್ವ ವತಕ್ಕಾಗಿ ೫೦ ಸಾವಿರ ರೂಪಾಯಿಗಳನ್ನು ಅರ್ಪಿಸಿರುವರು.

— ಇ ಡಿಯನ್ ಸಿವ್ಹಿಲ್ ಸರ್ವ್ಹಿಸ ಪರೀಕ್ಷೆಯಲ್ಲಿ ಮಂಗಳೂರಿನ ಅಪ್ಪಂಜಿಗಳ ಶ್ರೀನಿವಾಸ ಪೈರ ನಾಗೇಂದ್ರರಾದ ಶ್ರೀ ಅಪ್ಪಂಜಿಗಳ ವಿಠ್ಠಳ ಪೈರವರು ಆನೇ ನಂಬರು ಒಳ ಉತ್ತೀರ್ಣರಾಗಿರುವರು.

— ಬಂಗಳೂರಿನಲ್ಲಿ ದೀಪಾವಳಿ ಹಬ್ಬಕ್ಕಾಗಿ ಬಾರೂದನ್ನು ತಯಾರಿಸುತ್ತಿರುವಾಗ ಸುದ್ದು ಸಿಡಿದು ಒಬ್ಬ ಮಹಿಳೆ ಸತ್ತಳು; ಅಪಘಾತ ಬರದುದ ಕರೆಯದ ಮೊಟ್ಟ ಸಿಡಿದನು; ನಾಲ್ವರಿಗೆ ಗಾಯಗಳಾದವು. ನೆರೆಯಲ್ಲಿದ್ದ ದೇವಸ್ಥಾನವೂ ಮುರಿದು ಅದರೊಳಗಿನ ಶ್ರೀ ದೇವಮೂರ್ತಿಗಳು ಪದಚ್ಯುತವಾಯಿತು. ಎಂಥ ದೊಡ್ಡ ಅನರ್ಥ?

ವಿಮರ್ಶೆ.

ತುಲಸೀದಾಸ ರಾಮಾಯಣ— ಟೀಕಾಕಾರರು ಶ್ರೀ ಪತ್ತಾರರ ಕೃಷ್ಣ ಭಾರದ್ವಾಜ, ಆನಂದಾಶ್ರಮ, ಬಸವನಗುಡಿ, ಬೆಂಗಳೂರು ವಾರ್ಷಿಕ ವರ್ಗಣಿ (ಗ್ಲೇಜ ಕಾಗದ ಪ್ರತಿಗೆ ರೂಪಾಯಿ ೫-೦-೦; (ಸಾಧಾರಣ ಕಾಗದ ಪ್ರತಿಗೆ) ರೂಪಾಯಿ ೪-೦-೦. ಉತ್ತರ ಹಿಂದುಸ್ಥಾನದ ಶ್ರೀ ಮಹಾತ್ಮ ಗೋಸ್ವಾಮಿ ತುಲಸೀದಾಸ ಮಹಾನುಭಾವರು ರಚಿಸಿದ 'ರಾಮಚರಿತಮಾನಸ' ವೆಂಬ ಶ್ರೀಸ್ತೋ ಹಿಂದಿ ಗ್ರಂಥದ ದಿಗಂತಕೀರ್ತಿ ಮನ್ನಣೆ ಕೊಳ್ಳಲ್ಪಟ್ಟಿರುವ ಈ ಗ್ರಂಥವು ಶ್ರೀರಾಮ ಭಕ್ತಿಯಿಂದ ಸಂಬಂಧಿಸಿದ. ಮಹಾತ್ಮರು ಶ್ರೀ ತುಲಸೀದಾಸರ 'ರಾಮಚರಿತಮಾನಸ' ಯೆಂಬ 'ಮನಸಾಯಣ' ಗ್ರಂಥದೊಳಗಿನ ಶ್ಲೋಕಗಳನ್ನು ಯಾವಾಗಲೂ ಭಕ್ತಿಭಾವದಿಂದ ಉಚ್ಚರಿಸುತ್ತಿರುತ್ತಾರೆ. ಈ ಗ್ರಂಥವನ್ನು ನೋಡಿ, ಪಾಶ್ಚಾತ್ಯ ವಿದ್ವಾಂಸರು ಸಹ ಹೊಗಳುತ್ತಿರುವರು. ಇಂಥ ಗ್ರಂಥದ ಭಾಷಾಂತರವನ್ನು ಶ್ರೀ ಪತ್ತಾರರ ಕೃಷ್ಣ ಭಾರದ್ವಾಜರವರು ಮಾಡಿ, ಕನ್ನಡಿಗರಿಗೆ ಉಪಕಾರಿಗಳಾಗಿರುವರು. ಗ್ರಂಥವು ದೊಡ್ಡದಿರುವದರಿಂದ ಅದು ಕ್ರಮವಾಗಿ ವಾಚಕರಿಗೆ ಅರ್ಪಿಸಲ್ಪಡುವದು. ಇದು ಬಾಲಕಾಂಡವು ಶ್ರೀ ತುಲಸೀದಾಸಕೃತ ರಾಮಾಯಣದ ಪ್ರಥಮ ಸೋಪಾನವು. ಶ್ರೀಮತ್ ಗೋಸ್ವಾಮಿ ತುಲಸೀದಾಸರ ಮಹಾಗ್ರಂಥದ ಭಾಷಾಂತರ ಕಾರ್ಯವನ್ನು ಶ್ರೀ ಭಾರದ್ವಾಜರವರು ಕೈಕೊಂಡದ್ದು ಕನ್ನಡಿಗರ ಮೇಲಿನ ಉಪಕಾರವು. ರಾಮನಾಮದ ಮಹಿಮೆಯನ್ನು ನಾವು ಯಾರಿಗೂ ಹೇಳಬೇಕಾಗಿಲ್ಲ. ವಾಲ್ಮೀಕಿ ಋಷಿಗೆ ಉದ್ಧರಿಸಿದ ಮಹಾ ಮಂತ್ರವು 'ರಾಮ' ಕ್ಕೆಲ್ಲ ಸಜ್ಜನರು ಪ್ರೀತಿಯಿಂದ, ಭಕ್ತಿಯಿಂದ ಉಚ್ಚರಿಸುವ

ಸ್ತು ಕರ್ನಾಟಕಸ್ಥರೆಲ್ಲರೂ ಪ್ರೋತ್ಸಾಹಿಸಿ ಇಂಥವರದಲ್ಲಿ ಮುಖಕೊಂಡಬೇಕು, ಗ್ರಂಥದ ಮುದ್ರಣವು ಮುದ್ದಾಗಿದೆ.

ಶರೀರ ವ್ಯಾಯಾಮ— ಎಪ್ರಿಲ್-ಮೇ-ಜೂನ ತಿಂಗಳ ಸಂಯುಕ್ತ ಸಂಚಿಕೆ ಸಂಪಾದಕ-ಶ್ರೀ ಕ್ರಿನಿವಾಸ ಮೂರ್ತಿ ಬಾಳಗಾರ, ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂಪಾಯಿ ೧-೮-೦ ಚಿಕ್ಕಪೇಟೆ, ಬೆಂಗಳೂರು. ಈ ಸಂಚಿಕೆಯಲ್ಲಿ ಮಕ್ಕಳ ಬೆಳವಣಿಗೆ, ಆಹಾರನಿಯಮ, ವ್ಯಾಯಾಮ ಶಿಕ್ಷಣ, ಶ್ರೀರಾಸೇವನೆ, ಇತ್ಯಾದಿ ಉಪಯುಕ್ತ ಲೇಖಗಳಿದ್ದು, ಶರೀರ ಸಂವರ್ಧನವನ್ನು ಮಾಡಬಿಚ್ಛಿಸುವವರು ಪರಾಮರ್ಶಿಸತಕ್ಕದ್ದು. ಇಹ-ಪರ ಸೌಖ್ಯಕ್ಕೆ ಶರೀರವು ಪ್ರಧಮ ಸಾಧನವು. ನಮ್ಮ ಸುಖ-ದುಃಖಗಳು ಪ್ರಾಮುಖ್ಯವಾಗಿ ಶರೀರದ ಮೇಲೆಯೇ ಅವಲಂಬಿಸಿರುತ್ತವೆ. ನಾವು ನಮ್ಮ ನಮ್ಮ ನಿಯಮಿತ ಕರ್ತವ್ಯಕರ್ಮಗಳನ್ನು ಕಾಲಕಾಲಕ್ಕನುಸರಿಸಿ ನಡೆದರೆ, ಯಾವಾಗಲೂ ನಮಗೆ ಸೌಖ್ಯ ದೊರೆಯಲೇ ಬೇಕು. 'ಸುಖಸ್ಯ ದುಃಖಸ್ಯ ನ ಕೋಽಪಿ ದಾತಾ| ಪರೋ ದದಾತೀತಿ ಕುಬುದ್ಧಿರೇಷಾ || ಅಹಂಕರೋಮೀತಿ ವೃಥಾಭಿಮಾನಃ| ಸ್ವಕರ್ಮಸೂತ್ರಗ್ರಥಿತೋ ಹಿ ಲೋಕಃ||" ಇದೇ ನಮ್ಮ ಸೌಖ್ಯದ ಮಾರ್ಗವು. ಅದನ್ನೇ ಅನುಸರಿಸಲು 'ಶರೀರ ವ್ಯಾಯಾಮ'ವು ಬೋಧಿಸುತ್ತದೆ.

ಸುವಾಸಿನಿ— ಸಂಪಾದಕ ಮತ್ತು ಪ್ರಕಾಶಕ— ಶ್ರೀ ಬಿ. ವಿಠ್ಠಲರಾವ, ಮಂಗಳೂರು. ವಾರ್ಷಿಕ ಚಂದಾ ರೂ. ೩-೪-೦. 'ಸುವಾಸಿನಿ'ಯು ಹುಟ್ಟಿ ೨೫ ವರುಷಗಳಾದವು. ೭ ವರ್ಷ ಕರ್ನಾಟಕದಲ್ಲಿ 'ಸುವಾಸಿನಿ'ಯನ್ನು ಹರಡಿ, ಧಿಕ್ಕನೆ ಅಂತರ್ಧಾನ ಹೊಂದಿದ ಮಾಸಪತ್ರಿಕೆಯಿದು. ಈಗ ಪುನಃ ಉದ್ಭವಿಸಿದೆ. 'ಸುವಾಸಿನಿ'ಯನ್ನು ಓದಿದವರು ಅದನ್ನು ಎಂದೂ ಬಿಡರು. ಅಷ್ಟು 'ಸುವಾಸಿನಿ'ಯು ಚಿತ್ತವೇಧಕವಿದೆ. ಈ ಪತ್ರಿಕೆಯಲ್ಲೊಳಗೊಂಡ ಕೆಲವು ಲೇಖಗಳು ವಿನೋದ ಪ್ರಚುರವಿದ್ದರೂ ಅವುಗಳಲ್ಲಡಕವಾದ ಕೆಲ ಕೆಲ ಪ್ರಕಾರಗಳು ಮನಸ್ಸು ಬೇಸರಿಸುತ್ತವೆ. 'ತಿರುಗಂಪ್ರದಾಯ'ನು ಆಡಿದ ಕೆಲವು ನುಡಿಗಳು ಸಭ್ಯವಾದವಲ್ಲವೆಂದು ನಮ್ಮ ಅಂಬೋಣ. ಶ್ರೀ ಕೃಷ್ಣ ಕಥಾಮೃತ, ಸಾಧ್ವಿನ ಪತ್ನಿನ ಮಹಾತ್ಮ್ಯೆ, ಗೃಹಸ್ಥಜೀವನ, ಆಯುರ್ವೇದಿಯ ಇತ್ಯಾದಿ ಲೇಖಗಳು ವಾಚನೀಯವಿವೆ. ನಾ ದೃಷ್ಟಿಯಿಂದ ಲೋಕಾಶ್ರಯಕ್ಕೆ ಪಾತ್ರವಿದೆ.

ರಂಗಭೂಮಿ— ಶ್ರೀ ದತ್ತಾತ್ರಯ ಕೃಷ್ಣ ಬಾರಾದ್ವಾಜರವರು ಕರ್ನಾಟಕ ರಂಗಭೂಮಿಯ ಸುಧಾರಣೆಗಾಗಿ ಸಂಪಾದಿಸುವ ಮಾಸಪತ್ರಿಕೆ. ನಾಟ್ಯಶಾಸ್ತ್ರದ ವಿವಿಧ ಲೇಖಗಳಿಂದ ಈ ಸಂಚಿಕೆಯು ಆಕರ್ಷಕವಾಗಿದೆ. 'ಸಾವಿತ್ರಿ' ನಾಟಕದ ಎರಡನೇ ಅಂಕವು ಮಾಸ್ತಿ ಕ ರೀತಿಯಿಂದ ಬರೆಯಲ್ಪಟ್ಟಿದೆ. 'ಸರಸ್ವತಿ' ಪ್ರತಿಕೆಯ ಸಂಪಾದಕೀಯ ಶ್ರೀಮತಿ ಆರ್. ಕಲ್ಯಾಣಮ್ಮನವರು ರಂಗಸ್ಥಳ ನಾಟಕಾಭಿನಯಗಳ ವಿಷಯ ಬರೆದರೆ, ಶ್ರೀ ಬೆಳ್ಳಾವೆ ಅಪ್ಪಾವಧಾನಿ ನರಹರ ಶಾಸ್ತ್ರಿಗಳು ನಾಟಕ ಮತ್ತು ನಾಟಕರಂಗದ ವಿಷಯ ತಮ್ಮ ವಿಚಾರಗಳನ್ನು ಪ್ರದರ್ಶಿಸಿರುವರು, ಶ್ರೀ ಎಸ್. ನಾಗೇಶಾಚಾರ್ಯರ 'ಭಾರತೀಯ ನಾಟಕಗಳು' ಹಾಗು 'ಮೈಸೂರು ರಂಗಭೂಮಿಯ ಇತಿಹಾಸ' ಇವರಡು ಲೇಖಗಳು ಬೋಧಕ ಬುದ್ಧಿಯಿಂದ ಬರೆಯಲ್ಪಟ್ಟಿವೆ. ರಸಿಕರು ಅಕ್ಕರೆಯನ್ನಿತ್ತು ರಂಗಭೂಮಿಯನ್ನು ಮನೋಹರವಾಗುವಂತೆ ನಟಿಸಲು ಹೊರಟ 'ರಂಗಭೂಮಿ'ಗೆ ಅಕ್ಕರೆಯ ವಿನ್ನಿತ್ತು ಮನ್ನಿಸಬೇಕು. ಈ ಸಂಚಿಕೆಯಲ್ಲಿ ಗುಪ್ತ ನಾಟಕ ಮಂಡಳಿಯ ಶ್ರೀ ವಿನೋದರತ್ನಾಕರ ವಿರಣ್ಣ ಹಾಗು ನಾಯಿಯಾ ನಾಯಿಕು ಇವರ 'ಸದಾರಮೆ' ನಾಟಕದೊಳಗಿನ ೨ ಪ್ರಯೋಗ ಚಿತ್ರಗಳೂ, ಅಬಾಪ್ರಸಾದಿಕ ಮಂಡಳಿಯ ಶ್ರೀ ರಂಗನಾಥ ಭಟ್ಟ, ಗದಗಿನ ಎತು ಪ್ಪರ ನಾಟಕ ಮಂಡಳಿಯ ಶ್ರೀ || ನಾರಾಯಣರಾವ ಹುಯಿಲಗೋಳ ಇವರ ಛಾಯಚಿತ್ರಗಳೂ, ಶ್ರೀ ಪಾಲ್ಲಪ್ಪ [illegible]

A TALK
with the Agriculturists.

(Continued From 3rd Page.)

rassment to the agriculturists who ve to secure wood, bamboos, leaves d such other things for agricultural purposes. The agriculturists erefore pray that the Director be ased to intervene in the matter behalf of the agriculturists and these restrictions removed at an rly date.

(4) The agriculturists' cattle which e the main stay of agriculture, d on whose well being depend to great extent the prosperity of agrilture and the fortunes of agriculrists, are not allowed to graze eely and very few grazing plots are ailable for their grazing. The riculturists therefore pray that overnment be pleased to stop llecting the grazing fees and reve sufficient grazing plots for the riculturists' cattle

(5) A levy of 2½ annas per Guntha collected from sugar cane cultiors which is yet another burden the poor agriculturists The agrilturists therefore pray that the rector be pleased to move the vernment to stop this levy forthh

The above are some of the grinces which operate most unourably against the cultivators of r District and I hope that the rector who wishes to promote riculture in our District will be nvinced that they provide a just e for his intervention. The Reue and the Forest Departments o are unable to appreciate the ficulties of agriculturists usually opt an attitude of callous inference to the wails of agricultuts. We therefore hope that the rector who knows better will try move Government in the matter d get them to adopt measures for e early redress of these grievances. kola, 4th October, 1925.

Martu Vithoba Prabhu.

ಶ್ರೀ ತುಲಸೀದಾಸ ರಾಮಾಯಣ

ಭಾಗ ೬ ಪ್ರಕಟವಾಗುತ್ತೆ.

ಲೇಖಕ—ಶ್ರೀ ದತ್ತಾತ್ರೇಯ ಕೃಷ್ಣ ಭಾರದ್ವಾಜ.

ವಾರ್ಷಿಕ ವರ್ಗಣಿ ರೂಪಾಯಿ ೫-೦-೦ (ಲೈಬ್ರರಿಗೆ)

" " ೪-೦-೦ (ಸಾಮಾನ್ಯ ಪತ್ರಿಗೆ)

ಪತ್ತೆ. ಆನಂದಾಶ್ರಮ, ಬಸವನಗುಡಿ, ಬೆಂಗಳೂರು.

ಧಾರ್ವಾಡ ಕರ್ನಾಟಕ ಮಹಾವಿದ್ಯಾಲಯದಿಂದ ಹೊರಡುವ

ತಿಳಿಗನ್ನಡದ **ಸ್ವಧರ್ಮ** ಮಾಸಪತ್ರಿಕೆ.

ಸಂಪಾದಕ— ಸುರೇಂದ್ರ ಶಿವರಾವ ದೇಸಾಯಿ.

ಪ್ರಾಚೀನ ಸಂಪತ್ತು ಪಾರಮಾರ್ಥಿಕ ಸಂಪತ್ತು ಕಾಣಿ ಬೆಳೆಯುವಂತೆ ಸ್ವಸಂಸ್ಕೃತಿಪ್ರೇಮ ಸ್ವದೇಶಪ್ರೀತಿ ಸ್ವಭಾಷಾಭಿಮಾನ ಸ್ವಧರ್ಮಾನುರಾಗ ಸ್ವಾರ್ಥತ್ಯಾಗ ಮುಂತಾದ ಗುಣಗಳನ್ನು ಉಜ್ವಲಗೊಳಿಸುವಂಥ ಕೀರ್ತನ ಪುರಾಣ ಪ್ರವಚನ ನಿಬಂಧ ಜೀವನಚರಿತ್ರ ಇತಿಹಾಸ ನಾಟಕ ಕಥೆ ಮತ್ತು ಕಾದಂಬರಿ ಮುಂತಾದ ರೂಪದಲ್ಲಿ ಜನಮಂಡಳಿಯ ಉನ್ನತಿಗೆ ಅಗತ್ಯವಾದ ಸರ್ವ ವ್ಯವಹಾರಗಳನ್ನು ಸ್ವಧರ್ಮ ದೃಷ್ಟಿಯಿಂದ ವಿಚಾರ ಮಾಡಿ ವಿವರಿಸುವದು.

ಚಂದಾ ವರ್ಷಕ್ಕೆ ೩ ರೂ.

೫ ರೂ. ಮೇಲೆ ಕೊಟ್ಟವರು

ಪೋಷಕರೆಂಬ ಗೌರವಕ್ಕೆ ಪಾತ್ರರಾಗುವರು.

ವ್ಯವಸ್ಥಾಪಕ, "ಸ್ವಧರ್ಮ" ಧಾರವಾಡ.

"ಲೋಕರಹಸ್ಯ"

ಈ ಕನ್ನಡ ಮಾಸಪತ್ರಿಕೆಯಲ್ಲಿ ವ್ಯಾಪಾರಸ್ಥರಿಗೆ ವ್ಯಾಪಾರದ ವಿಚಾರ, ರೈತರಿಗೆ ಕೃಷಿಯ ಅಭಿವೃದ್ಧಿಯ ಮಾರ್ಗಗಳು, ಸ್ತ್ರೀಯರಿಗೆ ಗೃಹಕೃತ್ಯದ ವಿಚಾರಗಳು, ಬಡವರಿಗೆ ಹಣ ಸಂಪಾದನೆಯ ಸುಲಭ ಮಾರ್ಗಗಳ, ರಸಿಕರಿಗೆ ವಿನೋದ ವಿಚಾರಗಳು, ಪ್ರತಿಯೊಬ್ಬರಿಗೂ ಬೇಕಾದ ರಾಜಕೀಯ ವಿಚಾರಗಳು, ವೈದ್ಯ ಭಾಗಗಳು, ಜ್ಯೋತಿಷ್ಯ, ಕಾವ್ಯ, ವೇದಾಂತ, ಕಾದಂಬರಿಗಳು, ಗೋಪಾಲನೆ, ಕೈಗಾರಿಕೆಗಳು, ಸ್ವತಂತ್ರಗಳೇ ಮುಂತಾದ ವಿಷಯಗಳೆಲ್ಲವೂ ಪ್ರಕಟವಾಗುತ್ತವೆ. ಪತ್ರಿಕೆಯು ಪ್ರತಿಯೊಬ್ಬರಿಗೂ ಅನುಕೂಲವಾದ ಗೂಢ ವಿಚಾರಗಳೇ ತುಂಬಿ ತುಳುಕುತ್ತಿವೆ. ಪ್ರತಿ ಮಾಸದಲ್ಲೂ ೬೦ ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೩—೮—೦ ಮಾತ್ರ

ಮಾದರಿ ಸಂಚಿಕೆಗೆ ಕ್ರಯ ೦—೫—೦.

ಮಾದರಿ ಸಂಚಿಕೆಗಳನ್ನು ಪುಕ್ಕಟೆಯಾಗಿ ಕೊಡುವದಿಲ್ಲ

ಹಾಕಿದ ಹಣವನ್ನು ನಷ್ಟ ಮಾಡದೆ, ಹಾಕಿದ ಹಣಕ್ಕೆ ಅದ್ದುಕ್ಕಿದ್ದ ಹಾಗೆಯೇ ತಿಂಗಳಿಗೆ ೧೦೦ ರೂ. ಗಿಂತ ಹೆಚ್ಚಾಗಿಯೇ ಹಣ ಸಂಪಾದನೆ ಮಾಡುವ ರೀತಿಯನ್ನು ತಿಳಿಯುವ ಬಗ್ಗೆ ಒಂದಾಣೆ ಸ್ಟಾಂಪು ಸಮೇತ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೇನೇಜರ್,

"ಲೋಕರಹಸ್ಯ"

ವೀರರಾಜೇಂದ್ರ ಪೇಟೆ, ಕೊಡಗು.

ನವಯುಗ.

ಈ ನವಯುಗಕ್ಕೆ ಒಪ್ಪುವ ಪತ್ರಿಕೆ !

[ಬಂಟರ ಯುವಕ ಸಾಹಿತರ ಸಂಘದ ಕೆಲ ಮಂದಿಯಿಂದ ಮಂಗಳೂರಲ್ಲಿ ಸ್ಥಾಪಿತವಾದ ಕನ್ನಡ ಭಾಷೆಯಲ್ಲಿ ಪ್ರತಿ ಗುರುವಾರ ಪ್ರಕಟಗೊಳ್ಳುವುದು.]

ವಾರಪತ್ರಿಕೆಗಳಲ್ಲಿ ಇರಬೇಕಾದ ಯಾವತ್ತು ಸಲ್ಲಕ್ಷಣಗಳು ಇದರಲ್ಲಿವೆ !

ವಿದ್ಯಾರ್ಥಿಗಳಿಗೂ ಸ್ತ್ರೀಯರಿಗೂ, ರೈತರಿಗೂ, ವ್ಯಾಪಾರಸ್ಥರಿಗೂ ಆಕರ್ಷಕ ಲೇಖನಗಳೂ, ಅನುಭವಗಳೂ, ವರ್ತಮಾನಗಳೂ ಮನೋರಂಜಕವಾದ ಕಥೆ, ಹಾಸ್ಯರಸಭರಿತವಾದ ಅನೇಕ ವಿಷಯಗಳೂ ಇವೆ.

ವರ್ಷಕ್ಕೆ ಚಂದಾ ರೂ. ೩-೪-೦ ಮಾತ್ರ.

ಮಾದರಿ ಸಂಚಿಕೆಗೆ ಬರೆದುಕೊಳ್ಳಿರಿ.

ಜಾಹೀರಾತುಗಳ ದರ ಸುಲಭ. ಕೈಕರೇ ಹೆಚ್ಚಾಗಿ ಓದುವ ಈ ವಾರಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಿರಿ.

ವಿಳಾಸ:—

ಮೇನೇಜರ "ನವಯುಗ"

ಮಂಗಳೂರು.

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನು ಹೆಚ್ಚಿಸುತ್ತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ. ಒಳ್ಳೇ ಆಹಾರ ದೊರೆಯದೆ ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ ಪ್ರಮಿಸ್ತಕನ ಇವೆಲ್ಲ ಸ್ತ್ರೀರೋಗಗಳ ಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತರೂ ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿಗೆ ರೂಪಾಯಿ ೩—೦—೦

ಏಜಂಟರು— **ವೀರಿಯಲ ಏಜನ್ಸಿ,**

ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨

ನಾವು ಎಲ್ಲ ನಮೂನೆಯ, ಖಾತ್ರಿಯ ಉತ್ತಮ ಕನ್ನಡಕ

ಗಳನ್ನ ಯೋಗ್ಯ ಕಿಮ್ಮತಿಗೆ ತರಿಸಿಕೊಡುವೆವು ನಿಮ್ಮ ಊರಿನ ಗಡಸು ಯಾವ ನಮೂನೆಯ ಕಣ್ಣುಗಳು ಬೇಕೆಂಬುದನ್ನು ತಿಳಿಸಬೇಕು ಮತ್ತು ಆರ್ಡರಿನ ಸಂಗಡ ೧ ರೂಪಾಯಿ ಮುಂಗಡ ಕಳಿಸಿದಲ್ಲಿ ಬೇಕಾದ ನಮೂನೆಯ ಕಣ್ಣುಗಳು ದೊರೆಯುವವು ಅನುಭವದಿಂದ ಖಾತ್ರಿಯಾಗುವದು.

ಆಪಟೇ ಸನ್ಸ,

ಕನ್ನಡಕ ವ್ಯಾಪಾರಿಗಳು, ನಾರಾಯಣ ಪೇಟ

ಧಾರವಾಡ

ವಿಶೇಷ] ಅನುಭವಸಿದ್ಧ [ವನ್ಯಸಿದ್ಧ

ವನೌಷಧಿಮೂಲಿಕೆಗಳು

ವಾಯುದುಮ್ಮನ (ನಮೋನಿಯಾ) ವಾಂತಿ ಭ್ರಾಂತಿ (ಕಾಲರಾ) ಅರ್ಧಾಂಗವಾಯು (ಪೆರಾಲೆಸಿಸ) ಹುಚ್ಚು ನಾಯಿ ಸಾಮಾನ್ಯ ಹುಚ್ಚುಕಡಿತ ಸರ್ಪದ ಡಂಕ ಹೊಟ್ಟೆಯಲ್ಲಿ ಕೃತ್ರಿಮ ವಿಷಹಾಕಿದ್ದು (ಕೈಮದ್ದು) ವಗೈರೆ ರೋಗಗಳಿಗೆ ಒಂದೇ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು. ಇಷ್ಟು ಬಹುಕಾಲದಿಂದ ಅನುಭವ ತಕ್ಕೊಂಡು. ಹಾಗು ಪ್ರತಿನಿತ್ಯ ಉಕತೆಗೆ ಒಳಿಕೆಯಲ್ಲಿದ್ದ ಹಿಬಾಗುವ ಔಷಧಿಗಳ ತಾಜಾ ಮೂಲಿಕೆಗಳು ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು ಕೆಲವು ಔಷಧಿಗಳ ದ್ರಾವಕ (Tincture) ಸಹ ಆಗಾವ ಸೂಚಿಸಿದರೆ ಕಳುಹುವೆವು

ವಾಯುದುಮ್ಮನದ ಬಗ್ಗೆ ಔಷಧಿ ಮೂಲಿಕೆ ತೊಲ

	೧ ಕ್ಕೆ ೧-೨-೦.
ಕಾಲರಾದ ಬಗ್ಗೆ „ „ „	೮-೨-೦
ಅರ್ಧಾಂಗ ವಾಯುವಿನಬಗ್ಗೆ	
೧ ಇಸಮಿಗೆ ಸಾಲುವಷ್ಟು । ಕೇರು	೧ ೮ ೦
ಪ್ರಕೃತಿ ತಿಳಿಸಬೇಕು	
ನಾಯಿ ಕಡಿತದಬಗ್ಗೆ	೦ ೪-೦
ಸರ್ಪಸುತ್ತಿನ ಬಗ್ಗೆ	೦ ೨-೦
ಹೊಟ್ಟೆಯಲ್ಲಿ ಕೃತ್ರಿಮ ಔಷಧಿ ಬಿದಬಗ್ಗೆ	
ತೊಲೆ ೧೦ ಕ್ಕೆ	೦-೮-೦.
ರಕ್ತಶುದ್ಧಿ ವ ಮಲಶೋಧನೆ ಬಗ್ಗೆ	
ಮೂಲಿಕೆ ರಾತ್ತಲ ಕ್ಕೆ	೧-೦-೦
ಮೋರಾವಳಾ (ನೆಲ್ಲಿಕಾಯಿ ಗುಳಂಬ)	
ರಾತ್ತಲ ೧ ಕ್ಕೆ	೧-೦-೦

ರಾತುಗಟ್ಟಲೆ ಯಾ ಅದಕ್ಕೂ ಹೆಚ್ಚು ಕರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು ಟಪಾಲ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಪತ್ರ ದ್ವಾರಾ. ಅನುಪಾನಪತ್ರ ಔಷಧಿ ಸಂಗಡ.

ಎನ್. ಜಿ. ಹೆಗಡೆ, ಮಾಸ್ತೇರಿ,

ಪೋಸ್ಟ— ಬಂಕಿಕೋಡ್ಲ. ಜಿ ಉತ್ತರ ಕಾನಡಾ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬಿ. ಯವರ

ಸುಗಂಧ ನಸ್ಯದ ಪುಡಿ.

ಬೋರ ... ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆಸೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಲ್ಪಟ್ಟ ಕಾಡವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ ಮೂರು ಚಿಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕರು ... ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ... ಉಚಿತವಾಗಿ ಕಳಿಸಲಾದೀತು.

ಒಂದು ಡಬ್ಬಿಯ ಕ್ರಯ ... ಪಿ ಅಜೆಂಟರ ೧ ಕ್ಕೆ ರೂ. ೨-೮-೦ ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಡಕ್ಕ— ಗುರುಬಸವ ಅಂಡ ಕಂಪನಿ ಲಿಮಿಟೆಡ ಪೋ. ಬಾ. ೫೧೦. ಜಾರ್ಜಟೌನ, ಮದರಾಸ

ಕಿರ್ಲೋಸ್ಕರ ಪಂಪ.

ಬಾವಿಯೊಳಗಿನ ನೀರನ್ನು ಮೇಲಕ್ಕೆ ತರುವದರಲ್ಲಿ

ಕಿರ್ಲೋಸ್ಕರ ... ಪಂಪು ಪೇಲಂದ್ಧಿ ರುತ್ತದೆ. ಸಣ್ಣ ಮಕ್ಕಳು, ಅಬಲೆಯರು ಈ ಪಂಪಿನಿಂದ ನೀರನ್ನು ಒಂದೇ ನಿಮಿಷದಲ್ಲಿ ಮೇಲಕ್ಕೆ ತರುವರು ಪ್ರಪಂಚದಲ್ಲಿ ಮಿಕ್ಕ ಅಡಚಣಿಗಳಲ್ಲಿ ನೀರಿನ ತೊಂದರೆಯು ಸ್ವಾಭಾವಿಕವು. ಈ ಅಡಚಣಿಯು ಮೇಲಿನ ಉಪಾಯದಿಂದ ದೂರಾಗುವದು.

ಪರದೇಶದಿಂದ ಬರುವ ಪಂಪುಗಳು ಬಹು ತುಟ್ಟಿ ಇರುವದರಿಂದ ಮಧ್ಯಮ ಜನರಿಗೆ ... ಕೊಳ್ಳುವದಾಗುವದಿಲ್ಲ. ಇದನ್ನು ತಿಳಿದು ನಾವು ಈ ಪಂಪನ್ನು ಬಹು ಅಗ್ಗ ... ಲ್ಲದೆ ಈ ಪಂಪಿನ ಬಿಡಿ ಭಾಗಗಳು ನಮ್ಮ ಕಾರಖಾನೆ ... ಯಾವಾಗಲೂ ಇರುವದರಿಂದ ಬೇಡಿದಾಗ ದೊರೆಯುತ್ತವೆ.

ಕೇ. ಬಿ. ಜೋಶಿ ಮುಂಬೈ ಇವರು ನಮ್ಮ ಸೋಲ ಏಜಂಟರು.

ಕರ್ನಾಟಕ ತರುಣರಲ್ಲಿ ಸ್ವಾವಲಂಬನವನ್ನುಂಟುಮಾಡುವ

ಕಿರ್ಲೋಸ್ಕರ ವಾರ್ತೆ ಎಂಬ ಮಾಸಪತ್ರವನ್ನು ತರಿಸಿಕೊಳ್ಳಿ

ವಾರ್ಷಿಕ ವರ್ಗಣಿ ೧। ರೂಪಾಯಿ. ಮಾದರಿ ಸಂಚಿಕೆ ಪುಕ್ಕಟೆ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ಅಮೃತಾಂಜನ.

ಇದರ ಉಪಯೋಗದಿಂದ, ಶಿರವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ. ...

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta

eg No. B 1270 Monday, October [illegible]

೯ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪.

ನರपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ವರ್ಗಣಿ.
ಮುಂಗಡ ಆಗಾವು
ವರ್ಷಾಯಿ 2-4-0.
ಕರಿಯಿಂದ
ರೂ. 3-0-0.
ಅಂಚೆವೆಚ್ಚ ಸೇರಿ
ವರ್ಷಾಯಿ 3-2-0.
ಪ್ರತಿಗೆ 0-1-0.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎಮ್ ಉದ) ೮ ಸಾಲುಗಳವರೆಗೆ ರೂ. 1-0-
ಆ ನಂತ್ರ ಪ್ರತಿಸಾಲಿಗೆ 0-2 0.
ಹೆಡಿಂಗದ ಸಾಲು ಎಷ್ಟು ಸೊಕ್ಕದಿರುವದೋ ಆ ಮಾನದಿಂದ ಅಷ್ಟುಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೧೮ ಮಾಹೆ ಅಕ್ಟೋಬರ ಸನ್ ೧೯೨೫ ನೇ ಇಸವಿ.)

दुस्थानातील रहिवाशांस ज्याप्रमाण ...ानची हवा त्याप्रमाणेंच हें औषध हिं... ...तील लोकास ज्यास्त फायदेशीर आहे.

द्राक्षासव- दीड रतलची किंमत २ रुपये;

रामबाण औषधें —

सर्दि घालविणारें,
भूक वाढविणारें,
शौच्यास साफ करणारें,
झोप आणणारें,
शक्ति देणारें,
तेजस्वीपणा आणणारें,

—— पिण्यास रुचिकर.

कॅटलाग मागवा,

...डु फार्मास्युटिकल वर्क्स लिमिटेड,
मुंबई नं: १३

ಲೋಕಪ್ರಸಿದ್ಧ ಮಾದದ್ದು! ಅನುಭವಸಿದ್ಧವಾದದ್ದು!!
ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖದ ಮನಕ್ಕೆ ಬೇಕಾದ ಆರೋಗ್ಯದಾಯಿನಿ.

[ರಿಜಿಸ್ಟರ್] **ಅಗಸ್ತ್ಯ** [ಸೋಡಿ ಕೊಟ್ಟಿ.

ಮನ್ಮಥಚಿಂತಾಮಣಿಲೇಹ

ರಿಜಿಸ್ಟರ ಆದ್ದು

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು. ದೇಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನದೋಷವಾಗುವ ಯುವಕರಿಗೂ ಜ್ಞಾನಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ

1 ಸೇರು ನಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು

1 ಸೇರು ಡಬ್ಬಿ ಒಂದಕ್ಕೆ 3—0—0
½ ಸೇರು ಡಬ್ಬಿ ಒಂದಕ್ಕೆ 1—9—0
ವ್ಹಿ. ಪಿ ಖರ್ಚು ಪ್ರತ್ಯೇಕ ವಿಶೇಷ ಮಾಹಿತಿ ಬರೆಯಲ್ಲಿರಿ.

ಪತ್ತೆ:-ದೇವಣ್ಣ ನಾರಾಯಣ ಸೇಟ್,
ಕಲ್ಯಾಣ. ಗೋಡೌನು, ಮಂಗಳೂರು, (ದ. ಕ

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, *B. A.*

Jewellers, KUMTA.

ಆರ್. ಎಸ್. ಕಾಸರಗೋಡ, ಬಿ ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

धातू क्षीणता व कमजोरपणा यांसाठी

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात. पचन शक्ति सुधारून परसाकडे साफ होतें. त्याचप्रमाणें प्रत्येक प्रकारची अशक्तता दूर होऊन शरीर तेजदार व बळवान होतें. किं. ४० गोळ्यांच्या डबीस रु. १.

रमण विलासिनी गोळ्या. रात्रीं फक्त १ गोळी दुधाबरोबर खाल्यानें इच्छेप्रमाणें वीर्यस्तंभन होतें. किं. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पावून खरें पुरुषत्व प्राप्त होतें. किं. डबीस रु. १.

कुमठा एजंट — माधव सांतप्पा शेणवी बेलेकेरी

राजवैद्य नारायणजी केशवजी वैद्यः— १९३ काळबादेवी रोड मुंबई नं. २.

ತ್ವರೆ ಮಾಡಿರಿ ! ತ್ವರೆ ಮಾಡಿರಿ !!

ಜಾಹಿರಾತುದಾರರು ತ್ವರೆಮಾಡಬೇಕು!

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರಿಂದ ದೃಗ್ಗಣಿತ ಪ್ರಕಾರ ಗುಣಿಸಿ ಪರಿಶೋಧಿಸಲ್ಪಟ್ಟ

ಕ್ಷಯ ಸಂವತ್ಸರದ ಪಂಚಾಂಗವು

ಅಚ್ಚಿನಲ್ಲಿದೆ!

ಪಂಚಾಂಗದಲ್ಲಿ ಜಾಹಿರಾತು ಕೊಡುವವರಿಗೆ ಏರ್ಪಾಟು ಮಾಡಿದೆ !

ಈ ಪಂಚಾಂಗವು ಕಾನಡಾ ಜಿಲ್ಲೆ ಒಳಗಿನ ಹಳ್ಳಿ ಹಳ್ಳಿಗಳಲ್ಲಿಯೂ, ಸಾಗರ-ಶಿವಮೊಗ್ಗಾ ಮೊದಲಾದ ಮೈಸೂರು ಪ್ರಾಂತದಲ್ಲಿಯೂ ಸುಪ್ರಸಿದ್ಧವಿದೆ. ಜಾಹಿರಾತು ಕೊಡಲಿಚ್ಛಿಸುವವರು ಬರುವ ಅಕ್ಟೋಬರ ತಾರೀಖು ३೧ ರೊಳಗೆ ಈ ಕೆಳಗಿನ ಪತೆಯ ಮೇಲೆ ಪತ್ರವ್ಯವಹಾರ ಮಾಡಿ ದರ ವಾರ ತಿಳಕೊಳ್ಳಬಹುದು.

ಮ. "ಸ್ಟಾರ ಆಫ್ ಕೆನರಾ ಪ್ರೆಸ್" ಕುಮಟಾ (ಉ. ಕಾ

ನಮ್ಮ ಪ್ರೆಸ್ಸಿನಲ್ಲಿ

ಗೇಣಿ ಬಾಕಿ ದಾವೆಯ ಛಾಪೂರ್ಮಗಳು ತಯಾರಿವೆ.

ವಕಾಲತ, ಅನುಲಜಾರಿ ಮೊದಲಾದ ಕೋರ್ಟ ವ್ಯವಹರಣೆಯ ಹಾಗೂ ಕಸ್ಟಮ್ ಖಾತೆಯ ಛಾಪೂರ್ಮಗಳು ಅಗ್ಗವಾಗಿ ಸಿಗುತವೆ.

ಮೆನೇಜರ,

ಸ್ಟಾರ ಒಫ್ ಕೆನರಾ ಪ್ರೆಸ್, ಕ.ವ.ಚ ೩

ಎಲ್ಲಾ ನೋವುಗಳಿಗೆ ದಿವ್ಯೌಷಧ !

ವಾತಹಾರಿ ತೈಲ.

ಕ್ರಯ ೫ ತೊಲಿ ಬಾಟ್ಲಿ ೧ ಕ್ಕೆ ೦—೧೨—೦ ಊಂಚಿ ಸುವಾಸಿಕ ಕಾಬೂಲಿ ಹಿಂಗು ೧೦ ತೊಲಿ ಡಬ್ಬಿ ೧ ಕ್ಕೆ ೧—೮—೦.ಹಿಂಗಿನ ಅರ್ಕ ,, ತೊಲೆಯ ಬಾಟ್ಲಿ ೧ ಕ್ಕೆ ೦—೮—೦. ರಕ್ತ ಶುದ್ಧಿ ಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೨೦ ತೊಲಿ ಯ ಡಬ್ಬಿ ೧ ಕ್ಕೆ ೧—೪—೦. ೧ ತೊಲೆಯ ಹಿಂಗಿನ ಡಬಿಗಳು ಡಜನ್ ೧ ಕ್ಕೆ ೨—೦—೦ ತಲೆಗೆ ಹಾಕುವ ಸುವಾಸಿಕ ಮಸ್ತಕರಾಜ ತೈಲ ೫ ತೊಲಿಯ ಬಾಟ್ಲಿ ೧ ಕ್ಕೆ ೦—೧೨—೦ ಹುಳದ ಪ್ರೊವ. ತೊಲಿ ೧ ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಊಂಚಿ ಊದಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು ಟಪಾಲ ಖರ್ಚು ಪ್ರತ್ಯೇಕ

ಕೆರೇಕರ ಕಾಬೂಲೀ ಹಿಂಗಿನ ದುಕಾನ.

ಜವಳಿಬಾಜಾರ, ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧. ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೦೦.

೨. „ ಕಾಲು ಪೆಟ್ಟಿಗೆ.ಕಿಂ. ೬೫, ೭೫, ೧೨೦, ೧೫೦.

೩. ತಬಲೆ ಜೋಡಿ ಕಿಂ. ೧೬, ೧೮, ೨೦, ೨೫.

೪. ಹಾರ್ಮೋನಿಯಮ ಗ್ಯಾಡ (ಮರಾಠಿ) ಕಿಂ. ೦॥, ತಬಲೆ ಗ್ಯಾಡ ಕಿಂ. ೧೨ ಆ.

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:- **ಗೋಪಾಳ ಸಖಾರಾಮ ಮತ್ತು ಕಂಪನಿ,** ವಿಠ್ಠಲವಾಡಿ ಎದುರಿಗೆ, **೩೬೨ ಕಾಳಬಾದೇವಿ, ಮುಂಬಯಿ,**

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ



ಕಳೆದ ೪-೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಅಗುಂಬೆ, ಶಿವಮೊಗ್ಗಾ-ಸಾಗರ-ತಾಳಗುಪ್ಪೆ, ಶಿವಮೊಗ್ಗಾ-ಹರಿಹರ-ದಾವಣಗೆರೆ, ಶಿವಮೊಗ್ಗಾ-ಕಳಸಾಪುರ, ಸಾಗರ-ಸೊರಬ-ಶಿರಾಳಕೊಪ್ಪ, ಸಾಗರ-ತೀರ್ಥಹಳ್ಳಿ, ಸಾಗರ-ಕಳಸಾಪುರ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ ಮೋಟರ ಸರ್ವಿಸನ್ನು ನಡೆಸುತ್ತಿದ್ದೆವೆ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ಉಡುಪಿ, ಕುಂದಾಪುರ, ಮುಂಗಳೂರ ಹಾಗು ಬೆಂಗಳೂರು ಈ ಕಡೆಗೆ " ಕಾರ್ಕಳ ಮೋಟರ ಸರ್ವಿಸಿನ " ವಿದ್ಯಮಾನವೂ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಗೆ " ಲಕ್ಷ್ಮೀ ಮೋಟರ ಸರ್ವಿಸ " ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುತ್ತೇವೆ

ಉತ್ತರ ಕನ್ನಡ ಜಿಲ್ಲೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ ಸಾಗರ, ಹರಿಹರ ಮತ್ತು ಮೇಲ್ಕಂಡ ಸ್ಥಳಗಳಿಗೆ ಪ್ರಯಾಣ ಬೆಳಸಲು ಅನುಕೂಲವಾಗಬೇಕೆಂದ ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಶಿರಸಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾರಂಭ ಮಾಡಿರುತ್ತೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	ಬೆಳಿಗ್ಗಿನ ೭ ಘಂಟೆಗೆ.
ಶಿರಸಿ [illegible]	,, ೧೧ ,,
ಶಿರಸಿಯಿಂದ [illegible]—	ಮಧ್ಯಾಹ್ನ ೧ ,,
ಸಾಗರಕ್ಕೆ ಸೇರುವದ ([illegible])—	ಸಾಯಂಕಾಲ ೬ ,,
ಸಾಗರದಿಂದ ಶಿರಸಿ ಕಡೆಗೆ ಹೊರಡುವದು —	ಬೆಳಿಗ್ಗಿನ ೬ ,,
ಸಿದ್ದಾಪುರದ [illegible] —	,, ೧೧ ,,
ಶಿರಸಿಯಿಂದ [illegible] ಹೊರಡುವದು— ...	ಮಧ್ಯಾಹ್ನ ೨ ,,
ಕುಮಟೆಗೆ [illegible] —	ಸಾಯಂಕಾಲ ೫ ,,

N B — [illegible] ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ ಪ್ರಾರಂಭಿಸುವ [illegible] ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ

SHIMOGA, 25—11 —924. } **M. MANJAPPA.** PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕಿಟಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಔಷಧವು ಮಹಾಪೌಷ್ಟಿಕವೂ, ರುಚಿಕರವಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦ ೩೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವದು. (ನಿಜವಾ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಷಂಡತ್ವ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು — ಪರವಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸುಧ ಆಗುವದು. ಮೈಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ತನಿನ ಬಾಟಲಿಗಳ ಕಿಮ್ಮತು ೧೨—೦—೦ ಮತು ೧ ಬಾಟಲಿ ಪುಕ್ಕಟೆ ಸಿಗುವದು ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦ ಪಡೆದು ೫—೦—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು, ಪ್ರೋ. ನಿಪ್ಪಾಣಿ ಜಿ ಬೆಳಗಾಂವ

An appeal

to the voters for the District Local Board in the Ankola Taluka of the Karwar District.)

Gentlemen,

I understand that Mr. V. P. Prabhu B.A. of Ankola is one of the candidates for election to the District Local Board, Karwar from our Taluka and that the elections will come off on the 29th October 1925 I have known Mr. Prabhu for many years as a patriotic and conscientious public workar. He filled with credit the responsible post of the Head Master of the Gibb High School· Kumta for nearly 10 years. He has also rendered valuable public services both as a Municipal Councillor and a Member of the Taluka Local Board. Mr. Prabhu is a gentleman of sterling honesty and has always displayed a high sense of duty. I trust you will all whole-heartedly support his present candidature and see that he is returned by an overwhelming majority. I have no hesitation in saying that in returning Mr. Prabhu to the District Local Board, you will have honoured yourselves.

Yours faithfully,

Belgaum 14th Oct 1925. } **D. V. Belvi,** LL.B., M.L.A.

ಆಗ್ರಹದ ವಿನಂತಿ.

ಕಾರವಾರ ಜಿಲ್ಲೆಯೊಳಗಿನ ಅಂಕೋಲಾ ತಾಲೂಕಿನೊಳಗಿನ ಜಿಲ್ಲಾ ಬೋರ್ಡಿನ ಮತದಾರರಿಗೆ—

ಸಭ್ಯರೇ

ಅಂಕೋಲೆಯ ಶ್ರೀ ವ್ಹಿ. ಪಿ. ಪ್ರಭು, ಬಿ. ಎ. ರವರು ನಿಮ್ಮ ತಾಲೂಕಿನ ತರ್ಫೆನಿಂದ, ಕಾರವಾರದ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ಸಭಾಸದತ್ವಕ್ಕೆ ಉಮೇದವಾರರಾಗಿ ನಿಂತಿರುವರೆಂದು ನನಗೆ ತಿಳಿದು ಬಂದಿದೆ. ಚುನಾವಣೆಯು ಇದೇ ಬರುವ ತಾರೀಖು ೨೯-೧೦-೧೯೨೫ನೇಗೆ ಆಗುವದಾಗಿಯೂ ನಾನು ಕೇಳಿದ್ದೇನೆ. ಶ್ರೀ ಪ್ರಭುರವರಿಗೆ ನಾನು ಕೆಲವು ವರ್ಷಗಳಿಂದ ಬಲ್ಲೆನು. ಅವರು ದೇಶಾಭಿಮಾನದಿಂದಲೂ, ಮನಃಪೂರ್ವಕವಾಗಿಯೂ ಲೋಕಸೇವೆ ಮಾಡುವವರು. ಸುಮಾರು ೧೦ ವರುಷಗಳ ವರೆಗೆ ಕುಮಟೆಯ ಗಿಬ್ಬ ಹ್ಯಾಸ್ಕೂಲಿನ ಹೆಡ್‌ಮಾಸ್ತರಿಯಂಥ ಜವಾಬದಾರಿಯ ಹುದ್ದೆಯನ್ನು ದಕ್ಷತೆಯಿಂದ ನಡಿಸಿ ಹೆಸರಾದವರು. ತಾಲೂಕಾ ಲೋಕಲ್ ಬೋರ್ಡಿನ ಮೆಂಬರ ಹಾಗು ಮ್ಯುನಿಸಿಪಲ್ ಸಭಾಸದ ಈ ಎರಡೂ ಅಧಿಕಾರಗಳನ್ನು ನಡಿಸಿ ಅಮೂಲ್ಯ ದೇಶಸೇವೆಯನ್ನು ಮಾಡಿರುವರು. ಶ್ರೀ ಪ್ರಭುಗಳು ಉತ್ತಮ ಪ್ರತಿಯ ಪ್ರಾಮಾಣಿಕ ಗೃಹಸ್ಥರಿದ್ದು ಕೈಕೊಂಡ ಕರ್ತವ್ಯವನ್ನು ಪಾರಗಾಣಿಸುವ ಅರಿವು ಅವರಿಗೆ ಯಾವಾಗಲೂ ಇದ್ದೇ ಇದೆ. ತಾವೆಲ್ಲರೂ ಅವರ ಈಗಿನ ಉಮೇದವಾರಿಯನ್ನು ಉತ್ಸಾಹದಿಂದ ಪುರಸ್ಕರಿಸಿ ಅವರಿಗೆ ಪ್ರಚಂಡ ಬಹುಮತದಿಂದ ಆರಿಸಿ ಕಳುಹಿಸಲೇಬೇಕು. ಶ್ರೀ ಪ್ರಭುಗಳನ್ನು ಜಿಲ್ಲಾ ಲೋಕಲ್ ಬೋರ್ಡಿಗೆ ಆರಿಸಿ ಕಳುಹಿಸುವದರಿಂದ ನೀವು ನಿಮ್ಮದೇ ಮಾನ ಕಾಯ್ದುಕೊಂಡಂತಾಗುವದೆಂದು ನಾನು ನಿಶ್ಚಿತವಾಗಿ ಹೇಳಬಲ್ಲೆ.

ಬೆಳಗಾವಿ, ತಾ. ೧೪-೧೦-೧೯೨೫

ತಮ್ಮ ನಂಬಿಗಸ್ಥ

ದತ್ತಾತ್ರಯ ವೆಂಕಟೇಶ ಬೆಳವಿ,

ಎಲ್. ಎಲ್. ಬಿ.

ವರಿಷ್ಠ ಶಾಸನ ಕೌನ್ಸಿಲಿನ ಸಭಾಸದ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವಾಯಿಂದ ಶೋಭಿತವಾದ ಕೇಶದ ಮಹತ್ವವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಿಕ್ಕೆ ಉಪಕರಣವಾದದ್ದು.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಕದ ಬೇನೆಯು ತಕ್ಷಣ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚುವುದರಿಂದ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅದಕ್ಕೆ, ಅವು ದೀರ್ಘವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ವೆಂಬ್ಲಿ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಅನೇಕ ಸಾವಿರಾರು ಗ್ರಾಹಕರು ಉತ್ತಮೋತ್ತಮವಾದ ಪ್ರಶಂಸಾಪತ್ರಗಳೂ ದೊರಕಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0 ವ್ಹಿ. ಪಿ ಖರ್ಚು 0-14-0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಲ್ಪಟ್ಟ ಇದರಲ್ಲಿ ಮದಿರೆಯ (ಅಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಹಾಕುತ್ತಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರದ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4 0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0

Address:- **The Anglo Indian Drug & Chemical Co.**

16, Market, **BOMBAY 2**

ಖಾದಿಯ ಪ್ರಸಾರ.

ಶ್ರೀ। ಗಂಗಾಧರರಾಯರ ಹುದ್ಲಿಯೊಳಗಿನ ಆಶ್ರಮ.

ದೇಶಭಕ್ತ ದೇಶಪಾಂಡೆ ಗಂಗಾಧರರಾಯರು ಹುದ್ಲಿಯಲ್ಲಿ ಖಾದಿಪ್ರಸಾರ ಕಾರ್ಯವನ್ನು ಕೈಕೊಂಡಿರುವರು. ಹುದ್ಲಿಯೆಂದರೆ, ಬೆಳಗಾವಿಯ ಸಮೀಪವಿರುವ ಒಂದು ಗ್ರಾಮ. ಈ ಗ್ರಾಮದ ನೆರೆಹೊರೆಯಲ್ಲಿ ಮೊದಲು ರೇಶಿಮೆಯ ಸೀರೆ ಕಸ್ತ ಪತ್ತಾರಿಗಳು ತಯಾರಾಗುತ್ತಿದ್ದವು. [illegible] ಈ ಕೈಗಾರಿಕೆಯು ನಾಮಶೇಷವಾಗಿದೆ. ಗಂಗಾಧರರಾಯರು ಕಾರ್ಯನಿರೀಕ್ಷಣ ಮಾಡಲು ನಾಗಪುರದ ವೀರ ವಾಮನರಾವ ಜೋಶಿಯವರು [illegible] ಅಲ್ಲಿ ಹೋಗಿದ್ದರು. ನೆರೆಹೊರೆಯ [illegible] ಗ್ರಾಮಗಳಿಂದ ಹುದ್ಲಿಯಲ್ಲಿ ನೂಲು ಬರುತ್ತಿದೆ. ನೂಲುವವರೆಲ್ಲರು ಸ್ತ್ರೀಯರು. ತಮ್ಮ ತಮ್ಮ ಮನೆಯಲ್ಲಿ ನೂತ ನೂಲು ಪ್ರಾಪಂಚಿಕ ಕೆಲಸಗಳನ್ನೆಲ್ಲ ತೀರಿಸಿ ಉಳಿದ ವೇಳೆಯಲ್ಲಿ ನೂತ ನೂಲು ವಾರಕ್ಕೆ ಸುಮಾರು ೫೦೦ ರೂಪಾಯಿಗಳ ನೂಲು ದೊರಕುತ್ತದೆ. ಗಂಗಾಧರರಾಯರು ಹತ್ತಿಯ [illegible]ಗಳನ್ನು ಪೂರೈಸುತ್ತಾರೆ. ಸಾಮಾನ್ಯವಾಗಿ ನೂಲಿನ ನಂಬರು ೧೬ರಿಂದ ೩೦ ಹೆಂಗಸರಿಗೆ [illegible] ಆಣೆ ಕೂಲಿ ದೊರೆಯಲಿಕ್ಕೇನು ಅಡ್ಡಿಯಿಲ್ಲ. ಈ ಪ್ರದೇಶದಲ್ಲಿ ವರ್ಷದಲ್ಲಿ ೫-೬ ತಿಂಗಳು ಯಾವದೇ ಕೆಲಸವಿಲ್ಲ. ನಿರುದ್ಯೋಗಿ ಕಾಲಹರಣವಾಗುವ ದಿನಗಳಲ್ಲಿ ಆ ಸಮಯ ನೂಲು ನೂತು, ಸ್ತ್ರೀಯರು ಪ್ರಪಂಚಕ್ಕೆ ಅನುಕೂಲತೆ ಮಾಡಿಕೊಳ್ಳುತ್ತಾರೆ. ಇತ್ತ ನೂಲಿನ ಗುಣವು ಬಹಳ ಸುಧಾರಿಸಿದ್ದು ಅಗ್ಗವಾಗಿ ದೊರೆಯುತ್ತಿದೆ. ಸ್ತ್ರೀಯರು [illegible] ದೂರದಿಂದ ನೂಲು ತಂದು ದೇಶಭಕ್ತ ಗಂಗಾಧರರಾಯರಿಗೆ ಒಪ್ಪಿಸುತ್ತಾರೆ.

ವೀರ ವಾಮನರಾವ ಜೋಶಿಯವರು ಆಶ್ರಮಕ್ಕೆ ಹೋದ ಸಮಯ ಒಬ್ಬ ಸ್ತ್ರೀಯಳು ಅಲ್ಲಿ ಹೋಗಿದ್ದಳು. ಅಲ್ಲಿ ಹೋಗಿ ಮುಟ್ಟಿದಾಗ ಮಧ್ಯಾಹ್ನ [illegible] ಮೈಲು ದೂರದಿಂದ ಅವಳು ಹೋಗಿದ್ದಳು. ಅವಳು ನುಡಿದದ್ದೇನೆಂದರೆ — “ನೂಲು ತೆಗೆಯಲಿಕ್ಕೆ ಈ ನಮ್ಮ ಹೊಟ್ಟೆಯೇ ಕಲಿಸುತ್ತದೆ. [illegible] ಮೈಲು ದೂರದಿಂದ ನಾನು ಇಲ್ಲಿ ಯಾಕೆ ಬಂದೆ? ಪ್ರಪಂಚ ನಡಿಗಿಸಲು ಹಣ ದೊರಕುತ್ತದೆಂದು. ಸರಕಾರವು ಹತ್ತಿಗೆ ಹೆಚ್ಚು ದರಕೊಟ್ಟು ಕೊಂಡಿತು, ನಮ್ಮ ಮನೆಯ ಗಂಡಸರು ಮನೆಯೊಳಗಿನ ಹತ್ತಿಯೆಲ್ಲ ಮಾರಿಕೊಟ್ಟು ಹಣ ಸಂಪಾದಿಸಿದರು. ಸರಕಾರವೇ ನಮ್ಮ ಮೂಲ ಕೈರಾಟೆಯನ್ನು ಸೆಳೆಕೊಂಡಿದೆ. ಗಂಡಸರು ಹಣದ ಮೋರೆ ನೋಡಿ ಹತ್ತಿಯನ್ನು ಮಾರಿದ್ದರಿಂದ ನಮ್ಮ ಕೈಗಾರಿಕೆಯು ನಷ್ಟವಾಯಿತು. ಗಂಡಸರೇ ಇದ್ದೆಲ್ಲ ಗೊಂದಲಕ್ಕೆ ಕಾರಣರು. ದಿನಾ ೩-೪ ತಾಸು ಕಷ್ಟಬಟ್ಟರೆ ೩ ಆಣೆ ಕೂಲಿ ದೊರೆಯಬಹುದು. ಆದರೆ ನನ್ನ ಮನೆಗೆಲಸ ಹೊಲಗೆಲಸಗಳನ್ನೆಲ್ಲ ಮುಗಿಸಿ ನೂತ ನೂಲಿಗೆ ಗಂಗಾಧರರಾಯರ ಕಡೆಯಿಂದ ೩-೪ ದಿವಸಗಳಿಗೆ ೧೫ ಆಣೆ ದೊರೆಯುತ್ತವೆ. ಇದೊಂದು ದೊಡ್ಡ ಉಪಕಾರ. ನೂಲಿನ ಕೆಲಸವನ್ನು ಕಲ್ಪಿಸಿ ನಮಗೆ ಹೊಟ್ಟೆಗೆ ಅನ್ನ ಸಿಗುವ ವ್ಯವಸ್ಥೆ ಮಾಡಿದ ಗಂಗಾಧರರಾಯರಿಗೆ ಪರಮಾತ್ಮನು ಚಿರಾಯುಷ್ಯವನ್ನೀಯಲಿ” ಇದನ್ನು ಕೇಳಿ ವೀರ ವಾಮನರಾಯರಿಗೆ ಗಂಗಾಧರರಾಯರ ಪ್ರಜಾಸೇವೆಯ ಅರಿವಾಯಿತು.

ಗಂಗಾಧರರಾಯರ ಆಶ್ರಮದಲ್ಲಿ ೧೩ ಕೈಮಗ್ಗಗಳಿವೆ. ಈ ಮಗ್ಗಗಳು ಹಳೇ ಮಾದರಿಯವು. [illegible] ಮಗ್ಗಗಳು ನೇಯ್ಗೆ ಕಲಿಯುವವರಿಗಾಗಿ ಪ್ರತ್ಯೇಕ ಇಡಲ್ಪಟ್ಟಿವೆ. ಉಳಿದ ೧೦ ಮಗ್ಗಗಳ ಮೇಲೆ ಅರಿವೆ ತಯಾರಾಗುತ್ತಲಿದೆ. ಗಂಗಾಧರರಾಯರ ಈ ಕಾರ್ಯದಿಂದ ನೇಕಾರ ಜಾತಿಯಲ್ಲಿ ಜಾಗೃತಿಯಾಗಿ ಅನೇಕ ನೇಕಾರರು ಪುನಃ ನೇಯ್ಗೆಯನ್ನು ಕೈಕೊಂಡು ಸಂಸಾರ ಸಾಗಿಸಲು ಉದ್ಯುಕ್ತರಾಗಿರುವರು. ನೇಕಾರರ ಹುಡುಗರಿಗಾಗಿ ಗಂಗಾಧರರಾಯರು ಸದ್ಯಕ್ಕೆ ಒಂದು ಶಾಲೆಯನ್ನು ತೆರೆಯುವವರಿದ್ದಾರೆ. ನೆರೆಹೊರೆಯ ಹಳ್ಳಿಗಳಲ್ಲೆಲ್ಲ ದೇಶಭಕ್ತರು ಒಬ್ಬೊಬ್ಬ ರಾಷ್ಟ್ರಸೇವಕರನ್ನು ಪ್ರತಿ ಗ್ರಾಮದಲ್ಲಿ ನೇಮಿಸಿ [illegible] ಮೇಳ [illegible] ಶಿಸ್ತಿನಿಂದ ಆಸ್ಥೆಯಿಂದ ಮಾಡುತ್ತಾರೆ. ಶ್ರೀ। ಗಂಗಾಧರರಾಯರು ನೆರೆ ಗ್ರಾಮಕ್ಕೆ ಹೋಗುತ್ತಿರುವಾಗ ಜನರೆಲ್ಲರೂ ಅವರಿಗೆ ಭಕ್ತಿಭಾವದಿಂದ ವಂದಿಸುವದನ್ನು ಕಣ್ಣಾರೆ ನೋಡುವವರಿಗೆ ಖಾದಿಯ ಪ್ರಸಾರದಿಂದ ಅವರು ಮಾಡುವ ಉಪಕಾರವು ಹೊಳೆಯದಿರದು. ಶ್ರೀ। ಗಂಗಾಧರರಾಯರ ಜೊತೆಗೆ ಶ್ರೀ [illegible] ಗಾವಿ ಪಾಸ್ತರರಾಯರು ಇತರರು ಅರಿಯುವದರಿಂದ ಉತ್ಸಾಹದಿಂದ ಗಂಗಾಧರರಾಯರಿಗೆ ನೆರವಾಗುತ್ತಿದ್ದ ನೋಟವು [illegible] ಮಗ್ಗದೊಳಗಿನ ವ್ಯವಸ್ಥೆಯೂ ಅತ್ಯಂತ ಪ್ರಶಂಸನೀಯವು.

ಈ ಆಶ್ರಮದಲ್ಲಿ ೧೬ ನಂಬರದ ನೂಲಿನ [illegible] ಗಜದ ಧೋತರ ಜೋಡಿಗೆ ೬ ರೂಪಾಯಿಯಿಂದ ೬ ರೂಪಾಯಿ [illegible] ಬೆಲೆಬೀಳುತ್ತದೆ. ೧೮ ನಂಬರ [illegible] ತೊಲೆ ನೂಲನ್ನು ಒಬ್ಬ ಹೆಂಗಸು [illegible] ವಾರದಲ್ಲಿ [illegible]

* *

[illegible]

[illegible] ಪ್ರಿಯ [illegible] ಪತ್ರಿಕೆಯಲ್ಲಿ [illegible] ಓದುವ [illegible] ಇದರ ಚಿಕ್ಕ [illegible] ಕೈರಾಟೆ [illegible]ನ್ನು ಕೈಕೊಂಡಿರ [illegible] ಇಸ್ಸಿಯಿಂದ ಈ ಜಾತಿಯ [illegible] ರಾದರು. ಇವರು ಮೊದಲ [illegible] ಕಾರಿಗೆ [illegible] ಮಂತ್ರ [illegible] ಪ್ರಧಾನ [illegible] ಹುಡ [illegible] ಸಿಯ [illegible] ಶೇಖರ [illegible] ವೆ [illegible] ದ ಶಿಯ [illegible] ಕೆ ಭಕ್ತ [illegible] ವೇಳೆ ಬಹಳ [illegible] ತವಾಗಿ [illegible] ಖಾದಿಯನ್ನೇ ಧರಿಸ [illegible] ಕ್ಕಾಗಿ ಪ್ರವೇಶ [illegible] ಕೊಂಡು [illegible] ರ ದೂರದಿಂದ [illegible] ಒಂದು ಸಭೆಯಲ್ಲಿ ಸುಮಾರು ೩೦೦ ಭಕ್ತರು [illegible]ಗಳನ್ನು ಕೊಂಡು [illegible] ನೋಟವನ್ನು ಮಹಾತ್ಮರು ನೋಡಿ [illegible] ಭಕ್ತರು ಬಹಳ [illegible] ಗ್ರಾಮವಿದೆ. ಅಲ್ಲಿ [illegible] ಸಾರವರು [illegible] ಪ್ರಯೋಗವು [illegible] ಕುರಿತು [illegible] ಶಕ್ಯವಿಲ್ಲ.

ಗೌರೀಹುಣ್ಣಿವೆಯಿಂದ ಹೊಸ ವರ್ಷ ಪ್ರಾರಂಭ

ಸಚಿತ್ರ] ಜಯಕರ್ನಾಟಕ [ಮಾಸಪತ್ರಿಕೆ

ಸಂಪಾದಕ ಆಲೂರ ವೆಂಕಟರಾಯರು.

ಇದರಲ್ಲಿ ವಾಙ್ಮಯಶಾಸ್ತ್ರ, ಸಾಹಿತ್ಯ, ಧಾರ್ಮಿಕ, ಸಾಮಾಜಿಕ, ಐತಿಹಾಸಿಕ, ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಪಂಚ ದರ್ಶನ, ಜೀವನಚರಿತ್ರೆ, ನಾಟಕಾದಿಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿಯೂ ಸುಂದರ ಚಿತ್ರಗಳು ಬರುತ್ತವೆ. ಡೆಮಿ [illegible] ಆಕಾರದ ೩೦ ಪುಟಗಳು. ವರ್ಗಣಿ ರೂ ೫-೮-೦ ಕಾರ್ಯದರ್ಶಿ, ಜಯಕರ್ನಾಟಕ, ಧಾರವಾಡ.

ವಿವಿಧ ಸಂಗ್ರಹ.

ಮಂಗಗಳ ಮೇಲೆ ಪ್ರಯೋಗ!

ಸನ ಕಳೆದ ಅಮೇರಿಕೆಯಲ್ಲಿ ದೊಡ್ಡದೊಂದು ಖಟ್ಲೆಯಾಯಿತು. ಜಾನ್ ಸ್ಕೋಪ್ಸ್ ಎಂಬವರು ಮರ್ಕಟದಿಂದ ಮಾನವನ ಉತ್ಪತ್ತಿಯಾಯಿತೆಂದು ಪ್ರತಿಪಾದಿಸಿದ್ದಕ್ಕೆ ಅವರ ಮೇಲೆ ಖಟ್ಲೆಯಾಗಿ ದಂಡನೆಯಾಯಿತಷ್ಟೆ. ಈ ಉತ್ಕ್ರಾಂತಿ ತತ್ವವನ್ನು ಪ್ರಯೋಗದಿಂದ ಸಿದ್ಧ ಮಾಡಲು ಅಮೇರಿಕೆಯವರು ಯೋಜಿಸುತ್ತಿದ್ದಾರೆ. ಹಿಮಾಲಯ ಪರ್ವತದಿಂದ ೨೦ ಮಂಗಗಳನ್ನು ಒಯ್ದು ಅಲ್ಲಿ ಅವುಗಳನ್ನು ಸಾಕಿ ಮರ್ಕಟ ಹಾಗು ಮಾನವನ ಸಂಬಂಧವನ್ನು ಸೂಕ್ಷ್ಮವಾಗಿ ಶೋಧಿಸಲು ಪ್ರಯತ್ನಿಸುವರು. ಮಂಗಗಳ ಬದ[illegible]ಗಳನ್ನು ಸಂಪೂರ್ಣವಾಗಿ ಅಗಿಂದಾಗ ನಿ[illegible] ಮಾನವನು ಹೇಗೆ ಉತ್ಪನ್ನನಾಗುತ್ತಾನೆಂದು [illegible]ವರು.

* *

ವಿಚಿತ್ರ ಜಂತ್ರಭಿಮಾನ!

[illegible] ತಿಯ ವಕೀಲತ್ವವನ್ನು ವಹಿಸಿ [illegible] ಚಿತ್ರಿಸಲ್ಪಟ್ಟಿತು. ಅಂದು ರಾಷ್ಟ್ರ[illegible]! ಪ್ರಲಂಬ [illegible] ದರವರೂ, [illegible] ಅತ್ಯಂತ ಪ್ರಿಯ [illegible] ಮೆರವಣಿಗೆಯಿಂದ ಒಯ್ದು ಅವ[illegible] ಆಸ್ಪತ್ರೆ [illegible] ಅವರಿಗೆ ಹೊಸ [illegible] ಒಬ್ಬ ಲಕ್ಷ್ಮೀ ಪುತ್ರನ ಮನೆಗೂ [illegible] ಸಂತೈಸಿದ [illegible] ಉಪಸಿತ್ವ [illegible]ದಿಂದ ಪಾರ [illegible] ಅದರ, ಮುಂದೆ [illegible] ಪೂರ್ವತನ [illegible] ಸ್ಮರಿಸಲಿಕ್ಕಾಗಲಿಲ್ಲ. ಕಿಡಿಗೇಡಿ [illegible] ಶ್ರೀ [illegible] ತ್ಯಾಗ [illegible] ಲೋಕಕಲ್ಯಾಣ [illegible] ಸಹ ಕಡ[illegible] ಶ್ರೀ। ಪೋಲೀಸರ [illegible] ನಾಗರಿಕರಿಂದ [illegible] ಮುನಿಸಿಪಾಲಿಟಿಯ ಚುನಾವಣೆ [illegible] ಅಧಿಕಾರ [illegible] ಸಭೆ [illegible] ಇದನ್ನು ಕಿಡಿಗೇಡಿ ಪುರಾ[illegible] ಮತವಾದಿಗಳು [illegible] ಪ್ರಕಟಿಸಿದರು. ವಾರದ ದಿನವೇ ಅಕ್ಷಯ ಜಾತಿ ಸಭೆಯಾದ [illegible] ಸಭೆಯಾಗಿ ಮುಂಚಿನ ದಿನದ ಅಸ್ಪೃಶ್ಯರ [illegible] ಮತಗೊಂಡವರಿಗೂ, [illegible] ಸಾಮ್ರಾಟರಿಗೂ ತಮ್ಮ ತಮ್ಮ [illegible]ಗಳನ್ನು ತಿಳಿಸಲು ಪ್ರಯತ್ನಿಸಿದರು. [illegible] ಪ್ರದರ್ಶಿಸಿ ಮಹಾಜನರ ಹುಕುಮು ಗಳಿಗೆ ಬಗ್ಗಲಿಲ್ಲ, ಮುಂದೆ [illegible] ದಾಗ ನಡೆದುದೂ [illegible] ಅಂಬೋಣ ಕೇಳಿಕೊಳ್ಳುವರೆಗೆ [illegible] ಪ್ರಷ್ಟನಾಗಬಾರದೋ ಏನೋ! ರಾಷ್ಟ್ರೀಯ ಮೋಹನ ಶಾಲೆಗೆ ಮಹಾಜನರಿಂದ ಒಪ್ಪಿದ ಧರ್ಮನಿಷ್ಠ ಪ್ರಜೆಗಳು ತಮ್ಮ ಹುಡುಗರನ್ನು ಕಳುಹಬಾರದೆಂದೂ, ಕಳುಹಿದರೆ, ಮಹಾಜನರ ದ್ರೋಹದ ಪಾಪಕ್ಕೆ ಗುರಿಯಾಗುವರೆಂದೂ ಅಲ್ಲಿಂದಲ್ಲೇ ಪ್ರಸಿದ್ಧನಾಯಿತು. ಮುಂದಿನ ದಿನಕ್ಕೆ ಸ್ಥಳಿಕ ರಾಷ್ಟ್ರಸೇವಕರಿಗೆ ಮಹಾಜನರ ಮಂ

ದೆ ಕರೆದಿತ್ತು. ಅದರಂತೆ ರಾಷ್ಟ್ರಸೇವಕರು ಅಲ್ಲಿ ಹೋಗಿ ಹಾಜರಾದರು. ಈ ತಾಸು ಬರಕಾಯ್ದರೂ, ಮಹಾಜನದ ಧುರೀಣರು ಬರಲಿಲ್ಲ. ಅಸ್ಪೃಶ್ಯರಿಗೆ ಅನ್ನ ಹಾಕಲು ಕಾರಣವಾದ ಅಪರಾಧದ ವಿಚಾರವಾಗಲಿಲ್ಲ. ಮುಂದೆ ಮಹಾಜನ ಧುರೀಣರು ಒಬ್ಬ ಮುದುಕ ವರ್ತಕನ ಮೇಲೆ ತಮ್ಮ ಕಣ್ಣಿಟ್ಟರು. ಆತನು ಅಸ್ಪೃಶ್ಯರ ಮೆರವಣಿಗೆಯಲ್ಲಿ ಸೇರಿದ್ದನು. ಅದಕ್ಕಾಗಿ ಆತನ ಅಂಗಡಿಯೊಳಗಿಂದ ಸಾಮಾನು ಕೊಳ್ಳಬಾರದೆಂದು ಸ್ವಜಾತಿಯವರಿಗೆ ಹುಕುಮಾಗಿರುವದಂತೆ. ಮೆರವಣಿಗೆಗೆ ಮೂಲ ಕಾರಣರಾದ ಶ್ರೀ|| ಫುಲಚಂದ ಕಸ್ತೂರಚಂದ ಇತ್ಯಾದಿ ರಾಷ್ಟ್ರಸೇವಕರ ಮೇಲೆ ಇನ್ನೂ ಇಲಾಜು ಕೈಕೊಳ್ಳುವ ಧೈರ್ಯವಿಲ್ಲ. ಮೂಲ ಅಪರಾಧಿಗಳನ್ನು ಬಿಟ್ಟುಕೊಟ್ಟು, ಅವರ ಜೊತೆಗೆ ಸೇರಿದ ಬಡ ವರ್ತಕನನ್ನು ಪೀಡಿಸುವದು ಧರ್ಮವೇನು?

***

ನಿಧಿಸಂಗ್ರಹದ ಹೊಸ ಉಪಾಯ

ಫಂಡು ಒಟ್ಟುಗೂಡಿಸುವದೆಂದರೆ, ಮನೆಮನೆಗಳಿಗೆ ಹೋಗಿ ಅಥವಾ ಸಭೆಸೇರಿಸಿ ಭಿಕ್ಷಾಪಾತ್ರವನ್ನು ಮುಂದೊಡ್ಡಿ ಹಣದ ಎತ್ತುವಳಿ ಮಾಡುವದು. ಈ ಪ್ರಕಾರವು ಭಡೋಚದೊಳಗಿನ ಭೃಗುಪುರ ಋಷಿನಿವಾಸಕ್ಕೆ ಮಾನ್ಯವಿಲ್ಲ. ಭೃಗುಪುರ ಋಷಿನಿವಾಸ ಸಂಸ್ಥೆಯು ಗುರುಕುಲವು. ಶಿಷ್ಯರೂ, ಶಿಕ್ಷಕರೂ ಒಂದು ಕುಟುಂಬದಂತೆ ಅಲ್ಲಿ ವಾಸಮಾಡಿ ವಿದ್ಯಾರ್ಜನವನ್ನೂ, ಪ್ರಪಂಚದಲ್ಲಿ ಅನುಸರಿಸಬೇಕಾದ ಜೀವನ ಧೋರಣವನ್ನೂ ವಿದ್ಯಾರ್ಥಿಗಳಿಗೆ ಕಲಿಸುತ್ತಿರುವರು. ಈ ಸಂಸ್ಥೆಗೆ ಸದ್ಯಕ್ಕೆ ಹಣದ ಅಡಚಣೆಯಾಗಿದೆ. ಭಿಕ್ಷಾಟನ ಮಾಡುವದು ಚಾಲಕರಿಗೆ ಸೇರದು. ಅದರಿಂದ ಅವರು ಹರಿಕೀರ್ತನವನ್ನು ನೆರೆಹೊರೆಯ ಗ್ರಾಮಗಳಲ್ಲಿ ಮಾಡಿ, ಅದರಿಂದ ಸಂಪಾದಿಸಿದ ಸರ್ವಸ್ವವನ್ನು ಋಷಿನಿವಾಸ ಸಂಸ್ಥೆಗೆ ಅರ್ಪಿಸುವ ನಿರ್ಧಾರ ಮಾಡಿದರು. ಕಳೆದ ಅಕ್ಟೋಬರ ೫ನೇ ತಾರೀಖಿಗೆ ಭಡೋಚದಲ್ಲಿಯೇ ಒಂದು ಹರಿಕಥೆಯಾಯಿತು. ಜನರೆಲ್ಲರೂ ಹರಿಕಥೆಯಿಂದ ಪ್ರಸನ್ನಚಿತ್ತರಾದರು. ಸಂಸ್ಥೆಯ ಯೋಜನೆಯು ಪ್ರಜೆಗಳಿಗೂ, ಸಂಸ್ಥೆಯವರಿಗೂ ಹಿತಪ್ರದವೆಂದು ಹೇಳುತ್ತಾರೆ.

***

‘ ಬ್ರಿಟಿಶ ಸಾಮಗ್ರಿಯು ಸರ್ವಶ್ರೇಷ್ಠವಾದದ್ದು ’

ಬ್ರಿಟಿಶರು ಸ್ವದೇಶದೊಳಗಿನ ಕೂಲಿಯಾಳುಗಳಿಗೆ ನಿರುದ್ಯೋಗದಿಂದ ಒದಗಿಬಂದ ದೈನ್ಯಾವಸ್ಥೆಯನ್ನು ಹೋಗಲಾಡಿಸಲು ಬ್ರಿಟಿಶ ಸಾಮಗ್ರಿಗಳನ್ನೇ ಕೊಂಡುಕೊಳ್ಳಬೇಕೆಂದು ನಿರ್ಧರಿಸಿರುವರಷ್ಟೇ! ಅದನ್ನು ಪ್ರಸಾರಮಾಡಲು ನಿತ್ಯವೂ ಹೊಸ ಹೊಸ ಯುಕ್ತಿಗಳು ಪ್ರಚಾರದಲ್ಲಿ ಬರಹತ್ತಿವೆ. ಸದ್ಯಕ್ಕೊಂದು ಉಪಕ್ರಮಿಸಿದ ಯುಕ್ತಿಯನ್ನು ವಾಚಕರು ಲಕ್ಷಿಸಬೇಕು. ಕಾಗದ ಪತ್ರಗಳ ಮೇಲೆ ಟಪಾಲಿನಲ್ಲಿ ಮುದ್ರೆ ಹೊಡೆಯುವಾಗ ಊರು, ತಾರೀಖು, ಸಮಯಗಳನ್ನು ಜೋಡಿಸಿ ಹೊಡೆಯುವ ರೂಢಿಯಿದೆ. ಅದರೊಡನೆ ಈಗ “ಬ್ರಿಟಿಶ ವಸ್ತುಗಳೇ ಉತ್ತಮ ಪ್ರತಿಯವು” ಎಂಬರ್ಥದ ವಾಕ್ಯವನ್ನೊಂದು ಸೇರಿಸಿ, ಅಚ್ಚು ಹೊಡೆಯಬೇಕೆಂದು ಯೋಜನೆಯಾಗಿದೆ. ಲಂಡನದೊಳಗಿನ ೫೯ ಪೋಸ್ಟ ಆಫೀಸುಗಳು ಈ ಯೋಜನೆಯನ್ನು ಉಪಕ್ರಮಿಸಿವೆ. ಈಗ ಇಡೀ ಬ್ರಿಟಿಶ ದೇಶದಲ್ಲಿ ಈ ಯುಕ್ತಿಯು ಸಾರ್ವತ್ರಿಕವಾಗುವದು. ಟಪಾಲ ಕಾರ್ಡು, ಕವ್ಹರುಗಳ ಮೇಲೆ ಈ ಅಕ್ಷರಗಳಿರುವದರಿಂದ ಅವನ್ನು ನೋಡಿದವರಿಗೆಲ್ಲರಿಗೆ ಬ್ರಿಟಿಶ ರಾಷ್ಟ್ರದ ಸಂದೇಶ ತಿಳಿದು ಅದನ್ನು ಆಚರಿಸಲು ಅನುಕೂಲವಾಗುವದೆಂದು ಹೇಳಿಕೆ. ಪ್ರಜೆಗಳಿಗೆ ಸ್ವರಾಜ್ಯಪ್ರಾಪ್ತಿಯಾದರೆ, ರಾಜ್ಯಕರ್ತರು ಸ್ವರಾಜ್ಯದವರಿದ್ದರೆ, ಸ್ವರಾಷ್ಟ್ರೋದ್ಧಾರದ ಉಪಾಯಗಳು ಸರಕಾರದ ಆಶ್ರಯದಲ್ಲಿಯೇ ಹೇಗೆ ಸಾಗುತ್ತವೆ, ನೋಡಿಕೊಳ್ಳಿ! ಮತ್ತು ಭರತಖಂಡದೊಳಗೆ ಸ್ವದೇಶಿ ಪ್ರಸಾರಕ್ಕಾಗಿ ಲೋಕನಾಯಕರು ಮಾಡುತ್ತಿರುವ, ಆಳರಸರು ಹೂಡುತ್ತಿರುವ ಉಪಾಯಗಳನ್ನು ಪರ್ಯಾಲೋಚಿಸಿ ನೋಡಿ!!

ಗಿಬ್ಬ ಹ್ಯಾಸ್ಕೂಲು.

ಈ ಮೊದಲು ಜಾಹೀರಾದಂತೆ, ಗಿಬ್ ಹ್ಯಾಸ್ಕೂಲಿನ ಗವ್ಹರ್ನಿಂಗ ಬೋಡಿ ಹಾಗು ಕಾವಡಾ ಎಜ್ಯುಕೇಶನ ಸೊಸ್ಯಾಟಿಯ ಕೌನ್ಸಿಲಿನ ಸಭೆಗಳು ಕಳೆದ ತಾರೀಖು ೧೪ನೇಗೆ ಜರುಗಿದವು. ಗವ್ಹರ್ನಿಂಗ ಬೋಡಿಯ ಸಭೆಯು ಕೌನ್ಸಿಲಿನ ಅಧ್ಯಕ್ಷರಾದ ರಾವಬಹಾದ್ದೂರ ಪುಂಡ್ಲೀಕರಾವ ಪಂಡಿತರ ಅಧ್ಯಕ್ಷತೆಯಲ್ಲಿ ಕೂಡಿತು. ಜಮಾಖರ್ಚು ಪತ್ರಕವು ಮಂಜೂರಾಯಿತು. ಗಿಬ್ ಹ್ಯಾಸ್ಕೂಲ ಹಾಗು ಪಂಡಿತ ಪಾಠಶಾಲೆಗಳ ಸುಪರಿಂಟೆಂಡೆಂಟರಾದ ರಾ|| ರಾ|| ಎನ್ ಎಸ್ ಕಾಮತರ ಮಗಂದಿರರಾದ ರಾ|| ಜಿ ಎನ್ ಕಾಮತರವರಿಗೆ ದಿನಾ ಒಪ್ಪತ್ತು ಕೆಲಸ ಮಾಡಿದ ಬಗ್ಗೆ ತಿಂಗಳಿಗೆ ರೂಪಾಯಿ ೨೫ರಂತೆ ಕಲಬು (honorarium) ಮಂಜೂರು ಮಾಡಲಾಯಿತು. ಹೆಡ್ ಮಾಸ್ತರರಾದ ಮಿ|| ಎಮ್ ಎಚ್ ಪ್ರಭುರವರಿಗೆ ಕೌನ್ಸಿಲು ಮಂಜೂರು ಮಾಡಿದ ಸಂಬಳದ ಸ್ಕೇಲಿನಂತೆ ಈಗ ರೂಪಾಯಿ ೧೦೩ ಸಿಗುತ್ತದೆ. ಮೊದಲನೇ ಅಸಿಸ್ಟಂಟರಾದ ಮಿ|| ಜಿ ವ್ಹಿ. ಗಾವಸ್ಕರರವರಿಗೆ ರೂಪಾಯಿ ೧೦೫ ಸಿಗುತ್ತದೆ. ಅದರಿಂದ ಹೆಡ್ ಮಾಸ್ತರರಿಗೆ ೨|| ರೂಪಾಯಿ ಜಾಸ್ತಿ ಕೊಡಬೇಕಾಗಿ ಗವ್ಹರ್ನಿಂಗ ಬೋಡಿಯಲ್ಲಿ ಮಂಜೂರಾಯಿತು. ಬಳಿಕ ರಾ|| ಎನ್ ಎಸ್ ಕಾಮತರ ಅಧಿಕಾರದ (tenure of office) ಮುನ್ನು ಬೆಳೆಸುವ ವಿಚಾರ ಬಂತು. ರಾ|| ಕಾಮತರಿಗೆ ಕಳೆದ ವರುಷ ಒಂದು ವರುಷ ಮುದ್ದತ್ತು ಕೊಟ್ಟಿತ್ತು. ಆ ಮುದ್ದತ್ತು ೩೫ರ ಮಾರ್ಚ ತಿಂಗಳಿನಲ್ಲಿ ತೀರಿತು. ಅಧ್ಯಕ್ಷರಾದ ರಾವಬಹಾದ್ದೂರ ಪುಂಡ್ಲೀಕರಾಯರು ಒಂದು ಪತ್ರ ಬರೆದದ್ದರಿಂದ ಅದು ಈ ವರೆಗೆ ಉಳಕೊಂಡಿತೆಂದೂ, ಅಧಿಕಾರ ತ್ಯಾಗ ಮಾಡಲು ತಯಾರಿರುವದಾಗಿಯೂ ಹೇಳಿದರು. ಗವ್ಹರ್ನಿಂಗ ಬೋಡಿಯ ಚೆಯರಮನರಾದ ರಾ|| ಅಣ್ಣಪ್ಪ ರಾಮಚಂದ್ರ ಪೈರು ರಾ|| ಕಾಮತರ ಪ್ರಾಮಾಣಿಕ ಕಾರ್ಯವನ್ನು ಹೊಗಳಿ, ಅವರಿಗೆ ಇನ್ನೊಂದು ವರ್ಷ ಮುದ್ದತ್ತು ಕೊಟ್ಟರೆ ಶಾಲೆಗೆ ಹಿತವಾಗುವದೆಂದರು. ಮತ ಕೇಳಲಾಯಿತು. ಅಧ್ಯಕ್ಷಸ್ಥಾನದಲ್ಲಿದ್ದ ರಾವಬಹಾದ್ದೂರರು ರಾ|| ನಾರಾಯಣ ರಾಮಕೃಷ್ಣ ಪಂಡಿತ ಹಾಗು ರಾ|| ಗೋಪಾಳ ಸುಬ್ಬಯ್ಯಾ ಹ್ಯಾನಭಾಗರ ಮತ ಕೇಳಿದರು. “ಕ್ಯಾದೆಯಿದ್ದರೆ ಮುದ್ದತ್ತು ಕೊಡಲಿಕ್ಕೆ ಅಡ್ಡಿ ಇಲ್ಲ” ಎಂದು ಇಬ್ಬರೂ ನುಡಿದರು. “ಕ್ಯಾದೆಯಿದೆ, ನಿಮ್ಮ ಮತ ಹೇಳಿರಿ” ಎಂದು ರಾವಬಹಾದ್ದೂರರು ಕೇಳಿದರು. “ಕ್ಯಾದೆಯಿದ್ದರೆ ಮುದ್ದತ್ತು ಕೊಡಲಡ್ಡಿಯಿಲ್ಲ,” ಎಂದು ಪುನಃ ರಾ|| ಗೋಪಾಳ ಹ್ಯಾನಭಾಗರು ನುಡಿದರು. ಇಷ್ಟೆಲ್ಲ ಚರ್ಚೆಯಿಂದ ರಾ|| ಕಾಮತರ ಅಧಿಕಾರವಧಿಯು ಒಂದು ವರ್ಷ ಬೆಳೆಯಿತು. ೫೫ ವರ್ಷ ಮೀರಿದವರಿಗೆ (in any case) ಯಾವದೇ ಕಾರಣದಿಂದ ಹೆಚ್ಚು ಮುದ್ದತ್ತು ಕೊಡಬಾರದೆಂದು ಗವ್ಹರ್ನಿಂಗ ಬೋಡಿಯಲ್ಲಿ ಸ್ಪಷ್ಟ ನಿಯಮವಿದೆ. ರಾ|| ಎನ್. ಎಸ್. ಕಾಮತರಿಗೆ ಈಗ ೫೯ ವರುಷ ಪ್ರಾಯ.

ಗಿಬ್ ಹ್ಯಾಸ್ಕೂಲಿನೊಳಗಿನ ಶಿಕ್ಷಕರಿಗೆ ಮುಂಬಾಗ್ಯತ ಕೊಡುವ ಒಂದು ಕರಾರು ರಾವಬಹಾದ್ದೂರರವರಿಂದಲೇ ಸೂಚಿಸಲಾಯಿತು. ರಾ|| ಕಾಮತರು ವಿಸ್ತಾರಪೂರ್ವಕ ಖುಲಾಸೆ ಮಾಡಿದರು. “ಶಿಕ್ಷಕರು ಸರಿಯಾಗಿ ಬರುವದಿಲ್ಲೆಂಬ ಆಕ್ಷೇಪವು ನಿರಾಧಾರವಷ್ಟೇ. ಈ ಸಂಗತಿಯನ್ನು ಅಧ್ಯಕ್ಷರಿಗೆ ಯಾರು ಹೇಳಿದರೆಂಬುದು ನನಗೆ ಗೊತ್ತಿದೆ. ಆತನು ಸರಿಯಾಗಿ ೧೧ ಘಂಟೆಗೆ ಶಾಲೆಗೆ ಬಂದಿದ್ದನು. ಶಿಕ್ಷಕರಿಲ್ಲೆಂದು ಆತನು ನನಗೆ ಹೇಳಿದನು. ನಾನು ಆತನಿಗೆ ಕರಕೊಂಡು ಹೋದೆನು. ಆಗ ಎಲ್ಲ ವರ್ಗಗಳಲ್ಲಿ ಶಿಕ್ಷಕರಿದ್ದರು. ಇಲ್ಲಿಯ ವಾತಾವರಣದ ದೋಷದಿಂದ ಪರೀಕ್ಷೆಗಳ ಪರಿಣಾಮಗಳು ಕಡಿಮೆಯಾದ ಮಾತ್ರಕ್ಕೆ ಶಿಕ್ಷಕರು ಅಷ್ಟು ಜವಾಬುದಾರರಲ್ಲ. ಒಳ್ಳೇ ಪರಿಣಾಮವಾಗುವಾಗ ನಾವೇ ಶಿಕ್ಷಕರಿದ್ದೆವು, ಈಗಲೂ ನಾವೇ ಇದ್ದೇವೆ, ಹುಡುಗರು ಮಾತ್ರ ಬೇರೆ ವಿದ್ಯಾರ್ಥಿಗಳು ಕಲಿಯುತ್ತಿದ್ದರೆ ಪರೀಕ್ಷೆಯ ಪರಿಣಾಮವು ಹ್ಯಾಗೆ ಒಳಿತಾಗುವದು? ನಾಸಿಗೆ ಶಾಲೆಯೊಳಗಿಂದ ಹೋಗುವ ಕಾಲುಬಂದಿದೆ. ಅಂಥ ಸಮಯ ಕಠೋರ (strict supervision) ಮೇಲ್ವಿಚಾರಣೆ ಮಾಡಲಿಕ್ಕೆ ಮನ ಒಪ್ಪುವದಿಲ್ಲ.” ಇತ್ಯಾದಿ ಸಂಗತಿಗಳನ್ನು ವಿವರಿಸಿದರು. ಆದರೂ, ಕರಾರು ಮಂಜೂರಾಯಿತು. ಶಾಲೆಯ ಶಿಕ್ಷಕರು ಖಾಸಗಿ ಶಿಕ್ಷಣ ಕೊಡುವದರಿಂದ ಶಾಲೆಯೊಳಗಿನ ಶಿಕ್ಷಣದ ಗುಣ ಕೆಡುತ್ತದೆಂದು ಹೆಡ್ ಮಾಸ್ತರರು ರಿಪೋರ್ಟ ಮಾಡಿದ್ದರು. ಸರಕಾರಿ ಸರ್ಕ್ಯುಲರಿನನ್ವಯ ಶಿಕ್ಷಕರಿಗೆ ಖಾಸಗಿ ಶಿಕ್ಷಣ ಕೊಡದಂತೆ ಪ್ರತಿಬಂಧಕ ಹುಕುಮು ಹೊರಡಿಸಬೇಕಾಗಿ ಠರಾಯಿಸಿ ಗವ್ಹರ್ನಿಂಗ ಬೋಡಿಯ ಸಭೆಯು ವಿಸರ್ಜನ ಹೊಂದಿತು.

ಬಳಿಕ ಕೌನ್ಸಿಲಿನ ಸಭೆಗೂಡಿತು. ಮೊಟ್ಟಮೊದಲು ಘಟನೆಯ ಚಕ್ರ ತಿರುಗಿತು. ಮಿ|| ಬಾಳಿಗಾ ಮಾಸ್ತರರು ಲ್ಯಾಫ ಮೆಂಬರ ಯಾನೆ ಆಜೀವ ಶಿಕ್ಷಕರಾದ್ದರಿಂದ ಅವರು ನಿಯಮದಂತೆ ಕೌನ್ಸಿಲಿನ ಸಭಾಸದರಾದರು. ಶಿಕ್ಷಕ ಮೆಂಬರರಷ್ಟೇ ಬಿನ್‌ಶಿಕ್ಷಕ ಮೆಂಬರರಿರಬೇಕೆಂಬುದೊಂದು ನಿಯಮವಿದೆ. ಅಷ್ಟು ಮೆಂಬರರಿಲ್ಲದಿದ್ದರೆ, ಅದು ಕೌನ್ಸಿಲು ಕೆಲಸ ನಡೆಸುವದಿಲ್ಲ. ಅಧ್ಯಕ್ಷಸ್ಥಾನವನ್ನು ರಾವಬಹಾದ್ದೂರರೇ ವಹಿಸಿದ್ದರು. “ಬಿನ್‌ಶಿಕ್ಷಕ ಮೆಂಬರರನ್ನು ರೂಪಾಯಿ ೨೦೦ ಯೂ ಅದಕ್ಕೂ ಹೆಚ್ಚು ಕೊಟ್ಟ ಡೊನೇಶನದವರಿಂದ ಆರಿಸಬೇಕೆಂದಿದೆ. ಈಗ ಇಲೆಕ್ಶನ್ ಮಾಡಲಿಕ್ಕೆ ಸಮಯವಿಲ್ಲ. ಕಾರಣ ಒಬ್ಬ ಸಭಾಸದರನ್ನು ನಾವೇ ನೇಮಿಸಿಕೊಳ್ಳುವ (co-opt)” ಎಂದು ಕೌನ್ಸಿಲಿನಲ್ಲಿ ಠರಾವಾಯಿತು. ಬಳಿಕ ರಾ|| ಅಣ್ಣಪ್ಪೈರು ನುಡಿದದ್ದೇನಂದರೆ “ರಾ|| ಕೇಶವ ನಾರಾಯಣ ಪೈ ಇವರ ತಂದೆ ಮೃತ ನಾರಾಯಣ ಶೇಷಗಿರಿ ಪೈ ಇವರು ೧೧೧ ರೂ ಕೊಟ್ಟಿದ್ದಾರೆ. ರಾ|| ಕೇಶವ ಪೈರಿಂದ ನನ್ನ ಕಡೆ ೯೯ ರೂ ಬಂದಿದೆ. ಅಂತು ೨೧೦ ರೂ. ಗಳಾದವು. ಕಾರಣ ಅವರಿಗೆ ಮೆಂಬರರಾಗಿ ನೇಮಿಸಬೇಕಾಗಿ ಸೂಚಿಸುತ್ತೇನೆ.” ಎಂದರು. “೯೯ ರೂ. ನಿಮ್ಮ ಹತ್ತರ ಬಂದಿರುತ್ತದಲ್ಲವೋ?” ಎಂದು ರಾವಬಹಾದ್ದೂರರು ಸವಾಲು ಮಾಡಿದ್ದಕ್ಕೆ ರಾ|| ಅಣ್ಣಪ್ಪೈರು ತಡಬಡಿಸಿದ ಬಳಿಕ, ರಾ|| ಕೇಶವ ಪೈರು ಸಭಾಸದರೆಂದು ಜಾಹೀರಾಯಿತು. ರಾ|| ಕೇಶವಪೈರು ಸಭಾಸ್ಥಾನದ ಬಳಿಯಲ್ಲಿದ್ದರು. ಒಂದು ಸಭಾಸದತ್ವದ ಆಸನಾಧಿಪತಿರಾದರು. ಬಳಿಕ ೧೦೬೩ ರೂಪಾಯಿಗಳು ಹಳೇ ಶಾಲೆಯ ಕಟ್ಟಡದ ಬಗ್ಗೆ ಮಂಜೂರಾದವು. ಈ ಬಗೆ ಹೋದ ವರ್ಷ ೫೦೦ ರೂಪಾಯಿಗಳ ಅಂದಾಜಾಗಿ ಮಂಜೂರಾಗಿದ್ದವು. ಈ ದುರುಸ್ತಿಯನ್ನು ಗಿಬ್ ಹ್ಯಾಸ್ಕೂಲ ಹಾಗು ಪಂಡಿತ ಪಾಠಶಾಲೆಗಳ ಸುಪರಿಂಟೆಂಡೆಂಟರಾದ ರಾ|| ಎನ್ ಎಸ್ ಕಾಮತ ಇವರೇ ಮಾಡಿದ್ದರು. ಶಾಸ್ತ್ರೀಯ ಶಿಕ್ಷಣಕ್ಕಾಗಿ ಕೆಲವು ದುರುಸ್ತಿಯಾಗಬೇಕಾಗಿ ವಿದ್ಯಾಖಾತೆಯವರು ಸೂಚಿಸಿದ್ದರು. ಅವನ್ನೆಲ್ಲ ಹಿಂದಿನ ಪರಿಪಾಟಿಯಂತೆ ನಡಿಸಿ, ಕೆಲಸ ಮುಗಿದ ಬಳಿಕ ಬಿಲ್ಲುಗಳನ್ನು ತಂದು ಮಂಜೂರು ಮಾಡಿಕೊಳ್ಳಬೇಕಾಗಿ ಠರಾವಾಯಿತು. ಸಭೆಯು ವಿಸರ್ಜನ ಹೊಂದುವ ಪೂರ್ವದಲ್ಲಿ ರಾ||

(೧೦ನೇ ಪಾನಿನ ಮೇಲೆ ಮುಂದರಿಸಿದೆ)

ಕಾನಡಾವೃತ್ತ.

ಮಿತಿ ಕ್ರೋಧನ ಸಂ। ಕಾರ್ತೀಕ ಶು। ೩ಗೆ ಸೋಮವಾರ.

ಸಾಮ್ರಾಜ್ಯವೇನಿದು ?

ದಕ್ಷಿಣ ಆಫ್ರಿಕೆಯಲ್ಲಿ ಭಾರತೀಯರ ಮೇಲೆ ದಾಳಿ.

ನಾಟಾಲದೊಳಗಿನ ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯ ಆಜ್ಞೆಯಂತೆ, ಕಳೆದ ಅಕ್ಟೋಬರ ೧೧ನೇ ತಾರೀಖಿಗೆ ಮುಂಬಯಿ, ಮದ್ರಾಸ, ಕಲಕತ್ತಾ, ದಿಲ್ಲಿ ಇತ್ಯಾದಿ ನಗರಗಳಲ್ಲಿ ಭಾರತೀಯರು ಸಭೆಸೇರಿ, ದಕ್ಷಿಣ ಅಫ್ರಿಕೆಯಲ್ಲಿ ಯುರೋಪಿಯನ್‌ರು ಭಾರತೀಯರ ಮೇಲೆ ನಡಿಸಿರುವ ದುಷ್ಟ ದಾಳಿಯನ್ನು ಅರುಹಿ, ಬ್ರಿಟಿಶ ಸಾಮ್ರಾಜ್ಯದ ನಾಗರಿಕರೆಂದು ಖ್ಯಾತಿಹೊಂದಿದ ಭಾರತೀಯರ ದೈನ್ಯವನ್ನು ಸ್ಫುಟ ಮಾಡಿದರು. ಸಾಮ್ರಾಜ್ಯದ ಅಭಿಮಾನ ಹಿಡಿಯುವ ಅನೇಕ ವಿಚಾರಶೀಲರಿಗೆ ಸಹ ದಕ್ಷಿಣ ಅಫ್ರಿಕೆಯೊಳಗಿನ ಹೊಸ ಯೋಜನೆಯಿಂದ ಕ್ಷೋಭವುಂಟಾಗಿದೆ. ಡಾ। ತೇಜಬಹಾದ್ದೂರ ಸಪ್ರು, ನೇಕ ನಾಮದಾರ ಶ್ರೀನಿವಾಸ ಶಾಸ್ತ್ರಿ, ಶೇಟ ಲಲ್ಲೂಭಾಯಿ ಸಾಮಳದಾಸರವರಂಥವರು ಸಹ ಬ್ರಿಟಿಶ ಸಾಮ್ರಾಜ್ಯದಲ್ಲಿ ಸಮಾನ ಹಕ್ಕುಗಳು ಪ್ರಾಪ್ತವಾಗಬೇಕಾದರೆ ಭರತ ಖಂಡವೇ ಮೊಟ್ಟಮೊದಲು ಸಮಾನ ಹಕ್ಕು ಪ್ರಾಪ್ತ ಮಾಡಿಕೊಳ್ಳಬೇಕೆಂದು ಉದ್ಗರಿಸಿರುವರು. ಸಮಸ್ತ ಪಂಗಡದವರಿಗೂ ಸ್ವರಾಜ್ಯದ ಹಸಿವು ಹುಟ್ಟಿಸುವ ದಕ್ಷಿಣ ಅಫ್ರಿಕೆಯೊಳಗಿನ ಯುರೋಪಿಯನ್‌ರ ಕುಹಕವನ್ನು ವಾಚಕರು ಅರಿತುಕೊಳ್ಳುವದು ಹಿತವು.

ಹೊಸ ಕಾಯಿದೆಯ ಹೆಸರು "ಏರಿಯಾ ರಿಝರ್ವೇಶನ್ ಎಂಡ್ ಇಮಿಗ್ರೇಶನ್ ಎಂಡ್ ರಿಜಿಸ್ಟ್ರೇಶನ್ ಬಿಲ್" ಅಂದರೆ, ಪ್ರದೇಶಗಳನ್ನು ಕಾದಿಡುವದು, ದಕ್ಷಿಣ ಅಫ್ರಿಕದಲ್ಲಿ ಸೇರುವವರನ್ನು ನಿಯಂತ್ರಿಸುವದು, ಮತ್ತು ಹೆಸರುಗಳನ್ನು ದಾಖಲ ಮಾಡುವದು. ಈ ಕಾಯಿದೆಯಲ್ಲಿ ಸ್ಪಷ್ಟವಾಗಿ ಭಾರತೀಯರ ಉಲ್ಲೇಖವಿರದಿದ್ದರೂ, ಈ ಕಾಯಿದೆಯು ಭಾರತೀಯರ ವಿನಾಶಕ್ಕಾಗಿಯೇ ದಕ್ಷಿಣ ಅಫ್ರಿಕೆಯ ಸರಕಾರದವರು ಯೋಜಿಸಿರುವರು. ಡಾ। ಮಾಲನ್‌ರವರು ಈ ಕಾಯಿದೆಯನ್ನು ಸೂಚಿಸುವಾಗ ನುಡಿದದ್ದೇನಂದರೆ:- "ದಕ್ಷಿಣ ಅಫ್ರಿಕೆಯೊಳಗಿನ ಭಾರತೀಯರೆಲ್ಲರೂ ಪರಸ್ಥರು;" ಎಂಬ ಗ್ರಹಿಕೆಯಿಂದಲೇ ಈ ಕಾಯಿದೆಯು ನಿರ್ಮಾಣವಾಗಿದೆ. ಇಲ್ಲಿಯ ಪ್ರಜೆಗಳಲ್ಲಿ ಭಾರತೀಯರು ಅವಶ್ಯರಿಲ್ಲ. (Alien element) ಆದರಿಂದ ಭಾರತೀಯರ ಜನಸಂಖ್ಯೆಯನ್ನು ಬಹು ಮಟ್ಟಿಗೆ ಕುಗ್ಗಿಸಿದ ಹೊರತು, ಈ ಪ್ರಶ್ನೆಯು ಸಮಾಧಾನಕರ ನಿಕಾಲೆಯಾಗಲಾರದು." ಪ್ರದೇಶಗಳನ್ನು ಪ್ರತ್ಯೇಕಿಸಿಡುವದು ಹೊಟ್ಟೆಯ ಗೋಳಿನ ಪರಿಹಾರಕ್ಕಾಗಿ ದಕ್ಷಿಣ ಅಫ್ರಿಕೆಯಲ್ಲಿ ಸೇರುವ, ಸೇರಲಿಚ್ಛಿಸುವ ಭಾರತೀಯರಿಗೆ ತಡೆಹಾಕುವದು, ಹೆಸರು ನೋಂದಣಿಯ ನಿಯಮ ಮಾಡುವದು ಇತ್ಯಾದಿ ಉಪಾಯಾಂತರಗಳು ಭಾರತೀಯರ ಕಲ್ಯಾಣಕ್ಕಾಗಿ, ಅಭಿವೃದ್ಧಿಗಾಗಿ ಇರುವದಿಲ್ಲೆಂದು ಸಮಸ್ತ ಭೂಮಂಡಲಕ್ಕೆ ಡಾ। ಮಾಲನ್‌ರು ಜಾಹೀರು ಪಡಿಸಿರುವರು. ದಕ್ಷಿಣ ಅಫ್ರಿಕೆಯೊಳಗಿನ ಭಾರತೀಯರು ಬ್ರಿಟಿಶ ಸಾಮ್ರಾಜ್ಯದ ನಾಗರಿಕರು, ಅಂದರೆ, ಬ್ರಿಟಿಶ ಪ್ರಜಾ ಜನರು, ದಕ್ಷಿಣ ಅಫ್ರಿಕೆಯ ಪ್ರಜಾ ಜನರು ಅಂಥ ಪ್ರಜೆಗಳನ್ನು ನಾಶಪಡಿಸಲು ಡಾ। ಮಾಲನ್‌ರ ಸರಕಾರವು ಉದ್ಯುಕ್ತವಾಗಿದೆ. ಪ್ರಜಾನಾಶವನ್ನು ಸರಕಾರವು ಎಂದಾದರೂ ಮಾಡಲೆಳಸುವದೇ? ಸರಕಾರದ ನಿರ್ಮಾಣ ಪ್ರಜಾಕಲ್ಯಾಣಕ್ಕಾಗಿ, ಅಭಿವೃದ್ಧಿಗಾಗಿ ಕಲ್ಪಿಸಲ್ಪಟ್ಟಾಗ, ಹೀಗೆ ದುರ್ಬುದ್ಧಿ ಹಿಡಿದು ಭಾರತೀಯರನ್ನು ನಷ್ಟಪಡಿಸುವ ಯೋಜನೆಯಿಂದ ಎಂದಾದರೂ ಕ್ಷೇಮವಾದೀತೇ? ಪರಬಾನದಲ್ಲಿ ಸೇರಿದ ಭಾರತೀಯರ ಸಭೆಯಲ್ಲಿ ಶ್ರೀ ಜೇ. ರಾಯಪ್ಪನ್‌ರವರು ನುಡಿದಂತೆ, ಪರಮಾತ್ಮನು ಅಲ್ಲಿಯ ಡಾ। ಮಾಲನ್‌ರವರಂಥ ಮಂದಿಗಳನ್ನು ನಷ್ಟಗೊಳಿಸುವದಕ್ಕಾಗಿಯೇ ಅವರಿಗೆ ದುರ್ಬುದ್ಧಿಗೀಡುಮಾಡಿರಬಹುದೇನು?

ಅದಿರಲಿ. ಈ ಕಾಯಿದೆಯೊಳಗಿನ ಕಲಮುಗಳನ್ನು ವಿಚಾರಿಸುವ. ಭಾರತೀಯರು ದಕ್ಷಿಣ ಅಫ್ರಿಕೆಯಲ್ಲುಳಕೊಂಡು ಅಲ್ಲಲ್ಲಿ ಮನೆಮಾರು ಮಾಡಿಕೊಂಡು ಪ್ರಪಂಚ ಸಾಗಿಸುತ್ತಿರುವರು. ಅಲ್ಲಲ್ಲಿ ಸ್ಥಾವರ ಆಸ್ತಿಯನ್ನು ಸಂಪಾದಿಸಿ, ಸುಖದಿಂದ ಕಾಲಕ್ಷೇಪ ಮಾಡುತ್ತಿರುವರು. ಅವರಿಗೆಲ್ಲರಿಗೆ ಈ ಕಾಯಿದೆಯಿಂದ ಫಕ್ಕನೆ ಸ್ಥಾನಭ್ರಷ್ಟ, ಪದಭ್ರಷ್ಟ ಮಾಡಲು ಈ ಕಾಯಿದೆಯು ಸಮರ್ಥವಿದೆ. ಅಲ್ಲಿಯ ಗವರ್ನರ ಜನರಲ್‌ರು ಜಾಹೀರುಪಡಿಸಿದ ಪ್ರದೇಶದಲ್ಲಿ ಮಾತ್ರ ಭಾರತೀಯರು ಸ್ಥಾವರ ಆಸ್ತಿಯನ್ನು ಸಂಪಾದಿಸಿಕೊಳ್ಳಬಹುದು. ಅದೇ ಪ್ರದೇಶದಲ್ಲಿ ಉಳಕೊಳ್ಳಬೇಕು; ಇತರ ಪ್ರದೇಶಗಳಲ್ಲಿ ಅವರು ಉಳಕೊಳ್ಳಲಾಗದು. ಇತರ ಕಡೆಗಳಲ್ಲಿ ಇದ್ದ ಸ್ಥಾವರ ಆಸ್ತಿಯೆಲ್ಲ ಸರಕಾರಜಪ್ತ ಆಗುವದು. ಹೀಗೆ ಜಾಹೀರುಪಡಿಸಿದ ಪ್ರದೇಶದಲ್ಲಿ ಭಾರತೀಯರು ಉಳಕೊಂಡು ಅಲ್ಲಿ ಏನಾದರೂ ಸಂಸಾರ ಮಾಡಿಕೊಂಡು ಉಳಕೊಳ್ಳಲಿಕ್ಕೂ ಉಪಾಯವಿಲ್ಲ. ಯಾಕಂದರೆ, ಜಾಹೀರುಪಡಿಸಿದ ಕ್ಷೇತ್ರಗಳ ಜಾಹೀರುನಾಮೆಯನ್ನು ರದ್ದುಪಡಿಸಿ, ಹೊಸ ಕ್ಷೇತ್ರಗಳನ್ನು ಜಾಹೀರುಪಡಿಸುವ ಅಧಿಕಾರವು ಗವರ್ನರ ಜನರಲ್‌ರಿಗಿದೆ. ಅಂದರೆ, ಜಾಹೀರುನಾಮೆಯಾದ ಹಾಗೆ ಭಾರತೀಯರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಓಡುತ್ತಿರಬೇಕು. ಕೊನೆಗೆ ಈ ರಾಜ್ಯ ಬೇಡವೆಂದು ರಾಜ್ಯತ್ಯಾಗ ಮಾಡಿದರಾಯಿತು. ಇದೊಂದು ಭಾರತೀಯ ಜನಸಂಖ್ಯೆಯನ್ನು ಕುಗ್ಗಿಸುವ ಉಪಾಯವು.

ಎರಡನೇ ಉಪಾಯವು ಭಾರತೀಯರ ಆಗಮನವನ್ನು ನಿರ್ಬಂಧಿಸುವದು. ದಕ್ಷಿಣ ಅಫ್ರಿಕದೊಳಗಿನ ಭಾರತೀಯರು ೩ ವರುಷಗಳ ವರೆಗೆ, ಪರದೇಶ, ಅಂದರೆ, ಭರತ ಖಂಡ ಇತ್ಯಾದಿಗಳಲ್ಲಿ ಉಳಕೊಂಡರೆ, ಅವರಿಗೆ ದಕ್ಷಿಣ ಅಫ್ರಿಕೆಯನ್ನು ಪುನಃ ಸೇರಲು ಆತಂಕವಿದೆ. ದಕ್ಷಿಣ ಅಫ್ರಿಕೆಯಲ್ಲಿ ಈ ಮುಂಚೆ ಆತನು ಎಷ್ಟು ವರುಷ ಕಾಲಕ್ಷೇಪ ಮಾಡಿ ಎಷ್ಟು ಸಂಪಾದನೆ ಮಾಡಿದರೂ, ಅದರಿಂದೇನೂ ಫಲವಿಲ್ಲ. ೧೦೦ ಪವನು ದಂಡ ಕೊಟ್ಟಲ್ಲಿ ಆತನಿಗೆ ಒಳಸೇರಲು ಅಪ್ಪಣೆ ದೊರಕುವದು. ಇದಲ್ಲದೆ, ಅಲ್ಲಿಯ ಭಾರತೀಯರಿಗೆ ಭರತ ಖಂಡಕ್ಕೆ ಬಂದು ಮದುವೆ ಮಾಡಿಕೊಂಡು ಅಲ್ಲಿ ಹೆಂಡತಿಯನ್ನು ಒಯ್ಯಲು ಪ್ರತಿಬಂಧವಿದೆ. ಟ್ರಾನ್ಸವಾಲ ಪ್ರಾಂತದಲ್ಲಿ ಭಾರತೀಯರನ್ನು ತೀರ ಕೆಟ್ಟ ರೀತಿಯಿಂದ ನಡಿಸಿಕೊಳ್ಳುತ್ತಾರೆ. ಆ ಪ್ರಾಂತಕ್ಕೆ ಭಾರತೀಯ ನಿವಾಸಿಗಳುಳ್ಳ ಇನ್ನೂ ಎರಡು ಜಿಲ್ಹೆಗಳು ಸೇರಿಸಲ್ಪಟ್ಟಿವೆ. ಹೀಗೆಲ್ಲ ಭಾರತೀಯರನ್ನು ನಿರ್ಮೂಲಿಸುವ ಉಪಾಯಗಳ ಯೋಜನೆಯಾಗಿದೆ.

ದಕ್ಷಿಣ ಅಫ್ರಿಕೆಯೊಳಗಿನ ಯುರೋಪಿಯನ್‌ರು ಹೀಗೆ ಭಾರತೀಯರ ಮೇಲೆ ಕತ್ತಿ ಹಿರಿಯುವ ಕಾರಣವೇನು? ಭಾರತೀಯರು ವ್ಯಾಪಾರಚತುರ ವರ್ತಕರು. ಅವರ ಜೀವನವು ಸಾಮಾನ್ಯವು ಖರ್ಚು ಮಿತಿಯಿಂದ ಮಾಡಿ, ಸಂಪಾದನೆ ಮಾಡಿಕೊಂಡು ಸುಖದಿಂದ ಕಾಲಕ್ಷೇಪ ಮಾಡುತ್ತಿರುವರು. ಕೂಲಿಗೆ ಹೋದ ಭಾರತೀಯರ ಕೆಲಸವೂ ಚೊಕ್ಕವು, ಸಂಬಳವೂ ಕಡಿಮೆ. ಇದರಿಂದ ಯುರೋಪಿಯನ್‌ರಿಗೆ ಹೆಚ್ಚು ತಲಬು ಕೊಡಲು, ಹೆಚ್ಚು ಸಂಪಾದನೆ ಮಾಡಲು ಅಡ್ಡಿಯಾಗುತ್ತದೆ. ಯುರೋಪಿಯನ್‌ರಿಗೆ ಸಾಹೇಬಿ ಡೌಲು ಕಾಪಾಡಲು ಹೆಚ್ಚು ಖರ್ಚು ತಗಲುತ್ತದೆ. ಖರ್ಚಿನ ಮಾನದಿಂದ ಸಾಧಿಸುವ ಕೆಲಸವು ಕಡಿಮೆ. ಸ್ಪರ್ಧೆಯಿಂದ ಮೇಲಾಟ ಮಾಡಿ ಭಾರತೀಯರನ್ನು ನಷ್ಟಪಡಿಸಲು ಅವರಿಂದಾಗದು. ಆದರಿಂದ ದುಷ್ಟಬುದ್ಧಿ ಹಿಡಿದು, ರಾಜ್ಯಾಧಿಕಾರಬಲವನ್ನು ಭಾರತೀಯ ಪ್ರಜಾನಾಶಕ್ಕಾಗಿ ಉಪಯೋಗಿಸಲುದ್ಯುಕ್ತರಾಗಿರುವರು. ಮಹಾತ್ಮರು ಅಕ್ಟೋಬರ ೧೧ನೇ ತಾರೀಖಿನ ದಿನ ಕಳುಹಿದ ಸಂದೇಶದಲ್ಲಿ

ರತೀಯರ ಅಪರಾಧವನ್ನು ಹೀಗೆಂದು ಹೇಳುವರು:— "ಭಾರತೀಯರು ಒಳ್ಳೇ ವರ್ತಕರಾದ್ದು, ಯುರೋಪಿಯನರಲ್ಲ, ಇದೊಂದೇ ಅವರ ಅಪರಾಧವು" [Their (Indians) sole crime consists in being good traders and not being Europeans.]

...ಧಾರಿಸಿದ ಯುರೋಪಿಯನ್ನರು ದಕ್ಷಿಣ ಆಫ್ರಿಕೆಯಲ್ಲಿ ನಡಿಸಿದ ಅತ್ಯಾಚಾರದ ಕಥೆಯಿ... ಇದನ್ನು ಪರಿಹರಿಸಲು ಸಾಮ್ರಾಜ್ಯ ಸರಕಾರಕ್ಕೆ ಸಾಮರ್ಥ್ಯವಿಲ್ಲ. ಸಾಮ್ರಾಜ್ಯದೊಳಗಿನ ಪ್ರಜೆಗಳ ನಾಶವಾಗುತ್ತಿರುವಾಗ, ಅವರ ಸಂರಕ್ಷಣೆ ಮಾಡಲು ಸಾಮ್ರಾಜ್ಯ ಸರಕಾರಕ್ಕೆ ಅಸಾಧ್ಯವಾದ ಬಳಿಕ, ಸಾಮ್ರಾಜ್ಯ ಸರಕಾರದ ದೊಡ್ಡಸ್ತನ ಎಲ್ಲಿ ಉಳಿಯಿತು? ಅಧಿಕಾರವೆಲ್ಲಿ ಉಳಿಯಿತು? ಭಾರತೀಯರ ಪಕ್ಷವು ನ್ಯಾಯದ್ದೆಂದು ದಕ್ಷಿಣ ಆಫ್ರಿಕೆಯೊಳಗಿನ ವಿಚಾರಶೀಲ ಯುರೋಪಿಯನ್ನರೇ ನುಡಿಯುತ್ತಿರುವಾಗ, ನಾವೇನು ಹೇಳಬೇಕು? ಸಾಮ್ರಾಜ್ಯದಲ್ಲಿ ನ್ಯಾಯವೇ ನಿರ್ನಾಮವಾದರೆ, ಯಾರೇನು ಹೇಳುವರು? ಸೇಂಟ ಆಗಸ್ಟೈನ್ ಸಂತರು ನ್ಯಾಯದ ಅಭಾವವಾದಲ್ಲಿ ಸಾಮ್ರಾಜ್ಯಗಳೆಲ್ಲ ಹಗಲುಗಳ್ಳತನದ ಮಹಾ ದುಷ್ಕೃತ್ಯಗಳೆಂದು ಸಂಬೋಧಿಸಿರುವರು (Take away Justice and what are Empires but great acts of brigandage?) ಬ್ರಿಟಿಶ ಸಾಮ್ರಾಜ್ಯವು ಲೋಕಕಲ್ಯಾಣಕ್ಕಾಗಿ ಅವತರಿಸಿದ ಒಂದು ಬಳಗವೆಂದು ಹೇಳಿಸಿಕೊಳ್ಳುತ್ತದೆ, ಸಾಮ್ರಾಜ್ಯಕ್ಕೆ ಆಪತ್ತಿ ಬಾರದೆಂದಾದರೂ ಸಾಮ್ರಾಜ್ಯ ಸರಕಾರವು ಸ್ವಾಟ್ ಅಧಿಕಾರವನ್ನು ಉಪಯೋಗಿಸಿ, ಈ ಕಾಯಿದೆಯನ್ನು ಕಿತ್ತೊಗೆಯುವದೇ? ಭಾರತೀಯರೂ ಈ ಕಾಯಿದೆಯಿಂದ ತಕ್ಕ ಬೋಧೆಗಲಿತು, ದೇಶಬಾಂಧವರ ನಾಶವಾಗದಂತೆ ಐಕ್ಯಸತ್ಯದಿಂದ ಯುಕ್ತ ಕಂಡ ಉಪಾಯಯೋಜನೆ ಮಾಡಬೇಕು.

ಸ್ಫುಟಸೂಚನೆಗಳು.

೧ ಸ್ವರಾಜ್ಯ ಪಕ್ಷದವರಲ್ಲಿ ಈಗ ದೊಡ್ಡದೊಂದು ಗಲಭೆ. ರಾ। ಎಸ್. ಬಿ. ತಾಂಬೆಯವರು ಪ್ರಾಂತಿಕ ಸರಕಾರದ ಕಾರ್ಯಕಾರಿ ಮಂಡಳದ ಸಭಾಸದರಾಗಿ ಸರಕಾರದ ಸೇವೆಯನ್ನು ಅಂಗೀಕರಿಸಿರುವರು. ಇವರು ಮೊದಲು ಅಪ್ರಸಿದ್ಧ ಪುರುಷರು. ಸ್ವರಾಜ್ಯ ಪಕ್ಷದವರೆಂದು ಖ್ಯಾತಿ ಪಡೆದವರು. ಇವರು ಸ್ವರಾಜ್ಯ ಪಕ್ಷದ ರಾಷ್ಟ್ರಧ್ವಜವನ್ನು ಆಶ್ರಯ ಹಿಡಿದು ಮಧ್ಯಪ್ರಾಂತದ ಕಾಯಿದೆ ಕೌನ್ಸಿಲಿನಲ್ಲಿ ಸೇರಿಕೊಂಡರು. ಮಧ್ಯಪ್ರಾಂತದ ಕಾಯಿದೆ ಕೌನ್ಸಿಲಿಗೆ ಅಧ್ಯಕ್ಷರನ್ನು ಆರಿಸುವ ಅಧಿಕಾರ ದೊರಕಿದಾಗ ರಾ। ತಾಂಬೆಯವರಿಗೆ ಆ ಅಧಿಕಾರವನ್ನರ್ಪಿಸಿ ಸ್ವರಾಜ್ಯ ಪಕ್ಷವು ಪುರಸ್ಕರಿಸಿತು. ಅಧ್ಯಕ್ಷರ ನೇಮಣೂಕಿಯಾದ ಬಳಿಕ ಅವರ ಸಂಬಳವನ್ನು ಸ್ವರಾಜ್ಯ ಪಕ್ಷವು ರಾಷ್ಟ್ರಹಿತವನ್ನು ಲಕ್ಷಿಸಿ ತಗ್ಗಿಸಿತು. ಇದರಿಂದ ರಾ। ತಾಂಬೆಯವರು ಸ್ವರಾಜ್ಯ ಪಕ್ಷದಮೇಲೆ ಮುನಿದರಾಗಿ ಸುದ್ದಿ. ಕಾಯಿದೆ ಕೌನ್ಸಿಲಿನಲ್ಲಿ ಅವರ ನಡಾವಳಿಯು ಕೂಡ ಅಷ್ಟು ಸಮಾಧಾನಕರವಿದ್ದಿಲ್ಲವಂತೆ! ಅದರೆ, ರಾ॥ ತಾಂಬೆಯವರು ಸದ್ಯಕ್ಕೆ ಮಾತ್ರ ಸೇಡು ತೀರಿಸಿಕೊಂಡರೆಂದು ಹೇಳಬಹುದು. ಮಧ್ಯಪ್ರಾಂತ ಸರಕಾರದ ಕಾರ್ಯಕಾರಿ ಮಂಡಳದಲ್ಲಿ ಸದ್ಯಕ್ಕೊಂದು ಸ್ಥಳವು ಖಾಲಿಯಾಗಿತ್ತು. ಅದಕ್ಕೆ ರಾ॥ ತಾಂಬೆಯವರು ನೇಮಿಸಲ್ಪಟ್ಟಿರುವರು. ಸರಕಾರಿ ಸೇವೆಯನ್ನು ಧಿಕ್ಕರಿಸುವದು ಸ್ವರಾಜ್ಯ ಪಕ್ಷದ ಧರ್ಮವು. ಅದನ್ನು ಥಟ್ಟನೆ ಉಲ್ಲಂಘಿಸಿ, ರಾ॥ ತಾಂಬೆಯವರು ಸರಕಾರಿ ನೌಕರಿಯನ್ನು ಅಂಗೀಕರಿಸಿ ಸ್ವರಾಜ್ಯ ಪಕ್ಷಕ್ಕೆ ಕಲಂಕ ತಂದಿರುವರು. ನೌಕರಿ ಸ್ವೀಕರಿಸುವ ಪೂರ್ವದಲ್ಲಿ ಸಹಕಾರಿಗಳಿಗೆ ಹೇಳದೆ ಕೇಳದೆ ಅಧಿಕಾರಾರೂಢರಾದರೆಂದು ಸ್ವರಾಜ್ಯ ಪಕ್ಷದ ನಾಯಕರು ಹೇಳುತ್ತಾರೆ. ಸ್ವರಾಜ್ಯ ಪಕ್ಷದ ನಾಯಕರಾದ ಪಂಡಿತ ಮೋತಿಲಾಲ ನೆಹರೂ ಅವರು ಪ್ರತಿಜ್ಞೆ ಉಲ್ಲಂಘನೆ ಮಾಡುವ ಕಾರಣ ಕೇಳಿದ್ದಕ್ಕೆ, ರಾ। ತಾಂಬೆಯವರ ಉತ್ತರ ಸದ್ಯ ಕೊಡಲಿಲ್ಲವಾಗಿ ತಿಳಿದುಬರುತ್ತದೆ. ರಾ। ತಾಂಬೆಯವರ ವಚನಭಂಗದಿಂದ, ಸ್ವರಾಜ್ಯಪಕ್ಷದ ದ್ರೋಹದ ಇದೀ ಭರತ ಖಂಡದಲ್ಲಿ ಹುಟ್ಟಿದೆ [illegible] ಕೋಲಾಹಲ. ಸ್ವರಾಜ್ಯ ಪಕ್ಷವು ಅಗ್ನಿಪರೀಕ್ಷಣ ಮಾಡಿಕೊಳ್ಳುವ ಸಮಯವು ಈಗ ಪ್ರಾಪ್ತವಾಗಿದೆ. ಪಂಡಿತ ಮೋತಿಲಾಲರವರು ಇದೇ ಬರುವ ನವಂಬರ ೧ನೇ ರವಿವಾರಕ್ಕೆ ನಾಗಪುರದಲ್ಲಿ ಅಖಿಲ ಭಾರತೀಯ ಸ್ವರಾಜ್ಯ ಪಕ್ಷದ ಸಭೆ ನೆರಿಸಿ, ಈ ಕುರಿತು ಆಲೋಚನೆಯಾಗುವದಿದೆ.

೨. ಮೋಸಲ ಗಡಿಬಿಡಿಯು ಇನ್ನೂ ಶಾಂತವಾಗಿದೆ. ಮೋಸಲ ಪ್ರದೇಶವು ತುರ್ಕಸ್ಥಾನಕ್ಕೆ ಒಪ್ಪಿಸ್ಬೇಕೆಂಬ ಮಾತು ನಿರ್ಣಯವಾಯ್ತು. ಬ್ರಿಟಿಶ ರಾಷ್ಟ್ರದಲ್ಲಿಯ ಅಧಿಕಾರಿಗಳು ಮೋಸಲ ದೇಶವನ್ನು ತುರ್ಕಸ್ಥಾನಕ್ಕೆ ಒಪ್ಪಿಸಿ, ದೇಶಕ್ಕೆ ಶಾಂತತಾಪೇಕ್ಷೆಯ ಪ್ರಸಾದ ಕೊಡಲೆಂದು "ಡೇಲಿ ಮೇಲ" ಪತ್ರಿಕಾಕರ್ತರು ಬ್ರಿಟಿಶ ಪ್ರತಿನಿಧಿಗಳಾದ ಕರ್ನಲ ಅಮೇರಿಯವರೊಡನೆ ಪ್ರಾರ್ಥಿಸಿಕೊಳ್ಳುತ್ತಾರೆ. ಆದರೂ ಮೋಸಲದೊಳಗಿನ ಎಣ್ಣೆಯ ಗಣಿಗಳ ಮೇಲಿನ ಮೋಹವು ಇನ್ನೂ ಬಿಡದ. ಮೋಸಲ ಪ್ರಜೆಗಳ ಹಿತರಕ್ಷಣೆಯ ಜವಾಬದಾರಿಯು ಬ್ರಿಟಿಶರ ಮೇಲಿರುವದೆಂದು ಕರ್ನಲ ಅಮೇರಿಯವರು ಪ್ರತಿಪಾದಿಸುತ್ತಿದ್ದಾರೆ. ಬ್ರಿಟಿಶ ಸಾಮ್ರಾಜ್ಯಕಾರರ ಪ್ರತಿಷ್ಠೆಯ ಸ್ಥಾಪನೆಗಾಗಿ ಅವರು ಏಕತ್ರ ಮೋಸಲ ಪ್ರದೇಶವನ್ನು ಬಿಡುಗಡೆ ಮಾಡಲೊಲ್ಲರು. ಬ್ರಿಟಿಶ ಸಾಮ್ರಾಜ್ಯಕಾರರು ಪರದ್ರವ್ಯಾಪಹಾರದ ದುರಾಲೋಚನೆಯನ್ನು ತ್ಯಜಿಸಿದ ಹೊರತು, "ಭಗವಂತನೇ, ಶಾಂತತೆಯ ಸಾಮ್ರಾಜ್ಯವನ್ನು ನಮಗೆ ಕಣ್ಣಾರೆ ಕಾಣಿಸು" ಎಂಬ 'ಡೇಲಿ ಮೇಲ' ಪತ್ರಿಕೆಯವರ ಉದ್ಗಾರವು ನೆರವೇರುವ ಲಕ್ಷಣಗಳಿಲ್ಲ.

೩ ಈ ವರುಷದ ದಸರೆಯ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ಗೋರಕ್ಷಣೆಯ ಠರಾವೊಂದು ಪ್ರಚಂಡ ಬಹುಮತದಿಂದ ಮಂಜೂರಾಯಿತೆಂದು ತಿಳಿಸಲು ಅತ್ಯಂತ ಸಂತೋಷವಾಗುತ್ತದೆ. ಗೋವಿನ ಮಹಾತ್ಮ್ಯವನ್ನೂ ಗೋಧನಪ್ರತಿಪಾಲನದ ಕರ್ತವ್ಯವನ್ನೂ ಇಂದಿಗೆ ಯಾರಿಗೂ ಹೇಳಬೇಕಾಗಿಲ್ಲ. ಗೋವಿನ ದೈನ್ಯದಿಂದಲೇ ಬೇಸಾಯ ಪ್ರಧಾನವಾದ ನಮ್ಮ ಭರತಭೂಮಿಯಲ್ಲಿ ದೈನ್ಯವು ಮನೆಮಾಡಿಕೊಂಡಿದೆ. ಮೈಸೂರಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಚಂಡ ಬಹುಮತದಿಂದ ಈ ತೀರ್ಮಾನವು ಅಂಗೀಕೃತವಾದದ್ದು ಅಭಿನಂದನೀಯವು. ಮಹಾರಾಜ ಸರಕಾರದವರು ಈ ಠರಾವನ್ನು ಮನಃಪೂರ್ವಕವಾಗಿ ಅನುಷ್ಠಾನದಲ್ಲಿ ತಂದು "ಗೋಬ್ರಾಹ್ಮಣಪ್ರತಿಪಾಲಕ" ವೆಂಬ ಬಿರುದನ್ನು ಸಾರ್ಥಕಗೊಳಿಸಬೇಕಾಗಿಯೂ, ಕಾಮಧೇನುರೂಪಿಯಾದ ಗೋಮಾತೆಯ ಆಶೀರ್ವಾದ ಪಡೆಯಬೇಕಾಗಿಯೂ ವಿಜ್ಞಾಪಿಸುವೆವು.

೪. ಧಾರವಾಡದ ಶ್ರೀ॥ ಆಲೂರ ವೆಂಕಟರಾಯರು ನಡಿಸುತ್ತಿರುವ "ಜಯ ಕರ್ನಾಟಕ" ಮಾಸಪತ್ರಿಕೆಯ ಪರಿಚಯವು ನಮ್ಮ ಅನೇಕ ವಾಚಕರಿಗಿರುವದು. ಮೂರು ವರುಷಗಳ ವರೆಗೆ ಪತ್ರಿಕೆಯು ಕರ್ನಾಟಕ ವಾಙ್ಮಯ ಸೇವೆಯನ್ನು ಭಕ್ತಿಪೂರ್ವಕವಾಗಿ ನಡಿಸಿ ಹೆಸರಾಗಿದೆ. "ಜಯಕರ್ನಾಟಕದ ಸೇವೆಯು ಮಾಸದಿಂದ ಅದಕ್ಕೆ ಸಿಕ್ಕಿದ ಲೋಕಾಶ್ರಯವು ಹೇಳತಕ್ಕಂಥಾದ್ದಲ್ಲ. ಇದು ನಿಜವಾಗಿ ಶೋಚನೀಯವು; ಓದುಬರಹ ಬಲ್ಲಾದ ಕರ್ನಾಟಕಸ್ಥರಿಗೆ ಲಾಂಛನಾಸ್ಪದವು. ಚಾಲಕರು ಈ ಮೂರು ವರುಷ ಕಷ್ಟದಿಂದ 'ಜಯ ಕರ್ನಾಟಕ' ವನ್ನು ಜೋಪಾನ ಮಾಡಿರುವರು. ದೇಶಾಭಿಮಾನಿ, ಕನ್ನಡ ಭಾಷಾಭಿಮಾನಿ ಕರ್ನಾಟಕಸ್ಥರು ಶ್ರೀ॥ ಆಲೂರ ವೆಂಕಟರಾಯರು ಕೈಕೊಂಡ ಸಾಹಿತ್ಯಸೇವೆಯನ್ನೂ, ಬರುಗಿಸಿದ ಕಾರ್ಯವನ್ನೂ ನೆನಿಸಿ, ಆಶ್ರಯವನ್ನೀಯಬೇಕಾಗಿ ವಿನಂತಿ. ಇದೇ ಬರುವ ಗೌರೀಹುಣ್ಣಿವೆಯಿಂದ ನಾಲ್ಕನೇ ವರುಷವು ಪ್ರಾರಂಭವಾಗುತ್ತಿರುವದರಿಂದ ವಾಚಕರು ತ್ವರೆಮಾಡಬೇಕಾಗಿ ಪ್ರಾರ್ಥನೆ.

ಸ್ಥಾನಿಕ ವೃತ್ತಾಂತ.

ಕುಂದಗೋಳ— ಮಳೆ ಹಿಂಗಾಯಿತು. ಒಕ್ಕಲಿಗರು ಪೈರು ಕೊಯ್ಯಲಿಕ್ಕೆ ತೊಡಗಿರುವರು. ಹಿಂದೆ ಕೊಯ್ದು ಹಾಕಿದ ಮುಕ್ಕಿನಗೈರೆ ಪೈರು ಮಳೆಯಲ್ಲಿ ತೊಯ್ದು ಒಕ್ಕಲಿಗರ ಗೋಳು. ಚಳಿ ಬೀಳಹತ್ತಿದೆ.

ಹಿರೇಗುತ್ತಿಯಲ್ಲಿ ಸದ್ಯಕ್ಕೆ ಒಂದು ಕಳುವಾಯಿತು. ಆ ಕಳುವಿನ ಪತ್ತೆ ಹಚ್ಚುತ್ತಿರುವಾಗ ಕಾಗಾಲ ಗ್ರಾಮದಲ್ಲಿ ಮೂರೂರ ಕಳುವಿನ ಸುಳುವು ಹತ್ತಿರುವದಂತೆ! ಆರೋಪಿತರೊಬ್ಬನು ಕೆಲ ಸಂಭಾವಿತ ಮಂದಿಗಳು ಮೂರೂರ ಕಳುವಿನಲ್ಲಿ ಪ್ರವೇಶಗೈದಿರುವರಾಗಿ ಹೇಳಿದನಂತೆ

ಕಳೆದ ೧೩ನೇ ಮಂಗಳವಾರಕ್ಕೆ ಇಲ್ಲಿಯ ಮ್ಯು. ಸಿಪಲ ಕಚೇರಿಯಲ್ಲಿ ಸಭೆ ನೆರೆದಿತು. ಸಭೆಗೆ ಎಲ್ಲ ಸಭಾಸದರು ಹಾಜರಿದ್ದರು. ಅಂದಿನ ಸಭೆಗೆ ರಾ। ಜೆ. ಪ್ರಿ. ಗಾವಸ್ಕರರು ಸಭಾಪತಿಗಳಾಗಬೇಕಾಗಿ ಒಂದು ಸೂಚನೆ. ರಾ। ಸೀತಾರಾಮ ಭಾಗವತರು ಆಸನವನ್ನು ಕೈಕೊಳ್ಳಬೇಕಾಗಿ ಉಪಸೂಚನೆ. ಸೂಚನೆ-ಉಪಸೂಚನೆಗಳ ಮೇಲೆ ಮಾಮಲೇದಾರರ ಹೊರತು ಎಲ್ಲರೂ ಮತಕೊಟ್ಟರು. ಇತ್ತಿಚ್ಚಿಗೂ ಸರಿಸಮಾನ ಮತಗಳಾದವು. ಮಾಮಲೇದಾರರ ಮತಕೇಳಲು, ಮಾಮಲೇದಾರರು ಯಾವದೇ ಬದಿಗೆ ಮತಕೊಟ್ಟರೂ ತಮ್ಮ ಮೇಲೆ ಪಕ್ಷಾಭಿಮಾನದ ಆರೋಪ ಬರುವದೆಂಬರ್ಥದ ನುಡಿಗಳನ್ನಾಡಿ ತಾವು ಚೀಟಿ ಹಾಕಿ ಮತ ಕೊಡುತ್ತೇವೆಂದರು; ಮತ್ತು ಪೆಟಿಗೆಯೊಳಗಿಂದ ಒಂದು [illegible] ತೆಗೆದು ಚೀಟಿಗಳನ್ನು ಹಾಕಿ

ದರು. ಒಂದು ಚೀಟಿ ಸೇ[illegible] ಮೇಲೆ, ಮತ್ತೊಂದು ಚೀಟಿ ಕೆಳಗೆ ಬಿದ್ದವು. ಮೇಜಿನ ಮೇಲೆ ಬಿದ್ದ ಚೀಟಿಯನ್ನು ತೆಗೆದು ರಾ| ಗಾವಸ್ಕರರಿಗೆ ಮತ ಕೊಟ್ಟರು. ರಾ| ಗಾವಸ್ಕರರು ಸಭಾಪತಿಸ್ಥಾನಾಪನ್ನರಾದರ. ಸಭಾಪತಿಗಳು ಎಷ್ಟು ನಿಂತುಕೊಂಡು ರಾ| ಅಣ್ಣಪ್ಪಾ ರಾಮಚಂದ್ರ ಪೈರು ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಬೇಕಾಗಿ ಠರಾವು ತಂದರು. ಅಧ್ಯಕ್ಷರ ನೇಮಣೂಕಿಯು ವಿವಾದಾಸ್ಪದವಿದ್ದು ಅದನ್ನು ಅಧ್ಯಕ್ಷರೇ ಸೂಚಿಸುವದು ಅಕ್ಷೇಪಾರ್ಹವೆಂದು ರಾ| ಶ್ರೀಪಾದರಾವ ಕಲ್ಯಾಣಪುರಕರರು ನುಡಿದರು. ರಾ| ಕೇಶವ ಪೈರು ರಾ| ಕಲ್ಯಾಣಪುರಕರರಿಗೆ ಕಾಯಿದೆ ತೋರಿಸಕೇಳಿದರು. ಸಭಾಪತಿಗಳ ಉತ್ತರ ಈ [illegible] ತಮ್ಮ ತಮ್ಮೊಳಗೆ ಸ್ಪರ್ಧೆ [illegible] ಅಪ್ರಸ್ತವೆಂದು ರಾ| ಕಲ್ಯಾಣಪುರಕರರು ಉದ್ಗರಿಸಿದರು. ರಾ| ಕಲ್ಯಾಣಪುರಕರರ ಆಕ್ಷೇಪವನ್ನು ಕಿತ್ತೊಗೆದು ತಮ್ಮ ಠರಾವನ್ನು ಅಧ್ಯಕ್ಷರು ಸಭಿಕರ ಮುಂದಿಟ್ಟರು. [illegible] ರಾ| ಕಲ್ಯಾಣಪುರಕರರ ಆಕ್ಷೇಪವನ್ನು ಮಾನ್ಯ ಲೀಡರು ಸಹಸಮರ್ಥಿಸಿದರು. ರಾ| ಶ್ರೀಪಾದರಾಯರು ಅಧ್ಯಕ್ಷರಾಗಬೇಕಾಗಿ ಉಪಸೂಚನೆ ಒಂದ ಕೆಲ ಹೊತ್ತಿನಲ್ಲಿ ಸಭಾಸದರು ತಮ್ಮ ಸೂಚನೆಯನ್ನು ಹಿಂದಕ್ಕೆ ತೆಗೆದುಕೊಂಡರು. ಬಳಿಕ ರಾ| ಅಣ್ಣಪ್ಪೈರು ಅಧ್ಯಕ್ಷರಾಗಬೇಕಾಗಿಸೂಚನೆಯು ಮೆಂಬರರಿಂದಲೇ ಸೂಚಿಸಲಾಯಿತು. ರಾ| ಅಣ್ಣಪ್ಪೈ, ರಾ| ಕಲ್ಯಾಣಪುರಕರ ಹಾಗು ಮಾಮಲೇದಾರರು ತಟಸ್ಥರಿಂತಿರು. ರಾ| ಶ್ರೀಪಾದರಾವ ಕಲ್ಯಾಣಪುರಕರರಿಗೆ ೬ ಮತ, ರಾ| ಅಣ್ಣಪ್ಪೈರಿಗೆ ೮ ಮತ, ಹೀಗೆ ಮೆಂಬರರ ಮತವಿಭಾಗಣೆಯಾಯಿತು. ಬಳಿಕ ಸಭಾಪತಿಗಳು ತಮ್ಮ ಮತ ಹಾಗು ಸಭಾಪತಿತ್ವದ ಮತ ಹೀಗೆ ಎರಡೂ ಮತಗಳನ್ನು ರಾ| ಅಣ್ಣಪ್ಪೈರಿಗೆ ಕೊಟ್ಟು ರಾ| ಅಣ್ಣಪ್ಪೈರು ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದರೆಂದು ಜಾಹೀರಪಡಿಸಿದರು. ಪ್ರೀತಿಯಿಂದ ತಮ್ಮನ್ನು ಅಧ್ಯಕ್ಷರಾಗಿ ಆರಿಸಿದ ಬಗ್ಗೆ ರಾ| ಅಣ್ಣಪ್ಪೈರು ಆನಂದ ವ್ಯಕ್ತಪಡಿಸಿ, ಸಭಿಕರೆಲ್ಲರೂ ಇಂದಿನಂತೆ ಸಹಕಾರ್ಯದಿಂದ ದುಡಿದು, ತಮಗೆ ನೆರವಾಗಬೇಕೆಂದರು. ಇಲೆಕ್ಷನದೊಳಗಿನ ಸ್ಪರ್ಧೆ-ಮತ್ಸರ ಇತ್ಯಾದಿ ಅನಿಷ್ಟ ಭಾವನೆಗಳಿಂದ ಸಹಜವಾಗಿ ಉಂಟಾದ ವ್ಯಿತ್ಯಾಸಗಳನ್ನೆಲ್ಲ ಸಭಾಸದರು ಪರಸ್ಪರ ಮರೆತು, ಮ್ಯುನಿಸಿಪಾಲಿಟಿಯ ಕಾರಭಾರವನ್ನು ಪ್ರಜಾನುರಂಜನವಾಗುವಂತೆ ನಡೆಸಲುದ್ಯುಕ್ತರಾಗಲಿ. ಈಹೊತ್ತು ಇತರ ಕಾರ್ಯನಿರ್ವಾಹಕ ಮಂಡಳಗಳ ನೇಮಣೂಕಿಯಾಗುವದಿದೆ.

ದೀಪಾವಳಿ ಮಹೋತ್ಸವದ ಪ್ರೀತ್ಯರ್ಥ ಶ್ರೀ ವೆಂಕಟರಮಣ ಹಾಗು ಶ್ರೀಶಾಂತೇರಿ ಕಾಮಾಕ್ಷಿ ದೇವಾಲಯಗಳಲ್ಲಿ ಹರಿಕೀರ್ತನೆಗಳು ಜರುಗಿದವು.

ಸಾಭಾರ ಸ್ವೀಕಾರ.

ಜಯ ಕರ್ನಾಟಕ— ಶಿಗ್ಗಿ ಹಳ್ಳದವರೆಯ ಸಂಚಿಕೆ ಸಂಪಾದಕ ಶ್ರೀ| ಆಲೂರ ವೆಂಕಟರಾಯರು ಧಾರವಾಡ, ವಾ. ವ. ರೂ. ೫-೮-೦.

ಕಿಲೋರ್ಸ್ಕರ ವಾರ್ತೆ— ಅಶ್ವಿನ ಮಾಸದ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ – ಶ್ರೀ|| ಲ. ಕೃ. ಬಾಗಲ ವಾಙ್ಮಯ ವಿಶಾರದ. ಕಿರ್ಲೋಸ್ಕರವಾಡಿ, ಸಾತಾರಾ. ವಾರ್ಷಿಕ ವರ್ಗಣಿ ರೂಪಾಯಿ ೧—೪—೦.

ಚಂದಾದಾರರಿಗೆ ವಿನಂತಿ

ಹೊಸ ವರ್ಷದ ೩ನೇ ಸಂಚಿಕೆಯಿದು. ವಾಚಕರೆಲ್ಲರೂ ತಮ್ಮ ತಮ್ಮ ಚಂದಾ ಹಣವನ್ನು ಮುಂಗಡವಾಗಿ ಮನಿಆರ್ಡರಿನಿಂದ ಕಳಿಸಿದರೆ ಬಹಳ ಉಪಕಾರವಾದೀತು. ಮುಂದಿನ ಸಂಚಿಕೆಯಿಂದ ವ್ಹಿ. ಪಿ. ಮಾಡಿ ಕಳುಹಿಸುವ ಆಲೋಚನೆಯಿದೆ. ಕಾರಣ, ಚಂದಾದಾರರು ತ್ವರೆ ಮಾಡಬೇಕು. ವ್ಹಿ. ಪಿ. ಮಾಡುವದರಿಂದ ವ್ಯರ್ಥಾ ೬ ಆಣೆ ಹೆಚ್ಚು ಬೀಳುತ್ತದೆ. ಇತಿ ಮೆನೇಜರ.

ಶಿರ್ಸಿ— ಪ್ರಾಥಮಿಕ ಶಿಕ್ಷಕ ಸಂಘದ [illegible] ಶ್ರೀ ಮಾರಿಗುಡಿಯಲ್ಲಿ [illegible] ಬುಧವಾರ [illegible] ಕೌನ್ಸಿಲಿನ ಪ್ರತಿನಿಧಿಗಳಾದ ಶ್ರೀ| [illegible] ಅಧ್ಯಕ್ಷತ್ವದಲ್ಲಿ [illegible]. ಸಭೆಗೆ [illegible] ಜಿಲ್ಲೆಯೊಳಗಿನ [illegible] ಶಿಕ್ಷಕ ಪ್ರತಿನಿಧಿಗಳು [illegible] ಸ್ವಾಗತದ ಪದ್ಯ [illegible] ಅಧ್ಯಕ್ಷರಾದ ಶ್ರೀ [illegible] ಸಭಿಕರ ಸ್ವಾಗತ ಮಾಡಿದರು. ಸ್ವಾಗತ [illegible] ಭಾಷಣದಲ್ಲಿ [illegible] ಶಿಕ್ಷಕರ [illegible] ಅವರಿಗೆ [illegible] ವಿವರಣ್ಣೆ ವಿವರಿಸಿದರು. [illegible] ಸಂಘಟನೆಯಿಂದ [illegible] ಕಲಬಿನ [illegible] ಶಿಕ್ಷಕರ [illegible] ಶಿಕ್ಷಕರ [illegible] ಅನ್ಯಾಯವನ್ನು ಸ್ಪಷ್ಟ ಮಾಡಿದರು. [illegible] ಹೇಳಿ, [illegible] ಖಾದಿಯ ಮಹತ್ವವನ್ನು [illegible], ಅದನ್ನು ಅವಲಕ್ಷಿಸಿ ಶಿಕ್ಷಕರು ದುಡಿಯಬೇಕೆಂದೂ ಬೋಧಿಸಿ, ಸಭಿಕರೆಲ್ಲರೂ ತಮ್ಮ ನಿಮಂತ್ರಣಕ್ಕೆ ಮನ್ನಣೆಯಿತ್ತು ಅನುಗ್ರಹಿಸಿದ ಬಗ್ಗೆ ಉಪಕಾರ ಮನ್ನಿಸಿ ಸ್ವಸ್ಥಾನವನ್ನು [illegible]. ಬಳಿಕ, ರಾ| [illegible] ಶ್ರೀ ಮಂಜುನಾಥ [illegible] ಅಧ್ಯಕ್ಷಸ್ಥಾನದಲ್ಲಿ ನಿಯೋಜಿಸಲಾಯಿತು. ಅಧ್ಯಕ್ಷರ [illegible] ವ್ಯಾಖ್ಯಾನಿಕ ಭಾಷಣದಲ್ಲಿ ಶಿಕ್ಷಕರ [illegible] ವಿವರಿಸಿದರು. [illegible] ಬಳಿಕ [illegible] ವಾಡಿಯ ಮಹತ್ವ, ಖಾದಿಯ ಪ್ರಸಾರ, ಸಹಕಾರಿ ಸಂಘಗಳ ಸ್ಥಾಪನೆ, ವಾಚನಾಲಯಗಳ ಸ್ಥಾಪನೆ, ಶಾಲೋಪಯೋಗಿ ಉಪಕರಣಗಳ ಸಂಗ್ರಹ ಪುಸ್ತಿಕೆ, ಇತರ ಭಾಷೆಗಳಲ್ಲಿನ ಶಾಸ್ತ್ರೀಯ ಗ್ರಂಥಗಳ ಭಾಷಾಂತರ ಇತ್ಯಾದಿ ಠರಾವುಗಳು ಮಂಜೂರಾದವು. ಖಾದಿ ಪ್ರಸಾರ ಕಾರ್ಯಕ್ಕಾಗಿ ಅಧಿವೇಶನದಲ್ಲಿ ಮಂಜೂರಾದ ಠರಾವುಗಳ ವಿಷಯ ಕೆಲ ಪ್ರತಿನಿಧಿಗಳು ವಿರೋಧ ಬುದ್ಧಿಯನ್ನು ತಳೆದನಂತೆ. ಅಧ್ಯಕ್ಷರಾದ ಶ್ರೀ| ಕರ್ಕಿಯವರು ಸಮಾರೋಪದ ಭಾಷಣ ಮಾಡುವಾಗ ಅಂಜುಬುರುಕ ಶಿಕ್ಷಕರ ಸಮಾಚಾರ ಕೊಂಡರು "ಖಾದಿಯ ಪ್ರಸಾರ ಕಾರ್ಯಕ್ಕಾಗಿ ಶಿಕ್ಷಕರ್‍ಯಾರೂ ಅಂಜುವ ಕಾರಣವಿಲ್ಲ. ಖಾದಿಯನ್ನು ಧರಿಸಲು ಸರಕಾರದ ಪ್ರತಿಬಂಧವೇನಿಲ್ಲ. ಈ ಬಗ್ಗೆ ಪ್ರಾಂತಿಕ ಸರಕಾರದಿಂದ ನಾನು ಖುಲಾಸೆಯನ್ನು ಸಹ ಪಡೆದಿರುವೆನು. ಕಾಯಿದೆ ಕೌನ್ಸಿಲಿನಲ್ಲಿ ನಾವು ಖಾದಿ ಧರಿಸಿ ಹೋಗುತ್ತೇವೆ. ಅಷ್ಟೇಕೆ? ವರಿಷ್ಠ ಕಾಯಿದೆ ಕೌನ್ಸಿಲಿನ ಕಡೆಗೆ ನೋಡಿರಿ. ಅಧ್ಯಕ್ಷರು ಶ್ರೀ| ವಿಠ್ಠಲಭಾಯಿ ಪಟೇಲರು, ಅವರು ಖಾದಿ ಧರಿಸುತ್ತಾರೆ. ಅಂಥ ಬಳಿಕ, ನಮ್ಮ ಅರಸರೂ ಕೂಡ ಖಾದಿ ಧರಿಸಿದ ಅಧ್ಯಕ್ಷರ ಸ್ವೀಕಾರ ಮಾಡುತ್ತಿರುವಾಗ, ಖಾದಿಯು ರಾಜಮಾನ್ಯವಾದಾಗ, ನೀವು ಎಂದೆಂದಿಗೂ ಹೆದರಬಾರದು. ಆದರಿಂದ ಯಾರಿಗೂ ಆಪಾಯವಿಲ್ಲ. ಆರ್ಥಿಕ ಉನ್ನತಿಯ ಸಾಧನವದು. ಅದನ್ನು ಪ್ರೋತ್ಸಾಹಿಸಲು ಶಿಕ್ಷಕರೆಲ್ಲರೂ ಸಮಸ್ತ ಉಪಾಯಗಳನ್ನು ಯೋಜಿಸಲು ಕರ್ತವ್ಯಬದ್ಧರಿರುವರು. ನಿಮ್ಮ ಸಂಬಳದ ವಿಷಯ ನಾನು ಕೌನ್ಸಿಲಿನಲ್ಲ ಶಕ್ತಿಮೀರಿ ದುಡಿಯುವೆನು. ಇತರ ಕೌನ್ಸಿಲು ಪ್ರತಿನಿಧಿಗಳೂ ನಿಮಗೆ ಅನುಕೂಲರಾಗಿಯೇ ಇರುವರು. ಆದರೆ, ನಮ್ಮ ಉಪಾಯ ಸಾಗದು. ಕಾಯಿದೆ ಕೌನ್ಸಿಲುಗಳಲ್ಲಿ ಕಷ್ಟದಿಂದ ನಿಮ್ಮ ಪಗಾರ ವಾಢಿಯು ಮಂಜೂರಾಯಿತೆಂದು ಗ್ರಹಿಸಿದರೂ, ಆದರಂತೆ ನಿಮ್ಮ ಖಾಯಿಶ ಹೆಚ್ಚಿನ ಕಲಬು ಸುಂದಿಸ ಬೀಳುವದೆಂದು ನಾನು ಹೇಳಲಾರೆ. ಸರಕಾರದ ಮರ್ಜಿಯಾದ ಹೊರತು ನಮ್ಮ ಉಪಾಯ ನಡೆಯದು" ಇತ್ಯಾದಿ ಉಪನ್ಯಾಸ ಮಾಡಿ, ಶಿಕ್ಷಕ ಪ್ರತಿನಿಧಿಗಳಿಗೆ ತಮ್ಮ ಪವಿತ್ರ ಕಾರ್ಯವನ್ನು ಸಾವಧಾನ ಚಿತ್ತದಿಂದ ಸಾಗಿಸಲುದ್ಯುಕ್ತರಾಗಿರೆಂದು ಬೋಧಿಸಿ, ಸಭಾಕಾರ್ಯವನ್ನು ಪರಿಸಮಾಪ್ತಿಯಗೊಳಿಸಿದರು. ಬಳಿಕ, ರಾಷ್ಟ್ರಗೀತ ಇತ್ಯಾದಿಗಳು ನಡೆದು, ಪ್ರಾಥಮಿಕ ಶಿಕ್ಷಕರ ಪ್ರಥಮ ಅಧಿವೇಶನವು ಸಾಂಗವಾಗಿ ನೆರವೇರಿತು.

ಅಗೇರ— ತಾರೀಖು ೩-೧೦-೧೯೩೫ನೇ ದಿವಸ ನಮ್ಮ ಊರಲ್ಲ ಸೇತಕಿ ಖಾತೆಯ ಡಾಯರೆಕ್ಟರರಾದ ಡಾ| ಮನ ಸಾಹೇಬರವರ ಆಗಮನವಾಗಿತ್ತು. ಮೆಹರ್ಬಾನರವರ ಸ್ವಾಗತಗೋಸುಗ ಇಲ್ಲಿಯ ಕನ್ನಡ ಶಾಲೆಯು ಅತಾತೋರಣಗಳಿಂದ ಅಲಂಕರಿಸಲ್ಪಟ್ಟಿತ್ತು. ಊರೊಳಗಿನ ರೈತಜನರೂ, ಸೊಸೈಟಿಯ ಸಭಾಸದರೂ, ಶಾಲೆಯ ಮಾಸ್ತರರೂ ಊರೊಳಗಿನ ವೃದ್ಧ ಜನರೂ ಮೊದಲಾದ ಸುಮಾರು ೫೦ ಜನರು ಕೂಡಿದ್ದರು. ಸಾಹೇಬರ ಸ್ವಾರಿಯು ಬಂದಕೂಡಲೆ, ಇಲ್ಲಿಯ ಕೆಲವು ಹೊಲಗಳನ್ನು ನೋಡಲು ನೋಡಿ ನಂತರ ಸ್ವಾಗತ ಸ್ಥಾನವನ್ನು ಪ್ರವೇಶಿಸಿದರು. ಆಗ ಬಾಲಕರ ಸ್ವಾಗತ ಪದಗಳು ಪ್ರಾರಂಭವಾದವು. ನಂತರ ಇಲ್ಲಿಯ ಶಾಲೆಯ ಹೆ| ಮಾ| ರಾವ ರಾ| ರಾ| ವಾಘ ಇವರು ಸ್ವಾಗತಪರ ನಾಲ್ಕು ಮಾತುಗಳನ್ನು ಹೇಳಿ, ಕೂಡಿದ ಯಾವತ್ತು ಜನರ ತರ್ಫೆನಿಂದ ಒಂದು ಮಾನಪತ್ರವನ್ನು ಮಲ್ಹಾರಿಯಲ್ಲಿ ಓದಿ ಸಾಹೇಬರಿಗೆ ಅರ್ಪಿಸಿದರು. ಮಾನಪತ್ರದಲ್ಲಿ ಶೇತಕಿ ಖಾತೆಯವರಿಂದ ಸಿಕ್ಕ ಮಾಹಿತಿಯ ಮೇಲಿಂದ ನಾವು ಇಲ್ಲಿ ಮಾಡಿದ ಸುಧಾರಣೆಗಳು, ಇಲ್ಲಿ ನಮಗೆ ಜಂಗಲ ಖಾತೆಯವರಿಂದ ಗೊಬ್ಬರದ ವಿಷಯಕ್ಕೆ ಆಗುವ ತೊಂದರೆಗಳು, ಸಾಹೇಬರವರ ಆಳಿಕೆಯಲ್ಲಿ ನಮ್ಮಾ ಇಲಾಖೆಯಲ್ಲಿ ಉಂಟಾದ ಅನೇಕ ಲಾಭಗಳು ಇವೇ ಮೊದಲಾದ ಸಂಗತಿಗಳಿದ್ದವು. ಡಾ| ಸಾಹೇಬರವರು ಮಾನಪತ್ರದ ಮಜಕೂರನ್ನು ಕೇಳಿ, ಉತ್ತರ ಕೊಡುವಾಗ, ಇಂಗ್ಲಿಷಿನಿಂದ ಕೆಲವು ಮಾತುಗಳನ್ನು ಸಂಗತ ಇದ್ದ ಡೆಪ್ಯುಟಿ ಡಾಯರೆಕ್ಟರರಾದ

ಮೆ|| ಗೋಖಲೆಯವರಿಗೆ ತಿಳಿಸಿದರು. ಸದರಿ ಮಾತಿನ ಸಾರಾಂಶವು ಈ ಪ್ರಕಾರವಿತ್ತು.

"ನಿಮ್ಮ ಸ್ವಾಗತದಿಂದ ನಾನು ನಿಮ್ಮೆಲ್ಲರ ಪೂರ್ಣ ಆಭಾರಿಯಾಗಿರುವೆನು. ನಿಮ್ಮ ತೊಂದರೆಗಳ ಬಗ್ಗೆ ನಾನು ಸಹಾನುಭೂತಿಪೂರ್ವಕ ವಿಚಾರ ಮಾಡುವೆನು. ನೀವು ಹೊಲದ ಬಗ್ಗೆ ಇನ್ನೂ ವಿಶೇಷ ಸುಧಾರಣೆಯನ್ನು ಮಾಡುವಿರಾಗಿ ನನ್ನ ನಂಬಿಗೆ ಇರುವದು."

ನಂತರ ಸಾಹೇಬರವರು ಪ್ರತಿಯೊಬ್ಬ ರೈತರಿಗೆ ಹೊಲದ ಸಂಗತಿಗಳನ್ನು ಕೇಳಿ ಅವರ ಅಂಬೋಣವನ್ನು ತಿಳಕೊಂಡರು. ಕಡೆಗೆ ಪ್ರಿನ್ಸಿಪಾಲರಾದ ಮ|| ರಾ|| ಗೋಕರ್ಣಕರವರು ಶೇತಕಿ ಸುಧಾರಣೆ ಬಗ್ಗೆ ಕೆಲವು ಸಂಗತಿಗಳನ್ನು ಹೇಳಿದರು ನಂತರ ಆಭಾರಮನ್ನಣೆ, ಹಾರತುರಾಯಿ, ರಾಷ್ಟ್ರೀಯ ಗೀತ ಮೊದಲಾದ ಕೆಲಸ ನಡೆದು ಸಭೆಯ ಕೆಲಸ ಮುಗಿಯಿತು.

ಅಖಿಲ ಕರ್ನಾಟಕ ಸಂಪಾದಕರ ಸಂಘ

೬ನೇ ತಾರೀಖು ಪ್ರಾತಃಕಾಲ ರಾಜಧಾನಿಯಲ್ಲಿ 'ಸಂಪದಭ್ಯುದಯ' ಕಛೇರಿಯಲ್ಲಿ ಕರ್ನಾಟಕ ವೃದ್ಧ ಪತ್ರಕರ್ತರಾದ ಶ್ರೀ|| ವೆಂಕಟ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಅಖಿಲ ಕರ್ನಾಟಕ ಸಂಪಾದಕರ ಸಂಘವೊಂದನ್ನು ಕಟ್ಟುವ ಸಲುವಾಗಿ ಸಭೆಯೊಂದನ್ನು ಸೇರಿಸಿತ್ತು. ಆಗ ಧಾರವಾಡದ ಶ್ರೀ|| ಆಲೂರ ವೆಂಕಟರಾಯರು, (ಜಯಕರ್ನಾಟಕ) ಶ್ರೀ|| ಮುದವೇಡಕರ ಕೃಷ್ಣರಾಯರು (ಕರ್ನಾಟಕ ವೃತ್ತ ಮತ್ತು ಧನಂಜಯ) ಶ್ರೀ|| ರಂಗಯ್ಯಂಗಾರ್ (ಮೈಸೂರ ಕ್ರಾನಿಕಲ್) ಶ್ರೀ|| ತಾತಾಚಾರ್ಯ ಶರ್ಮಾ (ವಿಶ್ವಕರ್ನಾಟಕ) ಶ್ರೀ|| ಶೇಷಾದ್ರಿಶಾಸ್ತ್ರಿ (ಮೈಸೂರು ಪೇಟ್ರಿಯಟ್) ಮೊದಲಾದ ಸಂಪಾದಕರೂ ಶ್ರೀ|| ಪಿ. ಆರ್ ರಾಮಯ್ಯ (ಸ್ವರಾಜ್ಯ) ಶ್ರೀ|| ಕೃಷ್ಣಪ್ಪ (ಹಿಂದೂ) ಶ್ರೀ|| ಪುಟ್ಟಲಿಂಗಯ್ಯ (ಒಕ್ಕಲಿಗರ ಪತ್ರಿಕೆ) ಶ್ರೀ|| ಶೇಷಯ್ಯ (ಅಂಧ್ರಪತ್ರಿಕೆ) ಶ್ರೀ|| ಸಂಪತ್ತಯ್ಯಂಗಾರ್ಯ (ಇಂಗ್ಲಿಷ್‌ಮನ್) ಮುಂತಾದ ಸುದ್ದಿಗಾರರೂ ಬಂದಿದ್ದರು. ಅಲ್ಲದೆ ಶ್ರೀಯುತರುಗಳಾದ ಕೌಜಲಗಿ ಶ್ರೀನಿವಾಸರಾವ (ಬಿಜಾಪುರ) ಶ್ರೀ|| ನರಸಿಂಹಯ್ಯ, ಶ್ರೀ|| ಹೊಸಕೆರೆಪ್ಪ ಕೃಷ್ಣರಾವ್, ಶ್ರೀ|| ವಾಸುದೇವರಾವ್, ಶ್ರೀ|| ತಾವಲಿ ಗಣೇಶರಾವ್, ಶ್ರೀ|| ಸೋಮಶೇಖರರಾವ್ ಮುಂತಾದ ಮಹನೀಯರೂ ದಯಮಾಡಿಸಿದ್ದರು.

ಅಧ್ಯಕ್ಷರ ಆರಂಭ ಭಾಷಣವಾದ ಕೂಡಲೆ ಶ್ರೀ|| ರಾಮಯ್ಯನವರು ಸಂಪಾದಕರ ಸಂಘವನ್ನು ಕಟ್ಟುವ ಬಗ್ಗೆ ನಡೆದ ಹಿಂದಿನ ಪ್ರಯತ್ನಗಳೆಲ್ಲವನ್ನೂ ಹೇಳಿ ವೃತ್ತಪತ್ರಿಕೆಗಳ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಕುರಿತು ಮಾತನಾಡಿದರು. ಶ್ರೀಯುತ ರಂಗಯ್ಯಂಗಾರ್ಯರೂ ತಮ್ಮ ಅನುಭವವನ್ನು ತಿಳಿಸಿದರು. ಶ್ರೀ|| ಆಲೂರು ವೆಂಕಟರಾಯರೂ, ಮುದವೇಡಕರ, ಕೃಷ್ಣರಾಯರೂ ಉಚಿತವಾಗಿ ಭಾಷಣಮಾಡಿ, ಅಂತಹ ಸಂಘವೊಂದು ಅತ್ಯವಶ್ಯಕವೆಂದು ಹೇಳಿದರು. ಅನಂತರ ಶ್ರೀ|| ಆಲೂರು ವೆಂಕಟರಾಯರ ಸೂಚನೆ ಮತ್ತು ತಾತಾಚಾರ್ಯರ ಅನುಮೋದನೆಯಿಂದ "ಅಖಿಲ ಕರ್ನಾಟಕ ಸಂಪಾದಕರ ಸಂಘವೊಂದು ಸ್ಥಾಪಿತವಾಗಬೇಕು" ಎಂಬ ಠರಾವು ಸರ್ವಾನುಮತದಿಂದ ಅಂಗೀಕೃತವಾಯಿತು.

ಅಧ್ಯಕ್ಷರು:—

ಶ್ರೀಯುತ ಎಂ. ವೆಂಕಟ ಕೃಷ್ಣಯ್ಯನವರು

ಉಪಾಧ್ಯಕ್ಷರು:—

ಶ್ರೀ|| ಡಿ ವಿ ಗುಂಡಪ್ಪನವರು,

ಶ್ರೀ|| ರಂಗಯ್ಯಂಗಾರ್ಯರು,

ಶ್ರೀ|| ಆಲೂರ ವೆಂಕಟರಾಯರು,

ಶ್ರೀ|| ಮುದವೇಡಕರ ಕೃಷ್ಣರಾಯರು,

ಕಾರ್ಯದರ್ಶಿಗಳು:—

ಶ್ರೀ|| ರಂಗನಾಥ ದಿವಾಕರರು,

ಶ್ರೀ|| ತಿ. ತಾತಾಚಾರ್ಯರ ಶರ್ಮರು,

ಶ್ರೀ|| ಪಿ. ಆರ್. ರಾಮಯ್ಯನವರು ಹಂಗಾಮಿಯಾಗಿ ಒಂದು ಕಾರ್ಯನಿರ್ವಾಹಕ ಸಭೆಯು ನಿರ್ಮಾಣವಾಯಿತು.

ವೃತ್ತಸಾರ.

— ನಾಗಪುರದ ಪ್ರಮುಖರು ಕಳೆದ ಅಕ್ಟೋಬರ ೧೧ ನೇ ತಾರೀಖಿಗೆ ಸಭೆ ಸೇರಿ ಶಾರೀರಿಕ ಬಲ ಬೆಳಸುವ ಸಂಸ್ಥೆಯನ್ನೊಂದು ಸ್ಥಾಪಿಸಿರುವರು.

— ದಿಲ್ಲಿಯ ರಾಷ್ಟ್ರೀಯ ಮುಸಲ್ಮಾನ ವಿದ್ಯಾಲಯಕ್ಕೆ ಮುಂಬಯಿಯ ಪಾರ್ಸಿ ಸಾವ್ಕಾರರು ೧೦೦೦ ರೂಪಾಯಿಗಳನ್ನು ಅರ್ಪಿಸಿರುವರು.

— ಕೋರೆಕೊಪ್ಪದೊಳಗಿನ ರಣಸಂಗ್ರಾಮವು ಮೊಘಲ ರಾಜನ ಅನುಗ್ರಹದ ಮೂಲಕ ಅಷ್ಟಕ್ಕೆ ತಡೆದಿದೆ.

— ಕಲಕತ್ತೆಯ ನಾ|| ರಾಮಭೂಷಣ ಚೌಧರಿಯವರ ಮನೆಯಲ್ಲಿ ಲೈಸನ್ಸ ಇಲ್ಲದ ತುಬಾಕಿ ಹಾಗೂ ಚಿದ್ದುಗುಂಡು ಸಿಕ್ಕಿರುವವು ಆ ಬಗ್ಗೆ ಪೊಲೀಸರು ಅವರನ್ನು ಹಿಡಿದಿರುವರು.

— ಅಹಮ್ಮದಾಬಾದದ ಆರೋಗ್ಯ ಸಂವರ್ಧಕ ಸಂಘದಲ್ಲಿ ಪ್ರಾಂತಿಕ ಗವರ್ನರರಿಗೆ ಮಾನಪತ್ರ ಕೊಡುವ ಪ್ರಸ್ತಾವದ ಮೂಲಕ ಭಿನ್ನಮತಗಳಾಗಿವೆ ೨೧ ಮಂದಿಗಳು ಅನುಕೂಲ ಮತ ಕೊಟ್ಟರು. ೧೩ ಮಂದಿ ಪ್ರತಿಕೂಲ ಅಭಿಪ್ರಾಯ ಕೊಟ್ಟರು. ಬಹುಮತದಿಂದ ಠರಾವು ಮಂಜೂರ ಆದಕೂಡಲೆ, ಪ್ರತಿಕೂಲ ಅಭಿಪ್ರಾಯಕೊಟ್ಟವರು ರಾಜೀನಾಮೆ ಕೊಟ್ಟರು ಆರೋಗ್ಯಸಂವರ್ಧನ ಸಭೆಗೆ ಮಾನಪತ್ರಕೊಡುವ ಅಧಿಕಾರವಿಲ್ಲೆಂದು ಪ್ರತಿಪಕ್ಷಿಗಳ ಅಂಬೋಣ.

— ಮುಂಬಯಿಯ ಕಾಯದೆ ಕೌನ್ಸಿಲಿನ ಅಧಿವೇಶನವು ಈ ವಾರದಲ್ಲಿ ಪುಣೆಯಲ್ಲಿ ಸೇರುವದಿದೆ. ಆಗ ಸ್ವರಾಜ್ಯ ಪಕ್ಷದವರು ಯಾವ ಧೋರಣವನ್ನು ಕೈಕೊಳ್ಳಬೇಕಾಗಿ ನಾಳೆ ಮುಂಗಳವಾರಕ್ಕೆ ಚರ್ಚೆಯಾಗುವದಿದೆ.

— ತುರ್ಕಸ್ಥಾನದ ಸುಲ್ತಾನರು ಮೌಲಾನಾ ಶೌಕತ ಅಲ್ಲಿಯವರಿಗೆ ಪತ್ರ ಬರೆದು ಖಿಲಾಫತ ಸಂಸ್ಥೆಯವರು ಮಹಮ್ಮದೀಯರ ಕ್ಷೇತ್ರಸ್ಥಳಗಳಿಗಾಗಿ ನಡಿಸಿದ ಯತ್ನಗಳನ್ನು ಪ್ರಶಂಸಿಸಿ, ಇಬ್ನಸೌದರವರು ಮಹತ್ಕಾರ್ಯವನ್ನು ನೆರವೇರಿಸಿದ್ದಕ್ಕಾಗಿ ಸಂತೋಷಪ್ರದರ್ಶನ ಮಾಡಿರುವರು.

— ಅಹಮ್ಮದಾಬಾದದ ವೈದ್ಯ ಸಭೆಯವರು ದೇಶೀ ಚಿಕಿತ್ಸಾಲಯವನ್ನು ಸಾಗಿಸುವ ಜವಾಬದಾರಿ ವಹಿಸಿಕೊಂಡರೆ ಸ್ಥಳಿಕ ಮುನಿಸಿಪಾಲಿಟಿಯವರು ಆರು ತಿಂಗಳವರೆಗೆ ಖರ್ಚು ಸಹಿಸಲು ತಯಾರಿರುವರೆಂದು ತೀರ್ಮಾನ ಮಾಡಿರುವರು. ವೈದ್ಯ ಸಭೆಯವರು ಮುಂದಾಗಲಿ.

— ಅಹಮ್ಮದಾಬಾದದಲ್ಲಿ ದೇವೀ ಉಪಾಸಕ ಮಂಡಳಿಯೊಂದಿದೆ. ಇವರು ಶಕ್ತಿ ದೇವಿಯ ಸಾಂಪ್ರದಾಯದ ಮೇಲೆ ದಿನಾ ಒಂದರಂತೆ ೯ ಉಪನ್ಯಾಸಗಳನ್ನಿತ್ತರು.

— ಮುಂಬಯಿ ಸರಕಾರವು ಆಮದು ಮಾಡಿದ ಜಲಸಂಶೋಧಕರು ನಮ್ಮ ದಕ್ಷಿಣ ಭಾಗದ ಕಮೀಶನರರ ಸ್ವಾಧೀನ ಮಾಡಲ್ಪಟ್ಟಿರುವರು. ಇವರಿಂದ ಎಲ್ಲೆಲ್ಲಿ ಜಲಸಂಶೋಧನವಾಗುವದೆಂದು ನೋಡಬೇಕು.

— ಕರ್ನಾಟಕ ಮಹಾ ವಿದ್ಯಾಲಯವನ್ನೊಂದು ಸ್ಥಾಪಿಸಬೇಕೆಂದು ಬೆಳಗಾಂವಿಯಲ್ಲಿ ವಿಚಾರ ನಡೆದಿದೆ. ಅಲ್ಲಿಯ ಲಿಂಗಾಯತ ಹೈಸ್ಕೂಲಿನವರು ಈ ವಿಷಯ ಪ್ರಮುಖ್ಯವಾಗಿ ದುಡಿಯುತ್ತಿರುವರು.

— ಗುಜರಾಥದಲ್ಲಿ ಮಳೆಯಿಲ್ಲದೆ ಬರಮೋಳುವ ಲಕ್ಷಣಗಳು ತೋರುತ್ತಿವೆ. ನೂರಾರು ಒಕ್ಕಲಿಗರು ಸರಕಾರಕ್ಕೆ ಅರ್ಜಿ ಮಾಡಿ ತೀರ್ವೆ ಮಾಫ ಮಾಡಬೇಕಾಗಿಯೂ, ಅಗ್ಗ ಕಾಳುಕಡಿ ಉಗ್ರಾಣಗಳನ್ನು ತೆರೆಯಬೇಕಾಗಿಯೂ ಸರಕಾರಕ್ಕೆ ಅರ್ಜಿ ಮಾಡಿ ಬೇಡಿಕೊಂಡಿರುವರು.

— ಆಸಾಮದ ಟಪಾಲ ಒಯ್ಯುವ ಆಗಿಬೋಟಿಯು ಇನ್ನೊಂದು ಇಂಜನಿಗೆ ಅಪ್ಪಳಿಸಿ, ಕಲಕತ್ತೆಯ ನೆರೆಯ ಸಿಲ್ದಾ ಸ್ಟೇಶನಿನಿಂದ ೧೦೦ ಮೈಲು ದೂರವಿರುವ ಹಳ ಸಾದಲ್ಲಿ ಭಯಂಕರ ಅಪಘಾತವಾಯಿತು. ೭ ತಾಸು ರಾತ್ರಿಯ ಸಮಯ! ಪ್ರಯಾಣಿಕರು ಪಟ್ಟವಾಗಿ ಡಬ್ಬಿಯಲ್ಲಿ ಕುಳಿತುಕೊಂಡಿದ್ದರು. ಕೆಲವರು ನಿದ್ರೆಯಿಂದ ತೂಗಡಿಸುತ್ತಿದ್ದರು; ಹಲವರು ಬಾಂಕಿನ ಮೇಲೆ ನಿದ್ರೆಗೈಯುತ್ತಿದ್ದರು, ಇನ್ನೂ ಅನೇಕರು ಡಬ್ಬಿಗಳಲ್ಲಿ ಕೆಳಬದಿಗೆ ಹಾಸಿಗೆ ಮಾಡಿ ಬಿದ್ದುಕೊಂಡಿದ್ದರು. ಧಕ್ಕನೆ ಮೇಘಗರ್ಜನೆಯೋಪಾದಿಯಲ್ಲಿ ಅದ್ಭುತವಾದ ಗರ್ಜನೆಯಾಯಿತು. ಪ್ರಯಾಣಿಕರೆಲ್ಲರೂ ಹೌಹಾರಿದರು. ರೇಲ್ವೆ ಒಂಡಿಗಳು ಪರಸ್ಪರ ಅಪ್ಪಳಿಸಿದ ಪ್ರಸಂಗವದು. ಚೌಕಶಿ ಮಾಡಲು ೯ ಜನರು ಅಪಘಾತದಿಂದ ಮೃತರಾಗಿದ್ದಾರೆ. ೩೬ ಜನರಿಗೆ ಘಾಯವಾಗಿದೆ.

— ಲಾಹೋರದೊಳಗಿನ ಲೋರೆನ್ಸ ಮೂರ್ತಿಯನ್ನು ಸ್ಥಳಚ್ಯುತ ಮಾಡಿ ಬೇರೊಂದೆಡೆಯಲ್ಲಿ ಒಯ್ಯಬೇಕೆಂದು ಈ ಹಿಂದೆ ಬಹಳ ಚಳವಳ ನಡೆದಿತ್ತು. ಪಂಜಾಬ ಸರಕಾರವು ಅದಕ್ಕೆ ಒಪ್ಪಿದ್ದಿಲ್ಲ. ಕಳೆದ ೧೫ನೇ ತಾರೀಖಿಗೆ ಆ ಮೂರ್ತಿಯ ಕೈಯೊಳಗಿನ ಲೆಕ್ಕಣಿಕೆಯು ಮಾಯವಾಯಿತು ಖಡ್ಗದ ಒಂದು ತುಂಡು ಮಾತ್ರ ಇದೆ. ಪೋಲೀಸರು ಮೂರ್ತಿಯ ಮೇಲೆ ಕಾವಲಿಟ್ಟಿರುವರು. ಲೆಕ್ಕಣಿಕೆಯೂ, ಖಡ್ಗದ ತುಂಡೂ ಒಳಿಯ ಬೈಲಲ್ಲಿ ದೊರೆತವಂತೆ.

— ಕಲಕತ್ತೆಯಲ್ಲಿ ದೀಪಾವಳಿ ಹಬ್ಬದ ಮಹೋತ್ಸವದ ಸಮಯ ಮದ್ದು ಹಾರಿಸುತ್ತಿದ್ದಾಗ ೪ ಮಂದಿಗಳಿಗೆ ಘಾಯಗಳಾದವು. ಮೂವರು ಆಸ್ಪತ್ರೆಯಲ್ಲಿ ಸತ್ತರು.

— ನೀಲಗಿರಿ ಜಿಲ್ಲೆಯಲ್ಲಿ ೫೦೦ ಜನವಸತಿಯುಳ್ಳಂಥ ಪ್ರತಿಯೊಂದು ಹಳ್ಳಿಗೂ ಒಂದು ಪ್ರಾಥಮಿಕ ಶಾಲೆಯು ಪ್ರಾರಂಭವಾಗುವದು. ಆದರೆ ಆ ಶಾಲೆಯಲ್ಲಿ ಕನ್ನಡ ಬಾಲಕರು ತಮಿಳು ಕಲಿಯಬೇಕು.

— ಜಿಟ್ಟೆಗಳು ಹೊಲವನ್ನು ನಾಶಪಡಿಸಹತ್ತಿದರೆ, ಒಂದು ಬಗೆಯ ವಿಷದ ಹೊಗೆಯಿಂದ ತುಂಬಿದ ವಿಮಾನವನ್ನು ಆ ಪ್ರದೇಶದಲ್ಲಿ ಸಂಚರಿಸಿ, ಅವನ್ನು ಕೊಲ್ಲುವ ಹಂಚಿಕೆಯು ಅಮೇರಿಕೆಯಲ್ಲಿ ಯಶಸ್ವಿಯಾಗಿದೆ. ಇದೇ ಪ್ರಕಾರವಾಗಿ ಸೊಳ್ಳೆಗಳನ್ನು ನಾಶಪಡಿಸಿ, ಮಲೇರಿಯಾ ಜ್ವರವನ್ನು ನಿಲ್ಲಿಸುವ ಪ್ರಯತ್ನವು ಈಗ್ಗೆ ಪ್ರಾರಂಭವಾಗಿದೆ.

— ನಿದ್ರೆ ಬಾರದಿದ್ದರೆ ಅಫೂ ಮಿಶ್ರಿತ ಔಷಧಿಯನ್ನು ಕೊಡುವ ಪದ್ಧತಿಯು ಅಪಾಯಕರವಾದ್ದರಿಂದ ಈಗ್ಗೆ ಒಂದು ಯಂತ್ರವು ಸಿದ್ಧವಾಗಿದೆ. ಇದನ್ನು ರೋಗಿಯು ತನ್ನ ಹಾಸಿಗೆಯ ಬಳಿಯಲ್ಲಿರಿಸಿ, ಆ ಯಂತ್ರಕ್ಕೆ ಜೋಡಿಸಿದ, ದಾರದಲ್ಲಿಯ ಗುಂಡಿಯನ್ನು ಒತ್ತ ಬೇಕು. ಅದರಿಂದ ಪ್ರತಿ ಕ್ಷಣದಲ್ಲಿಯೂ ಬೇರೆ ಬೇರೆ ಚಿತ್ರಗಳಂಥ ನಾನಾ ಬಗೆಯ ಬಣ್ಣಗಳ ಪ್ರಕಾಶವು ಬಹು ಶಾಂತವಾಗಿ ಕಣ್ಣುಗಳಮೇಲೆ ಬಿದ್ದು ೫ ರಿಂದ ೧೦ ಮಿನಿಟುಗಳಲ್ಲಿ ನಿದ್ರೆ, ಹತ್ತದಂಥ ಎಂತಹ ಎಟ್ಟ ಮನುಷ್ಯನಿದ್ದರೂ, ನಿದ್ರೆ ಹೋಗುವನು.

— "ಕೌನ್ಸಿಲ್ ಅಧಸ್ಯೇಟ" ಗೆ ಸ್ವರಾಜ್ಯ ಪಕ್ಷದ ಪಕ್ಷಿಯಿಂದ ಶ್ರೀ|| ಚಿತಳೇಯವರು ಉಮೇದವಾರರಾಗಿದ್ದಾರೆ

— ಅಖಿಲ ಭಾರತೀಯ ದೇಶಬಂಧು ಸ್ಮಾರಕನಿಧಿಗೆ ೪೦ ಸಾವಿರ ರೂಪಾಯಿ ಒಟ್ಟಾಗಿವೆ.

— ಮಹಾತ್ಮರು ಈಗ ಬಿಹಾರ ಪ್ರಾಂತದಲ್ಲಿ [illegible]ತ್ತಿರುವರು. ಅವರಿಗೆ ಪ್ರಚಂಡ ಸ್ವಾಗತವಾಗುತ್ತಿದೆ. ವಿಷ್ಣುಪುರದಲ್ಲಿ ೫೦೦೦೦ ಜನಸಮುದಾಯವು ಒಟ್ಟು ಸೇರಿತ್ತು. ಸಭೆಯ ವ್ಯವಸ್ಥೆಯು ಬಹಳ ಪ್ರಶಂಸನೀಯವಿತ್ತು.

— ಸುರತ ಪಟ್ಟಣದಲ್ಲಿ ಮುಂಬಯಿ ಇಲಾಖೆಯೊಳಗಿನ ಶಿಕ್ಷಕರ ಪರಿಷತ್ತು ಸೇರಿತು. ಅಧ್ಯಕ್ಷರಾದ ಪ್ರೊಫೆಸರ ಪಿ. ಪಿ. ವಾಡಿಯಾರವರು ಶಿಕ್ಷಕರ ಪವಿತ್ರ ಕರ್ತವ್ಯವನ್ನು ತಿಳಿಸಿಹೇಳಿ ಭೂಮಂಡಳದ ಮೇಲೆ ಪರಮಾತ್ಮನ ರಾಜ್ಯಸ್ಥಾಪನೆಮಾಡಲು ಅನುಕೂಲರಾಗಿ ನಡೆಯಿರೆಂದು ಬೋಧಿಸಿದರು.

— ನಾಗಪುರದ ಅವಿರ್ಗ್ರಾಮದಲ್ಲಿ ಹಿಂದೂ ಮುಸಲ್ಮಾನರೊಳಗೆ ಕಳೆದ ೧೪ನೇ ತಾರೀಖು ದೊಂಬಿಯಾಗಿ ಒಬ್ಬ ಮುಸಲ್ಮಾನ ಹಾಗು ಮೂವರು ಹಿಂದೂಗಳು ಮಡಿದರು. ಸಧ್ಯಕ್ಕೆ ಅಲ್ಲಿ ಹಿಂದೂ ಮುಸಲ್ಮಾನರ ವಾದ್ಯಘೋಷದ ಕುರಿತು ಕಲಹವಾಗಿ ಇತ್ತಿಟ್ಟಿನಲ್ಲಿಯೂ ಸಂಧಾನವಾಗಿತ್ತು.

ನಾಗಪುರದ ಪ್ರಮುಖರು ಕಳೆದ ಅಕ್ಟೋಬರ ೧೧ನೇ ತಾರೀಖಿಗೆ ಸಭೆಸೇರಿ, ಶಾರೀರಿಕ ಬಲ ಬೆಳೆಸುವ ಸಂಸ್ಥೆಯನ್ನೊಂದು ಸ್ಥಾಪಿಸಿರುವರು.

— ದಿಲ್ಲಿಯ ರಾಷ್ಟ್ರೀಯ ಮುಸಲ್ಮಾನ ವಿದ್ಯಾಲಯಕ್ಕೆ ಮುಂಬಯಿಯ ಶೇಟ್ ಸಾವುಕಾರರು ೧೬೦೦ ರೂಪಾಯಿಗಳನ್ನು ಅರ್ಪಿಸಿರುವರು.

— ಮೊರೊಕ್ಕೋದೊಳಗಿನ ರಣಸಂಗ್ರಾಮವು ಮೇಘರಾಜನ ಅನುಗ್ರಹದ ಮೂಲಕ ಅಷ್ಟಕ್ಕೆ ತಡೆದದೆ.

— ಕಲಕತ್ತೆಯ ಡಾ॥ ರಾಮಭೂಷಣ ಬೋಧರಿಯವರ ಮನೆಯಲ್ಲಿ ಲೈಸನ್ಸ ಇಲ್ಲದೆ, ತುಪಾಕಿ ಹಾಗು ಮದ್ದುಗುಂಡು ಸಿಕ್ಕಿರುವವು. ಆ ಡಾಕ್ಟರರನ್ನು ಸೆರೆ ಹಿಡಿದಿರುವರು.

— ಪುಣೆಯ ಟಿಳಕ ಮಹಾವಿದ್ಯಾಲಯದವರು ಭವಾನಿ ಪೇಟೆಯಲ್ಲಿ ಧರ್ಮಾರ್ಥ ಆಯುರ್ವೇದ ರುಗ್ಣಾಲಯವನ್ನು ಸ್ಥಾಪಿಸಿ ಈಗ ಎರಡು ತಿಂಗಳುಗಳಾದವು. ರುಗ್ಣಾಲಯವು ಬಹಳ ಲೋಕಪ್ರಿಯವಾಗಿಯದೆ.

— ಮಹಾತ್ಮರ ಜಯಂತಿಯ ಸುಮುಹೂರ್ತದಲ್ಲಿ ಮೈಸೂರಿನಲ್ಲಿ ನಿಖಿಲ ಕರ್ನಾಟಕ ಪತ್ರಿಕಾಕರ್ತರ ಸಂಘವು ಸ್ಥಾಪಿತವಾಗಿದೆ. ಶ್ರೀ ವೆಂಕಟಕೃಷ್ಣಯ್ಯನವರು ಸಂಘದ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

— ಮಹಾತ್ಮರು ಮೈಸೂರಿಗೆ ಇದೇ ಬರುವ ನವಂಬರ ತಿಂಗಳಲ್ಲಿ ಹೋಗುವವರಿದ್ದಾರೆ; ಶ್ರೀಮನ್ಮಹಾರಾಜರವರು ಆತಿಥ್ಯಸತ್ಕಾರವನ್ನು ಮಾಡಲಿರುವರಾಗಿ ಸುದ್ದಿ.

— ಲಾಹೋರ ಪಟ್ಟಣದಲ್ಲಿ ೬೦ ಹುಲ್ಲಿನ ಮನೆಗಳಿಗೆ ಬೆಂಕಿ ಬಿದ್ದು ನಷ್ಟ. ಪ್ರಾಣಹಾನಿಯಾಗಲಿಲ್ಲ. ಅದೊಂದು ಸುದೈವ.

— ಮೈಸೂರಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಕನ್ನಡ ನಿಘಂಟು ಹಾಗು ವಿಶ್ವಕೋಶಗಳು ಸಿದ್ಧಪಡಿಸಬೇಕೆಂದು ತೀರ್ಮಾನವಾಗಿಯದೆ. ಮಹತ್ವದ ಕರ್ನಾಟಕ ವಾಙ್ಮಯ ಸೇವೆ.

— ಭಟ್ಕಳದಲ್ಲಿ ಧಕ್ಕೆ ಕಟ್ಟುವ ವಿಚಾರವನ್ನು ಮೈಸೂರ ಸರಕಾರದವರು ತ್ಯಜಿಸಲಿಲ್ಲವಂತೆ! ಪ್ರಯಾಣಾನುಕೂಲ ಮಾಡೋಣನೆ ಆ ವಿಷಯ ಆಲೋಚಿಸುತ್ತೇವಾಗಿ ಮೈಸೂರ ಸರಕಾರದ ಅಂಬೋಣ.

-- ಮೈಸೂರ ಸರಕಾರದವರು ಪ್ರಜಾಪ್ರತಿನಿಧಿ ಸಭೆಯ ಸಭಾಸದರಾದ ಶ್ರೀ ಹೊಸಕೋಟೆ ಕೃಷ್ಣರಾಯರ ಹೇಳಿಕೆಯನ್ನು ಮನ್ನಿಸಿ, ಸಾಧ್ಯವಿದ್ದಲ್ಲಿ ನಾಲೆಗಳಿಸುವ ವ್ಯವಸ್ಥೆ ಮಾಡುತ್ತೇವಾಗಿ ಅಭಿವಚನವನ್ನಿತ್ತಿರುವರು.

— ಜಪಾನದ ಯೋಕೋಹಾಮಾ ಹಾಗು ಯೋಕೋಸೂಕ ಗ್ರಾಮಗಳಲ್ಲಿ ಭೂಮಿ ಕುಸಿದುಬಿದ್ದು ೨೬ ಮಂದಿಗಳು ಮಡಿದರು.

— ಮಧ್ಯಪ್ರಾಂತದ [illegible] ಪಟ್ಟಣದಲ್ಲಿ ಹಿಂದೂ-ಮುಸಲ್ಮಾನರೊಳಗೆ ದೊಡ್ಡ ಕಲಹವಾಯಿತು. ಡಿ॥ ಮ್ಯಾಜಿಸ್ಟ್ರೇಟರು ಹಿಂದೂ ಪ್ರಮುಖರ ಮೇಲೆ ಕ್ರಿ. ಪ್ರೊ. ಕೋ. ೧೪೪ ಕಲಮಿನನ್ವಯ ಹುಕುಮು ಹೊರಡಿಸಿದರು. ಈ ಪ್ರಕಾರವನ್ನು ವಿರೋಧಿಸಿ ಕೆಲವರು ಭಾಷಣಮಾಡಿದರು. ಅವರ ಮೇಲೆ ೧೦೭ ಕಲಮಿನನ್ವಯ ಶಾಂತತಾಪಾಲನದ ಜಾಮೀನು ಖಟ್ಲೆಗಳಾಗಿವೆ. ಹಿಂದೂ ಬಾಂಧವರು ಶಾಂತತೆಯ ಸತ್ಯಾಗ್ರಹ ಮಾಡುತ್ತಿರುವರು. ಸ್ತ್ರೀ-ಪುರುಷರೂ ಸತ್ಯಾಗ್ರಹಕ್ಕೆ ಪ್ರವೃತ್ತರಾಗಿರುವರು. ಈ ವರ್ಷ ದೀಪಾವಳಿ ಹಬ್ಬದ ಉತ್ಸಾಹವು ಕಂಡು ಬರಲಿಲ್ಲ. ಇಡೀ ಪಟ್ಟಣದೊಳಗಿನ ಅಂಗಡಿಗಳು ಮುಚ್ಚಿಕೊಂಡಿವೆ. ದೊಡ್ಡದೊಂದು ಆಪತ್ತು.

— ಬೆಳಗಾವಿಯ ಜಿಲ್ಹೆಯಲ್ಲಿ ಮಳೆ ಇಲ್ಲದೆ ಜನರ ಗೋಳು. ಆದರಿಂದ ಅಲ್ಲಿಯ ಬ್ರಾಹ್ಮಣರು ರಾಮನಾಮ ಸಪ್ತಾಹವನ್ನು ಆಚರಿಸಿದರು. ಏಳನೇ ದಿನ ಮೇಘರಾಜನು ಅನುಗ್ರಹಿಸಿ ಪ್ರಜೆಗಳಿಗೆ ಸಂತೈಸಿದನು.

— ಕೋಹಟದ ನೆರೆಹೊರೆಯಲ್ಲಿ [illegible] ಹಾವಳಿ ಮಾಡುತ್ತಿರುವಾಗ [illegible] ಪ್ರಯೋಗಿಸಿ [illegible] ಹೊಡೆದೋಡಿಸಿರುವರು.

— ಸೀರಿಯಾ ದೇಶದ ಹಮಾ ಗ್ರಾಮದಲ್ಲಿ ದಂಗೆ ಬಿದ್ದು [illegible] ಸೈನಿಕರು [illegible] ಗುಂಡು ಹಾರಿಸಿ [illegible] ಮಂದಿಗಳು ಗಾಯಪಟ್ಟಿದ್ದಾರೆ.

— ಕಲಕತ್ತೆಯಲ್ಲಿ ಕಳೆದ [illegible] ಭಯಂಕರ [illegible] ಬೀದಿಗಳಲ್ಲೆಲ್ಲ [illegible].

ಉತ್ತರ ಕಾನಡಾ ನಾಡವರು

ಲೇಖಕ: ಆರ್. ಕೆ. ನಾಯಕ್ ಬಿ.ಎ.
ಸಂಪಾದಕ, 'ಸುಧಾರಕ' ಉತ್ತರ ಕನ್ನಡ

ಸುಮಾರು ೧೩೦೦ ವರ್ಷಗಳ ಹಿಂದೆ [illegible] ಕರ್ನಾಟಕದಲ್ಲಿ ಕದಂಬ [illegible] ಬ ಹೆಸರಾದ ಅರಸನು ಆಗಿ ಹೋದನು. [illegible] ಧಾನಿ ಬನವಾಸಿ ಮತ್ತು [illegible] ವಾಗಿ ಇವನು ಒಂದು [illegible] ವಾಗಿ ಹಬ್ಬ ಜನರನ್ನು [illegible] ನವಿಲನ್ನು ಕೊಂದನು. ಜೈನ ದೇವರ [illegible] ಪ್ರಾಣಹತ್ಯೆ ಮಾಡಬಾರದೆಂಬ ಕಟ್ಟುಪಾಡನ್ನು [illegible] ಜನ ಜೈನರು ಅರಸನ ಈ ಕೃತ್ಯವನ್ನು [illegible] ವಿರುದ್ಧ ನಿಂತರು. ಇದನ್ನು [illegible] ಯಾವತ್ತು ಮಂಡಳದ ಸಭೆಸೇರಿಸಿ ತಾನು ಪ್ರಾಣಹತ್ಯೆಮಾಡಿದ್ದು ನಿಜವೆಂದೂ, ಅದು ಜೈನ ಧರ್ಮಕ್ಕೆ ವಿರುದ್ಧವಾದರೂ ರಾಜಧರ್ಮಕ್ಕೆ ವಿರುದ್ಧವಲ್ಲವೆಂದೂ, ತಾನು ರಾಜನಾದರಿಂದ ತಪ್ಪುಗಾರನಲ್ಲವೆಂದೂ ವಾದಿಸಿದನು. ಆಗ ಜೈನರಲ್ಲಿ [illegible] ಆದ ಊರವರೂ ಮತ್ತಿತರರೂ ರಾಜನ ಪಕ್ಷವನ್ನು ವಹಿಸಿದರು. ಈ ಹೊಸ ಪಕ್ಷದವರಿಗೆ ನಾಡಿನಲ್ಲಿ ಶ್ರೇಷ್ಠರಾದ [illegible] "ನಾಡವರು" ಎಂಬ ಹೆಸರು ಬಂತು. ಇದೇ ನಾಡವರ ಜಾತಿಯ ಉತ್ಪತ್ತಿಯು.

ಆ ಕಾಲಕ್ಕೆ ಶಂಕರಾಚಾರ್ಯರು ಸ್ಥಾಪಿಸಿದ ವೈದಿಕ ಮತವು ಪ್ರಬಲವಾಗಿದ್ದುದರಿಂದ ನಾಡವರು ವೈದಿಕ ಮತವನ್ನು ಅಂಗೀಕರಿಸಿದರು. ಆಗಲಾದರೂ ಇವರು ಮದುವೆಯ ಕಾಲಕ್ಕೆ ಮದುಮಗಳಿಗೆ ಶೈವರಂತೆ ಅಡ್ಡ ಕುಂಕುಮ ಹಚ್ಚುವ ರೂಢಿಯುಂಟು. ಅನಂತರ ೧೧ನೆಯ ಶತಮಾನದ ಸುಮಾರಿಗೆ ರಾಮಾನುಜಾಚಾರ್ಯರು ವಿಷ್ಣುವೇ ಶ್ರೇಷ್ಠವೆಂಬ ವೈಷ್ಣವ ಮತವನ್ನು ಸ್ಥಾಪಿಸಿದ ಬಳಿಕ ಇವರು ವೈಷ್ಣವ ಮತವನ್ನು ಅಂಗೀಕರಿಸಿ ಈ ಹೊತ್ತಿಗೂ ವೈಷ್ಣವರಾಗಿರುತ್ತಾರೆ. ಇವರು ರಾಜನ ಪಕ್ಷದವರಿದ್ದುದರಿಂದ ದೇಶಗಳಿಗೆ ಹೋಗಿ ಯುದ್ಧದಲ್ಲಿ ಒಳ್ಳೆಯ ಶೂರತನದಿಂದ ಕಾದಿ ಜಯ ಸಂಪಾದಿಸಿದ್ದರಿಂದ ಇವರಿಗೆ ಬಂಟರೆಂಬ ಅನ್ವರ್ಥವಾದ ಹೆಸರು ಬಂತು. ಇವರಲ್ಲಿ ಭೂತಾಳಪಾಂಡ್ಯನೆಂಬವನು ರಾಜ್ಯವನ್ನು ಸಂಪಾದಿಸಿ ಅರಸನಾಗಿ ಮೆರೆದು, ಆಚಾರ-ವಿಚಾರಗಳಲ್ಲಿ ಅನೇಕ ಹೆಚ್ಚು ಕಡಿಮೆಗಳನ್ನು ಮಾಡಿದನು. ಅಳಿಯಕಟ್ಟು ಅಂದರೆ ತಂದೆಯ ಸೊತ್ತಿಗೆ ಮಗನು ಹಕ್ಕುದಾರನಿರದೆ, ಅಕ್ಕನ ಹಾಗು ತಂಗಿಯ ಮಕ್ಕಳು ಹಕ್ಕುದಾರರಾಗಬೇಕೆಂಬ ಆಚಾರವನ್ನು ಇವನು ಪ್ರಚಾರದಲ್ಲಿ ತಂದನು. ಈ ಅಳಿಯನ ಕಟ್ಟಿಗೆ ಒಪ್ಪದೆ ಇದ್ದವರು ಆ ನಾಡನ್ನು ಬಿಟ್ಟು ಉತ್ತರ ಕಾನಡಾ ಜಿಲ್ಹೆಯೊಳಗಿನ ಭಟ್ಕಳದಲ್ಲಿ ಬಂದು ನೆಲೆಗೊಂಡರು. ಭಟ್ಕಳದಲ್ಲಿ ಈಗಲೂ ನಾಡವರ ಕೇರಿ, ನಾಡವರ ಗದ್ದೆ ಎಂಬ ಹೆಸರುಗಳಿವೆ. ಅಲ್ಲಿ ಆಗ ಚೆನ್ನಭೈರಾದೇವಿಯೆಂಬ ಜೈನ ರಾಣಿಯು ಆಳುತ್ತಿದ್ದಳು. ಈಕೆಗೆ ಹಳ್ಳಿಯ ಜನರು ಭೈರಮಜ್ಜಿ ಎಂದು ಕರೆಯುತ್ತಿದ್ದರು.

ಇವರು ಮೈಕಟ್ಟಿನಲ್ಲಿ ಸಶಕ್ತರೂ, ಯುದ್ಧಕಲೆಯಲ್ಲಿ ನಿಪುಣರೂ ಇದ್ದುದರಿಂದ ರಾಣಿಯು ಇವರನ್ನು ತನ್ನ ಸೈನ್ಯದಲ್ಲಿ ನಿಯಮಿಸಿಕೊಂಡಳು. ಇವರಲ್ಲಿ "ದಂಡಿನ ಬೀರನಾಯಕ" "ದಂಡಿನ ತಿಮ್ಮಣ್ಣನಾಯಕ" ಎಂಬುವರ ಶೂರತನಕ್ಕೆ ಮೆಚ್ಚಿ ಇವರನ್ನು ಚೆನ್ನಭೈರಾದೇವಿಯು ಸೇನಾಪತಿಗಳಾಗಿ ನಿಯಮಿಸಿಕೊಂಡಳು. ಭಟ್ಕಳದಿಂದ ಸದಾಶಿವಗಡದ ವರೆಗೆ, ಅಂದರೆ, ಇಡಿಯ ಉತ್ತರ ಕಾನಡಾದಲ್ಲಿ ಇವರ ವರ್ಚಸ್ಸು ಮೆರೆಯುತ್ತಿತ್ತು. ಇವರ ಶೂರತನಕ್ಕೆ ಮೆಚ್ಚಿ ಪೋರ್ತುಗೀಸರೂ, ಇಂಗ್ಲಿಷರೂ ಇವರ ಗೆಳೆತನ ಮಾಡಿಕೊಂಡರು. ವಿಜಾಪುರದ ಮುಸಲ್ಮಾನರ [illegible]ಗಳನ್ನು ತಡೆಯಲಿಕ್ಕೆ ಕತ್ತಲು ತನ್ನ ರಾಜ್ಯದ ಮೇರೆಯ ಬಂದೋಬಸ್ತಿಗಾಗಿ ಚೆನ್ನಭೈರಾದೇವಿಯು [illegible] ಅಂಕೋಲಾ ಕಾಲ[illegible] ಹಳ್ಳಿಗಳಲ್ಲಿ ಇಟ್ಟು, ಇವರಿಗೆ ಎಷ್ಟೋ ಹಳ್ಳಿಗಳನ್ನು (ಉಂಬಳಿ) ಇನಾಮು ಕೊಟ್ಟಳು. ಅಂದಿನಿಂದ [illegible] ನಡೆಯಲಿಲ್ಲ. ಚೆನ್ನಭೈರಾದೇವಿಯ [illegible] ನಂತರ ಇವರು [illegible] ಹಾಗು ಬಳ್ಳಿಯ [illegible] ಇವರು ಉತ್ತರ ಕಾನ[ಡಾ] [illegible] ಬಳಿಕ ಇವರ ಆಚಾರ-ವಿಚಾರಗಳಲ್ಲಿ [illegible] ಎರಡು ಪಕ್ಷಗಳಂತಾಯಿತು. [illegible] ಪಕ್ಷದವರೇ ಈಗ [illegible] ಜಿಲ್ಹೆಯಲ್ಲಿ [illegible] ಕೊಳ್ಳುವರು.

ಉತ್ತರ ಕಾನಡಾದ ನಾಡವರ ಮುಖ್ಯ ವೃತ್ತಿಯು ಒಕ್ಕಲುತನವು. ಇವರು ವಿಶೇಷವಾಗಿ ಹಳ್ಳಿಗಳಲ್ಲಿ ವಾಸ ಮಾಡುವದರಿಂದ ಶಿಕ್ಷಣದ ಪ್ರಸಾರವು ಇವರಲ್ಲಿ ತಕ್ಕಮಟ್ಟಿಗೆ ಆಗಲಿಲ್ಲ. ಸುಮಾರು ೩೦ ವರ್ಷಗಳಿಂದೀಚೆಗೆ ಅಲ್ಪಸ್ವಲ್ಪ ಶಿಕ್ಷಣದ ಕಡೆಗೆ ಇವರ ಲಕ್ಷ್ಯವು ಹೋಗಿರುವದು. ಈಗಿನ ಶಿಕ್ಷಣದ [illegible] ಹಟ್ಟಿತ್ತು ಬಂದಿದೆ. ಆದರೆ ಬಡತನದ ಮೂಲಕ ಹೆಚ್ಚಿನ ಶಿಕ್ಷಣದ ವ್ಯವಸ್ಥೆ ಮಾಡಲಾಗಲಿಲ್ಲ. ಇವರಲ್ಲಿ ಈವರೆಗೆ ಒಬ್ಬರು ಮೂವರು ಜನರು ಮಾತ್ರ ಗ್ರಾಜ್ಯುಯೇಟರಿರುವರು (ಒಬ್ಬರು ಎಮ್. ಎ. ಬಿ. ಎಲ್., ಒಬ್ಬರು ಬೀ. ಎ. ಎಸ್. ಟೀ. ಸಿ. ಡಿ., ಒಬ್ಬರು ಬೀ. ಎಸ್.) ಹಾಗೂ ೨೩ ಮ್ಯಾಟ್ರಿಕ್ಯುಲೇಟರಿರುವರು. ಇವರ ಜನಸಂಖ್ಯೆಯು ಸುಮಾರು ಆರುವರೆ ಸಾವಿರ. ಇವರು ಮಿತವ್ಯಯಿಗಳು. ಇವರಲ್ಲಿ ಧಾರ್ಮಿಕ ಶ್ರದ್ಧೆ ಬಹಳ.

—ನವಯುಗ

ಗಿಬ್ಬ ಹೈಸ್ಕೂಲು.

(೫ನೇ ಪಾನಿನಿಂದ ಮುಂದರಿಸಿದ್ದು)

ಎಸ್. ವ್ಹಿ. ಕಾಮತರವರು ರಾವಬಹಾದ್ದೂರರ ಆಭಾರ ಪ್ರದರ್ಶಿಸಿದರು. ಆಡಳಿತೆಯ ನಿಯಮಗಳನ್ನು ಉಲ್ಲಂಘಿಸಿ, ರಾ॥ ಕಾಮತರಿಗೆ ಒಂದು ವರ್ಷದ ಮುದ್ದತ್ತು ಕೊಟ್ಟು ಕೆಲ ಮೆಂಬರರಿಗೆ ಆನಂದಗೊಳಿಸಿದ ಬಗ್ಗೆ ರಾವಬಹಾದ್ದೂರರ ಉಪಕಾರವಾಗಿರುವದೆಂದರು. ಬಳಿಕ, ಸಭೆಯು ವಿಸರ್ಜನೆ ಹೊಂದಿತು. ಈ ಸಭೆಗೆ ರಾ॥ ಅಲ್ಲೀಸಾಹೇಬ ಅಬ್ದುಲ್‌ಸಾಹೇಬ ಕುಮಟಾ, ಮಾಧವ ಅನಂತ ಶಿರಾಲಿ ವಕೀಲ ಹೊನ್ನಾವರ ಇವರು ಅಲಕ್ಷ್ಯದ ಮೂಲಕ ಹಾಜರಿದ್ದಿಲ್ಲ.

ವಿಶೇಷ ಸಂಗತಿಗಳು.

ಬಿಹಾರ ಪ್ರಾಂತಿಕ ಸರಕಾರದ ಕೈಗಾರಿಕೆ ಖಾತೆಯವರು ಮುಟಗಾರದಲ್ಲಿ ಒಂದು ಕಾರಖಾನೆಯನ್ನು ತೆರೆದಿರುವರು. ಈ ಕಾರಖಾನೆಗೆ ಮಹಾತ್ಮರು ದಯಮಾಡಿಸಿದ್ದರು. ಅಲ್ಲಿಯ ಸುಪರಿಂಟೆಂಡೆಂಟರು ಮಿ॥ ರಾಜರವರು, ಕಾರಖಾನೆಯು ಕಟ್ಟಿಸತಕ್ಕ ಅಚ್ಚುಕಟ್ಟಾಗಿರುವದಾಗಿಯೂ, ಸುವ್ಯವಸ್ಥಿತವಾಗಿರುವದಾಗಿಯೂ ಮಹಾತ್ಮರು ಅಭಿಪ್ರಾಯಪಟ್ಟರು. ಅಲ್ಲಿ ಕೈಮಗ್ಗದ ನೇಯ್ಗೆ ಮತ್ತು ಅಟಿಗೆಯ ಸಾಮಾನುಗಳನ್ನು ಮಾಡುತ್ತಾರೆ. ಈ ಹೊಸ ಮಾದರಿಯ ಕೈಮಗ್ಗಗಳಿಗೆ ಅಲ್ಲಿ ಕೈನೂಲು ಇಲ್ಲೆಂದು ಮಹಾತ್ಮರಿಗೆ ವ್ಯಸನವಾಗಿದೆ.

✱✱✱✱

ಬಿಹಾರದ ಪ್ರಾಂತಿಕ ಜಾರಿಯಂತ್ರಗಳಲ್ಲಿ ಎರಡು ಖರೇ ಮಾಡಿದ ರಾಷ್ಟ್ರೀಯ ಸಭಾಭಿಮಾನಿಗಳು ನಾಲ್ವರು ಉಪಾಯಗಳನ್ನು ಬಳಕೆಮಾಡುತ್ತಿರುವರು. ಹೀಗೆ ಬಾಕಿ ಬಿದ್ದ ೩೦ ಮಂದಿಗಳ ಪೈಕಿ ಯಾರೂ ಕೈ ಪ್ರತಿನಿಧಿಗಳು ಮಹಾತ್ಮರೆಡೆಗೆ ಕಳಿಸಿರುವರು. ಈ ಜಾರಿಯಲ್ಲಿ ೨೦ ಸಾವಿರಕ್ಕೆ ಮಿಕ್ಕಿ ರೂಪಾಯಿಗಳ ಬಾಕಿ ತೋರುತ್ತದಲ್ಲ. ರಾಷ್ಟ್ರೀಯ ಸಭೆಯು ಕೋರ್ಟು ಬಹಿಷ್ಕಾರವನ್ನು ಜಾಹೀರಪಡಿಸಿದ್ದರಿಂದ ಹೀಗೆ ಬಾಕಿ ಬೀಳಲು ಕಾರಣವಾಯಿತೆಂದು ಹೇಳುತ್ತಾರೆ. ಕೋರ್ಟು ಬಹಿಷ್ಕಾರವನ್ನು ರಾಷ್ಟ್ರೀಯ ಸಭೆಯು ಸಂಸ್ಥೆಗಳ ವಿನಾಕಿವಾಗಬೇಕೆಂದು ಕಲ್ಪಿಸಿದ್ದಲ್ಲ. ರಾಷ್ಟ್ರೀಯ ಸಭೆಯವರು ಮರ್ಯಾದಸ್ಥರು ಕೋರ್ಟು ಅಧಿಕಾರದ ಒತ್ತಾಯವು ಅವರಿಗೆ ಗರಜಿಲ್ಲ. ತಮ್ಮ ತಮ್ಮ ಸಾಲಗಳನ್ನು ಸಭ್ಯ ಪುರುಷರಿಗುಚಿತವಾಗಿ ಅವರು ಸಲ್ಲಿಸುವರೆಂಬ ಕಲ್ಪನೆಯಿಂದ ಬಹಿಷ್ಕಾರವು ಸೂಚಿತವಾಗಿತ್ತು. ಇದನ್ನು ತಿಳಿದು ರಾಷ್ಟ್ರೀಯ ಸಭೆಯ ಋಣವನ್ನೆಲ್ಲ ಸಾಲಗಾರರು ಮುಟ್ಟಿಸಬೇಕು.

✱✱✱✱

ಮಹಾತ್ಮರು ಬಿಹಾರ ಪ್ರಾಂತದ ಮಲ್ಯಾಚಕ್ಕ ಗ್ರಾಮಕ್ಕೆ ಹೋಗಿದ್ದರು. ಈ ಗ್ರಾಮವು ಪಾಟಣಾದಿಂದ ೨೦ ಮೈಲು ದೂರವಿದೆ. ಲೋಕಸಂಖ್ಯೆಯು ಸುಮಾರು ೧ ಸಾವಿರ ೪೦೦ ಕೈಲಾಟಗಳಿವೆ. ೩೨ ಮಂದಿ ನೇಕಾರರಿರುವರು. ನೇಕಾರರು ಈ ಲಾಟಗಳಿಂದ ತೆಗೆದ ನೂಲನ್ನೇ ಕೊಳ್ಳುತ್ತಿರುವರು. ಸಾಮಾನ್ಯವಾಗಿ ನೂಲುವವರಿಗೆ ತಿಂಗಳಿಗೆ ೨ ರೂಪಾಯಿ ದೊರೆಯುತ್ತದೆ. ನೇಕಾರರು ೧೫ ರೂಪಾಯಿ ದುಡಿಯುತ್ತಾರೆ. ಈ ನೂಲು ನೇಕಾರರಿಗೆ ಸಾಲುವದಿಲ್ಲ. ಅದರಿಂದ ನೆರೆಹೊರೆಯ ಗ್ರಾಮಗಳಲ್ಲೂ ಕೈಲಾಟಗಳ ಸ್ಥಾಪನೆಯಾಗಿದೆ. ಮಧುಬನಿ, ಕಡಸಿಯಾ, ಹಾತ್ರಿ, ಮಾಧೇಪುರ, ಪುಪ್ರಿ ಗ್ರಾಮಗಳಲ್ಲಿ ಕೂಡಿ ೬೦೦೦ ಕೈಲಾಟಗಳು ತಿರುಗುತ್ತಿವೆ. ಮಲ್ಯಾಚಕ್ಕದಲ್ಲಿ ಹುಟ್ಟದ ಖಾದಿಯ ವ್ಯವಹಾರ ಕೇಳಿರಿ. ೧೯೨೨ರಲ್ಲಿ ೬೨ ಸಾವಿರ ರೂಪಾಯಿ, ೧೯೨೩ರಲ್ಲಿ ೮೪ ಸಾವಿರ, ೧೯೨೪ರಲ್ಲಿ ೬೩ ಸಾವಿರ (ಹತ್ತಿ ಸಿಗಲಿಲ್ಲವಾದ್ದರಿಂದ ಆ ವರ್ಷ ಖಾದಿ ಹುಟ್ಟುವಳಿಯು ಕಡಿಮೆಯಾಯಿತು) ೧೯೨೫ನೇ ಇಸವಿಯ ೯ ತಿಂಗಳುಗಳಲ್ಲಿ ೧ ಲಕ್ಷ ರೂಪಾಯಿಗಳಿಗೆ ಮಿಕ್ಕಿ ಖಾದಿ ಹುಟ್ಟುವಳಿಯಾಗಿದೆ. ಉತ್ಕೃಷ್ಟ ಪ್ರತಿಯ ಖಾದಿಯು ತಯಾರಾಗಿರುತ್ತದೆಂದು ಮಹಾತ್ಮರು ಬರೆಯುತ್ತಾರೆ. ತಿಂಗತಿಂಗಳಿಗೆ ನೂಲು ಹೆಚ್ಚಾಗುತ್ತ ಬರಿಯುತ್ತ ನಡೆದಿದೆ.

✱✱✱✱

ಮೌ॥ ಶೌಕತ ಅಲ್ಲಿಯವರು ಅಖಿಲ ಭಾರತೀಯ ನೂಲುಗಾರರ ಸಂಘಕ್ಕೆ ಕಾನಪೂರ ರಾಷ್ಟ್ರೀಯ ಸಭೆಯ ಅಧಿವೇಶನದೊಳಗೆ ೩ ಸಾವಿರ ಸ್ವಂತ ನೂಲುವ ಮುಸಲ್ಮಾನ ಸಭಾಸದರನ್ನು ಸಂಪಾದಿಸುವ ನಿರ್ಧಾರ ಮಾಡಿರುವರು.

✱✱✱✱

ಮುಂಬಯಿಯಲ್ಲಿ ಕಳೆದ ೧೨ನೇ ತಾರೀಖಿಗೆ ಲೋಕಮಾನ್ಯ ತಿಲಕರ ಪುಣ್ಯತಿಥಿ ನಡೆಯಿತು. ಕೆಲವರು ಹೊಸಿಯವರು ಶಿರೋಮಣಿ ಲೋಕಮಾನ್ಯರಲ್ಲಿ ಆದರಭಾವದಿಂದ ಕಾಲಿಗೆ ೧೧೧ ಮೈಲಿನ ವೇಗದಿಂದ ನಡೆಸಿದರು. ಇದು ಇಷ್ಟೇ ಬಗ್ಗೆ ಸಾಧ್ಯವಾದ ಪರಮಾವಧಿಯ ವೇಗವೆಂದು ಹೇಳುತ್ತಾರೆ

ಶ್ರೀ ತುಲಸೀದಾಸ ರಾಮಾಯಣ

ಭಾಗಶಃ ಪ್ರಕಟವಾಗುತ್ತಿದೆ.

ಲೇಖಕ—ಶ್ರೀ॥ ದತ್ತಾತ್ರೇಯ ಕೃಷ್ಣ ಭಾರದ್ವಾಜ.

ವಾರ್ಷಿಕ ವರ್ಗಣಿ ರೂಪಾಯಿ ೫-೦-೦ (ಪ್ರತಿ ಪ್ರತಿಗೆ)
" " ೪-೮-೦ (ಸಾಮಾನ್ಯ ಪ್ರತಿಗೆ)

ಪತ್ತೆ:— ಅನಂತಾಶ್ರಮ, ಬಸವನಗುಡಿ, ಬೆಂಗಳೂರು.

ಧಾರವಾಡ ಕರ್ನಾಟಕ ಮಹಾವಿದ್ಯಾಲಯದಿಂದ ಹೊರಡುವ ಶಿಳಗನ್ನಡದ

ಸ್ವಧರ್ಮ ಮಾಸಪತ್ರಿಕೆ.

ಸಂಪಾದಕ— ಸುರೇಂದ್ರ ಶಿವರಾವ ದೇಸಾಯಿ

ಪ್ರಾಪಂಚಿಕ ಸಂದರ್ಭ ಪಾರಮಾರ್ಥಿಕ ಸಂದರ್ಭ ಕೂಡಿ ಬೆಳೆಯುವಂತೆ ಸ್ವಸಂಸ್ಕೃತಿಪ್ರೇಮ ಸ್ವದೇಶಪ್ರೀತಿ ಸ್ವಭಾಷಾಭಿಮಾನ ಸ್ವಧರ್ಮಾನುರಾಗ ಸ್ವಾರ್ಥತ್ಯಾಗ ಮುಂತಾದ ಗುಣಗಳನ್ನು ಉಜ್ವಲಗೊಳಿಸುವಂಥ ಲೇಖನ ಪ್ರಬಂಧ ಪ್ರವಚನ ನಿಬಂಧ ಜೀವನಚರಿತ್ರೆ, ಇತಿಹಾಸ ನಾಟಕ ಕಥೆ ಮತ್ತು ಕಾದಂಬರಿ ಮುಂತಾದ ಬರಹದಲ್ಲಿ ಜನಮಂಡಲಿಯ ಉನ್ನತಿಗೆ ಅವಶ್ಯವಾದ ಸರ್ವ ವ್ಯವಹಾರಗಳನ್ನೂ ಸ್ವಧರ್ಮ ದೃಷ್ಟಿಯಿಂದ ವಿಚಾರ ಮಾಡಿ ವಿವರಿಸುವದು.

ವಂತಿಗೆ ವರ್ಷಕ್ಕೆ ೩ ರೂ.

೫ ರೂ. ಮೇಲೆ ಕೊಟ್ಟವರು

ಪೋಷಕರೆಂಬ ಗೌರವಕ್ಕೆ ಪಾತ್ರರಾಗುವರು.

ವ್ಯವಸ್ಥಾಪಕ, "ಸ್ವಧರ್ಮ" ಧಾರವಾಡ

"ಲೋಕರಹಸ್ಯ"

ಈ ಕನ್ನಡ ಮಾಸ ಪತ್ರಿಕೆಯಲ್ಲಿ ವ್ಯಾಪಾರಸ್ಥರಿಗೆ ವ್ಯಾಪಾರದ ವಿಚಾರ, ರೈತರಿಗೆ ಕೃಷಿಯ ಉತ್ಕೃಷ್ಟ ಮಾರ್ಗಗಳು, ಸ್ತ್ರೀಯರಿಗೆ ಗೃಹಕೃತ್ಯದ ವಿಚಾರಗಳು, ಬಡವರಿಗೆ ಹಣ ಸಂಪಾದನೆಯ ಸುಲಭ ಮಾರ್ಗಗಳು, ರಸಿಕರಿಗೆ ವಿನೋದ ವಿಚಾರಗಳು, ಪ್ರತಿಯೊಬ್ಬರಿಗೂ ದೇಶಾಂತರಗಳ ಬಿಕ್ಕಟ್ಟಿನ ವಿಚಾರಗಳು, ವೈದ್ಯ ಭಾಗಗಳು, ಜ್ಯೋತಿಷ್ಯ, ಕಾನೂನು, ವೇದಾಂತ, ಕಾದಂಬರಿಗಳು, ಗೋಪಾಲನೆ, ಕೈಗಾರಿಕೆಗಳು, ವೃತ್ತಾಂತಗಳೇ ಮುಂತಾದ ವಿಷಯಗಳೆಲ್ಲವೂ ಪ್ರಕಟವಾಗುತ್ತವೆ. ಪತ್ರಿಕೆಯ ಪ್ರತಿಯೊಂದು ಪುಟದಲ್ಲೂ ಅಮೂಲ್ಯವಾದ ಗೂಢ ವಿಚಾರಗಳೇ ತುಂಬಿ ತುಳುಕುತ್ತವೆ ಪ್ರತಿ ಮಾಸವಷ್ಟೂ ೬೦ ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೩—೮—೦. ಮಾತ್ರ.

ಮಾದರಿ ಸಂಚಿಕೆಗೆ ಕ್ರಯ ೦—೫—೦.

ಮಾದರಿ ಸಂಚಿಕೆಗಳನ್ನು ಪುಕ್ಕಟೆಯಾಗಿ ಕೊಡುವುದಿಲ್ಲ.

ಹಾಕಿದ ಹಣವನ್ನು ನಷ್ಟ ಮಾಡದೆ, ಹಾಕಿದ ರೂಪಾಯಿ ಇದ್ದಕ್ಕಿದ್ದ ಹಾಗೆಯೇ ತಿಂಗಳಿಗೆ ೧೦೦ ರೂ. ಗಿಂತ ಹೆಚ್ಚಾಗಿಯೇ ಹಣ ಸಂಪಾದನೆ ಮಾಡುವ ರೀತಿಯನ್ನು ತಿಳಿಯುವ ಬಗ್ಗೆ ಒಂದಾಣೆ ಸ್ಟಾಂಪು ಸಮೇತ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,

"ಲೋಕರಹಸ್ಯ"

ವೀರರಾಜೇಂದ್ರ ಪೇಟೆ, ಕೊಡಗು,

ನವಯುಗ.

ಈ ನವಯುಗಕ್ಕೆ ಹಿಪ್ಪುವ ಪತ್ರಿಕೆ !

[ಬಂಟರ ಯಾನೆ ನಾಡವರ ಸ ... ಯಿಂದ ಮಂಗಳೂರಲ್ಲಿ ಸ್ಥಾಪಿತವಾದ ಕೆನರಾ ಛಾಪಖಾನೆಯಲ್ಲಿ ಪ್ರತಿ ಗುರುವಾರ ಪ್ರಕಟಗೊಳ್ಳುತ್ತದೆ.]

ವಾರಪತ್ರಿಕೆಗಳಲ್ಲಿ ಇರಬೇಕಾದ ಯಾವತ್ತು ಸಲ್ಲಕ್ಷಣಗಳು ಇದರಲ್ಲಿವೆ !

ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ರೈತರಿಗೂ, ವ್ಯಾಪಾರಸ್ಥರಿಗೂ ತಕ್ಕಂತಹ ಲೇಖಗಳೂ, ಅನುಭವಗಳೂ, ವರ್ತಮಾನಗಳೂ ಮನೋರಂಜಕವಾದ ಕಥೆ, ಹಾಸ್ಯರಸಭರಿತವಾದ ಇತರ ವಿಷಯಗಳೂ, ಇವೆ.

ವರ್ಷಕ್ಕೆ ಚಂದಾ ರೂ. ೩-೪-೦ ಮಾತ್ರ.

ಮಾದರಿ ಸಂಚಿಕೆಗೆ ಬರೆದುಕೊಳ್ಳಿರಿ.

ಜಾಹೀರಾತುಗಳ ದರ ಸುಲಭ: ಕೈಕರೇ ಕೆಟ್ಟಾಗಿ ಓದುವ ಈ ವಾರಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಿರಿ.

ವಿಳಾಸ:—

ಮೆನೇಜರ "ನವಯುಗ"

ಮಂಗಳೂರು.

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತ್ತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ ಚಲೋ ಆಹಾರ ದೊರೆಯದೆ ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು. ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ರೋಗಗಳು, ಅಜೀರ್ಣ, ತಲೆಶೂಲಿ ಭಸ್ಮಕನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನ ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತ್ತದೆ,

ಒಮ್ಮೆ ಪರೀಕ್ಷೆ ನೋಡಿ

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೨—೦—೦

ಏಜಂಟರು.— ವಿಕ್ಟೋರಿಯಾಲ ಏಜನ್ಸಿ,

ಪ್ರಿನ್ಸೆಸ ಸ್ಟ್ರೀಟ,

ನಾವು ಎಲ್ಲ ನಮೂನೆಯ, ಖಾತ್ರಿಯ ಉತ್ತಮ ಕನ್ನಡಕ

ಗಳನ್ನ ಯೋಗ್ಯ ಕಿಮ್ಮತಿಗೆ ತರಿಸಿಕೊಡುವೆವು ಪರ ಊರಿನ ಗಿರಾಕರು ಯಾವ ನಮೂನೆಯ ಕಣ್ಣುಗಳು ಬೇಕೆಂಬದನ್ನು ತಿಳಿಸಬೇಕು. ಮತ್ತು ಆರ್ಡರಿನ ಸಂಗಡ ೧ ರೂಪಾಯಿ ಮುಂಗಡ ಕಳಿಸಿದಲ್ಲಿ ಬೇಕಾದ ನಮೂನೆಯ ಕಣ್ಣುಗಳು ದೊರಕುವವು ಅನುಭವದಿಂದ ಖಾತ್ರಿಯಾಗುವದು.

ಆಪಟೇ ಸನ್ಸ,
ಕನ್ನಡಕ ವ್ಯಾಪಾರಿಗಳು, ಮಾರುತಿ ಪೇಟ
ಕಾರವಾರ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬಿ ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯುಳ್ಳಿ, ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಹೇಳಲ್ಪಟ್ಟ [illegible] ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚ[illegible] ವಿ[illegible] ಎಲ್ಲವೂ ಪರಿಮಳವಾಗುವದು, ಇದನ್ನು ಅನೇಕ ಪ್ರಭುಗಳು ತಮ್ಮ ಗರುಪಸ್ಥಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ [illegible] ಕಳಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-[illegible] ಡಜನ್ ೧ ಕ್ಕೆ ರೂ ೩-೮-೦ ವ್ಹಿ. ಪಿ. ೦-೮-[illegible]
ದಯಮಾಡಿ ನಿಮ್ಮ [illegible] ಅಡ್ರೆಸ್ಸ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ—ಗುರುಬಸವ ಅಂಡ್ ಕಂಪನಿ [illegible], ಮದರಾಸ

ನಿಶೇಷ] **ಅನುಭವಸಿದ್ಧ** ಪಥ್ಯವಿಲ್ಲ.

ವನೌಷಧಿಮೂಲಿಕೆಗಳು

ವಾಯುದುಮ್ಮಾನ (ನೆಮೋನಿಯಾ) ವಾಂತಿಭ್ರಾಂತಿ (ಕಾಲರಾ) ಅರ್ಧಾಂಗವಾಯು (ಪೆರಾಲಿಸಿಸ್) ಹುಚ್ಚು ನಾಯಿ ಕಡಿತ, ಸರ್ಪಸುತ್ತು, ಹೊಟ್ಟೆಯಲ್ಲಿ ಕ್ರಿಮಿ ವಿಷಹಾಕಿದ್ದು (ಕೈಮದ್ದು) ವಗೈರೆ ರೋಗಗಳಿಗೆ ಒಂದೆ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು ಇವು ಬಹುಕಾಲದಿಂದ ಅನುಭವ ತಕ್ಕೊಂಡು ಹಾಗು ಪ್ರತಿನಿತ್ಯ ಈಕಡೆಗೆ ಬಳಕೆಯಲ್ಲಿದ್ದ ಖರ್ಚಿನ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು ಕಾಲರಾ ಔಷಧಿಗಳ ದ್ರಾವಕ (Tincture) ಸಹ ಆಗಾವು ಸೂಚಿಸಿದರೆ ಕಳುಹುವೆವು.

ವಾಯುದುಮ್ಮಾನದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ಕ್ಕೆ ೦-೩-೦
ಕಾಲರಾದ ಬಗ್ಗೆ " " " ೦-೩-೦
ಅರ್ಧಾಂಗ ವಾಯುವಿನಬಗ್ಗೆ
೧ ಇಸಮಿಗೆ ಸಾಲುವಷ್ಟು ೧ ಶೇರು .. ೧ [illegible]-೦
ಪ್ರಕೃತಿ ತಿಳಿಸಬೇಕು.
ನಾಯಿ ಕಡಿತದಬಗ್ಗೆ ... ೦ ೪ ೦
ಸರ್ಪಸುತ್ತಿನ ಬಗ್ಗೆ ... ೦ [illegible]
ಹೊಟ್ಟೆಯಲ್ಲಿ ಕ್ರಿಮಿ ಔಷಧಿ ಬಿದ ಬಗ್ಗೆ
ತೊಲೆ ೧೦ ಕ್ಕೆ ೦-೮-೦.
ರಕ್ತಶುದ್ಧಿ ವ ಮಲಶೋಧನೆ ಬಗ್ಗೆ
ಮೂಲಿಕೆ ರಾತ್ಲ ಕ್ಕೆ ೧-೦-೦
ಮೋರಾವಳಾ (ನೆಲ್ಲಿಕಾಯಿ ಗುಳುಂಬ)
ರಾತ್ಲ ೧ ಕ್ಕೆ ೧ ೦-೦

ರಾತುಗಟ್ಲೆ ಯಾ ಅದಕ್ಕೂ ಹೆಚ್ಚು ತರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು.
ಟಪಾಲ ಖರ್ಚು ಪ್ರತ್ಯೇಕ ವಿಶೇಷ ಮಾಹಿತಿ ಪತ್ರ ದ್ವಾರಾ. ಅನುಪಾನಪತ್ರ ಔಷಧಿ ಸಂಗಡ

ಎನ್. ಜಿ. ಹೆಗಡೆ, ಮಾಸ್ತೇರಿ,
ಪೋಸ್ಟ—ಬಂಕಿಕೊಡ್ಲ ಜಿ ಉತ್ತರ ಕಾನಡಾ

ಕಿರ್ಲೋಸ್ಕರ ನಾಗಗಳು.

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಕಬ್ಬಿನ ಗಾಣಗಳೆಂದರೆ--

೧. ಕಿರ್ಲೋಸ್ಕರ [illegible] ೩. 'ಕಿಸಾನ' ೩. 'ಕಮಾಲ ಚರಕ'

ಇವುಗಳಲ್ಲಿ ಮೊದಲಿನ ಎರಡು ಗಾಣಗಳ ಬಗ್ಗೆ ಕರ್ನಾಟಕಸ್ಥರಿಗೆ ಗೊತ್ತುಂಟು. ಮೂರನೆಯದಾದ ಕಮಾಲಗಾಣದ ಬಗ್ಗೆ ಬರೆಯುವದೆಂದರೆ ಇದು ಗಂಟೆಯೊಂದಕ್ಕೆ ೧೨೦೦ ಪೌಂಡ ಕಬ್ಬು ನುರಿಸುವದು. [illegible] ರಸಪ್ರಮಾಣವಿರುವದು.
ಕಬ್ಬಿನ ಸಂಗತಿಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ನಾವು ಕಿರ್ಲೋಸ್ಕರ ವಾರ್ತೆ ಎಂಬ ತಿಳಿಗನ್ನಡ ಮಾಸಪತ್ರಿಕೆಯನ್ನು ಕರ್ನಾಟಕ ತರುಣರ ಉನ್ನತಿಗೋಸ್ಕರ ಪ್ರಕಟಿಸುತ್ತಿರುವೆವು
ವಾರ್ಷಿಕ ಚಂದಾ ೧ ರೂಪಾಯಿ ಮಾದರಿ ಸಂಚಿಕೆ ಪುಕ್ಕಟೆ

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು, ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

Reg No B. 1270 Monday, October 28th 1925

ವರ್ಷ ೧೦. ಸಂಚಿಕೆ ೪.

ಕಾನಡಾವೃತ್ತ.

THE KANARA NEWS.

ನರಪತಿಹಿತಕರ್ತಾ द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ವಾರ್ಷಿಕ ವರ್ಗಣಿ.
ಮುಂಗಡ ಅಗಾವು
ರೂಪಾಯಿ 2-4-0.
ಮುದ್ದತರಿಯಿಂದ
ರೂ. 3-0-0
ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಸಂಚಿಕೆಗೆ 0-1-0.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ವ್ಯಾಖ್ಯಾನ (೧೫ ಎಮ್ ಅಗಲ) ೫ ಸಾಲುಗಳವರೆಗೆ ರೂ. 1-0.
ಆ ನಂತ್ರ ಪ್ರತಿಸಾಲಿಗೆ 0-2-0.
ಹತ್ತಿಂಗಳ ಸಾಲು ಎಷ್ಟು ಹೆಚ್ಚಿರುವದೋ ಆ ಮಾನದಿಂದ ಅಷ್ಟುಸಾಲುಗಳು ಹಿಡಿಯಲ್ಪಡುವವು.
ಖಾಸ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವದು

ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೨೬ ಮಾಹೆ ಅಕ್ಟೋಬರ ಸನ್ ೧೯೨೫ ನೇ ಇಸವಿ

हिंदुस्थानांतील रहिवाशांस ज्याप्रमाणे हिंदुस्थानची हवा त्याप्रमाणेच हे औषध हिंदुस्थानांतील लोकांस ज्यास्त फायदेशीर आहे.

द्राक्षासव- ओड रतली किंमत २ रुपये;

रामबाण औषधे
सर्दी घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

पिण्यास रुचिकर.
क्याटलाग मागवा,
.....डु फार्मास्युटिकल वर्क्स लिमिटेड, मुंबई नं. १३

ಅನುಭವಸಿದ್ಧವಾದದ್ದು! ಅನುಭವಸಿದ್ಧವಾದದ್ದು!
ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ
ಔಷಧಿಯ ಕ್ರಯ ವಾಪಸು.
ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ
[ರಿಜಿಸ್ಟರ್ಡ] ಅಗಸ್ತ್ಯ [ನಂಬರ ....]
ಮನ್ಮಥಚಿಂತಾಮಣಿ ಲೇಹ
ರಿಜಿಸ್ಟರ ಆದದ್ದು
ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳಿಗೆ ಗುಣಕಾರಿಯಾದದು. ಮೋಹವಿಕಾರವಿದ್ದರೋಗಿಗೂ, ನಿದ್ರೆಯಿಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿ ಸಜ್ಜನರಿಗೂ ಉಪಯೋಗವುಳ್ಳ ಪರಮಾನಂದ ಔಷಧಿ
ಸೇರು ನಾಲ್ಕ್ತಂಟೆ ಪ್ರಿಯತಮಕ್ಕೆ ಸೇವಿಸುವುದು.
1 ಸೇರು ಡಬ್ಬಿ ಒಂದಕ್ಕೆ 3—0—0
½ ಸೇರು ಡಬ್ಬಿ ಒಂದಕ್ಕೆ 1—9—0
ವ್ಹಿ. ಪಿ. ಖರ್ಚು ಪ್ರತ್ಯೇಕ. ವಿಳಾಸ ಮಾಡಿ ಬರೆಯಬೇಕು.
ಕೆ:—ದೇವಣ್ಣ ನಾರಾಯಣ ಸೇಟ್, ಸರಾಫ್, ಗೋರೆಹಳ್ಳ, ಮಂಗಳೂರು, (ದ. ಕ.)

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, *B. A.*

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.
ರತ್ನಾಭರಣ ವ್ಯಾಪಾರಿ, ಕುಮಟಾ.

धातु क्षीणता व कमजोरपणा यांसाठी

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात. पचनें शक्ति सुधारून परसाकडे साफ होतें. त्याचप्रमाणें प्रत्येक प्रकारची अशक्तता दूर होऊन शरीर तेजदार व बलवान होतें. किं. ४० गोळ्यांच्या डबीस रु. १.

रमण विलासिनी गोळ्या. रात्रौ फक्त १ गोळी दुधाबरोबर खाल्याने इच्छेप्रमाणें वीर्यस्तंभन होतें. किं. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पाऊन खरें पुरुषत्व प्राप्त होतें. किं. डबीस रु. १.

कुमटा एजंट — माधव सांतप्पा शेणवी बेलेकेरी.
राजवैद्य नारायणजी केशवजी ब्रँचः— ३९३ काळबादेवी रोड मुंबई नं २.

ತ್ವರೆ ಮಾಡಿರಿ ! ತ್ವರೆ ಮಾಡಿರಿ !!

ಜಾಹಿರಾತುದಾರರು ತ್ವರೆಮಾಡಬೇಕು!

ಬಗ್ಗೋಣ ರಾಮಾ ಶಿವಣ್ಣ ಪಂಡಿತರಿಂದ ದೃಗ್ಗಣಿತ ಪ್ರಕಾರ ಗುಣಿಸಿ ಪರಿಶೋಧಿಸಲ್ಪಟ್ಟ

ಕ್ಷಯ ಸಂವತ್ಸರದ ಪಂಚಾಂಗವು ಅಚ್ಚಿನಲ್ಲಿದೆ!

ಪಂಚಾಂಗದಲ್ಲಿ ಜಾಹಿರಾತು ಕೊಡುವವರಿಗೆ ಏರ್ಪಾಟು ಮಾಡಿದೆ!

ಈ ಪಂಚಾಂಗವು ಕಾನಡಾ ಜಿಲ್ಹೆಯೊಳಗಿನ ಹಳ್ಳಿ ಹಳ್ಳಿಗಳಲ್ಲಿಯೂ, ಸಾಗರ-ಶಿವಮೊಗ್ಗಾ ಮೊದಲಾದ ಮೈಸೂರು ಪ್ರಾಂತದಲ್ಲಿಯೂ ಪ್ರಸಿದ್ಧವಿದೆ. ಜಾಹಿರಾತು ಕೊಡಲಿಚ್ಛಿಸುವವರು ಬರುವ ಅಕ್ಟೋಬರ ತಾರೀಖು ೩೧ ರೊಳಗೆ ಈ ಕೆಳಗಿನ ವಿಳಾಸ ಮೇಲೆ ಪತ್ರವ್ಯವಹಾರ ಮಾಡಿ ದರ ವಾರ ತಿಳಕೊಳ್ಳಬಹುದು.

ವಿಳಾಸ—ಮ್ಯಾನೇಜರ, "ಸ್ವಾರ ಅವ ಕೆನರಾ ಪ್ರೆಸ್" ಕುಮುಟಾ (ಉ. ಕಾ)

ಇನ್ಮುಡಿ 'ಗೋಚರಾವು.

ಉಪ್ಪಿನಪಟ್ಟಣ ಬಂಡಿವಾಳ ಪತ್ತಿನ ರೈತರು ನಮಗೊಂದು ಪತ್ರ ಬರೆದು ಜಾಹೀರಪಡಿಸಿಕೊಳ್ಳುವದೇನೆಂದರೆ:—

ನಮ್ಮ ಹಳ್ಳಿಗಳಲ್ಲಿ ದನಗಳಿಗೆ ಮೇವು ಏನೇನೂ ಇರುವದಿಲ್ಲ. ಗ್ರಾಮಗಳಲ್ಲಿ ಸರಕಾರದ ಜಂಗಲಿದೆ, ಆದರೆ ಈ ಜಂಗಲಿನಲ್ಲಿ ಮುಳ್ಳು ಹಿಂಡಿಗಳೇ ವಿಶೇಷ ಇರುವದರಿಂದ ಹುಲ್ಲಿನಲ್ಲಿ ಒಂದು ಮರ ಸಹ ಕಾಣುವದು ಅಪರೂಪ. ಆದರೂ ಅಲ್ಲಿ ನಮ್ಮ ದನಗಳಿಗೆ ನಿಯಮಿತ ಗೋಚರಾವು ಕೊಡಬೇಕಾಗಿತ್ತು. ೪-೫ ವರ್ಷ ಹಿಂದೆ ನಾವು ಸರಕಾರಕ್ಕೊಂದು ಬಿನ್ನಹ ಮಾಡಿಕೊಂಡೆವು. ನಮ್ಮ ಗ್ರಾಮಗಳಲ್ಲಿ ಮೇವು ಇರುವದಿಲ್ಲ. ಆದದರಿಂದ ನಮ್ಮಿಂದ ಗೋಚರಾವು ಫೀ ವಸೂಲಾಗತಕ್ಕದ್ದಲ್ಲ, ಎಂಬದಾಗಿ ಕೇಳಿಕೊಂಡೆವು. ಸರಕಾರದವರು ನಮ್ಮಿಂದ ಆ ಬಗೆಯ ಗೋಚರಾವು ಫೀ ವಸೂಲಿಯನ್ನು ತಹಕೂಬ ಮಾಡಿದ್ದರು. ಮತ್ತೆ ತ್ರುಟಿಯಾಗಿ ಬಾಲಕ್ಕೊಂದು ಹವಲಿಯಂತೆ ಗೋಚರಾವು ವಸೂಲ ಮಾಡಹತ್ತಿರುವರು.

ಈ ಪದ್ಧತಿಯಲ್ಲಿ ಒಂದು ಕ್ರಮವಿತ್ತು. ಒಬ್ಬ ರೈತನ ದನಗಳು ಎಷ್ಟು ಇರಲಿ; ಆತನು ಎಲ್ಲ ದನಗಳಿಗೆ ಕೂಡಿ ಒಂದು ಗೋಚರಾವ ಫೀ ಸಲ್ಲಿಸಿದರೆ ಸಾಕಾಗುತ್ತಿದ್ದಿತು. ಅದರಂತೆ ಈ ವರ್ಷವೂ ನಮ್ಮ ಗ್ರಾಮದ ರೈತರು ಗೋಚರಾವ ಫೀಯನ್ನು ವಸೂಲುಕೊಟ್ಟು ಪಾಸು ಪಡೆದರು ಮತ್ತು ತಮ್ಮ ತಮ್ಮ ದನಗಳನ್ನು ವಾಡಿಕೆಯಂತೆ ಮೇವಿಗಾಗಿ ಅನುಕೂಲವಿದ್ದ ಬೇರೆ ಗ್ರಾಮಗಳಲ್ಲಿ ಅಟ್ಟಿದರು.

ಹೀಗಿರುವಲ್ಲಿ ಈ ವರ್ಷ ಹೊಸ ಹುಕುಮೊಂದು ಹೊರಟಿದೆ. ಅದು ಸರ್ಕ್ಯುಲರು ನಂಬರು ೪೨ನೇದು. ಮುಂಬಯಿ ಭಾಗದೊಳಗಿನ ಎಲ್ಲ ಫಾರೆಸ್ಟ ಅಮಲದಾರರಿಗೆ ಈ ಸರ್ಕ್ಯುಲರಿನ ದ್ವಾರಾ ತಿಳಿಯಪಡಿಸಿದ್ದೇನೆಂದರೆ— ಒಂದು ರೇಂಜಿನಲ್ಲಿ ಗೋಚರಾವು ಫೀ ಆ ರೇಂಜಿನಂತೆ ಕೊಟ್ಟ ದನಗಳನ್ನು ಮೇವಿನ ಬಗ್ಗೆ ಬೇರೆ ರೇಂಜಿಗೆ ಒಯ್ದಲ್ಲಿ ಅಂಥ ದನಗಳಿಗೆ ಆ ಬೇರೆ ರೇಂಜಿನಲ್ಲಿ ಪುನಃ ಅದರ ಗೋಚರಾವು ಫೀ ವಸೂಲ ಮಾಡತಕ್ಕದ್ದು. ಈ ಹುಕುಮಿನಂತೆ ರೈತರಿಂದ ಬಾಲಕ್ಕೆ ಪುನಃ ೨ ಆಣೆಯಂತೆ ಗೋಚರಾವು ವಸೂಲ ಮಾಡಿದರು. ರೈತರು ತಮ್ಮ ತಮ್ಮ ಪಶುಗಳನ್ನು ಒಯ್ದು ಆ ರೇಂಜುಗಳ ಮೇಲೆ ಜಂಗಲ ಅಧಿಕಾರಿಗಳಿಂದ ಕಿರಿ ಸಹ ಪಡಕೊಂಡಿರುವರು. ಈ ಬಗ್ಗೆ ಜಿಲ್ಲಾಧಿಪರಿಗೆ ತಾರೀಖು ೪-೭-೧೯೨೫ನೇಯದಕ್ಕೆ ಅರ್ಜಿ ಮಾಡಿ ಎಲ್ಲ ಹಕೀಕತವನ್ನು ನಿವೇದಿಸಿಕೊಂಡಿರುವರು.

ಈ ಸರ್ಕ್ಯುಲರದ ಸುದ್ದಿ ರೈತರಿಗೆ ತಿಳಿದ ಕೂಡಲೆ ಈ ಸರ್ಕ್ಯುಲರು ಬಂದು ಎಷ್ಟು ದಿವಸಗಳಾದವು; ಈ ಮುಂಚೆಯೇ ರೈತರಿಗೆ ತಿಳಿದಿದ್ದರೆ, ಬೇರೆ ಬೇರೆ ರೇಂಜುಗಳಲ್ಲಿ ದನ ಅಟ್ಟುವದಕ್ಕೆ ಅಲ್ಲಕ್ಷ್ಯದಿಂದ ರೈತರು ಪಾಪ ಹೆಗೆಯುತ್ತಿದ್ದರು. ಆದರೆ ಈ ಹುಕುಮು ಇನ್ಮುಡಿ ಗೋಚರಾವ ವಸೂಲಾಗುವ ೪-೫ ದಿವಸಗಳ ಪೂರ್ವದಲ್ಲಿಯೇ ಹೊರಟಿರುವದಾಗಿ ತಿಳಿಯುತ್ತದೆ. ಹೀಗೆ ಸರ್ಕ್ಯುಲರುಗಳನ್ನು ಹೊರಡಿಸುವದು ಅನ್ಯಾಯವು. ಒಮ್ಮೆ ಗೋಚರಾವು ತೆರುವದೇ ಕಷ್ಟ, ಅದರೊಳಗೆ ಇನ್ನೊಮ್ಮೆ ತೆರಲು ಹಚ್ಚುವ ಹುಕುಮುಗಳನ್ನು ಹೊರಡಿಸಿ, ಅವನ್ನು ಅಮಲಿನಲ್ಲಿ ಒಮ್ಮೆಲೇ ತರುವದು ಮತ್ತೂ ಅನ್ಯಾಯಕರವು. ರೈತರ ಹಿತಚಿಂತಕರಾದ ಜಿಲ್ಲಾಧಿಕಾರಿಗಳು ಈ ವಿಷಯ ವಿಚಾರಿಸಿ ಹೆಚ್ಚು ವಸೂಲಾದ ಗೋಚರಾವನ್ನು ರಿಫಂಡು ಕೊಡಿಸಲಿಕ್ಕೆ ಹುಕುಮು ಮಾಡಬೇಕಾಗಿ ರೈತರು ಬಿನ್ನೈಸುತ್ತಾರೆ. ಜಿಲ್ಲೆಯ ಕೌನ್ಸಿಲ ಪ್ರತಿನಿಧಿಗಳಾದ ಶ್ರೀ ಕರ್ಕಿಯವರು ಈ ವಿಷಯ ಜಿಲ್ಲಾಧಿಪರೊಡನೆ ಮಾತುಕಥೆ ನಡಿಸಿ, ಬಡ ರೈತರನ್ನು ಕಾಯುವರೇನು?

ಅರ್ಕೇರಲ್ಲಿ ಭೂತ ಪಿಶಾಚಿಗಳ ಭಯಂಕರ ಬಾಧೆ!

ನಾಗೇರ ಶಾಂತಿಯ ಸಮಾರಂಭ!!

ದೆವ್ವಗಳ ದುರಾಗ್ರಹ!!!

ತಿಂದುಂಡು ಸಂತುಷ್ಟರಾಗಿ ಸುಖದಿಂದಿರುವ ಸೇವಕರು ರಾಜಮಾನಸಿಗೆ ವಿಧೇಯರಾಗಿರುವರು. ಅದರಂತೆ ಶ್ರೀ ಬ್ಯಾರಿಸ್ಟರ ಕೇಳಕರರ ಭೂತ-ಪಿಶಾಚಗಳಿಗೆ ಸಾಕಷ್ಟು ರಕ್ತಪಾನವು ಸಿಗದಿದ್ದರೆ, ಅವು ಅವರ ಮಾತಿಗೆ ಮಾನಕೊಡದೆ ಸಿಟ್ಟಿಗೆದ್ದು ತಮ್ಮ ಹಸಿವೆಯನ್ನು ಹಿಂಗಿಸಪಡಕ್ಕಾಗಿ ಅವರ ಸಾಗರ ದನಕರುಗಳ ಪ್ರಾಣವನ್ನು ಹೀರಿಕೊಳ್ಳುವವು [illegible] ಜನರ [illegible] ಭೂತಪಿಶಾಚಿಗಳ [illegible] ದಿಂದ [illegible] ಗರಿದ ದನಗಳ [illegible] ಹತ್ತಲು [illegible] ಗಡಿಶಾಂತಿಯನ್ನು ಮಾಡಿಸಬೇಕೆಂದು ಶ್ರೀ ಬ್ಯಾರಿಸ್ಟರ ದೇವಸ್ಥಾನದ ಮೊಕ್ತೇಸರರ [illegible] ಕೇಳಿಕೊಂಡರು. ಆದ್ದರಿಂದ ಸಾರ್ವಜನಿಕ ಭಿಕ್ಷೆಯ ಸಲುವಾಗಿ [illegible] ಜನರು [illegible] ಬರೆದರು [illegible] ಮೊದಲೇ ಸೂಚನೆ ಕೊಟ್ಟಂತೆ [illegible] ದಿನ ಬಂದಿಲ್ಲ. ಈ ರೀತಿಯಲ್ಲಿ ನಿರಾಕಾರವಾದರಿಂದ ಲೋಕ ಕಲ್ಯಾಣಾರ್ಥವಾಗಿ [illegible] ದಿವಸಗಳಲ್ಲಿ [illegible] ಕೋಳಿಗಳ ಕೊಲೆ [illegible] ಯೋ [illegible] ಗಳನ್ನು ಕಡಿದು [illegible] ಗಡಿಶಾಂತಿಯು [illegible] ಸಿದ್ಧ [illegible] ಮಾಡಿಕೊಂಡ [illegible]

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು ೬೦ ೭೦ ವರ್ಷದ ಮುದುಕರ ಕಾಮವಿಕಾರ ತರುಣರಂತೆ ಪ್ರವರ್ಧಮಾನವಾಗುವದು (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೋ ದಿವಸದ ತಾಪ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತು ೪—೦—೦ ಮೂರು ಬಾಟಲಿಗಳನ್ನು ಒಮ್ಮೆ ತರಿಸಿದವರಿಗೆ ಕಳಿಸುವೆವು. ಅಂದರೆ ಟಪಾಲಖರ್ಚ ಹೆಚ್ಚು ಬೀಳುವದಿಲ್ಲ. ಹನ್ನ ಬಾಟಲಿಗಳ ಕಿಮ್ಮತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಕೊಡುವರು. ಟಪಾಲ ಖರ್ಚ ಬೇರೆ ಬೀಳುವದು. ಹೆಚಂಟರ ಕಡೆಯಿಂದ ೧ ಬಾಟ್ಲಿಗೆ ೧—೦—೦ ೩ ಬಾಟ್ಲಿಗೆ ೩—೦—೦ ಡಜನಿಗೆ ೧೩—೦—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ ಪ್ರೋ. ನಿಪ್ಪಾಣಿ ಜಿ ಬೆಳಗಾಂವ

ವೈಶ್ಯ ಪರಿಷಧದ ಮೊದಲನೇ ಅಧಿವೇಶನವು.

ಈ ಪರಿಷಧವು ಗೋವೆ ಪ್ರಾಂತದಲ್ಲಿ **ಶ್ರೀ ಸಂಸ್ಥಾನ ಧಾರಗಳ** ವಸ್ಥಾವಸೆ-ಹತ್ತರ ದ ನಾಕಾಳ ಸೋಟಿಯಲ್ಲಿ ಕೂಡಿಸುವದು, ನಿಶ್ಚಯ ಮಾಡಿರುತ್ತದೆ. ಈ ಪರಿಷಧವು ಯಶಸ್ವಿ ಯಾಗುವದರ ಸಲುವಾಗಿ ನಮ್ಮ ಪಕ್ಷಿಯ ಪ್ರಚಾರದ ಸಲುವಾಗಿ ಈ ಪರಿಷಧ ಧಂಡಿನ ಸಲುವಾಗಿ ಮಹಾರಾಷ್ಟ್ರ-ಕೊಂಕಣ ಪ್ರಾಂತಗಳಲ್ಲಿ ಕೆಲವು ಜನರನ್ನು ಕಳಿಸುತ್ತೇವೆ. ಅದರಂತೆ ಉತ್ತರ ಕರ್ನಾಟಕ ವ ದಕ್ಷಿಣ ಕರ್ನಾಟಕದಲ್ಲಿ, ಅಂದರೆ ಕೊಲ್ಹಾಪೂರ, ಶಹಾಪೂರ, ಚಂದಗಡ, ಅಜರೆ ನಂದಗಡ, ಹಳಿಯಾಳ, ಮುಂಡಗೋಡ, ಕಾರವಾರ, ಕುಮಟಾ, ಶಿರಸಿ, ಹೊನ್ನಾವರ, ಕುಂದಾಪುರ, ಮಂಗಳೂರ, ಕೋಟೆ ಪೆಡ್ಡೆರ ಹಾಯಿದ್ ಶ್ರೀಯುತ ಗೋವಿಂದ ರಾವ ಸೇಟ ಬಾಂದೇಕರ ಸಾ॥ ನಂದಗಡ, ಶ್ರೀಯುತ ಕೃಷ್ಣಾಜಿ ಶಿವರಾವು ಡುಬಳೆ, ಸಾ॥ ಹಳಿಯಾಳ ವ ಶ್ರೀಯುತ ರಾಮಚಂದ್ರ ಪುರುಷೋತ್ತಮ ಖಲಪ ಸಾ॥ ಪಸ್ಥಾವಸೆ; ಈ ಪ್ರಕಾರ ಜನರು ಹೊರಟಿರುತ್ತಾರೆ ಅವರಿಗೆ ಯಾವತ್ತೂ ಜ್ಞಾತಿ ಬಾಂಧವರು ಮೇಲೆ ಹೇಳಿದ ಊರಿನ ಸಭ್ಯ ಗೃಹಸ್ಥರು ಸಹಾಯ ಮಾಡಬೇಕು. ಪರಿಷಧದ ಅಧ್ಯಕ್ಷ, ಸ್ವಾಗತ ಮಂಡಳದ ಅಧ್ಯಕ್ಷ, ಪರಿಷಧದ ತಾರೀಖು ಹಿಂದಿನಿಂದ ಪ್ರಸಿದ್ಧ ವಿನಂತಿ ಪತ್ರದಿಂದ ತಿಳಿಸಲಾಗುವದು. ತಿಳಿಸುವದರಲ್ಲಿ ಬಂದಿರುವ ಈ ಬಗ್ಗೆ ಯಾರಿಗಾದರೂ ಜಾಸ್ತಿ ಮಾಹಿತಿ ಬೇಕಾದರೆ ಈ ಕೆಳಗೆ ಬರೆದ ವಿಳಾಸದ ಮೇಲೆ ಪತ್ರವ್ಯವಹಾರ ಮಾಡಬಹುದು

ವೈಶ್ಯ ಪರಿಷಧದ ಆಫೀಸ,
ಪಸ್ಥಾವಸೆ-ಗೋವಾ

ತಮ್ಮ,
ವಾಮನ ಅನಂತ ಶೇಟ, ಖಲಪ
ಜನರಲ್ ಸೆಕ್ರೆಟರಿ.

ಗೌರೀಹುಣ್ಣಿಮೆಯಿಂದ ಹೊಸ ವರ್ಷ ಪ್ರಾರಂಭ.

ಸಚಿತ್ರ] **ಜಯಕರ್ನಾಟಕ** [ಮಾಸಪತ್ರಿಕೆ

ಸಂಪಾದಕ——ಆಲೂರ ವೆಂಕಟರಾಯರು.

ಇದರಲ್ಲಿ ವಾಙ್ಮಯಾತ್ಮಕ, ಸಾಹಿತ್ಯ, ಧಾರ್ಮಿಕ, ಸಾಮಾಜಿಕ, ಐತಿಹಾಸಿಕ, ಆರ್ಥಿಕ, ಇತ್ಯಾದಿ ವಿಷಯಗಳು ಬರುತ್ತವೆ. ಪ್ರಖ್ಯಾತ ಲೇಖಕರು, ಚಿತ್ರಕಾರರು, ನಾಟಕಕಾರರು ಲೇಖನ ಕಳಿಸುತ್ತಾರೆ. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳೂ ಇರುತ್ತವೆ. ಡೆಮಿ ಆಕಾರದ ೩೦ ಪುಟಗಳು. ವಾರ್ಷಿಕ ರೂ. ೫-೦-೦ ಮ್ಯಾನೇಜರ್, ಜಯಕರ್ನಾಟಕ, ಧಾರವಾಡ.

ಧಾರ್ಮಿಕ ಕರ್ನಾಟಕ ವಿದ್ಯಾಲಯದಿಂದ ಹೊರಡುವ

ತಿಳಿಗನ್ನಡದ **ಸ್ವಧರ್ಮ** ಮಾಸಪತ್ರಿಕೆ.

ಸಂಪಾದಕ— ಸುರೇಂದ್ರ ಶಿವರಾವ ದೇಸಾಯಿ

ಪ್ರಾಚೀನ ಸಂಸ್ಕೃತಿ ಪರಿಚಯ, ಸಂಸ್ಕೃತಿ ಬೆಳೆಯುವಂತೆ ಸ್ವಸಂಸ್ಕೃತಿಪ್ರೇಮ ಸ್ವದೇಶಪ್ರೇಮ ಸ್ವಭಾಷಾಭಿಮಾನ ಸ್ವಧರ್ಮಾನುರಾಗ ಸ್ವಾರ್ಥತ್ಯಾಗ ಮುಂತಾದ ಗುಣಗಳನ್ನು ಉಜ್ವಲಗೊಳಿಸುವಂತೆ ಕೀರ್ತನ ಪುರಾಣ ಪ್ರವಚನ ನಿಬಂಧ ಜೀವನಚರಿತ್ರೆ ಇತಿಹಾಸ ನಾಟಕ ಕಥೆ ಮತ್ತು ಕಾದಂಬರಿ ಮುಂತಾದ ರೂಪದಲ್ಲಿ ಜನಸಮುದಾಯದ ಉನ್ನತಿಗೆ ಅಗತ್ಯವಾದ ಸರ್ವ ವ್ಯವಹಾರಗಳನ್ನೂ ಸ್ವಧರ್ಮ ದೃಷ್ಟಿಯಿಂದ ವಿಚಾರ ಮಾಡಿ ವಿವರಿಸುವದು.

ಚಂದಾ ವರ್ಷಕ್ಕೆ ೩ ರೂ
೫ ರೂ ಮೇಲೆ ಕೊಟ್ಟವರು
ಪೋಷಕರೆಂಬ ಗೌರವಕ್ಕೆ ಪಾತ್ರರಾಗುವರು.
ವ್ಯವಸ್ಥಾಪಕ, "ಸ್ವಧರ್ಮ" ಧಾರವಾಡ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದ ಮುದ್ದನ್ನು ಯಾವ ಸ್ತ್ರೀಯು ತಾನೇ ವಾಂಛಿಸಲೊಲ್ಲಳು? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿ ಕೊಡಲು ನಮ್ಮ ಉಪಕರಣವಾದದ್ದೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅಪರೂಪ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪಾತ್ರಿಮವನ್ನು ಪತುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ತೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅದರ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ವೈಸರಾಯ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಒಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ, ಅನೇಕ ಸಾವಿರಾರು ಗೃಹಸ್ಥರು ಉಪಯೋಗಿಸಿ ಮಾಡಿದ ಪ್ರಮಾಣಪತ್ರಗಳೂ ದೊರಕಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0 ವ್ಹಿ. ಪಿ ಖರ್ಚ 0-14-0

ಅತಿ ಮನೋಹರವಾದ ಸುಗಂಧಿಯು!

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವಾಗಿ ಆರಿಸಿ ಪರೀಕ್ಷಿಸಿದ ಹೂವುಗಳಿಂದ ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾಗಿದ್ದು ಇದರಲ್ಲಿ ಮದಿರೆಯು (ಆಲ್ಕೊಹೋಲ್) ಸಂಪರ್ಕವಿಲ್ಲವು, ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಹಾಕುವದರಿಂದ ನಿಮ್ಮ ಹತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಿಂದ ಸೆಳೆದುಕೊಳ್ಳುವದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0

Address:- **The Anglo Indian Drug & Chemical Co,**
16, Market, **BOMBAY 2**

ವಿವಿಧ ಸಂಗ್ರಹ.

ಸಪ್ತ ಸಾಮಾಜಿಕ ಪಾತಕಗಳು.

ಡೆಂಡ ಗ್ರಿಫಿಥ್ಸ್‌ರವರು ಕೆಲವು ಗಾದೆಮಾತುಗಳನ್ನು (Crisp sayings) ರಚಿಸಿರುವರು. ಅವುಗಳನ್ನು ಮಹಾತ್ಮರಿಗೆ ಒಬ್ಬ ಸ್ತ್ರೀಯು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟಿಸಹೇಳಿರುವರು. ಸಾಮಾಜಿಕ ಪಾತಕಗಳು ಯಾವವೆಂದರೆ.—

೧. ತತ್ವಶೂನ್ಯ ರಾಜಕಾರಣ, (politics without principles)
೨. ಅನಾಯಾಸದ ದ್ರವ್ಯಸಂಗ್ರಹ, (wealth without work)
೩. ಮನಃಬಿಟ್ಟದ ಆನಂದ (pleasure without conscience.)
೪. ಶೀಲರಹಿತ ಜ್ಞಾನ, (knowledge without character)
೫. ನೀತಿಯಿಲ್ಲದ ವ್ಯಾಪಾರ, (commerce without morality.)
೬. ದಯಾ ಬುದ್ಧಿಯಿಲ್ಲದ ಶಾಸ್ತ್ರ, (science without humanity.)
೭. ತ್ಯಾಗವಿಲ್ಲದ ಪೂಜೆ, (worship without sacrifice.)

***

ಯಾವ ಅಪರಾಧವು ಅನೀತಿಕಾರಕವಲ್ಲ?

ಡೆಂಡ ಗ್ರಿಫಿಥ್ಸ್‌ರವರೇ ಈ ಕೆಳಗಿನ ಗಾದೆ ಮಾತುಗಳನ್ನು ರಚಿಸಿರುವರು. "ಸರಕಾರಿ ಕಾಯಿದೆಯು ಯಾವಾಗಲೂ (necessarily) ನೀತಿಯುಯುವದಲ್ಲ" "ಅಪರಾಧವು ಯಾವಾಗಲೂ ಅನೀತಿಯುಯುವದಲ್ಲ." "ಕಾಯಿದೆಬಾಹ್ಯ ವರ್ತನಕ್ಕೂ, ಅನೀತಿಯ ವರ್ತನಕ್ಕೂ ಬಹುಅಂತರವಿದೆ." "ಕಾಯಿದೆಬಾಹ್ಯ ವರ್ತನಗಳೆಲ್ಲವೂ ಅನೀತಿಯುಯುವಲ್ಲ; ಅನೀತಿಯ ಕೃತ್ಯಗಳೆಲ್ಲವೂ ಕಾಯಿದೆಬಾಹ್ಯಗಳಲ್ಲ." "ಒಬ್ಬ ಅಧಿಕಾರಸ್ಥನ ಹುಕುಮಿನಂತೆ ಅಂದಗಾಲಿಟ್ಟು ನಡೆಯುವದು ಕಾಯಿದೆಯ ಉಲ್ಲಂಘನವಾಗಬಹುದು; ಆದರೆ, ಅನೀತಿಯೆಂದು ಯಾರು ಹೇಳ್ಯಾರು? ಆದರೆ, ಅಂಬೆಗಾಲಿಟ್ಟು ಹೊಟ್ಟೆಯಮೇಲೆ ಹರಿದಾಡುವದಕ್ಕೆ ನಿರಾಕರಿಸುವನು ಕಾಯಿದೆಬಾಹ್ಯನಾದರೂ, ಉಚ್ಚ ಪ್ರತಿಯ ನೀತಿಯೆಂಬುದು ನಿಜವಲ್ಲೇನು?" "ಪ್ರಚಲಿತ ಸಾಮಾಜಿಕ ವ್ಯವಸ್ಥೆಯೇ ಅಪರಾಧಿಗಳ ಕಾರಖಾನೆಯು. ಸೈನ್ಯವೃತ್ತಿಯವನು (militalists) ಕೊಲೆಗಡಕನ ಬಳಗದವನು; ಮಳ್ಳ ಸಟ್ಟೆಯ ವ್ಯಾಪಾರ ಮಾಡುವವನು ಹಗಲುಗಳ್ಳನ ನೆಂಟನು." "ಅವುಯಿದೆಯಂತೆ ಕಳ್ಳನ್ಯಾರು? ಸಮಾಜಕ್ಕೆ ಗಣ್ಯತ್ವಪಿಲ್ಲದ, ಮಂಜೂರು ಮಾಡದ ಉಪಾಯಗಳಿಂದ ತನ್ನ ದ್ರವ್ಯಸಂಪಾದನೆಯ ಆಶೆಯನ್ನು ಪೂರೈಸಿಕೊಳ್ಳುವವನು; ನಿಜವಾದ ಕಳ್ಳನ್ಯಾರು? ಸಮಾಜಕ್ಕೆ ತಾನು ಕೊಡುವದಕ್ಕಿಂತ ಹೆಚ್ಚು ದ್ರವ್ಯವನ್ನು ಸಮಾಜದೊಳಗಿಂದ ಪಡಕೊಳ್ಳುವವನು." "ಸಮಾಜವು ತನಗೆ ಉಪದ್ರವ ಕೊಡುವವರಿಗೆ ಶಾಸನ ಮಾಡುತ್ತದೆ; ಹೊರತು, ತನಗೇ ಘಾತ ಮಾಡುವವರಿಗೆ ಶಾಸನ ಮಾಡುವದಿಲ್ಲ ಅಂದರೆ, ಚಿಲ್ಲರೆ ಅಪರಾಧಿಗಳನ್ನು ದಂಡಿಸುತ್ತದೆ; ತೋಕ ಅಪರಾಧಿಗಳನ್ನು ಬಿಟ್ಟುಬಿಡುತ್ತದೆ" ಈ ಗಾದೆ ಮಾತುಗಳನ್ನು ಎಲ್ಲರೂ ಪರ್ಯಾಲೋಚಿಸಿ ನಮ್ಮ ಪ್ರಚಲಿತ ಸಾಮಾಜಿಕ ವ್ಯವಸ್ಥೆಯನ್ನು ತಿದ್ದುಪಡಿಮಾಡಲು ಯತ್ನಿಸತಕ್ಕದ್ದು.

***

ಲೋಕಲ್‌ಬೋರ್ಡ ಮೆಂಬರರ ಕರ್ತವ್ಯವೇನು?

ರಾಷ್ಟ್ರೀಯ ಪಕ್ಷದವರು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳನ್ನು ಸ್ವಾಧೀನಪಡಿಸಿಕೊಳ್ಳುವ ಗದ್ದಲ ನಡೆದಿದೆ. ಈ ಸಮಯ ಮಹಾತ್ಮರು ಬಿಹಾರದೊಳಗಿನ ಗಿರೀಧ ನಗರದ ಲೋಕಲ್ ಬೋರ್ಡ ಮಾನಪತ್ರಕ್ಕೆ ಕೊಟ್ಟ ಉತ್ತರವನ್ನು ರಾಷ್ಟ್ರೀಯ ಪಕ್ಷದವರು ಪಠಿಸತಕ್ಕದ್ದು. ಗಿರೀಧದ ಲೋಕಲ್ ಬೋರ್ಡ ಮಾರ್ಗಗಳು ಶಿಥಿಲ ಕೆಟ್ಟಿರುವ ಮೂಲಕ ಕೆಟ್ಟಸ್ಥಿತಿಯಲ್ಲಿರುವವೆಂದು ಲೋಕಲ್ ಬೋರ್ಡಿನವರು ಮಾನಪತ್ರದಲ್ಲಿ ಸಮೂದಿಸಿದ್ದರು. ನಿಧಿಯ ಕೊರತೆಯು ನೆವಮಾಡುವದು ನಿಹಿತವಲ್ಲೆಂದು ಮಹಾತ್ಮರು ಹೇಳಿದರು. ರಾಷ್ಟ್ರೀಯ ಪಕ್ಷದವರು ರಾಷ್ಟ್ರಸೇವಕರು. ಲೋಕಲ್ ಬೋರ್ಡುಗಳನ್ನು ಸೇರಿ ರಾಜಮಾರ್ಗಗಳ ಅವಕಳತೆ ಪಡೆದಾಗ ಅವನ್ನು ಸುಸ್ಥಿತಿಯಲ್ಲಿಡುವದು ಅವರ ಕರ್ತವ್ಯವು; ನಿಧಿಯಿರಲಿ, ನಿಧಿಯಿಲ್ಲದಿರಲಿ, ಸರಕಾರದೊಡನೆ ನಿಧಿ ದೊರಕಿದಾಗ ಕಾದಾಡುವದಂತು ಆಯಿತು. ಆದರೆ, ಅವರು ವಿಧಾಯಕ ಕಾರ್ಯಕ್ರಮವನ್ನು ಎಂದೂ ತಿರಸ್ಕರಿಸಬಾರದು. ತಮ್ಮ ಕರ್ತವ್ಯವನ್ನು ಅವರು ಸಾಗಿಸಲಾರದಿದ್ದರೆ, ಅವರು ಅಧಿಕಾರತ್ಯಾಗ ಮಾಡಬೇಕು. ನಿಧಿಯಿಲ್ಲವೆಂದು ರಾಜೀನಾಮೆಯನ್ನೀಯಬಾರದು. ಯಾಕಂದರೆ, ಸ್ವಯಂಸೇವಕರ ಸಹಾಯದಿಂದ ಈ ಕಾರ್ಯವನ್ನು ಅವರು ಮಾಡಬಹುದು. ಲೋಕಲ್ ಬೋರ್ಡಿನ ಮೆಂಬರರು ಸ್ವತಃ ಸೊಂಟಕಟ್ಟಿ ಕುದ್ದಲಿ, ಗುದ್ದಲಿಗಳನ್ನು ತೆಗೆದುಕೊಂಡು ಮಾರ್ಗದ ಕೆಲಸ ಕೈಕೊಳ್ಳಲಿ; ತಮಗೆ ನೆರವಾಗಲು ಸ್ವಯಂಸೇವಕರನ್ನು ಕರಕೊಳ್ಳಲಿ ಅಂದರೆ, ಅವರಿಗೆ ಪ್ರಜೆಗಳು ಆಶೀರ್ವದಿಸುವರು; ಮೂಕ ಪಶುಗಳು ಸಂತೋಷಪಡುವವು; ಪರಿಸ್ಥಿತಿಗಳು ಅವರಿಗೆ ಮನ್ನಣೆಯನ್ನೀಯುವರು. ಸ್ಥಾನಿಕ ಸ್ವರಾಜ್ಯದ ಕೆಲಸವು ಬಹುಮಟ್ಟಿಗೆ ಸಭಾಸದರ ಕಾರ್ಯದಿಂದಲೇ ನಡೆಯುತ್ತದೆ. ಹಾಗು ಪ್ರಜೆಗಳ ಸ್ವಯಂಸೇವಕ ಬೆಂಬಲದಿಂದಲೇ ಸಾಗುತ್ತದೆ. ಜೋಸೆಫ್ ಚೆಂಬರಲೇನರವರು ಬರ್ಮಿಂಘೆಮ್ ಪಟ್ಟಣವನ್ನು ಕಟ್ಟಿಗೊಳಿಸಿದ್ದು ಮ್ಯುನಿಸಿಪಾಲಿಟಿಯ ಕೆಲವು ತಿನ್ನುವವರ ಸಹಾಯದಿಂದಲ್ಲ; ನಾಗರಿಕರ ಉಚಿತವಾದ ಸೇವೆಯಿಂದ. ಗ್ಲಾಸಗೋದೊಳಗಿನ ಮ್ಯುನಿಸಿಪಾಲಿಟಿಯವರು ನಾಗರಿಕರ ಸಹಾಯದಿಂದ ಪ್ಲೇಗಿನ ಪಿಡುಗನ್ನು ಅಷ್ಟು ಅಳಿದಬಿಟ್ಟರು. ಜೋಹಾನ್ಸಬರ್ಗದ ಮ್ಯುನಿಸಿಪಾಲಿಟಿಯವರೂ ಪ್ಲೇಗಿನ ಪಿಡುಗನ್ನು ಪ್ರಜೆಗಳ ಸಹಾಯದಿಂದಲೇ ಅಳಿದುಬಿಟ್ಟರು. ಆದದರಿಂದ ಹಣವಿಲ್ಲದಿದ್ದರೆ, ಲೋಕಲ್ ಬೋರ್ಡಿನವರು ಸ್ವತಃ ಮಾರ್ಗದ ದುರುಸ್ತಿಯ ಕೆಲಸವನ್ನು ಕೈಕೊಳ್ಳಬೇಕಾಗಿಯೂ, ಅವಶ್ಯವಿದ್ದರೆ ರಾಷ್ಟ್ರೀಯ ಸ್ವಯಂಸೇವಕರನ್ನು ಕರಕೊಳ್ಳಬೇಕಾಗಿಯೂ ಮಹಾತ್ಮರು ಹೇಳುತ್ತಾರೆ. ನಿಧಿಯಿಲ್ಲವೆಂದು ಕೈಕೊಂಡ ಕರ್ತವ್ಯವನ್ನು ಬಿಡುವದಾಗಲಿ, ಕರಿಗೆಯನ್ನು ಏರಿಸುವದಾಗಲಿ ಸ್ಥಾನಿಕ ಸ್ವರಾಜ್ಯದ ಸೇವೆಗಾಗಿ ಸಭಾಸದರಾದವರ ಕರ್ತವ್ಯವಲ್ಲ.

***

ತಕ್ಕ ಸಿಗ್ಗಶಿಕ್ಷೆ

ಲಾಹೋರದಲ್ಲಿ ಅನೇಕ ತಸ್ಕರರು ಜನರಿಗೆ ದಣಿಸುತ್ತಿರುವರು. ಸದ್ಯಕ್ಕೆ ಲಾಲಾ ಶಂಕರಲಾಲ ಹಾಗು ಲಾಲಾ ಬುಲಕಿದಾಸರವರಿಗೆ ಪತ್ರಗಳು ಬಂದವು; ಯಾರು ಪತ್ರ ಬರೆದಿದ್ದರೆಂದು ತಿಳಿಯಲಿಲ್ಲ. ಪತ್ರಗಳಲ್ಲೇನು ಬರೆದಿತ್ತು? ಒಂದು ಸ್ಥಳದಲ್ಲಿ ಒಂದು ಸಾವಿರ ರೂಪಾಯಿಗಳನ್ನು ಯಾರಿಗೂ ತಿಳಿಸದೆ ಒಯ್ದಿಡಬೇಕು. ಇಲ್ಲದಿದ್ದರೆ ನಿಮ್ಮ ಸರ್ವಸ್ವ ಏಕ್ತದ ದಹನವಾಗುವದು; ಇಷ್ಟೇ ಅಲ್ಲ, ನಿಮ್ಮ ಪ್ರಾಣಾಪಹಾರವೂ ಆಗುವದು. ಇದರಿಂದ ಲಾಲಾ ಶಂಕರಲಾಲರು ದಿಗಿಲುಬಿದ್ದರು. ಒಂದು ಲಕೋಟೆಯಲ್ಲಿ ಒಂದು ಸಾವಿರ ರೂಪಾಯಿಗಳನ್ನು ಪತ್ರದೊಳಗಿನ ಸೂಚನೆಯಂತೆ ಇಟ್ಟರು. ಬುಲಕಿದಾಸರವರು ಏನು ಮಾಡಿದರು. ಈ ಪತ್ರದ ಹಕೀಕತನ್ನು ಪೋಲೀಸರಿಗೆ ತಿಳಿಸಿದರು. ಪೋಲೀಸರೂ, ಬುಲಕಿದಾಸನೂ ಆಲೋಚನೆ ಮಾಡಿ, ಪತ್ರದೊಳಗಿನ ಸೂಚನೆಯಂತೆ, ಸಂಕೇತಸ್ಥಳದಲ್ಲಿ ಒಂದು ಸಾವಿರ ರೂಪಾಯಿಗಳನ್ನಿಟ್ಟರು. ಪೋಲೀಸರು ಅಲ್ಲಿ ಯಾರು ಹೋಗುತ್ತಾರೆ, ರಕಮನ್ನು ಯಾರು ಒಯ್ಯುತ್ತಾರೆ ಎಂಬ ಸುಳುಹಿನ ಮೇಲೆ ಉಳಿದರು. ನಿಯಮಿತ ಸಮಯದಲ್ಲಿ ಒಬ್ಬ ಮನುಷ್ಯನು ರಕಮನ್ನು ಒಯ್ಯಬಂದನು. ಆತನಿಗೆ ಪೋಲೀಸರು ಸೆರೆಹಿಡಿದು ಹಾಕಿರುವರು.

***

ಬ್ರಿಟಿಶ ನ್ಯಾಯ.

ಐರಿಷ್ಟ ದ್ವೀಪವನ್ನು ಬ್ರಿಟಿಶರು ಸ್ವೈಕ್ಯವಶ ಮಾಡಿಕೊಂಡದನ್ನೇ. ಆ ಸಮಯ ಅಲ್ಲಿಯ ಅರಸು ಮನೆತನಕ್ಕೆ ಹೇರಳ ಆಸ್ತಿಯಿತ್ತು. ಅದನ್ನು ಬ್ರಿಟಿಶ ಅಧಿಕಾರಿಗಳು ಅಪಹರಿಸಲು ಕುಯುಕ್ತಿಗಳನ್ನು ಮಾಡುತ್ತಿರುವರು. ಒಂದು ಕುಯುಕ್ತಿಯು ಸದ್ಯಕ್ಕೆ ಪ್ರಕಟವಾಗಿದೆ. ಸ್ವೈಪ್ರೈನ ರಾಜಪುತ್ರರಿಗೆ ಹೇರಳ ಆಸ್ತಿಯಿತ್ತು. ಅವರಿಗೆ ತಲೆ ನೆಟ್ಟಗಿಲ್ಲೆಂದು ಬ್ರಿಟಿಶ ತಜ್ಞರ ಮತವಾಗಿ, ಅವರ ಮಾನಸಿಕ ರೋಗವನ್ನು ವಾಸಿಮಾಡುವರೆ ಅವರನ್ನು ಮಾನಸಿಕ ರೋಗ ಚಿಕಿತ್ಸಾಲಯದಲ್ಲಿ ಶುಶ್ರೂಷೆಗಿಟ್ಟರು. ಚಿಕಿತ್ಸಾಲಯದಲ್ಲಿ ಹೋಗಿ ವಾಸಿಯಾಗುವದೂ, ಆ ಬಗ್ಗೆ ತಕ್ಕ ಔಷಧೋಪಚಾರ ಪಡೆಯುವದೂ ಎಂದೂ ಸಾಧ್ಯವಿಲ್ಲ. ಅವರನ್ನು ಬ್ರಿಟಿಶ ಕತ್ತಲೆ ಕೋಣೆಯಲ್ಲಿ ಇಟ್ಟರು; ಚಿಕಿತ್ಸಾಲಯದ ಸ್ಥಾನವು. ಇತ್ತ ಅವರ ಆಸ್ತಿಯು ಆದಾಯವನ್ನೆಲ್ಲ ಬ್ರಿಟಿಶರೇ ನಡಿಸಿದರು. ಈಗ ಚಿಕಿತ್ಸೆ ನಡೆಯಹತ್ತಿ ಇತ್ತ ೨೫ ವರುಷಗಳಾದವು. ಅವರೂ ಸ್ವೈಪ್ರೈನವರ ತಲೆ ತಿರುಕತನವು ಗುಣವಾದದ್ದು ಬ್ರಿಟಿಶರಿಗೆ ಕಂಡುಬರುವದಿಲ್ಲ. ರೋಗವಿದ್ದರೆ ಗುಣವಾಗುವದಲ್ಲವೆ! ಇತ್ತ ಏನಾಯಿತು? ರಾಜಪುತ್ರನು ಈ ಬಂಧನದೊಳಗಿಂದ ಪಾರಾಗುವ ಬಗೆಯನ್ನು ವಿಚಾರಿಸುತ್ತಿದ್ದನು; ಆತನ ಪಕ್ಷಪಾತಿಯಾದ ಫರಿಡನ್‌ಪಾಶಾರವರೂ ಇದನ್ನೇ ಆಲೋಚಿಸುತ್ತಿದ್ದರು. ಯುಕ್ತಿಯಿಂದ ಒಂದು ವಿಮಾನು ತಯಾರು ಮಾಡಲಾಯಿತು. ಅದರೊಳಗೆ ಸ್ವೈಪ್ರೈನವರು ಕೂತುಕೊಂಡು ಹಾರಿ ನಾರೀಸ ಪಟ್ಟಣವನ್ನು ದಾಟಿ ಫ್ರಾನ್ಸ ದೇಶದ ಮಾರ್ಸಾಲೀಸ ಪಟ್ಟಣದಲ್ಲಿ ಬಂದಿಳಿದರು. ರಾಜಪುತ್ರರ ಶೋಧನೆಗಾಗಿ ಬ್ರಿಟಿಶ ಗುಪ್ತ ಪೋಲೀಸರು ಫ್ರಾನ್ಸ ದೇಶದ ರಾಜಧಾನಿಯಾದ ಪಾರೀಸ ಪಟ್ಟಣದಲ್ಲಿ ಕಾದುಕೊಂಡಿದ್ದರು, ಅವರ ಕಣ್ತಪ್ಪಿಸಿ ರಾಜಪುತ್ರರು ಕ್ಷೇಮದಿಂದ ಮಾರ್ಸಾಲೀಸ ವರೆಗೆ ಬ

ದರು. ಅಲ್ಲಿಂದ ಬೋಟ ಹತ್ತಿ ತುರ್ಕಸ್ಥಾನದ ಇಸ್ತಂಬೂಲ ಪಟ್ಟಣಕ್ಕೆ ಹೋಗಬೇಕು. ಹಡಗವು ಸಿದ್ಧವಾಗಿತ್ತು. ರಾಜಪುತ್ರರು ಬೋಟ ಹತ್ತಿದರು. ಬೋಟಿಯು ಹೊರಡಲಿಕ್ಕೆ ತಯಾರಾಯಿತು. ಅಷ್ಟರಲ್ಲೇನಾಯಿತು? ಬಂದರದೊಳಗಿನ ಡಾಕ್ಟರರು ಪ್ರಯಾಣಿಕರ ಆರೋಗ್ಯ ತಪಾಸಿಗೆ ಬಂದರು. ರಾಜಪುತ್ರರ ನಾಡಿ ಪರೀಕ್ಷೆ ಮಾಡಿದರು. ತಿಗ್ರಿ ಹಚ್ಚಿದರು. ಜ್ವರ ಬಂದಂತೆ ಅವರಿಗೆ ತೋರಿತು. ಇದೊಂದು ರೋಗವಿಶೇಷವೆಂದೂ, ಅವರ ಕಲ್ಪನೆಯಾಯಿತು; ರೋಗವು ಸಾಂಸರ್ಗಿಕವೆಂದೂ ಅವರ ಗ್ರಹಿಕೆಯಾಯಿತು. ಕೂಡಲೆ ಬೋಟಿಯಿಂದ ಇಳಿಯಲು ಅವರು ಅಪ್ಪಣೆಯನ್ನಿತ್ತರು. ಬೋಟಿಯಿಂದಿಳಿದರೆ, ರಾಜಪುತ್ರರ ನಿಜಸ್ಥಾನಸ್ಥೆಯನ್ನು ಬಲ್ಲ ಸಡಗರವು. ಬಂದರದ ಮೇಲೆ ಬ್ರಿಟಿಶ ಗುಪ್ತ ಪೋಲೀಸರು ಕಾದುಕೊಂಡಿದ್ದರು. ಒಂದು ಬದಿಯಿಂದ ಬಿಲದಲ್ಲಿ ಸರ್ಪ; ಇನ್ನೊಂದು ಬದಿಯಿಂದ ಹೊರಬಿದಗೆ ಬೆಕ್ಕು; ಹೀಗೆ ಎರಡು ಹಗೆಗಳ ನಡುಮಧ್ಯದಲಿ ಸಿಲುಕಿದ ಇಲಿಯಂಗತಿಯಾಯಿತು. ಹಡಗದ ಮೇಲೆ ರಾಜಪುತ್ರನ ತಾಯಿಯಿದ್ದರು; ದತ್ತಕ ತಂದೆಯೂ ಇದ್ದನು, ತಾಯಿಯು ಪರಿಪರಿಯಿಂದ ವೈದ್ಯರಿಗೆ ಹೇಳಿಕೊಂಡಳು. ಪುತ್ರಭಿಕ್ಷೆ ಹಾಕಲು ಸೆರಗೊಡ್ಡಿ ಬೇಡಿದಳು. ಆದರೂ, ವೈದ್ಯರಾಜರ ಹೃದಯವು ಕಲ್ಲಿನಂತೆ ಕಠೋರವಿತ್ತು. ಫೆರಿಸನ್ ಸಾಹೇಬರವರೂ ನಿಷೇಧ ಮಾಡಿ ಹೀಗೆ ಅಡ್ಡಗಟ್ಟುವದು ಸರಿಯಲ್ಲವೆಂದರು. ಆದರೆ, ಕೇಳುವವರಾರು? ಥಟ್ಟನೆ ಒಂದು ಚಮತ್ಕಾರವಾಯಿತು. ಪರಮಾತ್ಮನು ದೀನರಕ್ಷಕನಲ್ಲವೇ! ಡಾಕ್ಟರರಿಗೆ ಹಿಮ್ಮೇಲೇ ಹೃದಯವಿಕಾರವಾಯಿತು. ನಿಂತಲ್ಲಿಯೇ ರಕ್ತಾಭಿಸರಣವು ನಿಂತುಹೋಯಿತು. ಥೊಪ್ಪನೆ ಹಡಗದ ಮೇಲೆ ನಿಶ್ಚೇಷ್ಟರಾಗಿ ಬಿದ್ದರು; ಮತ್ತು ಮರಣ ಹೊಂದಿಬಿಟ್ಟರು. ರಾಜಪುತ್ರರ ದುರ್ದೈವವು ಅಲ್ಲಿಗೆ ತೀರಿತು; ಸುದೈವದ ಅರುಣೋದಯವಾಯಿತು. ಹೊಸ ವೈದ್ಯರು ಪ್ರಯಾಣಿಕರ ತಪಾಸಿಗೆ ಬಂದರು. ಹೊಸಬರು ದಯಾರ್ದ್ರಬುದ್ಧಿಯವರು. ರಾಜಪುತ್ರರು ಆರೋಗ್ಯವಂತರೆಂದೂ, ಪ್ರಯಾಣಕ್ಕೆ ಪಾತ್ರರೆಂದೂ ಅವರು ಅಭಿಪ್ರಾಯಪಟ್ಟರು. ಅವರಿಗೆ ಹೋಗಗೊಟ್ಟರು. ರಾಜಪುತ್ರರೂ, ಅವರ ತಾಯಿಂದಿರೂ, ದತ್ತಕ ತಂದೆಯವರೂ ಇಸ್ತಂಬೂಲಕ್ಕೆ ಕ್ಷೇಮದಿಂದ ಬಂದು ಮುಟ್ಟಿದರು. ಈಗ ರಾಜಪುತ್ರರ ಮೇಲೆ ಬ್ರಿಟಿಶರ ಕೈಸಾಗದು. ಲೌಸೇನ ತಹನಾಮೆಯಂತೆ ಸೈಪ್ರಸ್ಸಿನವರು ತುರ್ಕಸ್ಥಾನದ ನಾಗರಿಕರು. ಈ ನಾಗರಿಕ ಹಕ್ಕುಗಳನ್ನು ರದ್ದುಪಡಿಸಿ ಅವರನ್ನು ಸ್ವಾಧೀನಪಡಿಸಿಕೊಳ್ಳಲು ಬ್ರಿಟಿಶರಿಗೆ ಅಧಿಕಾರವಿಲ್ಲ. ಫೆರಿಸನ್ ಸಾಹೇಬರವರು ಈ ಕಥೆಯು ಮ್ಯಾಕೆನ್ನಾನಪತ್ರದ ಪ್ರತಿನಿಧಿಗಳಿಗೆ ಹೇಳಿ ಪ್ರಶ್ನಿಸಿದ್ದೇನಂದರೆ:—"ಈ ಮುಂದೆ ಬ್ರಿಟಿಶರ ನ್ಯಾಯಬುದ್ಧಿ, ಸ್ವಾತಂತ್ರ್ಯಪ್ರೇಮಗಳ ಮೇಲೆ ಯಾರಾದರೂ ಸಂದೆಗಿಯಿಡುವರೇನು?" ಈ ಪ್ರಶ್ನೆಗೆ ಪ್ರತಿನಿಧಿಗಳು ಉತ್ತರಕೊಡುವ ಪೂರ್ವದಲ್ಲಿಯೇ ಸಾಹೇಬರವರು ಉದ್ಗರಿಸಿದ್ದೇನಂದರೆ:- "ಇಲ್ಲ! ಎಂದೆಂದಿಗೂ ಇಲ್ಲ! ಸಾವಿರ ಸಲ ಹೇಳುತ್ತೇನೆ, ಇಲ್ಲ. (No ! a thousand times no.) ಇತ್ಯಾದಿ ಹಕೀಕತನ್ನು 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಕಾನ್ಸ್ಟಾಂಟಿನೋಪಲ್ ಪಟ್ಟಣದ ಸುದ್ದಿಗಾರರು ಬರೆದಿರುವರು. ರಾಜಪುತ್ರರ ಆಸ್ತಿಯ ಅಪಹಾರ ಮಾಡಲಿಕ್ಕೆ ಬ್ರಿಟಿಶ ಅಧಿಕಾರಿಗಳು ಕೈಕೊಳ್ಳುತ ಸುಧಾರಿಸಿದ ಉಪಾಯಗಳಿವು. ರಾಜಪುತ್ರರು ಈಗ ತಮ್ಮ ಆಸ್ತಿಯ ಆತಳತೆಯನ್ನು ಪಡೆಸಿಕೊಳ್ಳಲಿಕ್ಕೂ, ಅದರ ಲೆಖ್ಖಾದಾರಿಕ್ಕಾಗಿಯೂ ಕಾಯಿದೆಯಂತೆ ಇಲಾಜು ನಡಿಸುವವರಿದ್ದಾರಾಗಿಯೂ ಸುದ್ದಿಗಾರರು ತಿಳಿಸುತ್ತಾರೆ.

***

ಬ್ರಿಟಿಶ ವರ್ತಕರ ಚಿಂತೆ!

ಇತ್ತೀಚಿನ ಪಿಲಾಯತಿಯೊಳಗಿನ ಬ್ರಿಟಿಶ ವರ್ತಕರಿಗೆ ಭಾರತೀಯರ ಕಲ್ಯಾಣದ ಚಿಂತೆ ಉಂಟಾಗಿದೆ. ಹಿಂದುಸ್ಥಾನದಿಂದ ರಫ್ತಾಗುವ ಮಾಲು ಇಮ್ಮಡಿಯಾದರೂ, ಮ್ಯಾಂಚೆಸ್ಟರದೊಳಗಿನ ವ್ಯಾಪಾರವು ಏರುವದಿಲ್ಲ. ಹಿಂದುಸ್ಥಾನದೊಳಗಿನ ರಫ್ತಿನ ಸಾಮಗ್ರಿಯು ಮುಖ್ಯವಾಗಿ ಅಕ್ಕಿ, ಗೋದಿ, ಹತ್ತಿ ಇತ್ಯಾದಿ ಕಚ್ಚಾ ಸಾಮಾನು ಈ ಸಾಮಾನಿನ ಬೆಲೆಯು ಯುದ್ಧಕಾಲಕ್ಕಿಂತ ಈಗ ಶೇಕಡಾ ೩೫ರಷ್ಟು ಏರಿದೆ. ಆದರೆ, ಬ್ರಿಟಿಶ ಅರಿವೆಯ ಕಿಮ್ಮತ್ತು ೧೬೫ರಷ್ಟು ಏರಿರುವದು ಸಾಮಾನ್ಯವಾಗಿ ಜೀವನದ ಖರ್ಚಿನ ಮಾನವು ಶೇಕಡಾ ೭೫ರಷ್ಟು ಇದೆ. ಈ ಸಂಖ್ಯೆಗಳ ಮೇಲಿಂದ ಭಾರತೀಯ ಬೇಸಾಯಗಾರರ ಸ್ಥಿತಿಯು ನೆನಸಿಕೆಯಾಗುವದು. ಬೇಸಾಯಗಾರರು ಬ್ರಿಟಿಶ ವರ್ತಕರ ಮುಖ್ಯ ಗಿರಾಕಿಗಳು. ಬೇಸಾಯಗಾರರಿಗೆ ೧೯೧೪ನೇ ಇಸ್ವಿಯಲ್ಲಿ ೧೦೦ ರೂಪಾಯಿ ಸಿಕ್ಕಿದರೆ, ಅದೇ ಸಾಮಗ್ರಿಯ ಬೆಲೆಯು ಏರಿದ್ದರಿಂದ ಈಗ ೧೩೫ ರೂಪಾಯಿ ಸಿಗುತ್ತವೆ. ಆದರೆ, ಅವರಿಗೆ ಈಗ ೧೭೫ ರೂಪಾಯಿ ಜೀವನಖರ್ಚಿಗೆ ಬೇಕು. ಅದರೊಳಗೂ ಬ್ರಿಟಿಶ ಅರಿವೆಯ ಬೆಲೆಯು ಏರಿದೆ. ಮೊದಲು ೧೦೦ ರೂಪಾಯಿ ಬೆಲೆ ಬೀಳುವ ಅರಿವೆಗೆ ಈಗ ೨೬೫ ರೂಪಾಯಿ ತೆರಬೇಕು. ಬೇಸಾಯಗಾರರ ಸಂಸಾರ ವಾರ್ಷಿಕ ಉತ್ಪನ್ನವು ರೂಪಾಯಿ ೩೦ ಇರುತ್ತದೆಂದು ಪಿಲಾಯತಿಯೊಳಗಿನ 'ಫಿನೆನ್ಶಲ್ ನ್ಯೂಸ' ಪತ್ರಿಕೆಯೇ ಹೇಳುತ್ತದೆ. ಪ್ರಪಂಚ ಖರ್ಚು ಮಿತಿಮೀರಿ ಏರಿದ್ದರಿಂದ ಖರ್ಚಿನ ಮಾನವನ್ನು ಆತನು ಅವಶ್ಯ ಮಿತವ್ಯಯದಿಂದ ಸಾಗಿಸಬೇಕು. ಇದರಿಂದ ಮೊದಲು ೬ ರೂಪಾಯಿ ಅರಿವೆ ಅಂಚಡಿಗಳಿಗೆ ಖರ್ಚು ಮಾಡುತ್ತಿದ್ದರೆ ಈಗ ೪ ರೂಪಾಯಿ ಖರ್ಚು ಮಾಡುವದೇ ಕಷ್ಟವಾಗಿದೆ. ಇದನ್ನೆಲ್ಲ 'ಫಿನೆನ್ಶಲ್ ನ್ಯೂಸ' ಪತ್ರಿಕೆಯು ವಿಚಾರಿಸಿ ಮ್ಯಾಂಚೆಸ್ಟರದೊಳಗಿನ ಸಾಮಗ್ರಿಯು ಹೆಚ್ಚಾಗಿ ಖರ್ಚಾಗಬೇಕಾದರೆ, ಅದಕ್ಕೊಂದು ಉಪಾಯವಿದೆ: ಬ್ರಿಟಿಶ 'ಅರಿವೆಯ ಬೆಲೆಯು ಕಡಿಮೆಯಾಗಬೇಕು, ಬೇಸಾಯಗಾರರ ಉತ್ಪನ್ನವನ್ನು ಹೆಚ್ಚಿಸಬೇಕು. ಅಂದರೆ, ಅರಿವೆಗಳು ಹೆಚ್ಚಾಗಿ ಖರ್ಚಾಗುವವು ವರ್ತಕರಿಗೂ ಲಾಭವಾಗುವದು. ಅರಿವೆಯ ಬೆಲೆಯು ಕಡಿಮೆಯಾಗಬೇಕಾದರೆ, ಬ್ರಿಟಿಶ ಕೂಲಿಕಾರರು ಅಲ್ಪ ವೇತನ ಕೊಂಡು ಹೆಚ್ಚು ಕೆಲಸ ಮಾಡಬೇಕು, ಹತ್ತಿಯನ್ನು ಅಗ್ಗವಾಗಿ ಪೂರೈಸಿಕೊಳ್ಳಬೇಕು. ಬ್ರಿಟಿಶ ಅರಿವೆಯ ಮೇಲಿನ ಕಸ್ಟಮ ಡ್ಯೂಟಿಯನ್ನು ರದ್ದುಮಾಡಿಸಲು ಯತ್ನಿಸಬೇಕು. ಹೀಗೆಲ್ಲ ಉಪಾಯಗಳನ್ನು "ಫಿನೆನ್ಸ ನ್ಯೂಸ" ಪತ್ರಿಕೆಯು ಸೂಚಿಸಿದೆ. ಇದರ ಮೇಲಿಂದ, ಬ್ರಿಟಿಶ ವರ್ತಕರ ಹಿಂದುಸ್ಥಾನದ ಮೇಲಿನ ದೃಷ್ಟಿಯು ಯಾವ ಪ್ರಕಾರದ್ದಿರುವದೆಂಬುದು ಸ್ಪಷ್ಟವಾಗುತ್ತದೆ. ಒಂದು ಮಾತು. ಹಿಂದೀ ಬೇಸಾಯಗಾರರ ವಾರ್ಷಿಕ ಉತ್ಪನ್ನದ ಸರಾಸರಿಯನ್ನು "ಫಿನೆನ್ಸ ನ್ಯೂಸ" ಪತ್ರಿಕೆಯು ಕೊಟ್ಟಿದೆ; ಲೆಖ್ಖ ಮಾಡಿ ಕೊಟ್ಟಿದೆ. ಅದೆಷ್ಟು? ಬರೇ ರೂಪಾಯಿ ೩೦. ೩೦ ರೂಪಾಯಿಗಳಿಂದ ಯಾರು ಏನು ಸಂಸಾರ ಮಾಡುವರು? ಬ್ರಿಟಿಶ ರಾಷ್ಟ್ರದೊಳಗಿನ ಭಾರತೀಯರ ಸ್ಥಿತಿಯಿದು!

***

ಕಾಯಿದೆ ಕೌನ್ಸಿಲಿನಲ್ಲಿ ದೊರೆತ ಮಾಹಿತಿ.

ಪ್ರಾಥಮಿಕ ಶಿಕ್ಷಕರ ತಲಬಿನ ವಿಷಯು ಇದೇ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ಶ್ರೀ| ದೇವ, ಶ್ರೀ| ಮುಂಡರಗಿ, ಶ್ರೀ| ಪ್ರಧಾನರವರು ಕೆಲವು ಪ್ರಶ್ನೆಗಳನ್ನು ಕೇಳಿದ್ದರು. ಸಾತೇ-ಪರಾಂಜಪೇ ಪಗಾರುವಾರಿಯ ವಿಷಯ ಚೌಕಶಿ ನಡೆಯಿತು. ಮುಂಬಯಿ ಸರಕಾರವು ಸಾತೇ-ಪರಾಂಜಪೇ ಪಗಾರುವಾರಿಯ ವಿಷಯ ಅನೇಕ ಜಿಲ್ಲಾ ಬೋರ್ಡು ಹಾಗು ಮ್ಯುನಿಸಿಪಾಲಿಟಿಗಳಿಂದ ಮತ ಕೊಂಡಿದೆ. ಈ ವಿಷಯ ಸರಕಾರವು ಆಲೋಚನೆ ಮಾಡಿದೆ. ಯಾವ ಪ್ರಾಂತದಲ್ಲಿ ಸಾತೇ-ಪರಾಂಜಪೇ ಪಗಾರುವಾರಿಯನ್ನು ಪ್ರಾರಂಭಿಸಬೇಕೆಂದು ಇನ್ನೂ ನಿಶ್ಚಯವಾಗಲಿಲ್ಲ. ಸಿದ್ದಾಪುರ ತಾಲೂಕ ಬಿಳಗಿ ರಾಣಿಯ ವಿಷಯ ಸರದಾರ ಮುಝುಮದಾರರವರು ಮಾಹಿತಿ ಕೇಳಿದ್ದರು. ಬಸಲಿಂಗ ರಾಜಾ ಎಂಬವರು ಬಿಳಗಿಯ ಹಳೇ ಪಾಳೆಗಾರ ಮನೆತನದ ಕೊನೆಯ ವಂಶಜರು. ಬಸಲಿಂಗ ರಾಜರ ದತ್ತ ತಂದೆಗೆ ಸರಕಾರದವರು ಜೀವಮಾನವಿರುವವರೆಗೆ ಪೆನ್ಶನು ಕೊಟ್ಟಿದ್ದರು. ಬಸಲಿಂಗ ರಾಜರು ತೀರ ಬಡವರು. ಅದರಿಂದ ಕಾನಡಾ ಜಿಲ್ಲೆಯಲ್ಲಿ ಅವರಿಗಿರುವ ಭೂಮಿಯ ತೀರ್ವೆಯನ್ನು ಸರಕಾರವು ಅವರ ಜೀವಮಾನವಿರುವ ವರೆಗೆ ಮಾಫ ಮಾಡಿತ್ತು. ಬಸಲಿಂಗರಾಜರು ೧೮೭೦ನೇ ಇಸ್ವಿಯಲ್ಲಿ ತೀರಿಕೊಂಡರು. ಅವರ ತರುವಾಯ ಅವರ ಮಲತಾಯಿ ಇಷ್ಟಿ ವಿಧವೆಯರು ಉಳಿದರು. ಅವರಿಗೂ ತೀರ್ವೆ ಮಾಫ ಮಾಡಲಾಯಿತು. ಬಸಲಿಂಗ ರಾಜರ ವಿಧವೆಯು ಸದ್ಯಕ್ಕೆ ತೀರಿಕೊಂಡಳು. ಈಗ ಅವರ ವಂಶಜರು ಯಾರೂ ಇಲ್ಲ. ಇನ್ನು ಮುಂದೆ ಈ ಉಂಬಳಿಯು ನಿಲ್ಲುವದು. ೧೯೨೪-೨೫ನೇ ಇಸ್ವಿಯಲ್ಲಿ ಬಾಂಧಕಲ್ಲು ದುರುಸ್ತಿಯ ಬಗ್ಗೆ ಮುಂಬಯಿ ಇಲಾಖೆಯಲ್ಲಿ ರೂ. ೧,೦೨,೮೭೪ ೭—೨ ಇಷ್ಟು ರಕಮು ಕಂಟ್ರಾಕ್ಟರರಿಗೆ ಕೊಡಬೇಕಾಯಿತು. ಬೇಸಾಯಗಾರರಿಂದ ರೂ. ೧, ೨೮ ೭೩೩–೧೫–೮ ವಸೂಲಾದವು. ದಕ್ಷಿಣ ಭಾಗದಲ್ಲಿ ಖರ್ಚಿನಕಿಂತ ಹೆಚ್ಚು ವಸೂಲಾಗಲಿಲ್ಲ. ಅಹಮದಾಬಾದ-ಖೇಡಾ ಜಿಲ್ಲೆಗಳಲ್ಲಿ ಹೆಚ್ಚಿಗೆಯಾಗಿ ವಸೂಲಾದ ರಕಮು ಮರಳಿ ಕೊಡಲಾಗಿದೆ. ಮಧ್ಯಭಾಗದಲ್ಲಿ ಬೇಸಾಯಗಾರರಿಗೆ ದಂಡ ಮಾಡಲಾದ್ದರಿಂದ ಅವರಿಗೆ ಹೆಚ್ಚಿಗೆ ವಸೂಲ ಮಾಡಿದ ರಕಮು ಮರಳಿಕೊಡಲಿಲ್ಲ. ಜನರಲ್ ಸ್ಟ್ಯಾಂಪ ಡ್ಯೂಟಿ ಹಾಗು ಕೋರ್ಟು ಫೀಗಳನ್ನು ಏರಿಸುವ ವಿಷಯು ದಿವಾಣಿ ಹಾಗು ಅಮಲಬಜಾವಣಿ ಖಾತೆಗಳೊಡನೆ ನಡೆದ ಪತ್ರವ್ಯವಹಾರಗಳನ್ನು ಕಾಯಿದೆ ಕೌನ್ಸಿಲಿಗೆ ಅರುಹಲು ಸರಕಾರವು ತಯಾರಿಲ್ಲವಾಗಿ ಶ್ರೀ| ಪ್ರಧಾನರವರಿಗೆ ಉತ್ತರ ದೊರಕಿದೆ. ಭಟಕಳ ಬಂದರದ ಯೋಜನೆಯು ಎಲ್ಲಿಗೆ ಮುಟ್ಟಿತೆಂದು ವಿಜಾಪುರದ ಶ್ರೀ| ಸರ ದೇಸಾಯಿಯವರು ಕೇಳಿದ್ದಕ್ಕೆ ಈ ಯೋಜನೆಯು ಮುಂಬಯಿ ಸರಕಾರದ ಆಲೋಚನೆಯಲ್ಲಿರುವದಿಲ್ಲವಾಗಿ ಉತ್ತರ ದೊರಕಿದೆ.

ಶಾಸನಾವೃತ್ತ.

[illegible]

ಶಬ್ದಚ್ಛಲ ಬಿಡಿ.

ಲಾಲಾ ಲಜಪತರಾಯರ ಆಗ್ರಹ

[illegible]

ಮಧ್ಯಪ್ರಾಂತದ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಾದ ಶ್ರೀ| ತಾಂಬೆಯವರು ಸರಕಾರಿ ಸೇವಾವೃತ್ತಿಯನ್ನು, ತಮ್ಮ ಸ್ವರಾಜ್ಯ ಪಕ್ಷದ ಪ್ರತಿಜ್ಞೆಯನ್ನು ಉಲ್ಲಂಘಿಸಿ ಅಂಗೀಕರಿಸಿದ ಸಂಬಂಧದಿಂದ ಇಡೀ ಭರತಖಂಡದಲ್ಲಿ ಬಹಳ ದೊಡ್ಡ ವಾದವೆದ್ದಿದೆ. ಸ್ವರಾಜ್ಯ ಪಕ್ಷದವರು ಅಡ್ಡಗಟ್ಟುವ ಅಸಹಯೋಗವನ್ನು ಜಾರೀಪಡಿಸಿ, ಕೌನ್ಸಿಲು ಪ್ರವೇಶವನ್ನು ಕೈಕೊಂಡರು; ಸರಕಾರಿ ಸೇವೆಯನ್ನು ಎಷ್ಟೆಂದೂ ಸ್ವೀಕರಿಸಲಿಕ್ಕಿಲ್ಲೆಂದು ಘೋರ ಪ್ರತಿಜ್ಞೆ ಮಾಡಿದರು. ಮುಂದೆ ಕ್ರಮವಾಗಿ ನಿಯಮಗಳಲ್ಲಿ ತಿದ್ದುಪಡಿ ಮಾಡಿ ಕೆಲವು ಅಧಿಕಾರಸ್ಥಾನಗಳನ್ನು ಪಡೆಕೊಳ್ಳಲು ಅಡ್ಡಿಯಿಲ್ಲವೆಂದು ನಿರ್ಧರಿಸಿದರು. ಆದರೂ, ಸರಕಾರಿ ಸೇವೆಯನ್ನು ಕೈಕೊಳ್ಳಲು ಪ್ರತಿಬಂಧವಿತ್ತು. ಶ್ರೀ| ತಾಂಬೆಯವರು ಅದನ್ನು ಉಲ್ಲಂಘಿಸಿ ಸಹಕಾರಿಗಳ ಆಲೋಚನೆ ಪಡೆಯದೆ ಸರಕಾರಿ ಸೇವೆಯನ್ನು ಅಂಗೀಕರಿಸಿಬಿಟ್ಟರು. ಮುಂಬಯಿಯ ಸ್ವರಾಜ್ಯ ಪಕ್ಷದ ಪ್ರಮುಖರಾದ ಬೆರಿಸ್ಟರ ಜಯಕರರವರೂ, ಮಹಾರಾಷ್ಟ್ರ ಸ್ವರಾಜ್ಯ ಪಕ್ಷದ ನಾಯಕರಾದ ಶ್ರೀ| ಕೇಳಕರರವರೂ, ಶ್ರೀ| ತಾಂಬೆಯವರ ವರ್ತನವು ಅನಪೇಕ್ಷಿತವಿದ್ದರೂ, ಈಗಿನ ಮುಟ್ಟಿಗೆ ನಿಷೇಧಾರ್ಹವಿದ್ದರೂ, ಸ್ವರಾಜ್ಯ ಪಕ್ಷದ ಕಾರ್ಯಧೋರಣದ ಮೇಲಿಂದ ಇತಿಹಾಸದ ಮೇಲಿಂದ ಸರಕಾರಿ ಸೇವೆಯು ಅಂಗೀಕಾರವು ಕ್ಷಮ್ಯವೆಂದು ಹೇಳಬಹುದಾಗಿ ಅಭಿಪ್ರಾಯಪಟ್ಟಿರುವರು. ವರಿಷ್ಠ ಕಾಯಿದೆ ಕೌನ್ಸಿಲಿನ ಅಧ್ಯಕ್ಷಸ್ಥಾನದ ಶ್ರೀ| ಪಟೇಲರವರ ಸ್ವೀಕಾರ, ಸ್ಕೀನ ಕಮಿಟಿ ಯಾನೆ ಸೈನಿಕ ಪ್ರಶ್ನೆಯ ವಿಚಾರ ಮಂಡಳದ ಸಭಾಸದತ್ವದ ಪಂಡಿತ ಮೋತಿಲಾಲರ ಸ್ವೀಕಾರ ಇವೆರಡನ್ನೂ ಸರಿಹೋಲಿಸಿ ಶ್ರೀ| ತಾಂಬೆಯವರು ಸರಕಾರಿ ಸೇವೆಯನ್ನು ಅಂಗೀಕರಿಸಿ, ಸ್ವರಾಜ್ಯ ಪಕ್ಷದ ಧೋರಣವನ್ನು ಮತ್ತಿಷ್ಟು [illegible] ಮಾಡುವ ಅವಶ್ಯಕತೆಯನ್ನು ಪ್ರತಿಪಾದಿಸಿರುವರಾಗಿ ಶ್ರೀ| ಜಯಕರ ಕೇಳಕರರವರ ಅಂಬೋಣವಿದೆ. ಸ್ವರಾಜ್ಯ ಪಕ್ಷದವರು ಸರಕಾರಿ ಸೇವೆಯನ್ನು ಕೈಕೊಳ್ಳಲಿಕ್ಕೂ ಪ್ರತ್ಯವಾಯವೇನಿಲ್ಲೆಂದು ಶ್ರೀ| ಕೇಳಕರರವರ ವಿಶೇಷ ಆಗ್ರಹ. ಪ್ರತಿಯೋಗಿ ಸಹಕಾರ ತತ್ವ [illegible]ವನ್ನು ಜಪಿಸಿ ಸ್ವರಾಜ್ಯ ಪಕ್ಷದವರು [illegible] ಹೋಗಿ ಯಾವದೇ ವೃತ್ತಿಯನ್ನು ಕೈಕೊಂಡರೂ ದೇಶೋದ್ಧಾರವಾಗಲೇಬೇಕೆಂದು ಶ್ರೀ| ಕೇಳಕರರವರ ಹೇಳಿಕೆಯಿದೆ. ಸ್ವರಾಜ್ಯ ಪಕ್ಷದವರು ಅಷ್ಟು ದೇಶಸೇವಾತುರರು ಈ ಸಮಯ. ಸುಪ್ರಸಿದ್ಧ ದೇಶಭಕ್ತ ಲಾಲಾ ಲಜಪತರಾಯರು ಸ್ವರಾಜ್ಯ ಪಕ್ಷಕ್ಕೆ ಕೆಲವು ಬುದ್ಧಿವಾದಗಳನ್ನು ಹೇಳಿದರು. ಅವರ ಉಪದೇಶಯುಕ್ತ ವಚನಗಳು ಯಾವಾಗಲೂ ಸ್ಮರಣೀಯವಿವೆ.

ಮೊಟ್ಟಮೊದಲು, ದೇಶಭಕ್ತರು [illegible] ಕೌನ್ಸಿಲು ಪ್ರವೇಶದಿಂದ ಸರಕಾರಿ ಸೇವೆಗೆ [illegible] ಮೊದಲೇ [illegible] ಈಗ [illegible] ಶ್ರೀ| ತಾಂಬೆಯವರ [illegible] ಶ್ರೀ| ಕೇಳಕರರವರ ವಿಚಾರಗಳಿಂದ [illegible] ರಾಷ್ಟ್ರೀಯ ಪಕ್ಷದಲ್ಲಿ ದೇಶದೊಳಗಿನ [illegible] ಅವರನ್ನು ಆಳರಸರು ತಮ್ಮ [illegible] ಸೇರಿಸಿಕೊಳ್ಳಲು ಯಾವಾಗಲೂ ಯತ್ನಮಾಡುತ್ತಿರುವರು. ಇದಕ್ಕೆ ಲೋಕನಾಯಕರು ಎಂದೂ ಒಳಬೀಳದೆ [illegible] ಶಕ್ತಿಯಿಂದ ದುಡಿಯಕೂಡದು. ಸರಕಾರಿ ಸೇವೆಯನ್ನು ಸ್ವೀಕರಿಸಲು ಲೋಕನಾಯಕರು ಪ್ರಜೆಗಳನ್ನು [illegible] ರಾಷ್ಟ್ರಕಾರ್ಯವೆಂದೂ [illegible]. ಸರಕಾರಿ ಸೇವೆಯನ್ನು ಲೋಕನಾಯಕರು ಕೈಕೊಳ್ಳುವದರಿಂದ ಕೆಲ ಮಟ್ಟಿಗೆ ದೇಶಸೇವೆಯಾಗಬಹುದು. ಆದರೆ, ರಾಷ್ಟ್ರಾಭಿಮಾನವೃತ್ತಿಯೇ ಸರಕಾರಿ ಸೇವಾಸ್ವೀಕಾರದಿಂದ ನಷ್ಟವಾಗುತ್ತದೆ. ಈ ಹಾನಿಯು ಬಹು ದೊಡ್ಡದು. ಸರಕಾರಿ ಸೇವೆಯನ್ನು ಸ್ವೀಕರಿಸಿ ಲೋಕನಾಯಕರು ಮಾಡುವ ದೇಶಸೇವೆಯು ಈ ಹಾನಿಯ ಮಾನದಿಂದ ಕಾಣದಾಗುವದು. ಆಳರಸರೇನು ಮಾಡುತ್ತಾರೆ, ಕಂಡಿರಾ! ರಾಷ್ಟ್ರದೊಳಗಿನ ಬುದ್ಧಿವಂತ ಪುರುಷರನ್ನು ತಮ್ಮಲ್ಲಿ ಸೇರಿಸಿಕೊಂಡು ಅವರ ಬುದ್ಧಿಯನ್ನು ತಮ್ಮ ಕಾರ್ಯದ ರಥಕ್ಕೆ ಹೂಡಿ ಕಾರ್ಯ ಮುಗಿದ ಬಳಿಕ ಅವರಿಗೆ ತಿರಸ್ಕರಿಸಿ ಬಿಡುತ್ತಾರೆ. ಬಳಿಕ, ರಾಷ್ಟ್ರಕ್ಕೆ ಅವರ ಉಪಯೋಗವೇನಿಲ್ಲ. [illegible] ಫಲವು ಏನೂ ಉಪಯೋಗಕ್ಕೆ ಬರಬಹುದೇ? ಸರಕಾರಿ ಸೇವೆಯ ಸ್ವೀಕಾರದಿಂದ ದೇಶಸೇವೆಯು ಮಿಗಿಲಾಗುವದೆಂಬುದು ಒಂದು ದೊಡ್ಡ ಭ್ರಾಂತಿ. ಈ ಭ್ರಮೆಯಿಂದಲೇ ಸ್ವರಾಜ್ಯ ಪಕ್ಷವು ಸರಕಾರಿ ಸೇವೆಯನ್ನು ಅಂಗೀಕರಿಸಿತು; ಇನ್ನೂ ಅಂಗೀಕರಿಸಲಿಚ್ಛಿಸುತ್ತದೆ. ಲಾಲಾ ಲಜಪತರಾಯರು ನೇಮಸ್ತ ಲೋಕನಾಯಕರ ಅವಸ್ಥೆಯನ್ನು ನೆನಪುಮಾಡಿಸಿರುವರು. ದೊಡ್ಡ ದೊಡ್ಡ ನೇಮಸ್ತರು, ಹೆಸರಾದವರು ಸರಕಾರಿ ಸೇವೆಯನ್ನು ಕೈಕೊಂಡು ಪ್ರಾಮಾಣಿಕತನದಿಂದ ಸರಕಾರಿ ಸೇವೆಯನ್ನು ನಡೆಸಿದರು. ಅದರಿಂದ ನಮ್ಮ ಸ್ವರಾಜ್ಯಪ್ರಾಪ್ತಿಯ ಕಾರ್ಯಕ್ಕೆ ಅನುಕೂಲವಾಯಿತೇನು? ಸರ್ ತೇಜ ಬಹಾದ್ದೂರ ಸಪ್ರೂ-ವರು ವಿಖ್ಯಾತ ಕಾಯಿದೆ ಪಂಡಿತರು ದೇಶಸೇವೆಗಾಗಿ ಸರಕಾರಿ ಸೇವೆಯನ್ನು ಅಂಗೀಕರಿಸಿದರು. ಅವರಿಂದ ರಾಷ್ಟ್ರಕ್ಕೆ ಲಾಭವೇನಾದರೂ ಒದಗಿಬಂದಿದೇನು? ನಾಮದಾರ ಚಿಂತಾಮಣಿಯವರು ಪ್ರತಿಷ್ಠಿತ ನೇಮಸ್ತರು. [illegible] ನೇಮಸ್ತ ಪರಂಪರೆಯನ್ನು ಕಾದುಕೊಂಡು ದೇಶಸೇವೆ ಮಾಡುವವರು. ಇವರು ಸಂಯುಕ್ತ ಪ್ರಾಂತದ ದಿವಾಣಪದವನ್ನು ದೇಶಸೇವೆಗಾಗಿ ಅಂಗೀಕರಿಸಿದರು. ಅವರಿಗೆ ದೇಶಸೇವೆ ಮಾಡಲು ಇದರಿಂದ ಅನುಕೂಲವಾಯಿತೇನು? ಸ್ವರಾಜ್ಯಾಧಿಕಾರದ ದಾನವು ಒದಗಿ ಬಂದಿತೇನು? ಆಳರಸರು ತಮಗನುಕೂಲವಾಗುವ ವರೆಗೆ ಅವರನ್ನಿಟ್ಟುಕೊಂಡು ಪ್ರತಿಕೂಲವಾಗುವ ಲಕ್ಷಣ ತೋರಿದ ಕೂಡಲೆ, ಅವರನ್ನು ದಬ್ಬಿಬಿಡುತ್ತಾರೆ. ವೇಶ್ಯೆಯರು ಶ್ರೀಮಂತರೊಡನೆ ಸ್ನೇಹ ಬೆಳೆಸುವದೂ, ಆಳರಸರು ಲೋಕನಾಯಕರೊಡನೆ ಸ್ನೇಹ ಬೆಳೆಸುವದೂ ಒಂದೇ ಮಾದರಿಯದೆಂದು ಲಾಲಾಜಿಯವರು ಅಭಿಪ್ರಾಯಪಟ್ಟಿರುವರು.

ಆಳರಸರು ಬಹಳ ಜಾಗರೂಕ ಪ್ರಾಣಿಗಳು, ತೀಕ್ಷ್ಣಬುದ್ಧಿಯವರು. ತಮ್ಮ ಕಾರ್ಯಸಾಧನೆಗಾಗಿ ದೇಶಸೇವಕರನ್ನ ಅಪಹರಿಸಿ ಅವರ ಬುದ್ಧಿಯನ್ನು ತಮ್ಮ ಸ್ವಕಾರ್ಯಸಾಧನೆಗೆ ಉಪಯೋಗಿಸಿಕೊಳ್ಳಲು ಅವರಷ್ಟು ಚತುರರು ಇನ್ನ್ಯಾರಿಲ್ಲ. ಇಂಥ ಪ್ರಸಕ್ತಿಯಲ್ಲಿ ದೇಶಸೇವೆಯನ್ನೂ ಸರಕಾರಿ ಸೇವೆಯನ್ನೂ ಒಂದೇ [illegible]ಗಳಲ್ಲಿ ಹ್ಯಾಗೆ ಪೋಣಿಸುವದು? ಸರಕಾರಿ ಆಸನಗಳಲ್ಲಿ ಪ್ರತಿಯೋಗಿ ಸಹಕಾರಿತೆ, ಪ್ರತಿಯೋಗಿ ಅಸಹಕಾರಿತೆ, ನಿಯಂತ್ರಿತ ಸಹಕಾರ್ಯ, ಮನೋದೇವತೆಗೆ ವಿರುದ್ಧವಾದರೆ ಪ್ರತ್ಯೇಕವಾಗಿರುವದು ಇತ್ಯಾದಿ ಧೋರಣಗಳು ಕೇವಲ ಶಬ್ದಚ್ಛಲಗಳಿವೆ. ಅದರಿಂದ ದೇಶಕ್ಕೆಂದೂ ಹಿತವಾಗದು; ದೇಶಕಾರ್ಯವು ಎಂದೂ ಸಾಗದು. ಸರಕಾರಿ ಸೇವೆಯೂ ದೇಶಸೇವೆಯೂ ಪರಸ್ಪರ ವಿರುದ್ಧವಿದ್ದು ಅವನ್ನು ಒಬ್ಬನು ಎಂದೂ ಸಾಗಿಸಲಾರನೆಂದು ಲಜಪತರಾಯರು ನಿಶ್ಚಯಪೂರ್ವಕವಾಗಿ ಹೇಳಿರುವರು. ಸರಕಾರಿ ಸೇವೆಯಲ್ಲಿ ಜಾತಿಭೇದವು ಅವರಿಗೆ ಮಾನ್ಯವಿಲ್ಲ. ಶ್ರೀ| ಪಟೇಲರ ಅಧ್ಯಕ್ಷಸ್ಥಾನವೂ, ಪಂಡಿತ ಮೋತಿಲಾಲರ ಸಭಾಸದತ್ವವೂ, ಶ್ರೀ| ತಾಂಬೆಯವರ ಸರಕಾರಿ ನೌಕರಿಯೂ ಒಂದೇ ತರತಿಯವೆಂದು ಅವರ ಹೇಳಿಕೆ. ಇವುಗಳಲ್ಲಿ ಭೇದ ಮಾಡು

ನು ಬುದ್ಧಿಭ್ರಂಶದ ಲಕ್ಷಣವೆಂದು ಅವರ ಹೇಳಿಕೆ. ಆದರಿಂದ ದೇಶಾಭಿಮಾನಿಗಳೆಲ್ಲರೂ ಯಾವದೇ ಪ್ರಕಾರದ ಸರಕಾರಿ ಸೇವೆಯನ್ನು ಅಂಗೀಕರಿಸಲಾಗದೆಂದು ಅಂಗೀಕರಿಸುವಂತ ಉಪಾಯವೊಂದನ್ನೆ ಮಾಡಬೇಕೆಂದು ದೇಶಭಕ್ತರು ಬುದ್ಧಿ ಹೇಳುತ್ತಾರೆ. ಹಾಗೆ ಮಾಡುವದು ಅಶಕ್ಯವಾದರೆ, ಯಾವದೇ ಪ್ರಕಾರದ ಕಟ್ಟಳೆಯ ಮಾಡದೆ ಕೆಲವು ವರ್ಷಗಳ ವರೆಗೆ ಸರಕಾರಿ ಸೇವೆಯನ್ನು ಸ್ವೀಕರಿಸಿ, ದೇಶಸೇವೆಯನ್ನು ಸಾಧಿಸುವ ಪ್ರಯೋಗವನ್ನು ನಾವು ಮಾಡಿನೋಡುತ್ತೇವೆ ಎಂದು ಜಾಹೀರುಪಡಿಸಲು ಶ್ರೀ| ಕೇಳಕರ ಮುಂತಾದವರಿಗೆ [illegible] ಹೇಳುತ್ತಾರೆ. ಹಾಮಿಯಾ ಕಟ್ಟಿ, ಎಂಬುದ ಸ್ವರಾಜ್ಯ ಪಕ್ಷದವರಿಗೆ [illegible] ಸವಾಲು. ಎಲ್ಲ ಸರಕಾರಿ ಸೇವೆಯು ಒಂದೇ ಜಾತಿಯದಿದ್ದು, ಅದರೊಳಗೆ ಭೇದ ಮಾಡುವದು ಅಶಕ್ಯವೆಂದು [illegible] ಅಭಿಮತವಾಗಿದ್ದ ಪದರಿಂದ, ಸರಕಾರಿ ಸೇವೆಯಿಂದ ಒಂದೇ [illegible] ಪ್ತವಾಗಿರ್ರಿ, ಅಥವಾ ಮನಸ್ಸುಟ್ಟಿ ಸೇರಿಕೊಳ್ಳಿ; ಈಗಿನ ಹಿಡಿ-ಬಿಡು ಧೋರಣವು ಬೇಡವೆಂದು [illegible] ಬೋಧಿಸುತ್ತಾರೆ ಸ್ವರಾಜ್ಯ ಪಕ್ಷದ ಸಭೆಯು ನಿನ್ನೆ ತಾ ೧ನೆಯ ನಾಗಪೂರದಲ್ಲಿ ಕೂಡುವದಿತ್ತು. ಆ ಸಭೆಯು ಏನೇನು ಚರ್ಚೆಯಾಗಿರುವದೆಂದು ತಿಳಿಯಲಿಕ್ಕೆ ಮಾರ್ಗವಿಲ್ಲ. ಕಾರಣ ಈ ವಿಷಯು ಕುರಿತು ಮುಂದೆ ವಿಚಾರ ಮಾಡಬೇಕಾಗಿದೆ.

ಸ್ಫುಟ ಸೂಚನೆಗಳು.

೧. ನಾಮದಾರ ತಾಂಬೆಯವರು ಸ್ವರಾಜ್ಯ ಪಕ್ಷದ ಉಚ್ಚ ಅಂತಸ್ತಿನ ಮೇಲಿಂದ ಸರಕಾರಿ ಸೇವೆಯ ಕೆಳಅಂತಸ್ತಿಗೆ ಕ್ರಮವಾಗಿ ಇಳಿದ ಹಕೀಕತು ಮನವಿ ಸ್ವಭಾವದ ದ್ಯೋತಕವಿದೆ. ವಿಚಾರಹೇತುವು ಉತ್ಪನ್ನವಾದಾಗ ಶ್ರೀ| ತಾಂಬೆಯವರು ಹ್ಯಾಗ ಹ್ಯಾಗೆ ವಿಕೃತಿ ಹೊಂದಿದರೆಂಬುದನ್ನು ನಾಗಪೂರದ "ಮಹಾರಾಷ್ಟ್ರ" ಕರ್ತರು ಸ್ಫುಟಗೊಳಿಸಿರುವರು. ಸ್ವರಾಜ್ಯ ಪಕ್ಷದ ಅನುಗ್ರಹದಿಂದ ಶ್ರೀ| ತಾಂಬೆಯವರು ಮಧ್ಯಪ್ರಾಂತದ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಾದರು. ಅಂದಿನಿಂದಲೇ ಶ್ರೀ| ತಾಂಬೆಯವರಿಗೆ ಸ್ವರಾಜ್ಯ ಪಕ್ಷದ [illegible]. ಉಮರಾವತಿಯಲ್ಲಿ ವರ್‍ಹಾಡ ಪ್ರಾಂತದ ಲಿಬರಲ್ ಪಾರ್ಟಿಯ [illegible] ಅಧಿವೇಶನದಲ್ಲಿಯೇ ಶ್ರೀ| ತಾಂಬೆಯವರು ಅಧ್ಯಕ್ಷಸ್ಥಾನದಿಂದ ದೇಶಬಂಧುಗಳ ನಿಧನ ವಾರ್ತೆಯನ್ನು ಉಲ್ಲೇಖಿಸುವಾಗ, ದೇಶಬಂಧುಗಳು ರಾಜಕಾರಣ ಪ್ರಪ್ತಿಯಿಂದ [illegible] ನುಡಿಗಳನ್ನಾಡಿದ್ದರು. ದೇಶಬಂಧುಗಳ ಅವಮಾನವಿರುವವರೆಗೆ ಸ್ವರಾಜ್ಯ ಪಕ್ಷದ ಆಶ್ರಯ ಹಿಡಿದು, ಕಾಯಿದೆ ಕೌನ್ಸಿಲಿನ ಅಧ್ಯಕ್ಷಸ್ಥಾನವನ್ನು ಆಕ್ರಮಿಸುವ ವರೆಗೆ ಶ್ರೀ| ತಾಂಬೆಯವರಿಗೆ ಸ್ವರಾಜ್ಯ ಪಕ್ಷದ ರಾಷ್ಟ್ರಸೇವಾ ಧೋರಣದೊಳಗಿನ ಕುಂದುಕೊರತೆಗಳು ಕಂಡು ಬರಲಿಲ್ಲಾದದ್ದು ಸ್ವರಾಜ್ಯ ಪಕ್ಷದ ಭಾಗ್ಯವು; ದೇಶಬಂಧುಗಳ ಸುದೈವವು. ಭಾರತ ಮಂತ್ರಿ ಬರ್ಕನ್ ಹೆಡ್ ದೊರೆಗಳ ಭಾಷಣವನ್ನು ನಿಷೇಧಿಸಿ, ಸ್ವರಾಜ್ಯ ಪಕ್ಷದ ಡಾ| ಮುಂಜೇಯವರ [illegible] ಪ್ರಾಂತಾಧಿಪರಿಗೊಂದು ಎತ್ರ್ರಸ ಯೋಜನೆ ಬಿನ್ನಹವನ್ನು ಸೂಚಿಸುವವರಿದ್ದರು. ಇದನ್ನು ಸ್ವರಾಜ್ಯ ಪಕ್ಷದ ಅಧ್ಯಕ್ಷರೇ ಕಾಯಿದೆಯ ನೆವ ಮಾಡಿ ತಿರಸ್ಕರಿಸಿಬಿಟ್ಟರು. ನಾಮದಾರ ಗವ್ಹರ್ನರರು ಕುಷ್ಠರೋಗ ನಿಧಿಗೆ ಅರ್ಪಿಸಿದ ೧ ಸಾವಿರ ರೂಪಾಯಿಗಳು ಎಷ್ಟು ವೆಂಬ ಪ್ರಶ್ನೆಯನ್ನು ತಿರಸ್ಕರಿಸಿದವರು ಸ್ವರಾಜ್ಯ ಪಕ್ಷದ ಶ್ರೀ| ತಾಂಬೆಯವರೇ; ಸವಾಲು ಕೇಳಿದ ಸಭಾಸದರೂ ಸ್ವರಾಜ್ಯ ಪಕ್ಷದವರೇ. ಸ್ವರಾಜ್ಯ ಪಕ್ಷದ ನಿಟ್ಟಣಿಕೆಯು ಠರಾವುಗಳನ್ನು ಕ್ರಮವಾಗಿ ಎರಿ ವೇಳಾಪತ್ರಿಗೆ ಮುಟ್ಟಿದೊಡನೆ, ಶ್ರೀ| ತಾಂಬೆಯವರು ನಿಟ್ಟಣಿಕೆಯನ್ನು ದೂರ ಸಾರಿ ಮನಬಂದಾಗ ವಿಚಾರ ನಡೆಸಿ, ಈಗಂತೂ ಮಧ್ಯಪ್ರಾಂತದ ಸರಕಾರದ ಅಂತಃಪ್ರವೇಶ ಮಾಡಿ ಹೊರತು ಸ್ವರಾಜ್ಯ ಪಕ್ಷದ ದ್ರೋಹ ಮಾಡಿರುವರು. ಸ್ವರಾಜ್ಯ ಪಕ್ಷದ ಸಭಾಸದರು ಅಧ್ಯಕ್ಷರ ಸಲುವಾಗಿ ಬರೇ ೮೦೦ ರೂಪಾಯಿಗಳಿಗೆ ಇಳಿಸಿದ್ದರಿಂದ ನಾಮದಾರರು ಕೆರಳಿದ್ದರೆಂದು 'ಮಹಾರಾಷ್ಟ್ರ' ಕರ್ತರು ಧ್ವನಿಸುತ್ತಾರೆ. ಅದು ಹ್ಯಾಗೂ ಇರಲಿ; ನಿಷ್ಕಾಮ-ನಿರ್ಭಯ-ನಿಷ್ಪಕ್ಷಪಾತ ಮಾಡುವವರೆಂದು ಹುರುಪು ಕೊಡ ಶ್ರೀ| ತಾಂಬೆಯವರು ಅಧಿಕಾರ ಸ್ವೀಕರಿಸಿ, ಶ್ರೀ| ನರಸೋಪಂತ ಕೇಳಕರರ ಭಾಷೆಯಿಂದ ಹೇಳುವದಾದರೆ, ಪ್ರತಿಯೋಗಿ ಸಹಕಾರಿಯಾಗಿ, ಸ್ವರಾಜ್ಯ ಪಕ್ಷದವರು ರಾಷ್ಟ್ರೀಯ ಸಭಾಭಿಮಾನಿಗಳು, ಬೆಹಸ್ತೇವೆಗಾಗಿ ಬದ್ಧಕಂಕಣರಾದ [illegible] ರಾಗಿ ಇಂಥ ಅವಘಡಗಳು ಇನ್ನು ಮುಂದೆ ಒದಗಿ ಬರದಂತೆ ಸೇವೆಯ ಉಪಾಯ ಯೋಜನೆ ಮಾಡತಕ್ಕದ್ದು. ಅಖಿಲ ಭಾರತೀಯರು ನಾಗಪೂರದ ಕಡೆಗೆ ಕಣ್ಣಿಟ್ಟು ಕೂತುಕೊಂಡಿರುವದು ಸಹಜವಿದೆ.

---

೨ ಗ್ರೀಕ ಹಾಗೂ ಬಲ್ಗೇರಿಯಾ ದೇಶಗಳಲ್ಲಿ ಈಗ ಯುದ್ಧ ಹೊತ್ತುವ ಲಕ್ಷಣಗಳು ತಲೆದೋರಿದ್ದವು. ಮೆಸೆಡೋನಿಯಾ ಪಟ್ಟಣದಲ್ಲಿ ಗ್ರೀಸ ಹಾಗು ಬಲ್ಗೇರಿಯಾ ದೇಶದ ಕಾವಲುಗಾರ ಪೋಲೀಸರಿರುವರು. ಅಲ್ಲಿ ಇಬ್ಬರೊಳಗೂ ಏನೋ ಒಂದು ಮುಸಲವೆದ್ದು ಕಲಹವಾಯಿತು. ಬಲ್ಗೇರಿಯನ್ನರು ಗ್ರೀಸ ಪ್ರದೇಶದಲ್ಲಿ ಸೇರಿ ಕೆಲ ಗ್ರೀಕರನ್ನು ಕೊಂದುಹಾಕಿಬಿಟ್ಟರು. ಇದನ್ನು ಕೇಳಿದೊಡನೆ, ಗ್ರೀಕ ಸೈನ್ಯದ ತಂಡಗಳು ಬಲ್ಗೇರಿಯನ್ ಪ್ರದೇಶದಲ್ಲಿ ನುಗ್ಗಿ ೧೦-೧೨ ಮೈಲು ಅಗಲದ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡರು. ಈ ಪ್ರಕರಣದಲ್ಲಿ ಮುಪ್ಪು ಗುಂಡುಗಳು ಹಾರಿದವು. ದಾಳಿಯು ಅನಪೇಕ್ಷಿತವಾಗಿದ್ದರಿಂದ ನಿಶ್ಶಸ್ತ್ರರಾದ ಹೆಂಗಸರೂ, ಹುಡುಗರೂ ಮಡಿದರು. ಇಷ್ಟು ಮಾಡಿ ಗ್ರೀಕರ ಕಡೆಯಲ್ಲಿ ಬಲ್ಗೇರಿಯಾ ಸರಕಾರಕ್ಕೆ ಆಖೈರ ತಾಸಿನ ನೋಟೀಸು ಕೊಟ್ಟರು. ಗ್ರೀಕರ ಕೊಲೆಯಾದ ಬಗ್ಗೆ ಬಲ್ಗೇರಿಯನ್ನರು ಮಾಫಿ ಬೇಡಬೇಕು; ಕೊಲೆಗಡುಕರಿಗೆ ಶಾಸನವಾಗಬೇಕು; ಲುಕ್ಸಾನು ಭರಪಾಯಿ ಬಗ್ಗೆ ೨೦ ಲಕ್ಷ ಫ್ರಾಂಕ್ಸ ಕೊಡಬೇಕ; ಇಲ್ಲದಿದ್ದರೆ, ಗ್ರೀಕ ಸೈನ್ಯವು ಬಲ್ಗೇರಿಯಾದ ರಾಜಧಾನಿಯಾದ ಸೋಫಿಯಾ ಪಟ್ಟಣದ ಮೇಲೆ ದಂಡೆತ್ತಿ ಬರುವದು. ಕಳ್ಳನೆಂದು ಕೋತವಾಲನಿಗೆ ಸರೆಹಿಡಿದ ಕಥೆಯಾಯಿತು! ಗ್ರೀಕ ಸಿಪಾಯಿಯ ಕೊಲೆಯಾದದ್ದು ನಿಜವು; ತಪ್ಪಿ ಕೊಲೆಯಾಯಿತು. ಈ ಬಗ್ಗೆ ಬಲ್ಗೇರಿಯಾ ಸರಕಾರವು ವ್ಯಸನ ಪ್ರದರ್ಶನ ಮಾಡಿತು. ಆದರೆ, ಒಳಹೊಕ್ಕ ಗ್ರೀಕ ಸೈನ್ಯವನ್ನು ಹೊರದಬ್ಬಲು ಬಲ್ಗೇರಿಯನ್ನರು ತಕರಾರು ಮಾಡಬೇಕಾಗಿತ್ತು. ಅದನ್ನು ಬಿಟ್ಟು ಸ್ವತಃ ಗ್ರೀಕರೇ ಬಲ್ಗೇರಿಯಾ ಪ್ರದೇಶದ ಮೇಲೆ ಹಾವಳಿ ಹಾಕಿ, ಮೇಲೆ ಲುಕ್ಸಾನುಭರಪಾಯಿ ಕೇಳುವದು ವಿಪರೀತವೆಂದು ಬಲ್ಗೇರಿಯಾ ಸರಕಾರವು ಹೇಳಿ, ರಾಷ್ಟ್ರಸಂಘಕ್ಕೆ ಈ ವಿಷಯ ದೂರಿಕೊಂಡಿದೆ. ರಾಷ್ಟ್ರಸಂಘದವರು ಇತ್ತಂಡದವರಿಗೂ ತಮ್ಮ ತಮ್ಮ ಸೈನ್ಯಗಳನ್ನು ಹಿಂತೆಗೆದುಕೊಳ್ಳಲು ಅಪ್ಪಣೆಯನ್ನಿತ್ತರು. ಗ್ರೀಕ ಸರಕಾರವು ಹಿಂದೆ ಮುಂದೆ ನೋಡಿ ವಿಧಿಯಿಲ್ಲದೆ ಕಳೆದ ಅಕ್ಟೋಬರ ೩೦ ನೇ ತಾರೀಖಿಗೆ ತನ್ನ ಸೈನ್ಯವನ್ನು ಹಿಂತೆಗೆದುಕೊಳ್ಳುತ್ತದೆಂದು ತಿಳಿದುಬರುತ್ತದೆ ಈ ಮುಂದೆ ಗ್ರೀಕ-ಬಲ್ಗೇರಿಯಾ ಪ್ರಕರಣವನ್ನು ರಾಷ್ಟ್ರಸಂಘವು ತೀರ್ಮಾನಿಸುವದು. ಯುದ್ಧ ತಡೆದ ಹಕೀಕತು ಸಂತೋಷಪ್ರದವು. ರಾಷ್ಟ್ರಸಂಘವು ಪ್ರಬಲ ರಾಷ್ಟ್ರ ರಾಷ್ಟ್ರಗಳೊಳಗಿನ ಅಂತಃಕಲಹಗಳನ್ನು ಇದೇ ಪರಿಯಿಂದ ತೀರ್ಮಾನಿಸಲು ಸಮರ್ಥವಾದರೆ, ಭೂಮಂಡಲಕ್ಕೆ ಹಿತವಾಗುವದು.

---

೩. ಸೀರಿಯಾ ದೇಶದ ರಾಜಧಾನಿಯಾದ ಡಮಾಸ್ಕಸ್ ಪಟ್ಟಣವನ್ನು ಪಾಶ್ಚಾತ್ಯ ಸುಧಾರಣೆಯ ಶಿಖರವನ್ನೇರಿದ ಫ್ರೆಂಚರು ಕ್ರೂರವಾಗಿ ನಷ್ಟಪಡಿಸಿದರೆಂದು ಸುದ್ದಿ ಬಂದಿದೆ. ಸಿರಿಯಾ ದೇಶದ ಡ್ರೂಸಿ ಪಟ್ಟಣದಲ್ಲಿ ಫ್ರೆಂಚರಿಗೂ, ಡ್ರೂಸರಿಗೂ ಕೂಡಿ ಬರುವದಿಲ್ಲ. ಅಲ್ಲಿ ಡ್ರೂಸರು ದೊಂಬಿಯನ್ನೆಬ್ಬಿಸಿದರು. ಕೆಲ ದಂಗೆಗಾರರು ಒಬ್ಬ ಫ್ರೆಂಚ ಅಧಿಕಾರನನ್ನು, ಒಬ್ಬ ಪೋಲೀಸನನ್ನೂ ಕೊಂದರು. ಫ್ರೆಂಚರು ಕೆಲ ದಂಗೆಗಾರರನ್ನು ಕೊಂದು ಬೀದಿಯಲ್ಲಿ ತಿರುಗಿಸಿದರು; ಕೆಲ ದಂಗೆಗಾರರು ತಪ್ಪಿಸಿಕೊಂಡರು. ಅವರನ್ನು ಹಣ್ಣುಗೆ ತರುವ ನೆವ ಮಾಡಿ ಫ್ರೆಂಚರು ಇದೇ ಡಮಾಸ್ಕಸ್ ಪಟ್ಟಣದ ಮೇಲೆ ಅಕ್ಟೋಬರ ತಾ.೧೮ನೇ ರವಿವಾರದಿಂದ ತಾ.೨೦ನೇ ಮಂಗಳವಾರದ ವರೆಗೆ ಏಕಸವನೆ ಮದ್ದುಗುಂಡುಗಳನ್ನು ಹಾರಿಸಿ ಅಪರಿಮಿತ, ಹೇಳಬಾರದಷ್ಟು ಹಾನಿ ಮಾಡಿದರು. ಡಮಾಸ್ಕಸ್ ಪಟ್ಟಣವು ನಯನಮನೋಹರವು. ಅಲ್ಲಿಯ ಕಟ್ಟಡಗಳೂ, ಉಪವನಗಳೂ ರಮಣೀಯವು. ೫೦ ಸಾವಿರ ಪ್ರಜಾಜನರಿರುವರು. ಇದು ಬಹಳ ಪುರಾತನ ಕಾಲದ ನಗರವು. ಇಂಥ ಪುರಾತನ ಸಂಸ್ಕೃತಿಯ ಶಿಲ್ಪಶಾಸ್ತ್ರದ ಪ್ರತ್ಯಕ್ಷ ಮೂರ್ತಿಯಾದ ಪ್ರಜೆಗಳಿಂದ ತುಂಬಿತುಳುಕುವ ನಗರದ ಮೇಲೆ ಫ್ರೆಂಚರು ಮೂರು ದಿವಸಗಳ ವರೆಗೆ ಗುಂಡು ಹಾರಿಸಿದ ಕಥೆಯು ಪಾಶ್ಚಾತ್ಯ ಸಂಸ್ಕೃತಿಯ ಪಕ್ಕುಕ್ಕುವಕ್ಕೆ ಉದಾಹರಿಸಬಹುದು. ಅನೇಕ ದಂಗೆಗಾರರು ಫ್ರೆಂಚರಿಗೆ ಎದುರಾಳಿಗಳಾಗಿ ನಿಂತು ಘಂಟರಂತೆ ಹೋರಾಡಿ ಪ್ರಾಣಾರ್ಪಣ ಮಾಡಿದರಂತೆ. ವಿಮಾನಗಳಿಂದ ಪ್ರಜೆಗಳ ಮೇಲೆ ಬಾಂಬುಗಳ ಸುರಿಮಳೆಯಾಯಿತು. ಅತ್ಯಂತ ಸುಂದರವಾದ ಅಜ್ಮಿಯತ್ ಅರಮನೆಯೂ, ಇತರ ಕಟ್ಟಡಗಳೂ ನಾಶಹೊಂದಿವೆ. ನೂರಾರು ನಿರಪರಾಧಿ ಸ್ತ್ರೀಯರೂ, ಹುಡುಗರೂ ಫ್ರೆಂಚರ ಮದ್ದುಗುಂಡುಗಳಿಗೆ ಬಲಿಬಿದ್ದಿರುವರು. ಬೀದಿಗಳಲ್ಲಿ ಹೆಣಗಳು ರಾಶಿಯಾಗಿ ಬಿದ್ದಿವೆ. ೫೦೦೦ ಜನರು ನೆಲಕ್ಕುರುಳಿದ ಕಟ್ಟಡಗಳ ಕೆಳಗೆ ಬಿದ್ದಿರಬೇಕೆಂದು ಒಬ್ಬ ಪ್ರಯಾಣಿಕನು "ರೊಯಿಟರ" ವಾರ್ತಾಪತ್ರಕ್ಕೆ ತಿಳಿಸುತ್ತಾನೆ.

ಕಷ್ಟದಗಳ ಕೇಳಿಸಿಲ್ಲುಕಿದವರು ೩೫೦೦೦ ಪ್ರಜೆಗಳಿ ದು ಮೌಲಾನಾ ಶೌಕತ ಅಲ್ಲಿಯುವರಿಗೆ ತಂತಿ ಬಂದಿ ರುತ್ತದೆ ಫ್ರೆಂಚರು ಪಟ್ಟಣದ ಮೇಲೆ ವಿಧ್ವಾಗುಂಡು ಹಾರಿಸುವ ಮುಂಚೆ ನಿರಪರಾಧಿ ಸ್ತ್ರೀ-ಪುರುಷ ಬಾಲಕರಿಗೆ ಮುಂಜಾಗ್ರತೆಯನ್ನು ಸಹ ಕೊಡದೆ, ಕೊಲೆಮಾಡಿದರೆಂದು ಸಿದ್ಧಿಗಾರರು ಹೇಳುತ್ತಾರೆ ಇದರಿಂದ ಪಂಜಾಬದೊಳಗಿನ ಜಾಲಿಯನ್‌ವಾಲಾ ಬಾಗದಲ್ಲಿ ಒದಗಿಬಂದ ಕ್ರೂರ ಕಥೆಯು ನೆನವರಿಕೆಯು ಅನೇಕರಿಗಾಗದಿರದು. ಈ ಕುರಿತು ಸಂಪೂರ್ಣ ಹಕೀಕತು ಇನ್ನೂ ತಿಳಿಯದ್ದರಿಂದ ಈ ಮುಂದೆ ಈ ಘಾತಕಾಕ ಸಮಾಲೋಚಿಸುವದು ಒಳ್ಳೆದು.

ಸ್ಥಾನಿಕ ವೃತ್ತಾಂತ

ಕುಮಟಾ—ವನಭೋಜನ ಉತ್ಸವವು ಮೊನ್ನೆ ಶನಿವಾರಕ್ಕೆ ನಿರ್ವಿಘ್ನತೆಯಿಂದ ಜರುಗಿಂಡಿತು

ಜಿಲ್ಲಾ ಕಾಂಗ್ರೆಸ ಕಮೀಟಿಯ ವಾರ್ಷಿಕ ಮಹಾಸಭೆಯು ಇದೇ ಬರುವ ನವಂಬರ ೩೦ ಗಿಸನೇ ರವಿವಾರ ಮಧ್ಯಾನ್ಹ ೪ ಘಂಟೆಗೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಕೂಡುವದಿದೆ ಬದ್ಧವೆ—ಲೆಕ್ಕದ ಪತ್ರಿಕೆಯು ಮಂಜೂರಿ, ಕಾರ್ಯಕಾರಿ ಮಂಡಳದ ನೇಮಣೂಕಿ ಪ್ರಾಂತಿಕ ಕಮೀಟಿ ಫಾವಪುರ ಕಾಂಗ್ರೆಸಗಳಿಗೆ ಪ್ರತಿನಿಧಿಗಳನ್ನು ಆರಿಸುವದು ಅಧ್ಯಕ್ಷರ ವಿಷಯಗಳ ವಿಚಾರವಾಗುವದಿದಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ

ಸಾಭಾರ ಸ್ವೀಕಾರ

ರಂಗಭೂಮಿ—ತೃತೀಯ ಸಂಚಿಕೆ ಸಂಪಾದಕ ಮತ್ತು ಪ್ರಕಾಶಕ ಶ್ರೀ ದತ್ತಾತ್ರಯ ಕೃಷ್ಣ ಭಾರದ್ವಾಜ ಅನಂತಾಶ್ರಮ ಬಸವನಗುಡಿ ಬೆಂಗಳೂರು ವಾರ್ಷಿಕ ಚಂದಾ ರೂ. ೩-೦-೦

ವಿಶ್ವಬಂಧುವಿನ ವಿಶೇಷ ಸಂಚಿಕೆ—ಸಂಪಾದಕ—ನ್ಯಾಯತೀರ್ಥ ಶಾಂತಿರಾಜ ಶಾಸ್ತ್ರಿಗಳು ಬೆಂಗಳೂರು ವಾರ್ಷಿಕ ಚಂದಾ ರೂಪಾಯಿ ೧-೮-೦

ಮುರ್ಡೇಶ್ವರ— ಈ ಊರಲ್ಲಿ ಅಂದರೆ ಮಾವಳ್ಳಿ ಮತ್ತು ಶಿರಾಲಿ ಎಂಬ ಗ್ರಾಮಗಳಲ್ಲಿ ಮಕ್ಕಿಗದ್ದೆಗಳು ಹೊರು ಕಡೆಯಂದು ಬಹಳ ಕೆಟ್ಟು ಹೋಗಿರುತ್ತವೆ ಹೊಂತದ ಗದ್ದೆಗಳಿಗ ಮಾತ್ರ ಸಾಧಾರಣ ಬೆಳೆ ಉಂಟು ೪—೫ ದಿವಸಗಳಿಂದ ಪೈರು ಕಟಾವಿ ಕೆಲಸ ವಷ್ಟರಿಂದ ನಡೆದದೆ. ಹೋದವರ್ಷ ಒಂದು ಮುಡಿ ಬೀಜವಾಗ ಗದ್ದೆ ಕೊಯ್ಯಲಿಕ್ಕೆ ೨ ದಿವಸಗಳು ತಗಲಿದರೆ ಈ ವರ್ಷ ಅದೇ ಮಕ್ಕಿಗದ್ದೆ ಕೊಯ್ಯಲಿಕ್ಕೆ ೨ ತಾಸು ಸಹ ಬೇಕಾಗಷ್ಟು ಹೀನ ಸ್ಥಿತಿ ಆಗಿರುವ ಒಂದೂರದಗಿದ್ದು ಬಹಳ ಕೃಷಿಕರೇ ಸಂ. ದನ-ಕರುಗಳ ಬಗ್ಗೆ ಕರಡ ಸಹ ಕವಿ ಇದ ಕಾರಣ ಬಡ ರೈತರೆಲ್ಲರೂ ಜನಾವರಗಳು ಪೋಷಿಸುವದು ಹ್ಯಾಗೆಂತ ಬಹಳ ಯೋಜನೆಯಲ್ಲಿ ಇದ್ದಾರೆ ಬಡ ರೈತರಿಗೆಲ್ಲ ಭತ್ತದ ಬೆಳೆ ಬಾತ್ಸಾನು ಅವಲ್ಲಿ (೪) ನಾಲ್ಕು ರೂಪಾಯಿ ಕೊಟ್ಟರೆ ಬಂದು ಕಾಳಿಮುಂದ ಪರಿಯಂತರ ಆ ವೇಳೆಯಲ್ಲಿ ಬಹಳ ಖುಟುಸುವದಾಗಿ ೨—೩ ದಿವಸ ತಿರುಗಾಡಿದರೆ ಸಿಗುತ್ತದೆ ಆದಾದರೂ ಬೇಕಷ್ಟು ಜನರಿಗೆ ಸಿಗುವದಿಲ್ಲ ಇವೆಲ್ಲ ಕಾರಣದಿಂದ ಈ ವರ್ಷ ಆದರೂ ಹಾಳಿ ಬಡ ರೈತರಿಗೆ ಸಂಕಾರದವರು ಸ್ವಲ್ಪ ಒದಗಿಸಿಕೊಟ್ಟಾರೋ ? ನೋಡಬೇಕು. ಅದರೆ ಜನಾವರಗಳ ಆಹಾರಕ್ಕೆ ಕರಡ ಹಿನಹು ಅನ್ಯಗತಿ ಮೋಹಲ್ಲಾದ್ದರಿಂದ ನಮ್ಮ ದಯಾಳು ಸರಕಾರವು ಜನಾವರುಗಳ ಪೋಷಣೆಕ್ಕಾಗ್ಗೆ ಬಡ ರೈತರಿಗೆ ಏನು ವ್ಯವಸ್ಥೆ ಮಾಡುತ್ತದೆಂದು ನೋಡಬೇಕು

ಈ ಊರಲ್ಲಿ ಕಾಳಿಗ ಗದ್ದೆಗಳ ಹೊರ್ತು ಸುಗ್ಗಿ ಗದ್ದೆಗಳು ಇಲ್ಲಾ ಇಲ್ಲಿ ಸ್ವಲ್ಪ ಕಡೆ ಜನ-ಜನಾವರುಗಳ ದಕೆಯಿಂದ ಸರಕಾರದಿಂದ ದಟ್ಟ ಸಾರ್ವಜನಿಕ ಕೋಟುಬಾವಿ ದಾವಿಗಳು ಸಮುದ್ರ ನಾಕವಾಡಿ ಜನ-ಜನಾವರುಗಳಿಗೆ ಬಂದು ಕಡೆಯಿಂದ ಬಂಕ್ತಾಂತು ಇದೆ ಹೊಳಿಗಾಬಿಲಿಕ್ಕೆ ಅಡ್ಡಿ ಮಾಡಿ ಲಗ್ಗ ಅದ್ದ ದಡ್ಡಿ ಮನೆಗೋಷದ

ದರು ತವ್ವ ತನ್ನ ಜಾಗಕ್ಕೆ ನೆ ರಿಸಿಕೊಂಡು ತಂಗಿನರು ದಾರ ವಗ್ಗರ ಮಾಡಿ ಉತ್ಪನ್ನ ತಿನ್ನುತ್ತಿದ್ದಾರೆ ಕಾರಣ ಸರಕಾರದವರು ಬೌಕಿ ಮಾಡಿ ಯೋಗ್ಯ ಬಂದೋಬಸ್ತ ಮಾಡ್ಯಾರೋ? ಕಾಪಗ ಲಕ್ಷ್ಯ ಕೊಡ್ಡದ ಪಳ್ಳಿಗೆ ದಾ ೮ ೪ ೮ ಬೈರಿಗೆ ೪ ೦ ತಂಗಿನ ಎಣ್ಣೆ ೧೮ ೩೦ ತಂಗಿನಕಾಯಿ ದರ ಸಾವಿರಕ್ಕೆ ೮೦-೮೫ರವರೆಗೆ (ತಾ ೨೫ ೧೦ ೩೬

ಶಿರ್ಸಿ— ಕೆಲವು ಮೋಟರುಗಳ ಮೇಲೆ ಬರುವಂಥ ಹಸ್ ಪ್ಯಾಸೆಂಜರ (ಹಸಿಮೀನು) ವ್ಯಾಪಾರವು ರಸ್ತೆಯ ಬದಿಗೇ ನಡೆಯುತ್ತಿರುವ ಕಾರಣ ಅದರ ದುರ್ಗಂಧದಿಂದ ತಿರುಗಾಡುವವರಿಗೆ ಬಹಳೇ ಉಪದ್ರವವಾಗುತ್ತದೆ ಇಂಥ ವ್ಯಾಪಾರಕ್ಕೆ ಪ್ರತ್ಯೇಕ ಸ್ಥಳವ ನೇಮಿಸಿರುತ್ತಿದ್ದಾಗ್ಗು ಕಾರಣವೇನು ? ಈ ದುರ್ಗಂಧವು ಮುನಿಸಿಪಾಲಿಟಿಯ ಆಫೀಸಕ್ಕೆ ಮುಟ್ಟಿರುವದಿಲ್ಲವೇ?

ಈ ವರೆಗೆ ಸುಮಾರು ೮೦ ದಿನಗಳು ಪತ್ತೆರಬಹುದು ಇನ್ನೂ ಸಾಯುತ್ತಲಿವೆ ಗಡಿಯಾಂತೆಗೆ ದಟ್ಟಿಯನ್ನು ಹಾಕಿದವರು ೩ ೮ ಕಾಗಗಳನ್ನು ಕಡಿಸಿದ ಮೇಲೆ ಮತ್ತ ಪಾಲ ಗಾದರಾ ೨೦ ತಾಯಿಕ್ಕು ಆಜ್ಞಾ ಮಾತ್ ಕೃಷಂ ದಾಪಂ ದಶ್ಮ ತ್ತ್ ಪೋನ ಕದ್ದಕೆ ಎಂಬಂತೆ ಅವರು ಕೃತಕರ್ಮ ಕ್ಕಗಿ ದಟ್ಟ ತ್ತ ಹಟ್ಟಿ ಇನ್ನು ಮೇಲೆ ಈ ತರದ ಮೂರ್ಖತನ ಗಸೆಗಳಿಗೆ ಇಂಬು ಗೊಡಲಿಕ್ಕಿಲ್ಲವೆಂಬುಂತೆ ಕಾಣ ಇದೆ!

ಕನ್ನಡ ಮುಲಕಿ ಪರೀಕ್ಷೆಯ ಪರಿಣಾಮ

೧ ಜನಾರ್ದನ ಗೋಪಾಲಕೃಷ್ಣ ಭಟ್ಟ ಕುಮಟಾ ೨ ಮಾಧವ ಬೀರಾಬಾದ ೯, ಬೈಚವಾಲ, ಕಾರವಾರ ೩ ಗಣಪಯ್ಯ ನಾಗಪ್ಪ ಶೆಟ್ಟಿ ಅಪ್ಪಸೂರ, ೪ ಕೃಷ್ಣಾ ವಿಠ್ಠಲ ಮಡಿವಾಳ ಹೊನ್ನಾವರ, ೫ ಭಾಸ್ಕರ ಗೋಪಾಳರಾವ ಗೋಖಲೆ, ಶಾವಂತ, ೬ ತಿಪ್ಪಾ ಮಾಂಡ ರಂಗೆ ನಾಯ್ಕ ಮೊಡಗೇರಿ ೭ ಗೋವಿಂದ ಗೌರಿ ದೇವಿ, ಅಪ್ಪರ್ಗ ೮ ಸತ್ಯಾಯ ಪಿರೋಜು ಶೆಟ್ಟಿ ಚೆಂಡಿಯ ೯ ದತ್ತ ಗ್ರಾಂಡ್ಲ ನಾಯ್ಕ ಕಾನಸಗೇರಿ ೧೦ ಗಣಪಯ್ಯ ಸೋಮಯ್ಯ ನಾಯ್ಕ ಹೊನ್ನಾವರ ೧೧ ನಾರಾಯಣ ಜಟ್ಟು ದೇಶಭಂಡಾರಿ ಕುಮಟಾ, ೧೨. ರಾಮಾ ದಾಸ ಕಾಮತ ಹೊನ್ನಾವರ, ೧೩ ರಾಮಕೃಷ್ಣ ಕಾಡ್ಡ ಶೆಟ್ಟಿ ಕೋಟ ಕಲ, ೧೪ ವಾಸುದೇವ ಗಣೇಶ ಮಹಾಲೆ, ೧೫ ಕೊಲ್ಲ ೧೬ ಸುಬ್ರಾಯ ವೆಂಕಪ್ಪ ನಾಯ್ಕ ಹೊನ್ನಾವರ, ೧೭ ಬೊಮ್ಮಯ್ಯಾ ರಾಕು ನಾಯ್ಕ ಹೊನ್ನಾವರ ೧೮ ಜನ್ನಾರ್ತಿ ಭೀಮಾಜಿ ರಮಾಳಕರ, ಸಿದ್ದಾಪುರ, ೧೯ ಯಶವಂತ ಮಾರು ಕೋವಾರಕರ ಮಾಶೇಲ ೨೦ ಗಂಗಾಧರ ವಿಠ್ಠಲ ಗಾಂವಕರ ಸಿದ್ದಾಪುರ ೨೧ ಶ್ರೀನಿವಾಸ ರಾವ ಪ್ರಭು ಕಾರವಾರ ೨೨ ಶಂಕರ ಶಿವಗಿರಿ ಪೈ ಹಳದೀಪುರ, ೨೩. ವೆಂಕಟರಮಣ ರಾಮ ಭಟ್ಟ ಚಿತ್ರಿಗಿ ಕುಮಟಾ, ೨೪. ವಿಠೋಬ ಸುಬ್ರಾಯ ಮಾನಸ್ಯ ಕಾಗಾಲ ೨೫ ನಾಗೇಶ ರಾಮಚಂದ್ರ ಶೆಟ್ಟಿ ಬಾಡ ೨೬. ವೆಂಕಟರಮಣ ಗಣಪತಿ ಗುನಗಾ ಕುಮಟಾ, ೨೭ ಜೆಹರುದ್ದೀನ ಮಾ ಖಿಜಾರ ಬಾಜಾ ಮುರ್ಡೇಗೇರಿ, ೨೮. ಮಳ್ಳಗಿರಿ ಗೋಪಾಲ ಕಾಮತ ಬಂಕಿಕೊಡ್ಲ, ೨೯ ರಾಮಚಂದ್ರ ಪಿಕೋಬು ನಾಯ್ಕ ಕಾರವಾರ, ೩೦. ಭವಾನಿಶಂಕರ ಕಾಳಪ್ಪರಾವ ಗೋಕರ್ಣ, ತೊರ್ಕೆ ೩೧ ನಾಗೇಶ ಅನಂತ ಬಾಂದೇಕರ ಬಾಡ (ಕಾರವಾರ) ೩೨ ದುನಚೇಲ ಹನುಮಂತ ಗೋಕಲ, ಹಳದೀಪುರ ೩೩ ಸೀತಾರಾಮ ಶಿವರಾಮ ಧ್ಯಾನಭಾಗ, ಕಾಗಾಲ ೩೪. ಶ್ರೀನಿವಾಸ ಮಂಜನಾಥ ಹೊನ್ನಾವರ, ಹೊನ್ನಾವರ, ೩೫ ವಿಷ್ಣು ಕಾಂಬು ಪೋಲೀಸ ಮುರ್ಡೇಗೇರಿ, ೩೬. ಜಟ್ಟಿ ದೇವಿ ಅಂಬಿಗ ಯಲ್ಲಾಪುರ ೩೭. ಗಜಾನನ ಗೋವಿಂದ ನಾಯ್ಕ ಕಾರವಾರ. ೩೮ ರಾಮಚಂದ್ರ, ಮಂಜನಾಥ ಶೇಟ ಅರವಿ ೩೯ ದತ್ತ ಅಪ್ಪ ನಾಯಕ ಕೊಡಿಬಾಗ ೪೦ ಕೃಷ್ಣ ಅನಂತ ಹೆಗಡೆ ಧಾರೇಶ್ವರ, ೪೧, ಅಬ್ದುಲ್ ಹಮೀದ ಖಾನ ಸಾಬ ಯಲ್ಲಾಪುರ ೪೨. ಅಬ್ದುಲ್ ಮಲಿಕ ಯಲ್ಲಾಪುರ ಕೊನೆಯ ಅಕ್ಷರ ಅನ್ನುಮಂಗಳ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು

Wanted.

Contractors to take up the work of rebuilding the bridge on the road from Mahableshwar temple to the sea at Gokarn. Those who wish to take up the work are requested to see the u/s personally for particulars.

M. G Gopi,
Chairman,
Gokarn Municipality

ಗಿಬ್ಬ ಹ್ಯಾಸ್ಕೂಲು.

ಒಂದು ಖುಲಾಸೆ

"ಕಾನಡಾವೃತ್ತ" ಪತ್ರಕರ್ತರಿಗೆ—

"ಗಿಬ್ಬ ಹ್ಯಾಸ್ಕೂಲು" ಎಂಬ ಸದರಿನಲ್ಲಿ ನಿಮ್ಮ ಪತ್ರದಲ್ಲಿ ಗತ್ತನಿರ್ಗ ಬೊಡಿಯ ವೃತ್ತಾಂತವು ಪ್ರಕಟವಾಗಿದೆ. ಅದರೊಳಗೆ ಶಾಲೆಯೊಳಗಿನ ಶಿಕ್ಷಕರು ಹೊತ್ತಿಗೆ ಸರಿಯಾಗಿ ಬರುವದಿಲ್ಲವಾಗಿ ರಾವಬಹಾದ್ದೂರ ಪಂಡಿತರು ಆಕ್ಷೇಪಿಸಿದ್ದಕ್ಕೆ ಸುಪರಿಂಟೆಂಡೆಂಟರಾದ ಮಿ। ಎಸ್ ಎಸ್. ಕಾಮತರವರು, ಈ ಆಕ್ಷೇಪವು ನಿರಾಧಾರವಾದದ್ದೆಂದು ಹೇಳಿದರು ಅವರ ಹೇಳಿಕೆಯು 'ಪೋಲಿಂದ ಮತ್ತು ಹಕೀಕತಿಯು ನಿವೇದನದ"ಪೋಲಿಂದ ಸಂಬಂಧಪಟ್ಟ ವ್ಯಕ್ತಿಯು ಎಂತಾಗಿರುವನೆಂದು ಭಾಸವಾಗಿರುವ ಮೂಲಕ ಈ ಕೆಳಗಿನ ಖುಲಾಸೆಯನ್ನು ನಿಮಗೆ ಬರುವೆನು ಮಿ। ಕಾಮತರು ಗತ್ತನಿರ್ಗ ಬೊಡಿಯಲ್ಲಿ ನಿವೇದಿಸಿದ ಹಕೀಕತು ಸಾಧಾರವಲ್ಲೆಂದು ನಾನು ಹೇಳಬೇಕಾದ ಕಾರಣ, ನಡೆದ ಹಕೀಕತನ್ನು ಇವರಡಿಗೆ ನಿವೇದಿಸುವೆನು

೧ ವರುಷದ ಹಿಂದ್ಯಾಕು ವಿದ್ಯಾರ್ಥಿಗಳು ಶಾಲೆಗೆ ಸರಿಯಾಗಿ ಹೊತ್ತುಹೊತ್ತಿಗೆ ಹೋಗುವದಿಲ್ಲ, ಮನೆಗೆ ಬರುವಾಗಲೂ ವೇಳೆಗೆ ಮುಂಚಿತವಾಗಿಯೇ ಬರುತ್ತಾರೆ ಈ ಬಗ್ಗೆ ನಮ್ಮ ಹುಡುಗರಿಗೆ ಪ್ರಶ್ನಿಸಿದನು 'ಶಿಕ್ಷಕರು ಈ ಹೊತ್ತು ಬಂದಿಲ್ಲ'ವಾಗಿ ಅವರು ಹೇಳಿದರು ಹೀಗ್ಗೆ ಹಲವು ಸಾರೆ ನಡೆಯಿತು ನಾನು ಒಂದು ದಿನ ಸುಪರಿಂಟೆಂಡೆಂಟರಿಗೆ 'ಶಿಕ್ಷಕರು ಈ ಹೊತ್ತು ವರ್ಗಕ್ಕೆ ಬರಲಿಲ್ಲವಾಗಿ ತಿಳಿಯಬರುತ್ತದೆ ಸಿಂಗ ಕಕ್ಕೆ ವ್ಯವಸ್ಥೆ ಮಾಡಬೇಕು" ಎಂಬರ್ಥದ ಚೀಟಿ ಬರೆದು ನನ್ನ ಚಿರಂಜೀವರ ಕಡೆಯಿಂದ ಕಳುಹಿದೆನು 'ಇನ್ನು ಮುಂದೆ ತಕ್ಕ ವ್ಯವಸ್ಥೆ ಮಾಡುತ್ತೇವಾಗಿ" ಅವರು ನನಗೆ ಹೇಳಿಕಳುಹಿದರು ಕೆಲವು ತಿಂಗಳು ಹೋದವು ಸ್ಥಿತಿಯು ಸುಧಾರಿಸಿದ್ದಕ್ಕೆ ಕಾಣಬರಲಿಲ್ಲ ಹುಡುಗರು ಬಂದಿದಂತೆ ಶಾಲೆ ವೇಳೆಯ ಮುಂಚಿತವಾಗಿಯೇ ಮನೆಗೆ ಬರುತ್ತಿದ್ದರು ಅದನ್ನು ನೋಡಿ ನಾನು ಒಂದು ದಿನ ೧೨॥ ಘಂಟೆಯ ಸಮಯ ಶಾಲೆಗೆ ಹೋದೆನು ಕೆಲ ಹುಡುಗರು ವ್ಹರಾಂಡಾದ ಮೇಲೆ ಆಡಾಗುತ್ತಿದ್ದರು. ಹಲವರು ವರ್ಗದಲ್ಲಿ ಗದ್ದಲ ಮಾಡುತ್ತಿದ್ದರು ಇನ್ನುಳಿದವರು ತಮ್ಮ ತಮ್ಮ ವರ್ಗದಲ್ಲಿ ಇದ್ದರು. ಶಿಕ್ಷಕರು ಇದ್ದಾರೋ ಇಲ್ಲವೋ ನೋಡಬೇಕೆಂದು ನಾನು ಎಲ್ಲ ವರ್ಗಗಳಲ್ಲಿ ಹೋಗಿ ನೋಡಿದೆನು ಮಿ। ಗೋವಿಂದ ಮಾಸ್ತರರು ಒಂದು ಕ್ಲಾಸಿನಲ್ಲಿದ್ದರು ಬಾಕಿ ಯಾವ ಕ್ಲಾಸಿನಲ್ಲಿಯೂ ಶಿಕ್ಷಕರಿರಲಿಲ್ಲ. ಹೆಡ್ ಮಾಸ್ತರರು ಎಲ್ಲಿ ಇದ್ದಾರೆಂದು ಹುಡುಗರಿಗೆ ಕೇಳಿದೆನು. ಮೇಲೆ ಗಲರಿಯಲ್ಲಿರುವರು ಎಂಬ ಉತ್ತರ ದೊರೆಯಿತು ಸುಪರಿಂಟೆಂಡೆಂಟರು ಎಲ್ಲಿರುವರು ' ಎಂದು ಕೇಳಿದೆನು, ಅವರು ಆಫೀಸ ರೂಮಿನಲ್ಲಿರುವರು ಎಂದು ತಿಳಿಯಿತು. ಅವರಿದ್ದಲ್ಲಿಗೆ ಹೋಗಿ ನಾನು ಬಂದ ಕಾರಣವನ್ನು ಹೇಳಿದೆನು. ಮಿ। ಗೋವಿಂದ ಮಾಸ್ತರರ ಹೊರತು ಶಿಕ್ಷಕರ್ಯಾರೂ ವರ್ಗದಲ್ಲಿ ಇರುವದಿಲ್ಲವಾಗಿ ನಾನು ತಿಳಿಸಿದ ಬಳಿಕ, ನನಗೆ ಕರಕೊಂಡು ಎಲ್ಲ ಕ್ಲಾಸುಗಳಲ್ಲಿ ತಿರು

ಗಾತಿದರು. ಆಗ ಅನೇಕರು ಕ್ಲಬ್ಬಿನಲ್ಲಿ ಹನ್ ಆಸ್ತಂ ದಾರ ಮಿ| ಪ್ರಭು ಹ್ರಾತ್ತರು ಆಗಲೇ ಕಾರಸಕ್ತ ಪ್ರಾರಂಭಿಸಿದ್ದರು. ಅವರನ್ನು ಮಿ|| ಕಾಮತರು ಕೇಳಿ ದರು. "ಅವರು ಆಗಲೇ ಬಂದಿರುವರೇನು" ನಾನು ಹೇ ಳಿದೆನು: ಮುಖ್ಯವ ಕ್ಲಬ್ಬಿನಲ್ಲಿನ ಈ ಶಿಕ್ಷಕರು ಇಲ್ಲ ಹೀಗೆ ಯಾಕೆ?" ಎಂದು ಮಿ|| ಕಾಮತರಿಗೆ ಕೇಳಲು, "ಶಿಕ್ಷಕರು ಅಭ್ಯರ್ಥಿಗಾಗಿ ಹುಡುಗರಿಗೆ ಬಿಟ್ಟರು," ಎಂದು ಅವರು ಹೇಳಿದರು. "ಶಿಕ್ಷಕರಿಗೆ ಅನ್ನ ಸಿಗುತ್ತಿರಲಿಲ್ಲ, ಹೀಗೆ ಬಿಟ್ಟರೆ, ಹುಡುಗರ ಅಭ್ಯಾಸ ಕೆಡಲಿ ಕ್ಕಿಲ್ಲವೇ? ಹುಡುಗರಿಗೇನಾದರೂ ಶಿಕ್ಷಣದ ವಿಷ ಯ ಬಂದರೆ ಅದನ್ನು ಕೇಳುವದ್ಯಾರಿಗೆ? ಶಿಕ್ಷಕರು ಸ್ಥಿರ ಪಡಿಸುವದು ಪ್ರಶಸ್ತವಲ್ಲ," ಎಂಬರ್ಥದ ಉದ್ಗಾರಗ ಳನ್ನು ನಾನು ತೆಗೆದೆನು "ಈ ಹಾಗದ ದೋಷವನ್ನು (ನಿಜ ಈ ಅಭ್ಯಾಸ) ಹೋಗಿಸುವೆನು" ಎಂದು ಮಿ|| ಕಾಮ ತರು ಹೇಳಿದರು. "ಹ್ಯಾಗೂ ಆಗಲಿ, ಇನ್ನು ಮುಂದೆ ಹೀಗೆ ಆಗಬಾರದು," ಎಂದು ನಾನು ಹೇಳಿದ್ದಕ್ಕೆ "Yes, I shall remedy the evil " ಆ ಅವಸ್ಥೆಯನ್ನು ನಾನು ತಿದ್ದುವೆನು ಎಂದು ಮಿ|| ಕಾಮ ತರು ಹೇಳಿದರು. ಶಿಕ್ಷಕರ್ಯಾರೂ ಎಷ್ಟು ೧೦ ಮಿನಿಟುಗಳೊ ಳಗೆ ವರ್ಗದಲ್ಲಿ ಹಾಜರಾದಿದ್ದರೆ, ವರ್ಗದ ಹೊರಗಿನ ಕವಡೆ ಬಂದು ತಿಳಿಸಬೇಕಾಗಿ ಮಿ|| ಕಾಮತರು ಆಗಲೇ ನೋಟೀಸು ಹೊರಡಿಸಿದರು ನಾನು ತಿರುಗಿ ಬಂದೆನು

ಇದರ ಮೇಲಿಂದ ನಾನು ಹೋಗುವಾಗ ಓದುವದಕ್ಕಾಗಿ ತಂಬಿದ್ದಾಗಲಿ, ಎಲ್ಲ ಶಿಕ್ಷಕರು ಅವ್ಯ ಅನ್ನ ಕ್ಲಬ್ಬಿನಲ್ಲಿ ಹಾಜರಿದ್ದರೆಂಬುದಾಗಲಿ ಯಥಾರ್ಥ ಹರೀಕಲ್ಲ

ಕಾರವಾರ, } ತಮ್ಮ
ತಾ ೨೭-೧೦-೨೬ } ಪಾಲಕ

AN EXPLANATION

To,

The Ed tor of the 'Kanara News.'

Sir

It seems that my letter publish ed in your issue of the 19th instant in support of the candidature of Mr. V. P Prabhu of Ankola has creat ed considerable misunderstanding about me in the mind of a section of the public in the Karwar District The numerous letters which I have recieved of late from Ankola and other places have convinced me that many people in your district have failed to correctly appreciate the real import of my letter

In the first place, my letter is purely recommendatory I do not wish to force my opinion of Mr Prabhu as a public worker upon the voters of your district who are, I freely recognize, the best judges in the matter of this particular election.

Secondly, my letter contained an expression of my bona fide opinion of Mr. Prabhu based upon some personal knowledge which I gained at the time of my last election to the Legislative Assembly. I am doing the barest justice to Mr. Prabhu when I say that he openly and whole heartedly supported my candidature. Permit me to add that it was as a Swarajist that I sought election to the Assembly in 1923, and I interpret Mr Prabhu's vigorous efforts on my behalf as a convincing proof of the fact that he is a staunch Nationalist I firmly believe that Mr Prabhu's exertions at the time of my last election were prompted, not so much by private friendship for me for I cannot pretend to have enjoyed that privilege up to now — as his steadfast loyalty to the cause of Indian Nationalism However, if my correspondents who must necessarily have had greater opportunities of watching Mr Prabhu's public activities at closer quarters have arrived at a different conclusion regarding him, I freely acknowledge that they have a right to be guided solely by the dictates of their conscience and to ignore my letter, as though it had never been published.

I regret to observe that a few of my correspondents have thought it proper to treaten me that unless I publicly disown Mr. Prabhu now. I run the risk of losing their much-valued sympathy and support at the time of the next elections to the Assembly. I leave it entirely to the good sense of the enlightened public of the Karwar District to say whether my conduct in this matter warrants such threats, veiled or avowed.

Yours faithfully,

D. V. Belvi.

M.L.A.



ವಿಶಾಲವಾದ ಬೇಕು! ಬಿಡಲಿಕ್ಕು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ದೇವರ ಮಂಟಪಗಳೂ,

ತಂಗಳರ ಸೌಭಾಗ್ಯದ ಪೆಟ್ಟಿಗೆಗಳೂ, ಡಿಕ್ಕನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸುಗಳೂ, ರೈಟಿಂಗ ಟೇಬಲಗಳೂ ಹಾಗೂ ಚಾಲಕವು ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ:—

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,

ಕಾಜಿ ಭುವನ,

ಕಾರವಾರ.

ಶ್ರೀ ಚಿತಳೇಯವರ ಪ್ರಕಟನೆ

ಶ್ರೀ

ಅಕಲೂದನಗರ,

ಮಹನೀಯರೇ, ೩ ೧೦-೧೯೨೬

ಕೌನ್ಸಿಲ್ ಆಫ್ ಸ್ಟೇಟಿನ ಚುನಾವಣೆ ಯು ನವೆಂಬರ ತಿಂಗಳ ತಾರೀಖಿಗೆ ಆಗುವ ದಿದೆ. ನಾನು ಚುನಾವಣೆಯ ರೀತಿಯಿಂದ ಉಮೇದವಾರನಿದ್ದು ತಮ್ಮ ಸಹಾಯವನ್ನು ಬಯಸುತ್ತೇನೆ.

೧. ನಾನು ಕಳೆದ ೩೫ ವರ್ಷಗಳಲ್ಲಿ ಸಾರ್ವಜನಿಕ ಕೆಲಸವನ್ನು ಮಾಡಿರುತ್ತೇನೆ. ಅಹಮದನಗರದ ಮ್ಯುನಿಸಿಪಾಲಿಟಿಯಲ್ಲಿ ೩೦ ವರ್ಷಗಳ ವರೆಗೆ ಮತ್ತು ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನಲ್ಲಿ ೧೫ ವರ್ಷಗಳ ವರೆಗೆ ಕೆಲಸವನ್ನು ಮಾಡಿರುತ್ತೇನೆ. ಅಹಮದನಗ ರದ ಮ್ಯುನಿಸಿಪಾಲಿಟಿಯ ಅಧ್ಯಕ್ಷನಾಗಿ ೧೦ ವರ್ಷ ಗಳಿಗಿಂತಲೂ ಹೆಚ್ಚಿಗೆ ಮತ್ತು ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ಅಧ್ಯಕ್ಷನಾಗಿ ಸುಮಾರು ೭ ವರ್ಷಗಳ ವರೆಗೆ ನಾನು ಸಾರ್ವಜನಿಕ ಸೇವೆಯನ್ನು ಮಾಡಿರು ತ್ತೇನೆ ಸನ್ ೧೯೧೬ರಿಂದ ಸನ್ ೧೯೨೦ನೇ ಇಸವಿಯ ವರೆಗೆ ನಾನು ಮುಂಬಯಿ ಕಾಯಿದೆ ಕೌನ್ಸಿಲಿನ ಮೆಂಬರನಾಗಿದ್ದು, ಅದರಲ್ಲಿ ಫಾಯನಾನ್ಸ ಕಮಿಟಿ, ಪಬ್ಲಿಕ್ ಅಕೌಂಟ್ಸ ಕಮಿಟಿ ಮುಂತಾದ ಅನೇಕ ಕಮಿಟಿಗಳಲ್ಲಿ ಆ ಅವಧಿಯಲ್ಲಿ ನಾನು ಮಾಡಿದ ಲೋಕಸೇವೆಯು ತಮಗೆ ಗೊತ್ತಿರುವದೆಂದು ನಾನು ಅರಿಯುತ್ತೇನೆ ಇದಲ್ಲದೆ ನಾನು ಹೋದ ೧೫ ವರ್ಷಗ ಳಲ್ಲಿ ೫ ಸಾರೆ ದುಷ್ಕಾಳಗಳಲ್ಲಿ ಕೆಲಸ ಮಾಡಿದವ ನಿದ್ದು, ಸರಕಾರಕ್ಕೆ ಮತ್ತು ಜನರಿಗೆ ಸಂತೋಷವಾಗು ವಂತೆ ಮೇವಿನ ಸಂಬಂಧವಾದ ಕಲ್ಪನೆಯನ್ನು ಮೊನ್ನೆ ಮೊನ್ನೆ ಪೂರ್ಣ ಮಾಡಿರುತ್ತೇನೆ

೨ ಮುಂಬಯಿ ಕೌನ್ಸಿಲದಲ್ಲಿ ನಾನು ಮೆಂಬರ ನಿರುವಾಗ್ಗೆ ಪ್ರತಿ ಒಂದು ಸಭೆಯಲ್ಲಿ ತಪ್ಪದೆ ನಾನು ನನ್ನ ಕರ್ತವ್ಯವನ್ನು ಮನಃಪೂರ್ವಕ ಮತ್ತು ಉತ್ಸಾ ಹದಿಂದ ಮಾಡಿರುತ್ತೇನೆ ಮುಂಬಯಿ ಕೌನ್ಸಿಲಿನ ವೃತ್ತಾಂತವನ್ನು ಓದುವವರಿಗೆ ನಾನು ದೇಶದ ಕ ಲ್ಯಾಣವಾಗುವ ಉದ್ದೇಶದಿಂದಲೇ ಮತ್ತು ಹಿಂದು ಸ್ಥಾನಕ್ಕೆ ಆದಷ್ಟು ಬೇಗನೇ ಬ್ರಿಟಿಶ ಸಾಮ್ರಾಜ್ಯಾ ಂತರ್ಗತ ಸ್ವರಾಜ್ಯವು ದೊರೆಯಬೇಕೆಂಬ ಲವಲವಿ ಕೆಯಿಂದಲೇ ಈ ದೇಶದೊಳಗಿನ ಎಲ್ಲ ಜನಾಂಗಗಳ ಸಹಾಯದಿಂದಲೂ, ಬ್ರಿಟಿಶರ ಸಹಾಯದಿಂದಲೂ ಈ ಕಾರ್ಯ ಕೈಕೊಳ್ಳುವಂತೆ ನನ್ನಿಂದಾದಷ್ಟು ರ ಪ್ರಯತ್ನಿಸುತ್ತೇನೆಂಬುದು ಅರಿಕೆಯಿರಬಹು ದು. ಆದ್ದರಿಂದ ನನ್ನ ಚುನಾವಣೆಯಲ್ಲಿ ನಾನು ಮೇಲ್ಕಂಡ ಉದ್ದೇಶವನ್ನು ಕೊನೆಗಾಣಿಸುವದಕ್ಕೆ ತಮ್ಮ ನನ್ನಿಂದ ಪ್ರಯತ್ನವನ್ನು ಮಾಡುವೆನೆಂತ ತಮಗೆ ನಂಬಿಕೆಯಾಗಿ ಹೇಳುತ್ತೇನೆ.

ಳ ಮುಂಬಯಿ ಇಲಾಖೆಯಲ್ಲಿ ಪ ಸಭ್ಯ [illegible] ಮತದಾರರಿಗೆ ಮೂರು [illegible] ಉಮೇದವಾರರನ್ನು ಆರಿಸಿಕೊಡುವ ಅಧಿಕಾರವಿದ್ದದ್ದರಿಂದ [illegible] ಉಮೇದವಾರರಿಗೇ [illegible] ಮತಗಳನ್ನು ಕೊಡುವ ಅಧಿಕಾರವು ಪ್ರತಿಸಭ್ಯ [illegible] ದರಿಂದ ಅವನು ಹಾಗೆ ಮಾಡಬಹುದು. ಆದ್ದರಿಂದ ನಾನು ಕಮಿಗೆ [illegible] ಸೇವೆಯು ಕಡೆಗೆ ನೋಡಿ ತನ್ನ [illegible] ಅನ್ನು [illegible] ತನ್ನ ಮತಗಳನ್ನು ನನಗೆ ಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

[illegible] ಕಾಂಗ್ರೆಸಿನವರು [illegible] ದಿಂದಲೂ, [illegible] ನೆಹರೂ ಅವರು ಸ್ಕೀನ [illegible] ದ್ದರಿಂದಲೂ [illegible] ರಾಜಕೀಯ [illegible] ತಂಥ ಉಪದ್ರವ [illegible] ಯು ಮುಂದೆ ಬಿದ್ದದ್ದ [illegible] ಗಳಲ್ಲಿ [illegible] ಹರಿಸಿ [illegible] ಮಾಡಲಿಕ್ಕೆ [illegible] ತೋರುವದಿಲ್ಲ. ಸ್ವರಾಜ್ಯ [illegible] ಭೇದಗಳು ಉಳಿಯದ್ದರಿಂದಲೂ [illegible] ದಗಳ ಏಕೀಕರಣವನ್ನು ಮಾಡತಕ್ಕ [illegible] ಕಾರ್ಯ [illegible] ಉತ್ಸಾಹದಿಂದ [illegible] ಪೂರ್ವಕವಾಗಿ ಮಾಡಬೇಕೆ [illegible] ತ್ತೇನೆ.

ಶ್ರೀ

ಗಣೇಶ ಕೃಷ್ಣ ಚಿತಳೇ

ಮಂಗೇಶರಾಯನ ಮದುವೆ!

(ಅನುವಾದಕ — ವಿ. ಆ. ಹೆಗ್ಡೆ [illegible])

೧

ಹ್ಯಾಸ್ಕೂಲಿನಲ್ಲಿ ಮಂಗೇಶನು ತನ್ನ ಇಂಗ್ಲೀಷ ಅಭ್ಯಾಸವನ್ನು ಸಾಗಿಸುತ್ತಿದ್ದನೆಂಬುವದು ನಿಜ. ಆದರೆ ಅದು ಎಂದೂ ಅವನ ಮನಸ್ಸಿಗೆ ಮೆಚ್ಚುವಂತಿದ್ದಿಲ್ಲ. ಯಾಕೆಂದರೆ, ಪಾಶ್ಚಾತ್ಯ ಶಿಕ್ಷಣದಲ್ಲಿ ಅವನಿಗೆ ಎಳ್ಳಷ್ಟು ವಿಶ್ವಾಸವಿದ್ದಿಲ್ಲ. ಇಂಗ್ಲೀಷ ಅಭ್ಯಾಸವೇ ತನ್ನ ಮಾತೃಭೂಮಿಯ ಅವನತಿಗೆ ಕಾರಣವಾಗಿರುತ್ತದೆಂತ ಅವನ ಬಲವಾದ ಭಾವನೆಯಾಗಿತ್ತು. ಆರ್ಯಸಂಸ್ಕೃತಿಯು ಕ್ರಮೇಣ ಕುಂದುತ್ತ ನಡೆದು ದುರಾಚಾರಗಳೂ ದುರ್ವರ್ತನೆಗಳೂ ದಿನೇ ದಿನೇ ಹೆಚ್ಚುತ್ತಿರುವ ಕಾರಣ ಪ್ರಾಚೀನ ಕಾಲದ ಸುಖ-ಶಾಂತಿ ಸಮೃದ್ಧಿ ಮುಂತಾದ ದಿನಗಳನ್ನು ತಿರುಗಿ ಕಾಣುವ ಆಶೆಯೇ ಇಲ್ಲವೆಂತ ಅವನು ಆಗಾಗ್ಗೆ ತಿಳಿ ಉದ್ವೇಗಪೂರ್ವಕವಾಗಿ ಪ್ರತಿಪಾದಿಸುತ್ತಿದ್ದನು. ಆದರೆ ಮನೆಯವರ ಆಗ್ರಹವು ವಿಶೇಷವಾದ್ದರಿಂದ ಮಾತ್ರ ಮಂಗೇಶನು ಉಪಾಯವಿಲ್ಲದೆ ಇಂಗ್ಲೀಷ ಕಲಿಯಬೇಕಾಯಿತು. ಇಲ್ಲದಿದ್ದರೆ, ಅವನು ಎಲ್ಲಿಗಾದರೂ ಹೋಗಿ ಯಾವದಾದರೊಂದು ಸಂಸ್ಕೃತ ಪಾಠಶಾಲೆಯನ್ನು ಸೇರಿಬಿಡುತ್ತಿದ್ದನು. ಆದರೆ, ಈ ರೀತಿಯಲ್ಲಿ ಇಂಗ್ಲೀಷ ಕಲಿಯುವ ಪ್ರಸಂಗ ಬಂದರೂ ಕೂಡ, ತನ್ನ ಆಚಾರ-ವಿಚಾರಗಳಲ್ಲಿ ಅವನು ಸ್ವಾತಂತ್ರ್ಯವನ್ನು ಸಾಧಿಸುತ್ತಿದ್ದನು.

ಹ್ಯಾಸ್ಕೂಲಿನ ವಸತಿಗೃಹದಲ್ಲಿದ್ದು ತನ್ನ ಅಭ್ಯಾಸವನ್ನು ನಡಿಸುತ್ತಿದ್ದ ಮಂಗೇಶನಿಗೆ ಬಸ್ಸಿಂದೊಮ್ಮೆ ತುಳಸಿ ಕಾರ್ತೀಕದ ನೆನಪಾಯಿತು. ಕೂಡಲೆ ಅವನು ಕೆಲವು ಉಡಿಗೆ-ತೊಡಿಗೆಗಳನ್ನು ಕೊಂಡು, ಗಂಟುಕಟ್ಟಿ ಶಹರಕ್ಕೆ ಸಮೀಪವಾಗಿದ್ದ ತನ್ನ ಗ್ರಾಮಕ್ಕೆ ತೆರಳಿದನು.

ಕಾರ್ತೀಕವು ಮುಗಿದು ಪೌರ್ಣಿಮೆಯು ಪ್ರಾರಂಭವಾಯಿತು. ಪ್ರಾತಃಕಾಲಕ್ಕೆ ಮಂಗೇಶನ ತಾಯಿಯಾದ ವಿಧವೆಯು ಸಮೀಪದ ನದಿಗೆ ಸ್ನಾನಕ್ಕಾಗಿ ಹೋಗಿದ್ದಳು. ನದಿಯು ಹಳ್ಳಿಯಿಂದ ಸ್ವಲ್ಪ ಅಂತರದಲ್ಲಿತ್ತು. ಆ ದಿನ ಬೆಳಗ್ಗೆ ನೆರೆಹೊರೆಯ ಹಳ್ಳಿಗಳೊಳಗಿನ ಎಷ್ಟೋ ಹೆಂಗಸರು ಇಲ್ಲಿಗೆ ಬಂದಿದ್ದರು. ಮಂಗೇಶನ ತಾಯಿಯು ಸ್ನಾನವನ್ನು ತೀರಿಸಿಕೊಂಡು ಮನೆಗೆ [illegible] ಶಂಕರರಾಯನ ಪತ್ನಿ ಪಾದ [illegible] ಭೆಟ್ಟಿಯಾದಳು.

ನವ ಸ್ನೇಹಿತರಿಗಳು ನಡೆದು ಮಾತುಕತೆಯು ಕ್ಷೇಮಸಮಾಚಾರದ [illegible] ಮುಗಿದ ಮೇಲೆ — "ಮಂಗೇಶನ ಮನೆಯಲ್ಲಿರುವನೇ?" ಎಂತ ಶಂಕರರಾಯನ ಹೆಂಡತಿಯು ಕೇಳಿದಳು.

"ಬಂದಿರುವನು. ಆದರೆ ರಜೆಯು ಮುಗಿದದ್ದರಿಂದ ಅವನು ತಿರುಗಿಹೋಗುವನು."

"[illegible] ಎಂಬ ಉತ್ತರವು [illegible] ದ [illegible] ಮಗಳೊಬ್ಬಳಿದ್ದಳು.

"ಅಕ್ಕಾ, ನನ್ನ ಸಂದೇಶವನ್ನು ನಿಮ್ಮ ಮಂಗೇಶನಿಗೆ [illegible] ಮಾಡಿಕೊಟ್ಟರೆ ಒಳಿತಾಗಲಿಕ್ಕಿಲ್ಲವೇ?" ಎಂತ ಶಂಕರರಾಯನ ಹೆಂಡತಿಯು ಕೇಳಿದಳು.

ವಿಧವೆಯು ಉತ್ತರ ಕೊಟ್ಟದ್ದೇನಂದರೆ — "ತಂಗೀ, ಈಗ ಎಷ್ಟೋ ದಿನಗಳಿಂದ ನಾನಾದರೂ ಅದೇ ವಿಚಾರದಲ್ಲಿರುವೆ. ಆದರೆ ನನ್ನ ಮಗನಿಗೆ ಮದುವೆಯಾಗುವ ಇಚ್ಛೆಯಿಲ್ಲ. ನಾನೇನು ಮಾಡಲಿ? ನೆರೆಹೊರೆಯವರು [illegible] ನನ್ನ ಎಷ್ಟೋ ಪ್ರಯತ್ನಗಳು ವ್ಯರ್ಥವಾಗಿರುತ್ತವೆ."

"ಒಳ್ಳೇದು. ಇನ್ನೊಮ್ಮೆ ಪ್ರಯತ್ನ ಮಾಡಿ ನೋಡು. ನಿನ್ನ ಮಗನು ದೊಡ್ಡವನಾಗಿರುವನು, ಮತ್ತು ಅವನ [illegible] ನಿನಗೆ ಒಳ್ಳೆ ಸುಖವಾಗುವದು. ಅವನ [illegible] ದಯವಾಗಲಿಕ್ಕಿಲ್ಲ?"

"ನೋಡುವಾ. ಅವನು ಒಪ್ಪಿದರೆ ಮದುವೆಯನ್ನು ಮಾಡಿ ಮಾಡುವದರಲ್ಲಿಯೇ ಪಾಡಿದಂತಾಯಿತು."

ವಿಧವೆಯು ಮನೆಗೆ ಮುಟ್ಟಿದಾಗ ಮಂಗೇಶನು ವೃತ್ತಪತ್ರವನ್ನೋದುತ್ತ ತನ್ನ ಕೋಣೆಯಲ್ಲಿ ಕೂತಿದ್ದನು. ಅವನ ತಾಯಿಯು [illegible] ಒಳಗೆ ಬಂದು "ಸ್ವಲ್ಪ ಮಾತಾಡುವದುಂಟು" ಎಂದಳು.

ಪತ್ರವನ್ನು ಕೆಳಗಿಟ್ಟು ಮಂಗೇಶನು ನೀರ ಸಾವಕಾಶವಾಗಿ ತನ್ನ ತಾಯಿಯನ್ನು ಅನುಸರಿಸಿ ನಡೆದನು. ಅವನನ್ನು ತನ್ನ ಸ್ವಂತ ಕೋಣೆಗೆ ಕರೆದೊಯ್ದು ತಾಯಿಯು ನುಡಿದದ್ದೇನಂದರೆ "ಮಗನೆ, ನಾನು ನಿನಗೆ ಒಂದು ಹೆಣ್ಣು ಗೊತ್ತುಮಾಡಿರುವೆನು. ನೀನು ನನ್ನ ಹಿರೇ ಮಗನು. ಎಷ್ಟೋ ದಿವಸಗಳಿಂದ ಸೊಸೆಯ ಮೋರೆಯನ್ನು ನೋಡಬೇಕೆಂಬ ಉಮೇದಿಯು ನನಗೆ ಬಹಳವಾಗಿದೆ. ಆದ್ದರಿಂದ ನನ್ನ ಮನೋರಥವನ್ನು ಪೂರ್ಣ ಮಾಡು."

ಮೇಲೆ ಹೇಳಿದಂತೆ ಮಂಗೇಶನು ಮದುವೆಗೆ ತೀರ ಪ್ರತಿಕೂಲನಿದ್ದನು. ಅವನ ಕಾರಣಗಳು ಮತ್ತೊಬ್ಬರ ಕಾರಣಗಳಿಗಿಂತ ಭಿನ್ನವಾಗಿದ್ದವು. ವಿದ್ಯಾರ್ಥಿಯಾಗಿರುವಾಗ ವಿವಾಹ ಮಾಡಿಕೊಳ್ಳುವದು ಅನುಚಿತವೆಂತಾಗಲೀ, ಸಾಂಪತ್ತಿಕ ಸ್ಥಿತಿಯು ಅನುಕೂಲವಿಲ್ಲೆಂತಾಗಲೀ ಅವನ ಆಕ್ಷೇಪವಿರಲಿಲ್ಲ. ಅವನ ವಿಚಾರಗಳು ಬೇರೆಯವಾಗಿದ್ದು ಶಾಸ್ತ್ರಾಧಾರವನ್ನವಲಂಬಿಸಿದ್ದವು. ಈಗಿನ ಕಾಲದ ಹುಡುಗಿಯರು ಪ್ರಾಚೀನ ಕಾಲದ ವಿನಯಶೀಲರಾದ ಆರ್ಯ ಕನ್ನಿಕೆಯರ ಮಾನಸಿಗನ್ನು [illegible] ಶಕ್ತರಲ್ಲೆಂತಲೂ ಆದರೆ ಒಡವೆ-ವಸ್ತ್ರಗಳಲ್ಲಿ ಆಸಕ್ತರೂ, ವಸ್ತ್ರಾಲಂಕಾರಪ್ರಿಯರೂ ಆಗಿದ್ದು, ಪವಿತ್ರ ಗ್ರಂಥಗಳಲ್ಲಿ ವಿಧಿಸಿರುವಂತೆ ಪತಿಯನ್ನು ಮನ್ನಿಸದೆ, ಅವನ ಕೂಡ ಸಮಾನ ತರಗತಿಯಲ್ಲಿ ವಾಸಿಸಲು ಆತುರರಾಗಿರುವರೆಂತಲೂ ಅವನು ಕೇಳಿದ್ದಲ್ಲದೆ, ವೃತ್ತಪತ್ರಗಳಲ್ಲಿಯೂ ಓದಿದ್ದನು. ಇಷ್ಟಾದರೂ ದುರ್ದೈವಿಯಾದ ಆ ತರುಣನು ವಿಧವೆಯಾದ ತನ್ನ ತಾಯಿಯ ಬೇಡಿಕೆಯನ್ನು ಬಹಿಷ್ಕರಿಸುವದೆಂತು? ಪದೇ ಪದೇ ಮಾಡುತ್ತಿರುವ ಅವಳ ಬಿನ್ನಹವನ್ನು ಅವಮಾನ್ಯ ಮಾಡಿ ಮನಕ್ಕೆ ಗುರಿಯಾಗುವದು ಮಂಗೇಶನಿಗೆ ಉಚಿತವೆನಿಸಲಿಲ್ಲ. ಆದ್ದರಿಂದ ಅವಳು ಅದೇ ವಿಷಯವನ್ನು ಇನ್ನೊಮ್ಮೆ ಎತ್ತಿದರೆ, ಅದಕ್ಕೆ ಸಮ್ಮತಿಸುವದಲ್ಲದೆ ತನ್ನ ಮನಸ್ಸಿಗೆ ಮೆಚ್ಚುವಂಥ ಹುಡುಗಿಯನ್ನೇ ಆರಿಸುವದರಲ್ಲಿ ತಾನೇ ಜಾಗರೂಕನಾಗಿರಬೇಕೆಂತ ಅವನು ನಿರ್ಧರಿಸಿಬಿಟ್ಟಿದ್ದನು.

ವಸತಿಗೃಹದಲ್ಲಿ ವಾಸಿಸುತ್ತಿದ್ದ ಮಂಗೇಶನ ಮಿತ್ರರೆಲ್ಲರೂ ಈ ವಿಷಯವಾಗಿದ್ದ ಅವನ ಸ್ವತಂತ್ರ ವಿಚಾರಗಳನ್ನೆಲ್ಲ ಬಲ್ಲವರೇ ಆಗಿದ್ದರು. ಸಾಯಂಕಾಲದ ಊಟವನ್ನು ಮುಗಿಸಿ ಒಟ್ಟಿಗೆ ಕೂಡಿ ಧೂಮ್ರಪಾನದಲ್ಲಿ ಮುಳುಗಿದಾಗ, ಇದೊಂದು ಅವರ ನಿತ್ಯದ ವಾದದ ವಿಷಯವಾಗಿತ್ತು. ಮಂಗೇಶನು ಎಷ್ಟೋ ಸಾರೆ ಹೇಳುತ್ತಿದ್ದದ್ದೇನಂದರೆ,— "ಒಂದು ವೇಳೆ ನಾನು ಮದುವೆ ಮಾಡಿಕೊಂಡ ಪಕ್ಷದಲ್ಲಿ, ಹಳೆಯ [illegible] ಹುಡುಗಿಯನ್ನೇ ಮಾಡಿಕೊಂಡೇನು. ಚೆಲುವೆಯರಾದ ಕನ್ನಿಕೆಯರು ಗರ್ವಿಷ್ಠರಾಗಿರುವರು. ಅವರು ಅತ್ತೆ-ಮಾವಂದಿರಿಗೆ ಮಾನ ಕೊಡುವದಿಲ್ಲವಷ್ಟೇ ಅಲ್ಲ ಗಂಡನನ್ನು ಕಣ್ಣೆತ್ತಿ ಸಹ ನೋಡುವದಿಲ್ಲ. ಕರ್ತವ್ಯದಕ್ಷರಾದ ಗೃಹಿಣಿಯರಾಗುವ ಬದಲು ಅವರು ಮಾನ-ಮರ್ಯಾದೆ ವಿಹೀನರೂ ಒಡವೆ-ಒಯ್ಯಾರದವರೂ, ಶೃಂಗಾರಪ್ರಿಯರೂ ಆಗುವರು. ತಾವೆ ರಂಭಾ ಊರ್ವಶಿಯರೆಂತಲೇ ಭಾವಿಸಿಕೊಂಡು, ತಮ್ಮ ಸೌಂದರ್ಯದ ಪ್ರದರ್ಶನವನ್ನು ಹ್ಯಾಗೆ ಮಾಡಬೇಕು, ಎಂಬ ವಿಷಯದ ವಿನಾ ಅವರು ಬೇರೆ ವಿಚಾರವನ್ನೇ ಮಾಡುವದಿಲ್ಲ. ಪರದೇಶೀ ಸಾಬೂನ-ಸುಗಂಧದ ಎಣ್ಣೆಗಳೂ, ಬೆಲೆಗಿನ ಉಡಿಗೆ-ತೊಡಿಗೆಗಳೂ, ಅನಾವಶ್ಯಕವಾದ ಆಡಂಬರದ ಎಷ್ಟೋ ಒಡವೆಗಳೂ ಅವರಿಗೆ ಆಗಾಗ್ಗೆ ಬೇಕಾಗುವದರಿಂದ ಅವುಗಳೆಲ್ಲ ಕೊಂಡುಕೊಡುವದರಲ್ಲಿಯೇ ಬಡ ಪ್ರಾಣಿಯಾದ ಗಂಡನ ಹಣವು ಬರಿದಾಗಿ ಹೋಗುವದು. ಅಮೇಲೆ, ನಾವು ಸುಶಿಕ್ಷಿತ ಹುಡುಗಿಯನ್ನೂ ಮದುವೆಯಾಗಲಿಕ್ಕಿಲ್ಲ. ಯಾಕಂದರೆ ಅವರು ಕಾದಂಬರಿಗಳ ವಾಚನ-ಲೇಖನವಲ್ಲಾಗಲೀ, ಇಸ್ಪೀಟು ಆಡುವದರಲ್ಲಾಗಲೀ, ತಮ್ಮ ಗಂಡಂದಿರಿಗೆ ಪದ್ಯರೂಪದ ಪತ್ರಗಳನ್ನು ಬರೆಯುವದರಲ್ಲಾಗಲೀ ತಮ್ಮ ಕಾಲವನ್ನು ಕಳೆಯುತ್ತಿರುವರು. ಗೃಹಕೃತ್ಯದ ಕಡೆಗೆ ದುರ್ಲಕ್ಷವಾಗುವದು. ನೇತ್ರ [illegible] ಗಳಿಗೆ ವೇಳೆ ಸಿಗದು. ಮಕ್ಕಳು—ಮರಿಗಳು ನೆಲದ ಮೇಲೆ ಚೀರುತ್ತ ಬಿದ್ದಿರುವವು!" ಈ ತರದ ಮಾತುಗಳನ್ನು ಕೇಳಿ ಆ ಹುಡುಗರಲ್ಲಿ ಕೆಲವರು ಹೇಳುತ್ತಿದ್ದದ್ದೇನಂದರೆ — "ಮಂಗೇಶರಾಯರೇ, ಒಳ್ಳೇದು! ಪ್ರಸಂಗವು ಬಂದಾಗ ನೀವು ಹ್ಯಾಗೆ ವರ್ತಿಸುವಿರೆಂಬುದನ್ನು ನೋಡುವಾ. ಈ ರೀತಿಯಲ್ಲಿ ಮಾತಾಡುವದು ಬಹಳ ಸುಲಭ. ಆದರೆ ಮಾತಿಗೂ, ಕೃತಿಗೂ ಬಹಳೇ ಅಭ್ಯಾಸ ಇರುವಿದೆ."

ಈ ಶಂಕೆಯುಗಳನ್ನು ಕೇಳಿ ಸಿಟ್ಟಿಗೆದ್ದ ಮಂಗೇಶನು "ಒಳ್ಳೇದು, ನಿಮಗೆ ಕಾಣುವದು ಸ್ವಾಮೀ, ನಿಮಗೆ ತಾಳುವದು. ನಾನು ಆಡಿದಂತೆಯೇ ಮಾಡುವವನ," ಅನ್ನುತ್ತಿದ್ದನು.

ಹೀಗಿರಲು, ಅವನ ತಾಯಿಯು ತನ್ನ ಮನೋಗತವನ್ನು ಪುನಃ ತಿಳಿಸಲು, ಮಂಗೇಶನು ಅದಕ್ಕೆ ಒಪ್ಪಿಗೆಯನ್ನಿತ್ತು — "ಅವ್ವಾ, ಒಳ್ಳೇದು, ನಾನು ಮದುವೆಯಾಗುವೆನು, ಆದರೆ ನನಗೆ ಬೇಕಾದ ಹೆಂಡತಿಯನ್ನು ನಾನೇ ಆರಿಸಲು ಇಚ್ಛಿಸುವೆನು," ಅಂದನು.

ತಾಯಿಗೆ ಜೋಯಿಸಿಯಲ್ಲಿ ಹಿಡಿಸದಷ್ಟು ಹರ್ಷವಾಯಿತು. ಮದುವೆಯಾಗುವ ಮೊದಲು ಮದು ಮಗಳನ್ನು ನೋಡಬೇಕೆನ್ನುವೆಯಾ? ಒಳ್ಳೇದು. ನಿನ್ನ ಸಲುವಾಗಿ ನಾನು ಒಬ್ಬ ಹಿರಿಮರಾಯ ಪಟೇಲರ ಚೆಲುವೆಯಾದ ಹುಡುಗಿಯೊಬ್ಬಳನ್ನು ನೋಡಿರುವೆನು."

ಘಾಬರಿಯಾಗಿ ಮಂಗೇಶನು — "ಅವಳು ಅಷ್ಟು ಸುಂದರವಾಗಿರುವಳೇ?" ಎಂದನು.

"ಬಹಳೇ ರೂಪವತಿಯಾಗಿರುವಳು. ಅವಳ ಮುಖದ ಲಾವಣ್ಯ ಪ್ರತ್ಯಕ್ಷ ರತಿ ದೇವಿಯ ಮೋರೆಯನ್ನೇ ಹೋಲುವದು. ಅದೇ ಮೂಗು, ಅದೇ ನೇತ್ರಗಳು ಅದೇ ಹುಬ್ಬುಗಳು ಮತ್ತು ಅದೇ ಗುಲಾಬಿ ಬಣ್ಣದ ಮೈಕಾಂತಿಯು."

"ಅಪ್ಪಾ, ನಾನು ಅಂಥ ಹುಡುಗಿಯನ್ನು ಮದುವೆಯಾಗಲಾರೆನು," ಎಂತ ಮಂಗೇಶನು ಮನಶ್ಶಾಂತವಾಗಿಯೂ, ಗಂಭೀರವಾಗಿಯೂ ಹೇಳಿದನು.

"ಅದ್ಯಾಕೆ? ಏನಾಯಿತು?" ಎಂತ ತಾಯಿಯು ಆಶ್ಚರ್ಯದಿಂದ ಕೇಳಿದಳು.

"ನಾನು ಚಲುವೆಯಾದ ಹುಡುಗಿಯನ್ನು ಮದುವೆ ಮಾಡಿಕೊಳ್ಳುವೆನಲ್ಲದೆ ಇಲ್ಲ."

"ಅದರೆ, ಎಂಥ ಕನ್ನಿಕೆಯನ್ನು ನೀನು ಮದುವೆಯಾಗುವಿ?"

"ನಾನು ಸುರಸುಂದರಿಯಾದ ಕರೇ ಹುಡುಗಿಯನ್ನೇ ಮದುವೆಯಾಗುವೆನು," ಎಂದು ಮಂಗೇಶನು ಸ್ಪಷ್ಟವಾಗಿ ಹೇಳಿಬಿಟ್ಟನು.

ತಾಯಿಗೆ ಮತ್ತಷ್ಟು ಆಶ್ಚರ್ಯವಾಯಿತು. "ಹುಚ್ಚು ಹುಡುಗ! ಪ್ರತಿ ಒಬ್ಬರು ಚಲುವೆಯಾದ ಹೆಂಡತಿಯನ್ನೇ ಬಯಸುತ್ತಿರುವರು; ಮತ್ತು ಅಂಥವಳು ಸಿಗುವದಾದರೂ ಸುಲಭವಲ್ಲ" ಎಂದಳು.

"ಬೇಕಾದರೆ ಅವರು ಮಾಡಿಕೊಳ್ಳಲಿ. ಆದರೆ ನನ್ನ ಬಯಕೆಯು ಬೇರೆಯಾಗಿರುವದು" ಹೀಗೆ ಹೇಳುತ್ತಿರಲು ಅವನ ಮೋರೆಯ ಮೇಲೆ ಮನೋವಿಜಯದ ತೇಜವು ಒಡೆದು ಕಾಣುತ್ತಿತ್ತು. ಜಗದಲ್ಲಿ ಅವನೊಬ್ಬನೇ? ಉಳಿದವರಂತೆ, ಅವನೂ ಹುಡುಗಿಯರ ಸೌಂದರ್ಯಕ್ಕೆ ಪ್ರಾಧಾನ್ಯತೆಯನ್ನು ಕೊಡಬೇಕೇ?

ತಾಯಿಗೆ ಸ್ವಲ್ಪ ಅಸಮಾಧಾನವಾದದ್ದನ್ನು ಕಂಡು ಮಂಗೇಶನು ಆಕೆಯ ಮುಂದೆ ತನ್ನ ಮನಸ್ಸನ್ನು ಬಿಚ್ಚಿದನು. ಚಲುವೆಯಾದ ಕನ್ನಿಕೆಗೆ ಅನುಕೂಲೆಯಾದ ಆರ್ಯ ಗೃಹಿಣಿಯಾಗುವದು ಹ್ಯಾಗೆ ಅಶಕ್ಯವೆಂಬುದನ್ನು ಅವನು ಅದಕ್ಕೆ ತಿಳಿಸಿಹೇಳಿದನು. ಕಟ್ಟಕಡೆಗೆ ಅವನು ತನ್ನ ನಿಶ್ಚಯವು ಸ್ಥಿರವಾಗಿದ್ದು ಅದು ಅನ್ಯಥಾ ಆಗಲಾರದೆಂತ ಖಂಡಿತವಾಗಿ ಹೇಳಿದನು.

ಆ ದಿನ ಅವನ ತಾಯಿಯು ಅವನ ಹತ್ತರ ವಿಶೇಷವೇನೂ ಮಾತಾಡಲಿಲ್ಲ. ದಣಿ ಮುಗಿಯಲು ಅವನು ಕಲಿಯುವಿಕ್ಕೆ ಶಹರಕ್ಕೆ ಹೋದನು.

(ಮುಂದೆ ಸಾಗುವದು)

ಒಳ್ಳೇ ಸುಸಂಧಿ.

ರೋಗಗ್ರಸ್ತರೇ, ವೃಥಾ ನರಳಬೇಡಿರಿ. ನಾವು ರೋಗಿಗಳ ಅಷ್ಟಸ್ಥಾನಗಳನ್ನು ಪರೀಕ್ಷಿಸಿ, ಸಾಧ್ಯಾಸಾಧ್ಯಗಳನ್ನು ಅರಿತುಕೊಂಡು ಶಾಸ್ತ್ರೋಕ್ತ ಔಷಧವನ್ನು ಕೊಟ್ಟು ಎಂಥ ಅಸಾಧ್ಯ ರೋಗಗಳನ್ನಾದರೂ ಗುಣಪಡಿಸಿಕೊಡುವೆವು. ಎಷ್ಟೋ ಕಡೆಯಲ್ಲಿ ಅಸಾಧ್ಯವೆಂದು ನಿರಾಶೆಯಾದ ಅನೇಕ ರೋಗಿಗಳನ್ನು ನಾವು ನಮ್ಮ ರಾಮಬಾಣ ಔಷಧಗಳಿಂದ ಗುಣಪಡಿಸಿರುವೆವು. ಮರಣೋನ್ಮುಖರಾಗಿ ನರಳುತ್ತಿರುವವರು ನಮ್ಮ ಚಿಕಿತ್ಸೆಯಿಂದ ನವಜೀವನವನ್ನು ಹೊಂದಿ ಸಂತೋಷದಿಂದ ನಗುತ್ತ ಹೋಗುವರು. ನಾವು ಹೊಸ ವೈದ್ಯರಲ್ಲ. ವಂಶಪರಂಪರೆಯಿಂದ ವೈದ್ಯಕೀ ವಿಷಯದಲ್ಲಿ ಒಳ್ಳೇ ಪರಿಣತರಾಗಿ ಖ್ಯಾತಿಹೊಂದಿರುವೆವು. ಕೆಲವು ವರ್ಷಗಳ ಹಿಂದೆ ಇಲ್ಲಿ ಬಂದು ಎಷ್ಟೋ ಅಸಾಧ್ಯ ರೋಗಗಳನ್ನು ಗುಣಪಡಿಸಿದ ಗೋವಿಂದ ಶಾಸ್ತ್ರಿಗಳು ನಮ್ಮ ಕುಟುಂಬದವರೇ ಆಗಿರುವರು. ಆದ್ದರಿಂದ ರೋಗಿಗಳು ಬಂದು ಫಲ ಬಂದಲ್ಲಿ ಖಾತ್ರಿಯಾದೀತು. ಬಡಬಗ್ಗರಿಗೆ ಔಷಧವನ್ನು ಪುಕ್ಕಟೆಯಾಗಿ ಕೊಡುವೆವು.

ಕೇ. ಕೇ. ಕರುಣಾಕರ ಪಂಡಿತ,
ಆಯುರ್ವೇದ ವೈದ್ಯ ಕಲ್ಲಿಕೋಟೆ,
ಮುಕ್ಕಾಂ—ಕೆಳಗಿನ ಪೇಟೆ,
ಕುಮಟಾ

ರೋಗದಿಂದ ನರಳಬೇಡಿರಿ!

ನಮ್ಮಲ್ಲಿ ವಾತ ಉರಾಬು, ಪಿತ್ತ ಉರಾಬು, ಎಲ್ಲ ತರದ ಜ್ವರ, ಜ್ವರಗಳ್ಳೆ, ಚಳಿಜ್ವರ, ಕಾಮಿಲೆ, ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಮಲಬದ್ಧತೆ, ಮೂಲವ್ಯಾಧಿ, ನರ, ವಾತ, ತಲೆನೋವು, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ, (ಗರ್ಮಿ) ಬಾಲಗ್ರಹ, ಖಜ್ಜಿ, ಗಜಕರ್ಣಗಳಿಗೆ ಖಂಡಿತ ಗುಣ ಬರುವ ಜರ್ಮನ, ಅಮೇರಿಕನ, ಫ್ರೇಂಚ, ಇಂಗ್ಲಿಷ ಮತ್ತು ದೇಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು.

ಇದಲ್ಲದೆ ಎಲ್ಲ ತರದ ಸ್ಟೇಶನರಿ, ಪರಫ್ಯೂಮರಿ, ಸ್ಕೂಲ ಸಾಮಾನು, ಟೆನ್ನಿಸ್ ಬಾಲ, ಸುವರಲೆಟ, ಮೋರಿಸ ಮೋಟಾರ ಬಿಡಿಗಳು, ಕವಲತಿನ ಪರದಿಂದ ಸಿಗುವವು. ನಮ್ಮಲ್ಲಿದ್ದ ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡಲಾದೀತು.

ಎಸ್ ಎಲ್ ಧಾಕಪ್ಪ ಮತ್ತ ಬ್ರದರ,
ಶಿರಸಿ.

ಶ್ರೀ ತುಲಸೀದಾಸ ರಾಮಾಯಣ

ಭಾಗಶಃ ಪ್ರಕಟವಾಗುತ್ತ

ಲೇಖಕ—ಶ್ರೀ ಪತ್ತಾತ್ರೇಯ ಕೃಷ್ಣ ಭಾರದ್ವಾಜ

ವಾರ್ಷಿಕ ವರ್ಗಣಿ ರೂಪಾಯಿ ೫-೦-೦ (ಗ್ಲೇಜ ಪ್ರತಿಗೆ)
" " ೪-೦-೦ (ಸಾಮಾನ್ಯ ಪತ್ರಿಗೆ)

ಪತ್ತೆ - ಆನಂದಾಶ್ರಮ, ಬಸವನಗುಡಿ
ಬೆಂಗಳೂರು.

"ಲೋಕರಹಸ್ಯ"

ಈ ಕನ್ನಡ ಮಾಸ ಪತ್ರಿಕೆಯಲ್ಲಿ ವ್ಯಾಪಾರಸ್ಥರಿಗೆ ವ್ಯಾಪಾರದ ವಿಚಾರ, ರೈತರಿಗೆ ಕೃಷಿಯ ಅತ್ಯುತ್ತಮ ಮಾರ್ಗಗಳು, ಸ್ತ್ರೀಯರಿಗೆ ಗೃಹಕೃತ್ಯದ ವಿಚಾರಗಳು, ಬಡವರಿಗೆ ಹಣ ಸಂಪಾದನೆಯ ಸುಲಭ ಮಾರ್ಗಗಳು, ರಸಿಕರಿಗೆ ವಿನೋದ ವಿಚಾರಗಳು, ಪ್ರತಿಯೊಬ್ಬರಿಗೂ ಬೇಕಾದ ರಾಜಕೀಯ ವಿಚಾರಗಳು, ವೈದ್ಯ ಭಾಗಗಳು, ಜ್ಯೋತಿಷ್ಯ, ಕಾನೂನು, ವೇದಾಂತ, ಕಾದಂಬರಿಗಳು, ಗೋಪಾಲನೆ, ಶೃಂಗಾರಿಕಗಳು, ವೃತ್ತಾಂತಗಳೇ ಮುಂತಾದ ವಿಷಯಗಳೆಲ್ಲವೂ ಪ್ರಕಟವಾಗುತ್ತವೆ. ಪತ್ರಿಕೆಯು ಪ್ರತಿಯೊಂದು ಪುಟದಲ್ಲೂ ಅಮೂಲ್ಯವಾದ ಗೂಢ ವಿಚಾರಗಳೇ ತುಂಬಿ ತುಳುಕುತ್ತಿವೆ. ಪ್ರತಿ ಮಾಸದಲ್ಲೂ ೬೦ ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ
ರೂ. ೩—೮—೦. ಮಾತ್ರ.

ಮಾದರಿ ಸಂಚಿಕೆಗೆ ಕ್ರಯ ೦—೫—೦.
ಮಾದರಿ ಸಂಚಿಕೆಗಳನ್ನು ಪುಕ್ಕಟೆಯಾಗಿ
ಕೊಡುವದಿಲ್ಲ

ಹಾಕಿದ ಹಣವನ್ನು ನಷ್ಟ ಮಾಡದೆ, ಹಾಕಿದ ನಾಮ್ಕೆ ಇದ್ದಕ್ಕಿದ್ದ ಹಾಗೆಯೇ ತಿಂಗಳಿಗೆ ೧೦೦ ರೂ. ಗಿಂತ ಹೆಚ್ಚಾಗಿಯೇ ಹಣ ಸಂಪಾದನೆ ಮಾಡುವ ರೀತಿಯನ್ನು ತಿಳಿಯುವ ಬಗ್ಗೆ ಒಂದಾಣೆ ಸ್ಟಾಂಪು ಸಮೇತ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
"ಲೋಕರಹಸ್ಯ"
ವೀರರಾಜೇಂದ್ರ ಪೇಟೆ, ಕೊಡಗು.

ನವಯುಗ.

ಈ ನವಯುಗಕ್ಕೆ ಒಪ್ಪುವ ಪತ್ರಿಕೆ !

[ಬಂಟರ ಯಾನೆ ನಾಡವರ ಸಂಘದ ಕೆಲ ಮುಂದಾಳಿನ ಮಂಗಳೂರಲ್ಲಿ ಸ್ಥಾಪಿತವಾದ ಕನ್ನಡ ಭಾಷೆಯಲ್ಲಿ ಪ್ರತಿ ಗುರುವಾರ ಪ್ರಕಟಗೊಳ್ಳುತ್ತದೆ.]

ವಾರಪತ್ರಿಕೆಗಳಲ್ಲಿ ಇರಬೇಕಾದ ಯಾವತ್ತು ಸಲ್ಲಕ್ಷಣಗಳು ಇದರಲ್ಲಿವೆ !

ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ರೈತರಿಗೂ, ವ್ಯಾಪಾರಸ್ಥರಿಗೂ ಅತ್ಯಂತ ಉಪಯುಕ್ತ ಲೇಖನಗಳೂ, ಅನುಭವಗಳೂ, ವರ್ತಮಾನಗಳೂ ಮನೋರಂಜಕವಾದ ಕಥೆ, ಹಾಸ್ಯರಸಭರಿತವಾದ ಇತರ ವಿಷಯಗಳೂ, ಇವೆ.

ವರ್ಷಕ್ಕೆ ಚಂದಾ ರೂ. ೩-೪-೦ ಮಾತ್ರ.

ಮಾದರಿ ಸಂಚಿಕೆಗೆ ಬರೆದುಕೊಳ್ಳಿರಿ.

ಜಾಹೀರಾತುಗಳ ದರ ಸುಲಭ; ರೈತರೇ ಹೆಚ್ಚಾಗಿ ಓದುವ ಈ ವಾರಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಿರಿ.

ವಿಳಾಸ:—

ಮೆನೆಜರ "ನವಯುಗ"
ಮಂಗಳೂರು.

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನು ಹೆಚ್ಚಿಸುತ್ತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ. ಚಲೋ ಆಹಾರ ದೊರಕದೆ ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ರೋಗಗಳು, ಅಜೀರ್ಣ, ತಲೆಶೂಲಿ ಧಡ್ಡುತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೩—೦—೦

ಏಜಂಟರು:— **ವೀರಿಯೆಲ ಏಜನ್ಸಿ,**
ಪಿನ್ಸೆಕ ಸ್ಟ್ರೀಟ, ಮುಂಬಯಿ ೨

ನಾವು ಎಲ್ಲ ನಮೂನೆಯ, ಖಾತ್ರಿಯ ಉತ್ತಮ ಕನ್ನಡಕ

ಗಳನ್ನು ಯೋಗ್ಯ ಕಿಮ್ಮತ್ತಿಗೆ ಕಳಿಸಿಕೊಡುವೆವು ಪರ ಊರಿನ ಗಹಸರು ಯಾವ ನಮೂನೆಯ ಕಣ್ಣುಗಳು ಬೇಕೆಂಬದನ್ನು ತಿಳಿಸಬೇಕು ಮತ್ತು ಆರ್ಡರಿನ ಸಂಗಡ ೧ ರೂಪಾಯಿ ಮುಂಗಡ ಕಳಿಸಿದಲ್ಲಿ ಬೇಕಾದ ನಮೂನೆಯ ಕಣ್ಣುಗಳು ದೊರಕುವವು ಅನುಭವದಿಂದ ಖಾತ್ರಿಯಾಗುವದು.

ಆಪಟೇ ಸನ್ಸ,

ಕನ್ನಡಕ ವ್ಯಾಪಾರಿಗಳು, ಮಾರತಿ ಪೇಟೆ

ಕಾರವಾರ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬಿ. ಯವರ

ಸುಗಂಧ ನಸ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ನೂರು ಪಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಫ್ರೀ ಪ್ರಕಟ ಕಳಿಸಲಾಗದು

ಡಬ್ಬಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ. ೪ ಡಜನ್ ೧ ಕ್ಕೆ ರೂ ೨-೮-೦ ವ್ಹಿ. ಪಿ. ೦-೮-೦ ಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ— ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಜಾರ್ಜಟೌನ, ಮದರಾಸ

ವಿಶೇಷ] ಅನುಭವಸಿದ್ಧ ಪಥ್ಯಸಿದ್ಧ

ವನೌಷಧಿಮೂಲಿಕೆಗಳು

ವಾಯುದುಮ್ಮಸ (ನಿಮೋನಿಯಾ) ಮಾಂತ್ರಿಭ್ರಾಂತಿ (ಕಾಲರಾ) ಅರ್ಧಾಂಗವಾಯು (ಪೆರಾಲಿಸಿಸ್) ಹುಚ್ಚು ಪ್ರಸಾದಾ ನಾಯಿಕಡಿತ, ಸರ್ಪಸುತ್ತು ಹೊಟ್ಟೆಯಲ್ಲಿ ಕತ್ರಿಮ ವಿಷಹಾಕಿದ್ದು (ಕೈಮದ್ದು) ವಗೈರೆ ರೋಗಗಳಿಗೆ ಒಂದೆ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು ಇವು ಬಹುಕಾಲದಿಂದ ಅನುಭವ ತಕ್ಕೊಂಡು ಹಾಗು ಪ್ರತಿನಿತ್ಯ ಈಕಡೆಗೆ ಒಳಕೆಯಲ್ಲಿದ್ದು ಬರ್ತಾಗುವ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು ಕಾಲರಾ ಔಷಧಿಗಳ ದ್ರಾವಕ (Tincture) ಸಹ ಅಗಾವು ಸೂಚಿಸಿದರೆ ಕಳುಹುವೆವ

ವಾಯುದುಮ್ಮಸದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ ಕ್ಕೆ ೦-೨-೦

ಕಾಲರಾದ ಬಗ್ಗೆ ,, ,, ,, ೬-೨-೦

ಅರ್ಧಾಂಗ ವಾಯುವಿನಬಗ್ಗೆ

೧ ಇಸಮಿಗೆ ಸಾಲುವಷ್ಟು ॥ ಶೆರು ... ೧ ೮-೦

ಪ್ರತ್ಯಕ್ಷ ತಿಳಿಸಬೇಕು

ನಾಯಿ ಕಡತದಬಗ್ಗೆ ... ೦-೪-೦

ಸರ್ಪಸುತ್ತಿನ ಬಗ್ಗೆ ... ೦ ೨-೦

ಹೊಟ್ಟೆಯಲ್ಲಿ ಕತ್ರಿಮ ಔಷಧಿ ಬಿಟಬಗ್ಗೆ ತೊಲೆ ೧೦ ಕ್ಕೆ ೦-೮-೦

ರಕತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾತ್ತಲ ಕ್ಕೆ ೧-೦-೦

ಮೋರಾವಳಾ (ನೆಲ್ಲಿಕಾಯಿ ಗುಳಂಬ) ರಾತ್ತಲ ೧ ಕ್ಕೆ ೧-೦-೦

ರಾತುಗಟ್ಟಲೆ ಯಾ ಅದಕ್ಕೂ ಹೆಚ್ಚು ತರಿಸಿಕೊಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು.

ಟಪಾಲ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಪತ್ರ ದ್ವಾರಾ ಅನುಪಾನಪತ್ರ ಔಷಧಿ ಸಂಗಡ

ಎನ್. ಜಿ. ಹೆಗಡೆ, ಮಾಸ್ತೇರಿ,

ಪೋಸ್ಟ—ಬಂಕಿಕೋಡ್ಲ ಜಿ ಉತ್ತರ ಕಾನಡಾ

ಕಿರ್ಲೋಸ್ಕರ ಗಾಣಗಳು.

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಕಬ್ಬಿನ ಗಾಣಗಳೆಂದರೆ—

೧. ಕಿರ್ಲೋಸ್ಕರ್ ನಂ ೫ ೨. 'ಕಿಸಾನ'. ೩. 'ಕಮಾಲ ಚರಕ.'

ಇವುಗಳಲ್ಲಿ ಮೊದಲಿನ ಎರಡು ಗಾಣಗಳ ಬಗ್ಗೆ ಕರ್ನಾಟಕಸ್ಥರಿಗೆ ಗೊತ್ತುಂಟು ಮೂರನೆಯದಾದ ಕಮಾಲಗಾಣದ ಬಗ್ಗೆ ಬರೆಯುವದೆಂದರೆ ಇದು ಗಂಟೆಯೊಂದಕ್ಕೆ ೧೬೦೦ ಪೌಂಡ್ ಕಬ್ಬನ್ನಾಡುಸದು ೧೦೦ಕ್ಕೆ ೭೫ರಂತೆ ರಸಪ್ರಮಾಣವಿರುವದು ಹೆಚ್ಚಿನ ಸಂಗತಿಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ನಾವು ಕಿರ್ಲೋಸ್ಕರ ವಾರ್ತೆ ಎಂಬ ತಿಳಿಗನ್ನಡ ಮಾಸಪತ್ರಿಕೆಯನ್ನು ಕರ್ನಾಟಕ ತರುಣರ ಉನ್ನತಿಗೋಸ್ಕರ ಪ್ರಕಟಿಸಹತ್ತಿರುವೆವು.

ವಾರ್ಷಿಕ ಚಂದಾ ೧॥ ರೂಪಾಯಿ. ಮಾದರಿ ಸಂಚಿಕೆ ಪ್ರತ್ಯಕ್ಷ

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಅದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಅವರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಕೊ, ಫೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

Reg No B. 1270 Monday, November 9th 1925

ವರ್ಷ ೧೦. ಸಂಚಿಕೆ ೩

ಕಾನಡಾವೃತ್ತ.

THE KANARA NEWS.

ವೃತ್ತದ ವರ್ಗಣಿ.
ಟಪಾಲದಿಂದ ಆಗಾವು
ರೂಪಾಯಿ 2-4-0.
ಸಂವತ್ಸರದಿಯಿಂದ
ರೂ. 3-0-0
ವಿ. ಪಿ. ಯಿಂದ
ರೂಪಾಯಿ 3-2-0.
ಬಿಡಿ ಪ್ರತಿಗೆ 0-1-0.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಮ್ಯಾಟರ
(೧೫ ಎಮ್ ಅಗಲ)
ಆ ಸಾಲುಗಳವರೆಗೆ ರೂ. 1-0-
ಆ ನಂತರ ಪ್ರತಿಸಾಲಿಗೆ 0-2-0.
ಹೆಚ್ಚಿಗೆ ಸಾಲು ಎಷ್ಟು
ಹೊತ್ತಿರುವವರೋ ಆ ಪಾಸಿ
ಗಿಂದ ಅವ್ಯು ಸಾಲುಗಳು ಹಿಡಿ
ಯಲ್ಪಡುವವು.
ಜಾಹಿರಾತುಗಳ ಒಗ್ಗೆ
ಪತ್ರವ್ಯಾ ಯಾ ಸಮಕ್ಷ ತಿಳಿ
ಸಲ್ಪಡುವವು.

परपरितोहितकर्ता हेच्चर्ता वाति लोके जनपदहितकर्ता त्यज्यते पार्थिवेंद्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೯ ಮಾಹೆ ನವಂಬರ ಸನ್ ೧೯೨೫ ನೇ ಇಸವಿ)

हिंदुस्थानांतील रहिवाशांस ज्याप्रमाणें दुर्ध्यानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव- दीड रतलची किंमत १ रुपये;

रामबाण औषधें
सर्दी घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

विश्वास कीचकर
कवाटलॉग मागवा,

हिंदु फार्मास्युटिकल वर्क्स लिमिटेड,
मुंबई नं. १३

ಜೀರ್ಣಶಕ್ತಿ ವರ್ಧಕ ! ಅನುಭವಸಿದ್ಧ ಔಷದ !
ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ
ಔಷಧದ ಕ್ರಯ ವಾಪಸ.
ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋ
ಉಲ್ಲಾಸ, ಪರವಶಾನುರಾಗ ಮೊದಲಾದ ಸುಖಕಾರಕ
ಶೇಷ್ಠ ದಿವ್ಯ ದಾಯಿನಿ.

(ರಿಜಿಸ್ಟರ್ಡ) **ಅಗಸ್ತ್ಯ** (ಟ್ರೇಡ ಮಾರ್ಕ್).

ಮನ್ಮಥಚಿಂತಾಮಣಿಲೇಹ

ರಿಜಿಸ್ಟರಡಾದ್ದು
ಅನುಭವಸ್ಥ ಸ್ತ್ರೀ ಪುರುಷರ ಅನೇಕ ರೋಗಗಳ
ಮೇಲೆ ಗುಣಕಾರಿಯಾದದ್ದು, ಮೇಹ, ಕಾಸವಿದ್ದ
ಶರೀರ, ನಿಸ್ತ್ರಾಣದವರಿಗೂ, ಸ್ವಪ್ನಸ್ಖಲಿತದವರಿಗೂ
ಸುವ ಯುವಕರಿಗೂ ವೃದ್ಧರಿಗೂ ಪಡ್ಡ ವಿಗಳಿಗೂ
ಉಪಯೋಗವುಳ್ಳ ಪರವಶಾನಂದ ಔಷಧಿ
ಸೇರು ನಾಲ್ವತ್ತೆಂಟು ದಿವಸಕ್ಕೆ ಸೇವಿಸಬೇಕು.
1 ಸೇರು ಡಬ್ಬಿ ಕಿಂಪತ್ತು 3—0—0
½ ಸೇರು ಡಬಿ ಕಿಂಪತ್ತು 1—9—0
ವ್ಹಿ. ಪಿ. ಖರ್ಚ ಪ್ರತ್ಯೇಕ. ವಿಶೇಷ ಪಾಹಿತಿ
ಬರೆದುಕೊಳ್ಳಿರಿ.
ಹತ್ತಿ:-ದೇವಣ್ಣ ನಾರಾಯಣ ಶೇಟ್,
ಸರಾಫ್, ಗೋರಿಗುಡ್ಡ, ಮಂಗಳೂರು, (ದ. ಕ.)

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, B. A.
Jewellers, KUMTA.
ಆರ್. ಎಸ್. ಕಾಸರಗೋಡ, ಬಿ ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

धातु क्षीणता व कमजोरपणा यांसाठीं
मदन मंजरी गोळ्या. (रजिस्टर्ड)
या दिव्य गोळ्या रक्त व वीर्य सुधारून त्याची चांगली वाढ करतात. पचनें शक्ति सुधारून परमाकडे माफ होते. त्याचप्रमाणें प्रत्येक प्रकारची अशक्तता दूर होऊन शरीर तेजदार व बलवान होतें. कि. ४० गोळ्यांच्या डबीस रु १.

रमण विलासिनी गोळ्या. रात्रौ फक्त १ गोळी दुधाबरोबर खाल्यानें इच्छेप्रमाणें वीर्यस्तंभन होत कि डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पावून खरें पुरुषत्व प्राप्त होतें. कि. डबीस रु १.

कुमटा एजंट — माधव सांतप्पा शेणवी वेंगुर्लेकर

राजवैद्य नारायणजी केशवजी वैद्यः— १९३ कालबादेवी रोड मुंबई नं २.

ತ್ವರೆ ಮಾಡಿರಿ ! ತ್ವರೆ ಮಾಡಿರಿ !!
ಜಾಹಿರಾತುದಾರರು ತ್ವರೆಮಾಡಬೇಕು !
ಬಗೆಗೆ ಪಾಯಾ ತಿಮ್ಮಣ್ಣ ಪಂಡಿತರಿಂದ ಪ್ರಗಣಿತ ಪ್ರಕಾಶ ಗುಣಿಸಿ ಪರಿಶೋಧಿಸಲ್ಪಟ್ಟ
ಕ್ಷಯ ಸಂವತ್ಸರದ ಪಂಚಾಂಗವು
ಅಚ್ಚಿನಲ್ಲಿದೆ!
ಪಂಚಾಂಗದಲ್ಲಿ ಜಾಹಿರಾತು ಕೊಡುವವರಿಗೆ ಏರ್ಪಾಟು ಮಾಡಿದೆ !
ಈ ಪಂಚಾಂಗವು ಕಾನಡಾ ಜಿಲ್ಹೆ ದೊಳಗಿನ ಹಳ್ಳಿ ಹಳ್ಳಿಗಳಲ್ಲಿಯೂ, ಸಾಗರ-ಶಿವಮೊಗ್ಗಾ ಗೋವಾ ದ ಮೈ ಹೊರ ಪ್ರಾಂತಗಳಲ್ಲಿಯೂ ಪ್ರಸಿದ್ಧವಿದೆ ಜಾಹಿರಾತು ಕೊಡಬಿಚ್ಚಿಸುವವರು ಬರುವ ಅಕ್ಟೋಬರ ತಾರೀಖು ೩೦ ರೊಳಗೆ ಈ ಕೆಳಗಿನ ಪತೆಯ ಮೇಲೆ ಪತ್ರವ್ಯವಹಾರ ಮಾಡಿ ದರ ವಾರ ತಿಳಕೊಳ್ಳಬಹುದು
ಪತೆ—ಮೆನೆಜರ, "ಸ್ಟಾರ ಆಫ್ ಕೆನರಾ ಪ್ರೆಸ್" ಕುಮಟಾ (ಉ. ಕಾ)

ಗೌರೀಹುಣ್ಣಿಮೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ ಜಯಕರ್ನಾಟಕ [ಮಾಸಪತ್ರಿಕೆ]

ಸಂಪಾದಕ - ಆಲೂರ ವೆಂಕಟರಾಯರು

ಇದರಲ್ಲಿ ಆಧ್ಯಾತ್ಮಿಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಖ್ಯಾತ ಲೇಖಕರು, ಜೇನಾಗುಟ್ಟು ನಾಟಕಕಾರರು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಬಹು ಸುಂದರ ಚಿತ್ರಗಳೂ ಬರುತ್ತವೆ. ಡೆಮಿ ಅಷ್ಟ ಆಕಾರದ ೩೦ ಪುಟಗಳು. ವರ್ಗಣಿ. ರೂ ೫-೮-೦

ಕಾರ್ಯದರ್ಶಿ ಜಯಕರ್ನಾಟಕ ಧಾರವಾಡ.

ಎಲ್ಲಾ ನೋವುಗಳಿಗೆ ದಿವ್ಯೌಷಧ!

ವಾತಹಾರಿ ತೈಲ.

ಕ್ರಯ ೫ ತೊಲೆ ಬಾಟಲಿ ೧ಕ್ಕೆ ೦—೧೨—೦ ಜಾಟಿ ಸುವಾಸಿಕ ಕಾಬೂಲಿ ಹಿಂಗು ೧೦ ತೊಲೆ ಡಬ್ಬಿ ೧ಕ್ಕೆ ೧—೮—೦. ಹಿಂಗಿನ ಅರ್ಕ ೧ ಔನ್ಸಿನ ಬಾಟ್ಲಿ ೧ಕ್ಕೆ ೦—೮—೦. ರಕ್ತ ಶುದ್ಧಿ ಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಚ್ಯವನ ೨೦ ತೊಲೆಯ ಡಬ್ಬಿ ೧ಕ್ಕೆ ೧—೪—೦ ೧ ತೊಲೆಯ ಹಿಂಗಿನ ಡಬ್ಬಿಗಳ ಡಜನ್ ೧ಕ್ಕೆ ೨—೦—೦ ತಲೆಗೆ ಹಾಕುವ ಸುವಾಸಿಕ ಬ್ರಹ್ಮಿ ತೈಲ ೫ ತೊಲೆಯ ಬಾಟ್ಲಿ ೧ಕ್ಕೆ ೦—೧೨—೦ ಹಲ್ಲು ಪುಡಿ ತೊಲೆ ೧ಕ್ಕೆ ೦—೮—, ಇಸಬ್ಗೋಲ, ನೀಲಗಿರಿ ತೈಲ, ಎಲ್ಲಾ ತರದ ಕಾಡಿ ಔಷಧಗಳು ಯೋಗ್ಯ ಕಿಮ್ಮತ್ತಿಗೆ ಸಿಗುವವು ಟಪಾಲ ಖರ್ಚು ಪ್ರತ್ಯೇಕ.

ಕೇಶವ ಕಾಬೂಲಿ ಹಿಂಗಿನ ದುಕಾನ.

ಜವಳಿಬಾಜಾರ, ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧. ರಾಗದ ಪೆಟ್ಟಿಗೆ ರೂ ೩೦, ೪೦, ೬೦, ೭೫, ೧೦೦

೨. " ಕಾಲು ಪೆಟ್ಟಿಗೆ ರೂ. ೬೫, ೭೫, ೧೨೦, ೧೪೦

೩. ತಬಲೆ ಜೋಡಿ ರೂ. ೧೬, ೧೮, ೨೦, ೨೫

೪. ಹಾರ್ಮೋನಿಯಮ ಗ್ಯಾಡ (ಮರಾಠಿ) ರೂ. ೧॥ ತಬಲೆ ಗ್ಯಾಡ ರೂ, ೧॥ ಅ.

ವಿಶೇಷ ಮಾಹಿತಿಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡತಕ್ಕದ್ದು.

ಪತ್ತೆ:— ಗೋಪಾಳ ಸಖಾರಾಮ ಮತ್ತು ಕಂಪನಿ, ವಿಠ್ಠಲವಾಡಿ ಎದುರಿಗೆ, ೨೩೬ ಕಾಳಬಾದೇವಿ. ಮುಂಬಯಿ.

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ



ಕಳೆದ ೪-೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ-ತಾಳಗುಪ್ಪೆ ಶಿವಮೊಗ್ಗಾ-ಹರಿಹರ-ದಾವಣಗೆರೆ, ಶಿವಮೊಗ್ಗಾ-ಕಳಸರಕಟ್ಟೆ, ಸಾಗರ-ಸೊರಬ-ಶಿರಾಳಕೊಪ್ಪ, ಸಾಗರ-ತೀರ್ಥಹಳ್ಳಿ, ಸಾಗರ-ಕಳಸರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸುತ್ತಿದ್ದು ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ ಹಾಗು ಬೆಂಗಳೂರ ಈ ಕಡೆಗೆ "ಕಾರ್ಕಳ ಮೋಟರ ಸರ್ವಿಸಿನ" ವಿದ್ಯಮಾನವೂ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಗೆ "ಲಕ್ಷ್ಮೀ ಮೋಟರ ಸರ್ವಿಸಿನ" ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುತ್ತೇವೆ

ಉತ್ತರ ಕನ್ನಡ ಜಿಲ್ಲೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ ಸಾಗರ, ಹರಿಹರ ಮತ್ತು ಮೇಲ್ಕಂಡ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ ಜೋಗ, ಸಿದ್ದಾಪುರ, ಶಿರ್ಸಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾರಂಭ ಮಾಡಿರುತ್ತೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	ಬೆಳಿಗ್ಗಿನ ೭ ಘಂಟೆಗೆ.
ಶಿರ್ಸಿಗೆ ಸೇರುವದು—	" ೧೦ "
ಶಿರ್ಸಿಯಿಂದ ಬಿಡುವದು ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧ "
ಸಾಗರಕ್ಕೆ ಸೇರುವದು (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ "
ಸಾಗರದಿಂದ ಶಿರ್ಸಿ ಕಡೆಗೆ ಹೊರಡುವದು—	ಬೆಳಿಗ್ಗಿನ ೬ "
ಸಿದ್ದಾಪುರದ ಮೇಲಿಂದ ಶಿರ್ಸಿ ಸೇರುವದು—	" ೧೧ "
ಶಿರ್ಸಿಯಿಂದ ಕುಮಟೆಗೆ ಹೊರಡುವದು—	ಮಧ್ಯಾಹ್ನ ೨ "
ಕುಮಟೆಗೆ ಸೇರುವದು—	ಸಾಯಂಕಾಲ ೫ "

N B.— ಈ ಮೇಲಿನ ಲೈನಿನ ಪಾಸಿನ ಶಿರ್ಸಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ ಪ್ರಾರಂಭಿಸುವ ಯೋಜನೆ ನಡೆದಿದೆ. ಸರ್ವರೂ ಲಾಭ ಮಾಡಿಕೊಂಡು ಪ್ರೋತ್ಸಾಹಿಸಬೇಕಾಗಿ ವಿನಂತಿ.

SHIMOGA, 22—11—1924. } **M. MANJAPPA. PROPRIETOR.**

ಸಂಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತವೃದ್ಧಿ ಮತ್ತು, ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮೂಲದಿಂದಾದ ಬೇನೆಯು ಹೋಗುತ್ತದೆ ೬೦ ೭೦ ವರ್ಷದ ಮುದುಕರ ಕಾಮವಿಕಾರ ಶಕ್ತಿ ಅದ್ಭುತ ಪ್ರವರ್ಧಮಾನವಾಗುವದು. (ನಿಜವಾಗಿ ಒಂದೇ ಸಲದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಕಡಿಮೆ ಮ್ಯಾಗನಾಥ ಪುಂಸಕತ್ವವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಬಂಗಾಲ ರೋಗ ಇವೆಲ್ಲವೂ ದೂಷಿತವಾದ ಶರೀರದ ನಿರೋಗತ್ವವಾಗುವದು ಮೂರೇ ದಿವಸದಲ್ಲಿ ಗುಣವಾಗುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ಮುಂತಾದ ಇತರಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ, ಇದರ ಅನುಭವವು ಕೊಡಲಿಕ್ಕೆ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ವಿಷಯಕ್ಕೆ ಶಕ್ಯವಿಲ್ಲ. ಸ್ತ್ರೀಸಂಭೋಗ ಬಯಸುವ ಕಾರಣವಿಲ್ಲ ಹೊಸಬೇನೆ ಇದ್ದರೆ ೧೦ ದಿವಸ ನಡೆಯುವ ಒಂದು ಬಾಟಲಿಯಿಂದ ಗುಣವಾಗುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣವಾಗುವದು ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೦ ಮೂರು ಬಾಟಲಿಗಳಿಗೆ ಟಪಾಲ ಖರ್ಚು ಪ್ರತ್ಯೇಕ ಬೀಳುವದು ಇಷ್ಟು ಬಾಟಲಿಗಳ ಕಿಮ್ಮತ್ತು ೧೩—೧—೦ ಮತ್ತು ೧ ಬಾಟಲಿ ಪುಕ್ಕಟೆ ಕೊಡುವದು ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೦ ೬ ಬಾಟ್ಲಿಗೆ ೬—೦—೦ ಜತನೆ ೬—೦—೦

ಪತ್ತೆ:— ದ್ರಾಕ್ಷಾರ್ಕಮಧು ಆಫೀಸ ಪ್ರೋ. ವಿಷ್ಣು ... ಬೆಳಗಾಂವ

ಮಂಗೇಶರಾಯನ ಮದುವೆ!

(ಅನುವಾದಕ—ವಿ. ಜಿ. ಹೊದ್ದೈ, ಶಿರ್ಸಿ)

(ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು.)

೩

ಕೆಲವು ದಿವಸಗಳ ಮೇಲೆ ಶಂಕರರಾಯನ ಹೆಂಡತಿಯು ಮಂಗೇಶನ ತಾಯಿಯ ಭೇಟಿಗಾಗಿ ಬಂದಳು. ನಮಸ್ಕಾರ-ಚಮತ್ಕಾರಗಳು ಮುಗಿಯಲು, "ತಂಗೀ, ಮಂಗೇಶನು ಸಮ್ಮತಿಯನ್ನಿತ್ತನೇ?" ಎಂತ ಕೇಳಿದಳು.

"ಮದುವೆಯಾಗಲು ಅವನು ಸಿದ್ಧನಾಗಿರುವನು; ಆದರೆ ಅವನ ತಲೆಯಲ್ಲಿ ವಿಲಕ್ಷಣ ವಿಚಾರಗಳು ತುಂಬಿರುವವು."

"ಯಾವ ತರದ ವಿಚಾರಗಳು?"

"ಮೊದಲು ಅವನು ಒಪ್ಪಿಗೆಯನ್ನೀಯುವ ಮುಂಚೆ ಹುಡುಗೆಯನ್ನು ನೋಡಬೇಕೆಂತನು. ಹಾಗೆ ಮಾಡಿದರೆ ಒಳ್ಳೆಯದಾಗುವದು ಎಂತ ನಾನು ಉತ್ತರ ಕೊಟ್ಟೆನು. ಯಾಕೆಂದರೆ ಎಲ್ಲ ರೀತಿಯಲ್ಲಿಯೂ ಅವನಿಗೆ ಯೋಗ್ಯಳಾದಂಥ ರೂಪವತಿಯಾಗಿರುವ ನಿಮ್ಮ ಸುಂದರಿಯನ್ನೇ ನಾನು ತೋರಿಸುವವಳಿದ್ದೆನು. ಆ ಮೇಲೆ ಅವನು ಚಲುವೆಯಾದ ಕನ್ನಿಕೆಯನ್ನು ಮದುವೆಯಾಗಲಿಕ್ಕಿಲ್ಲೆಂತಲೂ, ಸಾಧಾರಣ ತರದ ಹುಡುಗಿಯನ್ನೇ ಬೇಕಾದ ಹಾಗೆ ಮಾಡಿಕೊಳ್ಳಲು ಬಯಸುವೆನೆಂತಲೂ ಹೇಳಿದನು."

ಶಂಕರರಾಯನ ಹೆಂಡತಿಗೆ ಆಶ್ಚರ್ಯವಾಯಿತು.

"ಇಂಥ ಅಸ್ವಾಭಾವಿಕವಾದ ಬಯಕೆಯನ್ನು ನಾನು ಎಂದೂ ಕೇಳಲಿಲ್ಲ. ಅವನು ಹೀಗೇಕೆ ಮಾಡುವನು?" ಅಂದಳು.

ಆ ಮೇಲೆ ತಾಯಿಯು, ಮಂಗೇಶನು ತನಗೆ ತಿಳಿಸಿ ಹೇಳಿದಂಥ ಕಾರಣಗಳನ್ನೆಲ್ಲ ತನ್ನ ಗೆಳತಿಗೆ ಹೇಳಿದಳು. ಸ್ವಲ್ಪ ವಿಚಾರ ಮಾಡಿ ಶಂಕರರಾಯನ ಹೆಂಡತಿಯು ಹೇಳಿದ್ದೇನಂದರೆ, — "ತಂಗೀ, ನೀನು ಒಂದು ಕೆಲಸ ಮಾಡು. ನಾಳೆ ಶನಿವಾರ ಬಾ ಎಂತ ಮಂಗೇಶನಿಗೆ ಹೇಳು. ನಿನಗೆ ಅವ್ವಳಂತ ತೋರುವ ಹುಡುಗಿಯೊಂದನ್ನು ಕಂಡಿರುವೆನೆಂತಲೂ ಅವಳನ್ನು ಸ್ವತಃ ನೋಡಲು ಬಾ ಎಂತಲೂ ಅವನಿಗೆ ತಿಳಿಸು. ಅಲ್ಲಿ ಬಂದ ಮೇಲೆ ರವಿವಾರ ಮಧ್ಯಾನ್ಹ ಅವನನ್ನು ನಮ್ಮ ಮನೆಗೆ ಕಳಿಸು. ಮುಂದಿನ ವ್ಯವಸ್ಥೆಯನ್ನು ನಾನು ನೋಡಿಕೊಳ್ಳುವೆನು."

ತಾಯಿಯು ಅನುಮತಿಯನ್ನಿತ್ತು, ಆಲೋಚಿಸಿದ್ದೇನಂದರೆ —"ಮಂಗೇಶನು ತಮ್ಮ ಸುಂದರಿಯನ್ನು ಒಮ್ಮೆ ನೋಡಿದರೆ ಸಾಕು, ಅವಳನ್ನು ಮದುವೆಯಾಗಬೇಕೆನ್ನುವ ಮನಸ್ಸನ್ನು ತಡೆಯಲು ಅವನಿಂದ ಎಂದೂ ಆಗಲಿಕ್ಕಿಲ್ಲ, ಎಂತ ಶಂಕರರಾಯನ ಹೆಂಡತಿಯು ತಿಳಿದಿರುವಳು. ಮತ್ತು ಅದೇನು ದೊಡ್ಡ ಚಿಕ್ಕ ಮಾತಲ್ಲ. ಯಾಕಂದರೆ ಅವಳು ನಿಜವಾಗಿಯೂ ಹೇಳುವಷ್ಟು ಸುಂದರಿಯಾಗಿದ್ದು, ಅಷ್ಟೇ ಜಾಣಳಾಗಿರುವಳು."

ಶನಿವಾರ ಮಂಗೇಶನು ಮನೆಗೆ ಬಂದನು. ರವಿವಾರ ಮಧ್ಯಾನ್ಹ ಅವನು ಗಾಡಿಯಲ್ಲಿ ಕುಳಿತು ಶಂಕರರಾಯನು ವಾಸಿಸುತ್ತಿರುವ ಹಳ್ಳಿಗೆ ಹೋದನು. ಅವನ ತಲೆಯು ಯೋಚನೆಯಿಂದ ತುಂಬಿದ್ದು ಅಸ್ತವ್ಯಸ್ತವಾಗಿತ್ತು. ಯಾಕೆಂದರೆ, ಪ್ರಾಚೀನ ಕಾಲದ ಋಷಿಗಳು ತಮ್ಮ ಕಾಡಿನ ಕಡೆಗೆ ಲಕ್ಷ್ಯ ಕೊಡುತ್ತಿರಲಿಲ್ಲ.

ಅಲ್ಲಿಗೆ ಮುಟ್ಟಿದ ಮೇಲೆ ಶಂಕರರಾಯನು ಯಾವದೊಂದು ಕೆಲಸಕ್ಕಾಗಿ ಹೊರಗೆ ಹೋಗಿರುವನೆಂತ ಅವನಿಗೆ ತಿಳಿದುಬಂತು. ತರುಣನೊಬ್ಬನು ಅವನನ್ನು ಆದರಪೂರ್ವಕವಾಗಿ ಸತ್ಕರಿಸಿ ದಿವಾನಖಾನೆಗೆ ಕರಕೊಂಡು ಹೋದನು. ಈ ಯುವಕನು ಶಂಕರರಾಯನ ಅಣ್ಣನ ಮಗನಾಗಿದ್ದನು. ಕೆಲ ಹೊತ್ತಿನ ಮೇಲೆ ದಾಸಿಯು ಬಂದು ಒಳಗೆ ಬರಹೇಳಿದಳು. ಮಂಗೇಶನ ಕಡೆಗೆ ನೋಡಿ ಅವಳು ನಗುತ್ತಿದ್ದಳು.

ಅವರಿಬ್ಬರೂ ಒಳಗೆ ಹೋದರು. ನೋಡುವರೆಲ್ಲ ನಗುತ್ತಿರುವಂತೆ ಮಂಗೇಶನಿಗೆ ತೋರಿತು. ಅವನು ಒಂದು ಸುವ್ಯವಸ್ಥಿತವಾದ ಕೋಣೆಗೆ ಹೋದನು. ಮಧ್ಯದಲ್ಲಿ ಮಣೆಯೊಂದಿಟ್ಟಿತ್ತು. ಅದರ ಮುಂದೆ ಉಪಹಾರ-ಫಲಾಹಾರಗಳಿಂದ ತುಂಬಿದ ಬೆಳ್ಳಿಯ ತಬಕಗಳಿದ್ದವು. ಸ್ವಲ್ಪ ಅಂತರದ ಮೇಲೆ ಮತ್ತೊಂದು ಮಣೆ ಇತ್ತು. ಜೊತೆಯವನ ಆಗ್ರಹದಂತೆ ಮಂಗೇಶನು ಫಲಾಹಾರಕ್ಕಾಗಿ ಕೆಳಗೆ ಕೂತನು. ಅಷ್ಟರಲ್ಲಿ ಹೊರಗೆ ಕಾಲಗೆಜ್ಜೆಗಳ ಸಪ್ಪಳವು ಕೇಳಿಸಿತು. ದಾಸಿಯೊಂದೊಡಗೂಡಿದ ಹುಡುಗೆಯೊಬ್ಬಳು ಒಳಗೆ ಬಂದು ಆ ಎರಡನೆಯ ಮಣೆಯ ಮೇಲೆ ಕೂತು ಒಳ್ಳೇ ಕುತೂಹಲಪೂರ್ಣವಾದ ದೃಷ್ಟಿಯಿಂದ ತನ್ನ ಸುತ್ತಲೂ ನೋಡುತ್ತಿದಳು.

ಮಂಗೇಶನು ಮರೆಗಣ್ಣಿನಿಂದ ಆ ಹುಡುಗೆಯ ಕಡೆಗೆ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಸ್ತ್ರೀಯರ ಸುಂದರ ಗುಂಗುರು ಗುಂಗುರಾದ ನೀಳವಾದ ಕಪ್ಪಾದ ಕೇಶದ ಸೌಂದರ್ಯವನ್ನು ಯಾವ ಪುರುಷನು ಮೆಚ್ಚುವದಿಲ್ಲವು? ಇಂಥ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುವದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತದೆ. ಈ ಆಯಿಲ್ ಹಚ್ಚಿಕೊಳ್ಳುತಲೇ ಮಸ್ತಕದ ಬೇನೆಯು ತಕ್ಷಣಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುವದೆ. ಕೂದಲುಗಳು ಇದನ್ನು ಹಚ್ಚುವ ಕಾರಣದ ಒಳಿತ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅದಲ್ಲದೆ, ಅವು ದಟ್ಟವಾಗಿ ಬೆಳೆದು ಸುಂದರವಾಗುವವು. ಇದರ ಸುಗಂಧವಾದರೋ ಮಧುರಪ್ರಮೋದಕವು ಆಗಿರುವದು.

ಬೇರೆ ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯನ್ನು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಸಾರೆ 'ಕಾಮಿನಿಯಾ ಆಯಿಲ್' ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಸರಕಾರಿ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವು ಇತರ ಸಾವಿರಾರು ಗ್ರಾಹಕರ ಉತ್ತಮೋತ್ತಮವಾದ ಮಾನಪತ್ರಗಳೂ ದೊರೆತಿ.

ಕ್ರಯ :— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚು 0-14-0

ಅತಿ ಮನೋಹರವಾದ ಸುರಭಿಯು

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧ ಮಾಡುವದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಿಂದ ಸೆಳೆಕೊಳ್ಳುವದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಕಿರಿ ಸೀಸೆ 1 ಕ್ಕೆ 0–8–0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0–12–0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2–0–0. ಅಂಚೆಯ ವೆಚ್ಚ ಬೇರೆ 0–4–0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳ ಡಜನ್ 1 ಕ್ಕೆ 0–12–0.

Address:- **The Anglo Indian Drug & Chemical Co.**

16. Market, **BOMBAY 2**

ನೋಡುತ್ತ ಕಣ್ಣುಗಳನ್ನು ಸಾವಕಾಶವಾಗಿ ತಿನ್ನುತ್ತಿದ್ದನು. ಅವಳು ದೊಡ್ಡ ವರ್ಣದ ದುಂಡಾದ ಸೀರೆಯನ್ನು ಉಟ್ಟಿದ್ದಳು. ಅವಳ ಕೂದಲಿಗೆ ಯಥೇಷ್ಟವಾದ ಎಣ್ಣೆ ಮಜ್ಜನವಾಗಿತ್ತು. ರೂಪದಲ್ಲಿ ಅವಳು ಪಾರ್ವತಿಗಿಂತ ಕಪ್ಪಗಾಗಿದ್ದಳು! ಬೆಳಸೇರಿದಂಥ ಸಣ್ಣ ಕಣ್ಣುಗಳು ಆಗಾಗ್ಗೆ ಅತ್ತಿತ್ತ ನೋಡುವದರಲ್ಲಿ ತೊಡಗಿದ್ದವು. ಆಕೆಯ ಹಣೆಯು ಎತ್ತರವಾಗಿತ್ತು. ಗದ್ದವು ಇದ್ದೀತಿಲ್ಲವೆಂಬದರೂ ಅಡ್ಡಿಯಿಲ್ಲ. ಎದುರಿನ ಹಲ್ಲುಗಳು ಎದ್ದು ಹೊರಗೆ ಕಾಣಿಸುತ್ತಿದ್ದವು. ಈ ಹುಡುಗಿಯು ತನಗೆ ಯೋಗ್ಯ ಹೆಂಡತಿಯಾಗುವಳೆಂತ ಮಂಗೇಶನು ಆಲೋಚಿಸಿದನು. ಸ್ವಲ್ಪ ಹೊತ್ತು ಅಂತರವನ್ನು ಸರಿಪಡಿಸಿಕೊಳ್ಳುತ್ತ ನ್ಯಾಯ ಕನಸ್ಸು ಕಾಣಿ, "ನಿನ್ನ ಹೆಸರೇನು?" ಎಂದು ಅವಳನ್ನು ಕೇಳಿದನು.

ಆ ಹುಡುಗಿಯು ಕೂಡಲೆ ಅವನ ಕಡೆಗೆ ನೋಡಿ ತನ್ನ ನಾಲಿಗೆಯ ತುದಿಯನ್ನು ತೋರಿಸುತ್ತ, "ಏನು?" ಎಂದಳು.

"ನಿನ್ನ ಹೆಸರೇನು?"

"ನನ್ನ ಹೆಸರು ಮುಹಾಕಾ"

ಅಷ್ಟರಲ್ಲಿ ಸಂಗಡ ಇದ್ದ ತರುಣನೂ, ದಾಸಿಯೂ ಸಿಟ್ಟಿನಿಂದ ಕಣ್ಣು ಬಿಡಲು, ತಾನಲೇ ಅವಳು "ನನ್ನ ಹೆಸರು ಸುಂದರಿ" ಎಂತ ಪುನಃ ಹೇಳಿದಳು.

"ಅವಳ ಮೊದಲಿನ ಹೆಸರು ಮುಹಾಕಾ ... ಇದ್ದು ಈಗ ಚಕಗೆ ಸುಂದರಿ ಎಂತ ಕರೆಯುವರು," ಎಂತ ತರುಣನು ನುಡಿದನು.

ಮಂಗೇಶನು ಆಲೋಚಿಸಿದ್ದೇನಂದರೆ— "ಹೆಸರನ್ನು ಬದಲಿಸಿದ್ದೇನೂ ಒಳಿತಾಗಲಿಲ್ಲ. ಸುಂದರಿ' ಕರ್ಣಕಠೋರವಾದ ಹೆಸರಿದು ಮುಹಾಕಾಳ ಎಂಬುದೇ ಕರ್ಣಾನಂದಕರವು. ಅದು ಪ್ರಾಚೀನ ಕಾಲದ ಋಷಿಗಳು ಉಚ್ಚರಿಸುತ್ತಿದ್ದಂಥ ಪೌರಾಣಿಕ ಹೆಸರಾಗಿರುವದ ... ಇವಳನ್ನು ಮದುವೆಯಾದರೆ, ಪುನಃ ಅದೇ ಹೆಸರನ್ನೇ ಇಡುವೆನು." ಆ ಮೇಲೆ ಅವನು, — "ನೀನು ಓದಬಲ್ಲಿಯೋ?" ಎಂತ ಗಟ್ಟಿಯಾಗಿ ಕೇಳಿದನು.

ಮೊದಲಿನಂತೆಯೇ ಆ ಮುಹಾಕಾಳೆಯು ನಾಲಿಗೆಯನ್ನು ಹೊರ ತೆಗೆದು, "ಏನು?" ಎಂದಳು.

"ನೀನು ಓದಬಲ್ಲಿಯೋ?

"ಇಲ್ಲಪ್ಪ ನನಗೆ ಓದಲಿಕ್ಕೆ ಬರುವದೇ ಇಲ್ಲ"

ದಾಸಿಯೂ ತರುಣನೂ ಅವಳ ಕಡೆಗೆ ಸಿಟ್ಟಿನಿಂದ ನೋಡಲು, ಆ ಹುಡುಗಿಯು ಅಷ್ಟಕ್ಕೇ ನಿಂತಳು. ಅದರಿಂದ ಮಂಗೇಶನಿಗೆ ಮತ್ತಿಷ್ಟು ಆನಂದವಾಯಿತು. ಯಾಕಂದರೆ ಅವನಿಗೆ ಇದೇ ಬೇಕಾಗಿತ್ತು. ಅವಳನ್ನು ನಿಜವಾದ ಆರ್ಯ ಗೃಹಿಣಿಯನ್ನಾಗಿ ಮಾಡುವ ಸಕಲ ಸಾಹಿತ್ಯಗಳೂ ನಿಶ್ಯಂಕವಾದವು. ನೋಡಲಿಕ್ಕೆ ಅವಳು ಚಲುವೆಯಾಗಿದ್ದಿಲ್ಲ. ಮತ್ತು ಅವನಿಗೆ ಬೇಕಾದದ್ದು ದರೂ ಅದೇ ಮದುವೆಯು ಕಾಲಕ್ಕೆ ಸಹಧರ್ಮಿಣಿಗಳಾದ ಹೆಣ್ಣುಗಳೆಲ್ಲರ ಅವಶ್ಯವಾಗಿ ನೋಡಲು ಕರೆಯಬೇಕೆಂತ ಅವನು ಆಲೋಚಿಸಿದನು. ಆ ಮೇಲೆ ಗಟ್ಟಿಯಾಗಿ ಹೇಳಿದ್ದೇನಂದರೆ- "ಒಳ್ಳೇದು, ನೀನು ಈಗ ಹೋಗಬಹುದು."

ಪುನಃ ಆ ಹುಡುಗಿಯು ನಾಲಿಗೆಯ ತುದಿಯನ್ನು ತೋರಿಸುತ್ತ "ಏನು?" ಎಂತ ಕೇಳಿದಳು.

"ನೀನು ಹೋಗಬಹುದು."

ದಾಸಿಯು ಅವಳನ್ನು ಎಳೆದೊಯ್ದಳು. ಮಂಗೇಶನು ತನ್ನ ಫಲಾಹಾರವನ್ನು ತೀರಿಸಿದನು. ಅಷ್ಟರಲ್ಲಿ ಹದಿಮೂರು ವರ್ಷದ ಕನ್ನಿಕೆಯೊಬ್ಬಳು ಬೆಳ್ಳಿಯ ತಟ್ಟೆಯಲ್ಲಿ ತಾಂಬೂಲವನ್ನು ತಂದಳು. ಆ ಹುಡುಗಿಯು ಒಳ್ಳೇ ಚಲುವೆಯಾಗಿದ್ದಳು. ಅವಳು ಕರೀ ಅಂಚಿನ ಹಸುರಾದ ಬಿಳೀ ಸೀರೆಯನ್ನುಟ್ಟಿದ್ದಳು. ಕಾಲಲ್ಲಿ ಬೆಳ್ಳಿಯ ತೋಡೆಗಳೂ ಕೈಯಲ್ಲಿ ಬಂಗಾರದ ಬಳೆಗಳೂ ಇದ್ದವು. ತಾಂಬೂಲದ ತಟ್ಟೆಯನ್ನು ಕೆಳಗಿಟ್ಟು ಅವಳು ಹೋಗಿಬಿಟ್ಟಳು. ಹೋಗುವಾಗ ಅವಳು ಮರೆಗಣ್ಣಿನಿಂದ ನೋಡುತ್ತ ಸ್ವಲ್ಪ ಮುಗುಳು ನಗೆ ನಕ್ಕಳು.

ಮಂಗೇಶನು ಮನಸ್ಸಿನಲ್ಲೇ ಆಲೋಚಿಸಿದ್ದೇನಂದರೆ,— "ಅವಳೊಬ್ಬ ಚಲುವೆಯಾದ ಹುಡುಗಿಯು. ಇವಳನ್ನು ಮದುವೆಯಾಗುವದು ಈಗ ನನಗೆ ಶಕ್ಯವೇ? ಇಷ್ಟು ದಿನದ ನನ್ನ ಆಲೋಚನೆಗಳೆಲ್ಲ ಮಣ್ಣುಗೂಡುವವು" ತನ್ನ ಪ್ರತಿಜ್ಞೆಯನ್ನು ಪೂರ್ಣ ಮಾಡುವದರಲ್ಲಿ ದೊರೆತ ಜಯದಿಂದ ಅವನ ಮನಸ್ಸು ಅಭಿಮಾನದಿಂದ ಹಿಗ್ಗುತ್ತಿತ್ತು.

ತರುಣನು ಮಂಗೇಶನನ್ನು ಹೊರಗೆ ಕರೆದೊಯ್ದನು. ದಾಸಿಯು ಸ್ವಲ್ಪ ನಗುತ್ತ "ಮದುಮಗಳು ಮನಸ್ಸಿಗೆ ಬಂದಳೋ! ಎಂತ ಮನೆಯ ಹೆಂಗಸರು ಕೇಳುತ್ತಿರುವರು" ಎಂದಳು.

ಅದಕ್ಕೆ ಮಂಗೇಶನು "ಹೌದು" ಎಂತ ಸ್ವಾಭಿಮಾನಪೂರ್ವಕವಾಗಿ ಉತ್ತರ ಕೊಟ್ಟನು.

ಮುಂದೆ ಸಾಗುವದು

W..ntec.

C... ... to take up the work ... the bridge on the road from ... to the ... Those who wish to take ... are requested to ... particulars.

M G Gopi,

Chairman,

... Municipality

ಜಾಹೀರ ವಿನಂತಿ.

ಹೆಸರ್ವಾಸದ ... ಪ್ರತಿ ... ಜನ್ಮನಾಗಿ ಕಟ್ಟಿಸಿದ ... ಭಾವಿಗೆ ... ಕ್ಕೆ ... ಅಗತ್ಯ ... ಹೆಗಿನ ಪತ್ರಿಗೆ ಪತ್ರ ... ಬರೆಯಬಹುದು.

ವೆಂಕಟಪ್ರಿಯ ಪಾಂಡೆ. ಸೀಯಮ್ಮ.

ಮೆನೇಜರ

ಧಾರವಾಡ ಕರ್ನಾಟಕ ವಿದ್ಯಾವರ್ಧಕಸಂಘದಿಂದ ಹೊರಡುವ ತಿಳಿಗನ್ನಡದ **ಸ್ವಧರ್ಮ** ವಾರಪತ್ರಿಕೆ

ಸಂಪಾದಕ— ಸಿದ್ಧಲಿಂಗ್ಯ ಶಿವರಾಯ ದೇಸಾಯಿ

ವ್ಯಾವಹಾರಿಕ ಸಂದರ್ಭಕ್ಕೆ ಪಾರಮಾರ್ಥಿಕ ಸಂಗತಿ ಕಾಣಿಸಿಕೊಳ್ಳುವಂತೆ ಸ್ವಸಂಸ್ಕೃತಿ ಪ್ರೇಮ ಸ್ವದೇಶ ಪ್ರೀತಿ ಸ್ವಭಾಷಾಭಿಮಾನ ಸ್ವಧರ್ಮಾನುರಾಗ ಸ್ವಾರ್ಥತ್ಯಾಗ ಮುಂತಾದ ಗುಣಗಳನ್ನು ಉದ್ದೀಪನಗೊಳಿಸುವಂಥ ಕೀರ್ತನ ಪುರಾಣ ಪ್ರವಚನ ನಿಬಂಧ ಜೀವನಚರಿತ್ರ ಇತಿಹಾಸ ನಾಟಕ ಕಥೆ ಮತ್ತು ಕಾದಂಬರಿ ಮುಂತಾದ ರೂಪದಲ್ಲಿ ಜನಸಮಾಜದ ಉನ್ನತಿಗೆ ಅಗತ್ಯವಾದ ಸರ್ವ ವ್ಯವಹಾರಗಳನ್ನೂ ಸ್ವಧರ್ಮ ದೃಷ್ಟಿಯಿಂದ ವಿಚಾರ ಮಾಡಿ ವಿವರಿಸುವದು.

ಚಂದಾ ವರ್ಷಕ್ಕೆ ೩ ರೂ.

೫ ರೂ ಮೇಲೆ ಕೊಟ್ಟವರು

ಪೋಷಕರೆ ೩ ಗ್ರಂಥಕ್ಕೆ ಪಾತ್ರರಾಗುವರು

ವ್ಯವಸ್ಥಾಪಕ, "ಸ್ವಧರ್ಮ." ಧಾರವಾಡ

ವಿವಿಧ ಸಂಗ್ರಹ.

ಹೆಂಗಸಿನ ಗಂಡ ಹೆಂಗಸೇ!

ಅಮೇರಿಕೆಯ ನ್ಯೂ ಯೋರ್ಕದೊಳಗಿನ ವರಿಷ್ಠ ನ್ಯಾಯಾಸನದಲ್ಲಿ ಒಂದು ವಿಚಿತ್ರ ದಾವೆ ದಾಖಲಾಗಿದೆ. ಮಿಸೆಸ್ ಲಿಲಿಯನ್ ರೋಲಿನ್ಸಳೆಂಬ ಹೆಂಗಸು ವಾದಿಯು, ರೋಬರ್ಟ ರೋಲಿನ್ಸ ಎಂಬವರು ಪ್ರತಿವಾದಿಯು. ಪ್ರತಿವಾದಿಯ ಮೇಲೆ ವಾದಿಯು ಮೋಸದ ಆರೋಪ ಹೊರಿಸಿದ್ದಾಳೆ. ರೋಬರ್ಟ ರೋಲಿನ್ಸನು ಗಂಡಸಲ್ಲ; ಹೆಂಗಸು. ಗಂಡಸೆಂದು ವಾದಿಗೆ ಸುಳ್ಳು ಕಲ್ಪನೆ ಕೊಟ್ಟು, ೧೯೨೩ನೇ ಇಸ್ವಿಯಲ್ಲಿ ರೋಲಿನ್ಸನು ಮದುವೆ ಮಾಡಿಕೊಂಡನು. ಈ ಮದುವೆಯನ್ನು ರದ್ದು ಮಾಡಲು ಲಿಲಿಯನ್‌ಳು ದಾವೆ ಮಾಡಿದ್ದಾಳೆ. ಇದೆಂಥ ವಿಚಿತ್ರ! ಹೆಂಗಸಿಗೆ ಹೆಂಗಸನ್ನೇ ಮದುವೆ ಮಾಡಿಕೊಳ್ಳುವದು ಎತ್ತಣ ಆಶೆ?

* * *

ರಕ್ತಪ್ರವಾಹದ ಮೇಲಿನ ಹೊಂತರ ಔಷಧಪ್ರಯೋಗ.

ಚಿತ್ರಕಾಬದ ಮಹೀಶರು ಕ್ಷಯ, ದಮ್ಮು, ಕಫ ... ದ ಪುಪ್ಪುಸ ವಿಕಾರಗಳ ಮೇಲೆ ವಿಷ್ಣು ಕವಸ್ಸ ... ಉಪಯೋಗದ ಔಷಧವನ್ನು ಕಳೆದ ಅಕ್ಟೋಬರ ... ಹುಣ್ಣಿಮೆ ... ಯು ನಾಟುಂಗೆಯಲ್ಲಿ ... ಹಂಚಿದ್ದರು. ಈ ಔಷಧದಿಂದ ನೂರಾರು ರೋಗಿಗಳಿಗೆ ಪರಿಣಾಮವಾಯಿತೆಂದು ತಿಳಿದು ಬರುತ್ತದೆ. ಆದರಿಂದ ಮುಂಬಯಿಯ "ಹಸ್ಯವೆ ವಿಟೇರಿಯನ್ ಲೀಗ" ದವರು ಕಾರ್ತೀಕ ಶುದ್ಧ ಪೂರ್ಣಿಮೆಯ ದಿನ ಅಲ್ಲಿಯೇ ಈ ಮದ್ದನ್ನು ಪುನಃ ಹಂಚಿದರು. ಆ ರಾತ್ರಿ ೩೦೦೦ ಮಂದಿ ಅಲ್ಲಿ ಸೇರಿದ್ದರು. ಸಾಯಂಕಾಲ ೬ ಘಂಟೆಯಿಂದ ರಾತ್ರಿ ೧೨ ಘಂಟೆಯ ವರೆಗೆ ಬಂದು ... ರೋಗಿಗಳು ಹೋಗುತ್ತಿದ್ದರು. ಸಂಸ್ಥೆಯವರು ... ಹಂಚಿ ರೋಗಿಗಳಿಗೆ ... ಪೂರ್ವ ಸೂಚನೆ ಕೊಟ್ಟಿದ್ದರು. ಎಲ್ಲರೂ ಬರುತ್ತ ಅನ್ನದ ಕಾಲಿನಲ್ಲಿ ತಯಾರಿಸಿದ ಗಂಜಿಯನ್ನು ತೆಗೆದು ಬಂದಿದ್ದರು. ರೋಗಿಗಳೆಲ್ಲ ನಾಲ್ಕು ಸಾಲುಗಳಾಗಿ ಕೂತ್ರಿಸಿದ್ದರು. ಒಂದೊಂದು ಸಾಲು ೧೦-೧೧ ಫರ್ಲಾಂಗು ಉದ್ದವಿತ್ತು. ೧ ಪಂಗ್ತಿ ತುಂಬಿ ಹೋಗಿದ್ದರು. ಮುಕುಂದರ ಮದ್ದನ್ನು ಸರಿಯಾಗಿ ೧೧ ಘಂಟೆಗೆ ಸ್ವಯಂಸೇವಕರು ಹಂಚಿದರು. ಹಾಲು ಗಂಜಿಯಲ್ಲಿ ಅದನ್ನು ಕಲಿಸಿ ರೋಗಿಗಳು ಅದನ್ನು ಬೆಳದಿಂಗಳಲ್ಲಿ ಇರಿಸಿದರು. ೫ ತಾಸು ಕಳೆದ ಮೇಲೆ, ಸರಿಯಾದ ೪ ಘಂಟೆಗೆ, ಘಂಟೆ ಬಾರಿಸಲಾಯಿತು. ಕೂಡಲೆ, ಎಲ್ಲರೂ ದಿವ್ಯೌಷಧವನ್ನು ಸೇವಿಸಿ ಸಾಷ್ಟಾಂಗಪೂರ್ವಕರು ಒಂದು ಮೈಲು ತನಕ ನಡೆದು ಹೋದರು. ಇದರಂತೆಯೇ ಬಲಸಾರ, ಬಿಡಾರಾ, ಇತ್ಯಾದಿ ಕಡೆಗಳಲ್ಲಿ ಈ ಮದ್ದು ಅದೇ ದಿನ ಹಂಚಲಾಯಿತು. ಆ ಹಂತರ ವರ್ಷಕ್ಕೆ ಔಷಧದ ಪ್ರಭಾವ ನೋಡಬೇಕು!

* * *

ಗೋರಕ್ಷಣೆ

ಮ. ಗಾಂಧಿಯವರು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಗೋರಕ್ಷಣೆಯ ವಿಷಯ ಪ್ರಮಾಣ ಗ್ರಂಥ ಬರೆಯುವವರಿಗೆ ೧ ಸಾವಿರ ರೂಪಾಯಿಗಳ ಪಾರಿತೋಷಕವನ್ನು ಜಾಹೀರ ಮಾಡಿರುವರು. ಅದೇ

ನಂದರೆ.— ಗೋರಕ್ಷಣೆಯ ಕುರಿತು ಪ್ರಮಾಣ ಗ್ರಂಥವಿರುವದು ಅವಶ್ಯವಾಗಿದೆ. ಅಮೇರಿಕೆಯೊಳಗಿನ ಗೆಳೆಯರೊಬ್ಬರು ಈ ವಿಷಯ ಲಕ್ಷ ಕೊಡುತ್ತಿದ್ದು ಗೋರಕ್ಷಣೆಯ ಮಾಹಿತಿ ಪೂರೈಸುವ ಗ್ರಂಥವನ್ನೊಂದು ಪೂರೈಸಲು ಅವರು ನನಗ ಹೇಳಿಸುವರು. ಅವರಿಗೆ ಬೇಕಾಗಿರುವ ಮಾಹಿತಿ ಪೂರೈಸುವ ಗ್ರಂಥವು ನನಗೆ ಸಿಗಲಿಲ್ಲ. ಅದರಿಂದ ಶ್ರೀ| ರೇವಾಶಂಕರ ಜಗಜೀವನರವರಿಗೆ ಹೇಳಿ, ಗೋರಕ್ಷಣದ ಮೇಲೆ ನಿಬಂಧ ಬರೆಯುವವರಿಗೆ ಪಾರಿತೋಷಕವನ್ನಿಡಲು ಅವರು ತಯಾರಿರುವರೇನೆಂದು ಪ್ರಶ್ನಿಸಿದೆನು. ಈ ವಿಷಯ ಉತ್ತಮ ಪ್ರತಿಯ ನಿಬಂಧ ಬರೆಯುವವರಿಗೆ ಅವರು ೧೦೦೦ ರೂಪಾಯಿ ಕೊಡುವೆವಾಗಿ ಒಪ್ಪಿಕೊಂಡಿರುವರು. ನಿಬಂಧವನ್ನು ೧೯೨೬ನೇ ಇಸ್ವಿಯ ಮಾರ್ಚ ೩೧ನೇ ತಾರೀಖಿನೊಳಗೆ ಸಾಬರಮತಿಯ ಸತ್ಯಾಗ್ರಹ ಆಶ್ರಮದ ಅಖಿಲ ಭಾರತೀಯ ಗೋರಕ್ಷಣದ ಕಾರ್ಯದರ್ಶಿಗಳ ಕಡೆಗೆ ಕಳುಹಿಸತಕ್ಕದ್ದು. ಅದನ್ನು ಇಂಗ್ಲಿಷಿನಲ್ಲಾಗಲಿ, ಸಂಸ್ಕೃತದಲ್ಲಾಗಲಿ, ಹಿಂದೀಯಲ್ಲಾಗಲಿ ಬರೆಯಬಹುದು. ಗೋರಕ್ಷಣೆಯು ಹೇಗೆ ಉಂಟಾಯಿತು, ಅದರ ಅರ್ಥವೇನು, ಅದರೊಳಗೆ ಯಾವ ಯಾವ ಸಂಗತಿಗಳ ಸಮಾವೇಶವಾಗುತ್ತದೆ. ಎಂಬದನ್ನೆಲ್ಲ ಪ್ರಮಾಣ ಸಹಿತ ಕೊಡಬೇಕು. ಶಾಸ್ತ್ರ ವಚನಗಳನ್ನೆಲ್ಲ ವಿಚಾರಿಸಿ ಗೋರಕ್ಷಣೆಯ ಸಂಸ್ಥೆಯವರು ಹೈನದ ವ್ಯಾಪಾರ ಮಾಡಲಿಕ್ಕಾಗಲಿ, ಚರ್ಮದ ಸರಕುಗಳನ್ನು ತಯಾರು ಮಾಡಲಿಕ್ಕಾಗಲಿ ಶಾಸ್ತ್ರದ ಪ್ರತಿಬಂಧವೇನಿರುವದೆಂದು ಶೋಧಿಸಬೇಕು. ಭರತಖಂಡದೊಳಗಿನ ಗೋರಕ್ಷಣೆಯ ಇತಿಹಾಸವನ್ನು ಬುಡದಿಂದ ತುದಿಯ ತನಕ ವಿವರಿಸಿ, ಕಾಲಕಾಲಕ್ಕೆ ಆ ಕುರಿತು ಕೈಕೊಂಡ ಉಪಾಯಗಳನ್ನು ನಮೂದಿಸಬೇಕು. ಹಿಂದುಸ್ಥಾನದೊಳಗಿರುವ ದನಗಳ ಸಂಖೆಯನ್ನು ಕೊಟ್ಟು, ಮೇವು ಪ್ರದೇಶದ ಪ್ರಶ್ನೆಯನ್ನು ವಿಚಾರಿಸುವಾಗ, ಆ ಕುರಿತು ಸರಕಾರವು ಕೈಕೊಂಡ ಧೋರಣದ ಪರಿಣಾಮವನ್ನೂ ಆಲೋಚಿಸತಕ್ಕದ್ದು. ಮತ್ತು ಗೋರಕ್ಷಣೆಯನ್ನು ಪಾರಗಾಣಿಸುವದರ ಉಪಾಯಗಳನ್ನೂ ಸೂಚಿಸತಕ್ಕದ್ದು. ನಿಬಂಧಗಳನ್ನು ಪರೀಕ್ಷಿಸಲು ಆಚಾರ್ಯ ಆನಂದ ಶಂಕರ ಧ್ರುವ ಹಾಗು ಶ್ರೀ| ಚಿಂತಾಮಣರಾವ ವೈದ್ಯರವರಿಗೆ ನಾನು ನಿಮಂತ್ರಿಸಿದ್ದೇನೆ. ಅಖಿಲ ಭಾರತೀಯ ಗೋರಕ್ಷಣ ಸಂಘದ ಕಾರ್ಯಧೋರಣದ ದೃಷ್ಟಿಯಿಂದ ಗೋರಕ್ಷಣೆಯ ಕುರಿತು ಗೆಳೆಯರ ಅಭಿಪ್ರಾಯಗಳನ್ನು ಇನ್ನೊಂದು ಪಕ್ಷದಲ್ಲಿ ಪಡಕೊಂಡು, ಅವಶ್ಯವಿದ್ದರೆ, ಮೇಲಿನ ಶರ್ತುಗಳಲ್ಲಿ ತಿದ್ದುಪಡಿಯನ್ನು ಜಾಹೀರುಪಡಿಸುವೆನು. ೧೫ ದಿನಗಳಲ್ಲಿ ತಿದ್ದುಪಡಿ ಜಾಹೀರಾಗದಿದ್ದರೆ, ಮೇಲ್ಕಂಡ ಶರ್ತುಗಳೇ ಊರ್ಜಿತವೆಂದು ತಿಳಿಯತಕ್ಕದ್ದು.

***

ಬತ್ತಲೆ ಕುಣಿತ!

ಬರ್ಲಿನದಲ್ಲಿ ಬತ್ತಲೆ ಕುಣಿತ ಮಾಡಿ ಜನಮನರಂಜನ ಮಾಡುವ ನರ್ತಕರು ಅನೇಕರಿರುವರು. ತಮ್ಮ ಕುಣಿತದಿಂದ ಜನಮನರಂಜನವಾಗುವ ಕಾರಣದಿಂದ ತಮಗೆ ಸಿಗುವ ಹಣವು ತೀರ ಕಡಿಮೆಯೆಂದು ದೂರಿ, ನರ್ತಕರು ಸಂಪ ಮಾಡಿದ್ದರು. ಪೋಲೀಸರು ಇದರಿಂದ ಪ್ರಜೆಗಳ ಅಹಿತವಾಗುವದೆಂದು ತಿಳಿದು, ಪ್ರಜೆಗಳ ಹಿತಕ್ಕಾಗಿ ನರ್ತಕರ ಸಂಪು ಮುರಿದರು. ಇದೆಂಥ ಪಶುತುಲ್ಯ ವಿನೋದ!

***

೧೦,೬೦೦ ವರ್ಷಗಳ ಶಿಕ್ಷೆ!

ಸ್ಪೇನ ದೇಶದ ರಾಜಧಾನಿಯಾದ ಮಾದ್ರಿದ್ ಪಟ್ಟಣದಲ್ಲಿ ಸರಕಾರಿ ವಕೀಲರೊಬ್ಬರಿರುವರು. ಇವರಿಗೆ ಉಗಿಬಂಡಿ ಖಾತೆಯವರನ್ನು ವಂಚಿಸುವ ಹಟ. ವಿಶೇಷ ೧,೧೯೫ ಸಲ ಉಗಿಬಂಡಿ ಅಧಿಕಾರಿಗಳಿಗೆ ಇವರು ವಂಚಿಸಿದರು. ಈ ಬಗ್ಗೆ ವಿಚಾರ ನಡೆದು, ಒಂದೊಂದು ಅಪರಾಧಕ್ಕಾಗಿ ೯–೯ ವರ್ಷಗಳ ಶಿಕ್ಷೆ ವಿಧಿಸಲಾಗಿದೆ; ೧೨ ಸಾವಿರ ವರುಷ ಬದುಕಿ ಉಳಿದರೂ ಇವರ ಶಿಕ್ಷೆಯು ಸಮಾಪ್ತಿಯಾಗದು. ಇಷ್ಟು ಕಠಿಣ ಅಪರಾಧ ಮಾಡುವ ವರೆಗೆ ಸರಕಾರವು ಎಲ್ಲಿ ಮಲಗಿಕೊಂಡಿತ್ತು? ಅಥವಾ ಶ್ರೀಕೃಷ್ಣ ಪರಮಾತ್ಮನು ಶಿಶುಪಾಲನ ೧೦೦ ಅಪರಾಧಗಳನ್ನು ಕ್ಷಮಿಸುವ ವಚನ ಕೊಟ್ಟಂತೆ, ಸ್ಪೇನ ಸರಕಾರದವರು ಈ ವಕೀಲರಿಗೆ ಇಂಥ ವಚನವನ್ನೇನಾದರೂ ಕೊಟ್ಟಿದ್ದರೇನ? ಈ ಪ್ರಕರಣದ ಮೇಲಿಂದ ಪಾಶ್ಚಾತ್ಯ ರಾಷ್ಟ್ರಗಳೊಳಗಿನ ಸುಧಾರಿಸಿದ ರಾಜ್ಯವ್ಯವಸ್ಥೆಯು ಕಾರ್ಯಕ್ಷಮವಲ್ಲೆಂದು ಯಾರೂ ಹೇಳುವರು.

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತು ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

ಖಾದಿ.

ಶ್ರೀ| ಗಂಗಾಧರರಾಯರ ವಿಚಾರಗಳು.

ಸಪ್ಟೆಂಬ್ರ ಬೆಳಗಾವಿಯಲ್ಲಿ "ಸತ್ಯಸ್ಥಿತಿ ಹಾಗು ಖಾದಿ" ಈ ವಿಷಯ ಶ್ರೀ| ಗಂಗಾಧರರಾಯರ ವಿಚಾರಪೂರ್ಣ ಉಪನ್ಯಾಸವಾಯಿತು. ಬೆಳಗಾವಿಯ ಪ್ರಸಿದ್ಧ ಲೋಕಸೇವಕರಾದ ಶ್ರೀ| ದತ್ತೋಪಂತ ಬೆಳಗಾವಿಯವರು ಅಧ್ಯಕ್ಷಸ್ಥಾನದಲ್ಲಿ ವಿರಾಜಮಾನರಾಗಿದ್ದರು. ಶ್ರೀ| ಗಂಗಾಧರರಾಯರು ಖಾದಿಯ ವಿಷಯ ಮಾತಾಡಿದ್ದೇನಂದರೆ:— ನಮ್ಮ ಕರ್ತವ್ಯವನ್ನು ಪಾರಗಾಣಿಸಲು ನಮ್ಮಲ್ಲಿ ಸಾಮರ್ಥ್ಯವಿರಬೇಕು. ಸಾಮರ್ಥ್ಯವನ್ನು ಪ್ರಾಪ್ತಮಾಡಿಕೊಳ್ಳುವದು ಖಾದಿಯ ಪುರಸ್ಕಾರದಿಂದಲೇ ಎಂದು ನಾನು ಒತ್ತಿ ಹೇಳುವೆನು. ಅಸಹಯೋಗದ ಇತರ ಕಾರ್ಯಕ್ರಮದಲ್ಲಿ ಮಹಾತ್ಮರು ಬದಲಿಸಿದರೂ, ಖಾದಿಯನ್ನು ಪ್ರೇಮದಿಂದ ಯಾಕೆ ಅಪ್ಪಿಕೊಳ್ಳುತ್ತಾರೆ? ಪರಿಸ್ಥಿತಿಯು ಬದಲಿಸಿದರೂ ರಾಷ್ಟ್ರೀಯ ಸಭೆಯಲ್ಲಿ ಖಾದಿಗೆ ಇಂಬು ದೊರೆತ ಬಗ್ಗೆ ಮಹಾತ್ಮರು ಏಕೆ ಉಪಕಾರ ಮನ್ನಿಸುತ್ತಾರೆ? ರಾಷ್ಟ್ರೀಯ ಲೋಕನಾಯಕರ ವಚನಗಳನ್ನು ಕೃತಿಯಲ್ಲಿ ರೂಪಾಂತರಿಸುವ ಸಾಮರ್ಥ್ಯವನ್ನು ಪ್ರಾಪ್ತ ಮಾಡಿಕೊಳ್ಳಲು ಖಾದಿಯನ್ನು ಆಶ್ರಯಿಸುವದೇ ಸುಲಭ ಉಪಾಯವು. ಈ ಉಪಾಯವನ್ನು ಕೈಕೊಂಡು ಅದನ್ನು ನಾವು ಕೃತಿಯಲ್ಲಿ ರೂಪಾಂತರಿಸಿದರೆ, ನಮ್ಮ ಆತ್ಮವಿಶ್ವಾಸವು ಬೆಳೆದು, ಇನ್ನು ಕಠಿಣ ಕಾರ್ಯಗಳನ್ನು ಕೈಕೊಂಡು ಅವನ್ನು ಪಾರಗಾಣಿಸಲು ನಾವು ಸಾಹಸಬಡುತ್ತೇವೆ. ದಾಸ ಬಾಬುಗಳು ಫರೀದಪೂರದ ಭಾಷಣದಲ್ಲಿ ನಮ್ಮ ಬೇಡಿಕೆಗಳನ್ನು ತಗ್ಗಿಸುವ ಕಾರಣವೇನು? ಅಷ್ಟಕ್ಕಾಗಿ ಹಾಕುವ ಹೇತುವು ಅವರಲ್ಲಿರಲಿಲ್ಲ. ಮಹಾತ್ಮರು ಕೌಲಿಗಳ ನಾಯಕರಿಗೆ ಪೆನ್ಶನ್ ಕೊಡಬಾರದೆಂಬ ತೀರ ಕಠಿಣ ಪ್ರತಿಯ ಠರಾವನ್ನು ಬೇಡುವ ಕಾರಣವೇನು? ಅಲ್ಪ ಬೇಡಿಕೆಗಳನ್ನು ತಿರಸ್ಕರಿಸುವ ಸರಕಾರದ ಮನೋವೃತ್ತಿಯು ಬೈಲಿಗೆ ಬಂದು, ಅಂತಃಸ್ವರೂಪವು ಸ್ಪಷ್ಟವಾಗುತ್ತದೆ. ಅಂತೆಯೇ ಮಹಾತ್ಮರು ತೀರ ಸುಲಭಸಾಧ್ಯವಾದ ಸ್ವಸಾಮರ್ಥ್ಯ ಪ್ರಾಪ್ತಿಯ ಖಾದಿಯ ಸಂದೇಶವನ್ನು ಬೋಧಿಸುತ್ತಿರುವರು. ದಾಸ ಬಾಬುಗಳ ಫರೀದಪೂರದ ಭಾಷಣವಾದ ೧ ದಿನಗಳಲ್ಲಿಯೇ ಬಂಗಾಲದ ಸರಕಾರವು ತೊಂಟಗಟ್ಟು ಸ್ವರಾಜ್ಯವನ್ನೇ ಅಂಗೀಕರಿಸಿ, ದೇಶಬಂಧುಗಳಿಗೆ ಧಿಕ್ಕಾರ ಬಟ್ಟಿತು. ಆಗ ದಾಸ ಬಾಬುಗಳಿಗೆ ಗ್ರಾಮಸಂಘಟನೆಯ ಕಳವಳವುಂಟಾಯಿತು. ಅದಕ್ಕಾಗಿ ದೇಶಬಂಧುಗಳು ೧-೧|| ಲಕ್ಷ ರೂಪಾಯಿಗಳನ್ನು ಒಪ್ಪಿಸಿದರು. ಗ್ರಾಮಸಂಘಟನೆಯನ್ನು ಬೆಳಗಿಸತಕ್ಕ ಖಾದಿಯಷ್ಟು ಉಪಯುಕ್ತ ಸಾಧನವು ಬೇರೊಂದಿಲ್ಲ. ಹಳ್ಳಿಗಳೊಳಗಿನ ಮುದುಕಿಯರಿಗೆ ಕೇಳಿರಿ, ಆಳರಸರ ರಾಜ್ಯಪದ್ಧತಿಯಿಂದ ಖಾದಿಯು ನಾಮಶೇಷವಾಯಿತೆಂದು ಅವರು ಮರಗುವರು. ವೀರ ವಾಮನರಾಯರಿಗೆ ಈ ಸಂಗತಿಯನ್ನು ಒಬ್ಬ ಮುದುಕಿಯು ಹೇಳಿ ಉದ್ಗರಿಸಿದ್ದೇನಂದರೆ:- "ಈಗ ಗಾಂಧಿ ಬಂದಿರುವನು; ಅದರಿಂದ ನಮ್ಮ ಕೈರಾಟಿಯು ಈಗ ನಮ್ಮ ಕೈಯೊಳಗೆ ಬಂದಿರುವದು. ಕಂಪನಿ ಸರಕಾರದ ಕಾರಕೀರ್ದಿಯ ಸಮಯದ ಕೈರಾಟಿಯ ಮೇಲೆ ಬಾಳೆ ಬೆಳೆದಂತೆ, ಈಗಲೂ ಬಾಳೆ ನಡೆದಿರುವದಾಗಿ ನೀವು ಹಳ್ಳಿಗರಿಗೆ ಮನಗಾಣಿಸಿರಿ, ಅಂದರೆ, ಹಳ್ಳಿಗರು ಸ್ವರಾಜ್ಯಪ್ರಾಪ್ತಿಗೆ ಮನಃಪೂರ್ವಕ ದುಡಿಯುವರು."

ಗ್ರಾಮಗಳಲ್ಲಿ ಮುಕದಾರರಿಗೆ ಕ್ಷೇಮ ಕೇಳಲು ನಾವು ಹೋದರೆ, ಮೊಟ್ಟಮೊದಲು ಪ್ರಶ್ನೆ ಬರುವದ್ಯಾವದು? ಪ್ರಜೆಗಳಿಗೆ ನಾಲ್ಕು ಕಾಳು ಹೆಚ್ಚು ಹ್ಯಾಗೆ ಸಿಕ್ಕಾವು? ಹೊಟ್ಟೆಯ ಗೋಳಿನಿಂದ ಉಂಟಾಗುವ ಅನೀತಿಯು ಹೇಗೆ ಪರಿಹಾರವಾಗಬಲ್ಲದು? ನಿರುದ್ಯೋಗವಿದ್ದ ಸಮಯ ಅವರಿಗೆ ಉದ್ಯೋಗ ದೊರೆತು ಅದರಿಂದ ಅವರಿಗೆ ಹೇಗೆ [illegible]ವಾಗುವದು? ಇದನ್ನೆಲ್ಲ ನಾವು ಮುಕದಾರರಿಗೆ

(ಮುಂದೆ ೬ನೇ ಪಾನಿನ ಮೇಲೆ ಮುಂದರಿದಿದೆ.)

ಕಾನಡಾವೃತ್ತ.

ಮಿತಿ ಕ್ರೋಧನ ಸಂ। ಕಾರ್ತಿಕ ಶು॥ ೮ಮಿ ಸೋಮವಾರ

ತಚಿತ್ಪ್ರಾಂತಿ.

ಸ್ವರಾಜ್ಯ ಪಕ್ಷದ ಠರಾವುಗಳು.

ಈ ಮುಂಚೆ ಹೇಳಿದಂತೆ, ಅಖಿಲ ಭಾರತೀಯ ಸ್ವರಾಜ್ಯ ಪಕ್ಷದ ಕಾರ್ಯಕಾರಿ ಮಂಡಳದ ಸಭೆಯು ರವಿವಾರ ತಾ ೧ ನೇಗೆ ನಾಗಪುರದಲ್ಲಿ ಸೇರಿ ಸ್ವರಾಜ್ಯ ಪಕ್ಷದ ಸದ್ಯಸ್ಥಿತಿಯನ್ನು ವಿಚಾರಿಸಿ, ಕೈಕೊಂಡ ನಿರ್ಣಯಗಳು ಸರ್ವಮಾನ್ಯವಾಗದಿರವು. ಮಧ್ಯಪ್ರಾಂತದ ಕಾಯಿದೆ ಕೌನ್ಸಿಲಿನ ಅಧ್ಯಕ್ಷಪದವನ್ನು ಸ್ವರಾಜ್ಯ ಪಕ್ಷದ ಆಶ್ರಯದಿಂದ ಆಕ್ರಮಿಸಿ, ಸ್ವರಾಜ್ಯ ಪಕ್ಷದ ದ್ರೋಹವಮಾಡಿದ ಶ್ರೀ। ತಾಂಬೇಯವರ ವಿಶ್ವಾಸಘಾತದ ವರ್ತನದಿಂದ ಇಡೀ ಭರತಖಂಡದಲ್ಲುಂಟಾದ ಕೋಲಾಹಲವು ಈ ನಿರ್ಣಯಗಳಿಂದ ಪ್ರಶಾಂತವಾಗುವದು. ಪಂಡಿತ ಮೋತಿಲಾಲ ನೆಹರು, ಡಾ। ಮುಂಜೆ ಪ್ರಭೃತಿ ಮುಂದಾಳುಗಳು ಐಕ್ಯಮತ್ಯದಿಂದ ಸ್ವರಾಜ್ಯ ಪಕ್ಷದ ಪ್ರತಿಷ್ಠೆಯನ್ನು ಪರಂಪರೆ ಗುಚಿತವಾಗಿ ಕಾಪಾಡಿಕೊಂಡ ಬಗ್ಗೆ ಪ್ರಜೆಗಳೆಲ್ಲರೂ ಅವರ ಉಪಕಾರವನ್ನು ಅಂತಃಕರಣಪೂರ್ವಕವಾಗಿ ಮನ್ನಿಸುವರು.

ಸ್ವರಾಜ್ಯ ಪಕ್ಷದ ಸಭೆಯು ಬುಧವಾರದರೆಗೆ ನಡೆಯಿತು. ಸಭೆಯಲ್ಲಿ ಸ್ವರಾಜ್ಯ ಪಕ್ಷದ ಲೋಕನಾಯಕರ ನಡತೆಯ ಚರ್ಚೆಯು ನಿರ್ದಾಕ್ಷಿಣ್ಯದಿಂದ ನಡೆಯಿತು. ಬೆರಿಸ್ಟರ ಅಭ್ಯಂಕರ ಹಾಗು ಡಾ। ಮುಂಜೇಯವರೊಳಗಿನ ವಾದ-ವಿವಾದವು ಅನೇಕರಿಗೆ ಅನಿಷ್ಟವೆನಿಸಿದರೂ, ಈ ಚರ್ಚೆಯನ್ನು ಇಬ್ಬರೂ ಸ್ವರಾಜ್ಯ ಪಕ್ಷದ ಪ್ರತಿಷ್ಠೆಯ ದೃಷ್ಟಿಯಿಂದಲೇ ವಿಚಾರಿಸಿದ್ದರಿಂದ, ಕೊನೆಗೆ ತಕ್ಕ ನಿರ್ಣಯಗಳ ನಿರ್ಮಾಣವಾಗಲು ಬಲು ಅನುಕೂಲವಾಯಿತು. ಮೊಟ್ಟಮೊದಲು, ಸಭೆಯವರು ಸದ್ಯಸ್ಥಿತಿಯನ್ನು ಸಮಾಲೋಚಿಸಿ, ಸ್ವರಾಜ್ಯ ಪಕ್ಷದ ಧೋರಣವನ್ನು ತಿದ್ದುಪಡಿ ಮಾಡುವ ಅವಶ್ಯಕತೆಯಿಲ್ಲವೆಂದು ನಮೂದಿಸಿದರು. ಸ್ವರಾಜ್ಯ ಪಕ್ಷದವರು ಪ್ರಾಂತಿಕ ಕಮೀಟಿಗಳ ಅನುಮತಿಯಿಂದ ದಿವಾಣಪದಗಳನ್ನು ಸ್ವೀಕರಿಸಬಹುದೆಂಬ ವರ್ಹಾಡ ಪ್ರಾಂತಿಕ ಸ್ವರಾಜ್ಯ ಮಂಡಳದ ಠರಾವನ್ನು ಅಖಿಲ ಭಾರತೀಯ ಸ್ವರಾಜ್ಯ ಪಕ್ಷವು ಅಲ್ಲಗಳೆದು, ಈ ತಿದ್ದುಪಡಿಯನ್ನು ಕೈಕೊಳ್ಳುವದು ಕಾರ್ಯಕ್ರಮದ ತತ್ವಗಳಿಗೆ ವಿರೋಧವಾದದ್ದೆಂದು ಅಭಿಪ್ರಾಯಪಟ್ಟರು. ಸ್ವರಾಜ್ಯ ಪಕ್ಷದ ನಿಯಮಗಳಂತೆ ಪ್ರಾಂತಿಕ ಸರಕಾರಗಳಲ್ಲಿ ಸೇರುವದು, ದಿವಾಣಪದವನ್ನು ಸ್ವೀಕರಿಸುವದು, ಯಾವದೇ ಪ್ರಕಾರದ ಸರಕಾರಿ ನೌಕರಿಯನ್ನು ಅಂಗೀಕರಿಸುವದು ಪ್ರತಿಬಂಧಿಸಲ್ಪಟ್ಟದೆ ಆದರೆ, ಕಾಯಿದೆ ಕೌನ್ಸಿಲುಗಳ ಅಧ್ಯಕ್ಷ-ಉಪಾಧ್ಯಕ್ಷಸ್ಥಾನಗಳನ್ನು ಅಂಗೀಕರಿಸಲಿಕ್ಕೂ ಸರಕಾರಿ ಚೌಕಶಿ ಮಂಡಳಗಳ ಸದಸ್ಯತ್ವವನ್ನು ಪಕ್ಷದ ಅನುಮತಿಯಿಂದ ಪಡೆಯಲಿಕ್ಕೂ ಸ್ವರಾಜ್ಯ ಪಕ್ಷದವರಿಗೆ ಅಡ್ಡಿಯೇನಿಲ್ಲ. ಈ ಠರಾವಿನಿಂದ ಸ್ವರಾಜ್ಯ ಪಕ್ಷದ ಕಾರ್ಯಧೋರಣದ ವಿಷಯ ದೇಶದಲ್ಲುಂಟಾದ ಸಂದೇಹಸ್ಥಿತಿಯು ದೂರವಾಗುವದು.

ಶ್ರೀ। ತಾಂಬೇಯವರ ವಿಷ ... ಕಮೀಟಿಯವರು ಮಾಡಿದ ಠರಾವು ಮನನೀಯವು. ಪಕ್ಷದ ಶಿಸ್ತು ಭಂಗವಾಗಿದೆ. ಸ್ವರಾಜ್ಯ ಪಕ್ಷದವರು ಅಧ್ಯಕ್ಷಪದವನ್ನು ಅವರಿಗರ್ಪಿಸಿ, ಅವರ ಮೇಲಿಟ್ಟ ವಿಶ್ವಾಸವನ್ನು ಅವರು ಭಂಗಪಡಿಸಿರುವರು ಇದಕ್ಕೂ ಹೆಚ್ಚು ಶ್ರೀ। ತಾಂಬೆ ಯವರ ವಿಷಯ ಕಮೀಟಿಯವರು ಕಠಿಣ ಶಿಕ್ಷೆ ವಿಧಿಸಿದೆ? ಶ್ರೀ। ತಾಂಬೇಯವರು ಸ್ವಪ್ರತಿಷ್ಠೆ ಪರಂದು, ತಮ್ಮ ಪ್ರತಿಜ್ಞಾಪತ್ರವನ್ನು ಪಾಲಿಸುವರು ಮನೋಧೈರ್ಯ ಕಳಕೊಂಡರು. ಸ್ವರಾಜ್ಯ ಪಕ್ಷವು ಅವರಿಗೆ ತಮ್ಮೊಳಗ ಸೇರಿಸಿಕೊಂಡಿತ್ತು ಅವರೆಲ್ಲರ ಆಲೋಚನೆಯಿಂದ ಸ್ವರಾಜ್ಯ ಪಕ್ಷದ ನಿಯಮಗಳು ಮಾಡಲ್ಪಟ್ಟದ್ದವು. ಅಂಥ ನಿಯಮಗಳನ್ನು ತಮ್ಮ ಪ್ರತಿಜ್ಞಾಲೇಖವನ್ನು ಒಮ್ಮೆಲೆ ದೂರ ಸಾರಿ, ರಾಜೀನಾಮೆಗಳು ಸರಕಾರಿ ಸುವರ್ಣ ಶೃಂಖಲೆಯನ್ನು ಸೇರಿಸಿಕೊಡಿದ್ದು ನಿಜವಾಗಿ ಶೋಚನೀಯವು. ಸ್ವರಾಜ್ಯ ಪಕ್ಷದ ಸಭಾಸದಸ್ಥಾನವನ್ನು ಸಹ ಅವರು ತ್ಯಜಿಸದೆ ಕಳ್ಳನಂತೆ, ಕಾಯಿದೆ ಕೌನ್ಸಿಲಿನ ಅಧ್ಯಕ್ಷಸ್ಥಾನದಿಂದ ಮಧ್ಯಪ್ರಾಂತ ಸರಕಾರದ ಅಂತಃಪುರದಲ್ಲಿ ಸುದ್ದಿ ಸುಳುವಿಲ್ಲದೆ ಸೇರಿಕೊಂಡಿದ್ದಾರೆ. ಈ ವಿಷಯ ವಿಚಾರಿಸಿದಾಗ, ಸರಕಾರಿ ಸೇವಾಸ್ವೀಕಾರವೇ ಸ್ವರಾಜ್ಯಪಕ್ಷದ ತ್ಯಾಗವೆಂದು ಜಾಹೀರುಪಡಿಸಿದ್ದೂ ಅಪೂರ್ವವೆಂದು ಯಾರು ಹೇಳರು! ಈ ಕುರಿತು ಬರೆಯುವಾಗ ನಾಗಪುರದ "ಮಹಾರಾಷ್ಟ್ರ" ಕಾರರು ಒಂದು ಉಪಮೆಯನ್ನಿತ್ತಿರುವರು. ಒಬ್ಬ ಹೆಂಗಸು ತನ್ನ ಗಂಡನನ್ನು ಬಿಟ್ಟು, ಬೇರೊಬ್ಬ ವಿಲಾಸಿಗೆ ಮದುವೆಯಾದಳು. ಮೊದಲಿನ ಗಂಡನನ್ನು ಫಟಸ್ಫೋಟ ಮಾಡಿ ಯಾಕೆ ತ್ಯಜಿಸಲಿಲ್ಲೆಂದು ಆ ಸ್ತ್ರೀಗೆ ಒಬ್ಬ ಅಧಿಕಪ್ರಸಂಗಿಯು ಪ್ರಶ್ನಿಸಲು, ಎರಡನೇ ಮದುವೆಯೇ ಮೊದಲಿನ ಗಂಡನ ತ್ಯಾಗವೆಂದು ಅವಳು ಸಂಬೋಧಿಸಿದಳಂತೆ! ಶ್ರೀ। ತಾಂಬೇಯವರು ಈ ಹೆಂಗಸಿನ ಪಂಗ್ತಿಯಲ್ಲಿ ಕೂತುಕೊಂಡಿದ್ದನ್ನು ನೋಡಿ, ಸಭ್ಯರೆಲ್ಲರೂ ಮರುಗುವರು.

ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಸ್ವರಾಜ್ಯ ಪಕ್ಷದವರು ಕೈಕೊಂಡ ಮೌನವ್ರತಕ್ಕೆ ಕಾರ್ಯಕಾರಿ ಮಂಡಳವು ಮನ್ನಣೆಯನ್ನಿತ್ತು. ಮುಂಬಯಿಯ ಸ್ವರಾಜ್ಯ ಪಕ್ಷದವರು ತಮ್ಮ ನಿರ್ಧಾರವನ್ನು ಐಕ್ಯಮತ್ಯದಿಂದ ಪಾಲಿಸಿದ ಬಗ್ಗೆ ಅಭಿನಂದನ ಮಾಡಲ್ಪಟ್ಟದೆ. ಕೊನೆಗೆ ಹಕೀಮ ಅಜಮಲ್‌ಖಾನರವರು ಸ್ವರಾಜ್ಯ ಪಕ್ಷದ ಕಾರ್ಯಕಾರಿ ಮಂಡಳದೊಳಗಿಂದ ಅಸ್ವಸ್ಥತೆಯ ಮೂಲಕ ರಾಜಿನಾಮೆಯನ್ನಿತ್ತ ಬಗ್ಗೆ ವ್ಯಸನ ಪ್ರದರ್ಶಿಸಿದೆ.

ಸ್ವರಾಜ್ಯ ಪಕ್ಷದ ಠರಾವುಗಳಿವು. ಶ್ರೀ। ತಾಂಬೇಯವರ ಸ್ವಾರ್ಥಪರಾಯಣ ಅವಶ್ಯಕ್ಯದಿಂದ ಬಂದ ಸ್ಥಿತಿಯಲ್ಲಿ ಕೈಕೊಂಡ ನಿರ್ಧಾರಗಳಿವು. ಸ್ವರಾಜ್ಯ ಪಕ್ಷವು ಇಬ್ಭಾಗವಾಗಿ ಎಲ್ಲಿ ದೇಶದ ಅಹಿತವಾಗುವದೇನೋ ಎಂದು ಅನೇಕರು ಭೀತಿಗೊಂಡಿದ್ದರು. ಶ್ರೀ। ಜಯಕರ-ಕೇಳಕರರವರ ನಿಷ್ಕಾರಣ ವಿಚಾರಪ್ರದರ್ಶನದಿಂದ ಅನೇಕ ತಾಂಬೇಯವರು ಸ್ವರಾಜ್ಯ ಪಕ್ಷದಲ್ಲಿ ತತ್ಪರರಾಗಿರುವರೆಂದು ಅನೇಕರು ತಿಳಕೊಂಡಿದ್ದರು. ನಾಗಪುರದೊಳಗಿನ ಸ್ವರಾಜ ಪಕ್ಷದ ಸಭೆಯಲ್ಲಿ ಮತಭೇದವು, ಪಕ್ಷಭೇದದಲ್ಲಿ ರೂಪಾಂತರ ಹೊಂದುವದೆಂದು ಅನೇಕರು ಗ್ರಹಿಸಿದ್ದರು, ವಾತಾವರಣವೂ ಅಷ್ಟೇ ತಪ್ತವಾಗಿತ್ತು; ವಾದವಾದರೂ ಅಷ್ಟೇ ತೀವ್ರವಾಗಿ ನಡೆಯಿತು. ಆದರೆ, ಎಲ್ಲರೂ ದೇಶದೊಳಗಿನ ಸ್ಥಿತಿಯ ವಿಚಾರದಿಂದ, ಆಳರಸರ ರಾಜ್ಯಧೋರಣದ ಆಲೋಚನೆಯಿಂದ ಸ್ವರಾಜ್ಯ ಪಕ್ಷದ ಪ್ರತಿಷ್ಠೆಯನ್ನು ಪಾಲಿಸಲು ಈಗಿನ ಧೋರಣವೇ ಸಮಯೋಚಿತವೆಂದು ಠರಾಯಿಸಿ, ಅದನ್ನೇ ಎಲ್ಲರೂ ನಿಷ್ಠೆಯಿಂದ ಪಾಲಿಸಲು ಬದ್ಧರಿರುವರೆಂದು ಕಾರ್ಯಕಾರಿ ಮಂಡಳವು ಜಾಹೀರುಪಡಿಸಿದೆ. ಈ ಪ್ರಕಟಣೆಯಿಂದ ಶ್ರೀ। ತಾಂಬೇಯವರ ಅಪಕೃತ್ಯದಿಂದ ಸ್ವರಾಜ್ಯ ಪಕ್ಷದ ಪ್ರತ್ಯಕ್ಷ ಶಕ್ತಿಗೆ ಬಾಧೆ ತಟ್ಟದೆಂದು ಎಲ್ಲರೂ ನಿಶ್ಚಯಪೂರ್ವಕವಾಗಿ ತಿಳಿಯಲಿ. ಸ್ವರಾಜ್ಯ ಪಕ್ಷವು ತತ್ವಗಳನ್ನು ತ್ಯಜಿಸಿರುವದಿಲ್ಲ, ಅವನ್ನೇ ಕಾಪಾಡಲು ಈಗಲೂ ಬದ್ಧಕಂಕಣವಿದೆ; ಅವನ್ನು ತ್ಯಜಿಸುವ ಆಲೋಚನೆಯು ಸಹ ಅವರಿಗೆ ಹೊಳೆದಿಲ್ಲ. ಸ್ವರಾಜ್ಯ ಪಕ್ಷದ ಸ್ವಪಕ್ಷ ನಿಷ್ಠೆಯು ಸ್ಥಿರವಾಗಿರುವದು. ಪಂಡಿತ ಮೋತಿಲಾಲ ನೆಹರೂರವರು ಕಾರ್ಯಕಾರಿ ಸಭೆಯನ್ನು ತತ್ಪರತೆಯಿಂದ ಸೇರಿಸಿ ಸ್ವರಾಜ್ಯ ಪಕ್ಷದ ತತ್ವನಿಷ್ಠೆಯನ್ನು ಬಿತ್ತಿ ಹೇಳಿ, ದೇಶದಲ್ಲುಂಟಾದ ಸಂಶಯಕಲ್ಲೋಲವನ್ನು ಶಾಂತಪಡಿಸಿರುವರು. ಇದಕ್ಕಾಗಿ ಅಖಿಲ ದೇಶಬಾಂಧವರು ಪಂಡಿತ ಮೋತಿಲಾಲರವರ ಉಪಕಾರ ಮನ್ನಿಸಿ, ಅವರು ಕೈಕೊಂಡ ಕಾರ್ಯಕ್ಕೆ ಬೆಂಬಲವನ್ನೀಯಬೇಕೆಂದು ನಮ್ಮ ಬಿನ್ನಹವಿದೆ.

ಸ್ಫುಟ ಸೂಚನೆಗಳು.

೧. ನಮ್ಮ ಕರ್ತವ್ಯಗಳು ಇನ್ನೂ ತೀರಲಿಲ್ಲ. ಹಿಂದೂ—ಮುಸಲ್ಮಾನರೊಳಗಿನ ಐಕ್ಯಭಂಗವು ಅಲ್ಲಲ್ಲಿ ಆಗಿಂದಾಗ ಕಲೆದೋರುತ್ತದೆ. ಧರ್ಮದ ನೆವ ಮಾಡಿ ಮುಹಮ್ಮದೀಯ ಬಾಂಧವರು ಹಿಂದೂ ಬಾಂಧವರನ್ನು ನಿಷ್ಕಾರಣವಾಗಿ ದಣಿಸುವ ನೋಟವು ನಿಜವಾಗಿ ಬೇಸರ ಹುಟ್ಟಿಸುತ್ತದೆ. ಕಾರ್ತಿಕ ೧೧ ಶಿಯ ಪುಣ್ಯ ರಥೋತ್ಸವದ ಸಮಯ ಸೊಲ್ಲಾಪುರದಲ್ಲಿ ಮುಹಮ್ಮದೀಯರು ಮಾಡಿದ ಹಾವಳಿಯನ್ನು ಹಿಂದೂಗಳೂ, ವಿಶೇಷವಾಗಿ ಮುಹಮ್ಮದೀಯರೂ ವಿಚಾರಿಸತಕ್ಕದ್ದು. ಇಂಥ ದುರಾಚಾರಗಳಿಂದ ನಮಗೆಂದಾದರೂ ಕ್ಷೇಮವಾದೀತೇನೆಂದು ಎಲ್ಲರೂ ವಿಚಾರಿಸತಕ್ಕಂಥ ವಿಷಯ. ಕಾರ್ತಿಕ ೧೧ ಶಿಯ ಸಮಯ ಸೊಲ್ಲಾಪುರದೊಳಗಿನ ಬುಧರಾಯ ಮಠದೊಳಗಿನ ಶ್ರೀ ವಿಠೋಬ ಮೂರ್ತಿಯ ರಥ ಯಾತ್ರೆಯು ಹೊರಡುತ್ತದೆ. ರಥವು ಚೌಪಾಡಾ, ಪಂಜಾಬ ತಾಲೀಮು, ಮಲ್ಲಿಕಾರ್ಜುನ ದೇವಾಲಯಗಳ ವರೆಗೆ ಹೋಗಿ, ಅಲ್ಲಿಂದ ತಿರುಗುತ್ತದೆ. ಎಂದಿನಂತೆ, ರಥೋತ್ಸವವು ಬುಧರಾಯ ಮಠದೊಳಗಿಂದ ಹೊರಟಿತು. ಪರಿಸ್ಥಿತಿಯು ಸರಿ ಸುರಕ್ಷಿತವಲ್ಲೆಂದು ತೋರಿದ್ದರಿಂದ, ಆ ದಿನ ಸಿಟಿ ಮೆಜಿಸ್ಟ್ರೇಟರೂ, ಪೋಲೀಸ ಸುಪರಿಂಟೆಂಡೆಂಟರೂ, ರಥೋತ್ಸವದ ಸಮಯ ಶಾಂತತಾಪಾಲನಕ್ಕಾಗಿ ಹಾಜರಿದ್ದರು. ಪಂಜಾಬ ತಾಲೀಮಿನ ಹತ್ತಿರವೇ ಸಮೀಪಕ್ಕೆ ಮುಹಮ್ಮದೀಯರೊಂದು ಮಸೀದೆಯನ್ನು ಕಟ್ಟಿರುವರು. ಮೆರವಣಿಗೆಯು ವಾದ್ಯಘೋಷದಿಂದ ಸಾಗಿಬರುತ್ತಿತ್ತು. ಕಾರ್ತಿಕ ೧೧ ಶಿಯಂಥ ಪುಣ್ಯಕಾಲದಲ್ಲಿ ಶ್ರೀ ವಿಠೋಬ ಮೂರ್ತಿಯೊಡನೆ ದೊಡ್ಡ ದೊಡ್ಡ ಸನಾತನಿಗಳು ಭಕ್ತಿಯಿಂದ ಮುಂದಾಗಿ ನಡೆದಿದ್ದರು. ಮೆರವಣಿಗೆಯು ಪಂಜಾಬ ತಾಲೀಮು-ಮಸೀದೆಯಿಂದ ಒಂದು ಫರ್ಲಾಂಗು ದೂರಕ್ಕೆ ಬಂದು ಮುಟ್ಟಿತು. ಆಗ ಅಪರಾಹ್ನ ೧॥ ಘಂಟೆಯಾಗಿತ್ತು. ಆ ದಿನ ಬುಧವಾರ. ಮುಹಮ್ಮದೀಯರು ಮಸೀದೆಯಲ್ಲಿ ನಮಾಜ ಮಾಡುತ್ತಾರೆಂದು ಹೇಳಲಾಯಿತು. ವಾದ್ಯಘೋಷದಿಂದ ಅವರಿಗೆ ತೊಂದರೆಯಾಗಬಾರದೆಂದು ಮೆರವಣಿಗೆಯು ೧॥ ತಾಸಿನ ವರೆಗೆ ಒಂದು ಫರ್ಲಾಂಗು ದೂರವೇ ತಡೆದು ನಿಂತಿತು. ಪೋಲೀಸರು ೩ ಘಂಟೆಯ ಸಮಯ ಚೌಕಶಿ ಮಾಡಿ ಮೆರವಣಿಗೆಯನ್ನು ಮುಂದರಿಸಲು ಮುಸಲ್ಮಾನರ ಅಡ್ಡಿಯಿಲ್ಲವಾಗಿ ಸುದ್ದಿ ತಂದರು. ಮೆರವಣಿಗೆಯು ಮುಂದರಿಯಿತು; ಮಸೀದೆಯ ಹತ್ತಿರ ಬಂದು ಮುಟ್ಟಿತು. ಅಷ್ಟರಲ್ಲಿ ಮಸೀದೆಯೊಳಗಿಂದ, ಪಂಜಾಬ ತಾಲೀಮದೊಳಗಿಂದ, ನೆರೆಹೊರೆಯ ಬೀದಿಯೊಳಗಿಂದ ೪೦೦-೫೦೦ ಮಂದಿ ಮುಸಲ್ಮಾನರು ದೊಣ್ಣೆ-ಚೂರಿ-ಸೋಡಾ ವಾಟರು ಬಾಟ್ಲಿಗಳನ್ನು ತೆಗೆದುಕೊಂಡು ಮೆರವಣಿಗೆಯೊಳಗಿನ ಹಿಂದೂಗಳ ಮೇಲೆ ಸಾಗಿಬಂದರು. ಕಲ್ಲುಗಳ ಮಳೆ ಬೀಳುತ್ತಿತ್ತು, ಕೈಯಲ್ಲಿ ಸಿಕ್ಕವರಿಗೆ ಚೂರಿಯಿಂದ ಇರಿಯುವದು, ದೊಣ್ಣೆಯಿಂದ ಹೊಡೆಯುವದು, ಬಾಟ್ಲಿಗಳನ್ನು ಹೊಡೆಯುವದು, ಇತ್ಯಾದಿ ಅನಪೇಕ್ಷಿತ ಅತ್ಯಾಚಾರಗಳು ನಡೆದವು. ಶೇಟ ಲಕ್ಷ್ಮೀನಾರಾಯಣರೆಂಬ ದೊಡ್ಡ ವ್ಯಾಪಾರಿ ವರ್ತಕರು ಮೆರವಣಿಗೆಯ ಅಗ್ರಭಾಗದಲ್ಲಿದ್ದರು. ಅಧಮರೊಬ್ಬರು ಅವರ ಗಲ್ಲದ ಮೇಲೆ ಚೂರಿಯನ್ನು ಇರಿದರು. ಅನೇಕರಿಗೆ ದೊಣ್ಣೆಯಿಂದ ಹೊಡೆದರು. ಪೋಲೀಸರು ಕೊನೆಯ ಅಸ್ತ್ರವಾದ ಬಂದೂಕಿಯನ್ನು ತೆಗೆದು ಗುಂಡು ಹಾರಿಸಿ, ಇಬ್ಬ ಮುಸಲ್ಮಾನರನ್ನು ಅಲ್ಲಿಂದಲ್ಲೇ ಯಮಸದನಕ್ಕಟ್ಟಿಬಿಟ್ಟರು. ಕೂಡಲೇ "ಯಃ ಪಲಾಯತಿ ಸ ಜೀವತಿ" ಎಂಬ ಗಾದೆ ಮಾತಿನಂತೆ, ಮುಸಲ್ಮಾನರು ದಿಕ್ಕುಪಾಲಾಗಿ ಓಡಿ ಹೋದರು.

---

೨. ಮೆರವಣಿಗೆಯೊಳಗಿನ ದೊಂಬಿಯು ಪೋಲೀಸರ ಗುಂಡಿನಿಂದ ಅಷ್ಟಕ್ಕೆ ಶಾಂತವಾದರೂ, ಮುಸಲ್ಮಾನರ ಮುಂದಿನ ವರ್ತನವು ಪಶುತುಲ್ಯವಿದೆ. ಹಿಂದೂ ಕೇರಿಗಳಲ್ಲಿ ತಂಡುಗಟ್ಟಿ ಹೊಕ್ಕು ಸಿಕ್ಕಸಿಕ್ಕವರಿಗೆ ಹೊಡೆದರು. ಚಿಕ್ಕ ಬಾಲಕರ ಮೇಲೆ ಹರಿಯುವ ವೀರ ಮುಸಲ್ಮಾನರು 'ತಮ್ಮ ಶೌರ್ಯವನ್ನು ಪ್ರದರ್ಶಿಸಿದರು. ಸುಲಿಗೆಯನ್ನೂ ಮಾಡಿದರು. ಸ್ತ್ರೀಯರಿಗೂ ಪೀಡಿಸಿದರು. ಏಕಾದಶಿಯ ಮೆರವಣಿಗೆಯ ಉತ್ಸವಕ್ಕಾಗಿ ಗಂಡಸರು ಹೊರಹೋಗಿದ್ದರು. ಮುಸಲ್ಮಾನರು ಮನೆಹೊಕ್ಕು ಹೆಂಗಸರಿಗೆ ಹೊಡೆದರು, ಅವರ ಜಿನ್ನಸನ್ನೆಲ್ಲ ಅಪಹರಿಸಿದರು. ಬಿದ್ಯೂಟಿಗರು ದಾರಿಯಲ್ಲಿ ಸಿಕ್ಕಿದರೆ, ಅವರನ್ನು ಹಿಡಿದು ಹೊಡೆಯುವರು. ಚಿಕಿತ್ಸೆಗೆ ಔಷಧೋಪಚಾರಕ್ಕಾಗಿ ಯಾರಾದರೂ ಒಯ್ಯುತ್ತಿದ್ದರೆ, ಅವರಿಗೂ ಹೊಡೆಯುವರು. ಇಂಥ ರಾಕ್ಷಸೀ ಪ್ರಕಾರಗಳು ಸಾಯಂಕಾಲ ೬-೭ ಘಂಟೆಗಳ ವರೆಗೆ ನಡೆದವು

---

೩. ಈ ದೊಂಬಿಯು ಧರ್ಮದ ಮರುಳಿನಿಂದ ಥಟ್ಟನೆ ಉಂಟಾದದ್ದಲ್ಲ. ಆ ದಿನಗಳಿಂದ ಈ ದಂಗೆಯ ತಯಾರಿ ನಡೆದಿತ್ತಾಗಿ 'ಕೇಸರೀ' ಪತ್ರಿಕೆಯ ಪ್ರತಿನಿಧಿಗಳು ಪ್ರಕಟಿಸುತ್ತಾರೆ. ಕಾನಪುರದ ಯಾರೋ ಒಬ್ಬ ಮೌಲವಿ ಸಾಹೇಬರು ಊರಲ್ಲಿ ಭಾಷಣ ಮಾಡಿ ಇಂಥ ದೊಂಬಿಯನ್ನೆಬ್ಬಿಸಲು ಉತ್ತೇಜಿಸುತ್ತಿದ್ದರಂತೆ. ದೊಣ್ಣೆಗಳೂ, ಚೂರಿಗಳೂ, ಸೋಡಾ ವಾಟರಿನ ನೂರಾರು ಬಾಟ್ಲಿಗಳೂ, ಇವೆಲ್ಲ ಸಂಗ್ರಹ ನೋಡಿದರೆ, ಮುಸಲ್ಮಾನರು ಮೊದಲಿನಿಂದಲೇ ಈ ವಿಷಯ ತಯಾರಿ ನಡಿಸಿದ್ದರಾಗಿ ಹೇಳಲು ಆಧಾರವಿದೆ. ಅದರೊಳಗೂ ಏಕಾದಶಿಯ ಉತ್ಸವವು ಬುಧವಾರಕ್ಕಿತ್ತು. ಅದೇನು ಮುಸಲ್ಮಾನರ ಪ್ರಾರ್ಥನಾ ದಿನವಲ್ಲ. ಪ್ರಾರ್ಥನೆಯ ದಿನವಾದರೂ, ಪ್ರಾರ್ಥನೆಗಾಗಿ ಇಡೀ ಹಿಂದೂ ಸಮಾಜವು ಶ್ರೀ ವಿಠೋಬ ಮೂರ್ತಿಯೊಡನೆ ೧॥ ತಾಸಿನ ವರೆಗೆ ೧ ಫರ್ಲಾಂಗು ದೂರ ನಿಂತುಕೊಳ್ಳಲಿಲ್ಲವೇ? ಪೋಲೀಸರು ಮುಸಲ್ಮಾನರ ಅನುಮತಿ ಪಡೆದು ಮೆರವಣಿಗೆಯನ್ನು ಮುಂದರಿಸಲು ಅಡ್ಡಿಯಿಲ್ಲವಾಗಿ ಹೇಳಿದ ಬಳಿಕ, ಮೆರವಣಿಗೆಯು ಮುಂದಾಗಿದ್ದಿರುತ್ತ, ಮುಸಲ್ಮಾನರಿಗೆ ಧರ್ಮದ ನೆಪ ಹೇಳಿ ಹಾರಾಗಲು ಇಂಬಿರುವದಿಲ್ಲ. ಈಗ ಸೊಲ್ಲಾಪುರದಲ್ಲಿ ಕ್ರಿ. ಪ್ರೊ. ಕೋಡ ಕಲಂ ೧೪೪ರನ್ವಯ, ಡಿಸ್ಟ್ರಿಕ್ಟ ಪೋಲೀಸ ಆಕ್ಟ ಕಲಂ ೪೦ ರನ್ವಯ ಯಾವದೇ ಧಾರ್ಮಿಕ ಮೆರವಣಿಗೆಯನ್ನು ಹೊರಡಿಸಬಾರದೆಂದು ಪ್ರತಿಬಂಧಿಸಿರುವರು. ಅನೇಕ ಸನಾತನಿಗಳು ತಮಗೆ ಘಾಯವಾದ ಬಗ್ಗೆ, ತಮ್ಮನ್ನು ಸುಲಿದ ಬಗ್ಗೆ, ಹೆಂಡರು-ಮಕ್ಕಳಿಗೆ ದಣಿಸಿದ ಬಗ್ಗೆ ಅನೇಕ ಫಿರ್ಯಾದುಗಳನ್ನು ಮೆಜಿಸ್ಟ್ರೇಟ ಕೋರ್ಟಿನಲ್ಲಿ ದಾಖಲುಮಾಡಿರುವರು. ಅಧಿಕಾರಿಗಳು ಈ ವಿಷಯ ಇನ್ನೂ ಸರಕಾರಿ ತರ್ಫೆನಿಂದ ಖಟ್ಲೆ ಮಾಡಿದ್ದು ಕಂಡುಬರಲಿಲ್ಲ.

---

೪. ಈ ಪ್ರಕರಣವು ಇನ್ನೂ ಕೋರ್ಟಿಯಲ್ಲಿದೆ. ಈ ಸಮಯ ಈ ವಿಷಯ ವಿಸ್ತಾರಪೂರ್ವಕ ಬರೆಯುವದು ಉಚಿತವಲ್ಲ. ಆದರೂ, ಹಿಂದಿನ ವಿಚಾರಗಳನ್ನು ನಮೂದಿಸುವದು ನಮ್ಮ ಕರ್ತವ್ಯವು. ಏಕಾದಶಿಯ ರಥೋತ್ಸವವನ್ನು ಮಸೀದೆಯೊಳಗಿನ ಮುಸಲ್ಮಾನರ ಪ್ರಾರ್ಥನೆಗೆ ಯಾವದೇ ಪ್ರಕಾರದ ಆತಂಕವಾಗಬಾರದೆಂದು ಸನಾತನಿಗಳು ತಡಿಸಿನಿಂತಿದ್ದು ಉಕ್ತ ಕೃತಿಯು ಸನಾತನ ಧರ್ಮದ ಸಾಕ್ಷಿಯಾಗಿದೆ. ಯಾವದೇ ಧರ್ಮಾಚರಣೆಯಲ್ಲಿ, ಯಾವದೇ ಕಾರಣದಿಂದ ವಿಘ್ನ ಮಾಡುವದು ಸನಾತನ ಧರ್ಮಕ್ಕೆ ಮಾನ್ಯವಿಲ್ಲ. ಶ್ರೀ ವಿಠೋಬ ದೇವರಿಗೆ ಸಾಕ್ಷಿಯಾಗಿ ಸೊಲ್ಲಾಪುರದೊಳಗಿನ ಸನಾತನಿಗಳು ತಮ್ಮ ಧರ್ಮನಿಷ್ಠೆಯನ್ನು ಪ್ರಕಟಿಸಿದ್ದಕ್ಕಾಗಿ ನಾವು ಆನಂದಬಡುವೆವು. ಇದೇ ವೃತ್ತಿಯನ್ನು ನಮ್ಮ ಮುಹಮ್ಮದೀಯ ಬಾಂಧವರೂ ಕಲಿತಿದ್ದರೆ, ಅನರ್ಥಪರಂಪರೆಯು ಹುಡಗಿಬಡುತ್ತಿದ್ದಿಲ್ಲ. ಮುಸಲ್ಮಾನರ ಅತ್ಯಾಚಾರಗಳು ಗರ್ಹಣೀಯವೆಂದು ಹೇಳಬೇಕಾಗಿಲ್ಲ. ಅವುಗಳ ವಿವರದ ಮೇಲಿಂದಲೇ, ಅವನ್ನು ಆಚರಿಸುವಾಗ ಮುಸಲ್ಮಾನರು ಕೈಕೊಂಡ ಹೇಡಿ ವರ್ತನದ ಮೇಲಿಂದಲೇ ಅಧಮತನವು ಸಿದ್ಧವಾಗುತ್ತದೆ. ವಿಚಾರಶೀಲ, ಇಸ್ಲಾಮ ಧರ್ಮತತ್ವವನ್ನು ತಿಳಕೊಂಡ ಮುಹಮ್ಮದೀಯನ್ಯಾರೂ ಈ ದುರಾಚಾರಗಳನ್ನು ಎಂದೂ ನಿಷೇಧಿಸತಾರನು. ಧರ್ಮಪ್ರತಿಷ್ಠೆಯನ್ನು ಕಾಪಾಡಲಿಚ್ಛಿಸುವ ಮುಹಮ್ಮದೀಯರು ಈ ದುರಾಚಾರಗಳನ್ನು ನಿಷೇಧಿಸಲೇಬೇಕು; ನಿಷೇಧಿಸುವರೆಂದೂ ನಮ್ಮ ನಂಬಿಗೆಯಿದೆ. ಸರಕಾರಿ ಅಧಿಕಾರಿಗಳ ಹಿಡಿ-ಬಿಡು ಧೋರಣವನ್ನೂ ನಾವು ನಿಷೇಧಿಸುವೆವು. ಮುಸಲ್ಮಾನರ ವಿಷಯ ಬಂದೊಡನೆ, ನಮ್ಮ ಆಳರಸರಿಗೆ ಎಲ್ಲಿಯ ಸ್ನೇಹಬುದ್ಧಿ ಹುಟ್ಟುತ್ತದೋ ಏನೋ! ಅವರಿಗೆ ಅಪ್ಪಿಕೊಂಡು ಅಕ್ಕರತೆಯಿಂದ ಮುದ್ದಾಡುವ ಚಟವು ಅವರಿಗೆ ಹತ್ತಿಕ್ಕಿದೆ; ಇದು ಮುಸಲ್ಮಾನರಿಗೂ ಕ್ಷೇಮಕರವಲ್ಲ. ಸರಕಾರದ ಪ್ರತಿಷ್ಠೆಯು ಇಂಥ ವರ್ತನದಿಂದ ತಗ್ಗುತ್ತದೆಂದು ನಾವು ನಮೂದಿಸುವದು ಅವಶ್ಯವಿಲ್ಲ. ಸೊಲ್ಲಾಪುರದಲ್ಲಿ ಈಗಲೂ ಅಪರಾಧಿಗಳನ್ನು ಪರೆಹಿಡಿದು, ಅಪರಾಧದ ಚೌಕಶಿ ನಡಿಸಲು ಇನ್ನೂ ಉಪಕ್ರಮವಾಗದ ಬಳಿಕ, ಸರಕಾರದ ಪ್ರತಿಷ್ಠೆಯು ಪ್ರಜೆಗಳಲ್ಲಿ ಉಳಿಯಬಲ್ಲದೇನು? ಕಾಯಿದೆಯ ಕಲಮುಗಳಿಂದ ಮೆರವಣಿಗೆಯನ್ನು ಪ್ರತಿಬಂಧಿಸುವದು ಸುಲಭಸಾಧ್ಯ ಮಾತು. ಆದರೆ, ಪುಂಡರ ಪುಂಡಾಟಿಕೆಯಿಂದ ಮೆರವಣಿಗೆಗೆ ಪ್ರತಿಬಂಧವಾಗುತ್ತಿದ್ದರೆ, ಪುಂಡರ ಸಾಧ್ಯವಾದರೂ ಮೆರವಣಿಗೆಯನ್ನೇ ತಡಿಸುವದಿದ್ದರೆ, ಕಾಯಿದೆಪಾಲನ ಮಾಡಿ ಶಾಂತತೆಯಿಂದ ಮೆರವಣಿಗೆಯನ್ನು ಸಾಗಿಸಲಿಚ್ಛಿಸುವ ಬ್ರಿಟಿಶ ನಾಗರಿಕರ ಗತಿಯೇನು? ಇದರಿಂದ ಬ್ರಿಟಿಶ ನಾಗರಿಕರ ಹಕ್ಕುಗಳನ್ನು ಬ್ರಿಟಿಶ ರಾಜ್ಯದಲ್ಲಿ ಅಪಹರಿಸಲು ಪುಂಡರ ಪುಂಡಾಟಿಕೆಯು ರಾಮಬಾಣ ಉಪಾಯವೆಂಬ ತಿಳುವಳಿಕೆಯು ಪ್ರಜೆಗಳಲ್ಲಿ ರೂಢವಾಗುವದು. ಈ ಕುರಿತು ಸರಕಾರಿ ಅಧಿಕಾರಿಗಳು ಸೂಕ್ಷ್ಮ ಬುದ್ಧಿಯಿಂದ ಆಲೋಚಿಸಬೇಕು. ಬಾಹುಬಲಕ್ಕೆ, ಪುಂಡಾಟಿಕೆಗೆ ಕಾಯಿದೆ ಕಲಮುಗಳ ಬೆಂಬಲ ದೊರಕಹತ್ತಿದರೆ, ಮುಂದೆ ಅನರ್ಥಪರಂಪರೆಯು ರಾಷ್ಟ್ರಪುರುಷನ ಮೇಲೆ ಬಂದೊದಗದಿರುವದೇ!

೫ ಅಭಿಮಾನ ಬೇರೆ, ದುರಭಿಮಾನ ಬೇರೆ, ಅವು ಬೇರಾದರೆ, ಧರ್ಮಕ್ಕೆ ಸಂಬಂಧಪಟ್ಟದ್ದಿರಲಿ, ರಾಷ್ಟ್ರಕ್ಕೆ ಸಂಬಂಧಪಟ್ಟದ್ದಿರಲಿ, ಸಮಾಜಕ್ಕೆ ಸಂಬಂಧಪಟ್ಟದ್ದಿರಲಿ, ಪ್ರಾಂತಕ್ಕೆ ಸಂಬಂಧಪಟ್ಟದ್ದಿರಲಿ, ಅಥವಾ ಭಾಷೆಗೆ ಸಂಬಂಧಪಟ್ಟದ್ದಿರಲಿ ಅಭಿಮಾನವು ಸದ್ಗುಣವು, ದುರಭಿಮಾನವು ದುರ್ಗುಣವು. ಅಭಿಮಾನದಿಂದ ಕಲ್ಯಾಣವಾದರೆ, ದುರಭಿಮಾನದಿಂದ ಅಕಲ್ಯಾಣವಾಗುತ್ತದೆ ಕನ್ನಡಿಗರಿಗೆ ಕನ್ನಡದ ಅಭಿಮಾನವಿರುವದು ಸುಗುಣವು, ಅಭಿಮಾನ ಮಿತಿಮೀರಿ ದುರಭಿಮಾನದ ಭೂತಸಂಚಾರವಾದರೆ ಉದ್ಧಾರಕ ಸ್ವರೂಪವು ನಷ್ಟವಾಗಿ ವಿನಾಶಕ ವೇಷವು ಪ್ರಾಪ್ತವಾಗುವದು. ಇಷ್ಟು ಪ್ರಾರಂಭಿಕವನ್ನು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಜರುಗಿದ ಪ್ರಕಾರದ ಮೂಲಕ ನಾವು ಮಾಡಬೇಕಾಗಿದೆ. ಕರ್ನಾಟಕ ಕಾಲೇಜಿನಲ್ಲಿ ಈ ವರುಷ ವಿದ್ಯಾರ್ಥಿಗಳ ಸಮ್ಮೇಲನವು ಜರುಗಿತು. ಆ ಸಮಯ ವಿದ್ಯಾರ್ಥಿಗಳಿಗೆ ನಾಲ್ಕು ಸದುಪದೇಶದ ನುಡಿಗಳನ್ನು ಹೇಳುವದಕ್ಕಾಗಿ ಸಾಂಗಲಿಯ ವಿಲಿಂಗ್ಡನ್ ಕಾಲೇಜಿನ ಪ್ರಿನ್ಸಿಪಾಲ ಭಾಟೀಯವರು ನಿಮಂತ್ರಿಸಲ್ಪಟ್ಟಿದ್ದರು. ಪ್ರಿನ್ಸಿಪಾಲರು ನಿಮಂತ್ರಣೆಯನ್ನು ಸ್ವೀಕರಿಸಿ, ಧಾರವಾಡಕ್ಕೆ ಆಗಮಿಸಿದ್ದರು. ಅಷ್ಟರಲ್ಲಿ ಕೆಲ ಕನ್ನಡಿಗರಲ್ಲಿ ಕನ್ನಡದ ದುರಭಿಮಾನದ ಸಂಚಾರವಾಯಿತು. “ಸಮ್ಮೇಲನವು ಮುಂದೂಡಲ್ಪಟ್ಟಿದೆ, ತಾವು ಬರಬಾರದು,” ಎಂಬರ್ಥದ ತಂತಿಯು ಹೊರಡುವ ವಿಷಯವೇ ಅವರಿಗೆ ಹೋಯಿತಂತೆ. ಆ ಮುಂಚೆಯೇ ಶ್ರೀ|| ಭಾಟೀಯವರು ಧಾರವಾಡಕ್ಕಾಗಿ ಹೊರಟು ಬಂದಿದ್ದರು. ಅಲ್ಲಿ ಹೋಗಿ ನೋಡುತ್ತಾರೆ, ಸಮ್ಮೇಲನಕಾರ್ಯವು ನಡೆದಿದೆ, ಶ್ರೀ|| ಹಣ್ಮಂತಪ್ಪ ಕಂಬಳಿಯವರು ಉಪನ್ಯಾಸವನ್ನೀಯುತ್ತಿದ್ದರು. ಶ್ರೀ|| ಭಾಟೀಯವರು ಸಮ್ಮೇಲನದಲ್ಲಿ ಪ್ರವೇಶವಾದೊಡನೆ, ವಿದ್ಯಾರ್ಥಿಗಳು “ಹುಶ್, ಹುಶ್” ಧ್ವನಿ ತೆಗೆದು ಶ್ರೀ|| ಭಾಟೀಯವರ ಅಪಮಾನ ಮಾಡಿದರು. ಇದು ನಿಜವಾಗಿ ಶೋಚನೀಯವು. ಸಮ್ಮೇಲನದಲ್ಲಿ ಒದಗಿದ ಪ್ರಕಾರದ ಮೂಲಕ ಶ್ರೀ|| ಭಾಟೀಯವರಿಗೆ ಅಪಮಾನವಾಗಿರುವದೆಂದು ತಿಳಿಯುವದಕ್ಕಿಂತ, ಕನ್ನಡಿಗರಿಗೇ ಅಪಮಾನವಾಗಿರುವದೆಂದು ನಾವು ನಿಶ್ಚಯಪೂರ್ವಕ ತಿಳಿಯುವೆವು. ಕನ್ನಡದ ಅಭಿಮಾನ ಹಿಡಿದು ಶ್ರೀ|| ಭಾಟೀಯವರಂಥ ಸಾಧುವೃತ್ತಿಯ ವಿದ್ವನ್ಮಾನ್ಯ ಗೃಹಸ್ಥರಿಗೆ ಮನ್ನಣೆಯನ್ನಿತ್ತು ನಡಿಸಿಕೊಳ್ಳಲು ಕನ್ನಡಿಗರಿಗೆ ಬರುವದಿಲ್ಲೆಂದು ಈ ಪ್ರಕಾರದಿಂದ ಸ್ಪಷ್ಟವಾಯಿತು. ಇದು ನಿಜವಾಗಿ ಶೋಚನೀಯವು, ಕನ್ನಡಿಗರಿಗೆ ಲಾಂಛನಾಸ್ಪದವು. ಶ್ರೀ|| ಕಂಬಳಿಯವರಂಥ ಕನ್ನಡಿಗರಿಗೆ ದುರಭಿಮಾನಿ ವಿದ್ಯಾರ್ಥಿಗಳ ಈ ನಾಟಕ ತಿಳಿದಿದ್ದರೆ, ಸುರಕ್ಷಿತ ತಂತಿಕೊಟ್ಟು ಶ್ರೀ|| ಭಾಟೀಯವರಿಗೆ ಬರದಂತೆ ಮಾಡಿದ ವ್ಯವಸ್ಥೆಯು ಸಫಲವು ಹತ್ತಿದರೆ, ಅವರೆಂದೂ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುತ್ತಿದ್ದಿಲ್ಲವೆಂದು ನಮ್ಮ ಅಂದಾಜಿದೆ. ಈ ಕರಿತು ಶ್ರೀ|| ಕಂಬಳಿಯವರು ದುರಭಿಮಾನಿ ಕನ್ನಡಿಗರ ಪತ್ರಿಕೆ ಮಾಡಿ, ತಿಳಿಸಿಡಿಯಬೇಕಾಗಿ ನಮ್ಮ ಬಿನ್ನಹವಿದೆ.

---

೬. ನಮ್ಮ ಕಾರವಾರ ತಾಲೂಕಿನ ನಂದಿಗದ್ದೆಯ ಖೂನಿಪ್ರಕರಣದಲ್ಲಿ ಪೋಲೀಸ ಅಧಿಕಾರಿಗಳು ಅಪರಾಧಿಗಳನ್ನು ಮುಂದೆ ತರಲಿಲ್ಲೆಂಬ ರ್ಗದ ನ್ಯಾಯಮೂರ್ತಿಗಳ ಉದ್ಗಾರಗಳನ್ನು ನಾವು ಈ ಮುಂಚೆಯೇ ಪ್ರಕಟಿಸಿರುವೆವು. ಅಪರಾಧಿಗಳು ಸಭ್ಯ ಪ್ರರ ಮರೆಂತ ಊರೊಳಗೆ ಮೆರೆಯುವದೂ ನಿರಪರಾಧಿಗಳು ನ್ಯಾಯಕೋರ್ಟುಗಳಲ್ಲಿ ನರಳುವದೂ ಶೋಚನೀಯವಿದ್ದಷ್ಟು ಪೋಲೀಸರಿಗೆ ಲಾಂಛನಾಸ್ಪದವಿದೆ. ಪೋಲೀಸರು ಈ ಪ್ರಕರಣವನ್ನು ಸಂಪೂರ್ಣವಾಗಿ ಚೌಕಶಿ ಮಾಡಲಿಲ್ಲೆಂದು ಯಾರೂ ಹೇಳುವರು ಕೊಲೆಗೀಡಾದ ... ಸಾಯುವಾಗ ತನ್ನ ಮೇಲೆ ದ್ವೇಷ ಸಾಧಿಸುವ ... ಭಾಸ್ಕರ ನಾಮ ನಿರ್ದೇಶ ಮಾಡಿದ್ದನು. ಅವರೊಳಗಿನ ... ಪೋಲೀಸರ ಚೌಕಶಿಕಕ್ಷೆಯ ... ಸಿಗಲಿಲ್ಲ ... ಬೆಳ್ಳಾಟಕರ ... ಹೇಳಿದ್ದಮೇಲೆ ಆತನನ್ನು ಬಿಟ್ಟು ಪೋಲೀಸರು ಜನಗೆಯ ... ವರ ಅಟು ಎಂಬ ... ಸಾಕ್ಷಿಯ ಮೇಲೆ ... ರಚನೆಯಾಗಿದೆ ... ಆಫ್ ರ್ಯಾನ್ಸ್ ... ಶಿವರಾಮನು ... ಸಾಕ್ಷಿಕೊಟ್ಟದ್ದರಿಂದ ಆತನ ... ಪೋಲೀಸ ... ಇದನ್ನು ನ್ಯಾಯಮೂರ್ತಿಗಳು ... ನಾಟಕವೆಂತಲೆ ಭಾವಿಸಿ ... ದರು. (Air of unreality) ... ವಿಶ್ವಾಸಾರ್ಹ ಸ್ವಷ್ಟ ... ಪೋಲೀಸರ ಉದಾಸೀನತೆ ... ಗಳು ಸಾಯುವವರೆಗೆ ... ಅಪ್ಪ ಬಿಟ್ಟ ... ಪೋಲೀಸರು ... ರವರು ಆದರೆ ... ಬ್ರಿಟಿಶ ರಾಜ್ಯಕ್ಕೆ ಅಪಕೀರ್ತಿ ... ಈ ವಿಷಯ ಸಂಪೂರ್ಣ ಚೌಕಶಿ ನಡಿಸಬೇಕಾಗಿದ್ದು ... ಗುಪ್ತ ಪೋಲೀಸರನ್ನು ... ಯೂ, ವಿಶ್ವಾಸಿ ... ಪೋಲೀಸ ಅಧಿಕಾರಿಗಳನ್ನೂ, ಪೋಲೀಸರನ್ನೂ ... ಮಾಡಬೇಕಾಗಿಯೂ, ... ಅಪರಾಧಿಗಳ ... ನಮ್ಮ ಬಿನ್ನಹವಿದೆ. ... ಕರಣದಲ್ಲಿ ಪೋಲೀಸರೇ ... ಅಪರಾಧಿಗಳನ್ನು ಒಪ್ಪಿಡುತ್ತಾರೆಂಬ ಭಾವನೆಯು ... ಕಲಿಯತೊಡಗಿದರೆ ... ಭಾವನೆಯಾಗುವದು ಪೋಲೀಸರ ಪ್ರಜಾರಕ್ಷಣ ಕರ್ತವ್ಯಕ್ಕೆ ಭೂಷಣಾವಹವಲ್ಲ. ಸೋಲ್ಜರ-ಸಿವ್ಹಿಲಿಯನ ರಕ್ಷಣ ... ಬ್ರಿಟಿಶ ರಾಜ್ಯಾಧಿಕಾರಿಗಳಿಗೂ ಶ್ರೇಯಸ್ಕರವಲ್ಲ. ... ಹೆಚ್ಚಿಗೆ ಏನು ಬರೆಯುಬೇಕು?

ಸ್ಥಾನಿಕ ವೃತ್ತಾಂತ

ಕುಮಟಾ— ಸಾಧಾರಣ ಚಳಿ.

ಅಡಿಕೆಯು ವಿಶೇಷವಾಗಿ ಬರಹತ್ತಿದೆ ಮೊದಲು ಹಲೋ ಧಾರಣೆಯುಕ್ತ, ಇತ್ತ ಸ್ವಲ್ಪ ಇಳಿದದೆ.

ಇಲ್ಲಿಯ ಬಹು ಪುರಾತನ ಕಾಲದಿಂದಿದ್ದ ಗುರ್ಜರ ಬಾಂಧವರ ಶ್ರೀ ರಾಧಾಕೃಷ್ಣ ದೇವರನ್ನು ಗೋಕುಳ ಕ್ಷೇತ್ರಕ್ಕೆ ಕಳುಹಿಕೊಡುವ ಯೋಜನೆಯನ್ನು ಕೆಲವರು ನಿರ್ಧರಿಸಿರುವರಾಗಿ ತಿಳಿಯುತ್ತದೆ ಇದು ಸಮಾಜನಿಗೆ ಸಮ್ಮತವಿರುವದಿಲ್ಲವಾಗಿಯೂ ತಿಳಿಯುತ್ತದೆ ಶ್ರೀ ದೇವರ ವಿನಿಯೋಗಕ್ಕೆ ಸಾಲುವಷ್ಟು ಆಸ್ತಿಯಿರುತ್ತ ಶ್ರೀ ದೇವರನ್ನು ಗೋಕುಳ ಕ್ಷೇತ್ರಕ್ಕೆ ಕಳುಹಿಕೊಡುವದು ಪ್ರಶಸ್ತವಲ್ಲ ಗುರ್ಜರ ಸಮಾಜಕ್ಕೆ ಇದು ಕ್ಷೇಮಕರವಲ್ಲ ಈ ವಿಷಯ ಚಾಲಕರು ಪುನರಾಲೋಚಿಸಿ, ಶ್ರೀ ದೇವರನ್ನು ತಮ್ಮ ಸಮಾಜವಿರುವವರೆಗೆ ಊರ್ಜಿತವಾಗಿ ಇಡುವಂತೆ ಯೋಜಿಸಬೇಕಾಗಿ ನಮ್ಮ ವಿನಂತಿ ಗುರ್ಜರ ಬಂಧುಗಳ ಶ್ರೀ ದೇವಾಲಯವು ಇದೊಂದೇ ಇರುವದು

ಸಾಭಾರ ಸ್ವೀಕಾರ.

ಶ್ರೀ ಶಾರದಾ—ನೂತನ ಸಂಸ್ಕೃತ ಮಾಸಿಕ ಪತ್ರಿಕೆ ಪ್ರತಿ ಚತುರ್ಥಿಗೆ ಹೊರಡುವದು. ಸಂಪಾದಕ-ಅಯುರ್ವೇದಕಲಾವಿಭೂಷಣ ವಿದ್ವಾನ್ ಕೇ ಕೇಶವ ಶಾಸ್ತ್ರಿ ಶೃಂಗೇರಿ, ಮೈಸೂರು. ವಾ. ವ. ರೂ ೨-೮-೦.

ಅಂಕೋಲಾ— ಚಳಿಗಾಲ ಪ್ರಾರಂಭವಾಗುತ್ತಲಿದೆ ಊರಲ್ಲಿ ಜ್ವರ, ಕೆಮ್ಮು, ಇತ್ಯಾದಿ ಬೇನೆಗಳು ಅಲ್ಲಲ್ಲಿ ಕಂಡುಬರುತ್ತವೆ ದನಗಳ ರೋಗವು ನಾಲ್ಕು ಕಡೆಯಲ್ಲಿ ಹಬ್ಬುತ್ತಲಿದೆ

ಇಲ್ಲಿ ಇಂಗ್ಲಿಷ ಶಾಲೆಯು ಹ್ಯಾಸ್ಕೂಲು ಮಾಡುವ ದೃಷ್ಟಿಯಿಂದ ಮಾಸ್ತರರ ಒಗ್ಗಿನ ವ್ಯಾಯಾಮ ಶಾಲೆಯ ಬಗ್ಗೆ ಜವಾನಿ ಮಹಲಿನಲ್ಲಿ ಕಟ್ಟಿಸಿದ ಇಮಾರತು ಮೊನ್ನೆ ಮುಚ್ಚಿಯ ಛಪ್ಪರ ಕುಸಿದು ನೆಲಕ್ಕೆ ಉರುಳಿತು. ಈ ಹೊಸ ಇಮಾರತು ಮೋಲ್ಯಾತು, ಕೆಡತು ಆ ನಂತರ ಒಂದು ... ನಂತರ ರಾಯರ ಗೋಡೆ ಈ ಅಪೂರ್ವ ಪದ್ಧತಿಯಿಂದ ಕಟ್ಟುತ್ತಲಿರುವಾಗ ಗೊತ್ತಿಲ್ಲದ ಮೋಲ್ಯಾತು ಒಂದು ... ದೈವದಿಂದ ಆಡುವ ಹುಡುಗರು ಯಾ ಬೇರೆ ಜನರು ಒಳಗೆ ಇಲ್ಲಾದ್ದರಿಂದ ಜೀವಕ್ಕೆ ಅಪಾಯವಾಗಲಿಲ್ಲ ಇಲ್ಲಿಯ ಹ್ಯಾಸ್ಕೂಲು ಯೋಜನೆಯೂ ಈ ಇಮಾರತಿಯಂತೆ ತರಿಯಿಂದ ಬುಡಕ್ಕೆ ರಚಿಸಲ್ಪಡುತ್ತಿರುವಾಗ ... ಸಂಗತಿಯೊಳಗೆ ವಿಶಂಗತ ಆಶ್ಚರ್ಯವೇನಿಲ್ಲ ... ಕಳಸ ವಗೆ ಮಾಯಾ!”

ಇಲ್ಲಿ “ಇಂಡಿಯನ್ ಟೆರಿಟೋರಿಯಲ ಫೋರ್ಸಿನ ದೆಸೆಯಿಂದ ರಿಕ್ರೂಟು ಕೂಡಿಸಲಿಕ್ಕೆ ಸಭೆ ಕೂಡಿತು. ಅಧ್ಯಕ್ಷರ ಜೊತೆ ಇತರರ ವ್ಯಾಖ್ಯಾನಗಳು ಅಷ್ಟು ಇಷ್ಟು ಅರ್ಥವಾಗಿ ಕೇಳುವವರಿಗೆ ಇದರ ಉದ್ದೇಶವು ಎಷ್ಟು ತಿಳಿಯಿತೋ, ವಕೀಲ ರಾ ಸಾ ನಾಡಕರ್ಣಿ, ರಾ. ಸಾ. ಬಾಲಕೃಷ್ಣ ನಾಯ್ಕ ಸುಳಗಂಕೆ, ರಾ. ಸಾ. ರಾಮನಾಯ್ಕ ಗಾಂವಕಾರ ಇವರ ವ್ಯಾಖ್ಯಾನಗಳಾದವು

ಇಲ್ಲಿ ದಕ್ಷಿಣ ಆಫ್ರಿಕೆಯ ... ಕೂಡಿಸಿ ದೇಶಭಕ್ತರ ಸಭೆಗೆ ಜನರು ಕೂಡುವಷ್ಟರೊಳಗೆ ಸಾ ... ಕೆಲಸ ಮುಗಿಸಿಕೊಂಡು ದೇಶಭಕ್ತರು ಲಗುಬಗೆಯಿಂದ ತಮ್ಮ ತಮ್ಮ ಇಲೆಕ್ಷನ ಕೆಲಸಕ್ಕೆ ನಡೆದದ್ದು ಹೊರಮ್ಮೇಯತನದ ಆಗಿರಾವಿಯು’ (ತಾ ೩೧-೧೦-೩೬)

ಮುಡೇಶ್ವರ— ಈ ಊರಲ್ಲಿ ೪-೫ ದಿವಸದಿಂದ ಚಳಿ ಬೀಳಲಿಕ್ಕೆ ಪ್ರಾರಂಭವಾಗಿದೆ ರೋಗರಾಯಿಲ್ಲ. ಈ ಊರ ಹವೆ ಬಹಳ ಚಲೋ ಇದ್ದು, ಲೋಕರು ಇಲ್ಲಿಗೆ ೧ ತಿಂಗಳು ನಿಂತರೆ, ಔಷಧದ ಗರಜೇ ಬೀಳಲಿಕ್ಕಿಲ್ಲ ಇತ್ತೀಚೆಗೆ ಮುಂಬಯಿಯಿಂದ ಈ ಊರಿಗೆ ೩-೪ ಜನರು ಬಂದಿರುತ್ತಾರೆ

ಕಳೆದ ವರ್ಷ ಜನಾವರುಗಳಿಗೆ ರೋಗಬಂದು ಊರಲ್ಲಿ ಬಹಳ ಜನಾವರಗಳು ನಾಶವಾದ್ದರಿಂದಲು ಈ ವರ್ಷ ಬೆಳೆ ... ಕಾಳಾದ್ದರಿಂದಲೂ ಬಹಳ ರೈತರು ಧಾನ್ಯದ ಗದ್ದೆಗಳು ಹೂಡಲಿಕ್ಕೆ ಕಾಡಿಗೆ ಗದ್ದೆ ಸಾಗುವಳಿಗೂ ಜಾನುವಾರುಗಳು ಅತ್ಯವಶ್ಯವಾದವರಿಂದ ಸರಕಾರದವರು ರೈತರಿಗೆ ಸಾಗುವಳಿ ಬಗ್ಗೆ ಜಾನುವಾರುಗಳನ್ನು ಕೊಂಡುಕೊಳ್ಳಲಿಕ್ಕೆ ತಗಾವಿ ಕೊಡಬೇಕಾಗಿ ರೈತರ ಅರ್ಜಿಗಳು ಮಾಡಲ್ಪಟ್ಟಿದ್ದಾರೆ. ಇನ್ನು ಈ ಊರಿನ ಬೇರೆ ಕಡೆಗೆ ಹೋಗಿ ಸಾಗುವಳಿಗೆ ಎತ್ತುಗಳನ್ನು ಭಾಗಿಗೆ ತರುತ್ತಲಿದ್ದಾರೆ ಒಂದು ಎತ್ತಿಗೆ ಒಂದು ಖಂಡಿ ಒಂದು ಮುಡಿ ಅಕ್ಕಿ ಭಾಡಿಗೆ ದರದಂತೆ ಈ ಊರಿನ

ರ ವರ್ಷಕ್ಕೆ ನೂರು ಅನ್ನೂರು ಖಂಡಿ ಅಕ್ಕಿ ಬೇರೆ ದೇಶಗಳಿಗೆ ಉರೀ ಭೂಮಿಗೆ ಬಗ್ಗೆ ಹೋಗುತ್ತದೆ. ಈ ವರ್ಷ ಸರಕಾರದವರು ತಗಾವಿ ಹಣ ರೈತರಿಗೆ ಕೊಡದಿದ್ದ ಪಕ್ಷಕ್ಕೆ ರೈತರ ಗೋಳಾಟವೇ ಸರಿ.

ನಮ್ಮ ಪೇಟೆಯ ಮಾಮಲೇದಾರ ಸಾಹೇಬರಿಗೆ ಮುಂಡ ಗೋಡಿನ ವರ್ಗವಾಯಿತು ಎಂತ ವದಂತಿಯಿದೆ. ಅವರು ಶಾಂತ ಸ್ವಭಾವದವರೂ, ಪ್ರಾಮಾಣಿಕರೂ ದಕ್ಷರೂ ಇದ್ದರು. ರೈತರ ನ್ಯಾಯಾನ್ಯಾಯಗಳನ್ನು ಲಕ್ಷ್ಯಪೂರ್ವಕ ಚೌಕಶಿಮಾಡಿ ನ್ಯಾಯಕೊಡುವವರಾಗಿದ್ದರು. ಹಾಗೂ ರೈತರ ಮನಸ್ಸು ಯಾವ ತರದಿಂದಲೂ ನೋಯಿಸದೇ ನಡಿಸುತ್ತಿದ್ದರು. ಅವರು ಈ ಪೇಟೆಗೆ ಬಂದು ೭ ವರ್ಷಗಳಾಯಿತಂತೆ. ಅವರ ಸರ್ವಿಸ ಇನ್ನು ಸ್ವಲ್ಪವಿದೆಯಂತೆ. ಅವರು ಮುಂಡಗೋಡಿಗೆ ಹೋಗ ವದರ ಬದಲು, ಭಟ್ಕಳ ಪೇಟೆಯಲ್ಲಿ ಪೆನಶನ್ ಪಡೆಯಬಹುದಿತ್ತು; ಈ ಪೇಟೆಗೆ ಇವರೇ ಇರಬೇಕಾಗಿ ಜನರ ಅಭಿಪ್ರಾಯವದೆ.

ಪ್ರಾಲಿನ ಧಾರಣೆ ಹೋದ ಆಠವಡೆಯ ದರದಿ ಇದೆ. ಕುಚ್ಚಿಗೆ ಅಕ್ಕಿ ರೂ ೬—೧೪—೦ರಿಂದ ೮ ೦ ೦. ಬೆಳ್ಳಿಗೆ ನಾಡಿ ಖಂಡಕ್ಕೆ ೮—೮—೦ ರಿಂದ ೯—೦—೦ ತೆಂಗಿನ ಕಾಯಿ ರೂ. ೬೦—೬೫ ಇದೆ

ಜಾಹೀರ ನೋಟೀಸು.

ಗೋಕರ್ಣ ಶ್ರೀ ಮಹಾಬಲೇಶ್ವರ ದೇವಸ್ಥಾನದ ಮುಂದುಗಡೆ ಇರುವ ಸಮುದ್ರಕ್ಕೆ ಹೋಗುವ ಸಂಕವನ್ನು ಹೊಸದಾಗಿ ಕಟ್ಟಿಸ ಬೇಕಾಗಿಯದೆ. ಸದ್ರಿ ಕಾಮಗಾರಿ ಬಗ್ಗೆ ಪಿ. ಡಬ್ಲ್ಯು. ಡಿ. ಖಾತೆಯಿಂದ ತಯಾರಾದ ಪ್ಲೆನ ಮ ಇಸ್ಟಿಮೇಟ ದಂತೆ ರೂಪಾಯಿ 2251—0—0 ತಗಲುತ್ತದೆ. ಸದ್ರಿ ಕೆಲಸವನ್ನು ಕಂಟ್ರಾಕ್ಟಿಗೆ ತೆಗೆದುಕೊಳ್ಳಲಿಕ್ಕೆ ಇಚ್ಛಿಸುವವರು ತಾ. 20—11—1925 ರ ಒಳಗಾಗಿ ಕೆಳಗೆ ಸಹಿ ಮಾಡುವವರ ಕಡೆಗೆ ತಮ್ಮ ಟೆಂಡರುಗಳನ್ನು ಕಳಿಸತಕ್ಕದ್ದು. ಸದ್ರಿ ಕಾಮಗಾರಿ ಸಂಬಂಧ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಅಂಥ ಮಾಹಿತಿಯನ್ನು ಗೋಕರ್ಣ ಮುನ್ಸಿಪಲ್ ಆಫೀಸಿನಲ್ಲಿ ಪಡೆಯಬಹುದು.

ಗೋಕರ್ಣ, ತಾ. 6-11-1925. } **M. G. Gopi,** *Chairman, Gokarn Municipality*

ತಾಜಾ ಇಹವೃತ್ತ.

ಸಾಲೀಕಟ್ಟೆಯ ಸೊಸೈಟಿಯವರು ವೃತ್ತಪತ್ರಕರ್ತರ ಮೇಲೆ ಹಾಕಿದ ಅಬ್ರೂನುಕ್ಸಾನಿನ ಖಟ್ಲೆಯಲ್ಲಿ ರೂಪಾಯಿ ೧೫೦ ದಂಡವಾಗಿರುವದು. ಈ ತೀರ್ಪಿನ ಮೇಲೆ ಅಪೀಲ ಆಗುವದದೆ.

ವೃತ್ತಸಾರ.

— ಸೇನಾಧಿಪತಿ ರಾಲಿಂಗ ದೊರೆಗಳ ಕಾರಕೀರ್ದಿಯು ಮುಗಿಯುತ್ತ ಬಂತು, ಅವರ ಸ್ಥಳಕ್ಕೆ ಬರ್ಡವುಡರನ್ನು ಸಾಮ್ರಾಜ್ಯ ಸರಕಾರವು ನೇಮಿಸಿದೆ. ಇವರಿಗೆ ಶಿಕ್ಷಣ ಹಾಗು ಬೇಸಾಯದ ವಿಷಯಗಳಲ್ಲಿ ವಿಶೇಷ ಅಭಿರುಚಿ.

— ಕಲ್ಲಿಕೋಟೆಯ ಸಮೀಪ ಒಂದು ತೆಂಗಿನಮರದ ಮೇಲಿಂದ ಉಜ್ವಲವಾದ ಬೆಳಕು ಬರುತ್ತಿದೆ. ಆ ಮರದ ಮೇಲೆ ಎರಡು ಸರ್ಪಗಳಿವೆ. ಆ ಬೆಳಕು ಅವುಗಳ ಹೆಡೆಯ ಮೇಲಿರುವ ಮಾಣಿಕದ ಬೆಳಕಾಗಿರುವದೆಂದು, ಅದನ್ನು ತಕ್ಕೊಳ್ಳಲು ಅನೇಕರ ಇಚ್ಛೆಯಿದೆ. ಒಬ್ಬ ತಿಯ್ಯ ಜಾತಿಯವನಿಗೆ ಮರ ಹತ್ತಿಸಿದರು. ಸ್ವಲ್ಪ ಹತ್ತುವಷ್ಟರಲ್ಲಿ ಎರಡೂ ಸರ್ಪಗಳು ಬಂದು ಅವನಿಗೆ ಕಚ್ಚಿದವು. ಕೂಡಲೆ ಅವನು ನೆಲಕ್ಕುರುಳಿದನು. ಬಿದ್ದ ಕೂಡಲೆ ಗುಣ ಹೊಂದಿದನು. ಬಳಿಕ, ಯಾರೂ ಮರ ಹತ್ತಿಕೊಳ್ಳಲಿಲ್ಲ. ಕೆಲ ದಿನಗಳ ಬಳಿಕ, ಒಬ್ಬ ಮಾಪಿಳ್ಳೆಯು ತಾನು ಹತ್ತುತ್ತೇನೆಂದು ಹಿಂಬಾಲಿಸಿದನು. ೫ ರೂಪಾಯಿಗಳಿಗೆ ಗುತ್ತಿಗೆ ಮಾಡಿದರು. ೯೦ ರ ಹತ್ತಿದನು; ಕೂಡಲೆ, ಸರ್ಪದಂಶವಾಯಿತು. ಇಬ್ಬರೂ ನೆಲಕ್ಕುರುಳಿ ಅಲ್ಲಿಯವಲ್ಲೇ ಮರಣಪಟ್ಟರು. ಸರ್ಪಗಳ ಹೆಡೆಯ ಮೇಲಿನ ಮಾಣಿಕವನ್ನು ಅಪಹರಿಸುವದು ಸಣ್ಣ ಕೆಲಸವಲ್ಲ!

— ಮಾನಭೂಮ ಜಿಲ್ಹೆಯಲ್ಲಿ ಒಂದು ಕಾಡಿನಲ್ಲಿ ಬೆಂಕಿ ಹಾಗು ನೋಡು ಎಂಬ ಇಬ್ಬ ಬಾಲಕರು ಹುಲಿಯನ್ನು ಕೊಂದರೆ ಆಶ್ಚರ್ಯವಲ್ಲ? ಎಂದು ಕೇಳಿದರಿ! ಬಾಪರೆ!!

— ಮೈಸೂರಿನ ಶ್ರೀಮನ್ಮಹಾರಾಜರವರು ವೀರಶೈವ ಸಮಾಜದ ಸರ್ ಕೇ. ಪಿ. ಪುಟ್ಟಣ್ಣ ಚೆಟ್ಟಿಯವರಿಗೆ ದಿವಾನ ಪದದಲ್ಲಿ ನೇಮಿಸಿದ ಬಗ್ಗೆ ಧಾರವಾಡದಲ್ಲಿ ಕಳೆದ ೨ನೇ ತಾರೀಖಿಗೆ ಸಭೆ ಸೇರಿ ಸರ್ ಚೆಟ್ಟಿಯವರಿಗೆ ವೀರಶೈವ ಸಮಾಜದವರು ಅಭಿನಂದಿಸಿದರು. ಶ್ರೀಮನ್ಮಹಾರಾಜರ ದರ ಉದಾರಭಾವನೆಯನ್ನು ಪ್ರಶಂಸಿಸಿದರು. ಸರ್ ಚೆಟ್ಟಿಯವರಿಗೆ, ಕಾರವಾರ ಜಿಲ್ಹೆಯ ವೀರಶೈವರೂ ಬೆಳಗಾವಿ ಸ್ಟೇಶನ್ನಿನಲ್ಲಿ ಕಂಡುಕೊಂಡು ಸಂತೋಷಪ್ರದರ್ಶನ ಮಾಡಿದರು.

— ಕೊಯಿಮುತ್ತೂರ ಜಿಲ್ಹೆಯಲ್ಲಿ ನೀರಿಲ್ಲದ ಬೆಳೆ ಬಾಡುತ್ತಿದೆ. ಕಾಲುವೆಗಳಲ್ಲಿ ನೀರಿದೆ. ಆದರೆ, ಅದನ್ನೇನು ಅಧಿಕಾರಿಗಳು ಒಣ ಕೃಷಿಗೆ ಪೂರೈಸ ಬಿಡಲಿಲ್ಲ.

— ಒಂದು ವರ್ಷಕ್ಕೆ ಮಿಕ್ಕ ರಾಜದ್ರೋಹದ ಅಪರಾಧಕ್ಕಾಗಿ ಶಿಕ್ಷೆಯಾದವರನ್ನು ರಾಜಬಂದಿ ಪಟ್ಟಿಯಲ್ಲಿ ದಾಖಲ ಮಾಡದಿರುವ ಕಾನೂನನ್ನು ರದ್ದುಗೊಳಿಸಬೇಕಾಗಿ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಮಾಡಿದ ಠರಾವನ್ನು ಹಿಂದುಸ್ಥಾನ ಸರಕಾರವು ಅಲ್ಲಗಳೆದಿದೆ. ಇದರ ಮೇಲಿಂದ ಸರಕಾರದ ಅಂತಃಕರಣವು ಇನ್ನೂ ಬದಲಾಗಲಿಲ್ಲೆಂದು ಪಂಡಿತ ಮೋತಿಲಾಲರ ಹೇಳಿಕೆ.

— ದಮಾಸ್ಕಸ ಪಟ್ಟಣದಲ್ಲಿ ಫ್ರೆಂಚರ ಹಾವಳಿಯಿಂದ ೩೦ ಲಕ್ಷ ಪೌಂಡುಗಳ ಸೊತ್ತು ನಷ್ಟವಾಗಿರುವದೆಂದು ಅಂದಾಜು.

— ಅನಂತಪುರದ ಶ್ರೀ ... ಜಿಲ್ಲೆ ಯವರ ಪ್ರಕೃತಿ ಸುಧಾರಿಸುತ್ತ ನಡೆದಿದೆ.

— ಇಸ್ಲಾಮಪುರದಲ್ಲಿ ಸಾತಾರೆಯ ಜಿಲ್ಹಾ ಬೋರ್ಡಿನವರು ಕಳೆದ ದಿವಸ ತಾ. ೧೫ನೇಗೆ ದನಗಳ ಪ್ರದರ್ಶನವನ್ನು ನೆರಿಸಿರುವರು.

— ದ್ವಿತೀಯ ಕರ್ನಾಟಕ ಆಯುರ್ವೇದ ಸಮ್ಮೇಳನವು ಬೆಂಗಳೂರಿನಲ್ಲಿ ೧೯೨೬ನೇ ಜನವರಿ ತಾ. ೧೭-೧೯ನೇಗೆ ನೇರುವದಿದೆ. ಆ ಬಗ್ಗೆ ಸ್ವಾಗತ ಮಂಡಳದ ವಿಸ್ತಾರ ವಾಗಿದೆ.

— ಹಿಂದೂ ಧರ್ಮದಾಯ ಕಾಯಿದೆಯ ಕಕ್ಷೆಯೊಳಗಿನಿಂದ ಮಠಗಳನ್ನೂ, ಕೆಲವು ದೇವಾಲಯಗಳನ್ನೂ ಹೊರಪಡಿಸಲು ಶ್ರೀ ಅಯ್ಯಂಗಾರರವರು ಒಂದು ತಿದ್ದುಪಡಿಯ ಕಾಯಿದೆಯನ್ನು ಮದ್ರಾಸ ಕಾಯಿದೆ ಕೌನ್ಸಿಲಿನಲ್ಲಿ ಸೂಚಿಸುವವರಿದ್ದಾರೆ.

— ಕೇರಳ ಪ್ರಾಂತದಲ್ಲಿ ಆರ್ಯ ಸಮಾಜದ ಶುದ್ಧಿ ಸಭೆಯವರು ಕ್ರಿಸ್ತ ಹಾಗು ಮುಸಲ್ಮಾನ ಸಮಾಜದವರ ಹಿಂದೂ ಧರ್ಮಭ್ರಷ್ಟ ಕಾರ್ಯವನ್ನು ಅಡ್ಡಗಟ್ಟುತ್ತಿರುವರು. ೮೦ ಮಂದಿಗಳನ್ನು ಅವರು ಪ್ರಾಯಶ್ಚಿತ್ತ ವಿಧಿಯಿಂದ ಪುನೀತ ಮಾಡಿಕೊಂಡಿರುವರು. ಅಸ್ಪೃಶ್ಯತೆಯ ನಿವಾರಣೆಯ ವಿಷಯ ಸನಾತನಿಗಳು ಕೂಡಲೆ ಉಪಾಯ ಯೋಜನೆ ಮಾಡದಿದ್ದರೆ, ಶುದ್ಧಿ ಸಭೆಯವರ ಯತ್ನಗಳು ನಿರರ್ಥಕವಾಗುವವೆಂದು ಕಾರ್ಯದರ್ಶಿಗಳು ಜಾಹೀರ ಪಡಿಸಿರುವರು.

— ಆಂಧ್ರ ಪ್ರಾಂತಿಕ ಪರಿಷತ್ತಿನ ಅಧಿವೇಶನವು ಮಚಿಲೀಪಟ್ಟಣದಲ್ಲಿ ನೆರಿತು. ಭರತಖಂಡದ ಧ್ಯೇಯವು ಬ್ರಿಟಿಶ ಸಾಮ್ರಾಜ್ಯದ ಹೊರಗಿನ ಸ್ವರಾಜ್ಯವೆಂದು ಪರಿಷತ್ತಿನವರು ಠರಾಯಿಸಿ ಮಾಡಿ, ರಾಷ್ಟ್ರೀಯ ಸಭೆಯ ಧ್ಯೇಯದಲ್ಲಿ ಅಕ್ಕ ತಿದ್ದುಪಡಿಯಾಗಬೇಕೆಂದು ಸೂಚಿಸಿರುವರು. ಅಸ್ಪೃಶ್ಯತೆಯ ಪಾಲನಕ್ಕೆ ಶಾಸ್ತ್ರಾಧಾರವಿಲ್ಲೆಂದು ಹೇಳಿ, ಈ ವಿಷಯ ಶಾಸ್ತ್ರವಚನಗಳಿಂದ ಸಿದ್ಧ ಮಾಡಿಕೊಡಲು ಸನಾತನಿ ವಿದ್ವಜ್ಜನರಿಗೆ ಪರಿಷತ್ತಿನವರು ಆಹ್ವಾನ ಮಾಡಿರುವರು.

— ಕಲಕತ್ತೆಯಲ್ಲಿ ಇದೇ ಬರುವ ಡಿಸೆಂಬರ ತಿಂಗಳಿನಲ್ಲಿ ಅಖಿಲ ಭಾರತೀಯ ತತ್ವಜ್ಞಾನ ಪರಿಷತ್ತು ನೇರುವದಿದೆ. ಕವಿಶ್ರೇಷ್ಠ ರವೀಂದ್ರನಾಥ ಠಾಕೂರರವರು ಅಧ್ಯಕ್ಷರು.

— ಬಂಗಾಲ ಕಾಯಿದೆ ಕೌನ್ಸಿಲಿನ ಇಲೆಕ್ಶನ್ನಿನ ಮತದಾನ ಮಾಡಲು ಸ್ತ್ರೀಯರಿಗೆ ಅಧಿಕಾರ ಕೊಡಲ್ಪಟ್ಟಿತು.

— ಹೂಗ್ಲಿಯ ಮಹೇಂದ್ರನಾಥ ಮಿತ್ರ ಎಂಬುವರು ವಿಲಾಯತಿಯಲ್ಲಿ ಬೆರಿಸ್ಟರ ಪರೀಕ್ಷೆ ಕಲಿಯ ಹೋಗಿದ್ದರು. ಇವರು ಕುಮಾರಿ ಈವಾ ಪಟಿಮರ್ ಎಂಬುವಳೊಡನೆ ವಿವಾಹ ಮಾಡಿಕೊಳ್ಳುವ ವಚನ ಕೊಟ್ಟಿದ್ದರೆಂದೂ, ಅದನ್ನು ಮುರಿದರೆಂದೂ, ಅದರಿಂದ ನಷ್ಟವಾಯಿತೆಂದೂ ಕುಮಾರಿಯು ದಾವೆ ಮಾಡಿ ೧೫ ಸಾವಿರ ರೂಪಾಯಿಗಳಿಗೆ ಡಿಕ್ರಿ ಪಡಕೊಂಡಿರುವಳು!

— ಧಾರವಾಡದೊಳಗಿನ ಸುಪ್ರಸಿದ್ಧ ಶ್ರೀ ತ್ರಿಂಬಕ ತೋತಾರಾಮ ಲಿಮಯೆ ಅವರು ಚಪಲವಾದ ಹೆಣ್ಣು ಹುಲಿಯ ಬೇಟೆಯಾಡಿದರು. ಈ ಹುಲಿಯು ೪-೫ ಸಾವಿರ ರೂಪಾಯಿಗಳ ದನಗಳನ್ನು ತಿಂದುಬಿಟ್ಟಿರುವದಂತೆ!

— ಸುಮಾತ್ರಾ ದ್ವೀಪದಲ್ಲಿ ಬಾಂಬು! ಅಲ್ಲಿ ಡಚ್ಚರ ಅಧಿರಾಜ್ಯ ಅಧಿಕಾರಿಗಳ ಮೇಲೆ ಬಾಂಬು ಎಸೆಯಲ್ಪಟ್ಟಿರುವದು. ಅನೇಕರು ಘಾಯಪಟ್ಟಿರುವರು.

— ಸರ್ವಿಯಾದ ರಾಜಧಾನಿಯಾದ ಬೆಲ್‌ಗ್ರೇಡದಲ್ಲಿ ಗೆವ್ರಿಲೊ ಪ್ರಿನ್ಸಿಪರ ಸ್ಮಾರಕಸ್ತಂಭ ಏರಿಸಲಾಗುವದಿದೆ. ಈ ಮಹಾನುಭಾವರು ಆಸ್ಟ್ರಿಯಾ ದೇಶದ ರಾಜಪುತ್ರನಾದ ಆರ್ಚಡ್ಯೂಕ ಫರ್ಡಿನಂಡ ಹಾಗು ಅವರ ಪತ್ನಿಯವರ ಕೊಲೆ ಮಾಡಿದ ಪುರುಷರು. ಅವರ ಕೊಲೆಯೇ ಮಹಾಯುದ್ಧದ ಮೂಲವು. ಇಂಥವರ ಸ್ಮಾರಕವಾಗುವದು ಕ್ಷೇಮವೇನು?

— ಮೊರೊಕೊ ಯುದ್ಧಕ್ಕಾಗಿ ಫ್ರೆಂಚರು ೧೦ ಕೋಟಿ, ೬೨ ಲಕ್ಷ ಫ್ರೆಂಕ್ಸುಗಳನ್ನೂ, ಸೀರಿಯಾದೊಳಗಿನ ಯುದ್ಧಕ್ಕಾಗಿ ೧ ಕೋಟಿ,೩೦ ಲಕ್ಷ ಫ್ರೆಂಕ್ಸುಗಳನ್ನೂ ಮಂಜೂರ ಮಾಡಿರುವರು.

— ರಶಿಯಾ ಹಾಗು ಅಫಘಾನಿಸ್ಥಾನ ಸರಕಾರಗಳೊಳಗೆ ವ್ಯಾಪಾರ ತಹನಾಮೆಯಾಗಿದೆ. ಅಫಘಾನಿಸ್ಥಾನವು ಕಚ್ಚಾ ಮಾಲನ್ನು ಪೂರೈಸುವದು. ರಶಿಯಾ ದೇಶವು ಪಕ್ಕಾ ಮಾಲನ್ನು ಪೂರೈಸುವದು.

— ಈಸ್ಟ ಇಂಡೀಸದ ಮಾಜಿ ಫ್ರೆಂಚ ಸೇನಾಪತಿಗಳಾದ ಸರ್ ಎಡ್ಮಂಡ ಸ್ಲೇಡರವರ ಮಗಳಾದ ಕುಮಾರಿ ಮೆಡೆಲ್ಯಾನ ಸ್ಲೇಡರವರು ಮಹಾತ್ಮರ ತತ್ವಗಳಿಗೆ ಮರುಳಾಗಿ ಅವರ ಅನುಯಾಯಿಗಳಾಗಿರುವರು. ಇದೇ ಜನ್ಮದಲ್ಲಿ ಮಹಾತ್ಮರ ತತ್ವಗಳನ್ನು, ಮಹಾತ್ಮರ ಸನ್ನಿಧಿಯಲ್ಲಿದ್ದು ಪ್ರಚಾರ ಮಾಡಲು ಸಂಕಲ್ಪ ಮಾಡಿ ಅವರು ಪ್ಯಾರಿಸ ಪಟ್ಟಣದಿಂದ ಹೊರಟಿರುವರು. ತಮ್ಮ ಸರ್ವಸ್ವವನ್ನು ತತ್ವಪ್ರಸಾರ ಕಾರ್ಯಕ್ಕೆ ಒಪ್ಪಿಸಲು ಅವರು ಸಿದ್ಧರಾಗಿರುವರು. ಮಹಾತ್ಮರ ತತ್ವಗಳ ಪರಿಚಯವು ಪ್ಯಾರಿಸ ಪಟ್ಟಣದಲ್ಲಿ ರೊಮೇನ ರೋಲೆಂಡರೆಂಬವರಿಂದ ಅವರಿಗೆ ಒದಗಿ ಬಂತಂತೆ.

— ಬೆಂಗಳೂರಿನ ಹತ್ತಿರ ದೇವನಹಳ್ಳಿಯಲ್ಲಿ ತಿಮ್ಮನೆಂಬುವನು ಪಿಶಾಚಿಯನ್ನು ಬಲಿಕೊಂಡು ಹಣ ಸಂಪಾದಿಸುವ ಆಶೆಯಿಂದ ಒಬ್ಬ ಹುಡುಗನನ್ನು ಮಾಡಿಯ ಕೋಣೆಯಲ್ಲಿ ಕೊಲ್ಲುತ್ತಿರುವಾಗ ಪೋಲೀಸರಿಗೆ ತಿಳಿದು. ಅವನನ್ನು ಸೆರೆಹಿಡಿದಿರುವರು, ದುಡ್ಡಿಗಾಗಿ ಎಂಥೆಂಥ ಅನಾಚಾರಗಳು ಒದಗಿ ಬರುತ್ತವೆ!

— ಬಾಗಲಕೋಟೆಯ ಸುಪ್ರಸಿದ್ಧ ವಕೀಲರಾದ, ಸಾರ್ವಜನಿಕ ಸೇವೆ ಮಾಡುತ್ತಿದ್ದ ಶ್ರೀ ಗುಳವಾಡಿ ವಿಠ್ಠಲರಾಯರು ಹಂಪು ಬೇನೆಯಿಂದ ಕೈಲಾಸವಾಸಿಗಳಾದರು. ಅಲ್ಲಿಯ ಸುಪ್ರಸಿದ್ಧ ವ್ಯಾಪಾರಸ್ಥರಾದ ಹಾಗು ಶ್ರೀ ಬಸವೇಶ್ವರ ಹ್ಯಾಸ್ಕೂಲಿನ ಸ್ಥಾಪಕರಾದ ಶ್ರೀ ಪಲ್ಲೇದ ಶಿವಪ್ಪನವರೂ ಶಿವೈಕ್ಯರಾದರು. ಬಾಗಲಕೋಟೆಯವರು ಮರುಗುತ್ತಿರುವರು

— ನಾಗಪುರದೊಳಗಿನ ಮಹಾರಾಜವನದಲ್ಲಿ ಕಾಡು ಜನಾವರಗಳಿವೆ. ಅವುಗಳನ್ನೆಲ್ಲ ಪಂಜರಗಳಲ್ಲಿಟ್ಟು ಸಾಕುತ್ತಿರುವರು. ಕಳೆದ ವಾರದಲ್ಲಿ ಪಂಜರಗಳನ್ನು ತೊಳೆಯುವಾಗ ಒಂದು ಪಂಜರದೊಳಗಿಂದ ಇನ್ನೊಂದು ಪಂಜರದಲ್ಲಿ ಜನಾವರವನ್ನು ಸೇರಿಸುತ್ತಿದ್ದರು. ಥಟ್ಟನೆ ಅಜಾಗ್ರತೆಯಿಂದ ಹೆಣ್ಣು ಹುಲಿಯೊಂದು, ಸಿಂಹವೊಂದು ಬಿಡುಗಡೆಯಾದವು. ಹುಲಿ-ಸಿಂಹಗಳ ಸಂಗ್ರಾಮವಾಯಿತು. ಸಂಗ್ರಾಮದಲ್ಲಿ ಹುಲಿಯು ಸಂಹಾರವಾಯಿತು.

— ಪೋರ್ಟಕೊಡದಲ್ಲಿ ರಿಫ್'ರ ಮೇಲೆ ಸ್ಪೇನದವರು ವಿಮಾನದೊಳಗಿಂದ ಕೆಳಕ್ಕೆ ಬೊಂಬು ಹಾರಿಸುತ್ತಿದ್ದರು. ಒಂದು ಬೊಂಬು ನೆಲಕ್ಕೆ ಬೀಳದೆ, ವಿಮಾನದ ಕೆಳಕ್ಕೆ ಸಿಲುಕಿಕೊಂಡಿತ್ತು; ಅದು ಯಾರಿಗೂ ತಿಳಿಯಲಿಲ್ಲ. ವಿಮಾನವು ತನ್ನ ವಿನಾಶಕ ಹಾವಳಿಯನ್ನು ಮುಗಿಸಿ ಕೆಳಕ್ಕಿಳಿಯಿತು. ಆ ಬೊಂಬಿಗೆ ಎಲ್ಲಿ ಪೆಟ್ಟಾಯಿತೋ ಏನೋ! ಥಟ್ಟನೆ ಸ್ಫೋಟವಾಗಿ ವಿಮಾನು ಚೂರು ಚೂರಾಯಿತು. ವಿಮಾನದಲ್ಲಿದ್ದ ಜನರು ಮೃತಹೊಂದಿದರು.

— ಅಮೃತಸರದಲ್ಲಿ ಉಗಿಬಂಡಿಯಿಂದ ಏರಿ-ಹೋಗುವ ಪ್ರಯಾಣಿಕರ ಮೇಲೆ ಮ್ಯುನಿಸಿಪಾಲಿಟಿಯವರು ಅರ್ಧಾಣೆಯ ತಲೆ ತೆರಿಗೆಯನ್ನು ಹೇರಿರುವರು. ಔರಂಗಜೇಬನ ಜಿಝಿಯಾ ತೆರಿಗೆಯು ನಮ್ಮ ಸ್ಥಾನಿಕ ಸ್ವರಾಜ್ಯದಲ್ಲಿ ಅವತಾರವಾಯಿತು.

— ಜೋಧಪುರದ ಮಹಾರಾಜರು ಕಳೆದ ತಾ. ೨೩ನೇಗೆ ಯುರೋಪದ ಯಾತ್ರೆ ಮುಗಿಸಿ ಮರಳಿದರು. ಮಹಾರಾಜರಿಗೆ ವಿಲಾಯತಿಯ ಯಾತ್ರೆಗಾಗಿ ೧೮ ಲಕ್ಷ ರೂಪಾಯಿಗಳು ಖರ್ಚಾದವಂತೆ!

ವಿಶೇಷ ಸಂಗತಿಗಳು.

ಕುಂದಾಪುರದ ಹೈಸ್ಕೂಲಿನ ಕರ್ಣಾಟಕ ಪಂಡಿತ ಶ್ರೀ|| ವಿ. ಶಿವರಾಮಯ್ಯನವರು 'ಕಂಠೀರವ' ಪತ್ರಿಕೆಯಲ್ಲಿ ಬರೆಯುವದೇನಂದರೆ:—

೧. ಉತ್ತರ ದಿಕ್ಕಿಗೆ ತಲೆಹಾಕಿ ಮಲಗಬಾರದು— ಸೂರ್ಯನಿಂದ ಹೊರಡುವ ಒಂದಾನೊಂದು ಶಕ್ತಿಯು ಸದಾ ಭೂಮಿಯ ದಕ್ಷಿಣ ಧ್ರುವದಲ್ಲಿ ಪ್ರವೇಶಿಸಿ ಉತ್ತರ ಧ್ರುವದಲ್ಲಿ ಪಾರಾಗುತ್ತಿರುವದು. ಈ ಶಕ್ತಿಯೇ ಲೋಹಚುಂಬಕವನ್ನು ಉತ್ತರ ದಕ್ಷಿಣವಾಗಿ ತಿರುಗಿಸುವದು. ಈ ಶಕ್ತಿಯು ನಮ್ಮ ದೇಹವನ್ನೂ ಪ್ರವೇಶಿಸಿ ಪಾರಾಗುತ್ತಿರುವದು. ಇದರಿಂದ ನಮಗೆ ಹಿತವಾಗಬೇಕಾದರೆ, ಅದು ಮೊಟ್ಟಮೊದಲು ನಮ್ಮ ತಲೆಯಲ್ಲಿ ಪ್ರವೇಶಿಸಿ ಕಾಲಲ್ಲಿ ಪಾರಾಗಬೇಕು. ಇದಕ್ಕೆ ವ್ಯತಿರಿಕ್ತವಾದರೆ, ಕ್ರಮಕ್ರಮವಾಗಿ ನಮ್ಮ ದೇಹಸ್ಥಿತಿಯು ಕೆಡುವದು ಎಂದು ಪ್ರಾಜ್ಞರ ಮತವಿದೆ.

೨. ಗುಡುಗು ಬಂದರೆ ನೆಟ್ಟ ಭತ್ತದ ಪೈರಿನಲ್ಲಿ ಕಣೆಗಳು ಬರುತ್ತವೆ—ಆಕಾಶದಲ್ಲಿ ಎರಡು ವಾಯುರೂಪ ಪದಾರ್ಥಗಳು ಸದಾ ಸ್ವಸ್ಥಿತವಾಗಿರುತ್ತವೆ. ಇವು ಎರಡೂ ಸೇರಿ ಏಕವಾಗಬೇಕಾದರೆ, ಇವುಗಳಿಗೆ ವಿದ್ಯುತ್ತಿನ ಪ್ರಯೋಗವು ಬೇಕು. ಗುಡುಗು ಕೇಳಿಸಬೇಕಾದರೆ, ಮೊದಲು ಮಿಂಚು ಹೊಳೆಯಬೇಕಷ್ಟೇ. ಮಿಂಚೆಂದರೆ ವಿದ್ಯುತ್ತು. ಕೋಲ್ಮಿಂಚು ಹೊಳೆಯುವಾಗ ಆ ವಾಯುರೂಪ ಪದಾರ್ಥಗಳ ನಡುವೆ ವಿದ್ಯುತ್ತಿನ ಪ್ರವೇಶವಾಗಿ ಅವೆರಡೂ ಏಕವಾಗಿ ಮಳೆ ಹನಿಗಳ ಕೂಡ ಕೆಳಗೆ ಬಂದು ಮಣ್ಣಿಗೆ ಸೇರುವದು. ಈ ಏಕವಾದ ಪದಾರ್ಥವು ಎಳೆಯ ಸಸಿಗಳಿಗೆ ಬಹು ಬಾಧಕವಾದುದು. ಎಳೆಯ ಕೂಸುಗಳಿಗೆ ಶೈತ್ಯವಾದರೆ 'ಹಲ್ಲು ಬರುವದು' ಎಂಬುವದೊಂದು ವ್ಯಾಧಿ ಬರುವದಷ್ಟೇ. ಅದರಂತೆಯೇ ಆ ವಾಯುರೂಪ ಪದಾರ್ಥದಿಂದ ಎಳೆಯ ಸಸಿಗಳಿಗೆ ಹಲ್ಲು ಬರುವದು. ಅಂದರೆ ಕಣೆ ಹುಟ್ಟುವದು. ಆದರೆ, ಸಸಿಯು ಚೆನ್ನಾಗಿ ಬೆಳೆದರೆ ಇದರಿಂದ ಬಾಧೆಯಿಲ್ಲ, ಎಂದು ಕೃಷಿಶಾಸ್ತ್ರಜ್ಞರ ಅಭಿಪ್ರಾಯವು.

೩. ಮೋಡ ಬಂದಾಗ ಮಾವಿನಹಣ್ಣು ಕರಗಿ ಕಪ್ಪಾಗುವದು—ಆಕಾಶದಲ್ಲಿ ಮೋಡವಿದ್ದರೆ ಭೂಮಿಗೆ ಕಂಬಳಿ ಹೊದೆಸಿದಂತಾಗಿ ಭೂಮಿಯಿಂದ ಹೊರಡುವ ಕಾವು ಭೂಮಿಯ ಮೇಲೆ ಸಮೀಪವಾಗಿ ನಿಲ್ಲುವದು. ಅಂದರೆ ದೂರ ಹೊರಟು ಹೋಗುವದಿಲ್ಲ. ಹೂವುಗಳ ಅವಯವಗಳೆಲ್ಲಾ ಸೂಕ್ಷ್ಮವಾಗಿದ್ದರೂ, ಸಣ್ಣ ಹೂವುಗಳ ಅವಯವಗಳು ತೀರಾ ಸೂಕ್ಷ್ಮವಾಗಿವೆ. ಮಾವಿನ ಹೂವು, ಗೋವೆ ಹೂವು ಮೊದಲಾದವುಗಳ ಅವಯವಗಳೆಂದರೆ, ಅತ್ಯಂತ ಸೂಕ್ಷ್ಮಗಳು. ಈ ಹೂವುಗಳಿಗೆ ಮೇಲೆ ಹೇಳಿದ ಕಾವು ತಗಲಿದರೆ ಅವು ಹಂಚಿನಲ್ಲಿ ಹುರಿದಂತಾಗಿ ಒಣಗುತ್ತವೆ. ಆ ಒಳಗಣ ಹೂವುಗಳು ಹಸಿಗೊತಗೂಡಿ ಉದುರಿಹೋಗಿ ಮಿಡಿ ಮಾತ್ರವೇ ಉಳಿದು ನಮಗೆ ಕರಗಿದಂತೆ ತೋರುವದು. ಮೋಡವಿಲ್ಲದ ವೇಳೆಯಾದರೆ ತಣ್ಣಗಿರುವದರಿಂದ ಹೂವುಗಳಿಗೆ ಬಾಧೆಯಿಲ್ಲ.

೪. ರಾತ್ರಿಕಾಲದಲ್ಲಿ ಬಟ್ಟೆಯನ್ನೊಗೆಯಬಾರದು— ರಾತ್ರಿಕಾಲದಲ್ಲಿ ಒಟ್ಟೆ ಒಗೆಯುವದು ಮಾತ್ರವೇ ಅಲ್ಲ, ಸ್ನಾನಾದಿಗಳನ್ನೂ ಮಾಡಕೂಡದು. ಉದಾ—

ನಸ್ನಾನಮಾಚರೇದ್ಭುಕ್ತ್ವಾ ನಾತುರೋ ನ ಮಹಾನಿಶಿ।
ನವಾಸೋಭಿಸ್ಸಹಾಜಸ್ರಂ ನಾವಿಜ್ಞಾತೇ ಜಲಾಶಯೇ॥
ಪತಿ ವ.ಸ.೩.

ಉಂಡ ಮೇಲೆ ಸ್ನಾನ ಮಾಡಬಾರದು. ದೇಹದಲ್ಲಿ ವ್ಯಾಧಿ ಇರುವಾಗಲೂ, ರಾತ್ರಿವೇಳೆಯಲ್ಲಿಯೂ ಮೀಯಬಾರದು. ಯಾವಾಗಲೂ ವಸ್ತ್ರದ ಹೊರತೊಡನೆ ಮೀಯಬಾರದು. ಆದರೆ ಮೀಯುವಾಗ ಎರಡಕ್ಕಿಂತ ಹೆಚ್ಚು ವಸ್ತ್ರವಿರಬಾರದು. ತನಗೆ ಪರಿಚಯವಿಲ್ಲದ ಜಲಾಶಯದಲ್ಲಿ ಇಳಿದು ಮೀಯಬಾರದು.— ಅದಲ್ಲದೆ ದೇವಲ ಸ್ಮೃತಿಯಲ್ಲಿ

ನಿಶೀಥಸ್ತತ್ರ ವಿನಾಯಾ ಸಂಧ್ಯಾಸ್ತಂ ಪ್ರಕರ್ತವ್ಯಾಃ।
ತಸ್ಮಿನ್ ಸ್ನಾನಂ ನ ಕುರ್ವೀತ ಕಾಮ್ಯನೈಮಿತ್ತಿಕಾದೃತೇ॥

ಮಧ್ಯರಾತ್ರಿಯ ಎರಡು ಜಾವಗಳಿಗೆ 'ನಿಶೀಥಿನಿ' ಎಂದು ಹೆಸರು. ಆ ನಿಶೀಥಿನಿಯಲ್ಲಿ ಸರಿಯಾದ ಕಾರಣವಿಲ್ಲದೆ ಸ್ನಾನಮಾಡಬಾರದು ಎಂದು ಇರುವದು. ಈ ಸ್ಮೃತಿವಚನವು ಕೇವಲ ಆರೋಗ್ಯಕ್ಕೆ ಸಂಬಂಧಿಸಿರುವದೆಂದು ಯಾರಿಗೂ ಥಟ್ಟನೆ ಹೊಳೆಯುವಂತಿದೆ. ರಾತ್ರಿಯು ತಂಪಾದ ಸಮಯವಾದುದರಿಂದ ಥಟ್ಟನೆ ಶೀತವಾಗುವ ಸಂಭವವಿದೆ. ಈ ಹೊತ್ತಿನಲ್ಲಿ ತಣ್ಣೀರ ಬಳಿ ಸಾರಿಯುವದು ಉಚಿತವಲ್ಲವೆಂಬುವುದರಿಂದಲೇ ಬಟ್ಟೆ ಒಗೆಯಬಾರದು, ಮೀಯಬಾರದು, ಎಂಬ ನಿಯಮಗಳಿವೆ. ನಮ್ಮ ಪದ್ಧತಿಯಲ್ಲಿ ಕೆಲವು ಆಚಾರಕ್ಕೆ ಮಾತ್ರ ಸಂಬಂಧವಿಟ್ಟವು. ಕೆಲವು ಆರೋಗ್ಯಕ್ಕೆ ಸಂಬಂಧಿಸಿದುವು. 'ಉಚ್ಛಿಷ್ಟೋ ನಾಲಭೇತ್ ಕಿಂಚಿತ್' (ಉಂಡ ಬಾಯಲ್ಲಿಯೇ ಮಾತಾಡಬಾರದು.) 'ನೈಕವಸ್ತ್ರಶ್ಚ ಭುಂಜೀತ' (ಒಂದೇ ಬಟ್ಟೆಯಲ್ಲಿ ಉಣ್ಣಬಾರದು.) 'ನ ಪಾಣಿಭ್ಯಾಂ ಉಭಾಭ್ಯಾಂ ಚ ಕಂಡೂಯೇತ ಶಿರಸ್ತಥಾ||' (ಎರಡು ಕೈಗಳಿಂದ ತಲೆ ತುರಿಸಿಕೊಳ್ಳಬಾರದು.) ಇಂತಹ ನಿಯಮಗಳೆಲ್ಲ ಕೇವಲ ಸಭ್ಯತನದ ಆಚಾರಕ್ಕೆ ಮಾತ್ರ.

೫. ರಾತ್ರಿ ಹೊತ್ತಿನಲ್ಲಿ ಕನ್ನಡಿ ನೋಡಬಾರದು— ಮನುಷ್ಯನು ಮಲಗುವ ವೇಳೆ ಮನಸ್ಸನ್ನು ಶಾಂತವಾಗಿಟ್ಟುಕೊಳ್ಳಬೇಕು. ಎಷ್ಟು ಶಾಂತವಾಗಿರುವದೋ ಅಷ್ಟಕ್ಕೆ ಸುಖನಿದ್ರೆ ಬರುವದು, ಮಾತ್ರವಲ್ಲ; ದುಃಸ್ವಪ್ನಗಳೂ ಕಾಣಲಾರವು. ರಾತ್ರಿ ಕನ್ನಡಿಯಲ್ಲಿ ತನ್ನ ಮೋರೆಯನ್ನು ತಾನು ನೋಡುವದರಿಂದ ಆ ಬಿಂಬವು ಮನಸ್ಸಿನಲ್ಲಿ ಹಾಗೆಯೇ ಉಳಿದು ದುಃಸ್ವಪ್ನಗಳಿಗೆ ಕಾರಣವಾಗಬಹುದೆಂಬುವದೊಂದು. ರಾತ್ರಿ ವಿಶೇಷ ಸಂದರ್ಭವಿಲ್ಲದೆಯೇ ಕನ್ನಡಿ ನೋಡುವದು ಅಸಭ್ಯತನದ ಆಚಾರವೆಂಬುವುದು ಇನ್ನೊಂದು. ಈ ಎರಡರಿಂದ ಅದು ನಿಷಿದ್ಧವು. ರಾತ್ರಿ ಮಲಗುವ ಮೊದಲು ಪುರಾಣ ಕಥೆಗಳನ್ನು ಓದುವದು ಅಥವಾ ಕೇಳುವದು ಒಳ್ಳೆಯದು. ಇದರಿಂದ ಮನಸ್ಸು ಶಾಂತವಾಗುವದು.

ಕಳೆದ ವಾರದಲ್ಲಿ ಕನ್ನಾನೂರ, ತಲ್ಲಿಚೇರಿ ಕಡೆಯ ಮಲಬಾರದ ದಂಡೆಗುಂಟ ಭಯಂಕರ ಬಿರುಗಾಳಿಯಿಂದ್ಲು ವಿಪರೀತ ಹಾನಿಯಾಗಿದೆ. ಬಿರುಗಾಳಿಯು ಧಿಕೋಟೆಯಿಂದ ಕನ್ನಾನೂರದ ವರೆಗಿನ ಪ್ರದೇಶದ ಮೇಲೆ ಬೀಸಿತು. ಅನೇಕ ಕಟ್ಟಡಗಳೂ, ದೊಡ್ಡ ದೊಡ್ಡ ಮರಗಳೂ ಕಿತ್ತು ಬಿದ್ದವು. ಸಾವಿರಾರು ತೆಂಗಿನ ಮರಗಳು ಬುಡಮೇಲಾದವು. ಉಗಿಬಂಡಿಗಳ ಓಡಾಟವು ನಿಂತಿತು. ತಂತಿಗಳು ಹರಿದುಹೋದ್ದರಿಂದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುದ್ದಿ ಕೊಡ-ಕೊಳ್ಳುವದು ಕಠಿಣವಾಯಿತು. ತಲ್ಲಿಚೇರಿಯಲ್ಲಿ ೩ ಚಿಕ್ಕ ಹಡಗಗಳು ಜಲಸಮಾಧಿ ಹೊಂದಿದವು. ೩೫ ಮೀನು ದೋಣಿಗಳ ಪತ್ತೆಯಿಲ್ಲ. ೧೩೫ ಬೆಸ್ತರಿದ್ದರಂತೆ. ನದಿಗಳು ಉಕ್ಕೇರಿ ಬಂದು ಹೊಲಗಳಲ್ಲೆಯೂ ಜಲರಾಶಿಯಾಗಿದೆ, ಮೇಲೆ ತೆರಬಿದ್ದಹ ಮಳೆ. ಕಲ್ಲಿಕೋಟೆಯಲ್ಲಿ ೪ ಹಡಗಗಳು ಸಾಗರ ಸೇರಿದವು; ೩ ಬಂಡೆಗಳಿಗೆ ಅಪ್ಪಳಿಸಿ ಹಾಳಾದವು, ೧ ಮುಳುಗಿ ಹೋಯಿತು. ಕಲ್ಲಿಕೋಟೆಯಿಂದ ಸೋಮವಾರ ತಾ ೧೦ ನೇಗೆ ಹೋದ ೩ ಮೀನು ದೋಣಿಗಳು ಬಿರುಗಾಳಿಯಲ್ಲಿ ಸಿಲುಕಿ ಎಲ್ಲಿ ಹೋದವೋ ಏನೋ! ನೆರೆಯ ಪೊನ್ನಾನಿಯಿಂದ ಅದೇ ದಿನ ೬೦ ದೋಣಿಗಳು ತಂಡಾಗಟ್ಟಿಕೊಂಡು ಮೀನು ಹಿಡಿಯ ಹೋಗಿದ್ದವು; ೩೦೦ ಮಂದಿ ಬೆಸ್ತರಿದ್ದರು. ಯಾರದೂ ಪತ್ತೆಯಿಲ್ಲ. ಅನೇಕರು ಗೊತ್ತು ಹಚ್ಚಲು ಹೋಗಿರುವರು. ಮಂಗಳೂರಿಗೆ ೬೦ ಮಂದಿ ಬೆಸ್ತರು ಬಂದಿಳಿದಿರುವರಂತೆ. ಎಲ್ಲಿಯವರು, ಯಾವ ದೋಣಿಯವರು ಎಂಬುದೇನು ಇನ್ನೂ ತಿಳಿಯಲಿಲ್ಲ. ೬೦ ದೋಣಿಗಳ ತಂಡವು ನಷ್ಟ ಹೊಂದಿರುವದೆಂದು ಅವರು ಹೇಳುತ್ತಾರೆ, ಅವರದೂ ಅದೇ ಗತಿಯಾಗುತ್ತಿತ್ತಂತೆ. ಅಷ್ಟರಲ್ಲಿ ಒಂದು ಹಡಗ ದೊರಕಿದ್ದರಿಂದ, ಅವರು ಮಂಗಳೂರಿಗೆ ಬಂದಿಳಿದರು. ಅನೇಕ ಪತ್ತೆ ವ್ಯಾಪಾರಿಗಳೂ, ಅವುಗಳ ಮೇಲಿನ ಸಾವಿರಾರು ರೂಪಾಯಿಗಳ ಸಾಮಗ್ರಿಯೂ ನಷ್ಟವಾದವು. ಬಿರುಗಾಳಿಯು ಕುಮಾರಿ ಭೂಶಿರದ ಕಡೆಗೆ ಮಾರ್ಗಕ್ರಮಣ ಮಾಡಿ ಅಲ್ಲಿಯೂ ಹಾವಳಿಯನ್ನೆಬ್ಬಿಸಿದೆ. ಮನೆಗಳು ನೆಲಕ್ಕುರುಳಿದವು. ಗಿಡಮರಗಳು ಬುಡಮೇಲಾದವು. ನೀರು ಉಕ್ಕೇರಿ ಜನರ ಗೋಳು. ಈ ಬಿರುಗಾಳಿಯಲ್ಲಿ ಸಿಲುಕಿದ ‘ ಅಲಿಮಾದಾದ ’ ಹಡಗದ ಕಥೆಯನ್ನು ಹೇಳಿ ತೀರದು. ಈ ಹಡಗವು ಕಾತೇವಾಡದ ಪೋರಬಂದರದ್ದು. ಅಲ್ಲಿಂದ ೪ ಸಾವಿರ ಮಣ ಉಪ್ಪು ಕೊಂಡು ಬೆನಾಂಗ ಪಟ್ಟಣಕ್ಕೆ ಹೋಗು ಮಾಡಿತು. ಪ್ರಯಾಣಸಮಯ ಒಂದು ಕೂವೆ ಮರವು ಮುರಿದು ಹೋಯಿತು. ಕೂವೆಮರವನ್ನು ನೆಟ್ಟಗೆ ಮಾಡಬಯಸಿ ರಾಮೇಶ್ವರದ ಕಡೆಗೆ ಹೋಯಿತು. ಅಷ್ಟರಲ್ಲಿ ಬಿರುಗಾಳಿ ಬೀಸಹತ್ತಿತು. ಕಲ್ಲಿಕೋಟೆಯ ಕಡೆಗೆ ಮೊರೆ ತಿರುವಿತು. ಕುವಾಲಂಪಟ್ಟಣದ ನೆರೆಹೊರೆಯಲ್ಲಿ ಬಂಡೆಗಲ್ಲಿನಮೇಲೆ ‘ ಅಲಿಮಾದಾದ ’ ಹಡಗವು ಬಲವಾಗಿ ಅಪ್ಪಳಿಸಿತು. ಆಗ ಭೂಶಿರದಿಂದ ಹಡಗವು ೧ ಮೈಲು ಹೊರಗಿತ್ತು. ಹಡಗದ ಮೇಲೆ ೧೬ ಮಂದಿ ಖಲಾಸಿಗಳಿದ್ದರು. ಮೂವರು ಚಿಕ್ಕ ಬಾಲಕರು. ೧೩ ಮಂದಿಗಳು ಬಿರುಗಾಳಿಯೊಳಗಿಂದ ಪಾರಾಗಿ ನೆಲಕಂಡಿರುವರು. ಮೂವ ಬಾಲಕರೂ, ಇಬ್ಬರೂ ಕಾಣೆ. ಹಡಗವು ಬಂಡೆಗಲ್ಲಿನ ಮೇಲೆ ಅಪ್ಪಳಿಸಿ ಮುಳುಗುತ್ತಿದ ಕೂಡಲೆ, ೧೬ ಮಂದಿಗಳೂ ಸಮುದ್ರದಲ್ಲಿ ಹಾರಿಕೊಂಡರು. ಚಿಕ್ಕ ಬಾಲಕರಿಗೆ ಆ ಪ್ರಸ್ತುತ್ಯ ಕಡಲಿನಲ್ಲಿ ಈಸಬರಲಿಲ್ಲ. ಬಾಲಕರ ತಂದೆಯವರು ತಮ್ಮ ತಮ್ಮ ಹುಡುಗರನ್ನು ತಮ್ಮ ತಮ್ಮ ಬೆನ್ನ ಮೇಲೇರಿಸಿಕೊಂಡು ಈಸ ಹತ್ತಿದರು. ಎಂಥ ಪುತ್ರಪ್ರೇಮ! ಹಡಗವು ಮುಳುಗಿದಾಗ ಕಗ್ಗತ್ತಲೆ; ಭಯಂಕರ ಕಡಲು; ತೆರೆಗಳೇನು ಪರ್ವತಪ್ರಾಯವಾಗಿ ಎದ್ದೇಳುತ್ತಿದ್ದವು. ಇಂಥ ಸ್ಥಿತಿಯಲ್ಲಿ ಚಿಕ್ಕ ಬಾಲಕರು ಬೆನ್ನ ಮೇಲಿಂದ ಜಾರಿ ಹೋಗುತ್ತಿದ್ದರು. ತಂದೆಗಳು ಅವರನ್ನು ಬದುಕಿಸಿಕೊಂಡು ಪಾರಾಗಲು ಯತ್ನಿಸಿದರು. ಆದರೆ, ಈಶೇಚ್ಛೆ! ಬಾಲಕರು ಎಲ್ಲೋ ಜಾರಿ ತಪ್ಪಿ ಹೋದರು. ಅವರ ಪತ್ತೆಯಿಲ್ಲ. ಬದುಕಿಬಂದ ೧೩ ಮಂದಿಗಳಾದರೂ ಸುಖದಿಂದ ಬಂದಿರುವರೇನು? ಬಂಡೆಗಲ್ಲಿನ ಮೇಲೆ ಬಿದ್ದು ಬಹಳ ಘಾಯಹೊಂದಿರುವರು. ಅಂತು ಮಲಬಾರ ದಂಡೆಯ ಮೇಲೆ ವಿಶೇಷ ಹಾವಳಿ. ಕ್ರೋಧನ ಸಂವತ್ಸರದ ಕ್ರೋಧವೇನಿದು?

— ಶ್ರೀ|| ಸುರೇಂದ್ರನಾಥ ಬಾನರ್ಜಿ, ಅಮರೇಂದ್ರನಾಥ ಚಟರ್ಜಿ, ಅತುಲ ಕೃಷ್ಣಘೋಷರವರಿಗೆ ೧೮೧೮ನೇ ಆಕ್ಟಿನ ಕಾಯಿದೆಯಂತೆ ವಿಚಾರವಿಲ್ಲದ ಬಂಧನದಲ್ಲಿಟ್ಟು ೧|| ವರ್ಷವಾಯಿತು. ಅವರಿಗೆ ಕಳೆದ ಶನಿವಾರ ತಾ. ೧೪ಕ್ಕೆ ಬಿಡುಗಡೆ ಮಾಡಿದರು. ಅವರು ಹುಟ್ಟಿ ಬೆಳೆದ ವಸ್ತಿಯಲ್ಲಿ ಇನ್ನೊಂದು ತಿಂಗಳು ಇರಬೇಕು. ಈ ಸ್ಥಳ ಮಿನಸ್ನಿಯ ಮನೆ ಬಿಟ್ಟು ಅವರು ಹೊರಗೆ ಹೋಗಬಾರದೆಂದು ವಿಧಿಸಲಾಗಿದೆ. ಅಂದರೆ, ಕಾರಾಗೃಹವಾಸದೊಳಗಿನ ಬಂದಿವಾಸವು ಅಂತ್ಯವಾಗಿ, ಮನೆಯೊಳಗಿನ ಬಂದಿವಾಸವು ಪ್ರಾಪ್ತವಾಗಿದೆ. ಶೈಲಿನಂತ ಮನೆಯಲ್ಲಿ ತಿಂಗಳು ಸರಕಾರವು ಪೂರೈಸುತ್ತದೋ ಏನೋ ತಿಳಿಯಲಿಲ್ಲ

— ಎಡ್‌ಮಿರಲ್ ಸರ ಎಡ್ಮಂಡ ಸ್ಲೇಡರವರ ಮಗಳಾದ ಕುಮಾರಿ ಮೆಡೆಲೀನ ಸ್ಲೇಡರವರು ಸತ್ಯಾಗ್ರಹಾಶ್ರಮದಲ್ಲಿ ಇರಹೊಂದಿರುವರು. ಮಹಾತ್ಮರ ತತ್ವಗಳನ್ನು ಅರಿತುಕೊಂಡು ಅವನ್ನು ಮಹಾತ್ಮರ ಸನ್ನಿಧಿಯಲ್ಲಿಯೇ ಕಲಿಯಲು ಯುರೋಪ ಖಂಡದಿಂದ ಅವರು ಇಲ್ಲಿಗೆ ಬಂದು ಖಾದಿಯ ಉಡುಪನ್ನು ಧರಿಸುತ್ತಿರುವರು. ಇವರು ಸತ್ಯಾಗ್ರಹಾಶ್ರಮದಲ್ಲಿ ನೂಲುವ ಇತ್ಯಾದಿ ಕೆಲಸ ಮಾಡುತ್ತಿರುವರು.

— ಅಖಿಲ ಭಾರತೀಯ ನೂಲುವ ಸಂಘದವರು ಬಂಗಾಲದ ಖಾದಿ ಪ್ರತಿಷ್ಠಾನ ಸಂಸ್ಥೆಗೆ ೧|| ಲಕ್ಷದ ನಿಧಿಯನ್ನು ಕೊಡಿಸುವರು. ಪ್ರಾಂತಗಳಲ್ಲೆಲ್ಲ ಪ್ರತಿನಿಧಿಗಳನ್ನಿಟ್ಟು ನೂಲುವ ಸಂಸ್ಥೆಗಳನ್ನು ಸ್ಥಾಪಿಸಬೇಕೆಂದು ಸತ್ಯಾಗ್ರಹಾಶ್ರಮದಲ್ಲಿ ಸೇರಿದ ಅಖಿಲ ಭಾರತೀಯ ನೂಲುವ ಸಂಘದವರು ನಿರ್ಣಯಿಸಿರುವರು. ಈ ವರೆಗೆ ಸಂಘದ ನಡೆದ ಮೇಲೆ ೧೧೧೦ ಸಭಾಸದರು ದಾಖಲಾಗಿರುವರು.

— ಅಖಿಲ ಭಾರತೀಯ ಬ್ರಾಹ್ಮಣೇತರ ಸಭೆಯು ಅಮರಾವತಿಯಲ್ಲಿ ಡಿಸಂಬರ ತಾ. ೨೭-೨೮-೨೯ನೇಗೆ ಸೇರುವದಿದೆ.

— ಶ್ರೀ|| ಜಯಕರ-ಕೇಳಕರರವರ ಅಧಿಕಾರತ್ಯಾಗವು ದೇಶಬಂಧುಗಳಿಗೆ ಅಪಮಾನಾಸ್ಪದವೆಂದು ದೇಶಬಂಧುಗಳ ‘ಫಾರವರ್ಡ’ ಪತ್ರಿಕೆಯು ಪ್ರಕಟಿಸಿದೆ.

ಕಾನಡಾವೃತ್ತ.

ಮಿತಿ ಕ್ಷಯನಾಮ ಸಂ॥ ಮಾರ್ಗಶೀರ್ಷ ಶು ೧೭ ಸೋಮವಾರ

ಬರೇ ಹುಳುಕು.

ಶ್ರೀ॥ ಜಯಕರ ಕೇಳಕರರವರ ಸಂಗ್ರಾಮ.

ಭಾರತೀಯ ರಾಜಕಾರಣವು ಮತ್ತು ಪ್ರಕ್ಷುಬ್ಧವಾಗಿದೆ. ನಾ॥ ತಾಂಬೇಯವರು ಸುರಕ್ಷಿತವಾಗಿ, ಸುಖದಿಂದ ಮಧ್ಯಪ್ರಾಂತ ಸರಕಾರದ ಅಂತಃಪುರದಲ್ಲಿ ರಮಿಸುತ್ತಿರುವಾಗ ಭಾರತೀಯ ರಾಜಕಾರಣವೆಲ್ಲ ಮತ್ತೊಮ್ಮೆ ಗೊಂದಲದಲ್ಲಿ ಬಿದ್ದಿದೆ. ನಾಗಪುರದಲ್ಲಿ ಸ್ವರಾಜ್ಯ ಪಕ್ಷದ ಕಾರ್ಯಕಾರಿ ಸಭೆಯಾಗಿ ನಾ॥ ತಾಂಬೇಯವರ ಅಪಕೃತ್ಯದ ನಿಷೇಧವಾಯಿತು. ಸ್ವರಾಜ್ಯ ಪಕ್ಷದ ಕಾರ್ಯಧೋರಣದಲ್ಲಿ ಬದಲಾವಣೆ ಮಾಡುವದು ಅವಶ್ಯವಿಲ್ಲೆಂದು ತೀರ್ಮಾನವಾಗಿ, ಅದರಂತೆ ಎಲ್ಲರೂ ನಡೆಕೊಳ್ಳಬೇಕೆಂದು ಗೊತ್ತಾಗಿ, ಬಿರುಗಾಳಿಯು ಶಾಂತವಾಯಿತೆನ್ನುವಷ್ಟರಲ್ಲಿ ಪುನಃ ಸೊಂಟರಗಾಳಿಯು ಬೀಸಹತ್ತಿದೆ. ಶ್ರೀ॥ ಜಯಕರ-ಕೇಳಕರರವರು ಸ್ವರಾಜ್ಯ ಪಕ್ಷದ ಕಾರ್ಯಕಾರಿ ಸಭೆಯ ಅಧಿಕಾರಸ್ಥಾನಗಳನ್ನು ತ್ಯಜಿಸಿ ಪುಣ್ಯಪಟ್ಟಣದಲ್ಲಿ ರಿಸ್ಪಾನ್ಸಿವ್ ಕೊ ಒಪರೇಶನ್ ಯಾನೆ ಪ್ರತಿಯೋಗಿ ಸಹಕಾರಿತೆಯ ಶಂಖ ಊದುತ್ತಿರುವರು. ಈ ಶಂಖನಾದದಿಂದ ಇಡೀ ಭರತಖಂಡದಲ್ಲಿ ಚರ್ಚೆ ನಡೆದಿದೆ.

ಮೊಟ್ಟಮೊದಲು, ಪ್ರತಿಯೋಗಿ ಸಹಕಾರಿತೆಯ ವ್ಯಾಖ್ಯೆ ಹೇಳುವದಾದ್ರೆ ರಿಸ್ಪಾನ್ಸಿವ್ ಕೊ-ಒಪರೇಶನ್, ಈ ಶಬ್ದಸಮುಚ್ಚಯವು ಲೋಕಮಾನ್ಯರ ಕಲ್ಪನೆಯದು. ಅಮೃತಸರದ ರಾಷ್ಟ್ರೀಯ ಸಭೆಯ ಸಮಯ ಬಾದಶಹರ ಜಾಹೀರನಾಮೆಗೆ ಉತ್ತರವಾಗಿ ಕೊಟ್ಟ ಶಬ್ದಸಮುಚ್ಚಯವಿದು. ಸರಕಾರವು ಮುಂದಾಗಿ ಬಂದು ಸಹಕಾರಿತೆಯ ಕೈಯೊಡ್ಡಿದರೆ ಪ್ರಜೆಗಳಾದರೂ ಅಷ್ಟೇ ಪ್ರಮಾಣದಿಂದ ಮುಂದಾಗಿ ತಮ್ಮ ಸಹಕಾರಿತೆಯ ಕೈ ನೀಡುವರು, ಇದಕ್ಕಿಂತ ಹೆಚ್ಚಿಗೆ ಅರ್ಥವು ಈ ಶಬ್ದದಿಂದ ಹೊರಡುವದಿಲ್ಲ. ಮತ್ತು ಪ್ರತಿಯೋಗಿ ಸಹಕಾರಿತೆಯ ಶಬ್ದಾರ್ಥವನ್ನು ದೇಶಕಾಲ ಸಂದರ್ಭದಿಂದ ನೋಡಿ ಆಯಾ ಕಾಲಕ್ಕೆ ತಕ್ಕ ರಾಜಕಾರಣಧೋರಣವನ್ನು ನಿಶ್ಚಯಿಸುವದು ಅಗತ್ಯವಿದ್ದು ಪ್ರತಿಯೋಗಿ ಸಹಕಾರಿತೆ ಎಂಬ ಶಬ್ದದಿಂದ ವ್ಯವಹಾರಿಕ ಕಾರ್ಯಧೋರಣವನ್ನು ಸಂಬೋಧಿಸುವದು ನಿಷ್ಪ್ರಯೋಜಕವು. ಆಳರಸರು ಸಹಕಾರಿತೆಯಿಂದ ಮುಂದಾಗಿ ಕೈ ನೀಡದಿದ್ದರೆ, ಲೋಕಮಾನ್ಯರ ಅನುಯಾಯಿಗಳು ಎಂದೂ ಮುಂದಾಗಿ ಕೈ ನೀಡಲಾರರು. ಇದು ಸ್ಪಷ್ಟವಿದೆ. ಇದೇ ಶಬ್ದಾರ್ಥದಿಂದ ಮಹಾತ್ಮರು "ಚೇಂಜ ಅಫ್ ಹಾರ್ಟ" ಯಾನೆ ಅಂತಃಕರಣದ ಬದಲಾವಣೆ ಎಂದು ಸಂಬೋಧಿಸಿರುವರು. ಇದರ ಅರ್ಥವಾದರೂ ರಿಸ್ಪಾನ್ಸಿವ್ ಕೊ ಒಪರೇಶನ್ ಈ ಶಬ್ದಸಮುಚ್ಚಯದಲ್ಲೇ ಅಡಕವಾದದ್ದಿದೆ. ಅಂತಃಕರಣದ ಬದಲಾವಣೆಯು ಎಂದಾಯಿತು, ಹ್ಯಾಗಾಯಿತು, ಎಂಬುವನ್ನು ನೋಡಿಕೊಂಡು ಅದಕ್ಕನುಗುಣವಾಗಿ ಕಾರ್ಯಧೋರಣದ ನಿಶ್ಚಯವಾಗಬೇಕು.

ಶಬ್ದಸಮುಚ್ಚಯದ ಅರ್ಥಗಳು ಅದಿಂತಿರಲಿ. ಶ್ರೀ॥ ಜಯಕರರವರ ಹೇಳಿಕೆ ಏನೆಂದು ನೋಡುವ. ಸ್ವರಾಜ್ಯ ಪಕ್ಷದವರು ಅಡ್ಡಗಟ್ಟುವ ಅಸಹಯೋಗವನ್ನು ಬಿಟ್ಟುಕೊಟ್ಟು ಆಳರಸರೊಡನೆ ಸಹಕಾರ್ಯ ಮಾಡಹತ್ತಿರುವರು, ಯಾನೆ ಧೋರಣದಲ್ಲಿ ರಿಸ್ಪಾನ್ಸಿವ್ ಕೊ ಒಪರೇಶನ್‌ದ ಧೋರಣದಂತೆ ಶ್ರೀ॥ ಪಟೇಲರ ಅಧ್ಯಕ್ಷಪದದ ಸ್ವೀಕಾರ ಇತ್ಯಾದಿ ಉದಾಹರಣೆಗಳನ್ನಿತ್ತು ಸ್ವರಾಜ್ಯ ಪಕ್ಷವು ತನ್ನ ಧೋರಣಕ್ಕೆ ರಿಸ್ಪಾನ್ಸಿವ್ ಕೊ ಒಪರೇಶನ್ ಎಂದು ನಾಮಕರಣ ಮಾಡಬೇಕೆಂದು ಅವರ ಹೇಳಿಕೆ. ಸ್ವರಾಜ್ಯ ಪಕ್ಷದ ಧೋರಣವು ಅವರಿಗೆ ಸಮ್ಮತವಿದೆ, ಈಗ ಇದ್ದಂತೆ ಮುಂದೆ ನಡೆಕೊಳ್ಳಲಿಕ್ಕೂ ಅವರ ಅಡ್ಡಿಯಿಲ್ಲ, ಆದರೆ, "ಹೆಸರು ಬದಲಾಯಿಸಿರಿ" ಎಂಬುದೇ ಅವರ ಹೇಳಿಕೆ. ಶ್ರೀ॥ ಜಯಕರರವರು ವಿಚಾರವಂತರು, ಯಾವಾಗಲೂ ನಾಮಾಭಿಧಾನಕ್ಕಿಂತ ಕಾರ್ಯದ ಕಡೆಗೆ ವಿಶೇಷ ಲಕ್ಷ್ಯಕೊಡುವವರೆಂದು ಅವರ ಖ್ಯಾತಿ. ಅಂಥವರು ಸ್ವರಾಜ್ಯ ಪಕ್ಷದ ಧೋರಣದ ನಾಮಕರಣಕ್ಕಾಗಿ ಕಾರ್ಯಕಾರಿ ಸಭೆಯೊಳಗಣ ಅಧಿಕಾರತ್ಯಾಗ ಮಾಡುವದೂ, ಸ್ವರಾಜ್ಯಪಕ್ಷದ ವಿರುದ್ಧವಾಗಿ ಇಕ್ಕಟ್ಟಿನಲ್ಲಿ ದೊಂಬಿಯನ್ನೆಬ್ಬಿಸುವದೂ ಬರೇ ಹುಳುಕುತನವು. ("What is in a name, call it by any other name, the rose will smell as sweet") ಹೆಸರಿನಲ್ಲೇನಿದೆ? ಯಾವದೇ ಹೆಸರಿನಿಂದ ಸಂಬೋಧಿಸಿದರೂ, ಗುಲಾಬಿ ಹೂವಿನ ಸುವಾಸನೆಯಲ್ಲಿ ಭೇದವಾಗುವದೇನು? ಶ್ರೀ॥ ಜಯಕರರಂಥ ಆಂಗ್ಲಭಾಷಾ ಪಂಡಿತರಿಗೆ ಈ ಉಕ್ತಿಯು ನೆನಪರಿಕೆಯಿದ್ದರೆ, ನಾಮಕರಣಕ್ಕಾಗಿ ಅವರೆಂದೂ ಬಡಿದಾಡುತ್ತಿದ್ದಿಲ್ಲ.

ಶ್ರೀ॥ ಕೇಳಕರರವರ ಪ್ರತಿಯೋಗಿ ಸಹಕಾರಿತೆಯಲ್ಲಿ ಸರಕಾರಿಸೇವೆಯೂ ಕೂಡ ಸೇರಿಹೋಗುತ್ತದೇನೆಂಬ ದೊಡ್ಡದೊಂದು ಭೀತಿಯಾಗಿದೆ. ನಾ॥ ತಾಂಬೇ ಪ್ರಕರಣದಲ್ಲಿ ಅವರು ಉದ್ಗರಿಸಿದ ನುಡಿಗಳ ಮೇಲಿಂದ ಈ ಅನುಮಾನವು ನಿರರ್ಥಕವಾಗಿ ತೋರುವದಿಲ್ಲ. ಅದಿಂತಿರಲಿ. ಪ್ರತಿಯೋಗಿ ಸಹಕಾರಿತೆಯ ಬೆಳಕಿನ ವಿಚಾರವನ್ನು ನಿರ್ಮಿಸಲಿಕ್ಕೆ ಶ್ರೀ॥ ಕೇಳಕರರವರು ಹುಳುಕು ಉಪಾಯಗಳನ್ನು ಕೈಕೊಂಡಿರುವರು. ಮಹಾರಾಷ್ಟ್ರದಲ್ಲಿ ಪ್ರತಿಯೋಗಿ ಸಹಕಾರಿತೆಯ ಬೀಜ ಬಿತ್ತಲು ಅವರು ಕೈಕೊಂಡ ಹುಳುಕುಗಳ್ಯಾವವು? "ಪಂಡಿತ ಮೋತಿಲಾಲರು ಮಹಾರಾಷ್ಟ್ರದವರಿಗೆ ತಿರಸ್ಕರಿಸುತ್ತಾರೆ. ರಾಷ್ಟ್ರೀಯ ಸಭೆಯು ಮಹಾರಾಷ್ಟ್ರದ ದಾಸಿಯಲ್ಲೆಂದು ಅವರು ಒಮ್ಮೆ ನುಡಿದಿದ್ದರು. ಇನ್ನೊಮ್ಮೆ ಮರಾಠರ ವೈಭವಕಾಲದ ಮರಾಠಾದರಿಯ ವಿಷಯ ತಿರಸ್ಕಾರಯುಕ್ತ ನುಡಿಗಳನ್ನಾಡಿದ್ದರು. ಮತ್ತೊಂದು ಕಾರಣವೇನೆಂದು ಬಲ್ಲಿರೋ? 'ಪ್ರತಿಯೋಗಿ ಸಹಕಾರಿತೆಯು' ಎಂಬ ಶಬ್ದಸಮುಚ್ಚಯವು ಲೋಕಮಾನ್ಯರಿಂದ ಉದ್ಭವವಾಯಿತು, ಲೋಕಮಾನ್ಯರ ದ್ವೇಷದಿಂದ ಈ ಶಬ್ದಗಳನ್ನು ಉಪಯೋಗಿಸಲು ಪಂಡಿತ ನೆಹರೂ ಇತ್ಯಾದಿ ಮಂದಿಗಳು ಒಪ್ಪುವದಿಲ್ಲ." ಈ ವಿಚಾರಸರಣಿಯನ್ನು ಕೇಳಿ, ಯಾರೂ ಕೊಕ್ಕನೆ ನಗದಿರರು. ಶ್ರೀ॥ ನರಸೋಪಂತ ಕೇಳಕರರಂಥ ರಾಜಕಾರಣ ಧುರಂಧರರು ಹೀಗೆ ಆಡುವ ಮಾತನ್ನು ಕೇಳಿ ಎಲ್ಲರಿಗೂ ವಿಷಾದವಾಗುವದು. ವಿಚಾರವಂತರು ಅವಿಚಾರಕ್ಕೀಡಾಗುವದು ನಮ್ಮ ದುರ್ಭಾಗ್ಯವಲ್ಲವೇ!

ಆದರೆ, ಮಹಾರಾಷ್ಟ್ರವು ಶ್ರೀ॥ ನರಸೋಪಂತ ಕೆಳಕರರವರ ಬೋಧನೆಗೆ ಬಲಿಬಿದ್ದು ಸ್ವರಾಜ್ಯಪಕ್ಷವನ್ನು ಇಬ್ಭಾಗಮಾಡಲು ತಯಾರಿಲ್ಲ. ಮಧ್ಯಪ್ರಾಂತದ ಚಾಂದಾದೊಳಗಿನ ಮ್ಯುನಿಸಿಪಾಲಿಟಿ ಹಾಗು ಲೋಕಲ್ ಬೋರ್ಡಿನವರು ಪಂಡಿತ ಮೋತಿಲಾಲರವರಿಗೆ ಅರ್ಪಿಸಿದ ಮಾನಪತ್ರದಲ್ಲಿ ತಾವು ನಿಷ್ಠೆಯಿಂದ ಸ್ವರಾಜ್ಯ ಪಕ್ಷದ ಪ್ರಚಲಿತ ಕಾರ್ಯಕ್ರಮವನ್ನು ಪುರಸ್ಕರಿಸುವದಾಗಿ ಆಶ್ವಾಸಿಸಿರುವರು. ಆ ಸಮಯ ಮಾನಪತ್ರಕ್ಕೆ ಉತ್ತರವನ್ನೀಯುವಾಗ ನೆಹರೂರವರು ನುಡಿದದ್ದೇನಂದರೆ – "ಲೋಕಮಾನ್ಯರ ದ್ವೇಷವನ್ನು ನಾನು ಸಾಧಿಸುತ್ತಿದ್ದರೆ, ಪುಣ್ಯನಗರಿಯಲ್ಲಿ ಜರುಗಿದ ಲೋಕಮಾನ್ಯರ ಪ್ರತಿಮೆಯ ಅನಾವರಣ ಸಮಾರಂಭಕ್ಕಾಗಿ ಶ್ರೀ॥ ಕೇಳಕರರವರು ನನಗೆ ಯಾಕೆ ನಿಮಂತ್ರಿಸುತ್ತಿದ್ದರು? ರಾಷ್ಟ್ರೀಯ ಸಭೆಯು ಮಹಾರಾಷ್ಟ್ರದ ದಾಸಿಯಲ್ಲವೆಂದು ನಾನು ಉದ್ಗರಿಸಿದ್ದು ನಿಜವಿರುತ್ತದೆ. ಅದರಂತೆಯೇ ಅದು ಯಾವ ಪ್ರಾಂತದ್ದೂ ಇರುವದಿಲ್ಲ. ಇದರಿಂದ ಮಹಾರಾಷ್ಟ್ರವು ಹೇಗೆ ಅಪಮಾನಕ್ಕೀಡಾಯಿತೆಂದು ನನಗರಿಯದ ಮಾತು. ಮರಾಠಾ ದರಿ ವಿಷಯ ನನಗೇನ ತಿರಸ್ಕಾರವಿಲ್ಲ. ಮರಾಠಾ ದರಿಯು ಮರಾಠರ ಸಾಹಸದ ದ್ಯೋತಕವು. ಆ ಕುರಿತು ನನಗಿನ್ನೂ

ಅದರವಿದೆ. ನಾನು ಪ್ರಸಂಗವಶಾತ್ ಆಡಿದ ನುಡಿಗಳ ಸಂದರ್ಭ ಹೇಳದೆ, ಅವನ್ನು ಬಿಂಟಿಯಾಗಿ ಹೆಕ್ಕಿ ತೆಗೆದು, ಶ್ರೀ॥ ಕೇಳಕರರವರು ತಮ್ಮ ಪುಣ್ಯ ಪುರುಷರಿಗೆ ಅರ್ಪಿಸಿ, ನನ್ನ ಮೇಲೆ ಸಾಧಿಸುತ್ತಿರುವ ವ್ಯಕ್ತಿಕ ಸಿಟ್ಟನ್ನು ಪರಿಹರಿಸಿಕೊಂಡಿರುವರು."

ಪಂಡಿತ ಮೋತೀಲಾಲ ನೆಹರೂರವರಂಥ ನಿರಪೇಕ್ಷ ಲೋಕನಾಯಕರು ಶ್ರೀ॥ ಕೇಳಕರರವರ ವಿಷಯ ಆಡಿದ ನುಡಿಗಳನ್ನು ಕೇಳಿ, ನಮಗೆ ಬಹಳೇ ವ್ಯಸನವಾಗುತ್ತದೆ. ದೇಶಸೇವೆಯ, ನಿರಪೇಕ್ಷ ಬುದ್ಧಿಯ ನಿಸ್ವಾರ್ಥ ರಾಜಕಾರಣದ ಪುರಸ್ಕರ್ತರೆಂದು, ಲೋಕಮಾನ್ಯರ ಶಿಷ್ಯರೆಂದು, ವಿಖ್ಯಾತ 'ಕೇಸರೀ' ಪತ್ರದ ಚಾಲಕರೆಂದು ಖ್ಯಾತಿಗೊಂಡ ಶ್ರೀ॥ ಕೇಳಕರರವರು, ಪಂಡಿತ ನೆಹರೂರವರ ಮೇಲೆ ಸಿಟ್ಟು ಹಿಡಿಯುವ ಕಾರಣವೇನು? ಆ ಸಿಟ್ಟಿನ ಪರಿಹಾರಕ್ಕಾಗಿ ಪ್ರತಿಯೋಗಿ ಸಹಕಾರಿತೆಯ ಧ್ವಜವನ್ನು ಮುಂದೆ ಮಾಡಿ, ಶ್ರೀ॥ ಜಯಕರರವರ ಬೆಂಬಲದಿಂದ ಸ್ವರಾಜ್ಯ ಪಕ್ಷದ ಕೋಟೆಯನ್ನು ಕುಂದರಿಸಲು ಹೊರಟದ್ದು ಅತ್ಯಂತ ಶೋಚನೀಯವು. ಲೋಕಮಾನ್ಯರು ಸರಕಾರಿ ಸೇವೆಯ ಸುವರ್ಣಶೃಂಖಲೆಯನ್ನು ತ್ಯಜಿಸಲು ಜೀವನಾನ್ನವಿರುವವರೆಗೆ ಬೋಧಿಸಿ ಕೈಲಾಸವಾಸಿಗಳಾದರು. ಅಂಥ ಪುಣ್ಯಾತ್ಮರ ಅಗ್ರಪೂಜೆಯ ಶಿಷ್ಯರೆಂದು ಮೆರೆಯುವ ಶ್ರೀ॥ ಕೇಳಕರರವರ ರಾಜಕಾರಣವನ್ನು ಪರಾಮರ್ಶಿಸಿದರೆ ಲೋಕಮಾನ್ಯರ ನಿಸ್ವಾರ್ಥ ದೇಶಸೇವೆಯ ಪಾಠಗಳನ್ನು ಕಲಿಸುವ ಸಾಮರ್ಥ್ಯವು ಇವರಲ್ಲಿರುವದಿಲ್ಲೆಂಬುದು ಸ್ಪಷ್ಟವಾಗುತ್ತದೆ. ಪ್ರತಿಯೋಗಿ ಸಹಕಾರಿತೆಯ ಹುಳುಕು ಎಬ್ಬಿಸಿ, ಶ್ರೀ॥ ಜಯಕರ-ಕೇಳಕರರವರು ಎಬ್ಬಿಸಿದ ಬೆಕ್ಕಿನ ಬಿಡಾರಕ್ಕೆ ಬೆರಿಸ್ಟರ ಅಭ್ಯಂಕರ, ಶ್ರೀ॥ ಖಾಡಿಲಕರರವರಂಥ ಮಹಾರಾಷ್ಟ್ರೀಯರೇ ಪ್ರತಿಕೂಲರಿರುವಾಗ, ಶ್ರೀ॥ ಕೇಳಕರರವರ ಹುಳುಕು ಫಲಪ್ರದವಾದೀತೆಂತ ತೋರುವದಿಲ್ಲ. ಆದರೂ, ವಿಚಾರವಂತ ಲೋಕನಾಯಕರು ಹುಳುಕಿಗೀಡಾಗುವದು ದೇಶದ ದುರ್ಭಾಗ್ಯವಲ್ಲವೆ! ಇನ್ನೂ ನಮ್ಮ ತರಣೋಪಾಯದ ಸಾಧನೆಯು ದೂರವಿರುವದೇನು!

ಸ್ಫುಟ ಸೂಚನೆಗಳು.

೧. ಪುನಃ ಅಸ್ಪೃಶ್ಯೋದ್ಧಾರವು ಭರತಖಂಡದ ರಾಜಕಾರಣದಲ್ಲಿ ಪ್ರಾಮುಖ್ಯವಾಗಿ ತಲೆದೋರಿದೆ. ತಿರವಾನೂರಿನ ಎತಿರಾಜ ದಾಸರಿ ಎಂಬ ಅಸ್ಪೃಶ್ಯರೊಬ್ಬರು ಪದ್ಮಾವತಿ ದೇವಾಲಯವನ್ನು ಸೇರಿ ಪದಭ್ರಷ್ಟಗೊಳಿಸಿದ ಬಗ್ಗೆ ಬಡವನ ಮೇಲೆ ತಿರುಪತಿಯ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಖಟ್ಲೆ ನಡೆದು ಅವನಿಗೆ ೭೫ ರೂಪಾಯಿ ದಂಡವಾಗಿದೆ; ದಂಡ ತೆರದಿದ್ದಲ್ಲಿ ೧ ತಿಂಗಳ ಕಠಿಣ ಸಜೆ ಅನುಭವಿಸಬೇಕೆಂದೂ ಮೆಜಿಸ್ಟ್ರೇಟರು ವಿಧಿಸಿರುವರು. ಅಸ್ಪೃಶ್ಯರ ಬಡತನವನ್ನು ಲಕ್ಷಿಸಿದರೆ, ಹೊಟ್ಟೆಯ ಗೋಳಿನ ಪರಿಹಾರಕ್ಕಾಗಿ ಹಗಲಿರುಳು ಕಷ್ಟ ಮಾಡುವದನ್ನು ಕಂಡರೆ, ೭೫ ರೂಪಾಯಿಗಳ ದಂಡ ವಿಧಿಸುವದು ವಿಷ್ಕುರತನವೆಂದು ಯಾರೂ ಹೇಳುವರು. ಅಪರಾಧವಾದರೂ ಯಾವ ಪ್ರಕಾರದ್ದು? ಎತಿರಾಜ ದಾಸರಿಯವರು ಖಟ್ಲೆಯಲ್ಲಿ ಕೊಟ್ಟ ಕೈಫೀಯತು ಮನನೀಯವಿದೆ. "ನಾನು ದೇವಿ ಶ್ರೀ ಪದ್ಮಾವತಿಯ ಮೇಲಣ ಭಕ್ತಿಯಿಂದ ತನ್ಮಯನಾದೆ, ಮೈಮರೆತೆ; ನನ್ನ ಜಾತಿಗಿರುವ ಪ್ರವೇಶದ ಪ್ರತಿಬಂಧವನ್ನು ಮರೆತುಹೋದೆ, ಭಕ್ತಿಭರಿತನಾಗಿ ಶ್ರೀ ಪದ್ಮಾವತಿಯ ಚರಣಾರವಿಂದಗಳಲ್ಲಿ ಹಣ್ಣು–ಕಾಯಿಗಳನ್ನು ಸಮರ್ಪಿಸಿದೆ." ಈ ಕೈಫೀಯತು ಕೇಳಿ ಯಾರ ಕರಳು ಕರಗದು? ಶ್ರೀ ಪದ್ಮಾವತಿಯ ಸಾನ್ನಿಧ್ಯವು ಸಮಸ್ತ ಸನಾತನಿಗಳಿಗೂ ಪವಿತ್ರವಿದೆ. ಜಾತಿಯಿಂದ ಎತಿರಾಜ ದಾಸರಿಯು ಅಸ್ಪೃಶ್ಯನಾದರೂ, ಆತನ ಭಕ್ತಿಯು ಕರ್ಮನಿಷ್ಠ ಸನಾತನಿಗಳಿಗೂ ಪೂಜ್ಯವಾಗಿರುವದಿಲ್ಲವೇ? ಭಗವಂತನು ಭಕ್ತರ ಹೃದಯದಲ್ಲಿ ತಾನು ವಾಸವಾಗಿರುತ್ತೇನೆಂದು ಆಡಿದ ವಚನವನ್ನು ಶ್ರೀ ಪದ್ಮಾವತಿ ದೇವಾಲಯದವರು ನೆನಸಿದ್ದರೆ, ಆತನ ಮೇಲೆ ಎಂದೂ ಖಟ್ಲೆ ಮಾಡುತ್ತಿದ್ದರೇ? ಸನಾತನಿಗಳಿಗೆ ಪರಮ ಪೂಜ್ಯನಾದ ಪಂಢರಪುರದ ಶ್ರೀ ವಿಠ್ಠಲನು ಭಕ್ತಶಿರೋಮಣಿಯಾದ, ಔದಾರ್ಯನಿಧಿಯಾದ ದಾಮಾಜೀಪಂತರ ದರ್ಶನಕ್ಕಾಗಿ ಅಸ್ಪೃಶ್ಯವೇಷವನ್ನು ಧರಿಸಿ ಬಾದಶಹನ ಕಡೆಗೆ ಸಾಗಿಹೋದ ಹಕೀಕತು ಸನಾತನಿಗಳೆಲ್ಲರೂ ನಂಬುತ್ತಿರುವಾಗ ಭಕ್ತಿಯಿಂದ, ಪ್ರೇಮದಿಂದ, ಉಲ್ಹಾಸದಿಂದ ಈ ಕಥೆಯನ್ನು ಓದುತ್ತಿರುವಾಗ, ಕೇಳುತ್ತಿರುವಾಗ, ಶ್ರೀ ದೇವರ ಭಕ್ತಿಯಿಂದ ತನ್ಮಯನಾದ ಎತಿರಾಜ ದಾಸರಿಯನ್ನು ಶಿಕ್ಷಿಸುವದು ಅಧರ್ಮವೆಂದು ಯಾರೂ ಹೇಳುವರು. ಸನಾತನಿಗಳು ದುರಾಗ್ರಹವನ್ನು ಬಿಟ್ಟುಕೊಟ್ಟು, ಸನಾತನ ಧರ್ಮಭಕ್ತಿಯಿಂದ ಪ್ರೇರಿತರಾಗಿರುವ ಅಸ್ಪೃಶ್ಯ ಬಾಂಧವರ ಮೇಲಿನ ಅಸ್ಪೃಶ್ಯತೆಯ ಕಲಂಕವನ್ನು ಹೋಗಲಾಡಿಸಿ, ಸನಾತನ ಧರ್ಮರಾಜ್ಯವನ್ನು ಸಕಲರಿಗೂ ಸರಿಯಾಗಿ ನಡಿಸಿಕೊಳ್ಳುವಂತೆ ವ್ಯವಸ್ಥೆಗೊಳಿಸಬೇಕಾಗಿ ಸನಾತನ ಧರ್ಮಾಭಿಮಾನಿಗಳೆಲ್ಲರೂ ಬಯಸುವ ದಿನಗಳಿವು.

೨ ಇದೇ ಸಮಯ, ಆರ್ಯ ಸಮಾಜದವರು ದಕ್ಷಿಣ ಹಿಂದುಸ್ಥಾನದ ಮಾಲಘಾಟದಲ್ಲಿ ನಡಿಸುವ ಅಸ್ಪೃಶ್ಯೋದ್ಧಾರ ಕಾರ್ಯದ ಉಲ್ಲೇಖ ಮಾಡತಕ್ಕದ್ದಾಗಿದೆ. ಆರ್ಯ ಸಮಾಜದವರು ಪಂಜಾಬದಲ್ಲಿ ನಡಿಸುವ ಕಾರ್ಯವನ್ನು ಸಮಸ್ತರೂ ಬಲ್ಲರು, ವೇದಗಳನ್ನು ಪ್ರಮಾಣವೆಂದೆಣಿಸಿ, ಈ ಸಮಾಜದವರು ಹೊಸ ಪಂಥವನ್ನು ಸ್ಥಾಪಿಸಿರುವರು. ಸನಾತನ ಧರ್ಮದಲ್ಲಿ ಸೇರಲಿಚ್ಛಿಸುವವರಿಗೆ ಈ ಸಮಾಜದವರು ಧರ್ಮದೀಕ್ಷೆಯನ್ನಿತ್ತು ಪುನೀತರಾಗಿಸುತ್ತಾರೆ. ಈ ಸಮಾಜದಲ್ಲಿ ಜಾತಿಭೇದವಿಲ್ಲ; ಉಚ್ಚ-ನೀಚ ಭಾವವಿಲ್ಲ. ಕ್ರಿಸ್ತ ಧರ್ಮದಂತೆ, ಇಸ್ಲಾಮು ಧರ್ಮದಂತೆ, ಸಮಸ್ತ ಆರ್ಯಸಮಾಜದವರೂ ಒಂದೇ ತರಗತಿಯವರು. ದಕ್ಷಿಣ ಹಿಂದುಸ್ಥಾನದೊಳಗಿನ ಎಝುವಾ ಜಾತಿಯ ಅಸ್ಪೃಶ್ಯರ ಕಷ್ಟಗಳು ಮಿತಿಮೀರಿದವು. ಇವನ್ನು ತಾಳಲಾರದೆ, ಎಝುವಾ ಜಾತಿಯವರು ತಮ್ಮ ಕಷ್ಟಗಳ ಪರಿಹಾರ ಮಾಡದಿದ್ದರೆ, ನಾವು ಧರ್ಮಾಂತರ ಮಾಡುವೆವೆಂದು ಸಾರಿ ಹೇಳಿದರು. ಆಗ ಪಂಜಾಬದ ಆರ್ಯ ಸಮಾಜದವರು ಅಲ್ಲಿ ಹೋಗಿ, ಅವರಿಗೆ ಸಮಾಜ ಪದ್ಧತಿಯಂತೆ ಪ್ರಾಯಶ್ಚಿತ್ತವನ್ನಿತ್ತು ಪಾವನ ಮಾಡಿದರು. ಪಾವನರಾದವರು ಮಾಲಘಾಟದೊಳಗಿನ ಕಲಾಪತಿಯ ಅಗ್ರಹಾರ ಮಾರ್ಗದಿಂದ ಆಡ್ಡಾಡಹತ್ತಿದರು, ಕಲಾಪತಿ ಮಾರ್ಗದ ಮೇಲೆ ಅಸ್ಪೃಶ್ಯರಿಗೆ ಪ್ರವೇಶವಿರಲಿಲ್ಲ. ಆರ್ಯ ಸಮಾಜದ ಪದ್ಧತಿಯಿಂದ ಪಾವನರಾದ ಅಸ್ಪೃಶ್ಯರಿಗೆ ಆಡ್ಡಾಡಲು ಅಗ್ರಹಾರದ ಬ್ರಾಹ್ಮಣರು ಅಡ್ಡಿಮಾಡಿದರು. ಆಗ ಕಲೆಕ್ಟರರು ಸ್ವತಃ ಹೋಗಿ ಆರ್ಯಸಮಾಜದ ಅನುಯಾಯಿಗಳಿಗೆ ಆಡ್ಡಾಡಲು ಎಲ್ಲೆಲ್ಲಿಯೂ ಪ್ರತಿಬಂಧವಿಲ್ಲೆಂದು ತಿಳಿಸಿಹೇಳಿ, ಹಾಗೆ ಪ್ರತಿಬಂಧ ಮಾಡಬಾರದೆಂದು ಬುದ್ಧಿ ಹೇಳಿ, ಪ್ರತಿಬಂಧ ಮಾಡಿ ಕಾಯಿದೆಯನ್ನು ಉಲ್ಲಂಘಿಸುವವರಿಗೆ ಕಾಯಿದೆಯಂತೆ ಶಾಸನವಾಗುವದೆಂದು ನಿಶ್ಚಯಪೂರ್ವಕ ನುಡಿದರು. ಇದರಿಂದ ಧರ್ಮಪರಿಪಾಲನದ ಮುರಳು ಕೆರಗಿಳಿದು, ಅಸ್ಪೃಶ್ಯರಿಗೆ ಅಗ್ರಹಾರದ ಮಾರ್ಗದಲ್ಲಿ ಓಡಾಡಲು ಅಧಿಕಾರಪ್ರಾಪ್ತಿಯಾಯಿತು. ರಾಜ್ಯಾಧಿಕಾರಿಗಳು ಪ್ರಜಾಧಿಕಾರಪರಿಪಾಲನದ ಜವಾಬದಾರಿಯನ್ನರಿತು ಧೈರ್ಯದಿಂದ ವರ್ತಿಸಿದರೆ, ಒದಗುವ ಸುಪರಿಣಾಮದ ಕಥೆಯಿದು.

೩. ಈಗ ಅಧಿಕಾರಿಗಳು ಎದೆಗುಂದಿದರೆ, ಅಥವಾ ಬೀಗಗೌರವ ಪಾಲನ ಮಾಡಲು ಹವಣಿಸಿದರೆ, ಒದಗುವ ಅನರ್ಥಗಳನ್ನು ಹೇಳುವೆವು. ಕಲಾಪತಿಯಲ್ಲಿ ಕಳೆದ ೧೪ನೇ ತಾರೀಖಿಗೆ ರಥೋತ್ಸವವಿತ್ತು. ಈ ಸಮಯ ಆರ್ಯಸಮಾಜಕ್ಕೆ ಸೇರಿ ಹೊಸ ದೀಕ್ಷೆ ಪಡೆದ ಎಝುವಾ ಜಾತಿಯವರು ರಥೋತ್ಸವದಲ್ಲಿ ಉಲ್ಹಾಸದಿಂದ ಸೇರುವರೆಂದು ಕರ್ಮನಿಷ್ಠ ಬ್ರಾಹ್ಮಣರು ಬೆದರಿ, ಹಾಗೆ ಅಸ್ಪೃಶ್ಯ ಎಝುವರು ಅಗ್ರಹಾರ ಮಾರ್ಗದಲ್ಲಿ ರಥೋತ್ಸವಕ್ಕೆ ಬರದಂತೆ ಯತ್ನ ನಡಿಸಹತ್ತಿದರು. ಅದೇ ಸಂಧಿಯಲ್ಲಿ ಆರ್ಯಸಮಾಜದ ಪುರಸ್ಕರ್ತರಾದ ಸ್ವಾಮಿ ಶ್ರೀ ಶ್ರದ್ಧಾನಂದಜಿಯವರು ಮಾಲಘಾಟಿಗೆ ಹೋಗಿದ್ದರು. ಅಲ್ಲಿಯ ಸಬ್‌ಡಿವ್ಹಿಜನಲ್ ಮೆಜಿಸ್ಟ್ರೇಟರವರು ಅವರೊಡನೆ ಆಲೋಚಿಸಿ ಆರ್ಯಸಮಾಜಕ್ಕೆ ಸೇರಿದ ಎಝುವರು ಚಿಕ್ಕ ಚಿಕ್ಕ ತಂಡ ಮಾಡಿಕೊಂಡು ಶಾಂತತೆಯಿಂದ ಉತ್ಸವದಲ್ಲಿ ಸೇರಬೇಕೆಂದು ಗೊತ್ತಾಯಿತು. ಮುಂದೆ ಏನಾಯಿತೋ ಏನೋ, ಆರ್ಯ ಸಮಾಜದ ಪ್ರಚಾರಕರಾದ ಪಂಡಿತ ಋಷಿರಾಮರವರಿಗೆ ಸಬ್ ಡಿವ್ಹಿಜನಲ್ ಮೆಜಿಸ್ಟ್ರೇಟರು ಪತ್ರ ಬರೆದು ತಿಳಿಸಿದ್ದೇನಂದರೆ.— "ಆರ್ಯ ಸಮಾಜದಲ್ಲಿ ಸೇರಿದ ಎಝುವಾರವರಿಗೆ ಕಲಾಪತಿಯ ಅಗ್ರಹಾರದ ಬ್ರಾಹ್ಮಣರು ಅಗ್ರಹಾರಗಳೊಳಗಿನ ಮಾರ್ಗಗಳ ಮೇಲೆ ಪ್ರವೇಶವನ್ನೀಯಲು ಒಡಂಬಡುವದಿಲ್ಲ. ಎಝುವರವರು ಆರ್ಯಸಮಾಜದೀಕ್ಷೆ ಪಡೆದರೂ, ಅವರ ಹಳೆಯ ಮೇಲಿನ ಅಸ್ಪೃಶ್ಯತೆಯ ಕಲಂಕವು ಅಷ್ಟು ತೊಳೆದು ಹೋಗುವದಿಲ್ಲೆಂದು ಬ್ರಾಹ್ಮಣರ ಹೇಳಿಕೆಯಿದೆ. ಆರ್ಯ ಸಮಾಜದ ಅಸ್ಪೃಶ್ಯರು ದಿವಾಣಿ ಕೋರ್ಟಿನಲ್ಲಿ ತಮ್ಮ ಅಧಿಕಾರಸ್ಥಾಪನೆ ಮಾಡುವವರೆಗೆ ಅವರಿಗೆ ಅಗ್ರಹಾರಗಳಲ್ಲಿ ಪ್ರವೇಶಿಸಲು ಇಂಬು ಕೊಡಲಾಗದು." ಪಂಡಿತ ಋಷಿರಾಮರವರು ಇದಕ್ಕೆ ಕೂಡಲೇ ಉತ್ತರವನ್ನಿತ್ತರು. ಆರ್ಯ ಸಮಾಜದಲ್ಲಿ ಜಾತಿಭೇದವಿಲ್ಲವಾಗಿಯೂ, ಅಖಿಲ ಭರತಖಂಡದಲ್ಲಿ ಅವರಿಗೆಲ್ಲರಿಗೆ ಸಮಾನವಾಗಿ ನಡಿಸಿಕೊ

ರ್ಥ್ಯಕಿತ್ತಾದಾಗಿಯೂ, ಅವರಿಗೆ ವಿರೋಧ ಮಾಡುವವರೇ ಬೇಕಾದರೆ ದಿವಾಣಿ ಕೋರ್ಟಿಗೆ ಹೋಗಬೇಕಾಗಿಯೂ, ರಥೋತ್ಸವದ ಸಮಯ ಪ್ರತಿಬಂಧವಾಸ್ಪಲ್ಲಿ ಹಕ್ಕುಸ್ಥಾಪನೆಗಾಗಿ ಸತ್ಯಾಗ್ರಹ ಯುಕ್ತವಾಗುವದಾಗಿಯೂ ಶ್ರೀಪಿರಾಮರವರು ತಿಳಿಸಿದರು. ಒಳಿಕ, ಶ್ರದ್ಧಾನಂದ ಸ್ವಾಮಿಯವರಿಗೂ, ಪೋಲೀಸ ಅಧಿಕಾರಿಗಳಿಗೂ ಚರ್ಚೆಯಾಯಿತು. ನಿರ್ಬಂಧಿಸಿದ ಪ್ರತಿಬಂಧಿಸಿದ ಹೊರತು, ಎರುಕುವರವರು ಉತ್ಸವದಲ್ಲಿ ಸೇರದಿರಲಾರರೆಂದು ಸ್ವಾಮಿಯವರು ಒತ್ತಿ ಹೇಳಿದರು. ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಸತ್ವಪರೀಕ್ಷೆಯ ಸಮಯವು ಆಗ ಬಂತು. ಈ ಪರೀಕ್ಷೆಯೊಳಗೆ ಅವರು ಪಾಸಾಗುತ್ತಾರೆಂದು ಪ್ರತಿಗಳು ನೋಡುತ್ತಿರುವಷ್ಟರಲ್ಲಿ, ಸುಲಭ ಸಾಧ್ಯವಾದ ಶ್ರೀ — ಹೋದ ಕಲಂಗಳ ದನ್ನಯು ಪ್ರತಿಬಂಧಕ ಹುಕುಮನ್ನು ಆರ್ಯಸಮಾಜದವರ ಮೇಲೆ ಹೊರಡಿಸಿ ಅವರು ಕಾಲಾವಧಿಯ ಅಗ್ರಹಾರದೊಳಗಣ ಬ್ರಾಹ್ಮಣರ ಮನಸ್ಸಿಡುವರು; ಪ್ರತಿಗಳ ಹಕ್ಕು ನಿರ್ಣಯಕ ಪ್ರತಿಬಂಧಕ ಹುಕುಮಿನ ಸಾಗರ ದಲ್ಲಿ ಕೇಳಿಕೊಂಡು ೩ ತಿಂಗಳುಗಳ ವರೆಗೆ ಎರುಕುವರವರು ಆ ಮಾರ್ಗದ ಮೇಲಿಂದ ಅಡ್ಡಾಡಿದಾಗ ವ್ಯಾಲಿಗೆಯಾಗದಿರಲು, ರಥೋತ್ಸವದ ಸಮಯವೇ ಧರ್ಮದ ಮತಿಯು ಮರುಳು ಅವರಿಗೆ ಹತ್ತುವದೂ, ಅದನ್ನು ಕಾಯಲು ರಾಜ್ಯಾಧಿಕಾರಿಗಳ ಗತಿಗೆಟ್ಟು ಮುಂದಾಗುವದೂ ಶೋಚನೀಯ. ವಿಷಯ ಸ್ಥಳ ಯಾವದಿಂದ ಹಿಂದೆ ಪಡೆ? ಎರುಕುವರವರಿಗೆ ಅಗ್ರಹಾರದಲ್ಲಿ ಪ್ರವೇಶ ಕೊಟ್ಟರೆ, ರಥೋತ್ಸವದ ಸಮಯದಲ್ಲಿಯೂ ಮೆಜಿಸ್ಟ್ರೇಟರು ಮಡಿ ಬ್ರಾಹ್ಮಣರಿಗೆ ವಿಶ್ವಾಸಪೂರ್ವಕವಾದ ಬುದ್ಧಿವಾದ ಹೇಳಿದರೆ, ಅವರಿಗೇ ದಿವಾಣಿ ಕೋರ್ಟು ತೋರಿಸಿದ್ದರೆ, ಶ್ರೀ ಪ್ರೆ. ಕೋರ್ಟಿನ ರಾಕ್ಷಸೀ ಉಪಾಯದ ಅಗತ್ಯವು ಎಂದೂ ಬೀಳುತ್ತಿದ್ದಿಲ್ಲ ಇಂದಿ.

೪. ಈ ಕುರಿತು ಇನ್ನೊಂದು ವಿಚಾರವನ್ನು ನಮೂದಿಸುವದು ಅವಶ್ಯವು. ಆರ್ಯಸಮಾಜದ ದೀಕ್ಷೆ ಪಡೆದ ಎರುಕುವರವರ ಮೇಲಿನ ಅಸ್ಪೃಶ್ಯತೆಯ ಕಲಂಕವು ಅಳಿದು ತೊಳೆದು ಹೋಗುವದಿಲ್ಲೆಂಬ ಬ್ರಾಹ್ಮಣರ ಹೇಳಿಕೆಗೆ ಮೆಜಿಸ್ಟ್ರೇಟರು ಪಕ್ಷ ದಿವಾಗುತ್ತಾರಲ್ಲವೇ? ಎರುಕುವರವರು ಕ್ರೈಸ್ತಮತವನ್ನಾಗಲಿ, ಇಸ್ಲಾಮು ಧರ್ಮವನ್ನಾಗಲಿ ಅಂಗೀಕರಿಸಿದ್ದರೆ, ಅಗ್ರಹಾರದ ಸಾರ್ವಜನಿಕ ಮಾರ್ಗಗಳ ಮೇಲೆ ಸೇರಲು ಮಡಿ ಬ್ರಾಹ್ಮಣರು ಅಡ್ಡಗಟ್ಟಿದರೆ, ಮೆಜಿಸ್ಟ್ರೇಟರು ಗಳಳನೇ ಕಲಮಿನ ಪಾಶುಪತಾಸ್ತ್ರವನ್ನು ಎಂದೂ ಉಪಯೋಗಿಸುತ್ತಿದ್ದರೇನು? ಈಗಾದರೂ ಉಪಯೋಗಿಸುತ್ತಾರೆಯೋ? ಮುಸಲ್ಮಾನರಾದರೆ, ಕ್ರೈಸ್ತರಾದರೆ, ಅವರ ಮೇಲಿನ ಅಸ್ಪೃಶ್ಯತೆಯ ಕಲಂಕವು ಅಳಿದು ತೊಳೆದು ಹೋದ ಬಗ್ಗೆ ಆಯಾ ಧರ್ಮಗಳ ತತ್ವ — ಆಚಾರಗಳನ್ನೇ ಅಧಿಕಾರಿಗಳು ನೋಡುತ್ತಾರಲ್ಲವೆ, ಮಡಿ ಬ್ರಾಹ್ಮಣರ ಕ್ಷುದ್ರದೃಷ್ಟಿಯನ್ನು ತಿಳಿಯುವದಿಲ್ಲ. ಹೀಗಿರಲು, ಆರ್ಯಸಮಾಜದ ಮೇಲೆ ಈ ಪ್ರಕಾರದ ವಕ್ರದೃಷ್ಟಿ ಯಾಕೆ? ಆರ್ಯಸಮಾಜದವರು ಮಾಡುವ ಶುದ್ಧಿ ಕಾರ್ಯವು ಕ್ರೈಸ್ತ-ಇಸ್ಲಾಮು ಧರ್ಮಪ್ರಸಾರ ಕಾರ್ಯಕ್ಕೆ ಇಂಬುಗೊಡದಿರುವದೆಂದು ಬೆದರಿ, ಈ ಹುಕುಮು ಹೊರಟಿರಬೇಕೆಂದು ಬಲ್ಲವರ ತರ್ಕವಿದೆ. ಅಲ್ಲದಿದ್ದರೆ, ಶ್ರೀ ಕ್ರೆಗ ಸಾಹೇಬರಿಗೆ ಧೋರಣವು ರಥೋತ್ಸವದ ಸಮಯ ಥಟ್ಟನೆ ಬದಲುತ್ತಿದ್ದಿಲ್ಲ! ಈ ಕುರಿತು, ಆರ್ಯಸಮಾಜದವರೂ, ಸ್ವಾಮಿ ಶ್ರದ್ಧಾನಂದಜೀಯವರೂ ಯಾವ ಉಪಾಯಗಳನ್ನು ಕೈಕೊಳ್ಳುತ್ತಾರೆಂದು ನಾವು ನಿರೀಕ್ಷಿಸುತ್ತಿರುವೆವು.

೫. ಮಡಿ ಬ್ರಾಹ್ಮಣರಿಗೂ ಒಂದು ವಿಚಾರ ಸೂಚಿಸುವದಿಲ್ಲ. ಅಸ್ಪೃಶ್ಯರು ಕ್ರೈಸ್ತ ಅಥವಾ ಮುಸಲ್ಮಾನ ಧರ್ಮದಲ್ಲಿ ಸೇರಿಕೊಂಡರೆ, ಅಗ್ರಹಾರದ ಮಾರ್ಗಗಳ ಮೇಲೆ ಮೈಲಿಗೆಯಾಗುವದಿಲ್ಲೆಂಬ ಅವರ ಕಲ್ಪನೆಯಿದೆ. ಆರ್ಯಸಮಾಜದಲ್ಲಿ ಸೇರಿದರೆ ಮೈಲಿಗೆಯಾಗತಕ್ಕದೆಂಬ ಅವರ ಕಲ್ಪನೆಯು ಮೇಲಿಂದ, ಸನಾತನ ಧರ್ಮದೊಳಗಿಂದ ಧರ್ಮಾಭಿಮಾನಿ ಅಸ್ಪೃಶ್ಯರನ್ನು ಧರ್ಮರಕ್ಷಣೆಯ ನೆವದಿಂದ ಹಿಡಿಸಿ ಹೊರತಳ್ಳುವ ದುರಾಲೋಚನೆಯಿರುವದೆಂದು ವಿಚಾರಶೀಲರು ತಿಳಿಯರೇನು? ಇದು ಧರ್ಮಾಭಿಮಾನಿಗಳ ಕರ್ತವ್ಯವೇ? ಮುಸಲ್ಮಾನನಾದರೆ, ಕ್ರೈಸ್ತರಾದರೆ, ಅಸ್ಪೃಶ್ಯ ಕಲಂಕವು ಹೋಗುತ್ತದೆಂದು ಹಿಂದೂ ಧರ್ಮಶಾಸ್ತ್ರಗಳಲ್ಲಿ ಹೇಳಿರುವದೇನು? ಅಥವಾ, ಕ್ರೈಸ್ತ-ಮುಸಲ್ಮಾನರಿಗೆ ಅಡ್ಡಿ ಮಾಡಲು ಸರಕಾರವು ಒಪ್ಪುವದಿಲ್ಲೆಂಬ ಒಂದೇ ಕಾರಣದಿಂದ ಮಡಿ ಬ್ರಾಹ್ಮಣರು ಅವರಿಗೆ ಶರಣು ಬಗ್ಗುತ್ತಾರಲ್ಲವೇ? ಹೀಗಿರಲು, ಆರ್ಯಸಮಾಜದ ದೀಕ್ಷೆ ಪಡೆದ ಸನಾತನಿ ಎರುಕುವಾರರವರಿಗೆ ಅಡ್ಡಗಟ್ಟುವದು ಧರ್ಮವಲ್ಲ; ಕ್ಷೇಮಕರವಲ್ಲ. ಸನಾತನ ಧರ್ಮವನ್ನು ಕುಗ್ಗಿಸಿ, ಧರ್ಮಾಭಿಮಾನಿಗಳಿಗೆ ಸ್ವಧರ್ಮತ್ಯಾಗ ಮಾಡಿ ಪರಧರ್ಮಕ್ಕೆ ಸೇರಲು ಒತ್ತಾಯಪಡಿಸಿದ ಮಹಾಪಾಪಕ್ಕೆ ಮಡಿ ಬ್ರಾಹ್ಮಣರು ಗುರಿಯಾಗುವರು. ಕ್ರೈಸ್ತ-ಇಸ್ಲಾಮು ಧರ್ಮದವರು ಸ್ವಧರ್ಮಪ್ರಸಾರ ಕಾರ್ಯಕ್ಕಾಗಿ ಹೊಂಚು ಹಾಕುತ್ತಿರುವಾಗ, ಸನಾತನ ಆರ್ಯ ಸಮಾಜದ ಧರ್ಮರಕ್ಷಣೆಯ ಕಾರ್ಯವನ್ನು ಸನಾತನಿಗಳೆಲ್ಲರೂ ಪುರಸ್ಕರಿಸಬೇಕು. ಮಡಿ ಬ್ರಾಹ್ಮಣರೂ ವಿಚಾರಶೀಲರಾಗಿ ಅಸ್ಪೃಶ್ಯರ ಹೀಡನೆಯನ್ನು ಲಕ್ಷಿಸಿ, ಸುಧಾರಣೆಗೆ ಬೇಕಷ್ಟು ಅನುಕೂಲತೆಯನ್ನಿತ್ತು ಧರ್ಮಪರಿಪಾಲನೆಯ ಶ್ರೇಯಸ್ಸು ಪಡೆಯಬೇಕು. ಇದಕ್ಕಿಂತ ಹೆಚ್ಚಿಗೆ ಈ ಕುರಿತು ಏನು ಹೇಳುವದು ?

ಸ್ಥಾನಿಕ ವೃತ್ತಾಂತ.

ಕುಮಟಾ— ಹವೆ ಸಾಧಾರಣ. ಅಡಿಕೆ ಬರುತ್ತಿದೆ; ದರ ಇಳಿಮುಖತ್ತಿದೆ.

ಮಲಬಾರ ದಂಡೆಗುಂಟ ಬೀಸಿದ ಬಿರುಗಾಳಿಯಲ್ಲಿ ಇಲ್ಲಿಯ ವ್ಯಾಪಾರಿಗಳ ಎಷ್ಟು ಮಚ್ವೆಯು ಸಿಲುಕಿ ಸುಮಾರು ೩-೪ ಸಾವಿರ ರೂಪಾಯಿ ನಷ್ಟವು ನಷ್ಟವಾಯಿತು. ಹಾಗು ಕಿರಾಣಿಯ ಒಬ್ಬ ಸಾವುಕಾರರ ಅಡಿ ಮಚ್ವೆಯು ಜಲಸಮಾಧಿಯನ್ನೈದಿತೆಂದು ಸುದ್ದಿ. ಮಚ್ವೆ ಹುಂಬು ಎಷ್ಟು ಹಣ್ಣಾಗಿದ್ದವಂತೆ ಕಾಲಚಕ್ರದ ಮಹಿಮೆ !

ಕೊಲ್ಹಾಪುರದ ಮಹಾರಾಜರವರು ಶ್ರೀ ಗೋಕರ್ಣ ಕ್ಷೇತ್ರಕ್ಕೆ ನಿನ್ನೆ ಸಾಯಂಕಾಲ ಬಂದಿರುವರು.

ಕಾರವಾರ ಕೇಂದ್ರದಲ್ಲಿ ಈ ವರುಷ ನಡೆದ ಹೆಣ್ಣು ಹುಡುಗಿಯರ ಮರಾಠಿ ಮುಲ್ಕಿ ಪರೀಕ್ಷೆಯಲ್ಲಿ ಇಲ್ಲಿಯ ಹೆಣ್ಣು ಹುಡುಗಿಯರ ಶಾಲೆಯ ಅ॥ ಶಿಕ್ಷಕಿಯಾದ ಪರಸ್ವತಿಬಾಯಿ ಕೋಂ ವೆಂಕಟ್ರಮಣ ಕೆಟಕರವರು ಮೊದಲನೇ ನಂಬರು ಪಡೆದು ಉತ್ತೀರ್ಣರಾಗಿರುವರು. ಪರೀಕ್ಷೆಯ ೩ ತಿಂಗಳು ಮುಂಚಿತವಾಗಿ ಇಲ್ಲಿ ರಜೆ ಪಡೆದು ಅವರು ಇಲ್ಲಿ ಹೆಡ್ ಮಿಸ್ಟ್ರೆಸ್ ಆಗಿದ್ದ ಸೌ॥ ಯಶೋದಾಬಾಯಿ ವಾಸುದೇವ ಶ್ಯಾನಭಾಗ ಮಾಜಾರೆ ಇವರಲ್ಲಿ ಶಿಕ್ಷಣ ಹೊಂದಿದ್ದರಾಗಿ ತಿಳಿಯುತ್ತದೆ. ಸೌ॥ ಯವರನ್ನು ಕರೆದೊಡಿ ನಮ್ಮ ಮ್ಯುನಿಸಿಪಾಲಿಟಿಯವರು ಹೆಣ್ಣು ಹುಡುಗಿಯರ ಶಾಲೆಗೆ ಎಷ್ಟು ದೊಡ್ಡ ಉಪಕಾರ ಮಾಡಿರುವರೆಂಬ ಅದರ ಮೇಲಿಂದ ತಿಳಿಯುವಹಾಗಿದೆ.

ಜಂಗಲಖಾತೆಯ ಹೊಸ ಸರ್ಕ್ಯುಲರು! ಕುಮಟಾ ಡಿವಿಜನ ಐದು ಮೈಲು ಕ್ಷೇತ್ರದಲ್ಲಿ ಕಟ್ಟು ನೆಟ್ಟವರು ಬೆಲ್ಲ ಮಾಡಲು ಕಟ್ಟಿಗೆ ಬೇಕಾದಲ್ಲಿ ಅವರಿಗೆ ಈ ಮಾಜಿನಂತೆ ಪರಮೀಟಿನಿಂದ ಕಟ್ಟಿಗೆ ಸಿಗಲಿಕ್ಕಿಲ್ಲವಾಗಿ ಜಂಗಲ ಖಾತೆಯ ಹುಕುಮು. ಇದರಿಂದ ಹೆಗಡೆ, ದೀವ್ಗಿ ಕಡೆಯ ಬೇಸಾಯಗಾರರ ಗೋಳು! ಡಿಪೋದೊಳಗಿಂದ ಕಟ್ಟಿಗೆ ಒಯ್ದು ಬೆಲ್ಲ ಮಾಡಿದರೆ, ಕಟ್ಟಿಗ ಬೆಲೆಗೂ ಬೆಲ್ಲದ ಬೆಲೆಗೂ ಸರಿಯಾಗುವದೆಂದು ಬೇಸಾಯಗಾರರ ಹೇಳಿಕೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಅರ್ಜಿ ಆಗಿರುತ್ತದೆ.

ಧಾರೇಶ್ವರದ ಶಾಲೆಯಲ್ಲಿ ತಾ. ೬-೧೧-೨೫ನೇಗೆ ಪಾರಿತೋಷಕದ ಆಟವಾಯಿತು. ಟಿಕೇಟಿನ ಆಟ. ದೇವಮಂದಿರವನ್ನು ಆಟಕ್ಕಾಗಿ ಕೊಡುವದು ಅಪ್ರಶಸ್ತವೆಂದು ಊರವರು ಮೇಲಧಿಕಾರಿಗಳಿಗೆ ಅರ್ಜಿ ಮಾಡಿರುವದಾಗಿ ತಿಳಿಯುತ್ತದೆ. ಹೆಡ್‌ಮಾಸ್ತರರು ದೇವಾಮಂದಿರದಲ್ಲಿ ಟಿಕೇಟಿ ಹ್ಯಾಗೆ ಎಡೆಗೊಟ್ಟರು ತಿಳಿಯುವದಿಲ್ಲ.

ಶಿಕ್ಷಣಾಭಿಮಾನಿಗಳಾದ ರಾ॥ ಗ. ಮಾ. ಹೆಗಡೆಯವರು ತಾ. ೧೮-೧೧-೨೫ನೇಗೆ ಪತ್ರ ಬರೆದು ತಿಳಿಸುವದೇನಂದರೆ:—ಪ್ರಾಥಮಿಕ ಶಿಕ್ಷಣವು ಕಡಿಮೆ ಸಂಬಳದ ಮೂಲಶಿಕ್ಷಕರಲ್ಲುಂಟಾದ ಅಸಂತೋಷದಿಂದ ಮೊದಲೇ ಕುಸಿದಿದೆ. ಟ್ರೇನಿಂಗ ಕಾಲೇಜಿನಲ್ಲಿ ಸಂಸ್ಕೃತ, ಬೀಜಗಣಿತ ಮಹತ್ವಮಾನದ ಇತ್ಯಾದಿ ಮಹತ್ವದ ವಿಷಯಗಳನ್ನು ಕಿತ್ತಿಗೆದದ್ದರಿಂದ ಈಗಿನ ಶಿಕ್ಷಕರ ಜ್ಞಾನಕ್ಕೆ ಕುಂದು ಬಂದಿದೆ. ಅದರೊಳಗೂ ಶಿಕ್ಷಕರಿಗೆ ಮೊದಲಿದ್ದ ಅನುಕೂಲತೆಯೊಂದು ನಷ್ಟವಾಗಿದೆ. ಅದೇನಂದರೆ:— ಶಾಲೆಗಳನ್ನು ಮೇಲಧಿಕಾರಿಗಳು ಮಾನ್ಯ ಮಾಡಿ ಅದರ ಶಿಕ್ಷಕರಿಗೆ ಅಪ್ಪವಿದ್ದಲ್ಲಿ ವರ್ಗಾವರ್ಗಿ ಮಾಡುತ್ತಿದ್ದರು. ಅದರಿಂದ ಶಿಕ್ಷಕರಿಗೆ ಸ್ಥಳಾನುಕೂಲ್ಯವಾದರೂ ಸಿಗುತ್ತಿತ್ತು. ಈಗ ಅದೂ ನಷ್ಟವಾಗಿದೆ. ಇದರಿಂದ ಸುಧಾರಣೆಯು ಹಾಳು. ಪರಸ್ಪರ ಶಿಕ್ಷಕರು ಕಬೂಲ ಮಾಡಿದರೆ, ಅವರ ಅನುಮತಿಯಂತೆ ವರ್ಗಾವರ್ಗಿ ಮಾಡಲಿಕ್ಕೆ ಅನಾನುಕೂಲತೆ ಯಾವದು?

ಸಾಭಾರ ಸ್ವೀಕಾರ.

ಸುವಾಸಿನಿ— ಆಕ್ಟೋಬರ ತಿಂಗಳ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ— ಶ್ರೀ॥ ಬಿ. ವಿಠ್ಠಲರಾವ. ಸರಸ್ವತೀ ಪ್ರಿಂಟಿಂಗ ವರ್ಕ್ಸ ಲಿಮಿಟೆಡ್, ಮಂಗಳೂರು. ವಾರ್ಷಿಕ ಚಂದಾ ರೂ. ೩-೮-೦.

ಕಿರ್ಲೋಸ್ಕರ ವಾರ್ತೆ— ನವಂಬರ ತಿಂಗಳ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ— ಶ್ರೀ॥ ಲ. ಕೃ. ಬಾಗಲ, ವ್ಯಾಪ್ತಿಯ ವಿಕಾರಿದ, ಕಿರ್ಲೋಸ್ಕರವಾಡಿ. ವಾರ್ಷಿಕ ಚಂದಾ ರೂ. ೧-೮-೦.

ಪ್ರತ್ಯಕ್ಷ ಫಲಜ್ಯೋತಿಷ್ಯ— ಗ್ರಂಥಕರ್ತ ಮತ್ತು ಪ್ರಕಾಶಕ— ಶ್ರೀ॥ ಬಿ. ಶ್ರೀನಿವಾಸ ಶಿಷ್ಯೆ, ಕಾಕಳ, ಬೆಲೆ ರೂ. ೧-೦-೦.

ಕಾರವಾರ— ಇಲ್ಲಿಯ ಕಲೆಕ್ಟರ ಮಿ॥ ಭಿವೇರವರ ಬದಲಾಗಿ ಮಿ॥ ಬೆಂಗೊಮೇರಿಯವರು ಬರುವವರಿದ್ದಾರೆ.

ಕಾರವಾರ ಲೋಕಲ್ ಬೋರ್ಡ ಕಮೀಟಿಯಲ್ಲಿ ರಿ॥ ಎಣ್ಣೆ ಮಡಿಯವರ ನಿಧನದಿಂದ ಒಂದು ಸ್ಥಳವು ಖಾಲಿಯಾಗಿತ್ತು. ಈ ಸ್ಥಳಕ್ಕಾಗಿ ೩ ಮಂದಿಗಳು ಇಲ್ಲಿಯ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಅರ್ಜಿ ಮಾಡಿದ್ದರು. ರಿ॥ ಜಜ್ಜರು ರಾ॥ ಎಮ್. ಟಿ. ಶೆಟ್ಟಿ, ವಕೀಲರವರನ್ನು ನೇಮಿಸಿರುವರು.

ಬಿಣಗೆಯಲ್ಲಿ ತಾ. ೧೧ನೇಗೆ ಶ್ರೀ ಗ್ರಾಮದೇವರ ವನಭೋಜನೋತ್ಸವವು ನಡೆಯಿತು. ಹಲ್ಲಕ್ಕಿ ಮೆರವಣಿಗೆಯ [illegible]

೧॥ ಘಂಟೆ ತನಕ ನಡೆದು, ಶ್ರೀ ದೇವರ ಮೂರ್ತಿ ಶ್ರೀ ದೇವಸ್ಥಾನಕ್ಕೆ ಬಂದ ಬಳಿಕ, ಪುರಾತನ ಪದ್ಧತಿಯಂತೆ, ಶ್ರೀ ದೇವಸ್ಥಾನದ ಮುಂದೆ ಬಾಗಾಯತ ದಾರು ದಸರಾವತಾರ ಆಟಮಾಡುವ ರೂಢಿಯಿದೆ. ಬಾಗಾಯತುಕಾರರಲ್ಲಿ ಈ ವರ್ಷ ಅಸ್ವಮಾಧಾನ ಉಂಟಾಗಿದ್ದ ಪ್ರಯುಕ್ತ ಎರಡೂ ಗುಂಪಿನವರೂ ೨ ಆಟಗಳನ್ನು ಪ್ರತ್ಯೇಕವಾಗಿ ಮಾಡಬೇಕೆಂದು ಹೇಳಲು, ಅವರೊಪ್ಪಲಿಲ್ಲ. ಮಾಮಲೇದಾರರಿಗೆ ಬಾಗಾಯತುಕಾರರು ಅರ್ಜಿ ಮಾಡಿದರು. ಪಟೇಲರಿಗೆ ಮಾಮಲೇದಾರರು ರಿಪೋರ್ಟು ಮಾಡಲು ಹೇಳಿದರು. ಪಟೇಲರು ಪ್ರತಿಕೂಲ ರಿಪೋರ್ಟು ಮಾಡಿದರಂತೆ. ಯಾಕೆಂದರೆ ಶ್ರೀ ದೇವಸ್ಥಾನದ ಮೊಕ್ತೇಸರರೇ ಪಟೇಲರಾಗಿದ್ದರು! ಆದರೂ ಅನುಕೂಲ ಮಾಡಿದವರಾದರೂ ಇವರೇ. ಇವರ ರಿಪೋರ್ಟಿನ ಮೇಲಿಂದ ಆಟ ಮಾಡಲು ಕೊಡಲಿಲ್ಲ. ಆಟ ನೋಡಲು ಪರಸ್ಥಳದಿಂದ ೧-೧॥ ಸಾವಿರ ಜನರು ಬಂದಿದ್ದರು. ಶ್ರೀ ದೇವಸ್ಥಾನದಲ್ಲಿ ಶ್ರೀ ದೇವರ ಪಲ್ಲಕ್ಕಿ ಬಂದು ಮುಟ್ಟಿ ಮಹಾಪೂಜೆಯಾದ ಬಳಿಕ, ಆಟದ ಭಜನೆ ಕುಂಪಾಟಿಯು ಆಟವಾಡಲು ಪಟೇಲ-ಮೊಕ್ತೇಸರರ ಒಪ್ಪಿಗೆ ಒಪ್ಪಲೇ ಬೇಕೆಂದಿದ್ದರು. ಆದಕ್ಕೂ ಒಲ್ಲೆ ಎಂದು ಉತ್ತರ ದೊರೆಯಿತು. ಆದರೆ, ಈ ಆಟದ ಭರವಸೆಯು ಮಾರನೇ ದಿನ 'ದೀಪಾವಳಿ'ಯ ಉತ್ಸವದ ಸಮಯ ಒದಗಿಬಂತು. ಗತಗದೆಯ ಆಟಗಳು ಪೇಟೆಯಲ್ಲಿ ಅಂಬಿಕೊಂಡಿದ್ದವು. ಗತಗದೆಯ ಆಟಗಳು ಹ್ಯಾಗೆ ಸರ್ವ ಶಾಂತಿಯಿಂದ ನಡೆದವೆಂಬುದೇನೆಂದು ಗೊತ್ತಿದೆ.

ಇಲ್ಲಿಯ ಸದರಮೀನ ಕೋರ್ಟಿನ ಬೇಲೀಪ ಸುಬ್ಬಯ್ಯ ಈತನು ಸರಕಾರಿ ಕೆಲಸದ ಮೇಲೆ ಅಗೇರಿಗೆ ಹೋಗಿದ್ದನು. ಹಾದಿಯಲ್ಲಿ ಆತನ ಕೊಲೆಯಾಯಿತೆಂದು ತಿಳಿಯುತ್ತದೆ. ಭಯಂಕರ ದಿನ!

ಕನ್ನಡ ಸಣ್ಣ ಕಥೆಗಳ ಸ್ಪರ್ಧೆ!

ಕಳೆದ ವರ್ಷ ಸಂಘದ ವಾರ್ಷಿಕೋತ್ಸವದಲ್ಲಿ ಅಗ್ರಾಸನವನ್ನಲಂಕರಿಸಿದ್ದ ಶ್ರೀಯುತ ಬೆನಗಲ್ ರಾಮರಾವ ಎಂ. ಎ. ಎಲ್ ಎಲ್ ಬಿ ಅವರು ಕೈ. ವಾ. ನಂದಳಿಕೆ ಲಕ್ಷ್ಮೀನಾರಾಯಣಪ್ಪನವರ ಜ್ಞಾಪಕಾರ್ಥವಾಗಿ ಒಂದು ಬಂಗಾರದ ಪದಕವನ್ನು ಪ್ರತಿವರ್ಷವೂ ಕೊಡುವದಾಗಿಯೂ ಸಂಘವು ಪ್ರತಿ ವರ್ಷವೂ ಸಣ್ಣ ಕಥೆಗಳ ಸ್ಪರ್ಧೆಯೊಂದನ್ನೇರ್ಪಡಿಸಿ ಅದರಲ್ಲಿ ಅತ್ಯುತ್ತಮವಾದುದನ್ನು ಬರೆದವರಿಗೆ ಸಂಘದ ವಾರ್ಷಿಕೋತ್ಸವ ಕಾಲದಲ್ಲಿ ಅದನ್ನು ಅರ್ಪಣೆ ಮಾಡಬಹುದೆಂದೂ ಅಪ್ಪಣೆ ಕೊಡಿಸಿದರು. ಸ್ಪರ್ಧೆಯನ್ನೇರ್ಪಡಿಸಲು ಇದೇ ಮೊದಲನೆಯ ವರ್ಷ ಕರ್ನಾಟಕದ ಎಲ್ಲ ಪ್ರಾಂತಗಳ ವಿದ್ಯಾರ್ಥಿಗಳೂ ಈ ಸ್ಪರ್ಧೆಗೆ ಸೇರುವರೆಂದು ನಿರೀಕ್ಷಿಸಲಾಗಿದೆ.

ನಿಯಮಗಳು.

೧. ಮೆಟ್ರಿಕ್ ಅಥವಾ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ವಿಶ್ವವಿದ್ಯಾಲಯದ ಯಾವದಾದರೂ ಬಿ.ಎ. ಪರೀಕ್ಷೆಗೆ ಓದುತ್ತಿರುವ ಕರ್ನಾಟಕ ವಿದ್ಯಾರ್ಥಿಗಳಾದರೂ ಈ ಸ್ಪರ್ಧೆಗೆ ಕಥೆಗಳನ್ನು ಕಳುಹಿಸಬಹುದು.

೨. ಈ ಸ್ಪರ್ಧೆಗೆ ಬರುವ ಕಥೆಗಳಲ್ಲಿ ಅತ್ಯುತ್ತಮವಾದುದನ್ನು ಬರೆದವರಿಗೆ "ಮುದ್ದಣ ಸ್ವರ್ಣಪದಕ" ವೆಂಬ ಸುವರ್ಣ ಪದಕವೊಂದು ಬಹುಮಾನವಾಗಿ ಕೊಡಲ್ಪಡುವದು.

೩. ಕಥೆಯು ಸ್ವಕಲ್ಪಿತವಾಗಿರಬೇಕು.

೪. ಕಥೆಯನ್ನು ಕಾಗದದ ಒಂದು ಪಕ್ಕದಲ್ಲಿ ಸ್ಫುಟವಾದ ಅಕ್ಷರದಲ್ಲಿ ಬರೆದಿರಬೇಕು.

೫. ಬಹುಮಾನವನ್ನು ಪಡೆದ ಕಥೆಯನ್ನು ಪ್ರಕಟಿಸುವ ಹಕ್ಕು ಸಂಘಕ್ಕೆ ಇರುವುದಲ್ಲದೆ ಕಾಪಿ ರೈಟು ಹಕ್ಕು ಲೇಖಕರಿಗೇ ಇರುತ್ತದೆ.

೬. ಲೇಖಕರು ತಮ್ಮ ಹೆಸರು, ವಿಳಾಸ, ಓದುವ ಶಾಲೆ, ತರಗತಿ ಇವುಗಳನ್ನು ಪ್ರತ್ಯೇಕ ಕಾಗದದಲ್ಲಿ ಬರೆದು ಕಳುಹಿಸಬೇಕು.

೭. ಫಲಿತಾಂಶವು ತಿಳಿದ ಮೇಲೆ ಬಹುಮಾನ ದೊರೆಯದ ಕಥೆಗಳನ್ನು ಹಿಂದಕ್ಕೆ ಕೊಡುವ ಜವಾಬುದಾರಿಯನ್ನು ಸಂಘವು ವಹಿಸುವದಿಲ್ಲ.

೮. ಸ್ಪರ್ಧೆಗೆ ಸೇರುವವರು ತಮ್ಮ ಲೇಖನಗಳನ್ನು ಪ್ರವೇಶ ಧನವಾದ ೮ ಆಣೆಗಳೊಡನೆ ಡಿಸೆಂಬರ ೧೫ನೇ ತಾರೀಖಿನೊಳಗೆ ತಲುಪುವಂತೆ ರಜಿಸ್ಟರ ಪೋಸ್ಟ ಮೂಲಕ ಉಪಾಧ್ಯಕ್ಷರ ಹೆಸರಿಗೆ ಕಳುಹಿಸಬೇಕು.

೯. ಮುದ್ದಣ ಸ್ವರ್ಣ ಪದಕವು ಬಾರದಿರುವ ಕಥೆಗಳಲ್ಲಿ ಶ್ರೇಷ್ಠವಾದುವೆಂದು ಪರಿಗಣಿತವಾದವುಗಳಿಗೆ ದ್ರವ್ಯರೂಪವಾದ ಅಥವಾ ಪುಸ್ತಕರೂಪವಾದ ಬಹುಮಾನವನ್ನು ಸಂಘವು ಕೊಡಬಹುದು.

ಕರ್ನಾಟಕ ಸಂಘ, ಸೆಂಟ್ರಲ್ ಕಾಲೇಜ ಬೆಂಗಳೂರ	ಟಿ ಎಸ್. ವೆಂಕಣ್ಣಯ್ಯ. ಉಪಾಧ್ಯಕ್ಷ.

ವೃತ್ತಸಾರ.

— ಕಳೆದ ವರ್ಷ ಮುಖ್ಯೋಪಾಧ್ಯಾಯರ (ಹುಬ್ಬಳ್ಳಿ) ... ಲಿಂಗೈಕ್ಯರಾದ ಶ್ರೀ ... ಅವರ ಪುಣ್ಯತಿಥಿಯ ಸಭೆಯು ಹುಬ್ಬಳ್ಳಿಯಲ್ಲಿ ಕಳೆದ ತಾ. ೯ನೇಗೆ ಸೇರಿ, ಅವರ ಜ್ಞಾಪಕವಾದ ಸ್ಮಾರಕವನ್ನೊಂದು ಸ್ಥಾಪಿಸಬೇಕಾಗಿದೆಯೂ, ಒಂದು ಮಂದಿರವನ್ನು ರಚಿಸಬೇಕಾಗಿದೆಯೂ ನಿರ್ಣಯವಾಯಿತು. ಅವರ ಹೆಸರಿನಲ್ಲಿ ಗೀತಾ ಮಂಡಳವು ತೆರೆಯಲಾಯಿತು.

— ಹುಬ್ಬಳ್ಳಿಯ ಶ್ರೀ ಮೂರು ಸಾವಿರ ಮಠದ ಶ್ರೀ ಕನ್ನ ಸಿಂಹಾಸನಕ್ಕೆ ಬೆಳಗಾಂವ ಜಿಲ್ಲೆಯ ಕಣ್ಣೂರು ಮಠದ ಪಟ್ಟಾಧ್ಯಕ್ಷರಾಗಿದ್ದ ಶ್ರೀಮತ್ ಘನಲಿಂಗ ಚಕ್ರವರ್ತಿ ಗುರುಸಿದ್ಧ ರಾಜಯೋಗೀ ಸ್ವಾಮಿಗಳ ಪಟ್ಟಾಭಿಷೇಕವಾಗುವದಿದ್ದ ಶ್ರೀ ಮಹಾಸ್ವಾಮಿಗಳು ಕಳೆದ ಬುಧವಾರಕ್ಕೆ ಹುಬ್ಬಳ್ಳಿಗೆ ತಲಪಿದಾಗ, ಸಕಲ ಬಿರುದುಗಳಿಂದ ವೈಭವದಿಂದ, ವಾದ್ಯಘೋಷದಿಂದ ಶ್ರೀಗಳ ಮೆರವಣಿಗೆಯಾಯಿತು. ಮೆರವಣಿಗೆಗೆ ೨೫-೩೦ ಸಾವಿರಕ್ಕೆ ಮಿಕ್ಕ ಜನಸಂದಣಿಯು ನೆರೆದಿತ್ತು. ನಾಳೆ ನಿರಂಜನ ಪಟ್ಟಕ್ಕೆ ಲಿಂಗೈಕ್ಯರಾದವರ ಸಂಸ್ಕಾರವಾಗಿ, ವಾರದ ಬಳಿಕ ಪಟ್ಟಾಭಿಷೇಕ, ಕನ್ನ ಸಿಂಹಾಸನಾರೋಹಣ ಇತ್ಯಾದಿ ಮಹೋತ್ಸವಗಳು ನಡೆಯುವವು.

— ಪಂಜಾಬ ವಿಶ್ವವಿದ್ಯಾಲಯದ ರಿಜಿಸ್ಟ್ರಾರರೊಡನೆ ಅಬ್ದುಲ್ ಹಮೀದ ಎಂಬ ಕಲಿಸಿಗನು ನೌಕರನಿದ್ದನು. ಈತನು ಬಿ.ಎ., ಮುಂತಾದ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳಿಗೆ ರಿಜಿಸ್ಟ್ರಾರರ ಮರ್ಜಿಯು ತನ್ನ ಮೇಲಿರುವದೆಂಬ ಗ್ರಹಿಕೆಯನ್ನು ಹುಟ್ಟಿಸಿ, ಪರೀಕ್ಷೆಯಲ್ಲಿ ಯಶಸ್ಸು ಸಂಪಾದಿಸಿಕೊಡುತ್ತೇನೆಂಬ ನಂಬಿಗೆ ಹೇಳಿ, ಅನೇಕರ ಕಡೆಯಿಂದ ರಿಜಿಸ್ಟ್ರಾರರಿಗೆ ಕೊಡುವದೆ ೫೦ರಿಂದ ೫೦೦ ರೂಪಾಯಿಗಳ ವರೆಗೆ ಎತ್ತುವಳಿ ಮಾಡಿದನು. ಈ ಯಾವ ಹಕೀಕತೂ ರಿಜಿಸ್ಟ್ರಾರರಿಗೆ ಗೊತ್ತಿದ್ದಿಲ್ಲವಂತೆ. ಕಲಿಸಿಗನ ಮೋಸ್ತ ಕಾಸಿನ ಉಳಿಯಿಂದ ಬೇಸತ್ತ ವಿದ್ಯಾರ್ಥಿಯೊಬ್ಬನು ರಿಜಿಸ್ಟ್ರಾರರಿಗೆ ಈ ಹಕೀಕತು ತಿಳಿಸಿದ ಬಳಿಕ, ಆತನ ಮೇಲೀಗ ಖಟ್ಲೆಯಾಗಿದೆ.

— ಬೆಂಗಳೂರು ಮ್ಯುನಿಸಿಪಾಲಿಟಿಯವರು ಮಾರ್ಗಗಳ ಮೇಲೆ ರಂಗವಲ್ಲಿಯನ್ನು ಹಾಕಬಾರದಾಗಿ ಜಾಹೀರ ಪಡಿಸಿರುವರು. ಇದರಿಂದ ಯಾವ ಅನರ್ಥ ಒದಗುತ್ತದೆಂದು ಸ್ಥಾನಿಕ ಸ್ವರಾಜ್ಯದ ಚಾಲಕರು ಈ ಠರಾವನ್ನು ಹೊರಡಿಸಿದರೆಂಬುದು ತಿಳಿಯದು.

— ಮೈಸೂರ ಸಂಸ್ಥಾನದ ತಲಕಾಡಿನಲ್ಲಿ ವಿದ್ಯಾಲಯ ವನ್ನಿಡಲು ಶ್ರೀ ಶಿವಲಿಂಗಪ್ಪನವರು ೫ ಸಾವಿರ ರೂಪಾಯಿಗಳನ್ನು ಅರ್ಪಿಸಿರುವರು.

— ಇಂದೂರ ಮಹಾರಾಜರ ಜಯಂತಿಯ ಸಮಯ ಇಂದೂರದಲ್ಲಿ ದೊಡ್ಡಗೊಂಡು ಉತ್ಸವವಾಯಿತು. ಅಗ ಮಹಾರಾಜರ ಶಿಂದೆಗಳಾದ ಸ್ನೇಹಲತಾಬಾಯಿಯವರು 'ಯಶವಂತ ನಿವಾಸ' ಅರಮನೆಯೊಳಗಿಂದ ಹಾದು ಹೋಗುತ್ತಿದ್ದರು. ಥಟ್ಟನೆ ಬದಿಗೆ ಕೊಡಿಗೆಗಳಿಗೆ ಬೆಂಕಿ ಹತ್ತಿ ಘಾಯಪಟ್ಟಳು. ಡಾ॥ ಮುಳಗಾಂವಕರರವರಂಥ ದೊಡ್ಡ ವೈದ್ಯರು ಚಿಕಿತ್ಸೆ ಮಾಡಿದರೂ, ಸ್ನೇಹಲತಾಬಾಯಿಯವರು ಸ್ವರ್ಗವಾಸವನ್ನೈದಿದರು. ಇವಳು ಶಿರಿ ಮಹಾರಾಣಿ ಇಂದಿರಾಬಾಯಿಯವರ ಒಬ್ಬಳೇ ಮಗಳು! ಬರೇ ೧೦ ವರ್ಷ ಪ್ರಾಯ!! ಆದರೂ, ಇಂಗ್ಲೀಷ ಭಾಷೆಯನ್ನು ಅಸ್ಖಲಿತವಾಗಿ ಆಡಬಲ್ಲವರಾಗಿದ್ದರು. ಶ್ರೀ ಅಹಿಲ್ಯಾಬಾಯಿ ದೇವಿಯ ಛತ್ರಿ ಎಂಬ ಸ್ಮಶಾನ ಮಂದಿರದಲ್ಲಿ ಅವರನ್ನೊಯ್ದು ಚಂದನ ಚಿತೆಯ ಮೇಲಿಟ್ಟು ದಹನ ಮಾಡಲಾಯಿತು. ಮಹಾರಾಜರು ಸ್ಮಶಾನಯಾತ್ರೆಗೆ ಹೋಗಿ ಚಂದನ ಕಟ್ಟಿಗೆಯನ್ನು ಅರ್ಪಿಸಿದರು. ಸ್ನೇಹಲತೆಯವರು ತಮ್ಮ ಹೆಸರಿನಂತೆ, ಅರಮನೆಯಲ್ಲೆಲ್ಲ ಸ್ನೇಹಭಾವ ಬೆಳಿಸಿ ಎಲ್ಲರಿಗೂ ಪ್ರಿಯರಾಗಿದ್ದರು.

— ಚೀನ ದೇಶದ ಸಿಂಗಪೂರದಲ್ಲಿ ೩ ಸಾವಿರ ರಾಯನ್ನರ ಕೊಲೆಯಾಯಿತೆಂದು ಸುದ್ದಿ.

— ಅಜೆಸ್ತಾನ ಕುಡಿಯಾನ ಎಂಬಲ್ಲಿ ಒಂದು ಹೆಣವಿದ್ದ ಪೆಟ್ಟಿಗೆಯು ಸಿಕ್ಕಿದೆ. ಅದರೊಳಗಿನ ಹೆಣವು ತೀರ ಎಳೆ ಪ್ರಾಯದವನದು; ೧೫ ವರ್ಷ ಪ್ರಾಯದವನದೋ. ಪ್ರೇತಕ್ಕೆ ಚಿನ್ನದ ಕಿರೀಟವಿದೆ; ಚಿನ್ನದ ಕವಚವಿದೆ; ಖಡ್ಗವಿದೆ; ಹೇರಳ ಪಕ್ಕಗಳಿವೆ. ಇವೆಲ್ಲ ಅದ್ಭುತವಾಗಿದ್ದವು. ಹೆಣಕ್ಕೆ ಹುಳಬಿದ್ದು ಹಾಳಾಗಬಾರದೆಂದು ಹಾಗೂ ಎಣ್ಣೆಯು ಮಿಕ್ಕಿ ಹಚ್ಚಲಾಗಿತ್ತಂತೆ. ಅದು ಆ ಕಾಲದವಿದು! ಇದನ್ನು ಕೇಳಿ ಎಲ್ಲರೂ ಬೆರಗಾಗಿರುವರು.

— ಬಲ್ಗೇರಿಯಾ ದೇಶದ ಸೋಫಿಯಾ ಪಟ್ಟಣದ ಮ್ಯುನಿಸಿಪಾಲಿಟಿಯು ಒಬ್ಬ ನೌಕರನಿಗೆ ಪದಭ್ರಷ್ಟ ಮಾಡಿದ ಬಗ್ಗೆ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಪಾವ್ಲಾ ಕೋಫ್ ರವರಿಗೆ ಆತನು ಕಳೆದ ೧೫ನೇ ತಾರೀಖಿನ ಕೊಲೆ ಮಾಡಿ, ತಾನೂ ಆತ್ಮಹತ್ಯ ಮಾಡಿಕೊಂಡನು.

— ಪುನಾ ಪಟ್ಟಣದ ಟಿಳಕ ರಾಷ್ಟ್ರೀಯ ವಿದ್ಯಾಲಯದವರು ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಕೊಡಬೇಕೆಂದು ನಿರ್ಧರಿಸಿರುವರು.

— ಸೊಲ್ಲಾಪುರ ದಂಗೆಯ ವಿಷಯ ಚೌಕಶಿ ಮಾಡಲಿಕ್ಕೆ ಸರಕಾರದವರು ಇನ್ನೂ ಯೋಜನೆ ಮಾಡಲಿಲ್ಲವಾಗಿ ತಿಳಿಯುತ್ತದೆ. ಇಷ್ಟು ಅಜಾಗ್ರತೆ ಯಾಕೆ?

— ೫ ಹಾಗು ೧೦ ರೂಪಾಯಿ ನೋಟುಗಳ ಅರ್ಧ ಭಾಗಗಳನ್ನು ಕಳಿಸಿ ಒಟ್ಟಿನಲ್ಲಿ ಕೊಟ್ಟಲ್ಲಿ ಪೂರ್ಣ ರಕಮು ಸಿಗುತ್ತಿತ್ತು. ಈಗ ಹಾಗೆ ಸಿಗಬಾರದೆಂದು ನೇಮವಾಗಿದೆ. ೫೦, ರೂಪಾಯಿಗಳ ಹಾಗೂ ಅದಕ್ಕೂ ಮಿಕ್ಕಿದ ನೋಟುಗಳ ಅರ್ಧ ಭಾಗ ಕೊಟ್ಟರೆ, ಅರ್ಧ ರಕಮು ಕೊಡಲು ಸಿಗುವದು; ೫ ವರ್ಷಗಳ ನಂತರ ಎರಡನೇ ಭಾಗ ದೊರೆತರೆ, ಉಳಿದ ಅರ್ಧ ರಕಮು ಸಿಗುವದು. ಈ ನಿಯಮವು ೧-೯-೧೯೩೬ನೇ ಇಸ್ವಿಯಿಂದ ಅಮಲಿನಲ್ಲಿ ಬರುವದಿದೆ. ಈ ಕಾರಣ ಕಳಕೊಂಡು ಹೋದವರು ತಾ. ೩೧-೮-೧೯೩೬ ನೇ ಇಸ್ವಿಯ ವರೆಗೆ ಸರಕಾರಕ್ಕೆ ಬರೆದುಕೊಳ್ಳಬೇಕು.

— ಪತಿಯಾಳಾದ ಮಹಾರಾಜರು ಸುಮಾರು ೧ ಲಕ್ಷಕ್ಕೆ ಮಿಕ್ಕಿ ರೂಪಾಯಿಗಳ ನಾಯಿಗಳನ್ನು ಖರೀದಿ ಮಾಡಿರುವರು. ೬೦ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಈ ನಾಯಿಗಳಿಗಾಗಿ ಒಂದು ಭವನವನ್ನು ರಚಿಸಿರುವರು. ಕಾನಪುರದ "ಪ್ರತಾಪ" ಪತ್ರಿಕೆಯು ಇದನ್ನು ಕೇಳಿ ಮಹಾರಾಜರಿಗೆ 'ಕುತ್ತಾಪ್ರಿಯ ಪತಿಯಾಳಾ ನರೇಶ' ಎಂಬ ಶಿರೋನಾಮೆಯನ್ನು ಅರ್ಪಿಸಿದೆ.

— ಪುನಾ ಪ್ರಕರಣದಲ್ಲಿ ಮರಣ ದಂಡನೆ ವಿಧಿಸಿದ ಕಲ್ಯಾಣದ ಹಾಗೂ ಕಾಮದಾರ ವಿನಾಯಕರಿಗೆ ಗಲ್ಲಿಗೇರಿಸುವ ವಿಧಿಯು ಕಳೆದ ಗುರುವಾರಕ್ಕೆ ಒದಗಿಬಂತು. ಈ ವಿಧಿಯ ಯಾರಿಗೂ ತಿಳಿಯಗೊಡದಂತೆ ಗುಪ್ತವಾಗಿ ಆಚರಿಸಲಾಯಿತು.

— [illegible] ಮಧುರೆಗಳಲ್ಲಿ ವಿಪರೀತ ಮಳೆಯು [illegible] ಸೇರಕಟ್ಟಿ ಬಹಳ [illegible] ನೀರಿನ ಸುತ್ತು ಮುತ್ತಿನ ಪ್ರದೇಶವೆಲ್ಲ ಜಲಮಯವಾಗಿದೆ

— ಎತಿರಾಜದಾಸರೆಂಬ [illegible] ತಿರುಪತಿ ದೇವಸ್ಥಾನದಲ್ಲಿ [illegible] ದೇವರಿಗೆ ಹಣ್ಣುಕಾಯಿಗಳನ್ನು [illegible] ಅರತಿ ಮಾಡಿಸಿದನು [illegible] ದೇವಸ್ಥಾನದಲ್ಲಿ ಪ್ರವೇಶ [illegible] ಮುಂದೆ [illegible] ನಡೆಯಿತು [illegible] ದೇವಸ್ಥಾನದೊಳಗೆ ಪ್ರವೇಶ ಮಾಡಿದನೆಂದು [illegible] ದಂಡನೆ [illegible] ನ್ಯಾಯವೇ

— [illegible] ಶಾಸನವನ್ನು ಮಾಡಿಟ್ಟಿದ್ದರು [illegible] ನದಲ್ಲಿ ತಿಂಗಳಿಗೆ [illegible] ಯನ್ನು [illegible] ಯಲ್ಲೆಲ್ಲ [illegible] ಪಾಲನಕ್ಕಾಗಿ [illegible] ಪ್ರಜೆಗಳ [illegible] ನೆಯು ಕಳವಳ [illegible]

— ಬೆಳಗಾವಿಯ [illegible] ರಾಯಗಳು [illegible] ನಗರ [illegible] ಬಟ್ಟೆ ಇವರನ್ನು ಎಲ್ಲಿ [illegible] ಹಾಸು ನಡೆದಿದೆ

— ಅಮೃತಸರದಲ್ಲಿ ಒಬ್ಬ ಮುಸಲ್ಮಾನ [illegible] ಅಂಗಡಿಯಿಂದ ೧೧ ಮಂದಿ ಮುಸಲ್ಮಾನರು [illegible] ಕೊಂಡರು [illegible] ಕೂಡಲೆ ಎಚ್ಚರದಲ್ಲಿ [illegible] ಜನರು ಗಾಯಗೊಂಡಿರುವರು [illegible] ಕೊಂಡಿರುವನು

— ಕೋಲಾರದ [illegible] ಬಾಲಕ [illegible] ಆರೋಗ್ಯವನ್ನು [illegible] ಅಪಮಾನ ಮಾಡಿದ ಬಗ್ಗೆ [illegible] ದಂಡನೆಯಾಗಿದೆ' ಬ್ರಿಟಿಶ ನ್ಯಾಯದೇವಿಯು ದಯಾಸಾಗರಳು '

— ಒಬ್ಬ ಹರಿಬಾಡವ [illegible] ಫ್ರಾನ್ಸದೇಶದ ರಾಜಧಾನಿಯಾದ ಪಾರೀಸ ಪಟ್ಟಣದಲ್ಲಿ ಒಂದು ಚಮತ್ಕಾರ ಮಾಡಿ ತೋರಿಸಿದನು, ೬-೮ ಸೇರ ನೀರು ಕುಡಿದನು ಮತ್ತು ಅದನ್ನು ಬಾಯೊಳಗಿಂದ ೭ ಅಡಿ ಎತ್ತರವಾಗಿ ಕಾರಿಬಿಟ್ಟನು!

— ಅಮೇರಿಕೆಯಲ್ಲಿ ಒಬ್ಬ [illegible] ಇರುವನು. ಆತನ ಗಂಟಲು ವಿಚಿತ್ರವಾಗಿ ನಿರ್ಮಿಸಲ್ಪಟ್ಟಿದೆ. ಒಂದು ಬಲವಾದ ಧ್ವನಿಯುಳ್ಳದು, ಒಂದು ಕರ್ಣಮಧುರವಾದ ಧ್ವನಿಯುಳ್ಳದು

— ಮಹಾತ್ಮರ ಶಿಷ್ಯರಿಗೆ [illegible] ಮಿಸ್ ಮೆಡೆಲೇನ ಸ್ಲೇಡರವರು ಕಳೆದ ಶುಕ್ರವಾರಕ್ಕೆ ಮುಂಬಯಿಗೆ ಬಂದಿಳಿದರು. ಅವರಿಗೆ ಸ್ವಾಗತೀಕರಿಸಲು ಮಹಾತ್ಮರ ಕೆಲ ಭಕ್ತರು ಬಂದರದ ಮೇಲೆ ಹೋಗಿದ್ದರು. ಸ್ಲೇಡರವರು ಕೂಡಲೆ ತಮ್ಮ ಗುರುಗಳಾದ ಮಹಾತ್ಮರ ದರ್ಶನಕ್ಕೆ ಅಹಮ್ಮದಾಬಾದಿಗೆ ತೆರಳಿದರು

— ಕಾಶ್ಮೀರದ ಮಹಾರಾಜರ ಗಾದಿಯ ಮೇಲೆ ರಾಜಾ ಸರ್ ಹರಿಸಿಂಗರವರು ಆರೂಢರಾಗಿರುವರು. ಮಹಾರಾಜರಿಗೆ ದತ್ತಕ ಪುತ್ರರಿರುವರು. ಅವರಿಗೆ ಗಾದಿಯ ಅಧಿಕಾರವಿಲ್ಲ ಮಹಾರಾಜರ ಶ್ರಾದ್ಧ ಪಕ್ಷ ಇತ್ಯಾದಿ ಉತ್ತರಕ್ರಿಯೆ ನಡಸುವ ಅಧಿಕಾರ ಮಾತ್ರ ದೊರಕಿದೆ. ರಾಜ್ಯಾಧಿಕಾರವು ಸರ್ ಹರಿಸಿಂಗರಿಗೆ, ಸ್ವಾಮ್ಯಾಧಿಕಾರವು ದತ್ತ ಪುತ್ರರಿಗೆ ಹೀಗೆ ಇದೆ!

GIBB HIGH SCHOOL AFFAIRS.

(1)

To

The Editor, The "Kanara News",
Kumta

Sir

I am sending herewith a letter received from Mr N S Kamat in reply to my enquiry and request you to publish the same in the next issue of your paper in fairness to all concerned

Sirsi [illegible] 11-192[illegible]	Yours truly *P V Pandit*

Kumta,

Dear Sir

In reply to your kind enquiry I am sending a detailed statement of facts for your perusal and information

"My attention has been drawn to a letter published lately in a local paper alleged to have been written by a "Guardian". Among other things the letter is intended to show that everything in our school is at sixes and sevens and that the larger number of classes are not looked after. This in the very face of it sounds strange and unusual not to say ridiculous. When I refer to my diary I recall to my mind an incident which took place on Thursday the 8th of January 192[illegible], just at the beginning of the second period in our school. A certain guardian came to me and informed me that the classes seemed to be in disorder and that they were not provided for. It must be noted that according to our time tables classes are to change and subject masters have to change places at the expiry of their periods. Such was the time then, and I could see that the gentleman was not able to understand things properly. Now referring to the time tables of the time I find that the work for the period was assigned as under:—

Subject	*Subject teacher*
Std VII Sanskrit, Kanarese & Persian	Myself, Messrs Baliga, & Mulla
" VI Mathematics	Mr M M Pai
" V A & B Science	" P. K Pai
" IV History	" R L Hegde
" III Copy writing	" A. V Bhatkalkar
" II English	" G V Kamat
" I Vernacular	" M S Gaitonde

Now the fact was that when the gentleman came to our school, he first saw Mr. Baliga in the Kanarese class-room waiting for Kanarese boys of Std VII to be dismissed by Mr M M Pai, the subject-master then present in standard VII. He enquired of Mr Baliga as to where I was. He was told to see me in the office room. He came there and on the way he met Mr Mulla in the library near the Persian class waiting for Persian boys of Std. VII. On the gentleman's telling me that the classes were vacant and very few teachers were there I moved with him at once when he himself saw Mr M. M. Pai in Std VI, Mr. R. L Hegde in Std. IV and Mr. G V Kamat in Std. II. In the absence of Mr. Gaitonde on leave, Mr. R. A Shanbhag who was then doing typing work in the office room was asked to take Standard I and so he was going there. The rooms of Std. V both divisions were empty as the boys of that standard had all gone to the lower building for Science to be taken by Mr P K Pai and boys of std III had gone to the Drawing Class up-stairs for copy-writing. So every class was obviously duly looked after and I thought the gentleman was dis-illusioned. The gentleman did not deign to go up stairs or peep into the laboratory building for reasons not known. Thereafter the gentleman was again after me telling me that Mr M. M. Pai's tuition in Mathematics was too high for even std. VII. I assured him that the University & the Inspecting officers had assessed his work at its worth in as much as our result in Mathematics was uniformly good and several boys passed with 'distinction' every year in Mathematics. He then asked me to give a free place or a half-free place or a scholarship to his eldest son attending our school. I tried to satisfy him that as the boy stood very low in the examination he could not be given such a place according to the rules. So we parted and I went to std VII for Sanskrit, thanking him all the same for his suggestions.

Now it is not known why after nearly 9 months during which time much water had flown under the bridge, just on the eve of his getting an order of transfer, he is giving the letter with so many mis-statements perhaps under bad advice. Had I known before, that the gentleman was of such a temperament, I would have taken care on the very

॥ ಶ್ರೀ ಶಾಂತಾದುರ್ಗಾ ಪ್ರಸನ್ನ ॥

ವೈಶ್ಯ ಪರಿಷತ್ತಿನ ಪ್ರಥಮ ಅಧಿವೇಶನ.

ಜಾಹೀರ ಪ್ರಕಟಣೆ ನಂ. ೨.

ಸನ್ಮಾನನೀಯರಾದ ಪ್ರಿಯ ಜ್ಞಾತಿ ಬಾಂಧವರೇ,

ಪ್ರೇಮಪೂರ್ವಕ ವಿನಂತಿ ಮಾಡುವದೇನಂದರೆ, ಮೊದಲಿನ ವಿನಂತಿಪತ್ರಕದಲ್ಲಿ ಪ್ರಕಟಿಸಿದಂತೆ, ಪರಿಷತ್ತಿನ ಸಂಬಂಧದ ತಯಾರಿಯು ರಭಸದಿಂದ ನಡೆದದೆ. **ಶ್ರೀ ಸಂಸ್ಥಾನ ಧಾರಗಳದಲ್ಲಿ** ಜನರ ಉಳಕೊಳ್ಳುವ ವ್ಯವಸ್ಥೆ ಮಾಡಲ್ಪಟ್ಟಿದೆ. ಅಲ್ಲಿಯ ೧೫ ಬಂಗಲಿಗಳು ಸಾಕಾಗಲಿಕ್ಕಿಲ್ಲೆಂದು ತಿಳಿದು ಬಂದದ್ದರಿಂದ, ೨೦೦-೩೦೦ ಮಂದಿಗಳು ಉಳಿಯಬಹುದಾದಂಥ ಇನ್ನೆರಡು ಮಂಟಪಗಳು ಕಟ್ಟಲ್ಪಡುತ್ತಿವೆ ಇದರ ಹೊರತು, ಸುಮ್ಮಾರೇ ೬೦೦ ಮಂದಿಗಳಿಗೆ ಊಟ ಮಾಡಲನುಕೂಲವಾಗುವಷ್ಟು ದೊಡ್ಡದಾದ ಭೋಜನ ಮಂಟಪವು ತಯಾರಿಸಲ್ಪಟ್ಟಿದೆ.

ಆಫೀಸುಗಳು—ಟಿಕೀಟ, ಬೇಂಕು, ಪೋಸ್ಟು, ಆರೋಗ್ಯ, ಸ್ವಯಂಸೇವಕ ಹಾಗೂ ಸ್ವಾಗತ ಮಂಡಳ ಹೀಗೆ ಭಿನ್ನ ಭಿನ್ನ ಆಫೀಸುಗಳು ತೆರೆಯಲ್ಪಡುವವು. ವಸತಿಗೃಹ, ವಾಹನ, ದೀಪ, ಪ್ರದರ್ಶನ, ಗಾಯನ, ವಾಚನಾಲಯ, ಭೋಜನ ಇತ್ಯಾದಿಗಳಿಗಾಗಿ ಮಂಡಳಗಳು ನೇಮಿಸಲ್ಪಟ್ಟಿವೆ. ಹಾಗೆಯೇ ಹೇರ ಕಟಿಂಗ ಸೆಲೂನ, ಫೋಟೋಗ್ರಾಫಿಂಗ ಶೊಪ್, ಚಹಾ ಹೋಟೆಲ್, ಸೋಡಾ, ಸಿಗರೆಟ್, ವೀಳ್ಯ ಇತ್ಯಾದಿಗಳ ಅಂಗಡಿಗಳನ್ನಿಟ್ಟು ವಿಶೇಷ ವ್ಯವಸ್ಥೆ ಮಾಡಲ್ಪಡುವದು ಇವುಗಳಲ್ಲೆಲ್ಲ ದುಡಿಯಲಿಕ್ಕೆ ೨೦೦ ಗೃಹಸ್ಥರು ಅತ್ಯಂತ ಸಂತೋಷದಿಂದ ತಯಾರಾಗಿ ಬಂದಿರುವರು. ಇದಲ್ಲದೆ, ಇಲ್ಲಿಯ ಸ್ವಜ್ಞಾತಿಯೊಳಗಿನ ೧೦೨ ಮಂದಿ ತರಿಯರು ತಮ್ಮ ಹೆಸರುಗಳನ್ನು ಸ್ವಯಂಸೇವಕ ಪಟದಲ್ಲಿ ದಾಖಲ ಮಾಡಿಕೊಂಡಿರುವರು.

ಸದ್ಯಕ್ಕೆ ಕಾರ್ಯಕಾರಿ ಮಂಡಳದೊಳಗಿನ ರಾ. ರಾ ನಾಮದಾರ ಜಯರಾಮ ವಿಷ್ಣು ಶೇಟ ಖಲಪ, ಎಡ್ವೋಕೇಟ, ಗೋವಿಂದ ಬಾಲಕೃಷ್ಣ ಶೇಟ ಬಾಂದೇಕರ, ಪುರುಷೋತ್ತಮ ಭಾಸ್ಕರ ಶೇಟ ನಾಪೇಕರ, ಕಾಶೀನಾಥ ಮಹಾದೇವ ಶೇಟ ನೇವಗಿ, ಪುರುಷೋತ್ತಮ ವಿಷ್ಣು ಶೇಟ ಕರ್ವೆ, ಇವರು ಸಾವಂತವಾಡಿ, ವೆಂಗುರ್ಲೆ, ಕುಡಾಳ, ಬಾಂದೇಂ, ಆರಂವದೇಂ, ಪಾವಸೀ, ಸಾಂಖಳೀ, ಡಿಚೋಲಿ, ಪೇಡಣೇಂ, ಪಣಜಿ, ಸಾಂಗೇ, ಫೋಂಡೇಂ, ಮುರಗಾಂವ, ಹಣಜೂಣ, ಹಡಫಡೇಂ, ಕಳಂಗುಟ, ಪರೀ ಮುಂತಾದ ಸ್ಥಳಗಳಲ್ಲಿ ಹೋಗಿ ಸ್ವಸಮಾಜದವರ ಸಭೆ ಸೇರಿಸಿದರು ಹಾಗು ಮಡಗಾಂವ ಇತ್ಯಾದಿ ಸ್ಥಳಗಳಲ್ಲಿ ಪ್ರಮುಖರ ಭೆಟ್ಟಿ ಪಡೆದರು ಸದಸ್ಯರು ಸಹಾಯ ಮಾಡಲು ಅಭಿವಚನ ಕೊಟ್ಟಿರುವರು. ಹಾಗು ಇನ್ನು ಅಲ್ಪಾವಧಿಯಲ್ಲಿಯೇ ಮುಂಬಯಿ ಹಾಗು ರತ್ನಾಗಿರಿ ಜಿಲ್ಲೆಗಳ ಉಳಿದ ಊರುಗಳಲ್ಲಿಯೂ, ಶಹಾಪೂರ, ನಂದಗಡ, ಚಂದಗಡ, ಹಳಿಯಾಳ ಇತ್ಯಾದಿ ಸ್ಥಳಗಳಲ್ಲಿಯೂ ಹೋಗುವ ನಿಶ್ಚಯವಾಗಿರುತ್ತದೆ. ಪರಿಷತ್ತಿನ ಅಧಿವೇಶನಕ್ಕೆ ಇನ್ನು ಹೆಚ್ಚು ಅವಕಾಶವಿಲ್ಲ ಅದರಿಂದ ಗೋಕರ್ಣ, ಕಾರವಾರ, ಕುಮಟಾ, ಹೊನ್ನಾವರ, ಅಂಕೋಲಾ, ಮಂಗಳೂರ, ಕೋಚೀನ ಇತ್ಯಾದಿ ಸ್ಥಳಗಳಲ್ಲಿ ಹೋಗಲಿಕ್ಕೆ ಶಕ್ಯವಿಲ್ಲದ್ದರಿಂದ, ಅಲ್ಲಲ್ಲಿಯ ಪ್ರಮುಖರು ಪರಿಷತ್ತಿನ ವಿಷಯ ಜಾಗೃತಿ ಮಾಡಲು ಅನುಗ್ರಹಿಸಬೇಕಾಗಿದೆ.

ಪರಿಷತ್ತಿಗಾಗಿ ಸುಮಾರು ೬-೭ ಸಾವಿರ ರೂಪಾಯಿ ಖರ್ಚು ತಗಲುವದು ಪಣಜಿ ಮತ್ತು ಪೆಡಣೆ ಇವುಗಳಲ್ಲಿಯೇ ೧೦೦೦-೧೨೦೦ ರೂಪಾಯಿಗಳು ಖರ್ಚಿಗಾಗಿ ಮುಂದಾಗಿ ಕೂಡಿಸಲ್ಪಟ್ಟಿವೆ. ಹೀಗೆ ಶಕ್ತಿಮೀರಿ ಪರಿಷತ್ತಿನ ಸಂಬಂಧದ ಕಾರ್ಯಗಳಿಗೆ ಪ್ರಾರಂಭವಾಗಿದೆ, ಈಗ ಪರಸ್ಥಳದ ಜ್ಞಾತಿ ಬಾಂಧವರು ದ್ರವ್ಯಸಹಾಯ ಮಾಡಬೇಕಾಗಿ ಅಪೇಕ್ಷೆಯಿದೆ ಕಾರಣ, ಜಾಹೀರಪತ್ರಕದಲ್ಲಿ ವಿನಂತಿ ಮಾಡಿದಂತೆ, ತಮ್ಮ ತಮ್ಮ ಊರಲ್ಲಿ ಸಭೆಸೇರಿಸಿ, ಪರಿಷತ್ತಿನ ವಿಷಯ ಎಷ್ಟು ಜಾಗೃತಿಯಾಯಿತು, ಎಷ್ಟು ನಿಧಿಸಂಚಯವಾಯಿತು, ತಮ್ಮ ಊರೊಳಗಿಂದ, ಸಂಸ್ಥೆಯೊಳಗಿಂದ ಸ್ವಯಂಸಿದ್ಧ ಎಷ್ಟು ಪ್ರತಿನಿಧಿಗಳು ಬರುವ ಸಂಭವವಿದೆ, ಅವರ ಹೆಸರುಗಳೇನು, ಎಂಬ ಮಾಹಿತಿಯನ್ನು ಕಾರ್ಯಕಾರಿ ಮಂಡಳದ ಕಾರ್ಯದರ್ಶಿಗಳಾದ ರಾ. ರಾ. **ವಾಮನ ಅನಂತ ಶೇಟ, ಖಲಪ, ಮ್ಹಾಪಸೆ—ಗೋವಾ** ಇವರಿಗೆ ಶೀಘ್ರವೇ ತಿಳಿಸಬೇಕು ಈ ಜ್ಞಾತಿ ಕಾರ್ಯವನ್ನು ಸ್ವಜ್ಞಾತಿ ಬಾಂಧವರ ಸಹಾಯದ ಆಶೆ ಹಿಡಿದು ನಾವು ಕೈಕೊಂಡಿದ್ದೇವೆ. ಅದರಿಂದ ಸಮಸ್ತ ಜ್ಞಾತಿ ಗೃಹಸ್ಥರು ನಮಗೆ ಸಮಸ್ತ ಪ್ರಕಾರದ ಸಹಾಯವನ್ನೀಯಬೇಕಾಗಿಯೂ, ಪರಿಷತ್ತಿಗೆ ಅನುಗ್ರಹಿಸಿ ತಕ್ಕ ಆಲೋಚನೆ ಕೊಡಬೇಕಾಗಿಯೂ ನಮ್ಮ ವಿನಂತಿ ಇದೆ

ಪ್ರತಿನಿಧಿ, ಪ್ರೇಕ್ಷಕ ಮುಂತಾದವರ ಸಂಬಂಧ ನಿಯಮಗಳು.

೧. ಪರಿಷತ್ತಿನ ನಿಧಿಗೆ ರೂ. ೧೫ ಅಥವಾ ಅದಕ್ಕೂ ಮಿಕ್ಕಿ ದ್ರವ್ಯಸಹಾಯ ಮಾಡುವವರಲ್ಲಿ ಗೋಮಾಂತಕದ ನಿವಾಸಿಗಳಾದ ಸ್ವಜ್ಞಾತಿ ಗೃಹಸ್ಥರಿಗೆ ಸ್ವಾಗತ ಮಂಡಳದ ಸಭಾಸದರಾಗಿಯೂ, ಪರಸ್ಥಳದ ಸ್ವಜ್ಞಾತಿ ಗೃಹಸ್ಥರಿಗೆ ಪರಿಷತ್ತಿನ ಆಶ್ರಯದಾತರೆಂದೂ ಎಣಿಸಲ್ಪಡುವದು.
ಮೇಲಿನ ಸಮಸ್ತ ಗೃಹಸ್ಥರಿಗೆ ಪರಿಷತ್ತಿನ ಪ್ರತಿನಿಧಿಗಳೆಂದು ಹೇಳಲ್ಪಡುವದು. ಅವರ ಊಟದ ವ್ಯವಸ್ಥೆಯನ್ನು ಪರಿಷತ್ತು ಕೈಕೊಳ್ಳುವದು.

೨. ಪ್ರತಿನಿಧಿ ಫೀ ಭೋಜನ ಖರ್ಚು ಸಹಿತ ೭ ರೂಪಾಯಿ ಇಟ್ಟಿರುತ್ತದೆ.

೩. ಊರುಗಳೊಳಗಿಂದ ಪರಿಷತ್ತಿನ ಸಂಬಂಧ ಬಟ್ಟು ಮಾಡಿದ ನಿಧಿಯು ಪರಿಷತ್ತಿನ ವಿಶೇಷ ಕೆಲಸಕ್ಕಾಗಿ ಖರ್ಚು ಮಾಡಲ್ಪಡುವದು.

೪. ಪರಿಷತ್ತಿನ ನಿಧಿಗೆ ೨ ರೂಪಾಯಿ ಕೊಡುವವರಿಗೆ ೩ ದಿವಸಗಳ ಪರಿಷತ್ತು ಪ್ರೇಕ್ಷಕ ಟಿಕೀಟು ಕೊಡಲ್ಪಡುವದು. ೧ ರೂಪಾಯಿ ಕೊಡುವವರಿಗೆ ೧ ದಿವಸದ ಟಿಕೀಟು ಕೊಡಲ್ಪಡುವದು ಪ್ರೇಕ್ಷಕರು ಭೋಜನ ಟಿಕೀಟಿನ ಬಗ್ಗೆ ದಿನಾ ೧ ರೂಪಾಯಿ ಕೊಡಬೇಕಾಗುವದು. ೩ ದಿನಗಳ ಪ್ರೇಕ್ಷಕ ಮತ್ತು ಭೋಜನ ಟಿಕೀಟುಗಳಿಗೆ ೫ ರೂಪಾಯಿ ಬೀಳುವವು.

ಪ್ರತಿನಿಧಿಗಳ ಊಟದ ವ್ಯವಸ್ಥೆಯು ಡಿಸೆಂಬರ ತಾ. ೨೭ ರಿಂದ ೩೧ರ ವರೆಗೆ ಮಾಡಲ್ಪಡುವದು.

೫ ಪರಿಷತ್ತಿನ ಅಧಿವೇಶನಕ್ಕೆ ಡಿಸೆಂಬರ ತಾ ೨೮, ೨೯, ೩೦ ಸೋಮವಾರ, ಮಂಗಳವಾರ ಹಾಗು ಬುಧವಾರ ಈ ದಿನಗಳು ನಿಶ್ಚಯಮಾಡಲ್ಪಟ್ಟಿವೆ. ಮೊಟ್ಟಮೊದಲು ವಿಶೇಷ ಕಾರ್ಯಗಳ ಕುರಿತು, ಅಂದರೆ, ಸ್ವಸಮಾಜದಲ್ಲಿ ಶಿಕ್ಷಣ ಪ್ರಸಾರವು ಹ್ಯಾಗಾಗುವದು, ಎಂಬ ವಿಷಯ ಚರ್ಚೆ ನಡಿಸಿ, ಆ ಕುರಿತು ತಕ್ಕ ಉಪಾಯಗಳನ್ನು ಸೂಚಿಸುವ ಹಾಗು ಅವನ್ನು ಅಮಲಿನಲ್ಲಿ ತರುವ ಪ್ರಯತ್ನ, ಈ ಸಂಬಂಧದ ಕೆಲಸ ನಡಿಯುವದು, ಮತ್ತು ಈ ಕೆಲಸ ಮುಗಿದ ಬಳಿಕ, ಸ್ವಜ್ಞಾತಿಯ ಉನ್ನತಿಯ ಇತರ ಮಾರ್ಗಗಳ ನಿಶ್ಚಯವಾಗುವದು. ಹಾಗು ಶಕ್ಯವಿದ್ದ ಮಾರ್ಗಗಳ ಅವಲಂಬ ಮಾಡುವದು, ಈ ಕುರಿತು ಕಾರ್ಯ ನಡೆಯುವದು.

ಈ ವರ್ಷ ಅಭಿಪ್ರಾಯದ [illegible] ಈ ಕೆಳಗಿನ ಸಭ್ಯ ಗೃಹಸ್ಥರು ಪರಿಷತ್ತಿನ ಅಧ್ಯಕ್ಷರಾಗಲು ಯೋಗ್ಯರಿರುವರೆಂದು ತೋರುತ್ತದೆ. ಇವರಲ್ಲಿ ಅಥವಾ [illegible] ರಾದರೂ [illegible] ಅವರ ಹೆಸರುಗಳನ್ನು ತಾ ೨೨ ನವ್ಹಂಬರದೊಳಗೆ ಸೂಚಿಸತಕ್ಕದ್ದು. ಆ ದಿನ ಸಂಧ್ಯಾಕಾಲಕ್ಕೆ [illegible] ಅಧ್ಯಕ್ಷರ [illegible]

ರಾ ರಾ ಜಗನ್ನಾಥ [illegible] ಪರಮಾನಂದ, ಬಿ	ರಾ ರಾ ಶಂಕರ ಯಶವಂತ ಶೇಣ್ವಿ,
ರಾ ರಾ ವಿಷ್ಣು [illegible] ಶೈ, ಎಲ್ [illegible]	ರಾ ರಾ ಬಾಬಣ ಬಾಬ್ದೂ ಕೋರಗಾಂವಕರ,
ರಾ ರಾ ನಾರಾಯಣ [illegible] ವಕೀಲ	ರಾ ರಾ ನಾರಾಯಣ ಬಳವಂತರಾವ ವಡೇರ, ಎಂ ಏ ಎಲ್ ಎಲ್. ಎಂ,
ರಾ ರಾ ಪ್ರೊ [illegible] ಮಹಾದೇವ [illegible]	ರಾ ರಾ ಡಾ। ರಾಮಕೃಷ್ಣ ನಾರಾಯಣ ಪರಮಾನಂದ ಎಲ್ ಎಂ.ಎಂಡ
ರಾ ರಾ [illegible] ಆತ್ಮಾರಾಮ [illegible] ಎಲ್ ಎಲ್ ಬಿ	[ಎಸ್,

[illegible] ತಯಾರಿಸುವ **ಕಲಾಕೌಶಲ್ಯದ ಸಾಮುಗ್ರಿಗಳ ಪ್ರದರ್ಶನ**

[illegible] ತರತರದ ಸಾಮುಗ್ರಿಗಳನ್ನು [illegible] ತಯಾರ ಮಾಡಿ ತಾ ೨೫ ನೇ ಡಿಸೆಂಬರ ವರೆಗೆ [illegible] ಸಾಮಗ್ರಿ ಸ್ವೀಕರಿಸಿದ ಬಗ್ಗೆ ಪಾವತಿ ಕೊಡಲ್ಪಡುವದು

ವೈಶ್ಯ ಪರಿಷತ್ತಿನ ಕಚೇರಿ
[illegible]
ತಾ ೧೧ ನೇ ನವಂಬರ [illegible]

ತಮ್ಮ ನಮ್ರ,
ವಾಮನ ಅನಂತ ಶೇಟ ಖಲಪ,
ಮಹಾದೇವ ಗೋವಿಂದ ಶೇಟ ನೇವಗಿ,
ಶ್ರೀಪಾದ ಅಚ್ಯುತ ಶೇಟ ಕಳಂಗುಟಕರ,
ಪುರುಷೋತ್ತಮ ವಿಷ್ಣು ಶೇಟ ಕನೇರ,

ವೈಶ್ಯ ಪರಿಷತ್ತಿನ ಕಾರ್ಯದರ್ಶಿಗಳು
ಶ್ರೀ ಸಂಸ್ಥಾನ ಧಾರಗಳ

"ಲೋಕರಹಸ್ಯ"

ಈ [illegible] ವಾರ್ತಾ [illegible] ಯ ಅತ್ಯುತ್ತಮ [illegible] ವನೆಯು [illegible] ದ ವಿಚಾರಗಳ, [illegible] ಜ್ಯೋತಿಷ್ಯ [illegible] ಗಳು, ಗೋಪಾಲನೆ [illegible] ಶಗಳೇ ಮೊದಲಾದ ವಿಷಯಗಳಿಲ್ಲಿವೆ [illegible] ಉತ್ತಮ ಪತ್ರಿಕೆ. [illegible] ಚಿತ್ರಗಳ ತುಂಬಿ ತುಳುಕುತ್ತಿವೆ ಪ್ರತಿ ಮಾಸದಲ್ಲೂ ೬೦ ಪುಟಗಳಿಗೆ [illegible] ವಿಷಯಗಳಿರುತ್ತವೆ

ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ
ರೂ ೩—೦—೦ ಮಾತ್ರ
ಮಾದರಿ ಸಂಚಿಕೆಗೆ ಕ್ರಯ ೦—೫—೦
ಮಾದರಿ ಸಂಚಿಕೆಗಳನ್ನು ಪುಕ್ಕಟೆಯಾಗಿ ಕೊಡುವದಿಲ್ಲ

ಮುಕಿದ ಹಣವನ್ನು ನಷ್ಟ ಮಾಡದೆ, ಮುಕಿದ ರೂಪಾಯಿ ಇದ್ದಕ್ಕಿದ್ದ ಹಾಗೆಯೇ ತಿಂಗಳಿಗೆ ೧೦೦ ರೂ ಗಿಂತ ಹೆಚ್ಚಾಗಿಯೇ ಹಣ ಸಂಪಾದನೆ ಮಾಡುವ ರೀತಿಯನ್ನು ತಿಳಿಯುವ ಬಗ್ಗೆ ಒಂದಾಣೆ ಸ್ಟ್ಯಾಂಪು ಸಮೇತ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ
"ಲೋಕರಹಸ್ಯ"
ವೀರರಾಜೇಂದ್ರ ಪೇಟೆ, ಕೊಡಗು

ಜಾಹೀರ ವಿನಂತಿ.

[illegible] ಪ್ರಶಸ್ತ ಸ್ಥಳದಲ್ಲಿ ಭವ್ಯ [illegible] ಫಸರ ಭಾಡಿಗೆ ಕೊಡುವದು [illegible] ವಾಹಿತಿ ಕೆಳಗಿನ ಪತ್ತೆ [illegible] ಲ್ಲಬಹುದು.

ವೆಂಕಟ್ರಾಯ [illegible] ನಾಯ್ಕ,
ಪೆ ಸದರ

ಶ್ರೀ ತುಲಸೀದಾಸ ರಾಮಾಯಣ.

[illegible] ಪ್ರಕಟವಾಗಿದೆ
[illegible] ಕೃಷ್ಣಭಾರದ್ವಾಜ [illegible] ರೂಪಾಯಿ ೧—೬—೦ (ಶ್ರೀಷ ಪ್ರತಿಗೆ [illegible] ೪ ೦ (ಸಾಮಾನ್ಯ ಪ್ರತಿಗೆ)
ಪತ್ತೆ —[illegible] ಬಸವನಗುಡಿ,
ಬೆಂಗಳೂರು

ರೋಗದಿಂದ ನರಳ ಬೇಡಿರಿ!

ನಮ್ಮಲ್ಲಿ ವಾತ ಗುಲಾಬು, ಪಿತ್ತ ಗುಲಾಬು, ಎಲ್ಲ ತರದ ಜ್ವರ, ಜ್ವರಗಡ್ಡೆ, ಬಿಳಿಜ್ವರ, ಕಾಮಿಲೆ, ನಮ್ಮು ಕೆಮ್ಮು, ಕಫ, ಅಗ್ನಿಮಾಂದ್ಯ, ಮಲಬದ್ಧತೆ, ವಾಯುವ್ಯಾಧಿ, ವಳ, ವಾತ, ತಲೆಮದಕ, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ, (ಗರ್ಮಿ) ಬಾಲಗ್ರಹ ಖಜ್ಜಿ, ಗಜಕರ್ಣಗಳಿಗೆ ಖಂಡಿತ ಗುಣ ಬರುವ ಜರ್ಮನ ಅಮೇರಿಕನ, ಫ್ರೇಂಚ ಇಂಗ್ಲಿಷ ಮತ್ತು ದೇಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು

ಇದಲ್ಲದೆ ಎಲ್ಲ ತರದ ಸ್ಟೇಶನರಿ, ಪರಫ್ಯೂಮರಿ ಸ್ಕೂಲ ಸಾಮಾನು, ಹಿಲ್ಡ ಪೊಮ್ಮ ಬ್ಯಾಲ, ಸುಪರಲೆಕ್ಸ, ಮೋರಿಸ ಮೊಟಾರ ಬಂಡಿಗಳು, ಸವಲತಿನ ದರದಿಂದ ಸಿಗುವವು ನಮ್ಮಲ್ಲಿಲ್ಲದ ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡಲಾಗುವುದು

ಎಸ್ ಎಲ್ ಧಾಕಪ್ಪ ಮತ್ತು ಬ್ರದರ್ಸ,
ಸಿರಸಿ.

ಬಿಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ದೇವರ ಮಂಟಪಗಳೂ,
ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರೀ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತನ್ನೂ ತರದ ಮನೇ ಸಾಮಾನು ಸಿಗುತದೆ

ನಮ್ಮ ವಿಳಾಸ —
ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

first day to cut short the matter and spare myself the time and energy But I took him for an honest enquirer. Now if my statement cannot take the notion off his head, I must only rest content by pitying him I am only sorry that the gentleman has fallen a victim to the machinations of some designing persons (fortunately very few) who feel pleasure at anything said against the school'

6 11-1925. **N.S.Kamat,**
Supdt

(2)

Sir,

I am not the least surprised to see the letter written by Mr N S Kamat It is a reply to the enquiry made by Rao Bahaddur Pandit of Sirsi It is but natural that a servant should give false colour to facts in order to continue to be in the good books of his superiors I feel sure that the public will scarcely attach any importance to it and will treat it as a mere scrap of paper

Mr Kamat in his letter has tried to enlighten the readers by quoting extracts from time-tables and his diary. I know that they are not registered documents and people will take them for what they are worth I have already published the true facts in my previous letter and I need not repeat them now I have facts and figures noted down in a rough note book which I might show if required to satisfy Rao Bahaddur, if he in fairness wants to convince himself of the veracity of my statement about the habitual irregularity on the part of the teachers in general which reflects on the slack supervision of Mr Kamat

Mr. Kamat says that I visited the school just at the beginning of the second period, but in reality the time was 12-15 p m *i e* 25 minutes after the second period began In the last meeting of the Governing Body of the Society, Mr Kamat said that I went to school exactly at 11 a. m I can cite witnesses to prove that he did say it This shows his expertness to twist facts as they suit him

Then Mr Kamat proceeds to say that I requested him to confer a free or half free place upon my eldest son This is utterly false and this is his dodge to prejudice the readers to believe that I have written this out of grudge. Such tricks have gone out of use nowadays, for, people have known their value.

Lastly Mr Kamat asserts that I published my last letter nine months after the incident took place, just on the eve of getting my transfer orders, under bad advice because I have fallen a victim to the machinations of designing persons

To tell the truth, I had no intention to publish anything in the newspaper about the school management. I remained silent because I was assured by Mr Kamat that matters would be mended and he issued immediately in my presence a notice to the monitors requiring them to report to him the absence of a teacher in the class during any period I found no improvement I noticed repetitions by observing students going to and returning from school at irregular hours and thought it best to bring the matter to the notice of Rao Bahaddur Pandit and thus mend the evil Fortunately I met Rao Bahaddur on or about the thirteenth of October of 1925 After exchanging curtsies I spoke to him about the management of the school Three or four days later I was surprised to read in the newspaper that Mr Kamat made false allegations against me before the Governing Body and I had no other alternative than to give publicity to the facts as they were through the said press Mr Kamat need not secretly congratulate himself with the idea that I was afraid of him to refrain myself from publishing it so long till the eve of my transfer If he still entertains such wrong notion I must only rest content by pitying him

In conclusion I have to say once again that it is neither the bad advice nor the machinations that led me to write my first letter, but it was for the misstatement of Mr Kamat in the open meeting of the last Governing Body that prompted me to publish it Mr Kamat dreams of machinations everywhere perhaps he reads himself in others and thinks that the world is full of machinations He might succeed by this way in throwing dust in the eyes of his superiors but people are not so simple as to be duped by it easily.

I will be thankful to Mr Kamat if he heartily spends his energy and time to the welfare of the School.

Yours truly,
M. S. Naik,
Guardian

[N. B The correspondence regarding this is closed If as Mr Kamat says everything in the School was all right and not at sixes & sevens we fail to understand why the Governing Body under the presidentship of Rao Bahaddur P. N. Pandit should have thought it proper & necessary to pass unanimously the 'Warning resolution to Teachers' for which Mr Kamat himself voted
Editor]

ವೇದಕಾಲದೊಳಗಣ

ಚರಕಿನ ಮಹತ್ವವು.

(೩ನೇ ಪಾನಿನಿಂದ ಮುಂದರಿಸಿದ್ದು)

ಯನ್ನು ಒಂದೇ ಸಮನೆ ಮಾಡಿದ್ದು ಇತಿಹಾಸದಲ್ಲಿ ಕಂಡುಬರುತ್ತದೆ

ಹನ್ನೊಂದನೇ ಶತಮಾನದಿಂದ ಈ ದೇಶದ ಮೇಲೆ ಪರದೇಶದ ಜನರ ದಾಳಿಗಳು ಆರಂಭಿಸಿದವು ಕ್ರಮಶಃ ಮುಸಲಮಾನರು ಈ ದೇಶವನ್ನು ವ್ಯಾಪಿಸಿ ಬಿಟ್ಟರು ಆದರೂ ಇಲ್ಲಿಯ ಉದ್ಯೋಗ ವ್ಯಾಪಾರಕ್ಕೆ ಏನೂ ಹಾನಿ ತಟ್ಟಲಿಲ್ಲ ಯಾಕಂದರೆ ಅವರಿಗೆ ಬರೇ ಈ ದೇಶದ ಮೇಲೆ ಅಧಿಕಾರವನ್ನು ಸ್ಥಾಪಿಸಿ, ರಾಜ್ಯವಿಸ್ತಾರವನ್ನಷ್ಟೇ ಮಾಡಬೇಕಾಗಿತ್ತು ಹೊರತು ಇಲ್ಲಿಯ ಕಲಾಕೌಶಲ್ಯಗಳನ್ನು, ವ್ಯಾಪಾರಗಳನ್ನು ನಾಶಗೊಳಿಸುವ ಇಚ್ಛೆ ಇದ್ದಿಲ್ಲ. ಇದ್ದರಿಂದಲೇ ಈ ದೇಶದೊಳಗಿನ ಬೇಸಾಯಕ್ಕೂ, ವ್ಯಾಪಾರೋದ್ಯೋಗಕ್ಕೂ ಮುಸಲಮಾನರಿಂದ ಏನೂ ಬಾಧೆಯಾಗಲಿಲ್ಲ

ಡಾಕ್ಟರ್ ಮೋರಲ್ಯಾಂಡ ಎಂಬ ಹೆಸರಿನ ಒಬ್ಬ ಪರದೇಶೀ ಪ್ರವಾಸಿಯು ಹದಿನಾರನೇ ಶತಮಾನದಲ್ಲಿ ಈ ದೇಶಕ್ಕೆ ಬಂದಿದ್ದನು ಅವನು ಬರೆದಿಟ್ಟ ವರ್ಣನೆಯು ಮೇಲಿಂದ, ಮುಸಲಮಾನರ ಉಚ್ಛ್ರಾಯ ಪ್ರಭುತ್ವದ ಕಾಲದಲ್ಲಿಯೂ ಭಾರತ ವ್ಯಾಪಾರ ಕಲಾಕೌಶಲ್ಯಗಳಿಗೆ ಏನೇನೂ ಹಾನಿ ತಟ್ಟದ ಹಾಗೆಂದು ತೋರುತ್ತದೆ ಆ ಮೇಲೆ ಮೊಗಲ ಸಾಮ್ರಾಜ್ಯವು ಸುರುವಾಯಿತು ಆದಾಗಲೂ ಅಕಬರನಂಥ ಪ್ರಜಾಕಲ್ಯಾಣರತ ಅರಸರು ಸಿಂಹಾಸನಾಧಿರೂಢರಾದ್ದರಿಂದ ಅವರಿಂದ ಕಲಾಕೌಶಲ್ಯಕ್ಕೆ ಉತ್ತೇಜನವೇ ದೊರೆಯಿತು

ಯುರೋಪಿಯನರು ಈ ದೇಶಕ್ಕೆ ಬರುವವರೆ [illegible] ಅವರು ಇಲ್ಲಿಯ ಕಲಾಕೌಶಲ್ಯಕ್ಕೆ ಮರುಳಾಗಿ ಹೋಗಿದ್ದರು

ಮತ್ತು ಅಂಥ ದೇಶದ ಕೂಡ ವ್ಯಾಪಾರ ಮಾಡಬೇಕು ಇಲ್ಲಿಯ ವ್ಯಾಪಾರವನ್ನು ತಮ್ಮದನ್ನಾಗಿ ಮಾಡಿಕೊಳ್ಳಬೇಕು, ಎಂಬ ಹೆಬ್ಬಯಕೆಯೇ ಅವರನ್ನು ಇಲ್ಲಿಗೆ ಬರಮಾಡಿತು. ಮೂರಿನೆಂಬ ಪ್ರಸಿದ್ಧ ಇತಿಹಾಸಕಾರನು ಬರೆದಿರುವದೇನಂದರೆ "ಭಾರತವರ್ಷದಲ್ಲಿಯಾವ ತರದ ತೆಳ್ಳನ್ನ ಮತ್ತು ಸುಂದರ ಅರಿವೆಯು ತಯಾರಾಗುತ್ತಿತ್ತೋ ಅಂಥ ಅರಿವೆಯು ಆ ಕಾಲಕ್ಕೆ ಜಗತ್ತಿನೊಳಗಿನ ಬೇರೆ ಯಾವ ದೇಶದಲ್ಲಿಯೂ ತಯಾರಾಗುತ್ತಿರಲಿಲ್ಲ. ಯಾಕಂದರೆ, ಆ ಕಲೆಯು [illegible] ಯಾರಿಗೂ ತಿಳಿದಿದ್ದಿಲ್ಲ ಈ ಕಲೆಯನ್ನೂ ಅರಿವೆಗಳನ್ನೂ ಕೈವಶ ಮಾಡಿಕೊಳ್ಳುವದಕ್ಕಾಗಿಯೇ ನಾನಾ ತರದ ಕಷ್ಟ-ನಷ್ಟಗಳನ್ನು ಸಹನ ಮಾಡಿ ಯುರೋಪಿಯನರು ಹಿಂದುಸ್ಥಾನಕ್ಕೆ ಬಂದರು"

ಈ ರೀತಿ ಹಿಂದುಸ್ಥಾನವು ತನ್ನ ಕೀರ್ತಿಯನ್ನು ಜಗತ್ತು ತುಂಬ ಹಬ್ಬಿಸಿಕೊಂಡಿತು. ಇದರ ಮುಖ್ಯಕಾರಣವೆಂದರೆ, ಭಾರತೀಯ ಮಲ್ಮಲ ಹಾಗೂ [illegible] ಅರಿವೆಗಳನ್ನು ನೋಡುವದರಲ್ಲಿ ಜನತೆಯು ಸ್ವಾಗತಮಾಡಿಕೊಂಡ ಪೂರ್ಣತೆಯೇ! ಇದ್ಯಾಕೆ? ಹೋದ ಇನ್ನೂರು ವರ್ಷಗಳ ಪರ್ಯಂತರ ಹಿಂದುಸ್ಥಾನವು ಈ ಕಲೆಯಲ್ಲಿ ಯಾರ್ಯಾರಿಗಿಂತಲೂ ಕಡೆಯಿದ್ದಿಲ್ಲ ಇದರ ಕಾರಣವು ಚರಕಿನ ಮಹತ್ವವು ಜನರಿಗೆ ಅಗ್ಗ ಚೆನ್ನಾಗಿ ತಿಳಿದುಬಂದಿತ್ತೆಂಬುದೇ ಆದರೆ ಈಗೇನು?

ಗೌರಿಹುಣ್ಣಿಮೆಯಿಂದ [illegible]

[illegible] ಜಯಕರ್ನಾಟಕ [illegible]

[illegible] ಆಲೂರ ವೆಂಕಟರಾಯ [illegible] ಪ್ರಪಂಚ [illegible] ಕರ್ನಾಟಕ [illegible] ಧಾರವಾಡ.

ಎಲ್ಲಾ ನೋವುಗಳಿಗೆ ದಿವ್ಯೌಷಧ!

ವಾತಹಾರಿ ತೈಲ.

[illegible] ಸುವಾಸಿಕ ಕಾಬೂಲಿ ಹಿಂಗು [illegible] ರಕ್ತ ಶುದ್ಧಿ [illegible] ಸುವಾಸಿಕ ಮಸ್ತಕರಾಜ ತೈಲ [illegible] ನೀಲಗಿರಿ ತೈಲ, [illegible]

ಕೆರೇಕರ ಕಾಬೂಲೀ ಹಿಂಗಿನ ದುಕಾನ.

[illegible] ಬಜಾರ, [illegible]

ಟಿ. ಎಸ್. ಮೋಟರ ಸರ್ವಿಸ. ಶಿವಮೊಗ್ಗಾ

[illegible] ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-[illegible], ಶಿವಮೊಗ್ಗಾ-ಹರಿಹರ-ದಾವಣಗೆರೆ, ಶಿವಮೊಗ್ಗಾ-ಕಳೂರಕಟ್ಟೆ, ಸಾಗರ-ಸೊರಬ-ಶಿರಾಳಕೊಪ್ಪ, ಸಾಗರ-[illegible]ಹಳ್ಳಿ, ಸಾಗರ-ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ [illegible] ದಕ್ಷಿಣ ಕನ್ನಡ ಜಿಲ್ಹೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ [illegible] ಮೋಟರ ಸರ್ವಿಸಿನ" [illegible], ಬಳ್ಳಾರಿ ಜಿಲ್ಹೆಯ [illegible] ಮೋಟರ ಸರ್ವಿಸಿನ" [illegible] ಪ್ರಯಾಣಿಕರ ಎಲ್ಲ ಸೌಕರ್ಯ [illegible]

[illegible] ಪ್ರಯಾಣಿಕರ [illegible] (Gersoppa Falls'), ಶಿವಮೊಗ್ಗಾ, ಸಾಗರ, [illegible] ಪ್ರಯಾಣ [illegible] ಶಿವಮೊಗ್ಗಾ, ಸಾಗರ, [illegible], [illegible]ಪುರ, [illegible] ಈ ಲೈನಿನಲ್ಲಿ ಮೋಟರ ಸರ್ವಿಸ [illegible]

ಕಾಲಕ್ರಮಗಳು.

[illegible] ಹೊರಡುವದು—	ಬೆಳಿಗ್ಗಿನ್ನ ೭ ಘಂಟೆಗೆ.
[illegible]	" ೧೦ "
[illegible] ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧ "
ಸಾಗರಕ್ಕೆ ಸೇರುವದು. ([illegible] ಮಾರ್ಗವಾಗಿ)—	ಸಾಯಂಕಾಲ ೬ "
[illegible] ಕಡೆಗೆ ಹೊರಡುವದು—	ಬೆಳಿಗ್ಗಿನ್ನ ೬ "
[illegible] ಸೇರುವದು—	" ೧೧ "
[illegible] —	ಮಧ್ಯಾಹ್ನ ೨ "
[illegible] —	ಸಾಯಂಕಾಲ [illegible] "

N. B. [illegible]

SHIMOGA,
22—11—1924.

M. MANJAPPA.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ [illegible] ಸುವರ್ಣಪದಕಗಳನ್ನು ಸಂಪಾದಿಸಿದ

ದ್ರಾಕ್ಷಾರ್ಕಮಧು.

[illegible] ಮತ್ತು ಧಾತುವೃದ್ಧಿ [illegible]

ಈ [illegible] ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. [illegible] (ನಿಜವಾದ [illegible] ಅನುಭವಕ್ಕೆ ಬರುವದು) [illegible] ಅಲ್ಲದಂತಾಗುವದು. [illegible] ದಿವಸದಲ್ಲಿ ಗುಣಬರುವದು. [illegible] ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ [illegible] ಕ್ಷಯರೋಗ, ಉದರರೋಗ ಮುಂತಾದ [illegible] ನಾಶವಾಗುವದು [illegible] ದಿವಸದಲ್ಲಿ [illegible] ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. [illegible] ಒಂದು ಬಾಟಲಿಯಿಂದ ಗುಣಬರುವದು. [illegible] ಬಾಟಲಿಯಿಂದ [illegible] ಒಂದು ಬಾಟ್ಲಿಯ ಕಿಮ್ಮತ್ತು [illegible] ಬಾಟಲಿಗಳನ್ನು ಒಂದೇ ಸಾರೆ [illegible] ಬಾಟಲಿ [illegible] ಬಾಟ್ಲಿಗೆ [illegible]

ವ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, [illegible] ಬೆಳಗಾಂವ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು

೧. ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೨೦.
೨. [illegible] ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೨೦, ೧೪೦.
೩. ತಬಲೆ ಜೋಡಿ ಕಿಂ. ೧೬, ೧೮, ೨೦, ೨೫.
೪ ಹಾರ್ಮೋನಿಯಮ ಗ್ಯಾಡ (ಮರಾಠಿ) ಕಿಂ. ೧||, ತಬಲೆ ಗ್ಯಾಡ ಕಿಂ. ೧೩ ಅ.

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ [illegible]ಗ್ರಜಿಯಿಂದ ಮಾಡಬೇಕು.

ಪತ್ತೆ:- ಗೋಪಾಳ ಸಖಾರಾಮ ಮಾ[illegible] ಕಂಪನಿ, ವಿಠ್ಠಲವಾಡಿ ಎದುರಿಗ [illegible] ಕಾಳಬಾದೇವಿ. ಮುಂಬಯಿ

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಸಾಧಾರಣ ಸಭೆಯು.

(ನಮ್ಮ ಪ್ರೇಷಿತ ಪ್ರತಿನಿಧಿಯಿಂದ)

ಈ ಸಭೆಯು ಮೊದಲು ಗೊತ್ತಾದಮೇರೆಗೆ ರವಿವಾರ ದಿ. ೨೨ ನೇ ಸಪ್ಟಂಬರ ದಿವಸ ಬೆಳಿಗ್ಗೆ ೮|| ಘಂಟೆಗೆ ಬಳ್ಳಾರಿಯ ನಗರ ಭವನದಲ್ಲಿ ಕೂಡಿತ್ತು. ಬೆಳಗಾಂವಿ ಧಾರವಾಡ, ವಿಜಾಪುರ, ಕಲಬುರಗಿ, ಮಂಗಳೂರು, ಬೆಂಗಳೂರು, ಮೈಸೂರು ಮೊದಲಾದ ದೂರ ದೂರದ ಪಟ್ಟಣಗಳಿಂದಲೂ ಪರಿಷತ್ತಿನ ಸಭಾಸದರು ಬಳ್ಳಾರಿಗೆ ದಯಮಾಡಿಸಿದ್ದರು. ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಕರ್ಪೂರ ಶ್ರೀನಿವಾಸರಾಯರೂ, ಕಾರ್ಯದರ್ಶಿಗಳಾದ ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪನವರೂ ಕರ್ನಾಟಕದ ಭಾಷಾಭಿವೃದ್ಧಿ ಕಾರ್ಯಕ್ಕಾಗಿ ಪರಿಶ್ರಮಿಸಿದ ಮೊದಲಾದ ಸಂದರ್ಭಗಳನ್ನು ಅಂತರಂಗದಲ್ಲಿ ನೆಲಸಿಟ್ಟುಕೊಂಡು ಸಭಾಕಾರ್ಯಗಳನ್ನೆಲ್ಲ ಬಹು ಸಮರ್ಪಕವಾಗಿ ನಡೆಸಿದರು. ಬಳ್ಳಾರಿಯ ಶ್ರೀ ಭೀಮರಾಯರು, ಶ್ರೀ ತಿಮ್ಮಣ್ಣರಾಯರು, ಕೋ. ಗುರುರಾಜರಾಯರು, ಡಿ. ಹಚ್. ಮಂಕರಾಯರು, ಡಿ. ಶ್ರೀನಿವಾಸರಾಯರು, ಚಂದ್ರಶೇಖರ ಶಾಸ್ತ್ರಿಗಳು, ಆ. ನರಸಿಂಹಲಪ್ಪನವರು ಇವರೇ ಮೊದಲಾದ ಅನೇಕ ಮಹನೀಯರು ಅತಿಥಿಗಳ ಆಗಮನದ ವಿಷಯದಲ್ಲಿಯೂ, ಸಭಾಕಾರ್ಯದ ಸಂಬಂಧದಿಂದಲೂ ಬಹು ಮಟ್ಟಿಗೆ ಉತ್ಸಾಹಯುಕ್ತರಾಗಿ ಕೆಲಸ ಮಾಡಿದರು.

ಪರಿಷತ್ತಿನ ಬೆಳಗಿನ ಅಧಿವೇಶನವು ಮುಗಿದು ಊಟವಾದ ನಂತರ ಸಾಯಂಕಾಲದಲ್ಲಿ ಮೈಸೂರಿನ ಶ್ರೀ ಬಿಂದೂರಾಯರವರು ಕುಮಾರವ್ಯಾಸನ ಭಾರತದ ವಿರಾಟಪರ್ವದೊಳಗಿನ ಕೀಚಕೋಪಾಖ್ಯಾನ ಭಾಗವನ್ನು ಬಹು ಸುಂದರವಾಗಿಯೂ, ಮನೋಹರವಾಗಿಯೂ ಹಾಡಿ ಸಭಾಸದರನ್ನು ಸಂತಸಗೊಳಿಸಿದರು.

ಸಾಯಂಕಾಲಕ್ಕೆ ಅದೇ ನಗರಭವನದಲ್ಲಿ ಬಳ್ಳಾರಿಯ ನಾಗರಿಕರ ಸಾರ್ವಜನಿಕ ಸಭೆಯಾಯಿತು. ಶ್ರೀ ಕರ್ಪೂರ ಶ್ರೀನಿವಾಸರಾಯರೇ ಅಧ್ಯಕ್ಷರಾಗಿದ್ದರು. ಶ್ರೀ ಮುದವೀಡು ಕೃಷ್ಣರಾಯರು, ಶ್ರೀ ಆಲೂರು ವೆಂಕಟರಾಯರು, 'ವಸಂತ' ಮಾಸಿಕದ ಸಂಪಾದಕರಾದ ಶ್ರೀ ಕಾರಂತರು, ಕಲಬುರಗೀಯ ಶ್ರೀ ಕಡಟರಾಳ ಕೃಷ್ಣರಾಯರು, ಬೆಂಗಳೂರಿನ ಶ್ರೀ ಭಾರದ್ವಾಜರು ಇವರೇ ಮೊದಲಾದವರ ಉಪನ್ಯಾಸಗಳಾದವು. ಕನ್ನಡ ನಾಡು ನುಡಿ ಕನ್ನಡ ಜನಾಂಗದ ಮೇಲೆ ಒದಗಿರುವ ಆಪತ್ತಿಯೂ, ಕನ್ನಡಿಗರು ಮಾಡತಕ್ಕ ಕರ್ತವ್ಯವೂ ಇವುಗಳೇ ಎಲ್ಲ ಉಪನ್ಯಾಸಕರಿಂದ ಪ್ರತಿಪಾದಿಸಲ್ಪಟ್ಟವು. ಅಧ್ಯಕ್ಷರು ಸಮಾರೋಪ ಮಾಡುವಾಗ್ಗೆ ಬಳ್ಳಾರಿಯ ಜನರಲ್ಲಿ ಉಂಟಾದ ಜಾಗೃತಿಯನ್ನು ಶ್ಲಾಘಿಸಿ, ಕನ್ನಡಿಗರು ತಮ್ಮ ವಿಶಿಷ್ಟತ್ವವನ್ನು, ಅಸ್ತಿತ್ವವನ್ನು ಕಾಯ್ದುಕೊಳ್ಳಲಿಕ್ಕೆ ಹೋರಾಡಬೇಕಾಗಿ ಪ್ರಸಂಗದಿಂದ ಹೇಳಿದರು. ಬಳ್ಳಾರಿಯ ವಯೋವೃದ್ಧ ನಾಗರಿಕರಾದ ಶ್ರೀ ತಿಮ್ಮಣ್ಣರಾಯರು ಅಧ್ಯಕ್ಷರಿಗೆ ವಂದನೆಗಳನ್ನು ಸಮರ್ಪಿಸುವಾಗ ಬಳ್ಳಾರಿಯ ಕನ್ನಡಿಗರು ಇನ್ನು ಮೇಲಾದರೂ ಎಚ್ಚತ್ತು, ಮ್ಯುನಿಸಿಪಾಲಿಟಿ, ಲೋಕಲ್ ಬೋರ್ಡುಗಳಲ್ಲಿ ಕನ್ನಡಿಗರ ಬಹುಮತವಾಗುವಂತೆ ಸಭಾಸದರನ್ನು ಆರಿಸಿ, ನಗರದಲ್ಲಿಯೂ ಹಳ್ಳಿಯ ಎಲ್ಲ ಭಾಗದಲ್ಲಿಯೂ ಕನ್ನಡ ಶಾಲೆಗಳಾಗಿ, ಮಕ್ಕಳಿಗೆ ಕನ್ನಡ ಭಾಷೆಯನ್ನು ಕಲಿಯಲು ಅನುಕೂಲವಾಗುವಂತೆ ಕಟ್ಟಲೇ ವ್ಯವಸ್ಥೆ ಮಾಡುವಂತೆ ಎಚ್ಚರಗೊಳ್ಳಬೇಕೆಂದು ಕಳಕಳಿಯಿಂದ ಬಿನ್ನವಿಸಿದರು. ಅಂತೂ ಬಳ್ಳಾರಿಯಲ್ಲಿ ಈಗ ಕನ್ನಡಿಗರ 'ಕರ್ತವ್ಯಜಾಗೃತಿಯು' ಚೆನ್ನಾಗಿ ಆಗ ಹತ್ತಿರುವಂತೆ ಕಂಡು ಬಂತು.

ಪರಿಷತ್ತಿನ ಸಭೆಯಲ್ಲಾದ ಗೊತ್ತುವಳಿಗಳು.

೧. ಮೈಸೂರು ವಿಶ್ವವಿದ್ಯಾಲಯದ ಅಭ್ಯಾಸಕ್ರಮದಲ್ಲಿ ಕನ್ನಡ ಭಾಷೆಗೆ ಉಚಿತ ಸ್ಥಾನವಿರಬೇಕೆಂಬ ಬಗ್ಗೆ ಪರಿಷತ್ತಿನ ಕಾರ್ಯಕಾರಿ ಮಂಡಲದವರು ಮಾಡಿದ ನಿರ್ಧಾರವನ್ನು ಪರಿಷತ್ತಿನ ಉಪಾಧ್ಯಕ್ಷರು ಶ್ರೀಮನ್ಮಹಾರಾಜರವರ ಸನ್ನಿಧಿಗೆ ಸಮರ್ಪಿಸುವವರೊಂದಿಗೆ ಪ್ರಭುಗಳ ಸಮಕ್ಷಮಕ್ಕೆ ಕಳಿಸಿದ ಬಿನ್ನಹ ಪತ್ರಿಕೆಗೆ ಪರಿಷತ್ತಿನ ಈ ಸಭೆಯು ಒಪ್ಪಿಗೆಯನ್ನು ಕೊಡುತ್ತದೆ.

೨. ಕನ್ನಡ ನಾಡಿನ ಜನಾಂಗದಲ್ಲೆಲ್ಲ ಕರ್ನಾಟಕದ ಸಂಸ್ಕೃತಿಯನ್ನೂ, ವಿಶಿಷ್ಟತೆಯನ್ನೂ ಹಬ್ಬಿಸುವದಕ್ಕೆ ಒಂದೇ ಒಂದು ಉಪಾಯವಾದ ಕನ್ನಡ ಭಾಷೆಯು ಮಹತ್ವವು ಬೆಳೆಯುವಂತೆ ಮಾಡಲು ಮೈಸೂರ ವಿದ್ಯಾಪೀಠದ ಉಚ್ಚ ಶಿಕ್ಷಣದಲ್ಲವು ಕನ್ನಡ ಭಾಷೆಯು ಮುಖ್ಯಸ್ಥಾನ ಸಂಗುಪದಕ್ಕೆ ಅವಕಾಶವಾಗುವಂತೆ ಮೈಸೂರ ಸೀಮೆಯ ಮಾಧ್ಯಮಿಕ ಶಿಕ್ಷಣವನ್ನೆಲ್ಲ ಕನ್ನಡದಲ್ಲಿಯೇ ನಡೆಸುವಂತೆ ಅಲ್ಲಿನ ಸರ್ಕಾರವು ಮಾಡಬೇಕೆಂದು ಪರಿಷತ್ತಿನ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಉದ್ದವಾದ ಸುರುಳಿಯಾದ ನೀಲಿಮಾಯದ ಕೂದಲನ್ನು ಯಾವ ನಾರಿಯು ತಾನೇ ಬಯಸಲೊಲ್ಲಳು? ಇಂಥ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಲು ಕೆಳಗಿನ ಉಪಕರಣವಾದದ್ದೊ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುವದರಿಂದ ಮನಸ್ಸಿನ ಬೇನೆಯು ಕಡಿಮೆಯಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅವನು ತಲೆಯ ತೊಗಲಿನ ಬಳಿ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅದರಿಂದ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುತ್ತವೆ. ಇದರ ಸುಗಂಧವಾದರೋ ಮಧುರವೂ ಚಿತ್ತಾಕರ್ಷಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕೂದಲನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ "ಕಾಮಿನಿಯಾ" ಆಯಿಲ್ ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯು ಶ್ರೇಷ್ಠತೆಯ ಮೇರೆಯಿಂದ ನಮಗೆ ೨,ಸಾರ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ ಅನೇಕ ಸುಪ್ರಸಿದ್ಧ ಗೃಹಸ್ಥರು ಉತ್ತಮೋತ್ತಮವಾದ ಮಾನಪತ್ರಗಳೂ ದೊರೆತಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ ೩ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚು 0-14-0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಆಕರ್ಷಕವಾದದ್ದು ಚೆನ್ನಾಗಿ ಪರೀಕ್ಷಿಸಿ ಆಯ್ದು ತಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದ್ದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರದ ಗಂಧವು ಅವೆಲ್ಲವುಗಳನ್ನು ವಿಶಾಲ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0

Address:- **The Anglo Indian Drug & Chemical Co,**

16, Market, **BOMBAY 2**

ಈ ಸಭೆಯು ಶ್ರೀಮನ್ಮಹಾರಾಜರವರ ದಿವ್ಯ ಸನ್ನಿಧಿಯಲ್ಲಿ ವಿನಯಪೂರ್ವಕ ಪ್ರಾರ್ಥಿಸುತ್ತದೆ.

೩. ಎರಡನೆಯ ನಿರ್ಣಯದಲ್ಲಿ ಕಾಣಿಸಿದ ಉದ್ದೇಶವು ಕೈಗೂಡುವಂತೆ ಅವಶ್ಯಕವಾದ ಎಲ್ಲ ಏರ್ಪಾಟುಗಳನ್ನು ಆದಷ್ಟು ಬೇಗ ಒದಗಿಸುವ ಕೆಲಸವನ್ನು ಮೈಸೂರ ವಿಶ್ವವಿದ್ಯಾಲಯದ ಪ್ರಕಾಶಕ ಮಂಡಳಿಗೆ ಒಪ್ಪಿಸಬೇಕೆಂದೂ, ಈ ಕಾರ್ಯದಲ್ಲಿ ಪರಿಷತ್ತು ತನ್ನ ಶಕ್ತ್ಯನುಸಾರ ಮಟ್ಟಿಗೆ ಸಹಾಯ ಮಾಡುವದಾಗಿಯೂ ವಿನಯಪೂರ್ವಕ ವಿಜ್ಞಾಪಿಸುತ್ತದೆ.

೪. ಮೇಲಿನ ನಿರ್ಣಯಗಳನ್ನು ಶ್ರೀಮನ್ಮಹಾರಾಜರವರ ಸನ್ನಿಧಿಗೆ [illegible] ಮೂಲಕ [illegible] ಈ ಸಭೆಯು ಅಧಿಕಾರ ಕೊಡುತ್ತದೆ.

೫. ಕನ್ನಡವೇ ಪ್ರಧಾನ ಭಾಷೆಯಾಗಿರತಕ್ಕ ಬಳ್ಳಾರಿ ಜಿಲ್ಲೆಯನ್ನು ಆಂಧ್ರ ವಿಶ್ವವಿದ್ಯಾಲಯದ ಕಾನೂನಿಗೆ ಒಳಪಡಿಸಬೇಕೆಂಬುದಾಗಿ ಮದ್ರಾಸ ಶಾಸನ ಸಭೆಯ ಮುಂದೆ [illegible] ಈ ಪರಿಷತ್ತಿಗೆ ವಿಷಾದವಾಗುತ್ತದೆ ಮತ್ತು [illegible] ಮಂಡಲದವರು [illegible] ಸೂಚನೆಗೆ ತಮ್ಮ ಒಪ್ಪಿಗೆಯನ್ನು ಕೊಡದಿದ್ದರೆ ಬಳ್ಳಾರಿ ಜಿಲ್ಲೆಯನ್ನು [illegible] ಕ್ಷೇತ್ರದಲ್ಲಿ [illegible] ಕೃತ್ಯವನ್ನು ಸಮಾಧಾನಪೂರ್ವಕವಾಗಿ [illegible]

೬. ಬಳ್ಳಾರಿ ಜಿಲ್ಲೆಯ [illegible] ಮದ್ರಾಸ [illegible] ಒಂದು ಸಂಪೂರ್ಣ ಶಾಲೆಯನ್ನು [illegible] ಬೇಗನೆ ಸ್ಥಾಪಿಸಬೇಕೆಂದು ಈ ಪರಿಷತ್ತು ಮದ್ರಾಸ ಸರಕಾರದವರನ್ನು ಒತ್ತಾಯಪೂರ್ವಕವಾಗಿ ವಿನಂತಿಸುತ್ತದೆ.

೭. ಮದ್ರಾಸದ [illegible] ಕಾಣಿಸಿದ [illegible] ಬಂದು ಕೊಡುವದಕ್ಕಾಗಿ [illegible] ಲಭ್ಯವಾದದನ್ನು [illegible]

೮. ಆಂಧ್ರ ವಿಶ್ವವಿದ್ಯಾಲಯದ ಕಾನೂನಿನ [illegible] ದಲ್ಲಿ ಬಳ್ಳಾರಿಯು [illegible] ಕರ್ನಾಟಕದ ಕ್ಷೇತ್ರವನ್ನು ಎತ್ತಿಹಿಡಿದು [illegible] ಲದಲ್ಲಿ ಹೋರಾಡಿದ ಶ್ರೀ. [illegible] ರಾಮರಾವ, ಶ್ರೀ. ಪಿ. ಶಿವರಾವ ಶ್ರೀ ರಂಗನಾಥ ಮುದಲಿಯಾರ, ಪಿ. ಸಾಂಬಮೂರ್ತಿ, [illegible] ಮುಂತಾದವರಿಗೆ ಈ ಪರಿಷತ್ತು ತನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತದೆ.

೯. ಕರ್ನಾಟಕದ ದಕ್ಷಿಣ ಗಡಿನಾಡಿನಲ್ಲಿರುವ ಸೇಲಮ, ಕೊಯಿಮತ್ತೂರು ನೀಲಗಿರಿ ಜಿಲ್ಲೆಗಳಲ್ಲಿ ತಿರುಗಾಡಿ, ಅಲ್ಲಿ ಕನ್ನಡ ಭಾಷಾಜಾಗೃತಿಯನ್ನುಂಟು ಮಾಡುವದಕ್ಕೋಸ್ಕರ ಕೆಳಗೆ ಕಾಣಿಸಿದ ಸದ್ಗೃಹಸ್ಥರ ಮಂಡಲವೊಂದನ್ನು ನೇಮಿಸುವದಲ್ಲದೆ, ಆ ಮಂಡಲದ ಪ್ರವಾಸ ಮುಂತಾದ ವೆಚ್ಚಕ್ಕಾಗಿ ೩೦೦ ರೂಪಾಯಿಗಳನ್ನು ಮಂಜೂರ ಮಾಡಿದೆ.

ಶ್ರೀ ಮುದವೀಡು ಕೃಷ್ಣರಾಯರು.
ಶ್ರೀ ಸಂಪದ್ಗಿರಿರಾಯರು.
ಶ್ರೀ ಡಿ. ಕೆ. ಭಾರದ್ವಾಜರು.

೧೦. ಬಳ್ಳಾರಿ ಪಟ್ಟಣದಲ್ಲಿಯೂ ಮತ್ತು ಬಳ್ಳಾರಿಯ ಪೂರ್ವದಿಕ್ಕಿನ ತಾಲೂಕುಗಳಲ್ಲಿಯೂ ಕನ್ನಡ ಪ್ರಾಥಮಿಕ ಬಾಲ-ಬಾಲಿಕಾ ಪಾಠಶಾಲೆಗಳನ್ನು ಸ್ಥಾಪಿಸಬೇಕೆಂದು ಈ ಸಭೆಯು ಸರಕಾರದವರನ್ನೂ, ಮ್ಯುನಿಸಿಪಾಲಿಟಿ-ಲೋಕಲ್ ಬೋರ್ಡುಗಳನ್ನೂ ಪ್ರಾರ್ಥಿಸುತ್ತದೆ.

೧೧. ಬಳ್ಳಾರಿ ಜಿಲ್ಲೆಯು ಕನ್ನಡ ಜಿಲ್ಲೆಯಾದ್ದರಿಂದ ಅಲ್ಲಿಯ ಎಲ್ಲ ಸರಕಾರೀ ಕೋರ್ಟು ಕಚೇರಿಗಳಲ್ಲಿ ಕನ್ನಡ ಭಾಷೆಯು ನಡೆಯಬೇಕೆಂದು ಸರಕಾರದವರು ಗೊತ್ತುಪಡಿಸಿದ್ದರೂ, ಸ್ಥಾನಿಕ ಅಧಿಕಾರಿಗಳು ತಮ್ಮ ಕಡೆಗೆ ಬಂದ ಕನ್ನಡ ಕಾಗದಪತ್ರಗಳನ್ನು ತಿರಸ್ಕರಿಸಿ, ತೆಲುಗಿನಲ್ಲಿ ಬರೆದು ಕೊಡಬೇಕೆಂದು ನಿರ್ಬಂಧಪಡಿಸುತ್ತಿರುವ ಸಂಗತಿಯು ಈ ಪರಿಷತ್ತಿನ ಅವಗಾಹನೆಗೆ ಬಂದಿದೆ. ಬಳ್ಳಾರಿ ಜಿಲ್ಲೆಯ ಕನ್ನಡ ಭಾಷೆಯ ಪ್ರಚಾರಕ್ಕೆ ಈ ಒತ್ತಾಯವು ಹಾನಿಕರವಾಗಿರುವದರಿಂದ ಸ್ಥಾನಿಕ ಅಧಿಕಾರಿಗಳ ಈ ಜುಲುಮೆಯು ಇನ್ನು ಮುಂದೆ ನಡೆಯದಂತೆ ಸರಕಾರದವರು ತಕ್ಕ ಏರ್ಪಾಟು ಮಾಡಬೇಕೆಂದು ಮದ್ರಾಸ ಸರಕಾರದವರನ್ನು ಈ ಪರಿಷತ್ತು ಪ್ರಾರ್ಥಿಸಿಕೊಳ್ಳುತ್ತದೆ.

೧೨. ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ವಿಷಯದಲ್ಲಿ ಕರ್ನಾಟಕದ ಪ್ರಮುಖ ಜನರ ಸಲಹೆಗಳನ್ನೆಲ್ಲ ತೆಗೆದುಕೊಂಡು ಒಂದು ಯೋಜನೆಯನ್ನು ಸಿದ್ಧಪಡಿಸಿ ತಮ್ಮ ವರದಿಯೊಂದಿಗೆ ೩ ತಿಂಗಳೊಳಗಾಗಿ ಪರಿಷತ್ತಿಗೆ ಸಮರ್ಪಿಸುವದಕ್ಕಾಗಿ ಕೆಳಗೆ ಬರೆದ ಸದ್ಗೃಹಸ್ಥರನ್ನು ಈ ಪರಿಷತ್ತು ಬಿನ್ನವಿಸುತ್ತದೆ.

೧. ರ್‍ಯಾ. ಕಟ್ಟಿಯವರು. (ಚೇರಮನ್ನರು)
೨. ಪ್ರೊ. ಸಾಲೇಟೊರವರು.
೩. ಶ್ರೀ. ಎಚ್. ನಾರಾಯಣರಾಯರು.
೪. ಶ್ರೀ ಸಿ. ಜಿ ರಾಮರಾಯರು.
೫. ಶ್ರೀ ಸಂಪದ್ಗಿರಿರಾಯರು. (ಪ್ರವರ್ತಕರು)

—ಕರ್ನಾಟಕವೃತ್ತ.

ಕರ್ನಾಟಕ ವಿಶ್ವವಿದ್ಯಾಲಯದ ವಿಷಯದಲ್ಲಿ ಪ್ರಶ್ನಮಾಲಿಕೆ.

(೧) ಬೇರೆ ಬೇರೆ ಭಾಷೆಗಳನ್ನಾಡುವ ಜನಾಂಗದವರಿಗೋಸ್ಕರ ತಮ್ಮ ತಮ್ಮ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿಕೊಳ್ಳುತ್ತಿದ್ದನ್ನು ತಾವು ಬಲ್ಲಿರಿ. ಅಖಂಡ ಕರ್ನಾಟಕಕ್ಕೆ ಸಹ ಬೇರೊಂದು ವಿಶ್ವವಿದ್ಯಾಲಯವಿರಬೇಕೆಂಬುದಕ್ಕೆ ತಾವು ಒಪ್ಪುವಿರೋ?

(೨) ಕರ್ನಾಟಕದಲ್ಲಿ ಮೈಸೂರ ವಿಶ್ವವಿದ್ಯಾಲಯವಿರುವಷ್ಟೆ. ಅದನ್ನು ಅಖಂಡ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡುವ ವಿಚಾರವು ಪ್ರಸ್ತಾಪವಾಗುತ್ತಿದೆ. ಇದಕ್ಕೆ ತಮ್ಮ ಒಪ್ಪಿಗೆಯುಂಟೋ? (ಕಾರಣವನ್ನು ಸ್ಪಷ್ಟವಾಗಿ ಬರೆಯಬೇಕಾಗಿ ವಿನಂತಿಯುಂಟು.)

(೩) ಅಖಂಡ ಕರ್ನಾಟಕಕ್ಕೆಲ್ಲ ಒಂದೇ ವಿಶ್ವವಿದ್ಯಾಲಯವಿರಬೇಕೆಂಬ ಪಕ್ಷಕ್ಕೆ ಕೆಳಗಿನ ಕಾರಣಗಳಿವೆ. ಅವಕ್ಕೆ ತಮ್ಮ ಒಪ್ಪಿಗೆ ಇದ್ದರೆ ತಾವು ತಿಳಿಸಬೇಕಾಗಿ ಪ್ರಾರ್ಥನೆ.

(೪) ಕರ್ನಾಟಕದಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗವು ಸಂಸ್ಥಾನಗಳಲ್ಲಿದೆ. ಸಂಸ್ಥಾನಗಳಲ್ಲಿಯ ಕರ್ನಾಟಕಸ್ಥರಿಗೂ ಬ್ರಿಟಿಶ ಕರ್ನಾಟಕಸ್ಥರಿಗೂ ಸಂಬಂಧವಿಲ್ಲದಾಗಿದೆ. ಇವರೀರ್ವರಲ್ಲಿಯೂ ಏಕೀಭಾವವು ಬೆಳೆದು ಅಖಂಡ ಕರ್ನಾಟಕದ ಕಲ್ಪನೆಯು ಕಳೆಗೊಳ್ಳಬೇಕಾದರೆ, ಇವರೆಲ್ಲರೂ ಭಾಗ ತೆಗೆದುಕೊಳ್ಳುವಂತಹ ಮತ್ತು ಯಾವಾಗಲೂ ಅವರು ಒಬ್ಬರೊಬ್ಬರು ಕೂಡಿಯೇ ಕೆಲಸ ಮಾಡುವಂತಹ ಪ್ರಸಂಗಗಳು ಬೇಕಲ್ಲವೇ? ಅಖಂಡ ಕರ್ನಾಟಕಕ್ಕೆ ಒಂದೇ ವಿಶ್ವವಿದ್ಯಾಲಯವನ್ನು ಮಾಡುವದರಿಂದ ಇದು ಸಾಧ್ಯವಾಗುವದಿಲ್ಲವೇ?

(೫) ಪ್ರಾಥಮಿಕ ಶಾಲೆಯಿಂದ ಮೊದಲು ಮಾಡಿಕೊಂಡು, ಉಚ್ಚಶಿಕ್ಷಣವು ಮುಗಿಯುವ ವರೆಗೆ ಕ್ರಮಿಕ ಪುಸ್ತಕಗಳೂ, ಶಾಲೆ, ಕಾಲೇಜುಗಳಲ್ಲಿ ಓದುವ ಪುಸ್ತಕಗಳೂ, ಪದ್ಧತಿಯೂ, ಶಿಕ್ಷಣ ಮತ್ತು ಪರೀಕ್ಷೆಗಳ ಕ್ರಮವೂ ಒಂದೇ ಆಗುವದರಿಂದ, ಮೈಸೂರ, ಮದ್ರಾಸ, ಮುಂಬಯಿ ಮೊದಲಾದ ಕರ್ನಾಟಕ ಭಾಗಗಳಲ್ಲಿ ವಿದ್ಯಾರ್ಥಿಗಳಲ್ಲಿರುವ ಭೇದಭಾವವು ಅಳಿದುಹೋಗಲು ಒಳ್ಳೇ ಅವಕಾಶ ದೊರೆಯುವದಲ್ಲವೇ?

(೬) ಈಗ್ಗೆ ಮೈಸೂರ, ಮದ್ರಾಸ ಮತ್ತು ಮುಂಬಯಿ ಕರ್ನಾಟಕದ ಭಾಗಗಳಲ್ಲಿ ಬೇರೆ ಬೇರೆ ಕ್ರಮಿಕ ಪುಸ್ತಕಗಳಿವೆ. ಆದ್ದರಿಂದ ಮೂರೂ ಕಡೆಗಳಲ್ಲಿದ್ದ ಭಿನ್ನ ಭಿನ್ನ ಭಾಷಾಶೈಲಿಯೂ, ಆ ಆ ಭಾಗದ ವಿದ್ಯಾರ್ಥಿಗಳಲ್ಲಿ ಅವರು ಬಾಲಕರಿರುವಾಗಲೆ, ದೃಢವಾಗಿ ನೆಲೆಗೊಳ್ಳುವದು. ಅಂತೆಯೇ ಈ ಮೂರೂ ಭಾಗದ ಭಾಷಾಶೈಲಿಯಲ್ಲಿ ವಿವಿಧತೆಯುಂಟಾಗಿ, ಒಂದು ಭಾಗದ ಶೈಲಿಯು ಇನ್ನೊಂದು ಭಾಗದವರಿಗೆ ಕಠಿಣವಾಗಿ ತೋರುತ್ತದೆ. ಆದ್ದರಿಂದಲೇ ಕನ್ನಡದಲ್ಲಿ ಗ್ರಂಥಗಳು ಸಹ ಹೆಚ್ಚಾಗಿ ಪ್ರಸಾರವಾಗುವದಿಲ್ಲ. ಕನ್ನಡ ವಾಙ್ಮಯವು ವಿಕಾಸಗೊಳ್ಳಲೊಲ್ಲದು. ಈ ದೋಷವು ಹೊರಟು ಹೋಗಲಿಕ್ಕೆ ಅಖಂಡ ಕರ್ನಾಟಕಕ್ಕೆ ಒಂದೇ ಒಂದಾದ ವಿಶ್ವವಿದ್ಯಾಲಯವು ಇರುವದು ಅವಶ್ಯವಲ್ಲವೋ?

(೭) ವಿಶ್ವವಿದ್ಯಾಲಯದ "ಸಿನೇಟ್" "ಸಿಂಡಿಕೇಟ್" ಗಳಲ್ಲಿ ಸಹ ಕರ್ನಾಟಕದ ಎಲ್ಲ ಭಾಗಗಳ ಪಂಡಿತರು ಕಲೆತು ಕೆಲಸ ಮಾಡುವದರಿಂದ ಅಖಂಡ ಕರ್ನಾಟಕದ ಈ ಪಾಂಡಿತ್ಯಸಮ್ಮಿಶ್ರಣದ ಪ್ರವಾಹವು ಪರಿಶುದ್ಧವಾಗಿ ಹರಿಯಲು ಮಾರ್ಗವಾಗುವದಿಲ್ಲವೇ?

(೮) ಮೈಸೂರಿನವರನ್ನು ಬಿಟ್ಟು, ಬ್ರಿಟಿಶ್ ಕರ್ನಾಟಕದವರೇ ಮಾತ್ರ ತಮಗಾಗಿ, ಸ್ವತಂತ್ರವಾದ ವಿಶ್ವವಿದ್ಯಾಲಯವನ್ನು ಸ್ಥಾಪಿಸಿಕೊಂಡರೆ, ಮೇಲೆ ಬರೆದ ಕೊರತೆಗಳನ್ನು ದೂರ ಮಾಡುವದಕ್ಕೆ ಆತಂಕ ಬರುವದಿಲ್ಲವೇ? ಆತಂಕವು ಬರುತ್ತಿದ್ದರೆ, ಮೈಸೂರ ವಿಶ್ವವಿದ್ಯಾಲಯದ ಹೊರತಾಗಿ ಬ್ರಿಟಿಶ ಕರ್ನಾಟಕಕ್ಕೆ ಸ್ವತಂತ್ರ ವಿದ್ಯಾಲಯವು ಏಕೆ ಬೇಕು?

(೯) ಮೇಲಿನ ಕಾರಣಗಳಿಗೆಲ್ಲ ತಮ್ಮ ಸಮ್ಮತಿಯಿದ್ದರೂ ಸಹ, ಸಂಸ್ಥಾನಗಳ ಸಂಗಡ ಗುದುಮುರಿಗೆ ಹಾಕುವದು ನಮಗೆ ಬೇಡವೆಂದು ನಿಮ್ಮ ಅಭಿಪ್ರಾಯವಿದೆಯೋ? ಹಾಗಿದ್ದರೆ, ನಿಮ್ಮ ದೃಷ್ಟಿಯಿಂದ ಬ್ರಿಟಿಶ್ ಕರ್ನಾಟಕಕ್ಕಾಗಲೀ, ಮೈಸೂರವರಿಗಾಗಲೀ, ಅಖಂಡ ಕರ್ನಾಟಕ ವಿದ್ಯಾಲಯದಿಂದ ಸಂಭವಿಸುವ, ಹಾನಿಗಳಾವವೆಂಬುದನ್ನು ದಯವಿಟ್ಟು ವಿಶದವಾಗಿ ಬರೆದು ತಿಳಿಸಬೇಕಾಗಿ ಪ್ರಾರ್ಥನೆ.

(೧೦) ಮೈಸೂರ ವಿದ್ಯಾಲಯವನ್ನೇ ಕರ್ನಾಟಕ ವಿದ್ಯಾಲಯವನ್ನಾಗಿ ಮಾಡಿದ್ದೇ ಆದರೆ, ಸದ್ಯದ ಮೈಸೂರ ವಿದ್ಯಾಲಯದ ಸ್ಥಿತಿಯಲ್ಲಿ, ಅಖಂಡ ಕರ್ನಾಟಕದ ಭಾಗಗಳಿಗೆ ಅನುಕೂಲವಾಗುವಂತೆ, ಅನೇಕ ಬಗೆಯಿಂದ ಹೆಚ್ಚು ಕಡಿಮೆ ಮಾಡಬೇಕಾಗುವದು. ಈ ಹೆಚ್ಚುಕಡಿಮೆಗಳಾದ ಮೇಲೆ "ಸಂಸ್ಥಾನದವರ ಸಂಗಡ ಗುದ್ದಾಡುವ" ವಿಧಾನವು ದೂರಾಗುವದಿಲ್ಲವೇ? ಉದಾಹರಣಾರ್ಥ:— ಮೈಸೂರ ವಿದ್ಯಾಲಯವೆಂಬುದಕ್ಕೆ ಕರ್ನಾಟಕ ವಿದ್ಯಾಲಯವೆಂಬ ಹೆಸರು ಬರುವದು: ಮೈಸೂರಿನವರೂ, ಮೈಸೂರ ಹೊರಗಿನವರೂ ಕೂಡಿಯೇ "ಸಿನೇಟ" "ಸಿಂಡಿಕೇಟ"ಗಳಲ್ಲಿ ಇದ್ದು ಕೆಲಸ ಮಾಡುವರು. ಹಣದ ಭಾರವು ಮೈಸೂರಿನವರ ಮೇಲೆಯೂ, ಮೈಸೂರ ಹೊರಗಿನವರ ಮೇಲೆಯೂ ಕೂಡಿಯೇ ಬರುವದು. ಅಂದ ಮೇಲೆ, ಮೈಸೂರ ವಿದ್ಯಾಲಯವೆಂದರೆ ಅದು ಸಂಸ್ಥಾನದ ವಿದ್ಯಾಲಯವೆಂದು [illegible] ಬೀಳುವದೇಕೆ?

(೧೧) "ಅದೆಲ್ಲ ಸರಿಯಷ್ಟೆ. ಆದರೆ ಈ ಬಗೆಯ ಬದಲಾವಣೆಗೆ ಮೈಸೂರ ಸರಕಾರವೇ ಆಗಲಿ, ಬ್ರಿಟಿಶ ಸರಕಾರವೇ ಆಗಲಿ ಒಪ್ಪುವದೋ? ಅದು ಗೊತ್ತಿಲ್ಲದೆ ಸುಮ್ಮನೆ ಬರಿಕೈಯಿಂದ ಮೊಳ ಹಾಕುವದೇಕೆ?" ಎಂಬುದಾಗಿ ಕೆಲವರು ಕೇಳಬಹುದಲ್ಲವೇ? ಆದರೆ ಈ ವಿಚಾರವು ಸರಿಯಾಗಿದ್ದರೆ, ನಾವು ಈ ಸರಕಾರಗಳಿಂದ ಅನುಮತಿಯನ್ನು ಪಡೆಯುವ ಕೆಲಸವನ್ನು ಪ್ರಾರಂಭಿಸಬಹುದು, ಅಖಂಡ ಕರ್ನಾಟಕದ ಜನತೆಗೆ ಈ ವಿಚಾರವು ಸರಿ ತೋರಿದ್ದೇ ಆದರೆ, ಸರಕಾರಗಳ ಸಮ್ಮತಿಯನ್ನು ದೊರೆಕಿಸುವದು ಕಷ್ಟಸಾಧ್ಯವಾದರೂ, ಅಸಾಧ್ಯ ಕೋಟಿಯದಲ್ಲ. ಇದಕ್ಕೆ ತಮ್ಮ ಒಪ್ಪಿಗೆಯುಂಟೋ?

(೧೨) "ಅಖಂಡ ಕರ್ನಾಟಕಕ್ಕೆಲ್ಲ ಒಂದೇ ಒಂದು ವಿದ್ಯಾಲಯವಿರಬೇಕು; ಸರಿ. ಆದರೆ ಮೈಸೂರ ವಿದ್ಯಾ-

ಬಯುವನ್ನೇ ಕರ್ನಾಟಕ ವಿದ್ಯಾಲಯವನ್ನಾಗಿ ಮಾಡುವ ಕಾರಣವೇನು? ಮೈಸೂರ ವಿದ್ಯಾಲಯವನ್ನು ಬಿಂದುವಾ ಗಿ ಸ್ವತಂತ್ರವಾದ ಸಂಯುಕ್ತ ಕರ್ನಾಟಕ ವಿದ್ಯಾಲಯ ವನ್ನು ಹೊಸದಾಗಿ ಹೊರಡಿಸಿ ಅದನ್ನು ಬ್ರಿಟಿಶ ಕರ್ನಾ ಟಕದ ಒಂದು ಮಧ್ಯವರ್ತಿ ನಗರದಲ್ಲಿ ಸ್ಥಾಪಿಸುವದು ಏಕೆ"ಎಂದು ಕೆಲವರು ಕೇಳಬಹುದಲ್ಲವೇ! ಅದರೆ ಹೀಗೆಮಾಡದೆ, ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾ ಟಕ ವಿಶ್ವವಿದ್ಯಾಲಯವನ್ನು ಮಾಡುವದಕ್ಕೆ ಕಾರಣಗಳು ಹೀಗಿವೆ:-

(೧) ಕನ್ನಡ ನಾಡಿನ ದೊಡ್ಡ ಭಾಗವು ಮೈಸೂರಿನ ಲ್ಲಿದೆ. ಮೈಸೂರೆಂದರೆ, ಕರ್ನಾಟಕಸ್ಥರಿಗೆಲ್ಲ ಅಭಿಮಾ ನಾಸ್ಪದವಾದ ಸಂಸ್ಥಾನವು. ಅಲ್ಲಿಗನ್ನಡಿಗರಾದ ಮಹಾ ರಾಜರಲ್ಲಿ ಕನ್ನಡ ನಾಡಿನ ಮೇಲೆ ಪ್ರೀತಿ-ವಿಶ್ವಾಸಗಳಿವೆ. ಮಹಾರಾಜರು ಕನ್ನಡ ನಾಡಿನ ವೈಭವ ಹಿಂದಿನದ ವುನ್ನು ಉದ್ಧಾರಿಸ್ಬೇಕೆಂದು ಬಯಸಿದ್ದಾರೆ. ಹೀಗಿದ್ದರೂ ಸಹ ಮಹಾರಾಜರಿಗೆ, ಮೈಸೂರ ಹೊರಗಿನ ಕನ್ನಡಿಗರಿಗೂ ಸಂಬಂಧವಿಲ್ಲ. ಸಂಬಂಧವನ್ನು ಬೆಳೆಸಲು ಮಾರ್ಗವೂ ಇಲ್ಲ. ಅದರೆ ಈಗಿನ ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಿದರೆ, ನಾವೆ ಲ್ಲ ಮಹಾರಾಜರ ವೈಭವದ ಆಶ್ರಯದಲ್ಲಿರಲು ಅವಕಾಶ ಹೊಂದಾಗುವದು. ಮತ್ತು ತಮ್ಮ ಪ್ರಜೆಗಳ ಕಲ್ಯಾಣಕ್ಕಾ ಗಿ ಬಹು ಶ್ರಮಪಟ್ಟು ಬೆಳೆಸಿದ ವಿಶ್ವವಿದ್ಯಾಲಯ ವನ್ನು "ನೀವೇ ನಿಮ್ಮ ಕೈಯಿಂದ ಕೊಂಡುಬಿಡಿ" ಎಂಬಥಾಗಿ ಮಹಾರಾಜರಿಗೆ ಹೇಳುವದೆಂದರೆ; ಕರ್ನಾಟ ಕಸ್ಥರಿಗೆಲ್ಲ ಒಪ್ಪುವ ವಿಷಯವಲ್ಲ. ಹಾಗೇ ಸ್ಥಾಪಿಸಿ, ಸಲಹಿದ ವಿಶ್ವವಿದ್ಯಾಲಯವು ವಿಕಾಸಗೊಂಡು, ಅಖಂಡ ಕನ್ನಡ ನಾಡಿನವರಿಗೆಲ್ಲ ಮಾನ್ಯವಾಗುವದೆಂದರೆ, ಮಹಾ ರಾಜರಿಗೆ ಹಿರಿ ಹಿರಿ ಹಿಗ್ಗುವಂತೆ ಆಗುವದು.

(೨) ಹೊಸದಾಗಿ ಯಾವದೊಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂದರೆ,ಎಷ್ಟು ಕಷ್ಟವಾಗುವದೆಂಬುದನ್ನು ಬಲ್ಲವರು ಅನುಭವದಿಂದ ಹೇಳಬಲ್ಲರು. ಅದರೆ, ಇದ್ದು ದರಲ್ಲಿಯೇ ಸ್ವಲ್ಪ ಅದಲು ಬದಲು ಮಾಡುವದು ಹೆಚ್ಚಾಗಿ ಸುಲಭವು.

(೩) ಆಂಧ್ರರು ವಿಶ್ವವಿದ್ಯಾಲಯದ ಕೇಂದ್ರಸ್ಥಾನಗ ಳಿಗಾಗಿ ಜಗಳಾಡುತ್ತಿರುವದನ್ನು ಎಲ್ಲರೂ ಬಲ್ಲರು. ಮೈಸೂರ ವಿಶ್ವವಿದ್ಯಾಲಯವು ಕರ್ನಾಟಕ ವಿದ್ಯಾಲಯ ವಾಗುವದರಿಂದ ಹಾಗೆ ಜಗಳಾಡಲು ಮಾರ್ಗವೇ ಇಲ್ಲ.

(೪) ಮೈಸೂರ ವಿಶ್ವವಿದ್ಯಾಲಯದಲ್ಲಿ ಕಟ್ಟಡ, ಲಾಯಬ್ರರಿ ಮೊದಲಾದ ಬಹಳ ಬೆಲೆ ಬಾಳುವ ಸಾಮಾ ಗ್ರಿಗಳು ಸಿದ್ಧವಾಗಿವೆ. ಇನ್ನಿನ್ನವು ಯಾರಿಗ ಬೇಕು? ಅದರೆ, ಹೊಸ ವಿದ್ಯಾಲಯವನ್ನು ಬ್ರಿಟಿಶ ಕರ್ನಾಟಕ ದಲ್ಲಿ ಸ್ಥಾಪಿಸುವ ಗೊಂದಲದಲ್ಲಿ ಬಿದ್ದು, ಈ ಸೌಕರ್ಯ ಗಳನ್ನು ಸಹ ಬಿಟ್ಟು ಬಿಡುವದೇಕೆ?

ಇವೆಲ್ಲ ಸರಿಯಾಗಿವೆಯಷ್ಟೇ?

(೫) ಅಖಂಡ ಕರ್ನಾಟಕಕ್ಕೆ ಒಂದೇ ಒಂದು ವಿಶ್ವ ವಿದ್ಯಾಲಯವಿರಬೇಕೆಂಬುದು ಸರಿಯಾಗಿದೆ. ಅದರೆ ಅದ ಕ್ಕೆ ಈ ಎರಡು ತೊಡಕುಗಳಿವೆ. ಇವು ಅದನ್ನು ಹೇಗೆ ಬಿಡಿಸುವಿರಿ?:-

(೬) ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯ ಕ್ಕೆ ನಿಜಾಮ ಕರ್ನಾಟಕವು ಸೇರಿದೆ. ಈ ಭಾಗವನ್ನು ಉಸ್ಮಾನಿಯಾ ವಿಶ್ವವಿದ್ಯಾಲಯದ ಅಧಿಕಾರದಿಂದ ಬಿಡುಗ ಡೆ ಮಾಡಿ, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಒಳಪಡಿಸು ವದು ಶಕ್ಯವಿದೆಯೋ? ಅದು ಇದ್ದರೆ ಹೇಗೆ?

(೭) ಉತ್ತರ ಕರ್ನಾಟಕ- ಸಂಸ್ಥಾನಗಳಲ್ಲಿ ಮುಖ್ಯವಾ ಗಿಯೂ ಕನ್ನಡವಾಗಿರುವ, ಸವಣೂರ, ಮುಧೋಳ, ಜಮಖಂಡಿ, ರಾಮದುರ್ಗ, ಅಕ್ಕಲಕೋಟೆ ಇವೇ ಮೊದ ಲಾದ ಸಂಸ್ಥಾನಗಳು ಕರ್ನಾಟಕ ವಿಶ್ವವಿದ್ಯಾಲಯಕ್ಕೆ- ಕೂಡಲು ಶಕ್ಯವಾದರೂ, ಕೆಲಗೆ — ಸೇರೇ ಸೇರುವವು. ಅದರೆ, ಕೊಲ್ಹಾಪುರ,-ಸಾಂಗಲಿ, ಮಿರಜ, ಔಂಧ, ಮೊದ ಲಾದ ದ್ವಿಭಾಷೆಯುಳ್ಳ ಸಂಸ್ಥಾನಗಳ ವಿಷಯವು ಸ್ಪಷ್ಟ

ಕಲಿಂದಾಗಿದೆ. ಇಲ್ಲಿ ಕನ್ನಡ ಭಾಗವನ್ನು, ಮರಾಠೀ ಭಾಗವನ್ನು ಬೇರೆ ಬೇರೆ ಮಾಡಿ, ಆ ಆ ಪ್ರಕಾರ ಕನ್ನಡ ಭಾಗವನ್ನು ಕರ್ನಾಟಕಕ್ಕೆ, ಮಹಾರಾಷ್ಟ್ರ ಭಾಗವನ್ನು ಮಹಾರಾಷ್ಟ್ರಕ್ಕೆ ಸೇರಿಸುವದೊಂದೇ ಆ ತೊಡಕನ್ನು ಬಿಡಿ ಸುವ ಮಾರ್ಗವಲ್ಲವೇ? ಅದರ ಹೊರತಾಗಿ ಅನ್ಯ ಮಾರ್ಗವಿದೆಯೋ?

(೧೦) ಈ ವಿಶ್ವವಿದ್ಯಾಲಯದ ವಿಷಯಕ್ಕೆ- ಈ ವಿಷ ಯಕ್ಕೆ ಕರ್ನಾಟಕ ಏಕೀಕರಣದ ಪ್ರಶ್ನೆಗೂ ಅತೀಯ ನಿಕಟವಾದ ಸಂಬಂಧವಿದ್ದದರಿಂದ - ಕರ್ನಾಟಕ ಏಕೀ ಕರಣದ ವಿಷಯಕ್ಕೆ ವಿಚಾರ ಮಾಡಿ, ಯಾವದಾದರೊಂ ದು ನಿಶ್ಚಿತ ಮಾರ್ಗವನ್ನನುಸರಿಸಲಿಕ್ಕೆ ಅಖಂಡ ಕರ್ನಾ ಟಕದ ಒಂದು ಪರಿಷತ್ತನ್ನು ಕೂಡಿಸುವದು ಈಗ್ಗೆ ಅವ ಶ್ಯವಲ್ಲವೇ? ಅವಶ್ಯವಾಗಿದ್ದರೆ ಯಾವಾಗ್ಗೆ ಈ ಪರಿಷತ್ತನ್ನು ಕರೆಯಬಹುದು?

— ಹುಂಡದೊಳಗಿನ ಸಾಮ್ಯಗ್ರಹಾಶ್ರಮದ ಶ್ರೀ ಜಮೀ ನದ ಮುಂಜಪ್ಪನವರ ಉಪನ್ಯಾಸಗಳು ಹುನಗುಂದ ತಾಲೂಕಿನಲ್ಲಿ ನಡೆಯುತ್ತವೆ. ಶ್ರೀ ಮುಂಜಪ್ಪನವರು ಸಾಮುಕ್ಯರ ವಿಳನಿಷ್ಠ ಭಕ್ತರು; ಖಾದಿಪ್ರಸಾರ, ಅಸ್ಪೃ-ಶ್ಯೋ ದ್ಧಾರಗಳ ಕಾರ್ಯ ದ್ವೇಷಿಕರು. ಶ್ರೀಯುತರ ಭಾಷಣಗ ಳನ್ನು ಕೇಳಿ ಅನೇಕ ವ್ಯಸನಾಧೀನರು ಜೀವನೊಳಗಿರುವ ಬೀಡಿ-ಚಂಚಿಪೆಟ್ಟಿಗೆಗಳನ್ನು ಶ್ರೀ ಮುಂಜಪ್ಪನವರಿಗೆ ಅರ್ಪಿ ಸಿ, ವ್ಯಸನತ್ಯಾಗ ಮಾಡುವ ಪ್ರತಿಜ್ಞೆ ಮಾಡುತ್ತಿರುವರು.

— ಕುಂದಾಪುರ ತಾಲೂಕಿನ ಅಲತ್ತೂರ ಗ್ರಾಮದಲ್ಲಿ ದೊ ಡ್ಡ ಕಳ-ವು. ಕಳ್ಳರು ಬಾಲೆಗೆ ಕನ್ನ ಕೊರೆದು, ಮುಚ್ಚ, ಮೇಜು, ಗ್ರಂಥಗಳನ್ನು ಒಯ್ದರು. ಇದೆಂಥ ಕಳವು?

— ಮಹೋದಯ ಮಹಾರಾಜರಾದ ಶ್ರೀಮಂತ ಸಯಾಜಿ ರಾವ ಗಾಯಕವಾಡರವರು ಕಳೆದ ಬುಧವಾರಕ್ಕೆ ವಿಲಾ ಯತಿಯಿಂದ ಮುಂಬೈ ಬಂದರು. ಮಹಾರಾಜರವರನ್ನು ಪ್ರಜೆಗಳು ಅತ್ಯಂತ ಸಂತೋಷದಿಂದ ಬರಮಾಡಿ ಕೊಂಡರು. ಮಹಾರಾಜರು ೧॥ ವರ್ಷದ ವರೆಗೆ ವಿಲಾ ಯತಿಯಲ್ಲೇ ಉಳಕೊಂಡಿದ್ದರು.

ದರ ಕಡಿಮೆ ಮಾಡಿರುವೆವು! ಸುಸಂಧಿ!!

ನಮ್ಮ ಸುಪ್ರಸಿದ್ಧ ಇಂಗ್ಲಿಷ ಮೋಡ

ಸಾಯಕಲ

ವೆಲಿಂಗ್ಟನ

ಸಾಯಕಲ ಮತ್ತು ಮೋಟಾರ ಕಂಪನಿ, ಹೊರ್ನಬೀ ರೋಡ, ಮುಂಬಯಿ ನಂಬರ ೧.

ಆರ್ಸೆನಲ ರೋಡ, ಪುಣೆ.



'ಕಾನಡಾವೃತ್ತ'ದ ಚಂದಾದಾರರಿಗೆ

ಬರೇ ಒಂದು ತಿಂಗಳ ತನಕ.

ನಮ್ಮ ಮೊಡರ್ನ ರೆಗ್ಯುಲೇಟರ ವ್ಹಾಲ ಕ್ಲಾಕ (ಗೋಡೆಯ ಗಡಿಯಾರ) ಮತ್ತು ೧೮ ಕೆರೆಟ ನಕಲಿ ಬಂಗಾರದ ಕೈ ಗಡಿಯಾರ ಇವೆರಡಕ್ಕೂ ಕೂಡಿ ಕಿಮ್ಮತ್ತು ಬರೇ ರೂ. ೧೦! ಎರಡಕ್ಕೂ ೫ ವರ್ಷದ ಗೆರೆಂಟಿ!

ಪ್ರತ್ಯೇಕವಾಗಿ ಬೇಕಾದ್ದಲ್ಲಿ, ಗೋಡೆ ಗಡಿಯಾರಕ್ಕೆ ರೂ. ೫. ಕೈ ಗಡಿಯಾರಕ್ಕೆ ರೂ. ೭.

ತ್ವರೆ ಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ!

CAPTAIN WATCH CO., P. B. 265, MADRAS.

ಅನುಮಾನವೇಕೆ——?

ಅಭಿಪ್ರಾಯಗಳು.

ನಿಮ್ಮ "ಟಿಕ್ ಟಾಕ್" ಗೋಡೆಯ ಗಡಿಯಾರವು ಬಹು ಉಪಯುಕ್ತವಿದ್ದು, ಬೆಲೆಯೂ ಅತಿ ಅಗ್ಗವಾಗಿರುವದು. ಅದ ಕಾರಣ ನನ್ನ ಮಿತ್ರನೊಬ್ಬನಿಗ ಇನಾಮು ಕೊಡುವದೆ ನನಗ ಇನ್ನೊಂದು ಗಡಿಯಾರವನ್ನು ಕಳಿಸಿರಿ.

ಜಮಖಂಡಿ ಜಂಗ ಬಹಾದ್ದೂರ ಪಾರ್ಕ್, ಆರ್ಕಾ.

ನಿಮ್ಮ "ಟಿಕ್‌ಟಾಕ್" ಗಡಿಯಾರದ ವಿಷಯ ನೀವು ಬರೆದ ತಕ್ಕ ಮತ್ತು ಮಾಹಿತಿಯ ಬಗ್ಗೆ ಉಪಕಾರಿಯಾಗಿರುವೆನು. ಅದು ಉತ್ತಮ ರೀತಿಯಿಂದ ನಡೆಯುತ್ತಿರುವದು.

ಮಾಣ್ಯಾ ಮೋಹನ ಮುಕರ್ಜೀ, ಡಿ. ಮೆಜಿಸ್ಟ್ರೇಟ, ರಾಜಮಹೇ.



ಓದಿ ಖಾತ್ರಿಮಾಡಿಕೊಳ್ಳಿ!

ನಿಮ್ಮ "ಟಿಕ್‌ಟಾಕ್" ಗಡಿಯಾರವನ್ನು ನೋಡಿ ಬಹಳ ಸಂತೋಷವಾಯಿತು, ನನಗೆ ಇನ್ನು ೩ ಗಡಿಯಾರಗಳನ್ನು ಕಳಿಸಿರಿ. ಇವು ಕಲ್ಪಿತ ಕಾಣಿಕೆ, ಹೆಚ್ಚಿನ ಆರ್ಡರುಗಳನ್ನು ಕಳಿಸುವೆನು.

ವಿಘ್ನೇಶ್ವರ ಪ್ರಸಾದ, ಅಟಿ ಪೈಲಟ, ಮದ್ರಾಸ.

ನಿಮ್ಮ "ಟಿಕ್ ಟಾಕ್" ಗಡಿಯಾರದಿಂದ ನನಗ ಬಹಳೇ ಸಮಾಧಾನವಾಗಿದೆ. ಇನ್ನು ೩೬ ಗಡಿಯಾರಗಳ ಬಗ್ಗೆ ಬೇಗನೇ ಆರ್ಡರ ಕಳಿಸಿಕೊಡ ಲಿಕ್ಕಿರುವೆವು.

ಜನಸ್ಟ ಎಂಡ್ ಕಂಪನಿ,ಸೋಲಾಪುರ.

ಬೆಲೆ ಬರೇ ಮೂರು ರೂಪಾಯಿ. ವಿಲಂಬವಿಲ್ಲದೆ ತರಿಸಿಕೊಳ್ಳಿ:

ಪತ್ತೆ:- PETER WATCH CO., ... MADRAS.

ಕಾನಡಾವೃತ್ತ.

ಮುಕ್ಕೊಂಧನಸಂವತ್ಸರ ... ಶು ೧೫ ಸೋಮವಾರ

ಬ್ರಿಟಿಶ ರಾಜ್ಯದ ಮರ್ಮ!

ಬ್ರಿಟಿಶ ರಾಜ್ಯವನ್ನು ಸ್ಥಾಪಿಸಿ ಬ್ರಿಟಿಶರು ಭಾರತೀಯರ ಮೇಲೆ ಗಣನಿಲ್ಲದಷ್ಟು ದೊಡ್ಡ ಉಪಕಾರ ಮಾಡಿರುವರೆಂದು ಅನೇಕರು ಹೇಳುತ್ತಾರೆ. ಬ್ರಿಟಿಶ ಅಳರಸರೂ ಇದೇ ಕಲ್ಪನೆಯನ್ನೇ ಬೀರುತ್ತಿರುವರು. ಮಹಾತ್ಮರೂ, ಲೋಕಮಾನ್ಯರೂ ಇಂತೇ ದೇಶಸೇವಕರೂ ಬ್ರಿಟಿಶ ರಾಜ್ಯಾಡಳಿತೆಯು ಪೂರ್ಣವನ್ನು ಸಾಧಿಸಿದ ಕಾರ್ಯವನ್ನು ಸೂಕ್ಷ್ಮವಾಗಿ ಪರ್ಯಾಲೋಚಿಸಿ, ಬ್ರಿಟಿಶರ ಆಗಮನವು ಪರೋಪಕಾರಕ್ಕಾಗಿ ಒದಗಿಬಂದದ್ದಲ್ಲವೆಂದೂ ರಾಜ್ಯಾಡಳಿತೆಯು ಪರೋಪಕಾರ ಬುದ್ಧಿಯಿಂದ ನಡೆಸಲ್ಪಡಲಿಲ್ಲವೆಂದೂ ಇನ್ನು ಮುಂದಾದರೂ ಇದೇ ಬುದ್ಧಿ ತಳೆದು ನಡೆಯದಿದ್ದರೆ, ಪರೋಪಕಾರವು ಸಂಪೂರ್ಣವಾಗಿ ಮಾಯವಾಗಿ, ಬಡ ಭಾರತೀಯ ದೇಶಕ್ಕೆ ಹೇಳಲಾಗದಷ್ಟು ನಷ್ಟವಾಗುವದೆಂತಲೂ ಆಗಿಂದಾಗ ಸಾರಿಹೇಳಿ, ಸ್ವಾರ್ಥತ್ಯಾಗದಿಂದ, ಧೈರ್ಯದಿಂದ ರಾಜ್ಯಧೋರಣವನ್ನು ಬದಲಿಸಲು ಪ್ರಜೆಗಳು ಟೊಂಕಕಟ್ಟಬೇಕೆಂದೂ, ಅದಕ್ಕಾಗಿ ಬೇಕಾದಷ್ಟು ತ್ಯಾಗವನ್ನೂ, ಕಷ್ಟ-ನಷ್ಟಗಳನ್ನೂ ಸಹಿಸಬೇಕೆಂದು ಬೋಧಿಸುತ್ತಿರುವರು. ಇದು ದೇಶಸೇವಕರು ದೇಶಬಾಂಧವರಿಗೆ ದೇಶಸೇವೆಗಾಗಿ ಕಲಿಸುವ ಪಾಠಗಳ ಮಾತಾಯಿತು. ಇದೇ ಸಮಯ ವಿಲಾಯತಿಯೊಳಗಿನ ಪ್ರಧಾನ ಮಂಡಳದೊಳಗಿನ ಒಬ್ಬ ಮಂತ್ರಿಗಳಾದ ಸರ್ ವಿಲಿಯಮ್ ಜ್ಯೊನಸನ್ ಹಿಕ್ಸರವರು ಹಿಂದುಸ್ಥಾನದೊಳಗಿನ ತಮ್ಮ ರಾಜ್ಯಧೋರಣದ ಮರ್ಮವನ್ನು ಸ್ಪಷ್ಟವಾಗಿ, ಸಂಕ್ಷಿಪ್ತವಾಗಿ ಹೇಳಿರುವರು. ಅದೇನು?

“ನಾವು ಹಿಂದುಸ್ಥಾನವನ್ನು ಹಿಂದೀಯರ ಹಿತಕ್ಕಾಗಿ ಜಯಿಸಲಿಲ್ಲ. ಹಿಂದೀಯರ ಏಳಿಗೆಗಾಗಿ ಹಿಂದುಸ್ಥಾನವನ್ನು ನಾವು ಗೆದ್ದುಕೊಂಡೆವೆಂದು ಪಾದ್ರಿಗಳು ಹೇಳುವದನ್ನು ನಾನು ಬಲ್ಲೆ. ಇದು ಕೇವಲ ಮಿಥ್ಯಾ. ಗ್ರೇಟ ಬ್ರಿಟನ್ನಿನೊಳಗೆ ತಯಾರಾಗುವ ಸಾಮಗ್ರಿಗಳಿಗೆ ಇಂಬಿರಬೇಕೆಂದು ನಾವು ಹಿಂದುಸ್ಥಾನವನ್ನು ಜಯಿಸಿಕೊಂಡೆವು. ಹಿಂದುಸ್ಥಾನವನ್ನು ನಾವು ಖಡ್ಗಬಲದಿಂದ ಜಯಿಸಿದೆವು; ಖಡ್ಗದಿಂದಲೇ ನಾವು ಅದನ್ನು ಕಾಪಾಡಬೇಕು. (ಸಭಿಕರು: ನಾಚಿಕೆ! ನಾಚಿಕೆ!!) ನಿಮಗೆ ಬೇಕಿದ್ದರೆ, ನಾಚಿಕೆಯೆಂದು ಕರೆಯಿರಿ. ನಾನು ಸತ್ಯಸ್ಥಿತಿಯನ್ನು ಹೇಳುತ್ತೇನೆ. ಹಿಂದುಸ್ಥಾನದಲ್ಲಿ ನಡೆಯುವ ಕ್ರೈಸ್ತ ಧರ್ಮಪ್ರಸಾರ ಕಾರ್ಯವು ನನಗೆ ಬೇಕಾದದ್ದೇ. ಅದಕ್ಕಾಗಿ ನಾನು ಬಹಳ ದುಡಿದು ದಣಿದದ್ದೇನೆ. ಆದರೆ, ಹಿಂದೀಯರ ಹಿತಕ್ಕಾಗಿ ಹಿಂದುಸ್ಥಾನವನ್ನು ನಾವು ಕಾಪಾಡಲಿಕ್ಕೆ ಆಳುತ್ತೇವೆಂದು ಹೇಳುವಷ್ಟು ನಾನು ಅಧಮನಲ್ಲ. ಸಾಮಾನ್ಯವಾಗಿ ಬ್ರಿಟಿಶ ಸಾಮಗ್ರಿಗಳನ್ನೂ ವಿಶೇಷವಾಗಿ ಲೆಂಕೆಶಾಯರದೊಳಗಿನ ಅರಿವೆಯನ್ನೂ ಖರೀದಿ ಮಾಡುವ ದೊಡ್ಡ ಗಿರಾಕಿಯೆಂದು ಹಿಂದುಸ್ಥಾನವನ್ನು ನಾವು ಸ್ವಾಧೀನದಲ್ಲಿಟ್ಟುಕೊಳ್ಳುತ್ತೇವೆ. (We did not conquer India for the benefit of the Indians. I know it is said at Missionary meetings that we conquered India to raise the level of the Indians. That is cant. We conquered India as the out-let for the goods of Great Britain. We conquered India by the sword and by the sword we should hold it. [Shame!] Call shame if you like. I am stating facts. I am interested in Missionary work in India and have done much work of that kind, but I am not such a hypocrite as to say we hold India for the Indians. We hold it as the finest out-let of British goods in general, and for Lancashire cotton goods in particular.)

ಸರ್ ವಿಲಿಯಮ್‌ರವರೊಡನೆ ನಾವು ಆನಂದದಿಂದ ಹಸ್ತಾಂದೋಲನ ಮಾಡುವೆವು. ಸಭಿಕರ ವಿರೋಧಕ್ಕೆ ಎದೆಗುಂದದೆ, ಬ್ರಿಟಿಶ ರಾಜ್ಯದ ಮರ್ಮವನ್ನು ಅವರು ಇಡೀ ಭೂತಲಕ್ಕೆ ಸ್ಪಷ್ಟವಾಗಿ ಸಾರಿರುವರು. ಬ್ರಿಟಿಶರು ಪರೋಪಕಾರಕ್ಕಾಗಿ ಹಿಂದುಸ್ಥಾನಕ್ಕೆ ಬಂದದ್ದಿಲ್ಲ, ಪರೋಪಕಾರಕ್ಕಾಗಿ ಹಿಂದುಸ್ಥಾನದಲ್ಲುಳಿಯುವದೂ ಸತ್ಯವಲ್ಲವೆಂದು ಸರ್ ವಿಲಿಯಮ್‌ರವರು ಎದೆತಟ್ಟಿ ಹೇಳಿರುವರು. ಮಹಾತ್ಮರು, ಇದನ್ನು ಪ್ರಕಟಿಸಿ, ಅದೇ ಸತ್ಯವನ್ನು ಸರ್ ವಿಲಿಯಮ್‌ರವರು ಹೊರಗೆಡಹಿರುವರೆಂದು ಉದ್ಗರಿಸಿರುವರು. ಲೆಂಕೆಶಾಯರದೊಳಗಿನ ಅರಿವೆಯು ಆಮದಿಗೆ ಇಂಬಿಸ್ತೋಮದಿಯಲ್ಲಿ ಭರತಖಂಡವು ಬ್ರಿಟಿಶರ ಕೈವಶದಲ್ಲಿರುವದೆಂಬ ವಿಧಾನವು ಅರ್ಥಪೂರ್ಣವಿರುವದೆಂದು ಮಹಾತ್ಮರು ಉದ್ಗರಿಸುತ್ತಾರೆ. ಲೆಂಕೆಶಾಯರದೊಳಗಿನ ಅರಿವೆಯ ಆಮದು ನಿಲ್ಲಿಸಲು ಭಾರತೀಯರು ಉಪಾಯಯೋಜನೆ ಮಾಡಿದ ಬಳಿಕ, ಸರ್ ವಿಲಿಯಮ್‌ರವರು ತೋರಿಸುವ ಖಡ್ಗವು ಒರೆಯಲ್ಲಿ ಸೇರುವದೆಂದು ಮಹಾತ್ಮರು ಬರೆಯುತ್ತಾರೆ. ಖಡ್ಗಬಲವನ್ನು ಕಾಪಾಡುವದು ಲೆಂಕೆಶಾಯರದ ವ್ಯಾಪಾರದ ಆಶೆಯಿಂದ, ಆ ವ್ಯಾಪಾರದ ಬಲದಿಂದಲೇ ಖಡ್ಗಬಲವನ್ನು ಉಪಯೋಗಿಸುವದು. ಲೆಂಕೆಶಾಯರದ ವ್ಯಾಪಾರವು ಬಿದ್ದಮೇಲಾದರೆ, ಭಾರತೀಯರು ಲೆಂಕೆಶಾಯರದೊಳಗಿನ ಅರಿವೆಯನ್ನು ಖರೀದಿ ಮಾಡಲಾರೆವೆಂದು ನಿರ್ಧರಿಸಿದರೆ, ಸ್ವದೇಶದಲ್ಲಿ ದೇಶಬಂಧು-ಭಗಿನಿಯರ ಕಷ್ಟದಿಂದ ತಯಾರಾದ, ಪವಿತ್ರವಾದ ಖಾದಿಯನ್ನೇ ಉಪಯೋಗಿಸಲು ಪ್ರಜೆಗಳೆಲ್ಲರೂ ನಿರ್ಧಾರ ಮಾಡಿದರೆ, ಖಡ್ಗವು ಒರೆಯಲ್ಲಿ ಬೀಳದೆ ಏನು ಮಾಡೀತು! ಖಡ್ಗಕ್ಕಾಗಿ ಖಡ್ಗದ ಉಪಯೋಗವಲ್ಲ; ಲೆಂಕೆಶಾಯರದೊಳಗಿನ, ಬ್ರಿಟಿಶ ದೇಶದೊಳಗಿನ ಸಾಮಗ್ರಿಗಳ ಮಾರಾಟಕ್ಕಾಗಿ ಖಡ್ಗದ ಉಪಯೋಗವದೆ, ಉಪಯೋಗವು ಮಾಡಲ್ಪಡುತ್ತದೆ. ಇದೇನು ಯಾರೂ ಅರಿಯದ, ಅರಿಗಿಸಲಾರದ ಸಂಗತಿಯು. ಅದಕ್ಕಾಗಿ ಭಾರತೀಯರೆಲ್ಲರೂ ಖಾದಿಯ ಪ್ರಸಾರಕಾರ್ಯವನ್ನು ವಿಶೇಷ ಉತ್ಸಾಹದಿಂದ, ಮನಃಪೂರ್ವಕವಾಗಿ ಪುರಸ್ಕರಿಸಬೇಕು.

ಸರ್ ವಿಲಿಯಮ್‌ರವರು ಬ್ರಿಟಿಶ ರಾಜ್ಯದ ಮರ್ಮವನ್ನರುಹಿ, ಆಳರಸರು ಹಿಂದುಸ್ಥಾನದಲ್ಲಿ ಹರಡಿದ ದೊಡ್ಡದೊಂದು ಕಲ್ಪನೆಯನ್ನು ದೂರ ಮಾಡಿರುವರು. ಅದಕ್ಕಾಗಿ ನಾವೆಲ್ಲರೂ ಅವರ ಉಪಕಾರ ಮನ್ನಿಸಬೇಕು. ಸತ್ಯವನ್ನಾಡುವವರು, ಸತ್ಯಸ್ಥಿತಿಯನ್ನರುಹುವವರು ಪ್ರಪಂಚದಲ್ಲಿ ಅಪರೂಪರು. ಮನಸ್ಯೆಕಂ, ವಚಸ್ಯೆಕಂ, ಕಾರ್ಯಮನ್ಯೆಕಂ ಸಂಪ್ರದಾಯದ ಕಾಲದಲ್ಲಿ, ಮನಸ್ಯೇಕಂ, ವಚಸ್ಯೇಕಂ, ಕಾರ್ಯಮೇಕಂ ಎಂಥದ ಪುರುಷರು, ಸ್ವಾರ್ಥಪರಾಯಣರಿದ್ದರೂ, ಯಾವಾಗಲೂ ಆದರಣೀಯರೇ. ಯಾಕಂದರೆ, ಅವರಿಗೆ ಸತ್ಯವನ್ನಾಡುವ ಧೈರ್ಯವಿದೆ; ಸತ್ಯಕ್ಕೆ ಅಸತ್ಯದ ಬೇಗಡಿ ಹಚ್ಚಿ ಪ್ರಪಂಚದಲ್ಲಿ ಅವರು ಮೆರೆಯಬಯಸುವದಿಲ್ಲ. ದಿಲ್ಲಿಯೊಳಗಿನ ಐಕ್ಯ ಪರಿಷತ್ತಿಗೆ ಮಹಾತ್ಮರು ತಿಳಿಸಿದಂತೆ, ಸಮಸ್ತರೂ ಜನಲಜ್ಜೆಗೀಡಾಗದೆ, ತಮ್ಮ ಅಂತರಂಗವನ್ನು ಸ್ಫುಟಗೊಳಿಸಿದರೆ, ಭೂತಲದ ಮೇಲಿನ ಹೇರಳ ಕಷ್ಟಗಳ ಪರಿಹಾರವಾಗುವದು. ಯಾಕಂದರೆ, ಯಾರು, ಯಾರೆಂದು ಕಲ್ಪನೆಯಾಗಿ, ಎಲ್ಲರೂ ಯೋಗ್ಯತರಾಗಿ ತಮ್ಮ ತಮ್ಮ ಕಾರ್ಯವನ್ನು ನೆರವೇರಿಸುವರು. ನಿಜವಾದ ದೇಶೋದ್ಧಾರ ಕಾರ್ಯವಾಗ್ಯವದೆಂದು ಅರಿತುಕೊಂಡು ಮುಂದರಿಯಲಿಕ್ಕೆ ಸ್ಪಷ್ಟೋಕ್ತಿಗಳಿಂದ ಬಹಳ ಅನುಕೂಲವಾಗುತ್ತದೆ. ಸರ್ ವಿಲಿಯಮ್‌ರವರು ತಮ್ಮ ಮನೋಗತವನ್ನು ಸ್ಪಷ್ಟವಾಗಿ ಅರುಹಿ, ಭಾರತೀಯರ ಪರಿಸ್ಥಿತಿಯನ್ನು ತಿಳಿಸಿಹೇಳಿದ ಬಗ್ಗೆ ಸತ್ಯಪ್ರಣೀತ ದೇಶಬಾಂಧವರೆಲ್ಲರೂ ಅವರಿಗೆ ಕೊಂಡಾಡುವರು. ಇನ್ನು ಮೇಲಾದರೂ ನಾವು

ನಮ್ಮ ದೇಶೋದ್ಧಾರದ ಕಾರ್ಯವನ್ನು ಈ ಗ್ರಹಿಕೆಯಿಂದ ಮುಂದರಿಸಿದರೆ, ನಮ್ಮ ಕಾರ್ಯವು ವಿಶೇಷ ಫಲಪ್ರದವಾಗುವದೆಂಬುದರಲ್ಲಿ ಸಂದೇಹವೇನಿಲ್ಲ

ಸ್ಫುಟ ಸೂಚನೆಗಳು.

೧ ಮಹಾತ್ಮರು ಪುನಃ ಉಪೋಷಣವ್ರತವನ್ನು ಕೈಕೊಂಡಿರುವರೆಂದು ತಿಳಿದಿರುವದು ಸ್ಪಷ್ಟವಿದೆ. ಕಾರಣವೇನೆಂಬುದು ಇನ್ನೂ ತಿಳಿಯಲಿಲ್ಲ. ಮಹಾತ್ಮರೂ ಹೇಳುವದಿಲ್ಲ ಈಗ ಮಹಾತ್ಮರು ಪ್ರಯಾಗ ಕ್ಷೇತ್ರದಲ್ಲಿದ್ದು, ತಾ ೧೮ನೇ ಮಂಗಳವಾರದಿಂದ ಉಪೋಷಣ ವ್ರತಕ್ಕೆ ಪ್ರಾರಂಭವಾಗಿದೆ ೭ ದಿನಗಳ ಉಪವಾಸ. ಈ ಹೊತ್ತು ಉಪೋಷಣ ವ್ರತವು ಮುಗಿಯುವದು. ಮಹಾತ್ಮರು ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದರು. ಆದರೂ, ಸಮುಕ್ತ ಕೆಲಸಗಳನ್ನು ಮಾಡುವಷ್ಟು ಸಾಮರ್ಥ್ಯವಿದೆ ಪರರ ಪಾಪಕ್ಷಾಲನಾರ್ಥವಾಗಿ ಮಹಾತ್ಮರು ಉಪೋಷಣ ವ್ರತವನ್ನು ಕೈಕೊಂಡಿರುವದಾಗಿ ಹೇಳುತ್ತಾರೆ. ಸತ್ಯಸ್ಥಿತಿಯು ಇನ್ನೂ ತಿಳಿಯಲಿಲ್ಲ. ಮಹಾತ್ಮರ ಕಾರ್ಯಕರ್ತರಿಗೆಲ್ಲ ಭಕ್ತಿಪೂರ್ವಕವಾದ ಪ್ರಾರ್ಥನೆಯಿಂದ ಜಗದೊಡೆಯನಾದ ಶ್ರೀ ಪರಮಾತ್ಮನು ಪ್ರಸನ್ನಚಿತ್ತನಾಗಿ, ದೇಶಬಾಂಧವರಿಗೆಲ್ಲ ಸದ್ಬುದ್ಧಿಯನ್ನಿತ್ತು ಮಹಾತ್ಮರಿಗೆ ಅತ್ಯಂತ ಪ್ರಿಯವಾದ ಖಾದಿಪ್ರಸಾರ, ಅಸ್ಪೃಶ್ಯ ನಿವಾರಣೆ, ಸ್ವರಾಜ್ಯಪ್ರಾಪ್ತಿಗಳನ್ನು ಸಂಪಾದಿಸುವ ಸಾಮರ್ಥ್ಯವನ್ನಿತ್ತು ಸಲಹಲೆಂದು ನಾವು ಅತ್ಯಂತ ದೈನ್ಯಗೊಂಡು ಪ್ರಾರ್ಥಿಸುವೆವು

---

೨. ಭಾರತೀಯ ರಾಜಕಾರಣದಲ್ಲಿ ಈಗ ನಡೆಯುವ ಚರ್ಚೆಯು ಪ್ರಾಮುಖ್ಯವಾಗಿ ಸ್ವರಾಜ್ಯ ಪಕ್ಷದಲ್ಲುಂಟಾದ ಪ್ರತಿಯೋಗಿ ಸಹಕಾರಿತ್ವವಾದಿಗಳನ್ನು, ಸ್ವರಾಜ್ಯ ಪಕ್ಷದವರೂ, ಇತರ ರಾಜಕಾರಣಧುರಂಧರರೂ ಈ ಕುರಿತು ಅನುಕೂಲ-ಪ್ರತಿಕೂಲ ಚರ್ಚೆ ಮಾಡುತ್ತಿರುವರು. ಲಾಲಾ ಲಜಪತರಾಯರಂಥ ದೇಶಭಕ್ತರು ಸ್ವರಾಜ್ಯ ಪಕ್ಷದವರ ಮೇಲಿನ ಮುಖಬಂದಿಯನ್ನು ನಿಷೇಧಿಸುತ್ತಿರುವರು ಪ ತಿತಜಿಯವರು ಸ್ವರಾಜ್ಯ ಪಕ್ಷದ ಸಭಾಸದರು ಪಕ್ಷದ ನಾಯಕರನ್ನೂ ಕಾರ್ಯಕ್ರಮವನ್ನೂ ಟೀಕಿಸಬಾರದಾಗಿ ಮಾಡಿದ ಹುಕುಮು ಅನ್ಯಾಯವೆಂದು ಅವರ ಹೇಳಿಕೆ, ಮುಂಬಯಿಯ ಪ್ರಾಂತಿಕ ಸ್ವರಾಜ್ಯ ಪಕ್ಷದವರು ಜಾಹೀರನಾಮೆಯನ್ನು ಹೊರಡಿಸಿ, ಪಕ್ಷಕ್ಕೆ ವಿಸಂಗತವಾದ ಚಳವಳಿಯನ್ನು ಕೈಕೊಳ್ಳಬಾರದೆಂದು ನಿರ್ಧರಿಸಿರುವರು. ಹಾಗೆ ಕೈಕೊಂಡಲ್ಲಿ, ಅವರಿಗೆ ಪಕ್ಷದ ಹೊರಗೆ ಹಾಕಬೇಕೆಂದೂ ಅವರ ಹೇಳಿಕೆ. ಇತ್ತ ಶ್ರೀ|| ಜಯಕರ-ಕೇಳಕರರವರು ತಮ್ಮ ಪಂಥವನ್ನು ಮುಕ್ತ ರೀತಿಯಿಂದ ನಡಿಸಹತ್ತಿರುವರು. ನಮ್ಮ ಮುಂಬಯಿಯ ಪರಿಸ್ಥಿತಿ ಜನ್ನಾರವರು ಹೊಸ ಪಂಥದ ಜನನ ಕಾರ್ಯದಲ್ಲಿ ತೊಡಗಿರುವರು. ಈ ಕುರಿತು ಮುಂಬಯಿಯ ಪ್ರಮುಖರೊಡನೆ ಅವರು ಆಲೋಚಿಸುತ್ತಿರುವರು ಪರಿಸ್ಥಿತಿ ಜನ್ನಾರವರ ವಿಚಾರಗಳು ಇನ್ನೊಂದು ನಮೂನೆಯವು. ನೇಮಸ್ತರಿಗಿಂತ ಹೆಚ್ಚು, ಸ್ವರಾಜ್ಯ ಪಕ್ಷದವರಿಗಿಂತ ಕಡಿಮೆ, ಹೀಗೆ ನೇಮಸ್ತರನ್ನು ಮೇಲಕ್ಕೆತ್ತಿ, ಸ್ವರಾಜ್ಯ ಪಕ್ಷದವರನ್ನು ಕೆಳಗಿಳಿದು, ಎಲ್ಲರನ್ನೂ ಒಂದೇ ತರಗತಿಯಲ್ಲಿ ಕೂಡಿಸುವ ಹೊಸ ಯೋಜನೆಯಲ್ಲಿ ಪರಿಸ್ಥಿತಿ ಜನ್ನಾರವರು ತೊಡಗಿರುವರು ಮುಂಬಯಿಯಲ್ಲಿ ಇದೇ ಬರುವ ಗುರುವಾರ ತಾ ೨ನೇಗೆ ಅತ್ಯಂತ ಮಹತ್ವದ ಆಲೋಚನೆಯೊಂದು ನಡೆಯುವದಿದೆ. ಪಂಡಿತ ಮೋತಿಲಾಲ ನೆಹರೂರವರು ಪ್ರತಿಯೋಗಿ ಸಹಕಾರಿತೆಯ ಧುರೀಣರಾದ ಶ್ರೀ|| ಜಯಕರ-ಕೇಳಕರ-ಅಣೇ ಹಾಗು ಡಾ|| ಮುಂಜೇಯವರೊಡನೆ ಕೊನೆಯ ಚರ್ಚೆ ಮಾಡುವವರಿದ್ದಾರೆ. ರಾಷ್ಟ್ರೀಯ ಸಭಾಭಿಮಾನಿಗಳಾದ ಸ್ವರಾಜ್ಯ ಪಕ್ಷದವರಲ್ಲಿ ಉಂಟಾದ ಮಹಾದವಿಯು ಈ ಚರ್ಚೆಯಿಂದ ನಾಮಶೇಷವಾಗಲೆಂದು ಪ್ರಾರ್ಥನೆ.

---

೩ ಮದ್ರಾಸ ಸರಕಾರವನ್ನು ನಾವು ಅಭಿನಂದಿಸುವೆವು. ಸೆಕೆಂಡರಿ ಯಾನೆ ಹೈಸ್ಕೂಲುಗಳ ಜ್ಞಾನದಾನದಲ್ಲಿ ಸರಕಾರದವರು ಮಹತ್ವದ ಏರ್ಪಾಟು ಮಾಡಿರುವರು ಈ ವರೆಗೆ ಹೈಸ್ಕೂಲುಗಳೊಳಗಿನ ಶಿಕ್ಷಣವೆಲ್ಲ ಇಂಗ್ಲಿಷಿನಿಂದ ಕೊಡಬೇಕೆಂದಿತ್ತು. ಪರೀಕ್ಷೆಯ ಪ್ರಶ್ನೆಗಳನ್ನೂ ಇಂಗ್ಲಿಷಿನಲ್ಲಿಯೇ ಉತ್ತರಿಸಬೇಕಾಗಿತ್ತು. ಈಗ ಅದು ತಪ್ಪುವಂತಾಗಿದೆ, ಭಾಷೆಗೆ ಸಂಬಂಧಿಸದ ಗಣಿತ, ಇತಿಹಾಸ ಭೂಗೋಲ, ರಸಾಯನಶಾಸ್ತ್ರ ಇತ್ಯಾದಿ ವಿಷಯಗಳನ್ನು ಅಲ್ಲಲ್ಲಿಯ ದೇಶಭಾಷೆಗಳೊಳಗಿಂದ ಕಲಿಸಬಹುದಾಗಿಯೂ, ಆ ಕಲಿತ ಉತ್ತರಗಳನ್ನೂ ಕೂಡ ದೇಶಭಾಷೆಗಳಲ್ಲಿ ಬರೆಯಲಿಕ್ಕೆ ಯೋಗ್ಯವಾಗಿಯೂ ಮದ್ರಾಸ ಸರಕಾರದವರು ಅನುಮತಿಯನ್ನಿತ್ತಿರುವರು. ಈ ಉಪಕ್ರಮವು ನಿಜವಾಗಿ ಅಭಿನಂದನೀಯವು. ಜ್ಞಾನದಾನವನ್ನು ಇಂಗ್ಲಿಷ ಭಾಷೆಯಿಂದ ನಡಿಸುವ ರೀತಿಯಿಂದ ವಿಷಯ ಜ್ಞಾನಗ್ರಹಣಕ್ಕೆ ಆಗುವ ನಿಷ್ಕಾರಣ ಉಪದ್ರವವು ಈ ಯೋಜನೆಯಿಂದ ತಪ್ಪುವದು. ದೇಶಿ ಭಾಷೆಗಳಿಗೂ ಈ ಯೋಜನೆಯ ಪ್ರೋತ್ಸಾಹನವು ಪ್ರಾಪ್ತವಾಗಿ, ಅವುಗಳನ್ನು ಶ್ರೀಮಂತಗೊಳಿಸುವ ಈಗಿನ ಸುಶಿಕ್ಷಿತರ ಶ್ರಮ ಕಡಿಮೆಯಾಗುವದು ವಿದ್ಯಾರ್ಥಿಗಳ ವಿಷಯಜ್ಞಾನವು ಸುಲಭವಾಗಿ ಬರುಗಿ ಬಹಳ ಲಾಭವಾಗುವದು. ಈ ಯೋಜನೆಯ ಮದ್ರಾಸ ಸರಕಾರದವರು ವಿಕಲ್ಪವೆಂದು ಅಷ್ಟಕ್ಕೆ ಮನ್ನಿಸದೆ, ದೇಶೀ ಭಾಷೆಗಳ ಅಭಿಮಾನ ಹಿಡಿದು ಅಲ್ಲಲ್ಲಿಯ ವಿದ್ಯಾಭಿಮಾನಿಗಳೆಲ್ಲ ತಮ್ಮ ತಮ್ಮ ವಿದ್ಯಾರ್ಥಿಗಳಿಗೆ ಉತ್ತೇಜನವನ್ನಿತ್ತು, ಹೊಸ ಯೋಜನೆಯು ಪುರಸ್ಕಾರ ಮಾಡುವರೆಂಬುದರಲ್ಲಿ ಸಂದೇಹವೇನಿಲ್ಲ ವಿದ್ಯಾರ್ಥಿಗಳ ಬೇಡಿಕೆಯು ವಿಶೇಷವಾಗಿದ್ದದರಿಂದಲೇ ಮದ್ರಾಸ ಸರಕಾರದವರು ಈ ಯೋಜನೆಗೆ ಹಚ್ಚಿದರೆಂದರೆ, ಅಯಥಾರ್ಥವಾಗದು. ನಮ್ಮಲ್ಲಿಯ ಶಿಕ್ಷಣ ಅಧಿಕಾರಿಗಳೂ ಈ ಕುರಿತು ತಕ್ಕ ಉಪಯೋಜನೆ ಮಾಡಬೇಕಾಗಿ ವಿನಂತಿ.

---

೪. ಧಾರವಾಡದ ಪ್ರಸಿದ್ಧ ಸಮಾಜಹಿತಕರ್ತ್ಯರಾದ ಶ್ರೀ|| ನಲವಡಿ ಫಕೀರಪ್ಪನವರು ಕಳೆದ ತಾ. ೧೮ ನೇ ಬುಧವಾರಕ್ಕೆ ರಕ್ತಾತಿಸಾರ ಬೇನೆಯಿಂದ ಕಾಲಾಧೀನರಾದರೆಂದು ತಿಳಿಸಲು ವ್ಯಸನವಾಗುತ್ತದೆ. ಶ್ರೀ|| ನಲವಡಿಯವರ ಪ್ರತ್ಯಕ್ಷ ಪರಿಚಯವು ನಮ್ಮಲ್ಲಿಯವರಿಗಿರದಿದ್ದರೂ, ಅವರ ಹೆಸರನ್ನು ಕಳೆದ ವರ್ಷ ಎಲ್ಲರೂ ಕೇಳಿರುವರು. ಇಲ್ಲಿ ಕೂಡಿದ ಪರಸ್ಪರ ಸಹಕಾರಿ ಪರಿಷತ್ತಿನ ನಿಯೋಜಿತ ಅಧ್ಯಕ್ಷರಿದ್ದರಿವರು ಶ್ರೀ|| ನಲವಡಿಯವರ ವಿಚಾರ ಪರಿಪೂರ್ಣ ಭಾಷಣವನ್ನು ನಾವು ಆ ಸಮಯವೇ ಪ್ರಕಟಿಸಿರುವೆವು. ಅವರು ಸದ್ಯಕ್ಕೆ ಧಾರವಾಡದಲ್ಲಿ ಜರುಗಲಿಕ್ಕಿದ್ದ ಪ್ರಾಂತಿಕ ಸಹಕಾರಿ ಪರಿಷತ್ತಿನ ಸ್ವಾಗತ ಮಂಡಳದ ಸಭಾಸದರಾಗಿದ್ದರು. ಪರಿಷತ್ತು ಕೂಡುವ ಸಮಯದಲ್ಲಿಯೇ ಬಾಲಕರಾದ ಶ್ರೀ|| ಫಕೀರಪ್ಪನವರು ತೀರಿಕೊಂಡಿದ್ದು ಶೋಚನೀಯವು. ಶ್ರೀ. ಫಕೀರಪ್ಪನವರು ರಡ್ಡಿ ಮಹನೀಯರು, ಸ್ವಸಮಾಜದ ಉನ್ನತಿಗಾಗಿ ಅನೇಕ ಸಂಸ್ಥೆಗಳನ್ನು ಸ್ಥಾಪಿಸಿದರು ರಡ್ಡಿ ವಿದ್ಯಾವರ್ಧಕ ನಿಧಿ ರಡ್ಡಿ ಬೋರ್ಡಿಂಗ, ರಡ್ಡಿ ಸೊಸೈಟಿ, ಇತ್ಯಾದಿ ಸಂಸ್ಥೆಗಳು ಶ್ರೀ|| ನಲವಡಿಯವರ ಸ್ವಸಮಾಜೋತ್ಕರ್ಷಸಾಧನೆಯ ಉದಾಹರಣೆಗಳು ಅವರು ಬ್ರಾಹ್ಮಣೇತರ ಸಮಾಜದ ಮುಖಂಡರಾಗಿ ಅನೇಕ ಕಾರ್ಯಗಳನ್ನೂ ಮಾಡಿರುವರು ಶ್ರೀ|| ನಲವಡಿಯವರ ನಿಧನದಿಂದ ಸಹಕಾರಿ ಚಳವಳಿಗೂ, ಬ್ರಾಹ್ಮಣೇತರ ಸಮಾಜಕ್ಕೂ ರಡ್ಡಿ ಸಮಾಜಕ್ಕೂ ಬಹಳ ಹಾನಿಯಾಗಿದೆ. ರಡ್ಡಿ ಸಮಾಜದವರೆಲ್ಲರೂ ಶ್ರೀ|| ಫಕೀರಪ್ಪನವರ ಸದ್ಗುಣಗಳನ್ನೆಲ್ಲ ಮೇಲ್ಪಂಕ್ತಿಯಾಗಿಟ್ಟುಕೊಂಡು, ಅವರ ನಿಧನದಿಂದ ಒದಗಿದ ಹಾನಿಯನ್ನು ತುಂಬಿತರಲೆಂದೂ, ಶ್ರೀ|| ಫಕೀರಪ್ಪನವರಿಗೆ ಸದ್ಗತಿ ದೊರೆಯಲೆಂದೂ ಶ್ರೀ ಪರಮಾತ್ಮನಿಗೆ ನಾವು ಪ್ರಾರ್ಥಿಸುವೆವು.

ಸ್ಥಾನಿಕ ವೃತ್ತಾಂತ

ಕುಮಟಾ— ಚಳಿ ಬೀಳುತ್ತದೆ.

ಕಳೆದ ಶುಕ್ರವಾರಕ್ಕೆ ಪ್ರಾಂತಾಧಿಪರ ಆಜ್ಞೆಯಂತೆ, ಸಾರ್ವಭೌಮ ಪಂಚಮ ಜಾರ್ಜರ ಮಾತೋಶ್ರೀಯವರಾದ ಅಲೆಕ್ಝಾಂಡ್ರಾ ಮಹಾರಾಣಿಯವರ ನಿಧನದ ಮೂಲಕ ಒದಗಿದ ಅಪಾರ ಶೋಕದ ನಿದರ್ಶನವೆಂದು ಕೋರ್ಟು-ಕಚೇರಿ ಸರಕಾರಿ ಆಫೀಸುಗಳಲ್ಲಿ ಮುಚ್ಚಿಕೊಂಡಿದ್ದವು ಕಳೆದ ಶುಕ್ರವಾರಕ್ಕೆ ವಿಲಾಯತಿಯಲ್ಲಿ ಅಲೆಕ್ಝಾಂಡ್ರಾ ಮಹಾರಾಣಿಯವರ ಉತ್ತರಕ್ರಿಯೆಯಾಗುವದಿತ್ತು. ಮರಣಸಮಯ ಅವರ ಪ್ರಾಯ ೮೧ ವರುಷ

ಶ್ರೀ ದತ್ತಜಯಂತಿಯ ಉತ್ಸವವು ಇಲ್ಲಿಯ ಶ್ರೀ ಕುಂಭೇಶ್ವರ ದೇವಸ್ಥಾನದಲ್ಲಿ ಕಳೆದ ಮಾರ್ಗಶೀರ್ಷ ಶು ೯ ರಿಂದ ನಿನ್ನೆಯ ವರೆಗೆ ಭಜನೆ, ಕೀರ್ತನೆ ನಾಟಕ, ಇತ್ಯಾದಿ ಸೇವೆಗಳಿಂದ ಜರುಗಿತು. ನಿನ್ನೆ ಭಜಕರು ಭಜನೆ ಮಾಡುತ್ತ ಭಿಕ್ಷಾಟನ ಮಾಡಿದರು ಇಂದು ಪಲ್ಲಕ್ಕಿಯ ಉತ್ಸವ, ಬಡವರಿಗೆ ಭೋಜನ ಇತ್ಯಾದಿ ಸಮಾರಂಭಗಳು ನಡೆದವು.

ಕೊಲ್ಹಾಪುರದ ಮಹಾರಾಜರು ಶ್ರೀ ಗೋಕರ್ಣ ಮಹಾಬಲೇಶ್ವರ ಲಿಂಗದ ಮೇಲೆ ಪದ್ಮನ್ನದ ಅಭಿಷೇಕ ಮಾಡಿ ಗೋಕರ್ಣದಲ್ಲಿ ಗದಿಬಿದಿಯಾಗಿದೆ. ಶ್ರೀ ದೇವರಿಗೆ ನೈವೇದ್ಯ ವಗೈರೆ ನಿತ್ಯನೇಮದಂತೆ ಜರುಗಲು ಅನಾನುಕೂಲವಾದ್ದರಿಂದ ಒಂದು ದಿನ ಶ್ರೀ ಕ್ಷೇತ್ರದಲ್ಲಿ ಹರತಾಳಾಚರಣೆಯಾಯಿತು. ಪ್ರಾಯಶ್ಚಿತ್ತವಿಧಿಯಾಗುವದಿದೆ

ಸಾಭಾರ ಸ್ವೀಕಾರ.

ವಸಂತ— ಅಕ್ಟೋಬರ ತಿಂಗಳ ೩ ೦ ಡಿ ಕೆ. ಸಂಪಾದಕ ಮುದ್ರಕ ಪ್ರಕಾಶಕ – ಶ್ರೀ|| ಶಿವರಾಮ ಕಾರಂತ ಕೋಟ, ಕುಂದಾಪುರ. ವಾರ್ಷಿಕ ಚಂದಾ ರೂಪಾಯಿ ೨—೦—೦

ರಂಗಭೂಮಿ— ಗದಗಿನ ಶ್ರೀ [illegible] ಕರ್ನಾಟಕ ನಾಟಕ ಮಂಡಳಿಯ [illegible] ರದಾವ ವಗಾಸವಕ್ರಿಕೆ [illegible] ವಕ ಮತ್ತು ಪ್ರಕಾಶಕ — ಶ್ರೀ [illegible] ಭಾರದ್ವಾಜ, [illegible] ವಾರ್ಷಿಕ ವರ್ಗಣಿ [illegible] ೩—೦—೦

ಹಳದೀಪುರ— [illegible] ಶೆಕೆಸಿ [illegible] ಬಿಡು ಮಾಡಿಕೊ [illegible] ಹತ್ತರ [illegible] [illegible] ಜನರು [illegible] [illegible] ಕೊಡಲಿ.

ಸಂಕೇರಿ— [illegible]

[illegible] ವಿಚಾರಿಸಿ ಜಾತ್ರೆಗಳಲ್ಲಿ ಈ ತರದ ಅನರ್ಥಗಳನ್ನು ನಡೆದು [illegible] ಜನರನ್ನು ರಕ್ಷಿಸಿದ [illegible] ಕಾರ್ಯ [illegible] ಕೇನು?

ಸಿದ್ದಾಪುರ—ತ್ಯಾಗ್ಲಿಯಲ್ಲಿ ಕೆಲವು ದಿವಸಗಳ ಹಿಂದೆ ಒಂದು [illegible] ಶ್ಯಾ ಒಂದು ತ್ಯಾಗ್ಲಿ [illegible] ಮನೆಯ ಅಂಗಳದ ವರೆಗೆ ಕೊಗಿತ್ತಂತೆ ನಂತರ [illegible] ಜನರು [illegible] [illegible] ಹಾನಿ ಮಾಡಿಲ್ಲವೆಂ ತಲೂ, ಅದು ಸಾಕಿದ ಆನೆಯೇ ಆಗಿರಬೇಕೆಂತಲೂ ಜನರು ಹೇಳುತ್ತಾರೆ

ಇಲ್ಲಿಯ ಮೇಜಿಸ್ಟ್ರೇಟರಲ್ಲಿ [illegible] ನ ಮೇಲಿನ [illegible] ಈ ತಾಲೂಕಿನ [illegible] ಖೂನಿ ಕೇಸಿನ ವಿಚಾರವೂ ತಾ. [illegible] ಯಿಂದ ಪ್ರಾರಂಭ ವಾಗಿದೆ

ಲೋಕಲ್ ಬೋರ್ಡಿನ ಇಲೆಕ್ಷನ್ನು [illegible] ತಿಂಗಳೊಳಗೆ ಜರುಗಿಯಬೇಕಾಗಿಯೂ ಹೊಸ [illegible] ತಾ [illegible] ಸೇರುವದಾಗಿಯೂ ತಿಳಿದುಬಂದದೆ

ಹಿಂದೆ ಲೋಕಲ್ ಬೋರ್ಡಿನ ಇಲೆಕ್ಷನ—[illegible] ವಿಷಯವಾಗಿಯೂ ವ [illegible] ವ ತಾಲೂಕು ಬೋರ್ಡುಗಳಿಗೆ ಮತ ಕೊಡುವ [illegible] ಎರಡು ದಿವಸ [illegible] ವಿಷಯವಾಗಿಯೂ ಮತದಾರರ ತಕ ರಾರು ಕೇಳಬಂದಿತ್ತು ಆದರೆ ಆದೇ ಪ್ರಕಾರ ಇನ್ನು ಮುಂದಿನ ಇಲೆಕ್ಷನ್ನಿನಾದರೂ ತಪ್ಪು ಆಗದಂತೆ ಎಚ್ಚರಿಕೆ ತಗೆದುಕೊಂಡಿದ್ದರೆ [illegible] ಮತದಾರರಿಗೆ ಉಪಕಾರವಾಗಿ ದಂತಾಗುತ್ತಿತ್ತು.

— ಗತಿಶಾಸ್ತ್ರನಿಪುಣನಾದ [illegible] ಎಂಬ ಎಳೆ ಪ್ರಾಯದವನು ಅನಂತಪುರದಲ್ಲಿ ಉಪನ್ಯಾಸವನ್ನಿತ್ತನು [illegible] ಜಡ್ಜರೂ, ಕಾಲೇಜು ಹಾಗೂ ಹ್ಯಾಸ್ಕೂಲುಗಳ ಅಧಿಕಾರಿಗಳೂ ಉಪನ್ಯಾಸಗರಿಗೆ [illegible] ನಾರಾಯಣನಿಗೆ [illegible]ರಿಸಿದರು.

[illegible] ತಾಲೂಕ ಕಾಂಗ್ರೆಸ ಕಮಿಟಿಯವರ [illegible] ತಾ. ೧—೧೧—೩೧ನೇ ಯಿಂ ದ [illegible] ನೇ ವರೆಗಿನ ಆಢಾವೆ (ತಾ. [illegible] ದಿನದ ತ್ಯಾಗ್ಲಿ ದೇವಸ್ಥಾನದಲ್ಲಿ [illegible])

ಜಮಾ —	ತಪಶೀಲು.
[illegible]	& ಬಿನ ವರ್ಷದ ಶಿಲ್ಕು
[illegible]	[illegible] ಅಕ್ಕಿ [illegible]
[illegible]	ಗಾಂಧಿ ಕಾಣಿಕೆ (ತ್ಯಾಗ್ಲಿದೂಕಾನಿ)
[illegible]	[illegible] ವರ್ಗಣಿ ಬಾಬತು
[illegible]	ದೇಶ ಬಾಬತು
[illegible]	ರಕ್ಷಣಿಯಾಗಿ (ಶುಭಕಾರ್ಯದಲ್ಲಿ)
[illegible]	[illegible]
[illegible]	ರಾಷ್ಟ್ರೀಯ ಧ್ವಜಾರ್ಪಣ
[illegible]	[illegible] ಫೀ ಬಾಬ್ತು (ತ್ಯಾಗ್ಲಿ [illegible])
[illegible]	[illegible] (ತ್ಯಾಗ್ಲಿ [illegible])
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
ಸಿದ್ಧ ಚರಕದ [illegible]	[illegible]
ಶಿಲ್ಕು	[illegible]
ಒಟ್ಟು	[illegible]

ವೃತ್ತಸಾರ.

— ಒಂದು ನೋಡಿ! [illegible] ದ ಮಾರ್ತಾಂಡರಾಯರು ಮೈಸೂರಿನ ರಾ। ಕೃಷ್ಣಮೂರ್ತಿಯವರ ಮಗಳೊಡನೆ ಮದುವೆಯಾದರು ಕೃಷ್ಣಮೂರ್ತಿಯವರು ಬ್ರಾಹ್ಮಣರು; ಮಾರ್ತಾಂಡರಾಯರು ಕ್ಷತ್ರಿಯರು ಮಾರ್ತಾಂಡರಾಯರು ತಾವು ಬ್ರಾಹ್ಮಣರೆಂದು ಹೇಳಿದ್ದರಿಂದ ಕನ್ಯಾದಾನ ಬದಗಿಸಿದರಂತೆ. ಸತ್ಯಸ್ಥಿತಿಯು [illegible] ಅರಿಯುವ ಮುನ್ನ ಮದುವೆ ಹೋದ ಬಳಿಕ ತಿಳಿಯಿತಂತೆ. ಈಗ ಕೃಷ್ಣ ಮೂರ್ತಿಯವರು, ವಂಚಿಸಿದ ಬಗ್ಗೆ ಅಳಿಯ ಮಾರ್ತಾಂಡ ರಾಯರ ಮೇಲೆ ಫಿರ್ಯಾದಿ ದಾಖಲು ಮಾಡಿರುವರು

— ಮದ್ರಾಸ ಶಾಸನ ಕೌನ್ಸಿಲಿನ ಸಭಾಸದರಾದ ಶ್ರೀ ಸಿ. ವಿ. ವೆಂಕಟರಮಣ ಅಯ್ಯಂಗಾರರವರು ವಿದ್ಯಾಪ್ರಸಾರ ಹಾಗೂ ಗ್ರಾಮಸಂಘಟನೆಗಾಗಿ ೨ ಲಕ್ಷ ರೂಪಾಯಿಗಳ [illegible]ನ್ನರ್ಪಿಸಿರುವರು.

— ಮದ್ರಾಸ ಪ್ರಾಂತದ ರಾಯಪುರಮದೊಳಗಿನ [illegible] ಕೋ ಒಪರೇಟಿವ ಸೊಸೈಟಿ ಸ್ಟೋರ್ಸ ಎಂಬ [illegible] ಒಂದು ಸಹಕಾರಿ ಸಂಘದ [illegible] ಕಳವು! ರಾತ್ರಿ ಸಮಯ ಕಳವು!! [illegible] ಹೊಸದಾಗಿ ತಯಾರಿಸಿ ಕಳವು' ಕದ್ದವರ ತಪಾಸಾಯಿತು! [illegible] ಪಿಗಳು ಇದ್ದರು ರಾತ್ರಿಕಾಲದಲ್ಲಿ ಕಾವಲು ಮಾಡುತ್ತಿರುವ ಎಂಗಲ್ಲೋಇಂಡಿಯನ್ನರು ಇನ್ಸ್ಪೆಕ್ಟರನಾದರೋ [illegible] [illegible] ವಸ್ತುಯಾದರೆ, ಬೇಕಾದಲ್ಲಿ ಕಳವಾಗಬಹುದು' ಬೇಲಿಯು ಪೈರು ತಿನ್ನುವ ಕಾಲವಿದು!

— ಕೌನ್ಸಿಲ ಆಫ್ ಸ್ಟೇಟ ಎಂಬ ಹಿರಿಯರ ಸಭೆಯು [illegible] ಮಧ್ಯಪ್ರಾಂತದಲ್ಲಿ ತಾರೀಖು ೨೬ನೇ [illegible] ಸ್ವರಾಜ್ಯ ಪಕ್ಷದ [illegible] ಗೋವಿಂದದಾಸರವರು [illegible] ಯಾಗಿರುವರು

೧೯೩೧ನೇ ಮಾರ್ಚ ಅಖೈರಿಗೆ ಅಂತ್ಯವಾಗುವ ವರ್ಷದಲ್ಲಿ ಪೋಲೀಸ ಖಾತೆಗೆ ೧೨೩೪೫೩೨೦೫ ರೂಪಾಯಿಗಳು ಖರ್ಚಾದವು ಕಳೆದ ವರ್ಷಕ್ಕಿಂತ ಏಳು ಲಕ್ಷ [illegible] ಹೆಚ್ಚಾಗಿ ಕೈಬಿಗಿಹಿಡಿದು ಮಾಡಿದ [illegible]

— ಕಾನಪುರದಲ್ಲಿ ರಾಷ್ಟ್ರೀಯ ಸಭೆಯು ತಯಾರಿಯು ಭರದಿಂದ ನಡೆದಿದೆ ಟಿಳಕ ನಗರ ರಚನೆಯಾಗಿದೆ. ಪ್ರತಿನಿಧಿ-ಪ್ರೇಕ್ಷಕರಿಗಾಗಿ ಉಳಕೊಳ್ಳುವ ವ್ಯವಸ್ಥೆ, ಮಂಟಪದ ತಯಾರಿ ಇತ್ಯಾದಿಗಳು ಸಿದ್ಧವಾಗುತ್ತಿವೆ [illegible] ನಾನಾಸಮಾಜದ [illegible] ಕರಿವರು [illegible] ಸ್ವಯಂಸೇವಕ ಪಥಕದೊಳಗೆ [illegible] ಬರುತ್ತಿರುವರು.

— ಅಖಿಲ ಭಾರತೀಯ ಸಾಲುವ ಸಂಘಕ್ಕೆ ಸರಕಾರ ನೌಕರರು ಸಭಾಸದರಾಗಬಹುದೇನೆಂಬ ಪ್ರಶ್ನೆಗೆ ಮಹಾ [illegible] ನಿಸ್ಸಂಶಯವಾಗಿ ಆಗಬಹುದೆಂದು ಉತ್ತರವನ್ನಿತ್ತಿರುವರು ಈ ಸಂಘವು ರಾಜಕಾರಣಕ್ಕೆ ಸಂಬಂಧಿಸಿದ್ದಲ್ಲೆಂದು ಅವರ ಅಭಿಪ್ರಾಯ

— ಅಖಿಲ ಭಾರತೀಯ ದೇಶಬಂಧು ಸ್ಮಾರಕ ನಿಧಿಗೆ ರೂ [illegible] ಕೂಡಿದೆ

— [illegible] ದಂಡೆಗುಂಟ [illegible] ವನ್ನು [illegible] ಕಟ್ಟಿಕೊಟ್ಟಿದ್ದರಿಂದ [illegible] ತು ಹೊರಟ ೬ ಛತ್ರಿ [illegible] ಪತ್ತೆ ಇಲ್ಲ ಉಳಿದ ಛತ್ರಿವಾರಿಗಳು [illegible] ಇತ್ಯಾದಿ ಸ್ಥಳಗಳಲ್ಲಿ ನೆಲಕಂಡಿರುವವು. ಆದರೆ, [illegible] ವಿಠೋವ ನಷ್ಟ' [illegible] ಹೊರಟು ಹೋದ [illegible] ಗಳ ಪತ್ತೆಯಿಲ್ಲ

— ಮಹಾತ್ಮರು ಇಂಗ್ಲೆಂಡಕ್ಕೆ ಹೋದಾಗ, ಯುರೋಪಿಯನ್ನರು ಅವರಿಗೆ [illegible] ಕರೆದಿದ್ದರು. ಮಹಾತ್ಮರಿಗಾಗಿ ಎಲ್ಲರೂ ಅಂದು ವನಸ್ಪತ್ಯಾಹಾರವನ್ನೇ ಸೇವಿಸಿದರು ಈ ಸಹಿಕತನವು ಮಹಾತ್ಮರು [illegible] ಹೇಳಿ [illegible] ಅಲ್ಲಿಯ [illegible] ಮಾಡಿಕೊಳ್ಳಲಿಲ್ಲವೆಂದು [illegible] ಶಿಸಿದರು

— ಅಮೇರಿಕೆಯೊಳಗಿನ [illegible] ಎಂಬ ಹಳೆಯು ದವರ [illegible] ಕಳೆದ ಗುರುವಾರ [illegible] ಭಾರತೀಯ [illegible] ದೇಶವೆಂದು [illegible] ವಿಶ್ವವಿದ್ಯಾಲಯದ [illegible] ದಗಳಲ್ಲಿ ಹೆರಿಯಲ್ಪಟ್ಟಿತು.

— ಸಿಮಲಾ ದೇಶದಲ್ಲಿ ಮಂಗಗಳು ಸಾಮಾನ್ಯ ಆಳುಗಳಂತೆ ದುಡಿಯುತ್ತವೆ. ತೆಂಗಿನ ಗಿಡಗಳ ಕಾಯಿ ಕೊಯ್ಯುವದು, ಹಣ್ಣುಗಳನ್ನು ಕೊಯ್ಯುವದು, ಇತ್ಯಾದಿ ಕೆಲಸಗಳನ್ನು ಮಾಡಬಲ್ಲವು. ಈಕ್ಯಂದಿನಲ್ಲಿ ಮಂಗಗಳಿಗೆ ಸ್ವಲ್ಪ ಈ ಕುರಿತು ಶಿಕ್ಷಣ ಕೊಡಬೇಕಾಗಿದೆ.

ಪಂಢರಪುರದ ಶ್ರೀ ಪಾಂಡುರಂಗ ಮೂರ್ತಿಗೆ ೮೦ ತೊಲೆ ಚಿನ್ನದ ಕಿರೀಟವನ್ನು ಶ್ರೀ ಜಗನ್ನಾಥ ಮಹಾರಾಜರು ಸಮರ್ಪಿಸಿದರು.

ವಿಸ್ಕೌಂಟ ಇವ್ಹನವರು ವಿಲಾಯತಿಯಿಂದ ಹಿಂದುಸ್ಥಾನಕ್ಕೆ ಮರಳಿ ಬಂದಿರುವರು. ಹಿಂದುಸ್ಥಾನದ ಸ್ಥಿತಿಯ ವಿಷಯ ಅವ್ಹನವರೂ, ಬೊಕೆನ್‌ಹೆಡ್ ಶ್ರೀ ಕಿಡಾಯಿ ಈ ವಿಲಾಯತಿಯೊಳಗಿನ ದೊಡ್ಡ ದೊಡ್ಡ ಪ್ರಮುಖರ ಬಿಟ್ಟು ವಿಷಯ ಹಿಂದುಸ್ಥಾನದ ಪರಿಸ್ಥಿತಿಯನ್ನು ಹೇಳಿದರಂತೆ! ಈ ಕುರಿತು ಸದ್ಯಕ್ಕೆ ಕಾಲಿಕಾಯ ಪತ್ರದ ತರ್ಫೆನಿಂದ ಕಾಯಿದೆಯ ಒಕ್ಕಣೆಯು ತಯಾರಾಗುತ್ತಿರುವದಂತೆ. ಅದು ಸದ್ಯಕ್ಕೆ ವಿಲಾಯಿತಿಯ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬರುವದಿರುವದಂತೆ!

ದಮಾಸ್ಕಸದೊಳಗೆ ಇನ್ನೂ ಶಾಂತಿಯಾಗಲಿಲ್ಲ ಫ್ರೆಂಚ ಜನರು ಒಪ್ಪಂದ ಕಾಯಿದೆಯನ್ನು ಜಾಹೀರುಗೊಳಿಸಿ, ದೊಂಬಿಯನ್ನು ಶಾಂತಪಡಿಸಬೇಕೆನ್ನುತ್ತಿದ್ದಾರಂತೆ! ಅವನ್ನು ಎಷ್ಟು ನಷ್ಟ-ಕಷ್ಟ ಸಹಿಸಬೇಕೋ!

— ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರಾದ ರಾಜಾ ಹಂಸರಾಜರವರು ಲಾಲಾ ಲಜಪತರಾಯರಿಗಾಗಿ ತಮ್ಮ ಸಭಾಸದತ್ವಕ್ಕೆ ರಾಜೀನಾಮೆಯನ್ನಿತ್ತಿರುವರು. ದೇಶಭಕ್ತ ಲಜಪತರಾಯರು ಈ ಸ್ಥಾನಕ್ಕೆ ಉಮೇದ್ವಾರರಾಗಿ ನಿಂತಿರುವರು.

— ಬೆಂಗಳೂರಿನಲ್ಲಿ ಬರುವ ಜನವರಿ ೩ ನೇ ತಾರೀಖಿನಿಂದ ದನಗಳ ದವಾಖಾನೆ ಹಾಗೂ ಪಶುವೈದ್ಯಕೀಯ ಶಾಸ್ತ್ರದ ಶಿಕ್ಷಣ ಕೊಡುವ ಶಿಕ್ಷಣಾಲಯವು ಸುರುಗೊಳ್ಳುವದಿದೆ. ಶಿಕ್ಷಣಕ್ರಮವು ೩ ವರ್ಷದ್ದು.

— ಸೌ॥ ಸರೋಜಿನೀ ದೇವಿಯವರ ಮಗನೊಬ್ಬನು ತಾಯಿಯ ಅನುಮತಿಯಿಂದ ಮುಸಲ್ಮಾನ ಧರ್ಮಕ್ಕೆ ಸೇರಿದನೆಂಬುದೊಂದು ಸುದ್ದಿ ಹರಡಿತ್ತು. ಮಗನು ಮುಸಲ್ಮಾನ ಗ್ರಂಥಗಳನ್ನು ಪರಿಶೀಲಿಸತೊಡಗಿದ್ದರ ಮೇಲಿಂದ ಈ ಸುಳ್ಳು ಸುದ್ದಿ ಹರಡಿರುವದಾಗಿ ಸೌಭಾಗ್ಯವತಿಯವರು ಧ್ವನಿಸಿದರು. ತಿಳಿಗೇಡಿ ಮಂದಿಗಳು!

— ದತ್ತಾತ್ರೇಯ ಭಜನೆ ಮೇಳಗಳನ್ನು ಮುಂಬಯಿಯಲ್ಲಿ ನಡಿಸಿದರೆಂಬ ಆರೋಪದ ಮೇಲೆ ಒಬ್ಬ ಪೋಲೀಸ ಅಧಿಕಾರಿಯನ್ನು ಮುಂಬಯಿಯ ಪೋಲೀಸ ಕಮೀಶನರರು 'ಸಸ್ಪೆಂಡ' ಮಾಡಿದರು. ಇವರ್‍ಯಾರಿಗೆ ಹಿಂಬಲ ಕೊಟ್ಟಿರುವರು

— ವೇದ ವೈದ್ಯಶಾಸ್ತ್ರಕ್ಕೆ ಉತ್ತೇಜನ ಕೊಡುವದಕ್ಕಾಗಿ ಮಧುರಾದ ಜಿಲ್ಹಾ ಬೋರ್ಡಿನವರು ವೈದ್ಯ ಹಾಗು ಹಕೀಮರವರಿಗೆ ಸಹಾಯ ಮಾಡುವ ನಿರ್ಧಾರ ಮಾಡಿರುವರು.

— ಮೊರೊಕ್ಕೋ ಪ್ರದೇಶದಲ್ಲಿ ಹಿಮ ಬೀಳಹತ್ತಿದೆ. ಫ್ರೆಂಚ ಹಾಗೂ ಸ್ಪೇನ ಸರಕಾರದವರಿಗೆ ಇದೊಂದು ದೊಡ್ಡ ಪ್ರತಿಕೂಲ ಸಂಗತಿ! ರಿಫರಿಗೆ ಅನುಕೂಲವಾಯಿತು!

— ಹಳಿಯಾಳದ ಶ್ರೀ ಟಿ. ಎಮ್. ಖಾನಡ್‌ರವರು ಅಖಿಲ ಭಾರತೀಯ ನೂಲುವ ಸಂಘಕ್ಕೆ ೫೦ ಸಾವಿರ ಗಜ ನೂಲು ಅರ್ಪಿಸಿರುವರು. ಧಾರವಾಡದ ಶ್ರೀ ರಾಮಚಂದ್ರ ಎನ್. ಶಾಸ್ತ್ರಿಗಳು ಅಖಿಲ ಭಾರತೀಯ ನೂಲುವ ಸಂಘದ ಸಭಾಸದರ ಪಟದಲ್ಲಿ ದಾಖಲಾಗಿರುವರು. ಶ್ರೀ ಶಾಸ್ತ್ರಿಗಳು ವರ್ಷಕ್ಕೆ ೨೪೦೦ ಗಜ ನೂಲು ಕೊಡುವ (ಬಿ) ವರ್ಗದ ಸಭಾಸದರು.

— ಆಲಿಘಾಡದಲ್ಲಿ ಒಂದು ಬ್ಯಾಂಕಾಧಿಪರು ಗತಿಸಿದರು. ಅಗ ಮ್ಯುನಿಸಿಪಾಲಿಟಿಯವರು ಅವರಿಗೆ ಮಾನಪತ್ರವನ್ನೀಯಬಾರದಾಗಿ ನಿರ್ಧರಿಸಿರುವರು.

ವಿಮರ್ಶೆ.

ನಂದಿನೀ—ಶ್ರೀ ಗೋಕರ್ಣ ಕ್ಷೇತ್ರದಲ್ಲಿ ಶ್ರೀ॥ ಭಡತಿ ನಾರಾಯಣ ಶಾಸ್ತ್ರಿಗಳು ಹೊರಡಿಸಿದ ನೂತನ ಮಾಸಪತ್ರಿಕೆ. ನಂದಿನಿಯು ವ್ಯಾಘ್ರನಂಥ ಹಿಂಸ್ರಪಶುವನ್ನು ಕೂಡ ಬಯಿಸುವ ತತ್ತ್ವಗಳ ಉಪದೇಶ ಮಾಡಿ ಲೋಕಸೇವೆ ಮಾಡಲು ಹೊರಟ ಪತ್ರಿಕೆ. ಕಾರ್ತೀಕ-ಮಾರ್ಗಶೀರ್ಷ ಮಾಸದ ಎರಡು ಸಂಚಿಕೆಗಳಲ್ಲಿ ಸುಖಾಸುಖವಿಚಾರ, ಮಾಸಮಹಾತ್ಮ್ಯೆ, ಗೃಹಪತ್ನಿ, ಮುಮುಕ್ಷು ಮಾಧವೀ, ಶ್ರೀ ಶಂಕರಾಚಾರ್ಯ, ಇತ್ಯಾದಿ ವಾಚನೀಯ ವಿಷಯಗಳಿವೆ. ಸೂಕ್ತರತ್ನಮಾಲೆಯಲ್ಲಿ ಮಹಾಪುರುಷರ ಉಕ್ತಿಗಳು ಕೊಡಲ್ಪಟ್ಟಿವೆ ಹಿಂದಿನ ಪುಟದ ಮೇಲೆ ಮಾಸವಾರ್ತೆಯೂ ಸಂಗ್ರಹಿಸಲ್ಪಟ್ಟಿದೆ. ಲೋಕೋಪಯುಕ್ತ ಪತ್ರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೨-೦-೦

ಸ್ವರಾಜ್ಯಡಾಯರಿ—ಮುತುಪಿಯ ಶ್ರೀ ಪಿ. ಪಿ. ಬ್ರದರ್ಸರವರು ಪ್ರಕಟಿಸಿರುವ ೧೯೨೬ನೇ ಇಸ್ವಿಯ ಡಾಯರಿಯಿದು! ಮಹಾತ್ಮಾ ಗಾಂಧಿ, ದೇಶಬಂಧು ದಾಸ, ಪಂಡಿತ ಮೋತಿಲಾಲ ನೆಹರು, ಶ್ರೀಮತಿ ಸರೋಜಿನಿ ನಾಯುಡುರವರ ಭಾವಚಿತ್ರಗಳಿದ್ದು, ಹಿಂದುಸ್ಥಾನ ಹಾಗು ಪರದೇಶಗಳೊಳಗಿನ ಸ್ಥಿತಿಯ ನ್ಯಾಯ ಮಾಹಿತಿಯೂ ಕೊಡಲ್ಪಟ್ಟಿದೆ. ದೊಡ್ಡ ಸೈಜಿನ ಬೆಲೆ ರೂ ೦-೧೨-೦; ಸಣ್ಣ ಸೈಜಿನ ಬೆಲೆ ರೂ ೦-೮-೦

ಕನ್ನಡ ಪಂಚಾಂಗ—ಮುತುಪಿಯ ಪ್ರಭಾಕರ ಮುದ್ರಾಲಯದವರು ಪ್ರಕಟಿಸುತ್ತಿರುವ ೧೯೨೬ನೇ ಇಸ್ವಿಯ ಕನ್ನಡ ಪಂಚಾಂಗವಿದು. ಇದರೊಳಗೆ ೧೯೨೬ನೇ ಇಸ್ವಿಯ ಪಂಚಾಂಗವಲ್ಲದೆ ಅನೇಕ ಮಾಹಿತಿಯಿದ್ದು, ಭಿನ್ನ ಭಿನ್ನ ಕಸಗಳ ಮೋಕಾಬಲೆವಟ್ಟು, ಸ್ಟಾಂಪು, ಟಪಾಲು ಮಾಹಿತಿ, ಬಡ್ಡಿ ಲೆಖ್ಖದ ಕೋಷ್ಟಕಗಳು, ಧಾನ್ಯಾದಿಗಳ ತೇಜಿ-ಮಂದಿ ಧಾರಣೆಯ ಭವಿಷ್ಯ ಇತ್ಯಾದಿ ಮಾಹಿತಿಯಿದೆ. ಬೆಲೆ ೦-೩-೯.

— ದಾವಣಗೆರೆಯ ಹರಿಜನರ ಸಂಸ್ಥೆಯವರ ಪ್ರಯತ್ನದಿಂದ ಚಿತ್ರದುರ್ಗದ ದೊಡ್ಡ ಕಿತ್ತೂರು ವ್ಯವಹಾರಿಯ ಅಸ್ಪೃಶ್ಯರು ಮೃತ ಪ್ರಾಣಿಗಳ ಮಾಂಸಾಹಾರವನ್ನು ಬಿಡಿಸಿರುವರು. ಸಂತೋಷದ ವಿಷಯ!

— ಮಲಬಾರದ ಜಯಿಲಿನಲ್ಲಿ ಸುಮಾರು ೧೫೦ ಮಂದಿಗಳು ಮಡಿದರೆಂದು ಸುದ್ದಿಯಿದೆ. ಮಲಬಾರ ಸೆರೆ ವಿಚಾರಣ ಮಂಡಳಿಯವರು ೨ ಸಾವಿರ ರೂಪಾಯಿಗಳನ್ನು ನಿರಾಶ್ರಿತರಿಗಾಗಿ ಮಂಜೂರ ಮಾಡಿರುವರು.

ಸುಗಂಧಿ ತಾಂಬೂಲೀ ಜರ್ದಾ!

ಉತ್ತಮ ತಂಬಾಕ ತೆಗೆದುಕೊಂಡು ಅದಕ್ಕೆ ತಾಂಬೂಲ ಪದಾರ್ಥಗಳ ಮತ್ತು ಮುಖರಂಜಕ ಔಷಧಿ ವನಸ್ಪತಿಗಳ ಅರ್ಕದ ಒಗರನ್ನು ಕೊಟ್ಟು ಈ ತಾಂಬೂಲೀ ಜರ್ದಾ ತಯಾರ ಮಾಡಿರುತ್ತದೆ. ಇದು ತಿನ್ನಲಿಕ್ಕೆ ಕಡಕವಿದ್ದು ಸುವಾಸಿಕವಿರುತ್ತದೆ. ಇದರ ಸೇವನೆಯಿಂದ ಬಾಯಿಯ ಹೊಲಸು, ಹಲ್ಲುಬೇನೆ ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಗಟ್ಟಿಯಾಗುತ್ತವೆ. ಇದರ ಸೇವನೆಯಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಭೀತಿಯು ಏನೂ ಇಲ್ಲ. ಅದ್ದರಿಂದ ತಂಬಾಕ ಸೇವಿಸುವ ರಸಿಕರು ಅವಶ್ಯವಾಗಿ ಅನುಭವ ತೆಗೆದುಕೊಳ್ಳಬೇಕು. ೧ ಪುಡಿಗೆ ಕಿಂ. ರೂ. ೦-೦-೬, ೨೫ಕ್ಕೆ ೦-೯-೦, ೧೦೦ಕ್ಕೆ ರೂ ೩-೦-೦, ೫೦೦ಕ್ಕೆ ರೂ. ೮-೦-೦, ೧೦೦೦ಕ್ಕೆ ರೂ ೧೫-೦-೦. ಟಪಾಲು, ಪೆಕಿಂಗ ವಗೈರೆ ಖರ್ಚು ಪ್ರತ್ಯೇಕ ಬೀಳುವದು ವಿಶೇಷ ಮಾಹಿತಿ ಬಗ್ಗೆ ಕೆಳಗಿನ ಪತ್ತೆಯ ಮೇಲೆ ಪತ್ರವ್ಯವಹಾರ ಮಾಡಿದರೆ ಜರೂರ ಉತ್ತರ ಕೊಡಲ್ಪಡುವದು

ಪತ್ತೆ:— ಎಸ್. ಬಿ. ಕದಂ,

ಬೀಡಿ ಮತ್ತು ತಂಬಾಕು ಜರ್ದಾ ದುಕಾನ.

ಮು. ಪೋ. ನಿಪ್ಪಾಣಿ, ಜಿ. ಬೆಳಗಾಂವ.

"ಚಾಟಾನೂಗಾ" ಕಬ್ಬಿನ ಗಾಣ!

ಜಗತ್ತಿನಲ್ಲಿ ಸರ್ವೋತ್ಕೃಷ್ಟವೆಂದೇ ಇದು ಇಷ್ಟು ಪ್ರಖ್ಯಾತಿ ಹೊಂದಿತು!



ನಂ ೧೨, ರೂ. ೧೪೫

,, ೧೩, ರೂ ೧೭೫

,, ೨೨, ರೂ. ೧೯೦.

,, ೫೩, ರೂ ೩೪೮.

ಇದರ ರೋಲುಗಳು ಶುದ್ಧ ಕಬ್ಬಿಣದಿಂದ ಮಾಡಿದ್ದಿರುತ್ತವೆ, ಕಬ್ಬಿನೊಳಗಿನ ಹನಿ ಹನಿ ರಸವನ್ನೂ ಕೂಡ ಹಿಂಡಿ ತೆಗೆಯುವ ವ್ಯವಸ್ಥೆ ಮಾಡಬರುತ್ತದೆ ಗಾಣದ ಎರಡೂ ಬದಿಗಳ ಯಾವದೇ ಬದಿಯಿಂದ ಕಬ್ಬು ಕೊಡಬರುತ್ತದೆ

ಆರ್ಡರಿನ ನಂಗಡ ೩ ಹಣವನ್ನು ಡಿಪೊಝಿಟ್ಟಾಗಿ ಕಳಿಸಬೇಕು.

ದಸ್ತಾಲು ಮುಂಬಯಿ ರೇಲ್ವೆ ಸ್ಟೇಶನ್ನಿನ ವರೆಗೆ ತಂದು ಕೊಡಲ್ಪಡುವದು. ಅಲ್ಲಿಂದ ಮುಂದಿನ ಖರ್ಚು ಗಿರಾಕಿಗಳು ಸಹಿಸಬೇಕು

ಕ್ಯಾಟಲಾಗು "ಡಬ್ಲ್ಯು ೧೧೨" ಪುಕ್ಕಟೆ!

ಮೆಕ್‌ಬೆಥ ಬ್ರದರ್ಸ ಮತ್ತು ಕಂಪನಿ, ಲಿಮಿಟೆಡ್.

ಕೋಡಾಕ ಹೌಸ, ಹೊರ್ನಬಿ ರೋಡ ಮುಂಬಯಿ.

ವಿವಿಧ ಸಂಗ್ರಹ.

ಪಟಿಯಾಲಾ ಮಹಾರಾಜರ ದುಂದು.

ರಾಷ್ಟ್ರಸಂಘದ ಅಧಿವೇಶನಕ್ಕಾಗಿ ಬಡ ಭಾರತೀಯರ ಪ್ರತಿನಿಧಿಯಾಗಿ ಪಟಿಯಾಲಾದ ಮಹಾರಾಜರವರು ಜಿನೇವಾಕ್ಕೆ ಹೋಗಿದ್ದರು. ಮಹಾರಾಜರು ಈ ಕಾರ್ಯಕ್ಕಾಗಿ ಹೋದಾಗ ಲಂಡನದಲ್ಲಿಯೂ, ಜಿನೇವಾದಲ್ಲಿಯೂ ವಿಪರೀತ ಖರ್ಚು ಮಾಡಿ ಬಡ ಹಿಂದುಸ್ಥಾನದ ದೊಡ್ಡಸ್ತನವನ್ನು ಪ್ರದರ್ಶಿಸಿದರೆಂಬ ಅಲ್ಲಲ್ಲಿ ಸುದ್ದಿ ಹರಡಿತ್ತು. ಮಹಾರಾಜರು ಅಧಿವೇಶನಕಾರ್ಯವನ್ನು ಮುಗಿಸಿ, ಹಿಂದಕ್ಕೆ ಮರಳಿ ಬಂದಿರುವರು. ಬಂದ ಕೂಡಲೆ ಮಹಾರಾಜರವರು ಸಮಸ್ತರಿಗೂ ಜಾಹೀರಪಡಿಸಿದ್ದೇನಂದರೆ:- "ಮಹಾರಾಜರೊಡನೆ ಬರೇ ೧೨ ಸೇವೆಗಳಿದ್ದರು. ಇವರಿಗೋಸ್ಕರವಾಗಿ ೧೦ ಕೋಣೆಗಳು ಬಾಡಿಗೆಗೆ ತೊರಕ್ಕುತ್ತಿದ್ದವು. ಅವರೊಡನೆ ಬರೇ ೨ ಮೋಟಾರುಗಳಿದ್ದವು. ಇದರ ಮೇಲಿಂದ ವರ್ತಮಾನಪತ್ರಗಳೊಳಗಿನ ಸುದ್ದಿಗಳು ಬರೇ ಕಿಡಿಗೇಡಿತನದವೆಂಬುದು ಸ್ಪಷ್ಟವಾಗುವದು." ರಾಷ್ಟ್ರಸಂಘದ ಜಾಹೀರಾತು ಕೊಟ್ಟ ಧನ್ಯತೆ ಪಡೆಯುವ 'ರೋಯಿಟರ' ಸುದ್ದಿಗಾರನು ಮಹಾರಾಜರ ವಿಷಯ ಕಿಡಿಗೇಡಿತನದ ಸುದ್ದಿ ಹರಡಿಸುವನೆಂಬುದಾರೂ ತಿಳಿಯಲಾರರು. ಅವರೊಳಗೂ ವಿಲಾಯತಿಯೊಳಗಿನ ವೃತ್ತಪತ್ರಗಳಿಗೇನೂ ಮಹಾರಾಜರ ದ್ವೇಷವಿಲ್ಲ. ಮೇಲ್ಕಂಡ ಮಹಾರಾಜರ ಸ್ಪಷ್ಟೀಕರಣವು ಪ್ರಕಟವಾದ ಸಮಯದಲ್ಲಿಯೇ ವಿಲಾಯತಿಯ 'ಜಿನಿವ್ಹಾ ಟ್ರಿಬ್ಯೂನ್' ಪತ್ರಿಕೆಯು ಬಂದು ಮುಟ್ಟಿದೆ. ಅದರೊಳಗೆ ಮಹಾರಾಜರ ದುಂದಿನ ವರ್ಣನೆ ಬಂದಿದೆ. ಪತ್ರಿಕೆಯು ಹೇಳುವದೇನಂದರೆ - "ಈ ಧನಶೇಟ ಅರಸರ ಸಂಗಡ ಕಾರ್ಯದರ್ಶಿ, ಗುಪ್ತ ಆಲೋಚಕರು, ಆಳುಗಳು ಸುಮಾರು ೧೫ ಮಂದಿಗಳಿರುವರು. 'ಬೀನ ರಿವೇಜ' ಎಂಬ ಹೋಟೇಲಿನಲ್ಲಿ ಬಹಳ ಕೋಣೆಗಳನ್ನು ಇವರು ಬಾಡಿಗೆಗೆ ಪಡೆದುಕೊಂಡಿರುವರು. ಮಹಾರಾಜರೊಡನೆ ಯಾವಾಗಲೂ ೩೦ ಟ್ರಂಕು ಸಾಮುಗ್ರಿಯು ತುಂಬಿಕೊಂಡಿರುತ್ತದೆ. ಅವರ ಭೆಟ್ಟಿ ಪಡೆಯುವದು ಬಹಳ ಕಷ್ಟ. ಅವರ ಕಾರ್ಯದರ್ಶಿಗಳು ಆಂಗ್ಲರು. ಅವರು ಪರರಿಗೆ ಮಹಾರಾಜರ ಭೆಟ್ಟಿಯಾಗಗೊಡುವದಿಲ್ಲ. "ಮಹಾರಾಜರು ಬಚ್ಚಲ ಕೋಣೆಯಲ್ಲಿರುವರು," ಎಂಬ ನೆವವನ್ನು ಅವರು ಅಕಾಲದಲ್ಲಿ ಕೂಡ ನುಡಿಯುತ್ತಾರೆ. ಮಹಾರಾಜರವರು ಫ್ರಾನ್ಸ ದೇಶದ ಪಾರೀಸ ಪಟ್ಟಣದ 'ಕ್ಲೇರಿಜ' ಹೋಟೇಲಿನಲ್ಲಿದ್ದರು. ೫ ಮಾಳಿಗೆಗಳನ್ನು ಬಾಡಿಗೆಗೆ ಪಡೆಕೊಂಡಿದ್ದರು. ೫೫ ಕೋಣೆಗಳಿದ್ದವು. ಅವುಗಳಿಗಾಗಿ ದಿವಾನ ೧ ಲಕ್ಷ, ೮೦ ಸಾವಿರ ಫ್ರೆಂಕು, ಅಂದರೆ, ಸುಮಾರು ೬೦ ಸಾವಿರ ರೂಪಾಯಿಗಳ ಬಾಡಿಗೆ ತೆರುತ್ತಿದ್ದರು. ಊಟಕ್ಕೆ ಮಹಾರಾಜರಿಗೆ ಪರಿಪರಿಯ ಪಕ್ವಾನ್ನಗಳು ಬೇಕು. ೧೫ ಪ್ರಕಾರದ ಪದಾರ್ಥಗಳೂ, ೧೫೦೦ ಫ್ರೆಂಕು ಬೆಲೆಯ ಮುಕ್ಕತಿ ದ್ರಾಕ್ಷಗಳೂ ದಿನಾ ಬೇಕು. ೧೫ ದಿನ ಮಹಾರಾಜರು 'ಕ್ಲೇರಿಜ' ಹೋಟೇಲಿನಲ್ಲಿದ್ದರು. ಆಗ ೧೫ ಲಕ್ಷ ಫ್ರೆಂಕು ಭೋಜನದ ಖರ್ಚಿಗೆ ಹೋದವು. ಲಂಡನದೊಳಗಿನ 'ಸೆವ್ಹೋಯ್' ಹೋಟೇಲಿನಲ್ಲಿ ಮಹಾರಾಜರಿಗೆ ಹೋಟೇಲಿನ ನೌಕರರು ಡ್ರೆಸ್ ನೀಡುತ್ತಿದ್ದರು. ಆ ನೌಕರರಿಗೆ ಮಹಾರಾಜರು ೧೦ ಲಕ್ಷ ಫ್ರೆಂಕು ಕೊಟ್ಟರು. ಮಹಾರಾಜರಿಗೆ ಒಪ್ಪಿ ಹೇಗಸು ಬಡಿಸುತ್ತಿದ್ದಳು. ಅವಳಿಗೆ ಪ್ರತಿ ಊಟಕ್ಕೆ ೧೨೦೦ ಫ್ರೆಂಕು ಇನಾಮು ದೊರೆಯುತ್ತಿತ್ತು." ಮಹಾರಾಜರ ಪಾಲಿಗೆ ಬಡ ಭಾರತೀಯರೂ, ಮಹಾರಾಜರ ಪ್ರಜೆಗಳೂ ಹೊಟ್ಟೆಗಿಲ್ಲದೆ ಗೋಳಿಡುತ್ತಿರುವಾಗ, ಮಹಾರಾಜರು ದಿಕ್ಕಿಲ್ಲದೆ ಖರ್ಚು ಮಾಡುವದನ್ನು ಕೇಳಿರಿ! ಖರ್ಚು ವಿಪರೀತವೆಂಬ ಟೀಕೆಯಾದ ಬಳಿಕ, ಖರ್ಚು ಮಾಡಲಿಲ್ಲವೆಂಬ ಸ್ಪಷ್ಟೀಕರಣವನ್ನೂ ಕೇಳಿರಿ!

* *

ತಂದೆಯ ಪ್ರೇಮದ ಮಗಳ ಕೊಲೆ

ಅಮೇರಿಕೆಯಲ್ಲಿ [illegible] ಬಟ್ಟೆ ನಾಶ [illegible] ಇವರಿಗೆ ಒಬ್ಬಳೇ ಮಗಳು ಮಗಳಿಗೆ [illegible] ಮೇಲೆ ಮೋಹ. [illegible] ಶಕ್ತಿಯೂ ಇವರಿಗಿಲ್ಲ. ಆದರೂ, [illegible] ತಂದೆಯ ಪ್ರೇಮದಿಂದ ಅಕ್ಕರತೆಯಿಂದ ಅವಳ ಪೋಷಣ ಮಾಡಿದರು. ಮಗಳಿಗೆ ೨೨ ವರ್ಷ ಪ್ರಾಯ [illegible] ಬಂದಿತು. ಈಗ ತಮ್ಮ ಮಗಳನ್ನು ತಮ್ಮ [illegible] ಡಾಕ್ಟರರಿಗೆ [illegible] ಅವರು [illegible] ಮಗಳನ್ನೇ ಕೊಂದು ಈ [illegible] ಕೊಟ್ಟ [illegible] ಡಾಕ್ಟರರ ಮೇಲೆ ಖಟ್ಲೆ ನಡೆಯಿತು. [illegible] ಹಕೀಕತ ನಿವೇದಿಸಿದರು. [illegible] ಡಾಕ್ಟರರು ಕೊಡಬೇಕಾದದ್ದೆಂದು [illegible] ಡಾಕ್ಟರರಿಗೆ ಬಿಡುಗಡೆಯಾಯಿತು.

* *

ಸನಾತನ ಧರ್ಮದ ಕಳಂಕ

ಮಹಾತ್ಮರು ಕಲ್ಕತ್ತದ ಪ್ರವಾಸ ಮುಗಿಸಿ ಮರಳಿ ಸಾಬರಮತಿಗೆ ಬಂದಿರುವರು. ಕಲ್ಕತ್ತದಲ್ಲಿ ಮಹಾತ್ಮರಿಗೆ ಬಹಳ ವ್ಯಸನವಾಯಿತು. ಅಸ್ಪೃಶ್ಯತಾನಿವಾರಣೆಯ ಸಮಿತಿಯನ್ನು ಮಹಾತ್ಮರು ಬೇರೆಲು ಪರಿಪರಿಯ ಯತ್ನ ಮಾಡಿದರೂ, ಸನಾತನಿಗಳ ದುರಾಗ್ರಹದಿಂದ ಅವರಿಗೆ ನಿರಾಶೆಯಾಯಿತು. ಮಹಾಂತವಿಯಲ್ಲಿ ಶ್ರೀಮಂತ ಸಾಧುಗಳು ಸ್ವಾಗತ ಸಮಿತಿಯ ಸಭಾಸದರಿದ್ದರು. ಸಭೆಯಲ್ಲಿ ೨ ಭಾಗ ಮಾಡಲ್ಪಟ್ಟಿದ್ದವು. ಒಂದು ಅಸ್ಪೃಶ್ಯರಿಗಾಗಿ; ಇನ್ನೊಂದು ಸ್ಪೃಶ್ಯರಿಗಾಗಿ. ಕೋಣೆಗಳಿಗೆ ಪ್ರತ್ಯೇಕ ಬಾಗಿಲುಗಳಿದ್ದವು. ಮಹಾತ್ಮರು ಸ್ಪೃಶ್ಯ ಬಾಗಿಲಿನಿಂದಲೇ ಸಭೆ ಸೇರುವರೆಂದು ಮಹಾತ್ಮರ ಅಂತಃಕರಣವನ್ನರಿಯದ ಕ್ಷುದ್ರ ಬುದ್ಧಿಯ ಸ್ಪೃಶ್ಯರು ಗ್ರಹಿಸಿದ್ದರು. ಆದರೆ, ಮಹಾತ್ಮರು ಅಸ್ಪೃಶ್ಯ ಬಾಗಿಲಿನಿಂದಲೇ ಸಭೆಸೇರಿದರು. ಇದನ್ನು ಸಾಧುಗಳು ನೋಡಿದ ಕೂಡಲೆ, ಅಸ್ಪೃಶ್ಯ ಭಾಗದಿಂದ ಅಸ್ಪೃಶ್ಯರನ್ನು ಹೊರತಳ್ಳಲು ಆಜ್ಞಾಪಿಸಿದರು. ಮಹಾತ್ಮರ ತಪ್ಪಿಗಾಗಿ ಅಸ್ಪೃಶ್ಯರಿಗೆ ಶಿಕ್ಷೆ. ಮಾರನೇ ದಿನ ಮತ್ತೊಂದು ಸಭೆಯಾಯಿತು. ಮಹಾತ್ಮರು ಇದೇ ಪ್ರಕಾರ ಅಸ್ಪೃಶ್ಯ ಬಾಗಿಲಿನಿಂದಲೇ ಸಭೆ ಸೇರಿದರು. ಸಭಾಪತಿಗಳು ಮಹಾತ್ಮರೊಡನೆ ಉಚ್ಚಾಸನದ ಮೇಲೆ ಕೂಡ್ರಲು ಒಪ್ಪಲಿಲ್ಲ. ಮಾನಪತ್ರವನ್ನೋದಿದ ಬಳಿಕ, ಮಹಾತ್ಮರಿಗೆ ಅದನ್ನು ಅರ್ಪಿಸುವ ಬದಲು, ಅವರಿಗೆ ಮುಟ್ಟದೆ, ಮೇಲಿನಿಂದಲೇ ಸಭಾಪತಿಗಳು ಅವರ ಕೈಯೊಳಗೆ ಒಗೆದರು. ಆಗ ಸ್ಪೃಶ್ಯ ಮಹಾತ್ಮರೇ ಅಸ್ಪೃಶ್ಯರ ಸಹವಾಸದಿಂದ ಅಸ್ಪೃಶ್ಯರಾಗಿದ್ದರು! ಮುಂದ್ರೆಯಲ್ಲಿಯೂ ಇದೇ ಕಥೆ. ಮುಸಲ್ಮಾನರೂ, ಅಸ್ಪೃಶ್ಯ ಶಾಲೆಯ ಶಿಕ್ಷಕರೂ, ಸಮಸ್ತ ಹಿಂದೂ ಸ್ವಯಂಸೇವಕರೂ ಸ್ಪೃಶ್ಯರ ಭಾಗದಲ್ಲಿ ಕೂತುಕೊಂಡಿದ್ದರು. ಇದಕ್ಕಾಗಿ, ಮಹಾತ್ಮರಿಗೆ ಬಾಯಿತುಂಬ ಸ್ತುತಿಸುತ್ತಿದ್ದರು. ಇದನ್ನು ನೋಡಿ, ಮಹಾತ್ಮರಿಗೆ ಉದ್ವೇಗವುಂಟಾಯಿತು. ಅವರು ಉದ್ಗರಿಸಿದ್ದೇನಂದರೆ:— "ಭಗವಂತನೇ, ಇದೇ ಸನಾತನ ಧರ್ಮವಾದರೆ, ಇದನ್ನು ಆದಷ್ಟು ಬೇಗನೆ ಸಮೂಲ ನಾಶಮಾಡಬೇಕೆಂದು ನಾನು ಭಕ್ತಿಯಿಂದ ಪ್ರಾರ್ಥಿಸುತ್ತೇನೆ." ಮುಂದೆ ಸಭೆಗೆ ತಾವು ಬರುವದಿಲ್ಲವಾಗಿ ಮಹಾತ್ಮರು ಹೇಳಿ, ಕಾರ್ಯಕ್ರಮವನ್ನು ಅಷ್ಟಕ್ಕೇ ತಡಿಸಕೇಳಿದರು. "ಅವರೆ ಬಿಡುತ್ತಾರೆಲ್ಲಿ?" ಅಂಜಾರದಲ್ಲಿ ಸರ್ವ ತಯಾರಿಯೂ ನಡೆದಿದ್ದ; ತಾವು ಬರಲೇಬೇಕೆಂದು ಅಂಜಾರದವರು ಆಗ್ರಹ ಹಿಡಿದರು. ತಮ್ಮ ತತ್ವಗಳನ್ನು ಜನರು ಧಿಕ್ಕರಿಸುತ್ತಿರುವಾಗ, ತಾವು ಅಲ್ಲಿಗೆ ಹೋಗಿ ಏನು ಫಲ? ಎಂದು ಮಹಾತ್ಮರು ವಾದಿಸಿದರು. ಆದರೂ, ಅಧ್ಯಕ್ಷರು ಮಾನಪತ್ರವನ್ನು ಸ್ವೀಕರಿಸಲೇಬೇಕೆಂದರು. ಹಿಂದೆ ನಡೆದಂತೆ, ಮಹಾತ್ಮರಿಗೆ ಅದಷ್ಟು ಸಂತೋಷಬಡಿಸಬೇಕೆಂದು ಸ್ವಾಗತ ಮಂಡಳದ ೮ ಮಂದಿ ಸಭಾಸದರು ಅಸ್ಪೃಶ್ಯ ಭಾಗದಲ್ಲಿ ಕೂತುಕೊಳ್ಳಬೇಕೆಂತಲೂ, ನಗರಶೆಟ್ಟಿಗಳು ಮಹಾತ್ಮರಿಗೆ ಮಾನಪತ್ರವನ್ನು ಅರ್ಪಿಸಬೇಕೆಂತಲೂ, ಮನೆಗೆ ಹೋದ ಬಳಿಕ, ಪ್ರಾಯಶ್ಚಿತ್ತಪೂರ್ವಕ ಜಳಕ ಮಾಡಬೇಕೆಂತಲೂ, ಸಭಾಪತಿಗಳು ದೂರಿನಿಂದಲೇ ಮಾತಾಡಬೇಕೆಂತಲೂ, ಸಭಿಕರಲ್ಲಿ ಸ್ಪೃಶ್ಯ-ಅಸ್ಪೃಶ್ಯವೆಂಬ ಪ್ರತ್ಯೇಕ ವಿಭಾಗಗಳಿರಬೇಕೆಂದೂ ಸ್ವಾಗತ ಮಂಡಳದ ನಿರ್ಣಯಗಳಾದವು. ಮಹಾತ್ಮರು ಹರಿಪರಿಯಿಂದ ವಾದಿಸಿದರೂ, ಏನೇನೂ ಕಾಟ ಸಾಗಲಿಲ್ಲ. ಮಹಾತ್ಮರು ಸನಾತನಿಗಳ ದುರಾಗ್ರಹದ ಮುಂದೆ ನಿಃಶಸ್ತ್ರಧಾರಿಗಳಾದರು. ಸಭೆಗೆ ನಿರುಪಾಯವಾಗಿ ಹೋದರು, ಮಾನಪತ್ರವನ್ನೂ ಸ್ವೀಕರಿಸಿದರು. ಉತ್ತರವನ್ನೀಯುವಾಗ, ಮಹಾತ್ಮರಿಗೆ ಬಹಳ ವ್ಯಸನವಾಯಿತು. ಶಾರೀರಿಕ ಸುಖೋಪಭೋಗಗಳನ್ನೆಲ್ಲ ಭಕ್ತಿಭಾವದಿಂದ ಪೂರೈಸಿದ ಕಚ್ಛ ಪ್ರಜಾ ಜನರಿಗೆ ಮಹಾತ್ಮರು ಮಾಡನೆಗಳನ್ನರ್ಪಿಸಿದರು. "ಶಾರೀರಿಕ ಸುಖೋಪಭೋಗಕ್ಕಾಗಿ ನಾನು ಇಲ್ಲಿ ಬಂದಿಲ್ಲ, ನಾನು ಬಂದ ಕಾರ್ಯವೇ ಬೇರೆ. ಅದನ್ನು ಹೇಳುವದೂ ನನಗೆ ಕಷ್ಟ, ಕೇಳುವದೂ ನಿಮಗೆ ಕಷ್ಟ! ಧೂಳಿನ ಮೇಲೆ ಧನಾಚರಣೆಯಿಂದ ಮನಸ್ಸು ಸಮಾಧಾನವಾಗುತ್ತದೆ; ಸಮಸ್ತ ಸಂಕಟಗಳು ದೂರವಾಗುತ್ತವೆ. ದ್ರೌಪದಿ ದೇವಿಯು ಸಂಕಷ್ಟದಲ್ಲಿದ್ದಾಗ, ಅವಳ ಗಂಡಂದಿರು ಅವಳಿಗೆ ನೆರವಾಗಲು ಅಸಮರ್ಥರಿದ್ದಾಗ, ಅವಳು ಶ್ರೀ ಕೃಷ್ಣ ಪರಮಾತ್ಮನ ಮರೆ ಹೊಕ್ಕು ಪಾರಾದಳು. ಅಶೋಕವನದೊಳಗೆ ಸೀತಾದೇವಿಯು ಬರೇ ರಾಮನಾಮದ ಮೇಲೆಯೇ ಕಾಲಹರಣ ಮಾಡುತ್ತಿದ್ದಳು. ಅವಳ ಮನಸ್ಸು ರಾಮನಾಮಸ್ಮರಣೆಯಿಂದ ಸ್ಥಿರವಾಯಿತು. ಶ್ರೀ ಶಂಕರಲಾಲ ಬೇಂಕರರು ನನ್ನೊಡನೆ ಜೈಲಿನಲ್ಲಿದ್ದರು. ಅವರಿಗೆ ಚಿತ್ತಸ್ವಾಸ್ಥ್ಯವಿದ್ದಿಲ್ಲ. ಅವರು ರಾಮನಾಮಸ್ಮರಣೆ ಮಾಡುತ್ತಿದರು.

॥ ಶ್ರೀ ಶಾಂತಾದುರ್ಗಾ ಪ್ರಸನ್ನ ॥

ವೈಶ್ಯ ಪರಿಷತ್ತಿನ ಪ್ರಥಮ ಅಧಿವೇಶನ.

ಜಾಹೀರ ಪ್ರಕಟಣೆ ನಂ. ೨.

ಸನ್ಮಾನನೀಯರಾದ ಪ್ರಿಯ ಜ್ಞಾತಿ ಬಾಂಧವರೇ,

ಪ್ರೇಮಪೂರ್ವಕ ವಿನಂತಿ ಮಾಡುವದೇನಂದರೆ, ಮೊದಲಿನ ವಿನಂತಿಪತ್ರಕದಲ್ಲಿ ಪ್ರಕಟಿಸಿದಂತೆ, ಪರಿಷತ್ತಿನ ಸಂಬಂಧದ ತಯಾರಿಯು ರಭಸದಿಂದ ನಡೆದದೆ. **ಶ್ರೀ ಸಂಸ್ಥಾನ ಧಾರಗೆಳದಲ್ಲಿ** ಜನರ ಉಳಕೊಳ್ಳುವ ವ್ಯವಸ್ಥೆ ಮಾಡಲ್ಪಟ್ಟಿದೆ. ಅಲ್ಲಿಯ ೧೮ ಬಂಗಲೆಗಳು ಸಾಲಾಗಲಿಕ್ಕಿಲ್ಲೆಂದು ತಿಳಿದು ಬಂದದ್ದರಿಂದ, ೨೦೦-೩೦೦ ಮಂದಿಗಳು ಉಳಿಯಬಹುದಾದಂಥ ಇನ್ನೆರಡು ಮಂಟಪಗಳು ಕಟ್ಟಲ್ಪಡುತ್ತಿವೆ. ಇದರ ಹೊರತು, ಒಮ್ಮೆಲೇ ೬೦೦ ಮಂದಿಗಳಿಗೆ ಊಟ ಮಾಡಲನುಕೂಲವಾಗುವಷ್ಟು ದೊಡ್ಡದಾದ ಭೋಜನ ಮಂಟಪವು ತಯಾರಿಸಲ್ಪಟ್ಟಿದೆ.

ಆಫೀಸುಗಳು— ಟಿಕೇಟು, ಬೇಂಕು, ಪೋಸ್ಟು, ಆರೋಗ್ಯ, ಸ್ವಯಂಸೇವಕ ಹಾಗೂ ಸ್ವಾಗತ ಮಂಡಳ ಹೀಗೆ ಭಿನ್ನ ಭಿನ್ನ ಆಫೀಸುಗಳು ತೆರೆಯಲ್ಪಡುವವು. ವಸತಿಗೃಹ, ವಾಹನ, ದೀಪ, ಪ್ರದರ್ಶನ, ಗಾಯನ, ವಾಚನಾಲಯ, ಭೋಜನ ಇತ್ಯಾದಿಗಳಿಗಾಗಿ ಮಂಡಳಗಳು ನೇಮಿಸಲ್ಪಟ್ಟಿವೆ. ಹಾಗೆಯೇ ಹೇರ ಕಟಿಂಗ ಸೆಲೂನ, ವ್ಹೋಶಿಂಗ ಶೊಪ್, ಚಹಾ ಹೋಟೆಲ್, ಸೋಡಾ, ಸಿಗರೆಟ್, ವೀಳ್ಯ ಇತ್ಯಾದಿಗಳ ಅಂಗಡಿಗಳನ್ನಿಟ್ಟು ವಿಶೇಷ ವ್ಯವಸ್ಥೆ ಮಾಡಲ್ಪಡುವದು. ಇವುಗಳಲ್ಲೆಲ್ಲ ದುಡಿಯಲಿಕ್ಕೆ ೩೦೦ ಗೃಹಸ್ಥರು ಅತ್ಯುತ್ಸಾಹದಿಂದ ತಯಾರಾಗಿ ಬಂದಿರುವರು. ಇದಲ್ಲದೆ, ಇಲ್ಲಿಯ ಸ್ವಜ್ಞಾತಿಯೊಳಗಿನ ೧೦೦ ಮಂದಿ ತರುಣರು ತಮ್ಮ ಹೆಸರುಗಳನ್ನು ಸ್ವಯಂಸೇವಕ ಪಟದಲ್ಲಿ ದಾಖಲ ಮಾಡಿಕೊಂಡಿರುವರು.

ಸದ್ಯಕ್ಕೆ ಕಾರ್ಯಕಾರಿ ಮಂಡಳದೊಳಗಿನ ರಾ. ರಾ. ಸಾಸುದಾರ ಜಯರಾಮ ವಿಷ್ಣು ಶೇಟ ಖಲಪ, ಎಡ್ವೋಕೇಟ, ಗೋವಿಂದ ಬಾಲಕೃಷ್ಣ ಶೇಟ ಬಾಂದೇಕರ, ಪುರುಷೋತ್ತಮ ಭಾಸ್ಕರ ಶೇಟ ನಾಚೇಕರ, ಕಾಶೀನಾಥ ಮಹಾದೇವ ಶೇಟ ನೇವಗಿ, ಪುರುಷೋತ್ತಮ ವಿಷ್ಣು ಶೇಟ ಕರ್ಪೆ, ಇವರು ಸಾವಂತವಾಡಿ, ವೆಂಗುರ್ಲೆ, ಕುಡಾಳ, ಬಾಂದೇಂ, ಅರಂವದೇಂ, ಮಾಪಸೀ, ಸಾಂಖಳೀ, ಡಿಚೋಲಿ, ಪೇಡಣೇಂ, ಪಣಜಿ, ಸಾಂಗೇ, ಫೋಂಡೇಂ, ಮುರಗಾಂವ, ಹಣಜೂಣ, ಹಡಫಡೇಂ, ಕಳಂಗುಟ, ವರೀ ಮುಂತಾದ ಸ್ಥಳಗಳಲ್ಲಿ ಹೋಗಿ ಸ್ವಸಮಾಜದವರ ಸಭೆ ಸೇರಿಸಿದರು. ಹಾಗು ಮಡಗಾಂವ ಇತ್ಯಾದಿ ಸ್ಥಳಗಳಲ್ಲಿ ಪ್ರಮುಖರ ಭೆಟ್ಟಿ ಪಡೆದರು. ಸಮಸ್ತರು ಸಹಾಯಮಾಡಲು ಅಭಿವಚನ ಕೊಟ್ಟಿರುವರು. ಹಾಗು ಇನ್ನು ಅಲ್ಪಾವಧಿಯಲ್ಲಿಯೇ ಮುಂಬಯಿ ಹಾಗು ರತ್ನಾಗಿರಿ ಜಿಲ್ಲೆಗಳ ಉಳಿದ ಊರುಗಳಲ್ಲಿಯೂ, ಕೊಲ್ಹಾಪೂರ, ನಂದಗಡ, ಚಂದಗಡ, ಹಳಿಯಾಳ ಇತ್ಯಾದಿ ಸ್ಥಳಗಳಲ್ಲಿಯೂ ಹೋಗುವ ನಿಶ್ಚಯವಾಗಿರುತ್ತದೆ. ಪರಿಷತ್ತಿನ ಅಧಿವೇಶನಕ್ಕೆ ಇನ್ನು ಹೆಚ್ಚು ಅವಕಾಶವಿಲ್ಲ. ಆದರಿಂದ ಗೋಕರ್ಣ, ಕಾರವಾರ, ಕುಮಟಾ, ಹೊನ್ನಾವರ, ಅಂಕೋಲಾ, ಮಂಗಳೂರ, ಕೊಚ್ಚೀನ್ ಇತ್ಯಾದಿ ಸ್ಥಳಗಳಲ್ಲಿ ಹೋಗಲಿಕ್ಕೆ ಶಕ್ಯವಿಲ್ಲದ್ದರಿಂದ, ಅಲ್ಲಿಲ್ಲಿಯ ಪ್ರಮುಖರು ಪರಿಷತ್ತಿನ ವಿಷಯ ಜಾಗೃತಿ ಮಾಡಲು ಅನುಗ್ರಹಿಸಬೇಕಾಗಿದೆ.

ಪರಿಷತ್ತಿಗಾಗಿ ಸುಮಾರು ೬-೭ ಸಾವಿರ ರೂಪಾಯಿ ಖರ್ಚು ತಗಲುವದು. ಮಡ್ಗಾಂವದಲ್ಲಿಯೇ ೧೦೦೦-೧೫೦೦ ರೂಪಾಯಿಗಳು ಖರ್ಚಿಗಾಗಿ ಮುಂದಾಗಿ ಕೂಡಿಸಲ್ಪಟ್ಟಿವೆ. ಹೀಗೆ ಶಕ್ತಿ ಮೀರಿ ಪರಿಷತ್ತಿನ ಸಂಬಂಧದ ಕಾರ್ಯಗಳಿಗೆ ಪ್ರಾರಂಭವಾಗಿದೆ. ಈಗ ಪರಸ್ಥಳದ ಜ್ಞಾತಿ ಬಾಂಧವರು ದ್ರವ್ಯಸಹಾಯ ಮಾಡಬೇಕಾಗಿ ಅಪೇಕ್ಷೆಯಿದೆ. ಕಾರಣ, ಜಾಹೀರಪತ್ರಕದಲ್ಲಿ ವಿನಂತಿ ಮಾಡಿದಂತೆ, ತಮ್ಮ ತಮ್ಮ ಊರಲ್ಲಿ ಸಭೆಸೇರಿಸಿ, ಪರಿಷತ್ತಿನ ವಿಷಯ ಎಷ್ಟು ಜಾಗೃತಿಯಾಯಿತು, ಎಷ್ಟು ನಿಧಿಸಂಚಯವಾಯಿತು, ತಮ್ಮ ಊರೊಳಗಿಂದ, ಸಂಸ್ಥೆಯೊಳಗಿಂದ ಸ್ವಯಂಸಿದ್ಧ ಎಷ್ಟು ಪ್ರತಿನಿಧಿಗಳು ಬರುವ ಸಂಭವವಿದೆ, ಅವರ ಹೆಸರುಗಳೇನು, ಎಂಬ ಮಾಹಿತಿಯನ್ನು ಕಾರ್ಯಕಾರಿ ಮಂಡಳದ ಕಾರ್ಯದರ್ಶಿಗಳಾದ ರಾ. ರಾ. **ವಾಮನ ಅನಂತ ಶೇಟ, ಖಲಪ, ಮ್ಹಾಪಸೆ-ಗೋವಾ** ಇವರಿಗೆ ಶೀಘ್ರವೇ ತಿಳಿಸಬೇಕು. ಈ ಜ್ಞಾತಿ ಕಾರ್ಯವನ್ನು ಸ್ವಜ್ಞಾತಿ ಬಾಂಧವರ ಸಹಾಯದ ಆಶೆ ಹಿಡಿದು ನಾವು ಕೈಕೊಂಡಿದ್ದೇವೆ. ಆದರಿಂದ ಸಮಸ್ತ ಜ್ಞಾತಿ ಗೃಹಸ್ಥರು ನಮಗೆ ಸಮಸ್ತ ಪ್ರಕಾರದ ಸಹಾಯವನ್ನೀಯಬೇಕಾಗಿಯೂ, ಪರಿಷತ್ತಿಗೆ ಅನುಗ್ರಹಿಸಿ ತಕ್ಕ ಆಲೋಚನೆ ಕೊಡಬೇಕಾಗಿಯೂ ನಮ್ಮ ವಿನಂತಿ ಇದೆ.

ಪ್ರತಿನಿಧಿ, ಪ್ರೇಕ್ಷಕ ಮುಂತಾದವರ ಸಂಬಂಧ ನಿಯಮಗಳು.

೧. ಪರಿಷತ್ತಿನ ನಿಧಿಗೆ ರೂ. ೧೫ ಅಥವಾ ಅದಕ್ಕೂ ಮಿಕ್ಕಿ ದ್ರವ್ಯಸಹಾಯ ಮಾಡುವವರಲ್ಲಿ ಗೋಮಾಂತಕದ ನಿವಾಸಿಗಳಾದ ಸ್ವಜ್ಞಾತಿ ಗೃಹಸ್ಥರಿಗೆ ಸ್ವಾಗತ ಮಂಡಳದ ಸಭಾಸದರಾಗಿಯೂ, ಪರಸ್ಥಳದ ಸ್ವಜ್ಞಾತಿ ಗೃಹಸ್ಥರಿಗೆ ಪರಿಷತ್ತಿನ ಆಶ್ರಯದಾತರೆಂದೂ ಎಣಿಸಲ್ಪಡುವದು.

ಮೇಲಿನ ಸಮಸ್ತ ಗೃಹಸ್ಥರಿಗೆ ಪರಿಷತ್ತಿನ ಪ್ರತಿನಿಧಿಗಳೆಂದು ತಿಳಲ್ಪಡುವದು. ಅವರ ಊಟದ ವ್ಯವಸ್ಥೆಯನ್ನು ಪರಿಷತ್ತು ಕೈಕೊಳ್ಳುವದು.

೨. ಪ್ರತಿನಿಧಿ ಫೀ, ಭೋಜನ ಖರ್ಚು ಸಹಿತ ೭ ರೂಪಾಯಿ ಇಟ್ಟಿರುತ್ತದೆ.

೩. ಊರುಗಳೊಳಗಿಂದ ಪರಿಷತ್ತಿನ ಸಂಬಂಧ ಒಟ್ಟು ಮಾಡಿದ ನಿಧಿಯು ಪರಿಷತ್ತಿನ ವಿಶೇಷ ಕೆಲಸಕ್ಕಾಗಿ ಖರ್ಚು ಮಾಡಲ್ಪಡುವದು.

೪. ಪರಿಷತ್ತಿನ ನಿಧಿಗೆ ೨ ರೂಪಾಯಿ ಕೊಡುವವರಿಗೆ ೩ ದಿವಸಗಳ ಪರಿಷತ್ತು ಪ್ರೇಕ್ಷಕ ಟಿಕೇಟು ಕೊಡಲ್ಪಡುವದು. ೧ ರೂಪಾಯಿ ಕೊಡುವವರಿಗೆ ೧ ದಿವಸದ ಟಿಕೇಟು ಕೊಡಲ್ಪಡುವದು. ಪ್ರೇಕ್ಷಕರು ಭೋಜನ ಟಿಕೇಟಿನ ಬಗ್ಗೆ ದಿನಾ ೧ ರೂಪಾಯಿ ಕೊಡಬೇಕಾಗುವದು. ೩ ದಿನಗಳ ಪ್ರೇಕ್ಷಕ ಮತ್ತು ಭೋಜನ ಟಿಕೇಟುಗಳಿಗೆ ೫ ರೂಪಾಯಿ ಬೀಳುವವು.

ಪ್ರತಿನಿಧಿಗಳ ಊಟದ ವ್ಯವಸ್ಥೆಯು ಡಿಶಂಬರ ತಾ. ೨೭ ರಿಂದ ೩೧ರ ವರೆಗೆ ಮಾಡಲ್ಪಡುವದು.

೫. ಪರಿಷತ್ತಿನ ಅಧಿವೇಶನಕ್ಕೆ ಡಿಶಂಬರ ತಾ. ೨೮, ೨೯, ೩೦ ಸೋಮವಾರ, ಮಂಗಳವಾರ ಹಾಗು ಬುಧವಾರ ಈ ದಿನಗಳು ನಿಶ್ಚಯಮಾಡಲ್ಪಟ್ಟಿವೆ. ಮೊಟ್ಟಮೊದಲು ವಿಶೇಷ ಕಾರ್ಯಗಳ ಕುರಿತು, ಅಂದರೆ, ಸ್ವಸಮಾಜದಲ್ಲಿ ಶಿಕ್ಷಣ ಪ್ರಸಾರವು ಹ್ಯಾಗಾಗುವದು, ಎಂಬ ವಿಷಯ ಚರ್ಚೆ ನಡಿಸಿ, ಆ ಕುರಿತು ತಕ್ಕ ಉಪಾಯಗಳನ್ನು ಸೂಚಿಸುವ ಹಾಗು ಅವನ್ನು ಅಮಲಿನಲ್ಲಿ ತರುವ ಪ್ರಯತ್ನ, ಈ ಸಂಬಂಧದ ಕೆಲಸ ನಡೆಯುವದು. ಮತ್ತು ಈ ಕೆಲಸ ಮುಗಿದ ಬಳಿಕ, ಸ್ವಜ್ಞಾತಿಯ ಉನ್ನತಿಯ ಇತರ ಮಾರ್ಗಗಳ ನಿಶ್ಚಯವಾಗುವದು. ಹಾಗು ಶಕ್ಯವಿದ್ದ ಮಾರ್ಗಗಳ ಅವಲಂಬ ಮಾಡುವದು, ಈ ಕುರಿತು ಕಾರ್ಯ ನಡೆಯುವದು.

೬ ನಮ್ಮ ಅಭಿಪ್ರಾಯದಂತೆ ಈ ಕೆಳಗಿನ ಸಭ್ಯ ಗೃಹಸ್ಥರು ಪರಿಷತ್ತಿನ ಅಧ್ಯಕ್ಷರಾಗಲು ಪಾತ್ರರಿರುವರೆಂದು ತೋರುತ್ತದೆ. ಇದರಲ್ಲಿ ಅಥವಾ ಇನ್ಯಾರಾದರೂ ಪಾತ್ರ ವ್ಯಕ್ತಿಗಳು ತೋರಿದ್ದಲ್ಲಿ ಅವರ ಹೆಸರುಗಳನ್ನು ತಾ. ೨೦ ನವ್ಹಂಬರದೊಳಗೆ ಸೂಚಿಸತಕ್ಕದ್ದು. ಆ ದಿನ ಸಂಧ್ಯಾಕಾಲಕ್ಕೆ ಸ್ವಾಗತ ಮಂಡಳಿಯ ವಿಶೇಷ ಸಭೆಯಾಗಿ ಅಧ್ಯಕ್ಷರ ಚುನಾವಣೆಯಾಗುವದು.

ರಾ. ರಾ. ಜಗನ್ನಾಥ ನಾರಾಯಣ ಪರಮಾನಂದ, ಬಿ.	ರಾ. ರಾ. ಶಂಕರ ಯಶವಂತ ಶೇಣ್ವಿ,
ರಾ. ರಾ. ವಿಷ್ಣು ನಾರಾಯಣ ಬಿಡ್ಯೇ, ಎಲ್. ಸಿ. ಈ.	ರಾ. ರಾ. ಬಾಬಣ ಬಾಪೂ ಕೋರಗಾಂವಕರ,
ರಾ. ರಾ. ನಾರಾಯಣ ಪುಂಡಲೀಕ ವಳಂಜೂ ವಕೀಲ,	ರಾ. ರಾ. ನಾರಾಯಣ ಬಳವಂತರಾವ ಪಡತೇ, ಎಂ. ಏ. ಎಲ್. ಎಲ್. ಎಂ.
ರಾ. ರಾ. ಪ್ರೊ| ಕೃಷ್ಣಾಜಿ ಮಹಾದೇವ ಬಾಡ್ಯೇ ಎಮ್. ಏ.	ರಾ. ರಾ. ಡಾ| ರಾಮಕೃಷ್ಣ ನಾರಾಯಣ ಪರಮಾನಂದ ಎಲ್. ಎಂ. ಎಂಡ್ ಎಸ್.
ರಾ. ರಾ. ಗಂಗಾರಾಮ ಆತ್ಮಾರಾಮ ವಿಶಾಳ ಬಿ. ಏ. ಎಲ್. ಎಲ್. ಬಿ.	

• ಪರಿಷತ್ತಿನ ಸಮಯ ಗೋಮಾಂತಕದೊಳಗಿನ ವೈಶ್ಯ ಸಮಾಜದವರು ತಯಾರಿಸುವ **ಕಲಾಕೌಶಲ್ಯದ ಸಾಮಗ್ರಿಗಳ ಪ್ರದರ್ಶನ** ವು ಇರಿಸಲ್ಪಡುವದು. ಆದರಿಂದ ವೈಶ್ಯ ಬಂಧು-ಭಗಿನಿಯರು ತರತರದ ಸಾಮಗ್ರಿಗಳನ್ನು ಮುದ್ದಾಂ ತಯಾರ ಮಾಡಿ ತಾ. ೨೫ ನೇ ಡಿಶಂಬರ ವರೆಗೆ ಸ್ವಾಗತ ಮಂಡಳಿಯ ಕಾರ್ಯದರ್ಶಿಗಳ ಕಡೆಗೆ ಕಳಿಸುವ ವ್ಯವಸ್ಥೆ ಮಾಡಬೇಕು. ಸಾಮಗ್ರಿ ಸ್ವೀಕರಿಸಿದ ಬಗ್ಗೆ ಪಾವತಿ ಕೊಡಲ್ಪಡುವದು.

ವೈಶ್ಯ ಪರಿಷತ್ತಿನ ಕಚೇರಿ
ಮಡ್ಗಾಂವ ಗೋವಾ
ತಾ. ೧ ನೇ ನವಂಬರ ೧೯೩೪

ತಮ್ಮ ನಮ್ರ,
ವಾಮನ ಅನಂತ ಶೇಟ ಖಲಪ,
ಮಹಾದೇವ ಗೋವಿಂದ ಶೇಟ ನೇವಗಿ,
ಶ್ರೀಪಾದ ಅಚ್ಯುತ ಶೇಟ ಕಳಂಗುಟಕರ,
ಪುರುಷೋತ್ತಮ ವಿಷ್ಣು ಶೇಟ ಕಪೇರ,
ವೈಶ್ಯ ಪರಿಷತ್ತಿನ ಕಾರ್ಯದರ್ಶಿಗಳು.
ಶ್ರೀ ಸಂಸ್ಥಾನ ಧಾರಗಳ.

"ಲೋಕರಹಸ್ಯ"

ಈ ಸಚಿತ್ರ ಮಾಸಪತ್ರಿಕೆಯಲ್ಲಿ ಸ್ವಾರಸ್ಯಕರವಾದ ಕತೆಗಳು, ವ್ಯಾಕರಣ ಚರಿತ್ರೆ, ಸ್ತ್ರೀಯರಿಗೆ ಉಪಯುಕ್ತವಾದ ವಿಷಯಗಳು, ಸ್ತ್ರೀಯರ ಆರೋಗ್ಯ ಸಂಬಂಧ ವಿಚಾರಗಳು, ಹಣ ಸಂಪಾದಿಸುವ ಸುಲಭ ಮಾರ್ಗಗಳು, ರಸಿಕರಿಗೆ ವಿನೋದ ವಿಚಾರಗಳು, ಪ್ರತಿಯೊಬ್ಬರಿಗೂ ಬೇಕಾದ ರಾಜಕೀಯ ಚರ್ಚೆಗಳು, ವೈದ್ಯ ಭಾಗಗಳು, ಜ್ಯೋತಿಷ್ಯ, ಕಾವ್ಯ, ವೇದಾಂತ, ಕಾದಂಬರಿಗಳು, ಗೋಪಾಲನೆ, ಕೃಷಿ, ಸ್ವಾತಂತ್ರ್ಯ ಇತರೆ ಮುಂತಾದ ವಿಷಯಗಳೆಲ್ಲವೂ ಪ್ರಕಟವಾಗುತ್ತವೆ ಪತ್ರಿಕೆಯು ಪ್ರತಿಯೊಂದು ಪ್ರಜೆಯ ಮನೆಯಲ್ಲಿಯೂ ಅಮೂಲ್ಯವಾದ ವಿಚಾರಗಳಿಂದ ತುಂಬಿರುತ್ತದೆ. ಪ್ರತಿ ಮಾಸದಲ್ಲೂ ೬೦ ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ

ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೩—೦—೦. ಮಾತ್ರ.

ಮಾದರಿ ಸಂಚಿಕೆಗೆ ಕ್ರಯ ೦—೫—೦ ಮಾದರಿ ಸಂಚಿಕೆಗಳನ್ನು ಪುಕ್ಕಟೆಯಾಗಿ ಕೊಡುವದಿಲ್ಲ

ಹಾಕಿದ ಹಣವನ್ನು ನಷ್ಟ ಮಾಡದೆ, ಹಾಕಿದ ರೂಪಾಯಿ ಇದ್ದಕ್ಕಿದ್ದ ಹಾಗೆಯೇ ತಿಂಗಳಿಗೆ ೧೦೦ ರೂ ಗಿಂತ ಹೆಚ್ಚಾಗಿಯೇ ಹಣ ಸಂಪಾದನೆ ಮಾಡುವ ರೀತಿಯನ್ನು ತಿಳಿಯುವ ಬಗ್ಗೆ ಒಂದಾಣೆ ಸ್ಟಾಂಪು ಸಮೇತ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
"ಲೋಕರಹಸ್ಯ"
ವೀರರಾಜೇಂದ್ರ ಪೇಟೆ, ಕೊಡಗು

ಜಾಹೀರ ವಿನಂತಿ.

ಕೆನರಾ ವರ ಕಸಬಾ ಪ್ರಶಸ್ತ ಸ್ಥಳದಲ್ಲಿ ಭವ್ಯವಾಗಿ ಕಟ್ಟಿಸಿದ ನಾಟಕ ಥೇಟರ ಭಾಡಿಗೆಗೆ ಕೊಡುವದಿದೆ. ಯಾರ ಜನ ಅಗತ್ಯ ವಾಹಿತಿ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡಬಹುದು

ವೆಂಕಟೆಶ್ರಾಯ ಪಾಂಡು ನಾಯ್ಕ,
ಮೆನೆಜರ

ಶ್ರೀ ತುಲಸೀದಾಸರಾಮಾಯಣ.

ಭಾಗ ೨ ಪ್ರಕಟವಾಗಿದೆ.

ಲೇಖಕ ಶ್ರೀ ದತ್ತಾತ್ರೇಯ ಕೃಷ್ಣಭಾರದ್ವಾಜ.
ಮುಂಗಡ ವರ್ಗಣಿ ರೂಪಾಯಿ ೧—೦ (ಸಾದ ಪ್ರತಿಗೆ)
" ೪—೦ (ರಾಜಮಾನ್ಯ ಪ್ರತಿಗೆ)
ಪತ್ತೆ — ಆಶ್ರಮ, ಬಸವನಗುಡಿ, ಬೆಂಗಳೂರು

ರೋಗದಿಂದ ನರಳ ಬೇಡಿರಿ!

ನಮ್ಮಲ್ಲಿ ಜಂತು ಜುಲಾಬು, ಪಿತ್ತ ಜುಲಾಬ ಎಲ್ಲ ತರದ ಜ್ವರ, ಜ್ವರಗಡ್ಡೆ, ಚಳಿಜ್ವರ, ಕಾಮಿ ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಶೂಲಬಿಪ್ತ ಮಹಾವ್ಯಾಧಿ, ನರ, ವಾತ, ತಲೆನೋವು, ಪ್ರದ ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂ (ಗರ್ಮಿ) ಬಾಲಗ್ರಹ ಖಜ್ಜಿ, ಗಜಕರ್ಣಗಳಿಗೆ ತ ಗುಣ ಬರುವ ಜರ್ಮನ, ಅಮೇರಿಕನ, ಫ್ರೇಂ ಇಂಗ್ಲಿಷ ಮತ್ತು ದೇಶಿ ಪೇಟಂಟ ಔಷಧಗಳು ಅಗ್ಗವಾಗಿ ಸಿಗುವವು.

ಇದಲ್ಲದೆ ಎಲ್ಲ ತರದ ಸ್ಪೇಅರ, ಪರಫ್ಯೂಮ ಸ್ಯಾಕಲ ಸಾಮಾನು, ಓಲ್ಡ ಸ್ಕೊಟ್ಲ್ಯಾಂಡ, ಸುವರ ಟ್ರ, ಮೋರಿಸ ಮೋಟಾರ ಬಂಡಿಗಳು, ಸವಲತಿನ ದಿಂದ ಸಿಗುವವು. ನಮ್ಮಲ್ಲಿದ್ದ ನಿಮಗೆ ಅವಶ್ಯ ವ ಸಾಮಾನು ಬೇರೆ ದೇಶದಿಂದ ತರಿಸಿಕೊಡ ದೀತು.

ಎಸ್ ಎಲ್ ಧಾಕಪ್ಪ ಮತ್ತು ಬ್ರದ
ಸಿರಸಿ



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ದೇವರ ಮಂಟಪಗಳೂ,
ಹಿಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತದೆ.

ನಮ್ಮ ವಿಳಾಸ—

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

...ತ್ಯನುಭವಿಸಿದಂತೆ ೪ ಘಂಟೆಗೆ ಅವರೆಷ್ಟು ರಾಟೆಯನ್ನು ಕೊಂಡು ರಾಮನಾಮಸ್ಮರಣೆಯನ್ನು ಮಾಡುತ್ತ ನೂಲುತ್ತಿದ್ದರು. ಅದರಿಂದ ಚಿತ್ತ ಚಾಂಚಲ್ಯವೆಲ್ಲ ದೂರಾಯಿತು; ಚಿತ್ತವು ಆನಂದಿತವಾಯಿತು. ನನಗೂ ಇಂದಿಗೆ ದುಃಖವಾಗಿದೆ; ಚಿತ್ತಭ್ರಮಣವಾಗುತ್ತಿದೆ, ಅದರಿಂದ ನಾನೂ ರಾಮನ ಧ್ಯಾನ ಮಾಡುತ್ತೇನೆ, ಮತ್ತು ಆತನ ನಾಮಸಂಕೀರ್ತನ ಮಾಡುತ್ತೇನೆ. ಈ ವರೆಗೆ ನಾನು ರಾಮನಾಮಸ್ಮರಣೆಯನ್ನು ಸಾರ್ವಜನಿಕ ಸಭೆಯಲ್ಲಿ ಮಾಡಲಿಲ್ಲ. ಹಿಂದೂ-ಮುಸಲ್ಮಾನ-ಕ್ರಿಶ್ಚನ್‌ರಿದ್ದ ಸಭೆಯಲ್ಲಿ ನಾನು ರಾಮಧ್ಯಾನ ಮಾಡಲಾರೆನು. ಆದರೆ, ಇಂದಿಗೆ ಉಪಾಯವಿಲ್ಲ. ಯಾರಿಗೆ ಈ ಕೃತಿಯು ಸೇರುವದಿಲ್ಲವೋ ಅವರೆಲ್ಲರೂ ನನಗೆ ಕ್ಷಮಿಸಬೇಕು. ನನ್ನ ಮನಸ್ಸು ಕಳವಳಗೊಂಡಿದೆ. ಅದರಿಂದ ನಾನು ರಾಮಧ್ಯಾನ ಮಾಡಿ ಸಮಾಧಾನ ಮಾಡಿಕೊಳ್ಳುತ್ತೇನೆ.

ರಘುಪತಿ ರಾಘವ ರಾಜಾರಾಮ।
ಪತಿತ ಪಾವನ ಸೀತಾರಾಮ॥
ರಘುಪತಿ ರಾಘವ ರಾಜಾರಾಮ।
ಪತಿತ ಪಾವನ ಸೀತಾರಾಮ॥

ಹೀಗೆ ಮಹಾತ್ಮರು ಸಮಸ್ತ ಸಂಕಟನಿವಾರಕವಾದ ಶ್ರೀ ರಾಮನಾಮ ಸಂಕೀರ್ತನೆಯನ್ನು ಕೆಲ ಕಾಲದ ವರೆಗೆ ಮಾಡಿದರು. ಅನೇಕರು ಮಹಾತ್ಮರನ್ನೇ ಹಿಂಬಾಲಿಸಿ, ಶ್ರೀ ರಾಮನಾಮವನ್ನು ಉಚ್ಚರಿಸಿ ಪಾವನರಾದರು. ಹೀಗೆ ಈ ಸಭೆಯು ವಿಸರ್ಜನವಾಯಿತು. ಸಕಲರೂ ಚಕಿತರಾದರು! ಕೈರಾಟೆಯ ಪ್ರಸಾರ, ಅಸ್ಪೃಶ್ಯತಾನಿವಾರಣ, ಅಖಿಲ ಭಾರತೀಯ ದೇಶಬಂಧು ಸ್ಮಾರಕ ನಿಧಿ ಇತ್ಯಾದಿ ವಿಷಯಗಳ ಉಲ್ಲೇಖವು ಈ ಸಭೆಯಲ್ಲಾಗಲಿಲ್ಲ. ಉಲ್ಲೇಖ ಮಾಡಲಿಕ್ಕೆ, ಸಂದೇಶವನ್ನರುಹಲಿಕ್ಕೆ ಪಾತ್ರ ಸಭಿಕರು ದೊರೆಯದಿದ್ದ ಬಳಿಕ, ಮಹಾತ್ಮರೇನು ಮಾಡುವರು? ಇದೇ ಕಚ್ಛ ಪ್ರಾಂತದಲ್ಲಿಯ ಕೊನೆಯ ಸಭೆಯಾಗಿತ್ತು.

***

ಒರಿಸ್ಸಾದೊಳಗೆ ಭಯಂಕರ ಬರ.

ಈಗ ಒರಿಸ್ಸಾ ಪ್ರಾಂತದಲ್ಲಿ ಭಯಂಕರ ಬರಬಿದ್ದಿದೆ. ದೀನಬಂಧು ಎಂಡ್ರ್ಯೂಸರವರು ಒರಿಸ್ಸಾ ಪ್ರಾಂತವನ್ನು ಕಣ್ಣಾರೆ ಕಂಡು ಅಲ್ಲಿಯ ಹಕೀಕತನ್ನು ಪ್ರಕಟಿಸಿರುವರು. ಅದನ್ನೋದಿ ಯಾರಿಗೆ ತಾನೇ ಕಣ್ಣೀರು ಸುರಿಯದು? ಪುರಿ ಜಿಲ್ಹೆಯಲ್ಲೆಲ್ಲ ಈಗ ಜಲರಾಶಿಯಾಗಿದೆ. ಜೂನ ತಿಂಗಳ ಕೊನೆಗೆ ಏರಿದ ನದಿಯ ನೀರು ಇನ್ನೂ ಇಳಿಯದು. ಇನ್ನೊಂದೆರಡು ತಿಂಗಳು ಬಿಸಿಲು ಕಾಯ್ದರೂ, ನೀರು ಸಂಪೂರ್ಣವಾಗಿ ಇಂಗಿ ಹೋಗುವದೆಂದು ತೋರುವದಿಲ್ಲವಾಗಿ ಹಿರಿಯರು ಹೇಳುತ್ತಾರೆ. ದೀನಬಂಧುಗಳು ಅಲ್ಲಿ ಹೋದಾಗ ಮಳೆಯು ತೆರವಿಲ್ಲದೆ ಸುರಿಯುತ್ತಿತ್ತು; ಹಗಲಿರುಳು ಸುರಿಯುತ್ತಿತ್ತು. ಜಲರಾಶಿಯು ಸ್ಥಿರವಾಗಿ ಅಭಿವೃದ್ಧಿ ಹೊಂದುತ್ತಿತ್ತು. ನದಿಯು ಉಕ್ಕೇರುತ್ತಿತ್ತು. ಜಲರಾಶಿಯ ಮೂಲಕ ಪುರಿ ಜಿಲ್ಹೆಯಲ್ಲಿ ಮಳೆಗಾಲದ ಬೆಳೆಯಿಲ್ಲ, ಆರ ಬೆಳೆ ಬೆಳೆಯುವದಿಲ್ಲ. ಅಂದ ಬಳಿಕ, ಈ ವರುಷ ಬೆಳೆಯು ಇಲ್ಲ ಏನೇನೂ ಇಲ್ಲ. ೧೫೦೦ ಚದರ್ಮೈಲ ಪ್ರದೇಶದ ಮೇಲಿರುವ ೫ ಲಕ್ಷ ಮಂದಿ ಗ್ರಾಮನಿವಾಸಿಗರು ಈಗ ಹೊಟ್ಟೆಯ ಗೋಳಿನಿಂದ ನರಳುತ್ತಿರುವರು. ದನಗಳಂತು ಉಪವಾಸ ಬಿದ್ದು ಸಾಯುತ್ತಿವೆ. ಕುದುರೆಗಳು ನಿರಾಧಾರಿಗಳಾಗಿರುವವು. ದೀನಬಂಧುಗಳು ಅಲ್ಲಿ ಹೋದಾಗ ಹಿಂಡು ಆಕಳನ್ನು ನೋಡಿದರು. ಅವು ಮರದ ನೆರಳಲ್ಲಿ ಬಿದ್ದುಕೊಂಡಿತ್ತು; ಮಿಕಿ ಮಿಕಿ ನೋಡುತ್ತಿತ್ತು; ಕುತ್ತಿಗೆಯನ್ನು ಮಾತ್ರ ಅಗಲಾಡಿಸುತ್ತಿತ್ತು; ಅವಕ್ಕೆ ಮತ್ತೇನೂ ಸಾಮರ್ಥ್ಯವಿರಲಿಲ್ಲ. ಎಲುಬುಗಳು ತೋರಬಂದಿದ್ದವು; ಪಕ್ಕೆಲುಬುಗಳನ್ನು ಲೆಕ್ಕ ಮಾಡಬಹುದಿತ್ತು; ಆ ಆಕಳು ಗುಡಿಸಲುಗಳ ಒಣ ಹುಲ್ಲನ್ನು ತಿನ್ನುತ್ತಿತ್ತು; ಹೀಗೆ ಆಕಳು ಕ್ರಮವಾಗಿ ಯಮಸದನದ ಹಾದಿ ಹಿಡಿಯುತ್ತಿತ್ತು. ಮತ್ತೊಂದು ನೋಟವು ದೀನಬಂಧುಗಳ ಕಣ್ಣಿಗೆ ಬಿತ್ತು. ಜನರಿಗೆ ತೊಟ್ಟುಕೊಳ್ಳಲು ಸಾಕಷ್ಟು ಅರಿವೆಗಳಿರುವದಿಲ್ಲ. ಎಲ್ಲ ಹರಕು ಬಟ್ಟೆಗಳು. ಅವುಗಳಿಂದಲೇ ನಿರ್ವಾಹ ಮಾಡಬೇಕಾಗಿದೆ. ಹೆಂಗಸರ ಗೋಳು, ಯಾರಿಗಾದರೂ ಕಂಡರೆ, ಹೆಂಗಸರು ನಾಚಿಕೆಯಿಂದ ಗುಡಿಸಲುಗಳ ಮರೆಯಾಗುತ್ತಿರುವರು. ಇದೆಂಥ ದೈನ್ಯ!! ನದಿಯು ಉಕ್ಕೇರಿ ಈ ಪ್ರದೇಶದಲ್ಲಿ ಪೈರು ಬೆಳಿಸುವದು ಪರಮ ಕಷ್ಟ. ಕಳೆದ ೬ ವರ್ಷಗಳಲ್ಲಿ ೪ ವರ್ಷ ಬೆಳೆಯಿಲ್ಲ. ಹಿಂದೊಂದು ವರುಷ ಮಳೆಯಿಲ್ಲದೆ ಬೆಳೆ ಸುಟ್ಟು ಬೂದಿ. ಇನ್ನೊಂದು ವರುಷ ನದಿಯು ಉಕ್ಕೇರಿ ಕೊಚ್ಚಿದೆ ಮಳೆ ಸುರಿದು ಬೀಗಿತು. ಅಂತು ಪರಮಾತ್ಮನ ಅನುಗ್ರಹವೇ ಪ್ರಜೆಗಳಿಗೆ ಆಶ್ರಯವಲ್ಲದೆ ಇನ್ನೇನಿಲ್ಲ.

***

ಭಯಂಕರ ಕೊಲೆ!

ಖಾನದೇಶ ಜಿಲ್ಹೆಯ ಜವಳಿ ಗ್ರಾಮದಲ್ಲಿ ವೆಸ್ಟಾ ಪಡಕ್ಯಾ ಎಂಬೊಬ್ಬ ಭಿಲ್ಲನಿರುವನು ಆತನಿಗೆ ಇಬ್ಬರು ಚಿಕ್ಕ ಮಗಂದಿರಿದ್ದರು ಒಬ್ಬನ ಪ್ರಾಯ ೧೦ ವರುಷ; ಇನ್ನೊಬ್ಬನದು ೫ ವರುಷ. ತಾಯಿಯು ಮೊದಲೇ ತೀರಿಕೊಂಡಿದ್ದಳು. ವೆಸ್ಟನಿಗೆ ಅವರನ್ನು ಸಾಕಿ ಸಲಹುವದು ಬಹಳ ಕಠಿಣವಾಯಿತು. ಅದರಿಂದ ಆತನು ಶೇವಲಿ ಎಂಬೊಬ್ಬ ಹೆಂಗಸಿಗೆ ದಾದಿಯಾಗಿಟ್ಟುಕೊಂಡು ದೇದಾಪಾನಿ ಎಂಬ ಗ್ರಾಮದಲ್ಲಿಳಕೊಂಡನು. ದಾದಿಯು ಹುಡುಗರಿಗೆ ಸರಿಯಾಗಿ ನಡಿಸಲಿಲ್ಲ. ಅದ್ದರಿಂದ ಆತನು ಬೇಸರಪಟ್ಟು ಅವಳನ್ನು ಹೊರಪಡಿಸಿದನು. ವೆಸ್ಟನು ಹುಡುಗರನ್ನು ಜೋಪಾನ ಮಾಡುತ್ತಿದ್ದನು ಇದೊಂದು ಆತನಿಗೆ ದೊಡ್ಡ ಸಂಕಟವಾಗಿದಿತ್ತು. ಹೀಗೆ ಕೆಲವು ದಿನ ಗಳೆದವು. ಜೂನ ೩೫ನೇ ತಾರೀಖಿಗೆ ಏನು ತೋಚಿತೋ ಏನೋ! ನಿತ್ಯದಂತೆ ಅವರಾತ್ತಕ್ಕೆ ಕೆಲಸಕ್ಕೆ ಹೋಗಲಿಲ್ಲ. ಮಧ್ಯರಾತ್ರಿಗೆ ಆತನ ಮನೆಯಲ್ಲಿ ದೊಡ್ಡ ಗುಲ್ಲು ಬಿತ್ತು. ಜನರು ಎದ್ದು ಓಡಿ ಬಂದರು. ನೋಡುವದೇನು? ಮನೆಯ ಮುಂದುಗಡೆ ಅಂಗಳದಲ್ಲಿ ಇಬ್ಬರೂ ಹುಡುಗರೂ ಜೀವಚ್ಛ ಬಿದ್ದಿದ್ದರು. ಅವರ ಮೈತುಂಬ ಸುಟ್ಟ ಘಾಯಗಳು. ಹತ್ತಿರವೇ ಒಂದು ಮಂಚವಿತ್ತು. ಆ ಮಂಚದ ಕೆಳಗೆ ಬೆಂಕಿ! ಮಂಚವು ಉರಿಯುತ್ತಿತ್ತು. ವೆಸ್ಟನು ಆ ಹುಡುಗರನ್ನು ಬೆಂಕಿಯಲ್ಲಿ ಎಸೆಯುತ್ತಿದನು. ನಿಮ್ಮ ತಾಯಿಯಿದ್ದಲ್ಲಿಗೆ ಹೋಗಿರಿ, ಎಂದು ಉದ್ಗರಿಸುತ್ತಿದ್ದನು. ಒಬ್ಬ ಮುದುಕಿಯು ಮುಂದಾದಳು; ಬೆಂಕಿಯೊಳಗಿಂದ ಇಬ್ಬರೂ ಹುಡುಗರನ್ನು ಹೊರಕ್ಕೆ ತೆಗೆದಳು. ಕೂಡಲೆ ವೆಸ್ಟನು ಅವಳ ಬಗಲೊಳಗಿಂದ ಹುಡುಗರನ್ನು ಥಕ್ಕನೆ ಹಾರಿಸಿಕೊಂಡು, ಪುನಃ ಅವರನ್ನು ಬೆಂಕಿಯಲ್ಲಿ ಕೆಡವಿದನು. ಬಹಳ ಜನರು ಕೂಡಿದ್ದರು; ವೆಸ್ಟನು ಕಾಡಿನಲ್ಲಿ ಓಡಿಹೋದನು. ಹುಡುಗರು ಮಾರನೇ ದಿನ ತಂದೆಯ ಅಗ್ನಿಯಿಂದ, ತಾಯಿಯ ಬಳಿಗೆ ಹೋದರು. ಈ ಬಗ್ಗೆ ಖಾನದೇಶದೊಳಗಿನ ಸೆಶನ್ಸ ಕೋರ್ಟಿನಲ್ಲಿ ತನಿಖೆ ನಡೆದು ಜಡ್ಜರು ವೆಸ್ಟನಿಗೆ ಗಲ್ಲಿಗೇರಿಸಬೇಕೆಂದು ವಿಧಿಸಿದರು. ಮುಂಬಯಿಯ ಹೈಕೋರ್ಟಿನಲ್ಲಿಯೂ ಈ ಶಿಕ್ಷೆಯು ಸ್ಥಿರವಾಗಿದೆ. ವೆಸ್ಟನು ಹುಡುಗರಿಗೆ ಅಕ್ಕರತೆಯಿಂದ, ದಯೆಯಿಂದ ಸಾಕಿದನೆಂದೂ, ಕೊಲೆ ಮಾಡಲು ಆತನಿಗೆ ದುಷ್ಟ ಹೇತುವಿರಲಿಲ್ಲವೆಂದೂ ಹೈಕೋರ್ಟಿನವರು ಒಪ್ಪಿಕೊಂಡು, ಹುಡುಗರನ್ನು ಬದುಕಿಸಲು ಆತನು ಯತ್ನ ಮಾಡಲಿಲ್ಲವೆಂದೂ ಆತನು ನಿರಪರಾಧಿಯಾಗಿದ್ದರೆ, ಕಾಡು ಸೇರುತ್ತಿದ್ದಿಲ್ಲವೆಂದೂ ಅಭಿಪ್ರಾಯಪಟ್ಟು, ಕೆಳ ಕೋರ್ಟಿನ ಶಿಕ್ಷೆಯನ್ನು ಸ್ಥಿರಪಡಿಸಿದರು. ಪ್ರಾಪಂಚಿಕ ಜಂಜಡಗಳಿಂದ ನಿರಾಶರಾಗಿ ಆಚರಿಸುವ ಅತ್ಯಾಚಾರಗಳಿವು. ಮಾನವನು ಪ್ರಪಂಚದಲ್ಲಿ ಬಂದ ಎಡರುಗಳನ್ನು ಸಾವಧಾನ ಚಿತ್ತದಿಂದ ಸಹಿಸಿಕೊಂಡು, ಕಷ್ಟದೊಳಗಿಂದ ಪಾರಾಗಬೇಕಲ್ಲದೆ, ಹಿಂಸಾಯುಕ್ತನಾಗಿ, ಗತಿಗೆಟ್ಟು ಅವಿಚಾರಕ್ಕೀಡಾಗುವದು ಇಹ-ಪರದಲ್ಲಿಯೂ ಶ್ರೇಯಸ್ಕರವಲ್ಲ; ಇಷ್ಟು ಜ್ಞಾನ ತಳೆದಿದ್ದರೆ, ಬಡ ವೆಸ್ಟನು ಪುತ್ರವಧದ ಮಹಾಪಾಪಕ್ಕೆ ಗುರಿಯಾಗುತ್ತಿದ್ದಿಲ್ಲ. ಇಂಥ ಅತ್ಯಾಚಾರಗಳಿಂದ ಬಗೆಹರಿಯುತ್ತದೇನು?

***

ತಿಂಗಳ ಊಟದ ಖರ್ಚು ೧೦॥ ಆಣೆ.

ಅಕಬರ ಬಾದಶಹನ ಕಾರಕೀರ್ದಿಯ ಹಕೀಕತು ಒಂದು "ದೇಶಕೀ ಬಾತ" ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅದನ್ನು ಓದಿ ಅನೇಕರು ಬಾಯಿನೀರು ಬಿಡುವರು. ಅಕಬರನ ಕಾಲದಲ್ಲಿರುವ ಜಿನಸುಗಳ ಧಾರಣೆ ಕೇಳಿರಿ! ೧ ರೂಪಾಯಿಗೆ ೧೯೫ ಶೇರು ಗೋದಿ, ೨೦೨ ಶೇರು ಜೋಳ, ೮೦ ಶೇರು ಅಕ್ಕಿ, ೧೫ ಶೇರು ತುಪ್ಪ, ೬೪ ಶೇರು ಎಣ್ಣೆ ಸಿಗುತ್ತಿತ್ತು. ಹೊಟ್ಟೆತುಂಬ ಊಟ ಮಾಡಿದರೆ, ತಿಂಗಳಿಗೆ ೧೦॥ ಆಣೆ ತಗಲುತ್ತಿತ್ತು. ಇದು ಮೊಗಲಾಯಿಯೊಳಗಣ ಕಥೆ. ಈಗ ಬ್ರಿಟಿಶ ರಾಜ್ಯದ ಕಾರಕೀರ್ದಿಯಲ್ಲಿ ದಿನ ೧೦॥ ಆಣೆ ಕೊಟ್ಟರೂ, ಚಲೋ ಊಟ ಸಿಗುವದು ಕಠಿಣ. "ಕಾಲಾಯ ತಸ್ಮೈ ನಮಃ!"

***

ವಿಚಿತ್ರ ಕೂಸು.

ರವಿವಾರಕ್ಕೆ ಮಧ್ಯಾಹ್ನ ೨ ಘಂಟೆಗೆ ಕಾರ್ಯಕ್ರಮಕ್ಕೆ ಪ್ರಾರಂಭವಾಯಿತು. ರಾಷ್ಟ್ರಗೀತ, ಈಶಸ್ತವನ ಇತ್ಯಾದಿ ನಡೆದ ಬಳಿಕ, ಅಂಧ ವಿದ್ಯಾಲಯದೊಳಗಿನ ವಿದ್ಯಾರ್ಥಿಗಳು ವಾದ್ಯವಾದನ ತೋರಿಸಿದರು. ಬಳಿಕ, ಡಾ|| ಭಂಡಾರಕರ, ದೇಶಬಂಧು ದಾಸ, ಶೇ. ನಾರಾಯಣ ದಾಸರವರ ನಿಧನಗಳಿಂದ ಪರಿಷತ್ತಿಗುಂಟಾದ ದುಃಖವನ್ನು ಅಧ್ಯಕ್ಷರೇ ನಮೂದ ಮಾಡಿದರು. ಬಳಿಕ ಶ್ರೀ|| ಕೇಳಕರರು ಹಿಂದೂ ಸಂಘಟನೆಯ ಠರಾವನ್ನು ಸೂಚಿಸಿದ್ದೇನಂದರೆ:- ೧೯೨೫ನೇ ಇಸ್ವಿಯ ಎಪ್ರಿಲ್ ತಿಂಗಳಿನಲ್ಲಿ ಕಲಕತ್ತೆಯಲ್ಲಿ ಜರುಗಿದ ಹಿಂದೂ ಮಹಾಸಭೆಯು ಹಿಂದೂ ಸಂಘಟನೆಯ ಕುರಿತು ಮಾಡಿದ ಠರಾವನ್ನು ಈ ಪರಿಷತ್ತು ಮನ್ನಿಸಿ, ಮಹಾರಾಷ್ಟ್ರ, ಗುಜರಾಥ, ಕರ್ನಾಟಕ, ಕಚ್ಛ ಹಾಗು ಸಿಂಧ ಈ ಪ್ರಾಂತಗಳಲ್ಲಿ ಹಿಂದೂ ಸಭೆಗಳನ್ನು ಸ್ಥಾಪಿಸಿ, ಹಿಂದೂಗಳ ರಕ್ಷಣ ಹಾಗು ಉನ್ನತಿಗಾಗಿ ತಕ್ಕ ಸಂಘಟನ ಮಾಡಬೇಕೆಂದು ಈ ಪರಿಷತ್ತು ಆಜ್ಞಾಪಿಸುತ್ತದೆ. ಈ ಠರಾವನ್ನು ಸೂಚಿಸುವಾಗ, ಶ್ರೀ|| ಕೇಳಕರರವರು ಸಮಯೋಚಿತ ನಾಲ್ಕು ಮಾತಾಡಿದರು. ಪರಧರ್ಮದವರು ಧರ್ಮಪ್ರಸಾರ ಹಾಗು ಧರ್ಮರಕ್ಷಣ ಕಾರ್ಯಗಳನ್ನು ಸುಸಂಘಟಿತವಾಗಿ ನಡಿಸುತ್ತಿರುವಾಗ, ನಾವು ಮಾತ್ರ ಅವ್ಯವಸ್ಥಿತರಾಗಿರುವದು ಶ್ರೇಯಸ್ಕರವಲ್ಲ. ಪ್ರತಿ ವರ್ಷ ೨ಲಕ್ಷ ಸನಾತನಿಗಳು ಇಸ್ಲಾಮ ಹಾಗು ಕ್ರೈಸ್ತ ಧರ್ಮದಲ್ಲಿ ಸೇರುತ್ತಿರುವರು. ಈ ಕ್ರಮಕ್ಕೆ ನಾವು ತಡೆಹಾಕಲೇಬೇಕು. ಇಲ್ಲದಿದ್ದರೆ ಸನಾತನ ಧರ್ಮವು ಬದುಕಿ ಬಾಳುವದೇನು? ಬ್ರಾಹ್ಮಣೇತರರ ಬೇಡಿಕೆಗಳನ್ನೂ ಸಾಧ್ಯವಿದ್ದಷ್ಟರ ಮಟ್ಟಿಗೆ ಪೂರೈಸಲು ನಾವು ಯೋಜಿಸಬೇಕು. ನಾವಾಗಿ ಈ ಮುಸಲವನ್ನು ನಷ್ಟಪಡಿಸಿಕೊಳ್ಳದಿದ್ದರೆ, ನಾವು ಅಪೌರುಷೇಯರಾಗುವೆವು. ಅಸ್ಪೃಶ್ಯರ ಬೇಡಿಕೆಗಳು ತೀರ ಸಾಮಾನ್ಯವಿವೆ. ಉಚ್ಚ ವರ್ಗದವರೆಂದು ಹೇಳಿಕೊಳ್ಳುವವರೊಡನೆ ವಿಶೇಷ ವ್ಯವಹಾರ ನಡಿಸಲು ಅವರು ಬೇಡುವದಿಲ್ಲ. ಸಾಮಾನ್ಯ ಮಾನವರಂತೆ, ಪರಧರ್ಮೀಯರಿಗೆ ನಡಿಸಿಕೊಳ್ಳುವಂತೆ ತಮ್ಮನ್ನೂ ನಡಿಸಿಕೊಳ್ಳಿರೆಂದು ಅವರು ಹೇಳುತ್ತಾರೆ, ಇದನ್ನು ಅಲ್ಲಗಳೆಯುವದು ಶ್ರೇಯಸ್ಕರವಲ್ಲ. ಈ ಠರಾವಿಗೆ ಅನುಮೋದನವನ್ನೀಯುವಾಗ, ಸ್ವಾಮಿ ಶ್ರೀ ಶ್ರದ್ಧಾನಂದರೇಯವರು ನುಡಿದದ್ದೇನಂದರೆ:- ನಮ್ಮ ಸಂಘಟನೆಯ ಯೋಜನೆಯಿಂದ ಪರಧರ್ಮೀಯರ ದುಷ್ಟ ಧರ್ಮಾಂತರ ಕಾರ್ಯಕ್ಕೆ ತಡೆಹಾಕಿದಂತಾಗಿದೆ. ಅಸ್ಪೃಶ್ಯರಿಗೆ ಸಾಮಾನ್ಯ ಮಾನವರ ಹಕ್ಕುಗಳನ್ನಿತ್ತು ನಮ್ಮಲ್ಲಿ ಅವರಿಗೆ ಬರಮಾಡಿಕೊಳ್ಳಬೇಕು. ಮಲಬಾರದಲ್ಲಿ ಕ್ರೈಸ್ತ ಧರ್ಮಕ್ಕೆ ಸೇರಿದ ಹಿಂದೂಗಳ ಆಚಾರಗಳೆಲ್ಲ ಸನಾತನಿಗಳದೇ. ಆದರೂ, ಅವರಿಗೆ ನಮ್ಮ ಧರ್ಮದಲ್ಲಿ ಪ್ರವೇಶವಿಲ್ಲ. ಅಶೋಕ-ಚಂದ್ರಗುಪ್ತರು ಪರಸ್ಥರಿಗೆ ನಮ್ಮ ಧರ್ಮದಲ್ಲಿ ಸೇರಿಸಿಕೊಂಡಾಗ, ನಮ್ಮ ಧರ್ಮಮಂದಿರಕ್ಕೆ ಪ್ರವೇಶದ್ವಾರವಿತ್ತು; ನಿರ್ಗಮ ದ್ವಾರವೂ ಇತ್ತು. ಈಗ ಪ್ರವೇಶದ್ವಾರವು ಮುಚ್ಚಲ್ಪಟ್ಟಿದೆ. ಮಲಬಾರದಲ್ಲಿ ಮುಸಲ್ಮಾನ-ಕ್ರೈಸ್ತರಿಗಿದ್ದಷ್ಟು ಹಕ್ಕುಗಳನ್ನು ಸನಾತನಿಗಳು ಅಸ್ಪೃಶ್ಯರಿಗೆ ಕೊಡುವದಿಲ್ಲ. ಇದರ ಅರ್ಥವೇನೆಂದು ಹೇಳ್ಲಿರಿ? ಅಸ್ಪೃಶ್ಯರು ಮುಮುಕ್ಷೆಯಿಂದ ಅನುಸರಿಸುವ ಸನಾತನ ಧರ್ಮವನ್ನು ನಾವು ಅವರಿಗೆ ದೂರಮಾಡ ಹಚ್ಚುತ್ತೇವಲ್ಲವೇ? ಇದೇ ಸಮಯ ನಾವು ಜಾಗೃತರಾಗಿ ೭ ಕೋಟಿ ಅಸ್ಪೃಶ್ಯರ ಉದ್ಧಾರ ಮಾಡಲು ಶಕ್ತಿಮೀರಿ ದುಡಿಯತಕ್ಕದ್ದು. ಅತ್ಯಂತ ಹರ್ಷದಿಂದ ಠರಾವು ಐಕಮತ್ಯದಿಂದ ಮಂಜೂರಾಯಿತು.

ಬಳಿಕ, ಪಂಡಿತ ನೇಕಿನಾಮಶರ್ಮರವರು ಅಸ್ಪೃಶ್ಯತಾನಿವಾರಣೆಯ ಠರಾವನ್ನು ಸೂಚಿಸಿದರು. ಅವರು ನುಡಿದದ್ದೇನಂದರೆ:- ಸನಾತನ ಧರ್ಮವು ಸಂಕಟಕ್ಕೊಳಗಾಗಿದೆ. ಈ ಸಂಕಟನಿವಾರಣೆಯ ಉಪಾಯಗಳು ಎರಡು. ಮೊದಲನೆಯದು ಹಿಂದೂ ಸಂಘಟನೆಯು; ಎರಡನೆಯದು ಅಸ್ಪೃಶ್ಯತಾನಿವಾರಣೆಯು. ಅಖಿಲ ಬ್ರಹ್ಮಾಂಡದ ಮೇಲೆ ಹಿಂದೂ ಸಮಾಜವು ತನ್ನ ಪ್ರಭಾವವನ್ನು ತೋರಿಸಿತ್ತು. ಆ ಕಾಲವು ಈಗ ಎಲ್ಲಿ ಹೋಯಿತು? ಹಿಂದೂ ಸಂಸ್ಕೃತಿಯ ಪ್ರಭಾವವು ಆಗ ಹಾಗಿತ್ತು. ಆ ಸಂಸ್ಕೃತಿಗನುರೂಪವಾಗಿ ಸಮಾಜ ಸ್ಥಿತಿಯನ್ನು ಪುನರ್ಘಟಿಸಿದ ಹೊರತು, ನಮ್ಮ ಬಾಳ್ವೆಯಿಲ್ಲ. ಹಿಂದೂ ಸಮಾಜದ ರಕ್ಷಕನು ಹಿಂದೂವೇ. ಪರಸ್ಥರಿಂದ ರಕ್ಷಣೆಯ ಭಿಕ್ಷೆ ಬೇಡುವದು ಸರಿಯಲ್ಲ. ನಮ್ಮ ಮನೆಯನ್ನು ನಾವೇ ಸುಧಾರಿಸಿಕೊಳ್ಳಬೇಕು. ಚಂದ್ರಗುಪ್ತನಂತೆ ಅನ್ಯ ಸಮಾಜದೊಳಗಿನ ಜನರನ್ನು ನಮ್ಮ ಸಮಾಜದಲ್ಲಿ ಸೇರಿಸಿಕೊಳ್ಳುವ ಮಾತು ಬಹು ದೂರವಿದೆ. ನಮ್ಮ ಸಮಾಜದೊಳಗಿಂದ ಹೊರಹೋದವರನ್ನು ಪುನಃ ಈಗ ಬರಮಾಡಿಕೊಳ್ಳಿರಿ. ಪ್ರಸಂಗವು ಒದಗಿದ್ದ ಕಳೆದ ವರುಷ ಸ್ತ್ರೀಯರಿಗೆ ಓಡಿಸಿಕೊಂಡು ಹೋದ ಅನೇಕ ಸಂಗತಿಗಳನ್ನು ನೀವು ಕೇಳಿರುವಿರಿ. ಸ್ತ್ರೀರಕ್ಷಣ ಮಾಡಲಸಮರ್ಥರಾದವರಿಗೆ ಪುರುಷರೆಂದು ಯಾರು ಹೇಳಬೇಕು? ಅಸ್ಪೃಶ್ಯ ಸಮಾಜವು ನಮ್ಮ ಸನಾತನ ಸಮಾಜದೊಳಗಿನ ದುರ್ಬಲ ಅಂಗವು. ಇದನ್ನು ನೆನಸಿ ನಾವು ಅಸ್ಪೃಶ್ಯೋದ್ಧಾರವನ್ನು ಕೈಕೊಳ್ಳಬೇಕು. ಈ ಠರಾವಿಗೆ ಅನುಮೋದನವನ್ನೀಯುವಾಗ ಶ್ರೀ|| ಚಿಂತಾಮಣರಾವ ವೈದ್ಯರವರು ನುಡಿದದ್ದೇನಂದರೆ:- "ನ ನೀಚೋ ಯವನಾತ್ಪರಃ" ಎಂಬ ಶಾಸ್ತ್ರವಚನವಿದೆ. ಸನಾತನ ಧರ್ಮ ಕಲ್ಪನೆಯಂತೆ, ಯವನನಷ್ಟು ನೀಚ ಮಾನವನಿಲ್ಲ. ಹೀಗಿದ್ದು ಮುಸಲ್ಮಾನ-ಕ್ರೈಸ್ತರಿಗಿರುವಷ್ಟು ಅನುಕೂಲ್ಯಗಳನ್ನು ಧರ್ಮಬಾಂಧವರಾದ ಅಸ್ಪೃಶ್ಯರಿಗೆ ಕೊಡದಿರುವದು ಅಧರ್ಮವು. ಪರಿಷತ್ತಿನಲ್ಲಿ ಈ ಠರಾವಿಗೆ ಅಸ್ಪೃಶ್ಯಬಾಂಧವರಾದ ಶ್ರೀ|| ವನಮಾಳಿಯವರು ಪುಷ್ಟಿಗೊಟ್ಟರು. ತಮ್ಮ ಮೇಲಾಗುವ ಸಮಸ್ತ ಪ್ರಕಾರದ ಅತ್ಯಾಚಾರಗಳನ್ನು ವರ್ಣಿಸಿ, ಇಷ್ಟಾದರೂ, ನಾವು ಸನಾತನ ಧರ್ಮವನ್ನು ಬಿಡಲಾರೆವೆಂದರು. ಬಳಿಕ, ಇನ್ನೂ ಕೆಲವು ಭಾಷಣಗಳಾದ ಬಳಿಕ, ಠರಾವು ಸರ್ವಾನುಮತದಿಂದ ಮಂಜೂರಾಯಿತು.

ಶುದ್ಧಿ.

ಶುದ್ಧಿಯ ಠರಾವನ್ನು ಸ್ವಾಮಿ ಶರ್ವಾನಂದಜೀಯವರು ಸೂಚಿಸಿದರು, ಆಗ ಅವರು ನುಡಿದದ್ದೇನಂದರೆ:- ಭೂತಲದ ಮೇಲಿನ ಇತರ ರಾಷ್ಟ್ರಗಳು ಕಾಡು ಸ್ಥಿತಿಯಲ್ಲಿದ್ದಾಗ, ಹಿಂದೂ ಧರ್ಮವೂ, ಹಿಂದೂ ಸಂಸ್ಕೃತಿಯೂ ಬಹಳ ಉಚ್ಚ ಸ್ಥಿತಿಯಲ್ಲಿತ್ತು. ಹಿಂದೂ ಧರ್ಮದೊಳಗೆ ಅನೇಕ ಪರಕೀಯ ಜಾತಿಗಳು ಸಮಾವೇಶಗೊಂಡಿವೆ. ಈಗ ೩೦೦ ವರ್ಷಗಳಾ

(ಮುಂದೆ ೯ನೇ ಪಾನಿನ ಮೇಲೆ ಮುಂದರಿಸಿದೆ.)

ಕಾನಡಾವೃತ್ತ.

ಮಿ॥ ಕ್ರೋಧನ ಸಂ॥ ಮಾರ್ಗಶೀರ್ಷ ಬ॥ ೧೪ ಸೋಮವಾರ

ಆತ್ಮೋದ್ಧಾರಕರಾಗಿರಿ!

ಮುಂಬಾಪುರಿಯಲ್ಲಿ ಜರುಗಿದ ಮೊದಲನೇ ಪ್ರಾಂತಿಕ ಹಿಂದೂ ಮಹಾಸಭೆಯ ಪರಿಷತ್ತಿನ ಹಕೀಕತನ್ನು ಸಮಸ್ತ ವಾಚಕರು ಸಂಪೂರ್ಣವಾಗಿ ಪರ್ಯಾಲೋಚಿಸಬೇಕೆಂದು ನಾವು ಆಗ್ರಹಪೂರ್ವಕ ಬಿನ್ನೈಸಬೇಕಾಗಿದೆ. ಸನಾತನ ಸಮಾಜದ ಸ್ಥಿತಿ, ಸನಾತನ ಧರ್ಮದ ಸ್ಥಿತಿ, ಇವುಗಳಿಂದುಂಟಾದ ರಾಷ್ಟ್ರಸ್ಥಿತಿ, ಇವನ್ನೆಲ್ಲ ವಿಚಾರಿಸಿದರೆ, ಸನಾತನಿಗಳು ಸನಾತನ ಧರ್ಮತತ್ವಗಳನ್ನು, ಸನಾತನ ಧರ್ಮಾಚಾರಗಳನ್ನು ತ್ಯಜಿಸಿ ರಾಷ್ಟ್ರಕ್ಕೊದಗಿದ ಹಾನಿಯು ನೆನವರಿಕೆಯಾಗುವದು. ಸನಾತನಿಗಳು, ಪುರಾತನ ಕಾಲದಲ್ಲಿ ಸುಸಂಸ್ಕೃತರೆಂದು ಖ್ಯಾತಿಗೊಂಡವರು, ಈಗ ನಿರ್ಬಲರಾಗಿ, ಅಪೌರುಷೇಯರಾಗಿ ನಡೆಯುವದನ್ನು ನೋಡಿ, ಯಾರಿಗೆ ತಾನೇ ವ್ಯಸನವಾಗದಿರದು? ಸನಾತನ ಸಮಾಜದಲ್ಲಿ ಈಗ ಸಂಘಟನೆಯಿಲ್ಲ, ಅಂತಃಕಲಹಗಳು ಬೇಕಷ್ಟು ಇವೆ, ಪುರಾತನ ಸಂಸ್ಕೃತಿಯ ತೇಜವು ಸಂಪೂರ್ಣವಾಗಿ ಲಯ ಹೊಂದಿದೆ. ಹೊಸ ಶಿಕ್ಷಣಪ್ರವೃತ್ತಿಯಿಂದ ಶಾರೀರಿಕ ಬಲವೂ ಕೂಡ ಕುಂದಿ, ನಾವು ಮಾನಸಿಕ ಶಾರೀರಿಕ, ಆರ್ಥಿಕ ದೃಷ್ಟಿಯಿಂದ ಕುಗ್ಗುತ್ತ ನಡೆದಿರುವೆವು. ಭಿನ್ನ ಸಮಾಜದವ ಅನಾಚಾರ-ದುರಾಚಾರ-ಅತ್ಯಾಚಾರಗಳಿಗೆ ಇದಿರಾಗುವ ಸಾಮರ್ಥ್ಯವೂ ನಷ್ಟವಾಗಿದೆ. ಇಂಥ ಪ್ರಸಕ್ತಿಯಲ್ಲಿ ಹಿಂದೂ ಮಹಾಸಭೆಯು ಸನಾತನಿಗಳ ಧರ್ಮೋದ್ಧಾರಕ್ಕಾಗಿ, ರಾಷ್ಟ್ರೋದ್ಧಾರಕ್ಕಾಗಿ ಅವತೀರ್ಣವಾಗಿರುವದೆಂದರೆ, ಅತಿಶಯೋಕ್ತಿಯಾಗುವದೇನು?

ಸ್ವಾಗತಾಧ್ಯಕ್ಷರಾದ ಬೆರಿಸ್ಟರ ಮುಕುಂದರಾವ ಜಯಕರ ಹಾಗು ಅಧ್ಯಕ್ಷರಾದ ದೇಶಭಕ್ತ ಲಾಲಾ ಲಜಪತರಾಯರ ಭಾಷಣಗಳನ್ನು ಪರ್ಯಾಲೋಚಿಸಿದರೆ, ಸನಾತನಿಗಳ ದೌರ್ಬಲ್ಯದಿಂದ, ಮುಸಲ್ಮಾನರ ಸ್ವಾರ್ಥದಿಂದ ರಾಷ್ಟ್ರಕ್ಕುಂಟಾದ ಅನರ್ಥಗಳ ಕಲ್ಪನೆಯಾಗುವದು. ಜಾತಿವಾರ ಪ್ರತಿನಿಧಿ ಪದ್ಧತಿಯಿಂದ ಪ್ರತಿಯೊಂದು ಸಮಾಜದಲ್ಲಿ ಗೊಂದಲವೆದ್ದಿದೆ. ಪ್ರತಿ ಸಮಾಜಕ್ಕೂ ಸ್ವಸಮಾಜದ ಪ್ರತ್ಯೇಕ ಪ್ರತಿನಿಧಿಗಳು ಸಾರ್ವಜನಿಕ ಸಂಸ್ಥೆಗಳಲ್ಲಿ ಇರಬೇಕೆಂಬ ದುರಾಶೆಯು ಬೆನ್ನುಹತ್ತಿದೆ. ಈ ಮೂಲಕ ಸಾಮಾಜಿಕ ಐಕ್ಯಭಂಗವಾಗಿದೆ. ಈ ಪದ್ಧತಿಯು ಇಷ್ಟರ ಮೇಲಿಂದಲೇ ರಾಷ್ಟ್ರಹಾನಿಕರವೆಂದು ಇನ್ನು ಹೇಳಬೇಕೇನು? ಅಧ್ಯಕ್ಷರು, ಅಮೇರಿಕೆಯೊಳಗಿನ ಸಂಯುಕ್ತ ಸಂಸ್ಥಾನದ ಉದಾಹರಣೆಯನ್ನಿತ್ತು, ಈ ಪದ್ಧತಿಯು ರಾಜ್ಯಕಾರಭಾರದಲ್ಲಿ ಅವಶ್ಯವಿಲ್ಲೆಂದು ಸ್ಫುಟವಾಡಿದರು. ಇಷ್ಟು ಅನರ್ಥ ಪರಂಪರೆಯುಳ್ಳ ಪದ್ಧತಿಯು ಭರತಖಂಡದ ಹೊರತು ಇನ್ನಾವ ಸ್ವತಂತ್ರ ದೇಶದಲ್ಲಿಯೂ ಇರುವದಿಲ್ಲೆಂದ ಬಳಿಕ, ಈ ಪದ್ಧತಿಯಿಂದ ನಮ್ಮ ಪಾರತಂತ್ರ್ಯವು ಮಿಗಿಲಾಗ ಪದೆಂಬದು ಸ್ಪಷ್ಟವಿದೆ. ಇದನ್ನು ಅಲ್ಲಗಳೆದು, ಸಮಸ್ತ ಸಮಾಜಗಳಿಗೆ ಸಾಮಾನ್ಯವಾದ ಒಂದೇ ಪದ್ಧತಿಯನ್ನು ಅವಲಂಬಿಸಿ ರಾಜ್ಯಭಾರ ನಡಿಸಲು ಸನಾತನ ಧರ್ಮ ಪದ್ಧತಿಯಂತೆ ಹಿಂದೂ ಮಹಾಸಭೆಯು ಪಡಿಯುವದು.

ಸನಾತನಿಗಳಲ್ಲಿ ಸಂಘಟನೆಯಿಲ್ಲದೆ ಅವರ ಅಂಬೋಣಕ್ಕೆ ಬೆಲೆಯಿಲ್ಲದಾಗಿದೆ. ಕಲಿಯುಗದಲ್ಲಿ ಸಂಘಟನೆಯ ಹೊರತು ಸಾಮರ್ಥ್ಯವಿಲ್ಲ. ಸಂಘಬಲವೇ ಶ್ರೇಷ್ಠ ಬಲವು. ಮುಸಲ್ಮಾನರಲ್ಲಿ ಸಂಘಟನೆಯಿದ್ದಂತೆ, ಸನಾತನಿಗಳು ಸುಸಂಘಟಿತರಾಗಿದ್ದರೆ, ಜಾತಿವಾರ ಪ್ರತಿನಿಧಿ ಪದ್ಧತಿಯು ಅನ್ಯಾಯವು ಎಂದೂ ತಲೆದೋರುತ್ತಿದ್ದಿಲ್ಲ. ಅಲ್ಲಲ್ಲಿ ನಡೆಯುವ ಅತ್ಯಾಚಾರಗಳೂ ಸಂಭವಿಸುತ್ತಿದ್ದಿಲ್ಲ. ಅತ್ಯಾಚಾರಗಳಿಂದ ರಾಷ್ಟ್ರೋದ್ಧಾರ ಮಾರ್ಗಕ್ಕೆ ತಡೆಬೀಳುತ್ತಿದ್ದಿಲ್ಲ. ಸನಾತನ ಸಮಾಜವು ಚದರಿಬಿದ್ದದರಿಂದಲೇ, ಕೋಹತ್, ಗುಲಬರ್ಗಾ, ಸೊಲ್ಲಾಪುರದೊಳಗಿನ ಅತ್ಯಾಚಾರಗಳು ಸಂಭವಿಸಿದವು. ಹಿಂದೂ ಮಹಾಸಭೆಯು ಅಲ್ಲಲ್ಲಿ ಮಹಾಸಭೆಯ ಶಾಖೆಗಳನ್ನು ಸ್ಥಾಪಿಸಿಕೊಂಡು ಸಂಘಟಿತವಾಗಲು ಮೊಟ್ಟಮೊದಲು ಬೋಧಿಸುವ ಕಾರಣವಿದೇ. ಇದೇ ಸಂಘಟನೆಯು ಆತ್ಮೋದ್ಧಾರದ ಪ್ರಥಮ ಸೋಪಾನವು.

ಅಂತ್ಯಜೋದ್ಧಾರವು ಎರಡನೆಯದು. ಅಂತ್ಯಜರು ೭ ಕೋಟಿ ಬಾಂಧವರು. ಇಷ್ಟು ಬಾಂಧವರನ್ನು ಶಾಶ್ವತವಾಗಿ ಪೀಡಿಸುತ್ತಿರುವದರಿಂದ ಸನಾತನಿಗಳಿಗಾಗಲಿ, ಭಾರತ ಖಂಡಕ್ಕಾಗಲಿ ಕ್ಷೇಮವಿರುವದೇನು? ಅವರೊಳಗೂ ಅವರ ಅನ್ಯಾಯವೇನಿದೆ? ಕರ್ಣನ ಪ್ರಸಿದ್ಧ ಉಕ್ತಿಯಂತೆ, ದೈವಾಧೀನವಿರುವ ಜನ್ಮದೋಷಕ್ಕಾಗಿ ನಿರಂತರವಾಗಿ ಅವರನ್ನು ಕಾಡುವದು, ಸನಾತನ ಧರ್ಮಕ್ಕೆ ಎಂದೂ ಸಮ್ಮತವಿಲ್ಲ. ಶ್ರೀ ಚಿಂತಾಮಣರಾವ ವೈದ್ಯರು ನುಡಿದಂತೆ, "ನ ನೀಚೋ ಯವನಾತ್ಪರಃ" ಎಂಬಂತೆ ಪರಧರ್ಮೀಯರಷ್ಟು ಅಂತ್ಯಜರು ಸನಾತನಿಗಳಿಗೆ ನೀಚರಲ್ಲ. ಅಂದ ಬಳಿಕ, ಸನಾತನ ಧರ್ಮಾಭಿಮಾನಿಗಳಾದ ಅಂತ್ಯಜರನ್ನು ದೂರಸರಿಸುವದೂ, ಸನಾತನ ಧರ್ಮತ್ಯಾಗ ಮಾಡಿ ಪರಧರ್ಮಕ್ಕೆ ಸೇರಿದ ಬಳಿಕ ಅವರನ್ನು ಬರಮಾಡಿಕೊಳ್ಳುವದೂ ವಿಪರೀತವಲ್ಲೇನು? ಪರಧರ್ಮಕ್ಕೆ ಸೇರಿದೊಡನೆ ಅಸ್ಪೃಶ್ಯರು ಸ್ಪೃಶ್ಯರಾಗುವ ಇಂದ್ರಜಾಲವ್ಯಾವದು? "ಮುಸಲ್ಮಾನರು ಅಸ್ಪೃಶ್ಯರು; ಕ್ರೈಸ್ತರು ಅಸ್ಪೃಶ್ಯರು;" ಎಂದು ಹೇಳಿದರೆ, ಅದು ನಡೆಯಲಾರದೆಂಬ ಗ್ರಹಿಕೆಯಿಂದಲೇ ಪರಧರ್ಮಕ್ಕೆ ಸೇರಿದ ಅಸ್ಪೃಶ್ಯ ಬಾಂಧವರ ಮೇಲಿನ ಅಸ್ಪೃಶ್ಯತೆಯ ಕಲಂಕವು ದೂರವಾಗುತ್ತದಲ್ಲವೇ? ಇಂಥ ಪ್ರಸಕ್ತಿಯಲ್ಲಿ, ಸ್ವಧರ್ಮದಲ್ಲಿರುವಾಗಲೇ ಅಸ್ಪೃಶ್ಯತೆಯ ಕಲಂಕವನ್ನು ಹೋಗಲಾಡಿಸಿದರೆ, ಧರ್ಮಬಾಂಧವರಿಗೆ ಧರ್ಮದಲ್ಲಿರಿಸಿದ ಶ್ರೇಯಸ್ಸು ನಮಗೆ ಅನಾಯಾಸವಾಗಿ ಪ್ರಾಪ್ತವಾಗುತ್ತಿದ್ದಾಗ, ಅಸ್ಪೃಶ್ಯತೆಯ ಕಲಂಕವನ್ನು ಅಚ್ಚಕೊಳೆಯುವದು ಸನಾತನ ಧರ್ಮಾಭಿಮಾನಿಗಳ ಆದ್ಯ ಕರ್ತವ್ಯವು.

ಶುದ್ಧಿಯ ತೀರ್ಮಾನವು ಸನಾತನಿಗಳ ಪಾಪಕ್ಷಾಲನದ ಉಪಾಯವು, ನಮ್ಮ ದುರಾಗ್ರಹದಿಂದ, ದುರಭಿಮಾನದಿಂದ ನಿರುಪಾಯವಾಗಿ ಹಿಂದೂ ಧರ್ಮವನ್ನು ಹೆಸರಿಗೆ ತ್ಯಾಗ ಮಾಡಿ, ಹಿಂದೂ ಧರ್ಮಾಚಾರಗಳನ್ನು ಈ ವರೆಗೆ ಭಕ್ತಿಯಿಂದ ಪಾಲಿಸುವ ಪುಣ್ಯಾತ್ಮರಿಗೆ ಪ್ರಾಯಶ್ಚಿತ್ತವನ್ನಿತ್ತು ಪುನಃ ಧರ್ಮದಲ್ಲಿ ಸೇರಿಸಿಕೊಳ್ಳುವದು ಶುದ್ಧಿಯು. ಈ ವ್ಯವಸ್ಥೆಯು ಇಲ್ಲದ್ದರಿಂದ, ಮುಸಲ್ಮಾನರೂ, ಕ್ರೈಸ್ತರೂ ಸನಾತನ ಧರ್ಮದ ಮೇಲೆ ದಾಳಿ ಮಾಡಿ, ವರ್ಷಕ್ಕೆ ೨ ಲಕ್ಷಕ್ಕೆ ಮಿಕ್ಕಿ ಸನಾತನಿಗಳನ್ನು ತಮ್ಮ ಧರ್ಮದಲ್ಲಿ ಸೇರಿಸಿಕೊಳ್ಳುತ್ತಿರುವರು. ಸನಾತನ ಧರ್ಮಕ್ಕೆ ಇದ್ದ ಪ್ರವೇಶದ್ವಾರವು ಶುದ್ಧಿಯ ತೀರ್ಮಾನದಿಂದ ಪುನಃ ತೆರೆಯಲ್ಪಟ್ಟಿದೆ. ಪರಧರ್ಮಗಳ ಮೇಲೆ ದಾಳಿ ಮಾಡುವದು ಶುದ್ಧಿಯ ಧ್ಯೇಯವಲ್ಲ. ಸ್ವಧರ್ಮಪರಿಪಾಲನಕ್ಕಾಗಿ ಈ ತೀರ್ಮಾನವು ಕೈಕೊಳ್ಳಲಾಗಿದೆ.

ಸನಾತನ ಸ್ತ್ರೀ ಸಮಾಜದ ಉನ್ನತಿಗಾಗಿ ಅನೇಕ ತೀರ್ಮಾನಗಳು ಮಂಜೂರಾಗಿವೆ. ಲಜಪತರಾಯರು ನುಡಿದಂತೆ, ಲಕ್ಷ್ಮೀ, ಸರಸ್ವತೀ ಹಾಗು ಶಕ್ತಿ ದೇವಿಗಳ ಕೇಂದ್ರವು ಸ್ತ್ರೀಯು. ಸ್ತ್ರೀಯು ಸುಲಕ್ಷಣವಾಗಿದ್ದರೆ, ಸುಶಿಕ್ಷಿತವಾಗಿದ್ದರೆ, ಸುಸಂಸ್ಕೃತವಾಗಿದ್ದರೆ, ಸಮಾಜವು ಸಂಪನ್ನವಾಗಿರುವದು, ಸಮೃದ್ಧವಾಗಿರುವದು, ಸಾಮರ್ಥ್ಯವಂತವಾಗಿರುವದು. ಸ್ತ್ರೀಕಾರ್ಯಕ್ಕುಚಿತವಾದ ಶಿಕ್ಷಣವು ಈಗ ಇರುವದಿಲ್ಲ. ಅವರ ಮಾನಸಿಕ ಹಾಗು ಶಾರೀರಿಕ ದೌರ್ಬಲ್ಯಗಳು ಈಗಿನ ಬಾಲವಿವಾಹ ಪದ್ಧತಿಯಿಂದಲೂ, ಘೋಷಾ ಪದ್ಧತಿಯಿಂದಲೂ ಮಿಗಿಲಾಗಿವೆ. ಅನಾಥ ವಿಧವೆಯರಿಗೆ ಸ್ವಕಷ್ಟದಿಂದ ಚರಿತಾರ್ಥ ಸಾಗಿಸಲು ಅನಾಥಾಲಯಗಳನ್ನು ಸ್ಥಾಪಿಸಬೇಕೆಂಬ ಠರಾವು ನಿಜವಾಗಿ ಶ್ರೇಯೋದಾಯಕವು. ದುರ್ದೈವದಿಂದ ವಿಧವೆಯರಾಗಿ ಹೊಟ್ಟೆಯ ಗೋಳು ಪರಿಹರಿಸಲಿಕ್ಕಾಗದೆ ನಿರುಪಾಯವಾಗಿ ಅನಾಚಾರಕ್ಕೀಡಾಗುವದು ಈ ಯೋ:

ಜನೆಯಿಂದ ತಪ್ಪಿ, ಸಾಮಾಜಿಕ ನೀತಿಪಾಲನವು ಅಭಿವೃದ್ಧಿಗೊಳ್ಳುವದು.

ಮಹಾಸಭೆಯ ಕಾರ್ಯದ ಸ್ಥೂಲ ಸ್ವರೂಪವಿದು. ಅಧ್ಯಕ್ಷರು ಮೊಟ್ಟಮೊದಲು ನುಡಿದಂತೆ, ಸನಾತನ ಸಮಾಜದ ಐಹಿಕ, ಪಾರಮಾರ್ಥಿಕ ಅವನತಿಯನ್ನು ಹೋಗಲಾಡಿಸಿ, ಸಾಮಾಜಿಕ ಚೈತನ್ಯವನ್ನುಂಟು ಮಾಡಲು ಮಹಾಸಭೆಯು ಜನಿಸಿದೆ. ಯಾವದೇ ಸಮಾಜಕ್ಕೆ ಈ ಸಮಾಜವು ವಿರೋಧ ಮಾಡುವದಿಲ್ಲ. ಸಾಮಾಜಿಕ ಐಕ್ಯಸಾಧನದ ಕಾರ್ಯದಲ್ಲಿ ಮಹಾಸಭೆಯು ಎಲ್ಲರಿಗೂ ನೆರವಾಗುವದು. ಸನಾತನ ಸಮಾಜವು ಚದರಿಬಿದ್ದು ಒದಗಿದ ಸಾಮಾಜಿಕ ಹಾನಿಯನ್ನು ನಷ್ಟಪಡಿಸಿ, ಸನಾತನ ಸಮಾಜವನ್ನು ಸಮುಸ್ತ ಪ್ರಕಾರಗಳಿಂದ ಭದ್ರಪಡಿಸಲು ಹಿಂದೂ ಮಹಾಸಭೆಯು ಜನ್ಮವನ್ನೆತ್ತಿದೆ. ಸನಾತನ ಧರ್ಮಾಭಿಮಾನಿಗಳಿಗೆ ಹಿಂದೂ ಮಹಾಸಭೆಯವರು ಬೋಧಿಸುವ ಮಾತು ಒಂದೇ: ಆತ್ಮೋದ್ಧಾರಕರಾಗಿರಿ! ಆತ್ಮೋದ್ಧಾರಕರಾಗಿರಿ!! ಆತ್ಮೋದ್ಧಾರ ಕಾರ್ಯವನ್ನು ದುರ್ಲಕ್ಷಿಸಿದ್ದರಿಂದಲೇ ಆತ್ಮಕ್ಕಂತು ಹಾನಿ ತಟ್ಟಿದೆ; ರಾಷ್ಟ್ರಪುರುಷನಿಗೂ ಹಾನಿ ತಟ್ಟಿದೆ. ಇನ್ನು ತಣ್ಣಗೆ ಕುಳಿತರೆ, ಆತ್ಮಘಾತವಾಗುವದು; ರಾಷ್ಟ್ರಘಾತವೂ ಆಗುವದು. ಸಾತ್ವಿಕ ಆತ್ಮೋದ್ಧಾರಕ ಬುದ್ಧಿಯಿಂದ ಪ್ರೇರಿತರಾಗಿ ಸನಾತನಿಗಳು ಧರ್ಮೋದ್ಧಾರವನ್ನೂ, ರಾಷ್ಟ್ರೋದ್ಧಾರವನ್ನೂ, ಆತ್ಮೋದ್ಧಾರವನ್ನೂ ಒಮ್ಮೆಲೇ ಸಾಧಿಸಬೇಕೆಂದು ಮಹಾಸಭೆಯವರು ಸನಾತನಿಗಳಿಗೆ ಆಜ್ಞಾಪಿಸುತ್ತಾರೆ.

ಸ್ಫುಟ ಸೂಚನೆಗಳು.

೧. ತುರ್ಕರಿಗೂ, ಬ್ರಿಟಿಶರಿಗೂ ಪುನಃ ಬಡಿದಾಡಬೇಕಾದ ಲಕ್ಷಣಗಳಾಗಿವೆ. ಮೋಸಲ್ ಪ್ರದೇಶವು ತುರ್ಕರದು; ಬ್ರಿಟಿಶರ ರಿಕಾರ್ಡಿನಿಂದಲೇ ಮೋಸಲಿನಲ್ಲಿ ಬ್ರಿಟಿಶರಿಗೆ ಏನೂ ಹಕ್ಕಿಲ್ಲೆಂದು ಸಿದ್ಧವಾಗಿದೆ. ಆದರೂ, ಬ್ರಿಟಿಶರಿಗೆ ಮೋಸಲ್‌ದ ಎಣ್ಣೆಯ ಗನಿಗಳ ಹೆಬ್ಬಾಕೆ ತಪ್ಪದು. ಅವನ್ನು ಸ್ವಾಧೀನಪಡಿಸಿಕೊಳ್ಳುವದಕ್ಕಾಗಿ ಬ್ರಿಟಿಶರು ಹಾತೊರೆಯುತ್ತಿರುವರು. ಮೋಸಲ್‌ದಲ್ಲಿ ಅತ್ಯಾಚಾರಗಳಾದ ಹುಯಿಲೆಬ್ಬಿಸಿ, ಮೋಸಲ್ ಪ್ರಕರಣವನ್ನು ರಾಷ್ಟ್ರಸಂಘದವರು ತೀರ್ಮಾನಿಸಬೇಕೆಂದು ಬ್ರಿಟಿಶರೇ ಹೇಳಿದರು. ರಾಷ್ಟ್ರಸಂಘವು ಬ್ರಿಟಿಶರ ಕೈಗೊಂಬೆ ಎಂದು ಈಗ ಯಾರಿಗೂ ಹೇಳಬೇಕಾಗಿಲ್ಲ. ಇನ್ನೂ ಸ್ವಲ್ಪವೂ ಸಂಶಯ ಉಳಿದಿದ್ದಲ್ಲಿ, ಅದು ಈ ನಿರ್ಣಯದಿಂದ ನಷ್ಟವಾಗುವದು: ಮೋಸಲ್ ಪ್ರದೇಶವನ್ನು ಬ್ರಿಟಿಶರ ಇರಾಕ ಪ್ರದೇಶಕ್ಕೆ ಸೇರಿಸಿ, ೨೫ ವರುಷಗಳ ವರೆಗೆ ಬ್ರಿಟಿಶರ ಸ್ವಾಧೀನದಲ್ಲಿರಿಸಬೇಕೆಂದು ರಾಷ್ಟ್ರಸಂಘವು ತೀರ್ಮಾನಿಸಿದೆ. ಇದಕ್ಕಾಗಿ ತುರ್ಕಸ್ಥಾನದವರು ಆಚರಿಸಿದ್ದೆಂಬ ಅತ್ಯಾಚಾರಗಳ ಅದ್ಭುತ ವರ್ಣನೆಯು ರಿಪೋರ್ಟಿನಲ್ಲಿ ಒಳಗೊಂಡಿದೆ. ಈ ನಿರ್ಣಯಕ್ಕೆ ತುರ್ಕಸ್ಥಾನದ ಪ್ರತಿನಿಧಿಗಳು ಒಪ್ಪದೆ, ರಾಷ್ಟ್ರಸಂಘದೊಳಗಿಂದ ಹೊರಬಿದ್ದಿರುವರು. ಈ ಕಲಹವು ವಿಕೋಪಕ್ಕೆ ಮುಟ್ಟಿ, ಬ್ರಿಟಿಶ-ತುರ್ಕರೊಳಗೆ ರಣದೇವಿಯು ಸಂಚಾರವಾಗುತ್ತದೆಯೆಂದು ಅನೇಕರು ಭೀತಿಗೊಂಡಿರುವರು. ಮೋಸಲ್ ಪ್ರದೇಶದ ಯಾವದೇ ನಿರ್ಣಯವನ್ನು ತುರ್ಕಸ್ಥಾನದ ಅನುಮತಿಯ ಹೊರತು ಕೈಕೊಳ್ಳಬಾರದೆಂದು ಲೌಸಾನ ತಹನಾಮೆಯಿಂದ ರಾಷ್ಟ್ರಸಂಘವು ಬದ್ಧೀಕೃತವಾಗಿದೆ. ಈಗಿನ ನಿರ್ಣಯದಿಂದ ಈ ತಹನಾಮೆಯು ಕಾಗದದ ಹರಕು ಚೂರಾಗುತ್ತದೆ. ಜರ್ಮನಿಯ ಕೈಸರ ಬಾದಶಹರು ಬೆಲ್ಜಮ ದೇಶದ ವಿಷಯ ಮಾಡಿದ ತಹನಾಮೆಯನ್ನು ಕಾಗದದ ಚೂರೆಂದು ಎಣಿಸಿದ ಬಗ್ಗೆ ಭೂಮಂಡಲದ ಮೇಲೆಲ್ಲ ಡಂಗುರ ಸಾರಿದ ಬ್ರಿಟಿಶರೇ ಸ್ವಹಿತಕ್ಕಾಗಿ ಲೌಸೇನ ತಹವನ್ನು ಅಲ್ಲಗಳೆಯುವದು ಆಶ್ಚರ್ಯವು. ಇದರಿಂದ ಅನರ್ಥ ಒದಗಿದರೆ, ಅದಕ್ಕೆಲ್ಲ ಬ್ರಿಟಿಶರೇ ಗುರಿಯಾಗುವರು. ಈಗ ತುರ್ಕಸ್ಥಾನವು ಮುಂಚಿನಂತೆ ದುರ್ಬಲವಿಲ್ಲ. ಮುಸ್ತಫಾ ಕಮಾಲ ಪಾಶಾರವರ ಸಂರಕ್ಷಣಾಲಕ್ಷದಲ್ಲಿ ಮೋಸಲ್ ಪ್ರದೇಶವನ್ನು ಹೋಗಲಾಡಿಸಿಕೊಳ್ಳಲು ಅವರು ತಯಾರಾಗಲಿಕ್ಕಿಲ್ಲ. ಮುಂದೇನಾಗುತ್ತದೆಂದು ಕೇಳಬೇಕು!!

೨. ಕಳೆದ ವಾರದಲ್ಲಿ ಬಂಗಾಲದ ಪ್ರಾಂತಿಕ ಕಾಯಿದೆ ಕೌನ್ಸಿಲಿನಲ್ಲಿ ಅಲ್ಲಿಯ ಸರಕಾರದ ಅಮಾನುಷ ನೀತಿಯ ವಿರೋಧ ಪ್ರದರ್ಶನವಾಯಿತು. ಬಂಗಾಲದಲ್ಲಿ ವಿಚಾರವಿಲ್ಲದೆ ಮೊಗಲಾಯಿ ಕಾಯಿದೆಯ ಆಶ್ರಯ ಹಿಡಿದು ದೇಶಸೇವಕರನ್ನು ಸೆರೆಯಲ್ಲಿಟ್ಟ ಹಕೀಕತವನ್ನು ವಾಚಕರು ಅರಿತಿರುವರು. ಹೀಗೆ ಸೆರೆಯಲ್ಲಿಟ್ಟವರಿಗೆ ಶಾರೀರಿಕ ಸುಖಸ್ವಾಸ್ಥ್ಯಕವಾದ ಸಕಲ ಉಪಕರಣಗಳನ್ನು ಪೂರೈಸಬೇಕೆಂದು ಕಾಯಿದೆಯಿದೆ. ಅವರ ಮನೆತನಕ್ಕೂ, ಅವರ ಆಶ್ರಯದಲ್ಲಿ ಜೀವಿತಾರ್ಥ ಸಾಗಿಸುವವರಿಗೂ ತಕ್ಕ ಸಹಾಯ ಮಾಡಲಿಕ್ಕೂ ಸರಕಾರವು ಬದ್ಧವಿದೆ. ಇಂಥ ಮೂವರು ಸೆರೆಯಾಳುಗಳನ್ನು ಬರ್ಹಾಮಪುರ ಜೈಲಿನಿಂದ ಹಜಾರಿಬಾಘ ಜೈಲಿಗೆ ಸ್ಥಲಾಂತರ ಮಾಡಿದರು. ಸ್ಥಲಾಂತರ ಮಾಡಿದ ಕ್ರಮವನ್ನು ಕೇಳಿ ವಾಚಕರಿಗೆ ಕ್ಲೇಶವುಂಟಾಗದಿರದು. ಬಾಬು ಜೋಗೇಶಚಂದ್ರ ಘೋಷ, ಪೂರ್ಣಾನಂದ ಸೇನ, ಸಂತೋಷ ಕುಮಾರ ದತ್ತರವರು ಬರ್ಹಾಮಪುರ ಜೈಲಿನಲ್ಲಿದ್ದರು. ನವಂಬರ ತಾ. ೨೬ನೇಗೆ “ಆಫೀಸಿನಲ್ಲಿ ಜೈಲರು ಕರೆಯುವರು” ಎಂದು ಅವರಿಗೆ ಕರೆ ಹೋಯಿತು. ಆಗ ಮೂವರೂ ಒಂದು ಧೋತರದ ಮೇಲೆ ವ್ಯಾಯಾಮ ಕೊಳ್ಳುತ್ತಿದ್ದರು. ಹಾಗೆಯೇ ಅವರು ಆಫೀಸಿಗೆ ಹೋದರು. ಅಲ್ಲಿ ಹೋದ ಕೂಡಲೆ, “ಈಗಲೇ ನೀವು ಹಜಾರಿಬಾಘ ಜೈಲಿಗೆ ಹೋಗಬೇಕು; ಕಲಕತ್ತೆಯ ದಾರಿಯಿಂದ ಹೋಗಬೇಕು” ಎಂದು ಹುಕುಮು ಹಾಕಲ್ಪಟ್ಟಿತು. ಮೂವರೂ ಇದು ಆಗದ ಮಾತೆಂದರು. ಈಗ ಚಳಿಗಾಲ; ಚಳಿಗಾಲದ ಅರಿವೆ-ಅಂಚಡಿಗಳು ಕೂಡ ನಮಗೆ ದೊರಕಲಿಲ್ಲ. ಈ ಕುರಿತು ನಾವು ಕೇಳತೊಡಗಿ ಈಗ ೧ ತಿಂಗಳಾಯಿತು. ಆದರೆ, ಕೇಳುವವರಾರು? ಈಗಲೇ ಹೊರಡಬೇಕೆಂದು ಹುಕುಮಾಯಿತು. “ಮೈಮೇಲೆ ಅರಿವೆಯು ಹಾಳಿಲ್ಲ. ನಮ್ಮ ಕೋಣೆಗೆ ಹೋಗಿ ಸಿಕ್ಕಿದಷ್ಟು ಅರಿವೆ-ಅಂಚಡಿಗಳನ್ನಾದರೂ ತರುತ್ತೇವೆ,” ಎಂದರೂ ಜೈಲರರು ಕೇಳದೆ, ಹಾಗೆಯೇ ಒಂದು ಸಹ ಅರಿವೆ ಕೊಡದೆ, ಮೂವರಿಗೂ ಹಜಾರಿಬಾಘ ಜೈಲಿಗೆ ಕಳಿಸಿಬಿಟ್ಟರು. ಆ ದಿನ ಶ್ರೀ ಸೇನಗುಪ್ತರು ಹಜಾರಿಬಾಘದಲ್ಲಿದ್ದರು. ಬಹಳ ಚಳಿಬಿದ್ದಿತ್ತೆಂದು ಅವರು ಈ ಕುರಿತು ಕಾಯಿದೆ ಕೌನ್ಸಿಲಿನಲ್ಲಿ ನಿಷೇಧಕ ಠರಾವನ್ನು ಸೂಚಿಸುವಾಗ ಹೇಳಿದರು:- “ಈ ಪರಿಯಿಂದ ನಾಗರಿಕರ ಜೀವ ನಾಶವಾಗುತ್ತಿರುವಾಗ, ಅವರನ್ನು ರಕ್ಷಿಸಲು ನಮ್ಮ ಈ ಕಾಯಿದೆ ಕೌನ್ಸಿಲಿನಿಂದ ಆಗದ ಬಳಿಕ, ಈ ಕಾಯಿದೆ ಕೌನ್ಸಿಲು ಇದ್ದು ಏನು ಪ್ರಯೋಜನವೆಂ” ದು ಅವರು ಉದ್ಗರಿಸಿದರು.

೩. ಈ ಕುರಿತು ಸರಕಾರವು ಕೊಟ್ಟ ಸ್ಪಷ್ಟೀಕರಣವು ತೀರ ಅಸ್ಪಷ್ಟವಿದೆ: “ಮೂವರೂ ಅರಿವೆ-ಅಂಚಡಿಗಳಿಲ್ಲದೆ ಹಜಾರಿಬಾಘಕ್ಕೆ ಹೋದದ್ದು ಸರಕಾರಕ್ಕೆ ಒಪ್ಪಿಗೆಯಿದೆ. ಬರ್ಹಾಮಪುರ ಜೈಲಿನಲ್ಲಿ ಸೆರೆಯಾಳುಗಳು ತೀರ ಉಪದ್ರವ ಕೊಡುತ್ತಿದ್ದರು. ಆ [illegible] ಕಠಿಣವಾಯಿತು. ಜೈಲರರಿಗೆ ಪೀಡೆಯಾಗಹತ್ತಿತು. ಅದರಿಂದ ಈ ಮೂವರಿಗೂ ಇನ್ನೊಬ್ಬರಿಗೂ ಹಜಾರಿಬಾಘಕ್ಕೆ ಒಯ್ಯಬೇಕೆಂದು ಹುಕುಮಾಯಿತು. ಇನ್ನೊಬ್ಬರು ಪ್ರಯಾಣ ಮಾಡಲು ಅಸಮರ್ಥರಾದರು. ಅದರಿಂದ ಮೂವರೇ ಮಾತ್ರ ಒಯ್ಯಲ್ಪಡಬೇಕಾಯಿತು. ಸಾಯಂಕಾಲ ೬ ಘಂಟೆಗೆ ಮೂವರಿಗೆ ಸೆರೆಮನೆಯ ಬಾಗಿಲಿಗೆ ಕರೆತಂದು ಹಜಾರಿಬಾಘಕ್ಕೆ ಹೊರಡಲು ಹುಕುಮಾಯಿತು. ಮೂವರೂ ತಮ್ಮ ಬಳಿ ಬೆಚ್ಚಗಿನ ಅರಿವೆಗಳಿಲ್ಲವೆಂದು ಹೇಳಿ ಹೊರಡಬೊಪ್ಪಲಿಲ್ಲ. ಸಿವ್ಹಿಲ್ ಸರ್ಜನ್‌ರು ಜೈಲ ಸುಪರಿಂಟೆಂಡೆಂಟರು. ಮೂವರೊಡನೆಯೂ ಅವಶ್ಯವುಳ್ಳ ಅರಿವೆಗಳಿದ್ದವೆಂದು ಅವರು ಹೇಳುತ್ತಾರೆ. ಅವರ ಕೋಣೆಗೆ ಹೋಗಿ ಅರಿವೆ ತರಲು ಕಾವಲುಗಾರರಿಗೆ ಹುಕುಮಾಯಿತು. ಆಗ ಹಾಗೆ ಕಾವಲುಗಾರರು ಕೋಣೆಗಳಿಗೆ ಅರಿವೆಗಳನ್ನು ತರಹೋಗಲು ಪ್ರತಿಬಂಧವಾಯಿತು. ಯಾರಿಂದ ಪ್ರತಿಬಂಧವಾಯಿತು? ಎಂಬುದು ಜಾಹೀರಾಗಲಿಲ್ಲ. ಬಳಿಕ, ಹೆಬ್ಬಾಗಿಲಲ್ಲಿ ಇತರ ಕೈದಿಗಳು ಸೇರಿದ್ದು, ಮೂವರಿಗೂ ಅಲ್ಪ ಅರಿವೆ-ಅಂಚಡಿಗಳನ್ನು ಹೀಗೆ ಒಗೆಯಹತ್ತಿದರು. ಅದರಂತೆ ಅವರು ತಾವು ಧೋತರವನ್ನೊಂದು ಬಿಟ್ಟು ಮೈಮೇಲಿದ್ದ ಶರ್ಟನ್ನೂ, ಜಾಕೀಟನ್ನೂ ಒಳಗೆ ಒಗೆದರು. ಅನ್ನಗ್ರಹಣ ಮಾಡಲೊಪ್ಪಲಿಲ್ಲ. ಮೇಲಕ್ಕೆತ್ತಿಕೊಂಡು ಗಾಡಿಬಂಡಿಯಲ್ಲಿ ಹಾಕಿ ಅವರಿಗೆ ಒಯ್ಯಬೇಕಾಯಿತು.” ಇದು ಸರಕಾರವು ಕೊಡುವ ಸ್ಪಷ್ಟೀಕರಣವು.

೪. ಶ್ರೀ ಸೇನಗುಪ್ತರ ಆರೋಪಕ್ಕೆ ಸರಕಾರವು ಕೊಟ್ಟ ಸಮರ್ಥನೆಯನ್ನು ಯಾರೂ ನಂಬಲಾರರು. ಬಾಬು ಜೋಗೇಶಚಂದ್ರಾದಿ ಮೂವರಿಗೆ ಸ್ಥಲಾಂತರದ ಹುಕುಮು ಮೊದಲು ತಿಳಿಸಿದ್ದಿಲ್ಲ. ಹುಕುಮು ತಿಳಿಸಿದ ಬಳಿಕ, ಕೋಣೆಗಳಿಗೆ ಹೋಗಿ ಅರಿವೆ-ಅಂಚಡಿಗಳನ್ನು ತರಹೇಳಲಿಲ್ಲ. ಹೆಬ್ಬಾಗಿಲಿನಿಂದಲೇ ಅವರಿಗೆ ಹಜಾರಿಬಾಘಕ್ಕೆ ಒಯ್ಯಲಾಯಿತು; ಎಂಬ ಹಕೀಕತು ಸರಕಾರಕ್ಕೆ ಮಾನ್ಯವಿದೆ. ಅವರೊಡನೆ ಸಾಕಷ್ಟು ಉಣ್ಣೆಯ ಅರಿವೆಗಳಿದ್ದವೆಂಬ ಮಾತನ್ನು ನಂಬಬರುವದಿಲ್ಲ. ಈ ಪ್ರಕರಣದಲ್ಲಿ ಜೈಲ ಸುಪರಿಂಟೆಂಡೆಂಟರೇ ಆರೋಪಿಗಳು. ಇವರ ಹೇಳಿಕೆಯ ಮೇಲಿಂದಲೇ ಫಿರ್ಯಾದಿಯ ಹಕೀಕತನ್ನು ಅಲ್ಲಗಳೆಯಬಹುದೆಂದರೆ, ಸಿಕ್ಕ ಕಾಟಕ್ಕೆ ಪಾಲಿ ಸಾಕ್ಷಿ ಕೊಟ್ಟಂತಾಗುವದು. ಜೈಲಿನೊಳಗಿನ ಕಾವಲುಗಾರರಿಗೆ ಬೆಚ್ಚನ್ನ ಅರಿವೆ ತರಹೇಳಿದ್ದರೆ, ಅವರಿಗೆ ಪ್ರತಿಬಂಧಿಸಿದವರ್ಯಾರು?

ಅವರಿಗೆ ಪ್ರತಿಬಂಧಿಸ ವಷ್ಟು ಸಾಮರ್ಥ್ಯವಂತರ ಜೈಲಿನಲ್ಲಿ ನಿರ್ಮಾಣವಾಗಿಸ್ವತೆ ಜೈಲ ಸುಪರಿಂಟೆಂಡೆಂಟರ ಅಧಿಕಾರವು ಅಪರಿಮಿತವಾಗಿ ಕ್ರಿತ್ತು. ಹೀಗೆ ಸ್ಥಿತಿಯಿರುವಾಗ ಸರಕಾರವು ಬಾಬು ಜೆಂಗೇಶಚಂದ್ರ ಮೊದಲಾದವರಿಗೆ ಬಿಡಿಪೆ-ಅಂಚೆಡಿಯನ್ನೀಯುವೆ, ನಿರುಪಾಯವಿದ ಕಳಿಸಬೇಕಾಯಿತೆಂಬ ಹಕೀಕತನ್ನು ಯಾರಾದ ನಂಬಿದ್ದರೆ ಆ ಯ ವೇನಿಲ್ಲ ಸರಕಾರದವ್ರ ಬರೋಬ ಹೇಳವೆ, ವಿಚಾರ ಮಾಡದೆ ನೆರೆಯಲ್ಲಿತ್ತವರ ಮೋಸಗಾರಾಯಿತು. ಹೀಗೆ ವರೆಯ ಲ್ಲಿಬ್ಬರಿಗೆ ಶಾರೀರಿಕ ಪೀಡನೆ ಕೊಡ ಬಹು ಮೋಸಗಾರಾಯಿ ಕೇಳಗಿನ ಆ ಸ್ಥಿತಿಯು ದೇಶದ ಎಕದ ಈ ಪರಿಯು ಕಷ್ಟವಿ ಇಲ್ಲ ಭರತಖಂಡದ ವಿಮೋಚನವಾಗಬೇಕೆಂದು ಈಶಸಂಕಲ್ಪವಿದೆಯೋ?

ಹಿಂಗಳಿಯಲ್ಲಿ ಪೊಲೀಸರು ದೇಶಸೇವಕರ ಮೇಲೆ ನಡಿಸಿದ ಅನ್ಯಾಯದ ಕತಕವು ಅಸಮೇಕ್ಷಿತವಾಗಿ ಹೊರಬಿದ್ದಿದೆ. ಬಾರ್ಸಿಲದಲ್ಲಿ ಬ್ರಿಜಮೋಹನ ಕಾಲೇಜಿದೆ. ಈ ಕಾಲೇಜಿನೊಳಗಿನ ವಿದ್ಯಾರ್ಥಿಗಳು ಸಾವಕಾಶ ದಿವಸಗಳ ಹಿಂದ ವಿದ್ಯಾರ್ಥಿಸಂಘವನ್ನು ಕೊರತೆಸಿದರ ಸಂಸ್ಥೆಯ ಉತ್ಪಾದಕರಾದ ಪ್ರೊ| ಜ್ಯೋತಿ ನಾಥವಾಸ ಗುಪ್ತರವರಿಗೆ ಪಚ್ಚಾಳಿಕೆಯ ಕಾನೂನಿನನ್ವಯ ನೆರೆಹಿಡಿಸರೂ, ಸಂಸ್ಥೆಯ ಮುಂಚರಿಯಿತು ಪೋಲೀಸರಿಗೆ ಸಂಸ್ಥೆಯನ್ನು ನಾಶಮಾಡಲು ಉಪಾಯ ತೋರದೆ ಸಂಸ್ಥೆಯಲ್ಲಿ ಸೇರಿದ ವಿದ್ಯಾರ್ಥಿಗಳಿಗೆ ಅಡ್ಡ ಮಾರ್ಗಕ್ಕೆ ಹಚ್ಚಿ ಇದೀ ಸಂಸ್ಥೆಗೆ ರಾಜದ್ರೋಹ ಸ್ವರೂಪದ ಅಪ್ಪಟ ಕೊಡಿಸಿ ನಿರ್ಮೂಲಿಸುವ ಉಪಾಯ ಕೈಕೊಂಡರು. ವಿದ್ಯಾರ್ಥಿಗಳು ದೇಶಾಧಿಕಾರಿಗಳ ಬೊಂಬು ಪಿಸ್ತೂಲುಗಳ ಪೂರೈಕೆಯಿಂದ ರಾಜ್ಯಕ್ರಾಂತಿಯನ್ನು ಹಿಡಿಗಿಸುತರಲು ಅನುಕೂಲಪಿರುವದೆಂದು ವಿದ್ಯಾರ್ಥಿಗಳಿಗೆ ಪ್ರಬೋಧನೆ ಕೊಟ್ಟು, ಕೆಲ ವಿದ್ಯಾರ್ಥಿಗಳಿಗೆ ಆ ಹಾದಿಗೆ ಹಚ್ಚಿಸಲು ಕೂಡಲೆ, ಚಾಲಕರಿಗೆ ಈ ಕುಹಕರಚನೆಯ ಸುಳಿವು ಹತ್ತಿತು. ವಿದ್ಯಾರ್ಥಿಗಳು ಕಾಲೇಜಿನ ಮುಖ್ಯಾಧ್ಯಾಪಕರಾದ ಶ್ರೀ| ಸತೀಶಚಂದ್ರ ಚಟರ್ಜಿಯವರೊಡನೆ ಇದ್ದ ಹಕೀಕತನ್ನೆಲ್ಲ ನಿವೇದಿಸಿ ಕ್ಷಮಾಯಾಚನೆ ಮಾಡಿದರು. ಈ ಪ್ರಕಟನೆಯಿಂದ ಪೋಲೀಸರ ಪೂರ್ತ್ಯ ರಚನೆಯ ಭಕ್ಕನೆ ಹೊರಬಿದ್ದಿದೆ. ವಿದ್ಯಾರ್ಥಿಸಂಘವು ಸಂಕಟದೊಳಗಿಂದ ಪಾರಾಗಿದೆ. ಪ್ರಜಾಪರಿಪಾಲನ ಮಾಡಲು ನೇಮಿಸಲ್ಪಟ್ಟ ಪೋಲೀಸರೇ ಅಜ್ಞ ವಿದ್ಯಾರ್ಥಿಗಳಿಗೆ ಪ್ರಬೋಧನೆ ಕೊಟ್ಟು, ಅವರಿಗೆ ಸಂಕಟದ ಮಡುಗಳಲ್ಲಿ ಸಿಲುಕಿಸಹಾಕುವದು ಅಕ್ಷಮ್ಯ ಅಪರಾಧವು, ತಮ್ಮ ಪ್ರಜಾಪರಿಪಾಲನ ಕಾರ್ಯದ ದ್ರೋಹವು. ಈ ಹಕೀಕತಿನ ಮೇಲಿಂದ ಬಂಗಾಲದಲ್ಲಿ ನಡೆದ ರಾಜ್ಯಕ್ರಾಂತಿಯು ಹಲವು ಪೋಲೀಸರ ಇಂಥ ವಿಶ್ವಾಸಘಾತಕ ಪ್ರಯತ್ನಗಳಿಂದಲೇ ಉಂಟಾಗಿರುವದೆಂದು ಕೇಳಿದರೆ, ವಸ್ತುಸ್ಥಿತಿಯು ವಿಪರ್ಯಾಸವಾದೀತೇನು?

ಸ್ಥಾನಿಕ ವೃತ್ತಾಂತ

ಕುಮಟಾ— ಈ ವಾರದಲ್ಲಿ ಬಹಳ ಗಾಳಿ ಬೀಸಿತು. ಮಳೆಯೂ ಹನಿಸಿತು. ಈಗ ಚಳಿಗಾಳಿಗೆ ಪ್ರಾರಂಭವಾಗಿದೆ. ಊರಲ್ಲಿ ಜ್ವರಾದಿ ರೋಗಗಳ ಬೀಡಿನ ಅತಿಶಯ ದಿನವು ಇಳಿಯುತ್ತಿದೆ.

ಉಪ್ಪಿನಪಟ್ಟಣದ ಪತ್ರಕರ್ತರಾದ ರಾ| ರಾಮಚಂದ್ರ ಅನಂತ ಕೈಗುಂಡರವರು ಇವರು ಉರಿಯ ಉಪ್ಪನ್ನು ತಯಾರಿಸುವರು. ಈ ಉಪ್ಪು ಬಿಳಿದಾಗಿಯೂ, ತೂಕಕ್ಕೆ ಹಗುರಾಗಿ ಬರುತ್ತದೆ. ಉಪ್ಪಿನ ಅಂಶವು ವಿಶೇಷವಿದೆ. ಇಷ್ಟಾಗಿ ಅಗ್ಗ!! ಜನರಿಗೆ ಈ ಉಪ್ಪು ವಿಶೇಷ ಪ್ರಿಯವಾಗಿದೆ. ಇಲ್ಲಿಯ ಉಮೇದುದಾರರು ಈ ಉಪ್ಪನ್ನು ತಯಾರಿಸಿ ಜನರಿಗೆ ಉಪಕಾರ ಮಾಡಬೇಕು.

ಕಾಗಾಲದ ಅಲ್ಲಿ ಸುಕೇಶು ಎಂಬ ಹುಡುಗಿಯು ಕತ್ತಿಗೆಗೆ ಹಗ್ಗ ಕಟ್ಟಿಕೊಂಡು ಆತ್ಮಹತ್ಯ ಮಾಡಿಕೊಂಡನು. ಇಷ್ಟು ವೈರಾಗ್ಯಪರನಾಗುವ ಕಾರಣ ತಿಳಿಯಲಿಲ್ಲ. ಇವನ ಶವವನ್ನು ತಪಾಸಿಗಾಗಿ ಹೊನ್ನಾವರದ ಡಾಕ್ಟರರ ಬಳಿಗೆ ಕಳಿಸಬೇಕಾಯಿತು.

ರಾ| ಬಾ| ಕೋಟಿ ಮುತ್ತೂರರವರು ನಮ್ಮ ಡಿಪ್ಟಿ ಕಲೆಕ್ಟರ ಅಧಿಕಾರವನ್ನು ಇದೇ ಕಳೆದ ೯ನೇ ತಾರೀಖಿಗೆ ಕಲೆಕ್ಟರರಾಗಿದ್ದ ಮಿ| ಭಿಡೇಯವರಿಗೆ ಒಪ್ಪಿಸಿ ಬೆಳಗಾವಿಗೆ ತೆರಳಿದರು. ಕಲೆಕ್ಟರರ ಸ್ಥಳದಲ್ಲಿ ಮಿ| ಮೊಂಗೊವೆ (ರಿಯವರು ಅಧಿಕಾರಾರೂಢರಾಗಿರುವರು.

ಎಗ್ಸಿಕ್ಯೂಟಿವ್ಹ ಇಂಜನಿಯರರವರು ಇಲ್ಲಿ ಇಂದು ಬಂದುಹೋಗುವರೆಂದು ಇಲ್ಲಿಯ ಹೊಳೆಗೆ ಕಟ್ಟುವ ಸಂಕದ ತನಿಖೆ ಮಾಡಲಿರುವರು. ಸಂಕದ ಕುರಿತು ಅನೇಕ ಅರ್ಜಿಗಳೂ ನಾಗರಿಕರ ನಿಷ್ಟಮಂಡಳವೂ ಇಂಜನಿಯರರ ಬಳಿಗೆ ಈ ಮುಂಚೆ ಹೋಗಿದ್ದವು. ಈ ಕುರಿತು ಇನ್ನೂ ಸಮಾಧಾನಕರ ವ್ಯವಸ್ಥೆಯಾದದ್ದು ಕಂಡುಬರುವದಿಲ್ಲ. ಪ್ರಸ್ತುತ ಪುನಃ ಇಂಜನಿಯರರ ಬೆಟ್ಟಿಯಿದೆ. ಅವರಿಗೆ ಎಲ್ಲವನ್ನು ತಿಳಿಸಿಹೇಳಿ ಮಳೆಗಾಲದಲ್ಲಿ ಹೊಳೆಯ ನೀರ ನಿರಾತಂಕವಾಗಿ ಹರಿದು ಹೋಗುವಂತೆ ಉಪಾಯ ಯೋಜನೆ ಮಾಡಹೇಳಬೇಕು.

ಜಂಗಲು ಖಾತೆಯವರು ಸರ್ವರಿಗೆ ಕೊಡಿಸಿದ ಕಟ್ಟಿಗೆಯ ಬೀಸಾಯಕ್ಕಾಗಿ ಕಟ್ಟಿಗೆ ಪೂರೈಕೆಯು ಹೊಸ ಭಯಾನಕವಾಗಿರುವದಾಗಿ ತಿಳಿಯುತ್ತದೆ. ಶಿಪಾಯಿಂದ ಜನ್ಮವು ಬಡವರು ಕಟ್ಟಿನ ಬೀಸಾಯ ಮಾಡುವ ಈ ಹೊಂಚನಾತ ಊರ ಪಾಲವನ್ನು ಪೂರೈಸಿಕೊಳ್ಳಬೇಕು.

ಜಿಲ್ಲಾ ಲೋಕಲ್ಬೋರ್ಡು ಮತ್ತು ತಾಲೂಕ ಲೋಕಲ್ಬೋರ್ಡಗಳ ಮತದಾರರ ಪತ್ರಿಕೆಗಳು ಪ್ರಸಿದ್ಧವಾಗಿವೆ. ಈ ಪತ್ರಿಕೆಗಳಲ್ಲಿ ಹೆಸರಿಲ್ಲದಿದ್ದಲ್ಲಿ ತಪ್ಪಿನಿಂದ ಹೆಸರು ಬಿದ್ದಲ್ಲಿ ಅವುಗಳ ತಿದ್ದುಪಡಿಯ ಬಗ್ಗೆ ಕಲೆಕ್ಟರರಿಗೆ ಜನವರಿ ತಾರೀಖು ೧೦ನೇದರೊಳಗೆ ಅರ್ಜಿ ಮಾಡತಕ್ಕದ್ದು. ಅರ್ಜಿಯ ಫೀ ರೂ| ಗೇಣೆ ಕೊಡುವವರ ಲೆ ತಾಲೂಕ ಲೋಕಲ್ಬೋರ್ಡ ಪತ್ರಿಕೆಯಲ್ಲಿ ದಾಖಲಾಗಲಿಕ್ಕೆ ಅಧಿಕಾರಿಗೆ ಒಂದು ರೂಪಾಯಿ ಫೀ ಯಾ ಗೇಣೆ ಕೊಡುವವರ ಹೆಸರು ಜಿಲ್ಲಾ ಲೋಕಲ್ಬೋರ್ಡ ಪತ್ರಿಕೆಯಲ್ಲಿ ದಾಖಲಾಗಬೇಕು.

ಸಂಚಾರ ಸ್ವೀಕಾರ

ವಾಗ್ಭೂಷಣ— ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಪ್ರಕಟವಾಗುವ ಮಾಸಪತ್ರಿಕೆ. ಅಕ್ಟೋಬರ ತಿಂಗಳ ಸಂಚಿಕೆ. ಸಂಪಾದಕ—ಶ್ರೀ| ಎಸ್ ಎಸ್ ಬಸವನಾಳ ಎಮ್ ಎ ಗಾರವಾಡ ವಾರ್ಷಿಕ ವರ್ಗಣಿ ರೂ ೩ ೮-೦

The Volunteer— Monthly December issue Edited and published by Dr N S Hardiker "Volunteer" office, Hubli Yearly subscription Rs 3 0 0 only

ಸುಪಾ— ಸಪೆಯಿಂದ ಠಯ ತೇಟು ಕನವಾಳ ಇವರು ಬರೆಯುವದೇನಂದರೆ — ಸುಪೆಯೊಳಗಿನ ಜನರ ತೀರ ಕೆಟ್ಟು ಹೋಗಿದೆ ಪ್ರತಿ ವರ್ಷದಲ್ಲಿ ಒಬ್ಬಿಬ್ಬರಾದರೂ ಜ್ವರದಿಂದ ಸಾಯುತ್ತಿರುವರು. ದವಾಖಾನೆಯಲ್ಲಿ ಮದ್ದಿಗೆ ಹೋದರೆ ಮದ್ದಿಗಿಂತ ಇಂಜೆಕ್ಷನ ಮಾಡಿಸಿಕೊಳ್ಳುವದು ಶ್ರೇಯಸ್ಕರವೆಂತ ಡಾಕ್ಟರರು ಹೇಳುತ್ತಾರೆ. ಇಂಜೆಕ್ಷನಕ್ಕೆ ಪ್ರತಿಯೊಂದು ಬಾರಿಗೆ ೫ ರಿಂದ ೧೦ ವರೆಗೆ ಇಂಜೆಕ್ಷನ್ ಕೊಳ್ಳಬೇಕೆಂದು ಡಾಕ್ಟರರು ಹೇಳುವದರಿಂದ ಬಡವರಿಗೆ ರೋಗಮುಕ್ತರಾಗುವದು ಕಠಿಣವಾಗುತ್ತದೆ. ಇಂಜೆಕ್ಷನ ಮಾಡಿಸಿಕೊಳ್ಳಲಿಕ್ಕೆ ಅನೇಕರು ಸಹಜವಾಗಿ ಹೆದರುತ್ತಾರೆ. ಅದರೊಳಗೂ ಇಂಜೆಕ್ಷನ ಹೊಂದಿದ ಕೆಲವರು ಸತ್ತರು. ಅದರಿಂದ ಮತ್ತೂ ಭೀತಿಯಾಗಿದೆ. ಈ ಕಾರಣಗಳ ಮೂಲಕ ಇಲ್ಲಿ ದವಾಖಾನೆಯು ಜನರಿಗೆ ಉಪಯೋಗವಾಗುವದಿಲ್ಲ. ಕಾರಣ, ಇಲ್ಲಿ ಬೇರೊಬ್ಬ ಡಾಕ್ಟರರಿಗೆ ಇಡಬೇಕೆಂದು ಜನರು ಬೇಡಿಕೊಂಡರು. ಕಲೆಕ್ಟರರು ಅರ್ಜಿಯನ್ನೇ ೩-೪ ತಿಂಗಳಾದರೂ ಪರ್ಯಾಲೋಚಿಸಲಿಲ್ಲ. ದವಾಖಾನೆಯ ಕೆಲವರು, ಇದ್ದ ಡಾಕ್ಟರರನ್ನೇ ಇಲ್ಲಿ ಇಡಬೇಕೆಂದು ಅರ್ಜಿಗಳಹಿದರಂತೆ. ಈ ಕುರಿತು ಕಲೆಕ್ಟರ ಸಾಹೇಬರು ಯೋಗ್ಯ ಚೌಕಶಿ ನಡಿಸಿ, ಸುಪೆಯ ರೈತರಿಗೆ ದವಾಖಾನೆಯ ಉಪಯೋಗವಾಗುವಂತೆ ವ್ಯವಸ್ಥೆ ಮಾಡಬೇಕು ಇತ್ಯಾದಿ ಬರೆಯುತ್ತಾರೆ.

ಸಂಕೇರಿ— ೩-೪ ದಿನಗಳ ಲಾಗಾಯ್ತು ಆಕಾಶವು ಮೋಡಗಳಿಂದ ಅಚ್ಛಾದಿತವಾಗಿ ಸೂರ್ಯದರ್ಶನವು ಅಪರೂಪವಾಯಿತು. ಮಳೆಯೂ ಹನಿಸಿತು. ನಂತರ ಧಾಂಗುಡಿ – ನೋಟರಗಾಳಿ – ಯ ಪ್ರಾದುರ್ಭಾವವಾಗಿ ಕೆಲ ಕಡೆ ಮರಗಳು ಮುರಿದು ಬಿದ್ದು ಮನೆಗಳ ಚಪ್ಪರಗಳು ನಾಶಹೊಂದಿದವು ಹಾರಿದು ಮೇಲಿಂದ ಹೋಗಲು ಸಹ ಹಾದಿಕಾರರು ಅಂಜುತ್ತಿರುವರು! ಇದು ಕ್ರೋಧನ ಸಂವತ್ಸರದ ಪ್ರಭಾವವೋ, ಕ್ಷಯ ಸಂ| ದ ಪೂರ್ವ ತಯಾರಿಯೋ?

ಹೋದ ಸೋಮವಾರ ಶ್ರೀ| ಚಂದ್ರಶೇಖರರ ಮನೆಯಲ್ಲಿ ಜರುಗಿದ ಲಗ್ನ ಸಮಾರಂಭವು ಸೂಳೆಯರ ನೃತ್ಯದ ಅಭಾವವಿದ್ದರೂ ಉಲ್ಹಾಸದಿಂದಲೇ ಕೊನೆಗಂಡಿತು. ಲಗ್ನಮಂಟಪವು ಶುಭ ತಲ್ಪ ಪಲ್ಲವಗಳಿಂದಲೂ, ಹೂಗಳಿಂದಲೂ, ರಾಷ್ಟ್ರೀಯ ಪತಾಕೆಯ ಚಿತ್ರಗಳಿಂದಲೂ, ಮಹಾತ್ಮರ ಹಾಗೂ ಇತರೇ ಪ್ರಮುಖ ದೇಶಭಕ್ತರ ಭಾವಚಿತ್ರಗಳಿಂದಲೂ, ಅಂದವಾಗಿ ಶೃಂಗರಿಸುತ್ತಿತ್ತು! ಶ್ಲಾಘ್ಯವೂ ಅನುಕರಣೀಯವೂ ಸರಿ!

ವೃತ್ತಸಾರ.

— ಮದ್ರಾಸದ "ಸ್ವದೇಶಮಿತ್ರಂ" ಪತ್ರಿಕೆಯ ವಾಚಕರು ಕೊಟ್ಟ ವರ್ಗಣಿಯಿಂದ ಮಾಡಿಸಿದ ದೇಶಬಂಧುಗಳ ಶಿಲಾಪ್ರತಿಮೆಯು ಅನಾವರಣ ಸಮಾರಂಭವು ಕಳೆದ ೮ನೇ ತಾರೀಖಿಗೆ "ಸ್ವದೇಶಮಿತ್ರಂ" ಪತ್ರಿಕೆಯ ಕಚೇರಿಯಲ್ಲಿ ಶ್ರೀ| ಗೋಸ್ವಾಮಿಯವರ ಹಸ್ತದಿಂದ ನೆರವೇರಿತು.

— ಕಳೆದ ೯ನೇ ತಾರೀಖಿಗೆ ಮುಂಬಯಿಯ ಸಿಗರಭವನದಲ್ಲಿ ನಾಗರಿಕರ ಸಭೆಯಾಗಿ ಮುಂಬಾಪುರಿಯೊಳಗಿನ ಪ್ರಜೆಗಳಿಗೆ ಔಷಧೋಪಚಾರದ ವ್ಯವಸ್ಥೆಯನ್ನು ಹಚ್ಚಿಸಲು ಕಮಿಟಿಯೊಂದು ನೇಮಕಗೊಂಡಿತು. ಪ್ರಾಧ್ಯಾಪಕರು ಅಧ್ಯಕ್ಷರಿದ್ದರು. ಈ ನಿಧಿಗೆ ೫೦೩೬೦೫ ರೂಪಾಯಿಗಳು ಬಂದಾಗಿವೆ.

— ಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರಾದ ಸರ್ ಜಗದೀಶಚಂದ್ರ ಬೋಸರವರಿಗೆ ರಾಷ್ಟ್ರಸಂಘದವರು ಜಿನೀವಾದಲ್ಲಿ ನೆರೆಯ ಲಿಕ್ಕಿದ್ದ ವಿದ್ವಜ್ಜನರ ಸಭೆಗೆ ನಿಮಂತ್ರಿಸಿರುವರು.

— ಪತಿಯಾಲಾ ಮಹಾರಾಜರವರ ಮುಂಬಯಿಯಿಂದ ಪತಿಯಾಲಾಕ್ಕೆ ಹೋಗಿ ಮರಳಿದರೆಂದು ಕಳವಾಯಿತ. ಈ ಟ್ರೇನಿನಲ್ಲಿ ಬೆಳ್ಳಿಯ ಹಾಗು ಬಂಗಾರ ಗಡಿಯಾರಗಳೂ, ಮುತ್ತು ರತ್ನಾದಿಗಳೂ ಇದ್ದವು ೫೦-೬೦ ಸಾವಿರ ರೂಪಾಯಿಗಳ ಸಾಮಗ್ರಿ!!

— ಮದ್ರಾಸದ ಸೌಥ ಇಂಡಿಯನ ರೇಲ್ವೆಯ ಕಡ್ಡಕೋಟೆಯ ಸ್ಟೇಶನಿನ ಬಳಿ ವಿಪರೀತ ಮಳೆ ಸುರಿದು ಆಗಿಬಂಡಿಯ ಮಾರ್ಗ ಕುಸಿದು ಬಿತ್ತು. ಆಗಿಬಂಡಿ ಏಳು ಬಂಡಿಗಳು ಕಳಚಿ ಬಿದ್ದು, ೮ ಜನರು ೨೧ ಮಂದಿಗಳಿಗೆ ಗಾಯಗಳಾದವೆ

[illegible]ದಲ್ಲಿ ನೀರಕ್ಷ ಕೇಶೋ ಎಂಬ ಹೆಂಗ[illegible] ತಲೆಕೆರೆದುಕೊಂಡ ಹೆಂಗ ಸತ್ತಿದನು. [illegible] ವರ್ಷ ಪ್ರಾಯದ ಆವಳ ಮಗನಿದ್ದನು. [illegible] ಹಿಡಿದನು. [illegible] ಮೃತಿಯನ್ನೈದಿದಳು. ಹೆಂಗ[illegible]ವುದುಕ್ಷಳಿತ್ತಿರುವದು!

[illegible]ಯಲ್ಲಿ ಮದ್ಯಪಾನ ಪ್ರತಿಬಂಧವಿದೆ. [illegible] ಹೆಂಗಸರು [illegible] ಮದ್ಯವನ್ನು [illegible] ಹೆಂಗಸರು [illegible]

[illegible]ನಲ್ಲಿ ನೀರಕ್ಷೆಗೆ ಸಂಸ್ಕೃತ ಪಾಠಶಾಲೆ[illegible] ಸ್ಥಾಪನೆಯಾಗುವದಿದೆ. [illegible] ಪಂಡಿತ ಸದಾಶಿವ ಶಾಸ್ತ್ರಿ ಸ್ವಾಮಿಗಳವ[illegible] ಶ್ರೀಸ್ವಾಮಿಗಳು [illegible] ರೂಪಾಯಿಗಳನ್ನರ್ಪಿಸಿರುವರು. [illegible] ಲಕ್ಷ ರೂಪಾಯಿಗಳನ್ನರ್ಪಿಸಿರುವರು [illegible] ಎಕರೆ ಹೊಲವನ್ನರ್ಪಿಸಿರುವರು.

[illegible] ವಲ್ಲಭಭಾಯಿ ಪಟೇಲ ಮೊದಲಾದ [illegible] ನಾಯಕರು ಮಹಾತ್ಮರಿಗೆ ೩ ಲಕ್ಷ ರೂಪಾಯಿಗಳ[illegible]ನ್ನು ಅರ್ಪಿಸಲು ತಯಾರು ಮಾಡಿರುವರು.

[illegible]ಲ್ಲಿ ಕಳೆದ ಆನೇ ತಾರೀಖಿಗೆ ಮ್ಯುನಿಸಿಪಲ್ [illegible] ವೆಂದು ಪ್ರತಿಪಾದನದಲ್ಲಿ [illegible], ನಾಲ್ವರಿಗೆ ಗಾಯಗಳಾ[illegible]

ಈ ವರುಷ [illegible] ೩ ಕೋಟಿ ರತ್ತಲು [illegible] ಹೆಚ್ಚು [illegible]

ಮುಂಬಯಿಯಲ್ಲಿ ಪ್ರತಿವರ್ಷ ನಡೆಯುವ ಕ್ರಿಕೆಟ್ [illegible] ನಡೆದವು. ನಾಲ್ವರು [illegible] ತ್ರಾರ ಮೊಟ್ಟಮೊದಲು, ಮುಸಲ್ಮಾನರೂ, ಯುರೋಪಿ[illegible] ಯುರೋಪಿಯನ್ [illegible] ಬಳಿಕ, ಹಿಂದೂಗಳೂ, ಪಾರ್ಸಿಗಳೂ [illegible] ಹಿಂದೂಗಳು ಗೆದ್ದರು [illegible] ಹಿಂದೂ-ಯುರೋಪಿಯನ್ನರೊಳಗೆ [illegible] ಹಿಂದೂಗಳು ಗೆದ್ದು, ಈ ವರುಷ [illegible] ಅಗ್ರಸ್ಥಾನವನ್ನು ಪಡೆದರು.

[illegible] ಶಾಸನಸಭೆಯಲ್ಲಿ [illegible] ಅಯ್ಯಂಗಾರರ [illegible] ಆಫ್ ಇಂಡಿಯಾ ಬಿಲ್ [illegible] ಸ್ವರಾಜ್ಯ[illegible] ಸೂಚಿಸುವದರಿದ್ದಾರೆ. [illegible] ಸಮರ್ಥಿಸುವ [illegible] ಸರ್ಕಾರ ಪಕ್ಷದ [illegible]

— ಮುಖ್ಯಾಂತ ಹಾಕದ್ದು [illegible] ರತ್ತಲು [illegible] ದಿನಗಳಲ್ಲಿ [illegible] ರತ್ತಲು [illegible] ಪತ್ರಿಕೆಯಲ್ಲಿ ಪ್ರಕಟಿಸುವರು.

— ಕಳೆದ ವಾರದಲ್ಲಿ [illegible] ಪ್ರಾಂತದಲ್ಲಿ [illegible] ಬುಧವಾರದೊಳಗೆ ೩ ದಿನ ಹೆಚ್ಚಿಲ್ಲದೆ [illegible] ನರಿಯಿತು [illegible]

— [illegible] ಕಾಲೇಜಿನೊಳಗಿನ [illegible] ಲಕ್ಷಣಗಳಿವೆ. [illegible] ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇರಿ[illegible]ರುವರು.

ಸನಾತನಿಗಳ ಸಂಘಟಣೆ.

(ಅನೇಕ ವಾಣಿನಿಂದ ಮುಂದರಿದಿದ್ದು.)

ದವು ನಾವು ಪ್ರವೇಶದ್ವಾರವನ್ನು ಮುಚ್ಚಿ ಹಾಕಿರುವವು [illegible] ದ್ವಾರವು [illegible] ಇದ್ದಕ್ಕಿದ್ದ ಹಾಗೆಯೇ ಇದೆ. ಇದರಿಂದ ಸನಾತನ ಧರ್ಮಕ್ಕೆ [illegible] ಹಾನಿ ತಟ್ಟಿದೆ. ಶುದ್ಧಿಯು [illegible] ಸನಾತನ ಧರ್ಮದ ಪ್ರವೇಶ ದ್ವಾರವನ್ನು ಪುನಃ ತೆರೆಯು[illegible] ಈ ವಿಷಯದ ಮೇಲೆ ಇವರ ಭಾಷಣಗಳಾದ ಬಳಿಕ [illegible] ಬಳಿಕ, [illegible] ಸಂವರ್ಧನದ ಠರಾವನ್ನು ಸೂಚಿಸಿ [illegible] ಇಷ್ಟಕ್ಕೆ ರವಿವಾರದ ಕಾರ್ಯವು [illegible]

ಸೋಮವಾರದ ಹಕೀಕತು

ಸೋಮವಾರ ಸಾಯಂಕಾಲ ೫ ಘಂಟೆಗೆ ಪುನಃ ಅಧಿವೇಶನಕ್ಕೆ ಪ್ರಾರಂಭವಾಯಿತು. [illegible] ಬಳಿಕ, ಠರಾವುಗಳು [illegible] ವಿಧವಾ [illegible] ಅವರಿಗೆ ಸಮುಚಿತ ಪ್ರಕಾರದ ಶಿಕ್ಷಣವನ್ನು [illegible], ಹುಡುಗರಿಗೆ [illegible] ಸನಾತನ [illegible] ವಿಧವೆಯರ ದುಸ್ಥಿತಿಯನ್ನು ಲಕ್ಷಿಸಿ, ಅವರ ಹೀನಸ್ಥಿತಿಯನ್ನು ನಿವಾರಿಸುವದಕ್ಕೆ [illegible] ಅನಾಥ ವಿಧವೆಯರಿಗೆ [illegible] ಅನಾಥಾಲಯ ಗಳನ್ನು [illegible] ಅನಾಥ ವಿಧವೆಯರಿಗೆ [illegible] ಶಿಕ್ಷಣ [illegible] ಅನಾಥಾ[illegible] ಐಕ್ಯಸಂವರ್ಧನ [illegible] ಹಿಂದಿನ ಕಾಲದಂತೆ [illegible] ಪ್ರತಿನಿಧಿ [illegible] ಕೌನ್ಸಿಲಿನಲ್ಲಿ ಹೆಚ್ಚು ಪ್ರತಿನಿಧಿಗಳನ್ನು ಸರಕಾರವು ಕೊಡಬೇಕೆಂದು ಠರಾವಾಯಿತು.

ಇಷ್ಟಾದ ಬಳಿಕ, ಲಾಲಾ [illegible] ಸಮಾರೋಪ ಮಾಡಿದರು. ಮುಂಬಯಿ [illegible] ಪ್ರತಿನಿಧಿಗಳನ್ನು ನೋಡಿ ನನಗೆ ಬಹಳ ಆನಂದವಾಗುತ್ತದೆ. ಸನಾತನ ಸಮಾಜವು ಎಚ್ಚತ್ತಿರುವದೆಂದು ನಾನು [illegible] ಹೇಳುತ್ತೇನೆ. ಹಿಂದೂ ಮಹಾಸಭೆಯ ಕಲ್ಪನೆಯು ಸನಾತನಿಗಳಿಗೆ ಸಮ್ಮತವಿದೆಂದು ಇದರಿಂದ ಸಿದ್ಧವಾಗುತ್ತದೆ. ಮುಸಲ್ಮಾನರು [illegible] ಪ್ರತಿನಿಧಿ ಪದ್ಧತಿಯನ್ನು ಪ್ರಾರಂಭಿಸಿ, ದೇಶದ [illegible] ರಾಷ್ಟ್ರೀಯ ಅನ್ಯಾಯವನ್ನು ಮಾಡಿರುವರು. ದಿನ [illegible] ಮುಸಲ್ಮಾನರ ಪ್ರವೃತ್ತಿಯು

[illegible]ಆಗುತ್ತಿದೆ. ಕೆಲವರು ಮುಸಲ್ಮಾನ ರಾಜ್ಯಕ್ಕಾಗಿ ಬಡಿದಾಡುತ್ತಿದ್ದರೆ, ಇನ್ನು ಕೆಲವರು ಇಸ್ಲಾಮು ರಾಜ್ಯಕ್ಕಾಗಿ ಬಡಿದಾಡುತ್ತಿರುವರು. ಮುಸಲ್ಮಾನರು ರಾಜ್ಯದಲ್ಲಿ ರಾಜ್ಯಾಧಿಕಾರವು ಸಂಪೂರ್ಣವಾಗಿ ಮುಸಲ್ಮಾನರಲ್ಲೇ ಇರುವುದು [illegible] ಇಸ್ಲಾಮು ರಾಜ್ಯದಲ್ಲಿ ಮುಸಲ್ಮಾನರ ಪ್ರಭುತ್ವದ ವಿಚಾರವಿದ್ದರೂ, ಇತರ ಸಮಾಜದವರಿಗೆ [illegible] ಎರಡರಲ್ಲಿ [illegible] ಇದರ ಮೇಲಿಂದ ಮುಸಲ್ಮಾನರು ರಾಷ್ಟ್ರವಿಚಾರದಿಂದ ಎಷ್ಟು ದೂರ ಮುಟ್ಟಿರುವರೆಂಬ ಕಲ್ಪನೆಯಾಗುವದು. ಹಿಂದೂ ಮಹಾಸಭೆಯವರು ರಾಷ್ಟ್ರದ್ದುಂಟಾದ [illegible] ದೇಶದ ವಿಚಾರದ ಕಲ್ಪನೆಯನ್ನು [illegible] ರಾಷ್ಟ್ರ ಕಾರಭಾರದಲ್ಲಿ ಸಮುದಾಯ ಸಮಾಜದವರು, ಸಮುದಾಯ ಸೇರಿ [illegible] ರಾಜ್ಯಕಾರಭಾರವನ್ನು ನಡಿಸಲು ಮಹಾಸಭೆಯವರು ಪ್ರಯತ್ನ ಮಾಡುವರು. ಯಾವದೇ ಸಮಾಜವು ಇತರ ಸಮಾಜಗಳ ಮೇಲೆ ಪ್ರಭುತ್ವ ನಡಿಸದಂತೆ ಹಿಂದೂ ಮಹಾಸಭೆಯವರು [illegible] ಮುಸಲ್ಮಾನರು ತಮ್ಮದೇ [illegible], ಇತರ ಸಮಾಜಗಳೆಲ್ಲ ಒಕ್ಕಟ್ಟಾಗಿ ಸ್ವರಾಜ್ಯಪ್ರಾಪ್ತಿ ಮಾಡಿಕೊಳ್ಳಬೇಕು. ಮುಸಲ್ಮಾನರು ಸೇರದಿದ್ದರೂ ಸ್ವರಾಜ್ಯಪ್ರಾಪ್ತಿ ಮಾಡಿಕೊಳ್ಳುವದು ಶಕ್ಯವಿದೆ. [illegible] ಕೋಟಿ ಪ್ರಜೆಗಳು ಒಕ್ಕಟ್ಟಾದರೆ, ಸ್ವರಾಜ್ಯಪ್ರಾಪ್ತಿಯಾಗದಿರುವದೇ? ಇತ್ಯಾದಿ [illegible] ಮಾಡಿ, [illegible] ಅಧ್ಯಕ್ಷರ ಆಭಾರ ಮನ್ನಿಸಿದ ಬಳಿಕ, ಅಧಿವೇಶನವು ಪರಿಸಮಾಪ್ತಿಯುಂಟಾಯಿತು.

ಕೋಟ್ಯಂತರ ಜನರು ಅನುಭವಿಸಿದ್ದಾರೆ !!

ಮೂರು ದಿವಸಗಳಲ್ಲಿ ಗುಣತೋರುವದು

ವಿಷಧಿಯು ಕ್ರಿಯೆ ನೋಡಿರಿ

[illegible], ರಕ್ತವೃದ್ಧಿ, ಧಾತುಪುಷ್ಟಿ, [illegible], [illegible] ಮುಖತೇಜಸ್ಸಿಗೆ

ಟ್ರೇಡ ಮಾರ್ಕ್] **ಅಗಸ್ತ್ಯ** [ರಜಿಸ್ಟರ್ಡ

ಮನ್ಮಥಚಿಂತಾಮಣಿಲೇಹ

ರಿಜಸ್ಟರ್ಡ

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು. ಮೇಹವಿಕಾರವಿದ್ದವರಿಗೂ, ನಿದ್ರೆ [illegible], [illegible] ಯುವಕರಿಗೂ [illegible] ಉಪಯೋಗವುಳ್ಳ ಪರಮಾನಂದ ವಿಷಧಿ

1 ಶೇರು ನಾಲ್ವತ್ತೆಂಟು ದಿನಕ್ಕೆ ಸೇವಿಸಬಹುದು

1 ಶೇರು ಡಬ್ಬಿ ಕಿಂಮತ್ತು 3—0—0

½ ಶೇರು ಡಬ್ಬಿ ಕಿಂಮತ್ತು 1—9—0

[illegible] ಖರ್ಚ ಪ್ರತ್ಯೇಕ. [illegible]

ಕರ್ತ:-ದೇವಣ್ಣ ನಾರಾಯಣ ಶೇಟ್,

ಸರಾಫ್, ಗೋರೇಶ್ವರ, ಮಂಗಳವಾಡ,(ಜಿ. ಕ.)

ವಿವಿಧ ಸಂಗ್ರಹ.

ಕಾನಪುರದ ಸಮಾಚಾರ

ಕಾನಪುರದಲ್ಲಿ ರಾಷ್ಟ್ರೀಯ ಸಭೆಯು ಜರಿಗುವಿನದ ತಯಾರಿಯು ಜೋರಿನಿಂದ ನಡೆದಿರುವದು. ಕಾನಪುರದೊಳಗಿನ ಹಾಗು ಸಂಯುಕ್ತ ಪ್ರಾಂತದೊಳಗಿನ ದೊಡ್ಡ ದೊಡ್ಡ ದೇಶಸೇವಕರು ಮ್ಯುನಿಸಿಪಾಲಿಟಿ ತಾಲೂಕ ಲೋಕಲ್ ಬೋರ್ಡ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಗಳ ಇಲೆಕ್ಷನಿನ ಗದ್ದಲದಲ್ಲಿ ಸೇರಿಕೊಂಡಿರುವದರಿಂದ ರಾಷ್ಟ್ರೀಯ ಸಭೆಯ ಕಾರ್ಯಕ್ಕೆ ಜನರ ಕೊರತೆ ಇರುವದು. ಮುಸ್ತರವಾಗಿದ್ದ ಇಲೆಕ್ಷನಿನ ಗದ್ದಲವು ಡಿಸೆಂಬರ ತಾ ೧೦ನೇ ತಾರೀಖಿಗೆ ಮುಗಿಯಿತು. ಇನ್ನು ಮುಂದೆ ದೇಶಸೇವಕರು ಹೆಚ್ಚಿನ ಆಸಕ್ತಿಯಿಂದ ದುಡಿಯುವರು. ಮತ್ತೊಂದು ತೊಂದರೆಯಾಗಿದೆ. ಕಾಕೋರಿ ದರೋಡೆಯ ಖಟ್ಲೆ ನಡೆದಿದೆ. ಅದರೊಳಗೆ ಅನೇಕ ವಿದ್ಯಾರ್ಥಿಗಳ ಮೇಲೆ ಆರೋಪ ಬಂದಿರುವದು. ಈ ವರ್ಷ ಕಾನಪುರದ ರಾಷ್ಟ್ರೀಯ ಸಭೆಯು ಆಗುವ ಸ್ಥಳ ಕಾನಪುರ ಶಹರದ ಹೊರಗೆ ಇರುವದು. ಕರ್ನಾಟಕಸ್ಥ ಡಾ ॥ ಹರ್ಡೀಕರರವರ ಸ್ವಯಂಸೇವಕರೊಡನೆ ಮಾತಾಡುತ್ತಿರುವರು. ಡಾ ॥ ಮುರಾರಿಲಾಲರು ಇಲ್ಲಿಯ ಮುಖ್ಯ ಕಾರ್ಯಕರ್ತರು. ದೊಡ್ಡ ವಕೀಲರು. ಅವರ ತಮ್ಮ ವಕೀಲಿಯನ್ನು ಬಿಟ್ಟುಕೊಟ್ಟು ತತ್ಪರತೆಯಿಂದ ದುಡಿಯುತ್ತಿರುವರು.

ರಾಷ್ಟ್ರೀಯ ಸಭೆಯ ಕಾರಣದಿಂದ ಪ್ರದೇಶಕ್ಕೆ ತಿಲಕನಗರವೆಂದು ನಾಮಕರಣವಾಗಿದೆ. ತಿಲಕ ನಗರವು ಗಂಗಾ ನದಿಯ ದಂಡೆಯಮೇಲಿದೆ. ಕಾನಪುರ ಸ್ಟೇಶನಿನಿಂದ ತಿಲಕ ನಗರವು ೪ ಮೈಲು ದೂರವಿದೆ. ಸ್ಟೇಶನಿನಿಂದ ೩ ಮೈಲು ದೂರ ಪ್ರತಿನಿಧಿ-ಪ್ರೇಕ್ಷಕರ ಅನುಕೂಲತೆಗಾಗಿ ತಿಲಕ ನಗರದ ಬಳಿಯಲ್ಲಿಯೇ ಗಂಗಾ ಸ್ಟೇಶನಿನ ವ್ಯವಸ್ಥೆಯಾಗುವದಿದೆ. ತಿಲಕ ನಗರದೊಳಗಿನ ಮಾರ್ಗಗಳಿಗೆಲ್ಲ ಲೋಕನಾಯಕರ ಹೆಸರನ್ನಿಟ್ಟಿರುವರು. ದೇಶಬಂಧು ಬೀದಿ, ಸರೋಜಿನಿ ಬೀದಿ, ಮಹಮ್ಮದಅಲ್ಲಿ ಬೀದಿ ಇತ್ಯಾದಿ ಬೀದಿಗಳ ಫಲಕಗಳು ಅಲ್ಲಲ್ಲಿ ರಾಷ್ಟ್ರಸೇವೆಯಿಂದ ಹೆಸರಾದವರ ಸ್ಮರಣೆ ಮಾಡಿಕೊಡುತ್ತವೆ. ರಾಷ್ಟ್ರಧ್ವಜದ ಕಟ್ಟೆಗೆ ಶ್ರೀ ನರಸೋಪಂತ ಕೇಳಕರರವರ ಹೆಸರು ಕೊಟ್ಟಿರುವರು. ಸಭಾಮಂಟಪದ ಇದಿರಿನ ಸ್ಥಳಕ್ಕೆ ಗಾಂಧಿ ಚೌಕ ಎಂಬ ಹೆಸರಿದೆ. ಈ ವರೆಗೆ ೮೦೦ ಮಂದಿ ಸ್ವಯಂಸೇವಕರು ದಾಖಲಾಗಿರುವರು. ಅವರಲ್ಲಿ ೪೦೦ ಮಂದಿಗಳು ಡಾ ॥ ಹರ್ಡೀಕರರ ನೇತೃತ್ವದಲ್ಲಿ ಶಿಕ್ಷಣ ಪಡೆದವರು. ಸಮಸ್ತ ಸ್ವಯಂಸೇವಕರು ಇದೇ ೬ರ ರವಿವಾರ ತಾ ೨೦ನೇಗೆ ಕಾನಪುರದಲ್ಲಿ ಹಾಜರಾಗುವರು. ರಾಷ್ಟ್ರೀಯ ಸಭಾಕಾರ್ಯವು ಇದೇ ೨೬ನೇ ತಾರೀಖಿಗೆ ಜರಗುವದಿದೆ.

ಪ್ರತಿನಿಧಿಗಳಿಗೆ ಬಿಡಾರಕ್ಕಾಗಿ ಡೇರೆಗಳ ಹೊಸ ಯಲ್ಪಡುವವು ವಿದ್ಯುದ್ದೀಪಗಳ ವ್ಯವಸ್ಥೆ ಚಳಿ ಬಹಳ ದಿನ ಹೋದ ಹಾಗೆ ಮತ್ತೂ ಚಳಿಯು ವಿಶೇಷವಾಗುವದು. ಪ್ರತಿನಿಧಿ-ಪ್ರೇಕ್ಷಕರು ಸಾಕಷ್ಟು ಅರಿವೆ ಅಂಚಡಿಗಳನ್ನು ಒಯ್ಯಬೇಕು.

* * *

ಕ್ಷಯ ಸಂವತ್ಸರದ ಫಲ

ಕ್ಷಯ ಸಂವತ್ಸರದ ಫಲವನ್ನು ಮಧುರೆಯ ಜ್ಯೋತಿಷ್ಯಗೋವರ್ಧನರು ಪ್ರಕಟಿಸಿರುವರು. ಶ್ರೀಧನಕ್ಕಿಂತ ಸುಖಸಂತೋಷಗಳು ಈ ವರುಷ ಮಿಗಿಲಾಗುವವು. ಎಪ್ರಿಲ್ ತಾ ೧೫ನೇಗೆ ಶನಿಯು ವೃಶ್ಚಿಕಕ್ಕೆ ಗಮನ ಮಾಡುತ್ತಾನೆ. ಅದರಿಂದ ಅರಸರಿಗೆ ಕ್ಷೇಮವಿದೆ. ದೇಶದೇಶಗಳೊಳಗೆ ನಡೆದಿರುವ ವಿರೋಧಬುದ್ಧಿಯು ಅಂತ್ಯವಾಗುವದು. ಗುರುವು ಮಕರಕ್ಕೆ ಚಲಿಸುವದರಿಂದ ಈ ವರುಷ ಬ್ರಾಹ್ಮಣರಿಗೆ ಸ್ವಧರ್ಮಾಚಾರದಲ್ಲಿ ಮಮತೆಯಿಲ್ಲ. ಕ್ಷತ್ರಿಯರಿಗೆ ಕ್ಷೇಮವಿಲ್ಲ. ಅವರು ತಮ್ಮ ತಮ್ಮೊಳಗೆ ಜಗಳಗಂಟರಾಗುವರು. ಬ್ರಿಟಿಶ ಸರಕಾರದ ಭಾಗ್ಯವೇನೋ, ಹೆಚ್ಚುವದಂತೆ. ಇನ್ನು ಕೆಲವು ಪ್ರದೇಶವೂ ಅವರ ಸ್ವಾಧೀನವಾಗುವದಂತೆ.

* * *

ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮೀಟಿ.

ಕಳೆದ ರವಿವಾರ ತಾ ೨೯ನೇಗೆ ಗದಗಿನಲ್ಲಿ ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮೀಟಿಯ ಸಭೆ ಸೇರಿತು. ಸಭೆಗೆ ನಮ್ಮ ಜಿಲ್ಲೆಯಿಂದ ಯಾರೂ ಹೋಗಿರಲಿಲ್ಲ. ಶ್ರೀ ದೇಶಪಾಂಡೇ ಗಂಗಾಧರರಾಯರು ಅಧ್ಯಕ್ಷರಾಗಿದ್ದರು. ೩ ದಿನ ವರುಷಕ್ಕೆ ಕರ್ನಾಟಕಭೂಷಣರಾದ ಶ್ರೀ ಶ್ರೀನಿವಾಸರಾವ ಕೌಜಲಗಿಯವರು ಅಧ್ಯಕ್ಷರಾಗಿ ನಿಯೋಜಿಸಲ್ಪಟ್ಟರು. ಧಾರವಾಡದ ಶ್ರೀ ಜೋಶಿ ವಿನಾಯಕರಾಯರು ಹಾಗು ಬಳ್ಳಾರಿಯ ಶ್ರೀ ಬೆಳ್ಳೂರಿ ಭೀಮರಾಯರು ಉಪಾಧ್ಯಕ್ಷರಾಗಿಯೂ ಶ್ರೀ ಬಿ ಎಸ್ ಹನುಮಂತರಾಯ (ಬಳ್ಳಾರಿ, ಕೆಂಭಾವಿ ಮಧ್ವರಾವ, (ಧಾರವಾಡ) ಹುಯಿಲಗೋಳ ವೆಂಕಟರಾವ (ಧಾರವಾಡ) ಇವರು ಕಾರ್ಯದರ್ಶಿಗಳಾಗಿಯೂ, ಡಾ ॥ ಉಮಚಗಿಯವರು ಕೋಶಾಧ್ಯಕ್ಷರಾಗಿಯೂ ಶ್ರೀ ಪೂಜಾರರವರು ಲೆಕ್ಕ ತಪಾಸಕರಾಗಿಯೂ ನೇಮಿಸಲ್ಪಟ್ಟರು. ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಗೂ, ಕಾನಪುರದಲ್ಲಿ ಜರುಗಲಿಕ್ಕಿದ್ದ ರಾಷ್ಟ್ರೀಯ ಸಭೆಗೂ ಪ್ರತಿನಿಧಿಗಳು ಆರಿಸಲ್ಪಟ್ಟರು. ಕರ್ನಾಟಕದ ಏಕೀಕರಣ ಕಾರ್ಯಕ್ಕೆ ೩ ಸಾವಿರ ರೂಪಾಯಿಗಳು ಆ ಕೊಡಲ್ಪಟ್ಟವು ಮೊಟಕಾದಲ್ಲಿ ನಿರ್ಣಯಿಸಿದಂತೆ, ರಾಷ್ಟ್ರೀಯ ಸಭೆಯ ಖಾದಿಯ ವ್ಯವಸ್ಥೆಯು ಮಹಾತ್ಮರ ನೂಲುವ ಸಂಘಕ್ಕೆ ವಹಿಸಲ್ಪಟ್ಟಿತು. ಖಾದಿ ಕಾರ್ಯಕ್ಕಾಗಿ ಪ್ರಾಂತಿಕ ಮಂಡಳದವರೊಡನೆ ೯೦ ಸಾವಿರ ರೂಪಾಯಿ ಗಳಿರುವವು. ಅವುಗಳಲ್ಲಿ ೫೦ ಸಾವಿರ ರೂಪಾಯಿಗಳನ್ನು ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಗೆ ಒಪ್ಪಿಸಬೇಕು. ಬಾಕಿ ಉಳಿಯುವ ೪೦ ಸಾವಿರ ರೂಪಾಯಿಗಳನ್ನು ಖಾದಿ ಪ್ರಸಾರಕ್ಕಾಗಿ ವಿನಿಯೋಗಿಸಬೇಕೆಂದು ಗೊತ್ತಾಯಿತು. ದೇಶಭಕ್ತ ಗಂಗಾಧರರಾಯರು ಖಾದಿಯ ಮಹತ್ವವನ್ನು ಚನ್ನಾಗಿ ತಿಳಿಸಿಕೊಟ್ಟರು. ಈ ಕುರಿತು ಗಂಗಾಧರರಾಯರು ಸತ್ಯಾಗ್ರಹಾಶ್ರಮಕ್ಕೆ ಹೋಗಿ ಸ್ವತಃ ಅನುಭವ ಪಡೆಕೊಂಡು ಬಂದಿರುವರು.

* * *

ಜಿಲ್ಹಾ ಕೊಂಗ್ರೆಸ ಕಮೀಟಿ.

ನಮ್ಮ ಜಿಲ್ಹಾ ಕೊಂಗ್ರೆಸ ಕಮೀಟಿಯ ವಾರ್ಷಿಕ ಸಭೆಯು ಶ್ರೀ ಗೋಕರ್ಣ ಕ್ಷೇತ್ರದಲ್ಲಿ ಕಳೆದ ತಾ ೬ನೇ ರವಿವಾರಕ್ಕೆ ಸೇರಿತು. ಶ್ರೀ ಶ್ರೀಪಾದರಾವ ಕಲ್ಯಾಣಪುರಕರರು ಅಧ್ಯಕ್ಷರಾಗಿದ್ದರು. ಜಿಲ್ಹಾ ಕೊಂಗ್ರೆಸ ಕಮೀಟಿಯ ಕಚೇರಿಯು ಹೊನ್ನಾವರದಲ್ಲಿರಿಸಬೇಕೆಂದು ಗೊತ್ತಾಗಿ, ಆರಿಸಿದ ಮಂಡಳದ ನೇಮಣೂಕಿಯಾಯಿತು. ಅಧ್ಯಕ್ಷ- ಶ್ರೀ ಎಮ್ ಬಿ ಕರ್ಣಿ ಉಪಾಧ್ಯಕ್ಷ- ಶ್ರೀ ಎಸ್ ಎಸ್ ಶಾಸ್ತ್ರಿ, ಪಿ ಪಿ ಕೊಪ್ಪೀಕರ, ಕಾರ್ಯದರ್ಶಿ- ಶ್ರೀ ಎಮ್ ಪಿ. ನಾಡಕರ್ಣಿ, ಬಿ. ಎಸ್. ಕೆಪ್ಪಿಕರ, ಕೋಶಾಧ್ಯಕ್ಷ ಶ್ರೀ ಎಲ್. ಕೆ. ಧ್ಯಾನಭಾಗ. ಕಾರ್ಯಕಾರಿ ಮಂಡಳದ ಸಭಾಸದರು ಆರಿಸಲ್ಪಟ್ಟರು; ಕಾನಪುರ ಕೊಂಗ್ರೆಸ ಪ್ರತಿನಿಧಿಗಳು ಆರಿಸಲ್ಪಟ್ಟರು. ಪ್ರಾಂತಿಕ ಕೊಂಗ್ರೆಸ ಕಮೀಟಿಗೆ ಮೆಂಬರರ ನೇಮಣೂಕಿಯಾಯಿತು.

* * *

ವಿಚಿತ್ರ ವೃಕ್ಷಗಳು!

ಅಮೇರಿಕೆಯ ಬಾರ್ಬಾಡೋಸ್ ಎಂಬ ನಡುಗಡ್ಡೆಯಲ್ಲಿ ವಿಚಿತ್ರ ಮರಗಳಿವೆ. ಇವುಗಳ ಎಲೆಗಳ ಆಕಾರವು ವಿಶೇಷ ನಮೂನೆಯದು. ಎಲೆಗಳ ಒಂದು ಕುಗ್ಗಲು ಸೀಳಿಕೊಂಡಿದೆ. ಇದರಿಂದ ಗಾಳಿ ಬೀಸಿದೊಡನೆ ಈ ಮರಗಳ ಎಲೆಗಳಿಂದ ಸಿಳ್ಳು (ಸ್ವರ) ಹೊರಡುತ್ತದೆ. ಬಹು ದೊಡ್ಡ ಸಿಳ್ಳು! ಅಪರಿಚಿತರು ಈ ಸಿಳ್ಳು ಕೇಳಿ ಬೆಚ್ಚುಗುವರು!

* * *

ಹೊಸ ಗಡಿಯಾರ!

ಗಡಿಯಾರದಲ್ಲಿ ಮತ್ತೊಂದು ಸುಧಾರಣೆಯಾಗಿದೆ. ಈಗಿನ ಗಡಿಯಾರಗಳಿಗೆ ಮುಳ್ಳುಗಳಿವೆ. ಮುಳ್ಳುಗಳ ಮೇಲಿಂದ ಹೊತ್ತು ತಿಳಕೊಳ್ಳುತ್ತಾರಷ್ಟೇ. ಹೊಸ ಗಡಿಯಾರದಲ್ಲಿ ಮುಳ್ಳುಗಳಿಲ್ಲ. ಮಿನಿಟುಗೊಂದಾವರ್ತಿ ಗಡಿಯಾರದ ಡಾಯಲ್ಲಿನ ಮೇಲೆ ಅಂಕಿಗಳು ತೋರುತ್ತಿವೆ. ಇನ್ನೊಂದು ಮಿನಿಟಿಗೆ ಆ ಅಂಕಿಗಳು ಹೋಗಿ, ಹೊಸ ಅಂಕಿಗಳು ತೋರುತ್ತಿವೆ. ೮ ಘಂಟೆ ೧೦ ಮಿನಿಟು ಆದರೆ, ಗಡಿಯಾರದ ಮೇಲೆ ಹೀಗೆ ೮/೧೦ ಕಾಣುತ್ತದೆ. ಈ ವ್ಯವಸ್ಥೆಯಿಂದ ಚಿಕ್ಕ ಮಕ್ಕಳಿಗೆ ಹೊತ್ತು ತಿಳಕೊಳ್ಳಲು ಅನುಕೂಲವು. ಈ ಗಡಿಯಾರವು ವಿದ್ಯುಚ್ಛಕ್ತಿಯ ಬಲದಿಂದ ನಡೆಯುತ್ತದೆ.

— ಡಾ ॥ ಸಯ್ಯದ ಮಹಮ್ಮದ ಕಾಸಿಮ ಎಂಬುವರು ನಿಜಾಮ ಹೈದರಾಬಾದದ ನಿವಾಸಿಕರು. ಅವರ ಬಳಿ ಪ್ರಚಂಡ ಪ್ರಾಚೀನ ಗ್ರಂಥಸಂಗ್ರಹವಿದೆ. ಆ ಗ್ರಂಥಾಲಯವನ್ನು ಮಾರಿಬಂದ ಹಣದಿಂದ ವಿಜಾಪುರದಲ್ಲಿ ಒಂದು ಶಿಕ್ಷಣಾಲಯವನ್ನಿಡಲು ಡಾ ॥ ಸಯ್ಯದ ಮಹಮ್ಮದರು ಸಂಕಲ್ಪ ಮಾಡಿರುವರು. ಈ ಗ್ರಂಥಾಲಯದಲ್ಲಿ ಅರಬಿ, ಫಾರಸಿ, ಸಂಸ್ಕೃತ, ತೆಲಗು, ಕನ್ನಡ ಭಾಷೆಯ ಗ್ರಂಥಗಳಿವೆ. ಧರ್ಮ, ತತ್ವಜ್ಞಾನ, ವೈದ್ಯಶಾಸ್ತ್ರ ಇತ್ಯಾದಿ ವಿವಿಧ ವಿಷಯಗಳು ಚರ್ಚಿಸಲ್ಪಟ್ಟಿವೆ. ಅಮೇರಿಕೆಯ ಗೃಹಸ್ಥರೊಬ್ಬರು ಈ ಸಂಗ್ರಹವನ್ನು ೧೬ ಲಕ್ಷ ರೂಪಾಯಿಗಳಿಗೆ ಕೇಳಿರುವರು. ಅಂಥ ಅಪೂರ್ವ ಗ್ರಂಥಸಂಗ್ರಹವನ್ನು ಭಾರತೀಯರೇ ಕೊಳ್ಳುವದು ಪ್ರಶಸ್ತವು.

— ಮಲಬಾರದಲ್ಲಿ ಸ್ವಾಮಿ ಶ್ರದ್ಧಾನಂದರವರು ಶುದ್ಧೀಕರಣವನ್ನು ಭರದಿಂದ ನಡಿಸಿದರು. ಕೋಣಮಾಡಿಯ ೨೦೦ರ ಮಂದಿಗಳನ್ನು ಪುನಃ ಹಿಂದೂ ಧರ್ಮದಲ್ಲಿ ಸೇರಿಸಿಕೊಂಡರು. ಇವರು ಕ್ರಿಸ್ತಿ ಧರ್ಮಕ್ಕೆ ಸೇರಿದ್ದರು.

धातु क्षीणता व कमजोरपणा यांसाठीं

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करितात. पचन शक्ति सुधारून परमाकडे माफ होते. त्याचप्रमाणें प्रत्येक प्रकारची अशक्तता दूर होऊन शरीर तेजदार व बलवान होतें. किं. ४० गोळ्यांच्या डबीस रु १.

रमण विलासिनी गोळ्या. रात्रौ फक्त १ गोळी दुधाबरोबर खाल्यानें इच्छेप्रमाणें वीर्यस्तंभन होते. किं. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पावून खरें पुरुषत्व प्राप्त होतें. किं. डबीस रु. १.

कुमटा एजंट :— माधव सांतप्पा शेणवी वेलेकेरी.

राजवैद्य नारायणजी केशवजी ब्रँच:— १२३ काळबादेवी रोड मुंबई . २.

ಸುಗಂಧಿ ತಾಂಬೂಲೀ ಜರ್ದಾ!

ಉತ್ತಮ ತಂಬಾಕ ತಳಿಯಿಂದು ಅದಕ್ಕೆ ಅನುಕೂಲ ಪದಾರ್ಥಗಳ ಮತ್ತು ಸುಗಂಧದ ವನಸ್ಪತಿಗಳ ಅರ್ಕದ ಒಗೆದುಕೊಟ್ಟು ತಾಂಬೂಲೀ ಜರ್ದಾ ತಯಾರ ಮಾಡಿರುವದು. ಇದು ತಿನ್ನಲಿಕ್ಕೆ ಅಡಕವಿದ್ದು ಸುವಾಸಿಕವಿರುತ್ತದೆ. ಇದರ ಸೇವನೆಯಿಂದ ಬಾಯಿಯು ಹೊಲಸು, ಹಲ್ಲು ನೋವು, ಮುಖ ದುರ್ವಾಸನೆ ಹೋಗಿ ಹಲ್ಲುಗಳು ಒಳ್ಳೇ ಗಟ್ಟಿಯಾಗುತ್ತವೆ. ಇದರ ಸೇವನೆಯಿಂದ ಧಮ್ಮು ಮುಂತಾದ ವಿಕಾರಗಳುಂಟಾಗುವ ಭೀತಿಯು ಸಹ ಇಲ್ಲ. ಅದ್ದರಿಂದ ತಂಬಾಕ ಸೇವಿಸುವ ರಸಿಕರು ಅವಶ್ಯವಾಗಿ ಅನುಭವ ತಕ್ಕೊಳ್ಳಬೇಕು. ಬುಡ್ಡಿಗೆ ಕಿಂ. ರೂ. ೦ ೦-೬, ಡಜನಕ್ಕೆ ೦-೯-೦, ೧೦೦ಕ್ಕೆ ರೂ. ೩-೦-೦, ಸಾವಿರಕ್ಕೆ ರೂ. ೮-೦-೦, ೧೦೦೦ಕ್ಕೆ ರೂ ೧೫-೦-೦. ಟಪಾಲ, ಪೆಕಿಂಗ ಖರ್ಚು ಬೇರೆ ಬೀಳುವದು. ವಿಶೇಷ ಮಾಹಿತಿ ಬಗ್ಗೆ ಕೆಳಗಿನ ಪತ್ತೆಯ ಮೇಲೆ ಪತ್ರವ್ಯವಹಾರ ಮಾಡಿದರೆ ಜರೂರ ಉತ್ತರ ಕೊಡಲ್ಪಡುವದು.

ಪತ್ತೆ:— ಎಸ್. ಬಿ. ಕದಂ,

ಬೀಡಿ ಮತ್ತು ತಂಬಾಕು ಜರ್ದಾ ದುಕಾನ.

ಮು: ಪೋ: ನಿಪ್ಪಾಣಿ, ಜಿ. ಬೆಳಗಾಂವ

ದರ ಕಡಿಮೆ ಮಾಡಿರುವೆವು! ಸುಸಂಧಿ!!

ನಮ್ಮ

ಸುಪ್ರಸಿದ್ಧ

ಇಂಗ್ಲಿಷ ಮೋಡ

ನಾಯಕಲ

ವೆಲಿಂಗ್ಟನ

ಸಾಯಕಲ ಮತ್ತು ಮೋಟಾರ ಕಂಪನಿ, ಹೊರ್ನಬೀ ರೋಡ, ಮುಂಬಯಿ ನಂಬರ ೧

ಆರ್ಸೆನಲ ರೋಡ, ಪುಣೆ.

ರೋಗದಿಂದ ನರಳ ಬೇಡಿರಿ!

ನಮ್ಮಲ್ಲಿ ಪಂಡು ಗುಲಾಬು, ಪಿತ್ತ ಗುಲಾಬು, ಎಲ್ಲ ತರದ ಜ್ವರ, ಜ್ವರಗಳ್ಳಿ, ಛಳಿಜ್ವರ, ಕಾಮಿ ಜ್ವರಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಮಲಬದ್ಧತೆ, ಮೂಲವ್ಯಾಧಿ, ನರ, ವಾತ, ಅತಿಸಾರ, ಪ್ರದರ ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ (ಗಮಿ.) ಬಾಲಗ್ರಹ ಇತ್ಯಾದಿ, ಗಾಯಗಳಿಗೆ ಖಂಡಿತ ಗುಣ ಬರುವ ಜರ್ಮನ, ಅಮೇರಿಕನ, ಫ್ರೆಂಚ ಇಂಗ್ಲಿಷ ಮತ್ತು ದೇಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು.

ಇದಲ್ಲದೆ ಎಲ್ಲ ತರದ ಸ್ಟೇಶನರಿ, ಪರ್ಫ್ಯುಮರಿ ಸ್ಕೂಲ ಸಾಮಾನು, ಹಿಲ್ಡಿಸ್ಮಿಡ್ಡ್ಲ, ಸುಧಾರಿತ, ಮೋರಿಸ ಮೋಟಾರ ಬಂಡಿಗಳು, ಸವಲತಿನ ದರದಿಂದ ಸಿಗುವವು. ನಮ್ಮಲ್ಲಿದ್ದ ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡಲಾಗುವದು.

ಎಸ್ ಎಲ್ ಧಾಕಪ್ಪ ಮತ್ತು ಬ್ರದರ,

ಶಿರಸಿ.

"ಲೋಕರಹಸ್ಯ"

ಈ ಕನ್ನಡ ಮಾಸ ಪತ್ರಿಕೆಯಲ್ಲಿ ವ್ಯಾಪಾರಸ್ಥರಿಗೆ ವ್ಯಾಪಾರದ ವಿಚಾರ, ರೈತರಿಗೆ ಕೃಷಿಯ ಅತ್ಯುತ್ತಮ ಮಾರ್ಗಗಳು, ಸ್ತ್ರೀಯರಿಗೆ ಗೃಹಕೃತ್ಯದ ವಿಚಾರಗಳು, ಬಡವರಿಗೆ ಹಣ ಸಂಪಾದನೆಯ ಸುಲಭ ಮಾರ್ಗಗಳು, ರಸಿಕರಿಗೆ ವಿನೋದದ ವಿಚಾರಗಳು, ಪ್ರತಿಒಬ್ಬರಿಗೂ ಬೇಕಾದ ರಾಜಕೀಯ ವಿಚಾರಗಳು, ವೈದ್ಯ ಭಾಗಗಳು, ಜ್ಯೋತಿಷ್ಯ, ಕಾನೂನು, ವೇದಾಂತ, ಕಾದಂಬರಿಗಳು, ಗೋಪಾಲನೆ, ಶೃಂಗಾರಿಕೆಗಳು, ಕೃತ್ರಿಮ ಕಲೆ ಮುಂತಾದ ವಿಷಯುಗಳೆಲ್ಲವೂ ಪ್ರಕಟವಾಗುತಿವೆ. ಪತ್ರಿಕೆಯು ಪ್ರತಿಯೊಂದು ಪುಟದಲ್ಲಿಯ ಅಮೂಲ್ಯವಾದ ಗೂಢ ವಿಚಾರಗಳೆ ತುಂಬಿ ತುಳುಕುತಿವೆ. ಪ್ರತಿ ಮಾಸದಲ್ಲೂ ೩೦ ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ

ರೂ. ೩—೮—೦. ಮಾತ್ರ

ಮಾದರಿ ಸಂಚಿಕೆಗೆ ಕ್ರಯ ೦—೫—೧

ಮಾದರಿ ಸಂಚಿಕೆಗಳನ್ನು ಪುಕ್ಕಟೆಯಾಗಿ ಕೊಡುವದಿಲ್ಲ

ಕಾಗದ ಬರೆವಾಗ ನಿಮ್ಮ ಹೆಸರು, ಕಾಗದ ಬರೆಯಲು ಅದೃಷ್ಟದ ಹಾಗೆಯೇ ತಿಂಗಳಿಗೆ ೧೦೦ ರೂ. ಗಳಿಸುವ ಹಣ ಸಂಪಾದನೆ ಮಾರ್ಗವನ್ನು ತಿಳಿಯುವ ಬಗ್ಗೆ ಒಂದಾಣೆ ಸ್ಟ್ಯಾಂಪು ಕಳುಹಿಸಿ.

ಮೆನೇಜರ್,

"ಲೋಕರಹಸ್ಯ"

ವೀರರಾಜೇಂದ್ರಪೇಟೆ, ಕೊಡಗು

"ಚಾಟಾನೂಗಾ" ಕಬ್ಬಿನ ಗಾಣ!

ಜಗತ್ತಿನಲ್ಲಿ ಸರ್ವೋತ್ಕೃಷ್ಟವೆಂದೇ ಇದು ಇಷ್ಟು ಪ್ರಖ್ಯಾತಿ ಹೊಂದಿತು!

ನಂ. ೧೭, ರೂ. ೧೪೫

,, ೧೭, ರೂ ೧೬೫

,, ೩೩, ರೂ. ೧೯೦

,, ೫೭, ರೂ ೫೩೫.

ಡಬ್ಬಲು ಮುಂಬಯಿ ರೇಲ್ವೆ ಸ್ಟೇಶನ ವರೆಗೆ ತಂದು ಕೊಡಲ್ಪಡುವದು.



ಇದರ ರೋಲುಗಳು ಶುದ್ಧ ಉಕ್ಕಿನಿಂದ ಮಾಡಿದ್ದಿರುವವೆ, ಕಬ್ಬಿನೊಳಗಿನ ಹನಿ ಹನಿ ರಸವನ್ನು ಕೂಡ ಹಿಂಡಿ ತೆಗೆಯುವ ವ್ಯವಸ್ಥೆ ಮಾಡಲಾಗಿರುವದು. ಗಾಣವು ಎರಡೂ ಬದಿಗಳ ಯಾವದೇ ಬದಿಯಿಂದ ಕಬ್ಬು ಕೊಡಬಹುದು.

ಆರ್ಡರಿನ ಸಂಗಡ ೩ ಹಣವನ್ನು ಮುಂಗಡವಾಗಿ ಕಳಿಸಬೇಕು.

ಕ್ಯಾಟಲಾಗು "ಡಬ್ಲ್ಯು ೧೧೩" ಪುಕ್ಕಟೆ!

ಮೆಕ್‌ಬೆಥ ಬ್ರದರ್ಸ ಮತ್ತು ಕಂಪನಿ, ಲಿಮಿಟೆಡ್,

ಕೋಡಾಕ ಹೌಸ, ಹೊರ್ನಬಿ ರೋಡ ಮುಂಬಯಿ.



ವಿಚಾರಿಸಿರಿ ಬೇಗ! ವಿಚಾರಿಸಿರಿ ಬೇಗ!!

ನಮ್ಮಲ್ಲಿ

ಅತಿ ಮನೋಹರವಾದ

ದೇವರ ಮಂಟಪಗಳೂ,

ಶ್ರೀಗಂಧದ ಸೌಭಾಗ್ಯದ ಪೆಟ್ಟಿಗೆಗಳೂ, ಬಿಳಿ ಪೆಟ್ಟಿಗೆಗಳೂ, ಆಭರಣ ಡಬ್ಬಿಗಳೂ, ರೂಲಿಂಗ ಬುಟ್ಟಿಗಳೂ ಹಾಗೂ ಎಲ್ಲ ತರದ ಮನೇ ಸಾಮಾನು ಸಿಗುವದೆ

ನಮ್ಮ ವಿಳಾಸ:—

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

ಗೌರಿಹುಣ್ಣಿಮೆಯಿಂದ ೪ನೇ ವರ್ಷ ಪ್ರಾರಂಭ
ಸಚಿತ್ರ ಜಯಕರ್ನಾಟಕ [ಮಾಸಪತ್ರಿಕೆ]
ಸಂಪಾದಕ— [illegible]
ಇದರಲ್ಲಿ ವಿದ್ಯಾ[illegible] ಸಾಹಿತ್ಯ, ಧಾರ್ಮಿಕ [illegible] ಇತ್ಯಾದಿ ವಿಷಯಗಳು ಬರುವವು [illegible]
[illegible]

ಎಲ್ಲಾ ನೋವುಗಳಿಗೆ ದಿವ್ಯೌಷಧ !

ವಾತಹಾರಿ ತೈಲ.

[illegible]
[illegible] ನೀಲಗಿರಿ ತೈಲ, [illegible] ಪ್ರತ್ಯೇಕ.
ಕೆಡೇಕರ ಕಾಬೂಲಿ ಹಿಂಗಿನ ದುಕಾನ,
ಬಿವಳಿಬಾಜಾರ, ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋ ಇತ್ಯಾದಿ ಗಾಯನ ಸಾಮಾನು

[illegible]
ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಉಚಿತ ಕೊಡುವೆವು.
ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡತಕ್ಕದ್ದು.
ಪತ್ತೆ:— ಗೋಪಾಳ ಸಖಾರಾಮ ಮತ್ತು ಕಂಪನಿ, ವಿಠ್ಠಲವಾಡಿ ಎದುರಿಗೆ ೩೩೩ ಕಾಳಬಾದೇವಿ, ಮುಂಬಯಿ.

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ



ಕಳೆದ [illegible] ವರ್ಷಗಳಿಂದ ನಾವು ಶಿವಮೊಗ್ಗಾ–ತೀರ್ಥಹಳ್ಳಿ–ಆಗುಂಬೆ, ಶಿವಮೊಗ್ಗಾ–ಸಾಗರ–[illegible], ಶಿವಮೊಗ್ಗಾ–ಹರಿಹರ–ದಾವಣಗೆರೆ, ಶಿವಮೊಗ್ಗಾ–[illegible], ಸಾಗರ–[illegible], ಸಾಗರ–ತೀರ್ಥಹಳ್ಳಿ, ಸಾಗರ–[illegible] ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸುತ್ತಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರು ಹಾಗು [illegible] ಈ ಕಡೆಗೆ "[illegible] ಮೋಟರ ಸರ್ವಿಸಿನ" ವಿಸ್ತರಣವೂ, ಬಳ್ಳಾರಿ ಜಿಲ್ಲೆಯ [illegible]ಗೆ "ಲಕ್ಷ್ಮೀ ಮೋಟರ ಸರ್ವಿಸಿನ" ವಿಸ್ತರಣವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುತ್ತೇವೆ.

ಉತ್ತರ ಕನ್ನಡ ಜಿಲ್ಲೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ, ಸಾಗರ, ಹರಿಹರ ಮತ್ತು ಮೈಸೂರು [illegible] ಪ್ರಯಾಣ [illegible] ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಶಿರ್ಸಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾರಂಭ ಮಾಡಿರುತ್ತೇವೆ.

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	ಬೆಳಿಗ್ಗಿನ ೭ ಘಂಟೆಗೆ,
ಶಿರ್ಸಿಗೆ ಸೇರುವದು—	„ ೧೧ „
ಶಿರ್ಸಿಯಿಂದ ಬಿಡುವದು ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧ „
ಸಾಗರಕ್ಕೆ ಸೇರುವದು (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ „
ಸಾಗರದಿಂದ ಶಿರ್ಸಿ ಕಡೆಗೆ ಹೊರಡುವದು— ...	ಬೆಳಿಗ್ಗಿನ ೬ „
ಸಿದ್ದಾಪುರದ ಮೇಲಾಗಿ ಶಿರ್ಸಿಗೆ ಸೇರುವದು— ...	„ ೧೧ „
ಶಿರ್ಸಿಯಿಂದ ಕುಮಟೆಗೆ ಹೊರಡುವದು— ...	ಮಧ್ಯಾಹ್ನ ೨ „
ಕುಮಟೆಗೆ ಸೇರುವದು—	ಸಾಯಂಕಾಲ ೫ „

N. B.— ಈ ಮೇಲಿನ ಲೈನುಗಳ ವಿನಹ ಶಿರಸಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ ಪ್ರಾರಂಭಿಸುವ ಯೋಚನೆ ನಡೆಯುತ್ತದೆ. ಸರ್ವರೂ ಆಶ್ರಯಮಾಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

SHIMOGA, 22—11—1924. } **M. MANJAPP.** PROPRIETOR.

ಸಂಸಾರದಲ್ಲಿ ರಜಿಸ್ಟರ ಆದಂಥ
ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

[illegible] ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು [illegible]. [illegible] ಪಿತ್ತ, ಕಫ ಈ ತ್ರಿದೋಷಗಳ [illegible] (ನಿಜವಾಗಿ ಒಂದೇ ಸಲಕ್ಕೆ ಅನುಭವಕ್ಕೆ ಬರುವದು) [illegible] ಕ್ಷಯರೋಗ, ಉದರರೋಗ ಮತ್ತು [illegible] ಅನ್ನ [illegible] ಒಂದು ಬಾಟಲಿಯಿಂದ ಗುಣವಾಗುವದು. [illegible] ಒಂದು ಬಾಟ್ಲಿಯ ಕಿಮ್ಮತ್ತು [illegible]

ತಯಾರಕರು— ದ್ರಾಕ್ಷಾರ್ಕಮಧು ಆಫೀಸ ಪೋ. ನಿಪ್ಪಾಣಿ ಜಿ. ಬೆಳಗಾಂವ

ಬೆಳಗಾಂವಿಯೊಳಗಿನ

ಸ್ವಾಮಿ ಶ್ರದ್ಧಾನಂದರವರ ಮಹತ್ವದ ಭಾಷಣದ ಸಾರಾಂಶವು

ಸಭಿಕರೇ, ನಾನು ಮೊಟ್ಟಮೊದಲು ನಿಮಗೆ ಸೃಷ್ಟಿಯ [illegible] ಇತಿಹಾಸವನ್ನು ನಿವೇದಿಸುವೆನು. ಮೊದಲು ಆಕಾಶ, ವಾಯು, ಅಗ್ನಿ, ಜಲ, ಈ ತರ ಸೃಷ್ಟಿ [illegible] ವನಸ್ಪತಿ, ಆ ಮೇಲೆ ಮನುಷ್ಯಸೃಷ್ಟಿಯು ಉತ್ಪನ್ನವಾ[illegible] ತಿಬೇಟಿನ ಬೈಲು ಸೀಮೆಗಳಿಂದ ಮೇಲೆ [illegible] [illegible] [illegible] ವಸ್ಸರುವಲ್ಲಿ [illegible] ಸಂಗಡ [illegible] ಋಷಿ, ಪುತ್ರು [illegible] ಜ್ಞಾನಗಳು [illegible] ವೈದಿಕ ಜ್ಞಾನವು [illegible] [illegible] ಹೂಡುತ್ತ ಈ ಭೂಖಂಡದಲ್ಲಿ [illegible] ಈ ದೇಶದಲ್ಲಿ [illegible] ಶ್ರೇಷ್ಠ [illegible] ಶ್ರೇಷ್ಠ ಆರ್ಯರ [illegible] ಹಿಂದೂಗಳಲ್ಲಿ [illegible] [illegible] ಗ್ರೀಸ, ರೋಮ, ಬೆಬಿಲೋನಿಯಾ, ಅಸೀರಿಯಾ,

ಸಿರಿಯಾ, ಜಪಾನ, ಅಮೇರಿಕಾಗಳಲ್ಲಿ ಆರ್ಯರ [illegible] ಯುರೋಪಿಯನ ಭಾಷೆಯು ತಾಯಿ [illegible] ಲ್ಯಾಟಿನದಲ್ಲಿ [illegible], ಪಿತೃ, ಸ್ವಸಾ ಅಂದರೆ ತಾಯಿ, ತಂದೆ, ತಂಗಿ ಈ ಸಂಬಂಧಗಳನ್ನು ಭಾಷೆಯ [illegible] ಜಗತ್ತಿಗೆ ಕಲಿಸಿದರು. ಗಣಿತ, [illegible], ಶಾಸ್ತ್ರ, ಸಂಸ್ಕೃತಿ, ವೇದಾಂತ ವಿಶಮೊದ [illegible] ವಾದವು ಆಯುರ್ವೇದ, ಧರ್ಮಶಾಸ್ತ್ರ, ಭಾಷಾ, ಜ್ಯೋತಿಷ, ಇವೆಲ್ಲವೂ ಆರ್ಯರಿಂದಲೇ ಜಗತ್ತಿಗೆ ಪ್ರಾಪ್ತವಾಗಿವೆ [illegible] ಜಗತ್ತು ಮತ್ತು [illegible] ಧರ್ಮವನ್ನು ಆರ್ಯರೇ [illegible] [illegible] ಈ ಸಂಸ್ಕೃತಿಯ [illegible] [illegible] ಬಿಟ್ಟ, ಕೆರೆ, [illegible] [illegible] ಜನರ ನೀತಿಯನ್ನು ತಮ್ಮದಾಗಿಸಿ [illegible] ರಾಮಚಂದ್ರನ [illegible] [illegible] ಭಾರತನ [illegible] ಭಾಗಗಳು [illegible] ತಾನು ತಂದೆಯ ವಚನವನ್ನು ಪಾಲಿಸಲಿಕ್ಕಾಗಿ [illegible]

[illegible] ರಾಮಚಂದ್ರರು ಧರ್ಮ[illegible] [illegible] ಆ ಕಾಲದಲ್ಲಿ ಎಲ್ಲೆಲ್ಲಿಯೂ [illegible] ಆನಂದವುಂಟಾಗುತ್ತಿತ್ತು. [illegible] ಸಂಸ್ಕೃತಿಯೊಳಗಿನ ಸತ್ಯತೆಯು ತೋರುತ್ತದೆ.

ಆರ್ಯಸಂಸ್ಕೃತಿಯ ಸ್ವರೂಪ.

ಆ ಸಂಸ್ಕೃತಿಯು [illegible] [illegible] ೧೦೦ ವರ್ಷ, [illegible] ಸಾಧನಗಳಿಂದ [illegible] [illegible] [illegible] ಕರ್ತವ್ಯವೆಂದರೆ, ಪಶುಗಳ ಸಂರಕ್ಷಣ, ಸಾಧುಗಳ ರಕ್ಷಣ ಮತ್ತು [illegible] ಅಹಿಂಸೆ ಎಂದರೆ, ಪ್ರಾಣಿಗಳನ್ನು [illegible] non violence ವು [illegible] (Do your duty and leave the rest to God) 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಅಂದರೆ ಕರ್ಮವನ್ನಾಚರಿಸಿರಿ, ಫಲಪ್ರಾಪ್ತಿಯ ಇಚ್ಛೆಯ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಿಜಿಸ್ಟರ್ಡ

[illegible] ಗುಂಗುರು ಗುಂಗುರಾದ [illegible] [illegible] ಯಾವ [illegible] [illegible] ಬೇಡವೆನ್ನುವರೋ?

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು [illegible] [illegible] ವಿದ್ಯಾರ್ಥಿಗಳಿಗೂ [illegible] ಈ ಆಯಿಲ್ [illegible] [illegible] ಉದುರಿ [illegible] [illegible] ಸುಗಂಧವು [illegible]

[illegible] ಕಾಮಿನಿಯಾ ಆಯಿಲ್ [illegible] "ಸರ್ಟಿಫಿಕೇಟ್ ಆಫ್ ಮೆರಿಟ್" [illegible]

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ ೩ಕ್ಕೆ ರೂಪಾಯಿ 2-10 0 ವ್ಹಿ. ಪಿ ಖರ್ಚು 0-14-0

ಅತಿ ಮನೋಹರವಾದ ಸುಗಂಧಿಯು

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ [illegible] [illegible] ಸೌಗಂಧಿಕ [illegible] [illegible] ಒಂದು ಸಲ [illegible] [illegible] ಯಾವ [illegible] ಈ ಒಟ್ಟೋದಿಲ್ [illegible]

ಸಣ್ಣ ಸೀಸೆ 1 ಕ್ಕೆ 0 8 0; 1 ಡ್ರ್ಯಾಮಿನ (ಮಿಡಿಯಂ) ಸೀಸೆ 1 ಕ್ಕೆ 0 12 0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4 0

ಒಟ್ಟೋದಿಲ್ ಬಹಾರ್ ಪರಿಮಳ ಕಾಡ್ಡುಗಳು ಡಜನ್ 1 ಕ್ಕೆ 0 12 0.

Address: **The Anglo Indian Drug & Chemical Co.**
16, Market, **BOMBAY 2**

ನ್ನು ಕಲಿಯುವುದಿರಿ' ಎಂಬುದೇ ಭಗವದ್ಗೀತೆಯ ಸಾರವು. ಆರ್ಯಸಂಸ್ಕೃತಿಯ ತಳಹದಿಯು ನಾಲ್ಕು ವರ್ಣ ಹಾಗೂ ನಾಲ್ಕು ಆಶ್ರಮಗಳ ಮೇಲೆ ನಿಂತಿದೆ. ೨೫ ವರ್ಷ ಬ್ರಹ್ಮಚರ್ಯ, ೨೫ ಗೃಹಸ್ಥ, ೨೫ ವಾನಪ್ರಸ್ಥ, ಮತ್ತು ೨೫ ಸನ್ಯಾಸ ಹೀಗೆ ಆಯುಷ್ಯದ ವಿಭಾಗಗಳನ್ನು ಮಾಡಿದ್ದರು. ೨೫ ವರ್ಷ ಇಂದ್ರಿಯನಿಗ್ರಹ ಮಾಡಿ ಯಾವತ್ತೂ ತರದ ಆನಂದವನ್ನು ಪಡೆದ ಗುರುಗಳು ವಿದ್ಯಾರ್ಥಿಗಳಿಗೆ ಬ್ರಹ್ಮಚರ್ಯದ ಮಹತ್ವವನ್ನು ಮನಗಾಣಿಸಿ, ಅವರಿಗೆ ಧರ್ಮೋಪದೇಶ ಮಾಡುತ್ತಿದ್ದರು. ಸಾವಿತ್ರೀ ವಿದ್ಯೆಯೆಂಬ ಮಾತೆಯ ಗರ್ಭದಲ್ಲಿ ತಂದೆಯೋ ಪಾಧ್ಯಾಯರ ಉಪದೇಶ, ಉರ್ಧ್ವರೇತಸಿಯಾದ ವಿದ್ಯಾರ್ಥಿಗಳ ಜನ್ಮ ಆಗುತ್ತಿದ್ದಿತು. ಜನನೇಂದ್ರಿಯದ ಮಹತ್ವವನ್ನು ಅರಿತು, ೨೫ ವರ್ಷಗಳ ವರೆಗೆ ಇಂದ್ರಿಯನಿಗ್ರಹವನ್ನು ಮಾಡಲು ಉಪದೇಶಿಸಿ ಮುಂದಿನ ಸಂಸಾರವನ್ನು ತಯಾರ ಮಾಡಿ ಬ್ರಹ್ಮಚರ್ಯವೆಂಬ ಅಮೃತತುಲ್ಯ ವಸ್ತುವಿನ ಅರ್ಪಣೆ ಮಾಡುತ್ತಿದ್ದರು. ಮುಂದೆ ಸಂಸಾರಯಾತ್ರೆ, ದೇಶಸೇವೆ, ಪರಮಾರ್ಥ ಸಾಧಿಸುವದಕ್ಕೆ ಅವರು ಸಮರ್ಥರಾಗುತ್ತಿದ್ದರು. ಪಾಶ್ಚಾತ್ಯ ಕೀ ಮುಕ್ತವೃತ್ತಿಯೊಳಗಿನ ಇಂಥ ತರತರದ ಭೌತಿಕ ಬಾಹ್ಯಾವಡಂಬರಗಳಿಗೆ ಬಲಿಬಿದ್ದು ನಮ್ಮ ಸಮಾಜವನ್ನು ಈಗ ಪರಾವೃತ್ತ ಮಾಡಬೇಕಾಗಿದೆ. ಪ್ರಜಾಸತ್ತಾತ್ಮಕ ರಾಜ್ಯದಲ್ಲಿ ಅರಸರು ನಿರಂಕುಶರೆನಿಸಿ ಮೆರೆದರೆ, ಪ್ರಜೆಗಳು ಭಕ್ಷ್ಯಗಳಾಗುತ್ತಾರೆ ಎಂತಲೇ ಪ್ರಜಾತಂತ್ರ ರಾಜ್ಯವಿರಬೇಕೆಂತ ಬ್ರಾಹ್ಮಣ ಗ್ರಂಥದಲ್ಲಿ ಹೇಳಿದೆ. ಈ ಪ್ರಪಂಚವು ಪಾಶವೀ ಶಕ್ತಿಯ ಆಟ್ಟಿಗೆಯಾಗದಂತೆ ಅರಸನು ಬ್ರಹ್ಮಚಾರಿ ಇರಬೇಕು. ಯಾಕೆಂದರೆ ಜನತೆಯೂ ಪ್ರಜೆಯೂ ಅತನಿಗೆ ಸ್ವಂತ ಮಕ್ಕಳಂತಿದ್ದಿಯುವೆ. ಆದರೆ ಇಂದು ದೇಶೀ ಸಂಸ್ಥಾನಗಳ ಕಡೆ ನೋಡಿದಲ್ಲಿ, ಅನ್ಯಾಯ, ಅತ್ಯಾಚಾರ ವ್ಯಭಿಚಾರ, ಸ್ವಾರ್ಥಗಳೇ ಕಂಡುಬಂದಾವು. ಹೀಗೆ ... ಶಿಸ್ತಿನ ಆಶಕ್ತ ಸಂತಾನದ ಕಾರಣವು ನಾವೇ ಅಲ್ಲವೆ ಮತ್ತು? ಪ್ರಾಚೀನ ಕಾಲದಲ್ಲಿಯು ೨೫ ವರ್ಷಗಳ ಅವಕಾಶವಾಗಿದ್ದ ಗೃಹಸ್ಥಾಶ್ರಮದಲ್ಲಿ ೧೦ ಮಕ್ಕಳು ಎಂತ ಹಿಡಿದಿದೆ, ಅವರ ೨॥ ವರ್ಷಕ್ಕೊಂದಾಯಿತು. ಗರ್ಭಧಾರಣವಾದಂದಿನಿಂದ ಮಗುವು ೧॥ ವರ್ಷ ವಯಸ್ಸಿನದಾಗುವ ವರೆಗೆ ಸ್ತ್ರೀ ಪುರುಷ ಸಂಬಂಧವಾಗುತ್ತಿದ್ದಿಲ್ಲ. ಈಗ ಸುಧಾರಿಸಿದ ಜಗತ್ತಿನಲ್ಲಿ (ದುರ್ದೈವದಿಂದ ಹಿಂದುಸ್ತಾನದಲ್ಲಿಯೂ) ಇದರ ವಿಪರೀತ ಸ್ಥಿತಿಯೇ ದೃಗ್ಗೋಚರವಾಗುತ್ತಿದೆ. ಆದರೆ, ಆಫ್ರಿಕೆಯ ಕಾಡುಗಳಲ್ಲಿ ಹೋಗಿ ನೋಡಿದಲ್ಲಿ, ಅಲ್ಲಿಯ ಕಾಡು ಜನರು ಗರ್ಭಧಾರಣೆಯ ಹೊತ್ತಿನಿಂದ ೩ ವರ್ಷಗಳ ತನಕ ಸ್ತ್ರೀ-ಪುರುಷರು ಒಬ್ಬರಿಗೊಬ್ಬರ ಮೋರೆಯನ್ನು ಸಹ ಸಂಭೋಗಕ್ಕಾಗಿ ನೋಡವದಿಲ್ಲ. ಇದರ ವಿಚಾರ ಮಾಡಿರಿ, ಪೂರ್ವಜರ ನಿಯಮಗಳನ್ನು ಪಾಲಿಸಿರಿ, ಬ್ರಹ್ಮಚರ್ಯವನ್ನು ಅವಲಂಬಿಸಿರಿ, ನಂತರ ಗೃಹಸ್ಥಾಶ್ರಮದ ಅನುಭವ ತಕ್ಕೊಂಡ ಮೇಲೆ, ವಾನಪ್ರಸ್ಥಾಶ್ರಮದ ಯೋಗ್ಯತೆಯು ಬರುತ್ತದೆ. ಇಂದು ನಾವು ಬೇರೆಯವರ ವಿಚಾರಗಳ ಕಳುವು ಮಾಡಿ ನಮ್ಮ ಹೆಸರಿನಲ್ಲಿ ಅವುಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸುತ್ತೇವೆ. ಆದರೆ, ನಮ್ಮ ಜನ್ಮ ಮೃತ್ಯುಗಳ ಅಜ್ಞಾನವನ್ನು ಉಪನಿಷದುಗಳಂತ ಪ್ರಾಚೀನ ಜಗನ್ಮಾನ್ಯ ನುಡಿದಿರುವವರು ಈ ಗ್ರಂಥಗಳ ಕರ್ತರ ಹೆಸರುಗೊತ್ತಾಗಿಲ್ಲ. ಈ ಎಲ್ಲ ಗ್ರಂಥಗಳನ್ನು ವಾನಪ್ರಸ್ಥಾಶ್ರಮಿಗಳು ಮಾಡಿರುತ್ತಾರೆ. ಜಗತ್ತಿಗೆ ಸತ್ಯದ ಉಪದೇಶವನ್ನು ಮಾಡುವ ಸಾಮರ್ಥ್ಯವು ಸನ್ಯಾಸಿಯರಲ್ಲಿ ಇರತಕ್ಕದ್ದು. ಒಂದೇ ಅಕ್ಷರದ ಮೂಲಕ ಜಗತ್ತಿಗೆ ಅಭಯದಾನ ಕೊಡುವ ಸಾಮರ್ಥ್ಯವು ಯಾರಲ್ಲಿ ಕಾಂಬುದೋ, ಅವನೇ ಖರೇ ಸನ್ಯಾಸಿಯು. ಇಂಥವರನ್ನು ನಿರ್ಮಿಸುವದೇ ನಮ್ಮಿಂದಿನ ಕರ್ತವ್ಯವು.

ಪುರಾತನ-ಪ್ರಚಲಿತ ಸ್ಥಿತಿಗಳು.

ವೇದ ಮಹಾಭಾರತಕಾಲದ ವರೆಗೆ ನಾಲ್ಕೇ ವರ್ಣಗಳು ಕೇಳಬರುತ್ತಿವೆ. ಆದರೆ, ಮದ್ರಾಸ ಕಡೆ ನೋಡಲು, ಐವತ್ತನೇದನ್ನು ಕೇಳಿದನು ಇವರಲ್ಲಿಯೂ ಜಾತ್ಯುಪಜಾತಿಗಳುಂಟಾದವೆ. ಗೋತ್ರಗಳುಂಟು ಪೂರ್ವಜರು ಜಪಮಾನ, ಮಾಸದ, ಪರಿಹಾರ ಇವರಿದ್ದಾರೆ. ಹರ್ಷರಾಯರ ಕಾಲದಲ್ಲಿ ಸಹ ಐದು ವರ್ಣಗಳಿದ್ದಿಲ್ಲ. ನಾಲ್ಕು ವರ್ಣಗಳೊಳಗಿನ ಕಳವು, ವ್ಯಭಿಚಾರ, ಪಾತಕಗಳನ್ನು ಮಾಡುವವರಿಗೆ ಪ್ರತ್ಯೇಕವಾಗಿ ತೆಗೆದಿಟ್ಟರು ಮತ್ತು ಸದ್ಯದ Criminal tribe settlement ದಂಥ ಅವರ ಸ್ಥಿತಿಯಿತ್ತು. ಮೊದಲು ಪರದೆಯ ಪದ್ಧತಿಯು ಇದ್ದಿಲ್ಲ. ಶುದ್ಧ, ಪವಿತ್ರ, ಶೂದ್ರನು ತಯಾರ ಮಾಡಿದ ಅನ್ನವನ್ನು ಪೂರ್ವದಲ್ಲಿ ಮೂರೂ ವರ್ಣದವರು ತಿನ್ನುತ್ತಿದ್ದರು. ಈಗೆ ಪಾಳೆಗಾರರೊಳಗಿಂದ ಬಂದ ಬ್ರಾಹ್ಮಣರು ಪಾಲಕೀಯರು, ಸರಯೂ ನದಿಯ ಮೇಲೆ ಬಂದವರು ಸರಯೂಪಾರಿ ಬ್ರಾಹ್ಮಣರು ಹೀಗೆ ಉಪಜಾತಿಗಳಾಗಹತ್ತಿದವು ಈಹೊತ್ತು ಖಾನಾವಳಿಯವರೂ, ಕೂಟಜೋಶಿಗಳನ್ನು ಬುದ್ಧ ವಚನ ಬ್ರಾಹ್ಮಣರು ಮೊದಲು. ಜನ್ಮತಃ ಯಾರೂ ಮೂರೂ ವರ್ಣದವರಾಗುತಿದ್ದಿಲ್ಲ. ಎಲ್ಲರೂ ಜನ್ಮತಃ ಶೂದ್ರರಿದ್ದು ಗುಣಕರ್ಮಗಳನುಸಾರವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹೀಗಾಗುತ್ತಿದ್ದರು. ಎಲ್ಲರಿಗೂ ಬಳಕ್ಕೆ ಬರಲು ಪರವಾನಿಗೆ ಇತ್ತು. ಗಾಯತ್ರಿ ಮಂತ್ರದ ಬಲದಿಂದ ಶೂದ್ರನಿಗೆ ಬ್ರಾಹ್ಮಣನನ್ನಾಗಿ ಮಾಡಿಕೊಳ್ಳಲು ಬರುತ್ತಿತ್ತು. ೭ ಕೋಟಿ ಮುಸಲ್ಮಾನರೂ, ೫೦ ಲಕ್ಷ ಕ್ರಿಸ್ತರೂ ನಮ್ಮ ಸಂಕುಚಿತ ದೃಷ್ಟಿಯ ಮೂಲಕ ಧರ್ಮಾಂತರ ಹೊಂದಿ, ನಮ್ಮ ಸನಾತನ ಸಮಾಜದ ಹೊರಬಿದ್ದರು. ಬ್ರಾಹ್ಮಣನು ಸಮಾಜದ ಮುಖವು. ೫ ಕರ್ಮೇಂದ್ರಿಯ, ೫ ಜ್ಞಾನೇಂದ್ರಿಯ ಹೀಗೆ ೧೦ ಇಂದ್ರಿಯಗಳ ಬಂಬಲದಿಂದ ಸಕಲ ಸಮಾಜವನ್ನು ಪೋಷಿಸಲು ಬ್ರಾಹ್ಮಣರು ಕರ್ತವ್ಯಬದ್ಧರಿರುವರು. ಬಾಯಲ್ಲಿ ಹಾಕಿದ ತುತ್ತನ್ನು ಕರಿದನಾಗಿ ಮೆಲಕು ಹಾಕಿ ಕೆಳಗೆ ಹೊಟ್ಟೆಗೆ ಕಳುಹುವದು ಬಾಯಿಯ ಕರ್ತವ್ಯವಿದೆ. ಬಾಯಿಯಲ್ಲಿ - ಹಲ್ಲಿನಲ್ಲಿ ಕೂಡ ಏನಾದರು ಅಗಳುಗಳು ಉಳಿಯದಂತೆ ಕೆಲಸವಾಗಬೇಕು. ಅಗಳಿದ್ದರೆ ಹಲ್ಲು ಕೆಡುತ್ತವೆ ಮತ್ತು ಅದರಿಂದ ಸರ್ವಾಂಗವೂ ನಾಶವಾಗುತ್ತದೆ. ಆದರಿಂದ ಬ್ರಾಹ್ಮಣರು ಸಂಪೂರ್ಣವಾಗಿ ತ್ಯಾಗಿಗಳಾಗಬೇಕು. ಗುಪ್ತವಾಗಿ ಧನಸಂಚಯ ಮಾಡಿದರೆ, ಸಮಾಜವು ಕಲಂಕಿತವಾಗುವದು. ಅಭ್ಯಾಸ, ಜ್ಞಾನಪ್ರಾಪ್ತಿ, ಸಂಶೋಧನ, ಜಗತ್ತಿಗೆ ಜ್ಞಾನದಾನ ಇವೆಲ್ಲವು ಬ್ರಾಹ್ಮಣರ ಕರ್ತವ್ಯಗಳು.

ಕ್ಷತ್ರಿಯ-ವೈಶ್ಯರು.

ಧರ್ಮದ, ಸಮಾಜದ, ದೇಶದ ಪಾಲನ ಮಾಡುವದರಿಂದಲೇ ಕ್ಷತ್ರಿಯರು ಮುಕ್ತಿಯ ನ್ನೈದುವರು. ಇಂದು ಜಗತ್ತಿನೊಳಗಿನ ಸಮಸ್ತ ಕ್ಷತ್ರಿಯರೂ ಸಮಾಜಘಾತಕರಾಗುವ ಬದಲು ಸಮಾಜದ್ರೋಹಕರಾಗಿರುವರು. ಅದರಿಂದ ಜಗತ್ತಿನ ಘಾತವಾಯಿತು. ಕ್ಷತ್ರಿಯರು ರಾಷ್ಟ್ರಪುರುಷರಿಗೆ ಪತನಶಕ್ತಿಯೋಪಾದಿಯಲ್ಲಿರುವರು. ಸಮಸ್ತ ಉತ್ತಮ ಭೋಜನ ರಸಗಳನ್ನು ಹೀರಿಕೊಂಡ ಹೊರಸು ಹೊರಗೆಡುವದು ಕ್ಷತ್ರಿಯರ ಕರ್ತವ್ಯವು. ರಾಷ್ಟ್ರಸಂಪತ್ತಿಯನ್ನು ಬೆಳಸುವದು, ವ್ಯತೆಗಳ ನಿವಾರಣೆಯ ಮಾಡುವದು ಇವರ ಕರ್ತವ್ಯವು. ಕ್ಷತ್ರಿಯ ಹಾಗೂ ಬ್ರಾಹ್ಮಣರ ಪೋಷಣ ಮಾಡುವ ಹೊಣೆಯು ವೈಶ್ಯರ ಮೇಲಿದೆ. ಈ ಕರ್ತವ್ಯವಾಗಬೇಕಾದರೆ, ವೈಶ್ಯರು ನಿಸ್ಪೃಹರಿರಬೇಕು. ನಿಸ್ವಾರ್ಥಿಗಳಿರಬೇಕು. ವೈಶ್ಯರು ಅನೀತಿಯಿಂದ ಸಂಪತ್ತಿಯನ್ನು ಸಂಪಾದಿಸಿದರೆ, ಈ ಪಾಪಧನವನ್ನು ಉಣ್ಣುವದು ಕ್ಷತ್ರಿಯರ ಹಾಗು ಬ್ರಾಹ್ಮಣರ ಪಾಲಿಗೆ ಬರುತ್ತದೆ. ವೈಶ್ಯರು ನೀತಿಯಿಂದ ಧನಾರ್ಜನ ಮಾಡಬೇಕಾದ ಕಾರಣವು ಇದೇ. ಧಾರ್ಮಿಕ, ರಾಜಕೀಯ, ಶೈಕ್ಷಣಿಕ ಸಂಸ್ಥೆಗಳನ್ನೆಲ್ಲ ಜೋಪಾನ ಮಾಡುವ ಜವಾಬದಾರಿಯು ಈಗ ವೈಶ್ಯರ ಮೇಲೆ ಬಂದೊದಗಿದೆ.

ಅಸ್ಪೃಶ್ಯತೆಯನ್ನು ಹೋಗಲಾಡಿಸಿರಿ.

ಸೈನ್ಯದೊಳಗಿನ ಹಾಗು ಸಮಾಜದೊಳಗಿನ ಸಾಮಾನ್ಯರು (Rank & file) ಶೂದ್ರ ವರ್ಗದವರು. ಪ್ರತಿಯೊಬ್ಬರು ತಮ್ಮ ತಮ್ಮ ನಿಯಮಿತ ಕರ್ತವ್ಯಾಚರಣೆ ಮಾಡಬೇಕು. ಅಲ್ಲಿ ಉಚ್ಚ-ನೀಚವೆಂಬ ಭೇದವಿಲ್ಲ. ಜನ್ಮದಿಂದ ಯಾರೂ ಉಚ್ಚ-ನೀಚರಾಗುವದಿಲ್ಲ. ಇಂದಿಗೆ ಬ್ರಾಹ್ಮಣರಲ್ಲಿ ನಾಲ್ಕು ವರ್ಣದ ಮಂದಿಗಳಿರುವರು. ಅದೇ ಸ್ಥಿತಿಯು ಶೂದ್ರರಲ್ಲಿಯೂ, ಅಸ್ಪೃಶ್ಯರಲ್ಲಿಯೂ ತೋರಿಬರುತ್ತದೆ. ಬ್ರಹ್ಮಜ್ಞಾನಿಯಾದವರು, ಶೌರ್ಯದಿಂದ ಯುದ್ಧ ಮಾಡುವವರು, ನಿಸ್ವಾರ್ಥ ವೈಶ್ಯರು ಅಸ್ಪೃಶ್ಯರಲ್ಲಿಯೂ ಕೂಡ ಇರುವರು. ಸಮಾಜದೊಳಗಿನ ಹೊಲಸು ಹಾಗೆಯೇ ಉಳಿದಿದ್ದರೆ, ಸಮಾಜವು ಕಲುಷಿತವಾಗುವದು. ಇಂಥ ಪವಿತ್ರ ಕಾರ್ಯವನ್ನು ನಮಗಾಗಿ ಮಾಡುವವರಿಗೆ ಅಸ್ಪೃಶ್ಯರೆಂದೆನಿಸುವದು ಪಾತಕವು. ಈ ಪಾಪದ ಪ್ರಾಯಶ್ಚಿತ್ತವನ್ನು ನಾವು ಔದಾರ್ಯದಿಂದ ಸ್ವೀಕರಿಸತಕ್ಕದ್ದು. ಅಸ್ಪೃಶ್ಯರ ಮೇಲೆ ಉಪಕಾರ ಮಾಡುತ್ತೇವೆಂಬ ಭಾವನೆಯನ್ನು ಹಿಡಿಯಲಾಗದು. ಅಸ್ಪೃಶ್ಯರು ಸತ್ತ ಪ್ರಾಣಿಗಳ ಮಾಂಸ ತಿನ್ನುತ್ತಿದ್ದರೆ, ನಾವು ಜೀವಂತ ಆಡುಗಳನ್ನು ತಿನ್ನುತ್ತೇವೆ. ಅವರು ಅಹಿಂಸೆಯಿಂದ ತಿನ್ನುತ್ತಿದ್ದರೆ, ನಾವು ಹಿಂಸೆ ಮಾಡಿ ತಿನ್ನುತ್ತೇವೆ. ಕಾಲು ಜಾರಿ ಹೊಲಸಿನಲ್ಲಿ ಬಿದ್ದರೆ, ನಾವು ಕಾಲು ತೊಳೆಯುತ್ತೇವೆ ಹೊರತು, ಕಡಿದು ಹಾಕುವದಿಲ್ಲ. ಅಸ್ಪೃಶ್ಯರು ಇದ್ದ ಹೊಲಸನ್ನು ತೆಗೆದು ಸ್ವಚ್ಛತೆಯನ್ನಿಡುತ್ತಾರೆ. ವಾಲ್ಮೀಕಿಯವರು ಬಿಲ್ಲ ಕುಲದಲ್ಲಿ ಜನ್ಮತಳೆದಿದ್ದರು; ತಪೋಬಲದಿಂದ ವಿಶ್ವಾಮಿತ್ರರು ಬ್ರಾಹ್ಮಣರಾದರು; ಅಸ್ಪೃಶ್ಯರಲ್ಲಿ ಉಚ್ಚ ತರಗತಿಯ ಸಾಧು ಸಂತರಾಗಿ ಹೋಗಿರುವರು. ಇದನ್ನೆಲ್ಲ ಅರಿತುಕೊಂಡು, ಈ ಅನೇ ವರ್ಣದ ಹೆಸರನ್ನು ಸಮೂಲ ನಾಶ ಮಾಡಿರಿ. ಇಂದು ಹಿಂದೂಗಳು ಇಷ್ಟು ದುರ್ಬಲರಾಗಿರುವ ಕಾರಣವೇನೆಂದು ಬಲ್ಲಿರೋ? ವೇದಕಾಲದೊಳಗಿನ ಪಯೋಮರ್ಯಾದೆಯನ್ನು ನಾವು ಅಲ್ಲಗಳೆದೆವು. ಹುಡುಗರು ೨೫ ವರ್ಷದವರಿರಬೇಕು; ಹುಡುಗಿಯರು ೧೬ ವರ್ಷದವರಿರಬೇಕು; ಎಂಬ ನಿಯಮವು ಆ ಕಾಲದಲ್ಲಿತ್ತು. ೧೦-೧೨ ವರ್ಷಕ್ಕೆಲ್ಲ ನಾವು ಬೆಳೆಯುವ ಬದಲು ಕುಗ್ಗುತ್ತಿದ್ದೇವೆ. ೧ ವರ್ಷದ ಬಾಲವಿಧವೆಯರು ೫೦೦ ಮಂದಿಗಳಿರುವರು, ೫ರಿಂದ ೧೫ ವರ್ಷದ ಒಳಗಿನವರು ೫ ಲಕ್ಷ ಮಂದಿಗಳಿರುವರು. ಅವರ ಶಾಪದಿಂದ ನಮ್ಮ ಅಧಃಪಾತವಾಗಿದೆ. ನಾವು ಜೀವಂತರಾಗಿರುವ ಕಾರಣವು ಅವರ ತಪಶ್ಚರ್ಯದ ಫಲವು. ಮೊದಲು ಸನಾತನ ಧರ್ಮವು ಸಮಸ್ತರನ್ನು ಒಳಮಾಡಿಕೊಳ್ಳುತ್ತಿತ್ತು. ಕಣ್ವ ಋಷಿಗಳೊಬ್ಬರೇ ಇಜಿಪ್ತದೊಳಗಿಂದ ೧೦ ಸಾವಿರ ಮಂದಿಗಳನ್ನು ಆರ್ಯ ಧರ್ಮದಲ್ಲಿ ಸೇರಿಸಿಕೊಂಡರು; ಚಂದ್ರಗುಪ್ತನು ಗ್ರೀಕ ರಾಜಕನ್ಯೆಯನ್ನು ಆರ್ಯ ಧರ್ಮದಲ್ಲಿ ಸೇರಿಸಿಕೊಂಡು ಮದುವೆಯಾದನು; ಹೂಣ-ಸಿಥಿಯನ್ನ ಮೊದಲಾದ ಜಾತಿಗಳು ಸನಾತನ ಧರ್ಮದಲ್ಲಿ ಸೇರಿಹೋದವು; ಅಂಥ ಮಾರ್ಗವನ್ನೇ ನಾವು ಇಂದು ಅನುಸರಿಸಬೇಕಾಗಿದೆ. ಜಾತಿ, ಒಳಜಾತಿ, ಪಂಥ, ಸಂಪ್ರದಾಯ ಮುಂತಾದ ಹುಟ್ಟಿಬಿದ್ದು, ನಮ್ಮ ಸಮಾಜದ ನಾಶವು ನಷ್ಟವಾಗಿದೆ. ಇಂದು ಈ ಅಲಿಪ್ತತೆಯು ನಿಲ್ಲಬೇಕು. ಬಾಲವಿಧವೆಯರೊಳಗಿಂದ ಮುಸಲ್ಮಾನ, ಕ್ರಿಶ್ಚನ್, ವೇಶ್ಯಾ ವರ್ಗದವರ ಹುಟ್ಟುವಳಿ ಹೆಚ್ಚಾಗುತ್ತ ಹೋಗಿದೆ. ಶ್ರೀ ದೇವರ ಪೂಜೆ ಮಾಡುವಾಗ, ಶ್ರೀ ದೇವರ ಚರಣಾರವಿಂದದಲ್ಲಿ ನಾವು ಬೀಳುತ್ತೇವೆ. ಶ್ರೀ ದೇವರ ಚರಣಗಳು ಅಸ್ಪೃಶ್ಯ ಶೂದ್ರರು, ಅವರ ಉನ್ನತಿ ಮಾಡಿರಿ. ಅಸ್ಪೃಶ್ಯರು ಇಂದು ಸೀರ ಪವಿತ್ರರಿರುವರು; ಭಗವಂತನ ನಾಮಸ್ಮರಣೆಯನ್ನು ಅವರು ಮಾಡುತ್ತಾರೆ; ಅಂತ್ಯಜಾರ್ಯರು ಉಳಿದಲ್ಲಿ ಹಿಂದೂಗಳಿರುವ ಸಮಸ್ತ ಮುಸಲ್ಮಾನ-ಕ್ರಿಶ್ಚನರಿಗೆ ಪುನಃ ಶುದ್ಧ ಮಾಡಿ ಸನಾತನ ಧರ್ಮದಲ್ಲಿ ಸ್ವೀಕರಿಸಿರಿ. ಭೂಮಂಡಲದ ಮೇಲೆಲ್ಲ ಆರ್ಯಸಂಸ್ಕೃತಿಯ ಡಂಗುರ ಸಾರಿದವರು ಬ್ರಾಹ್ಮಣರು; ಅಧಃಪಾತದ ಕಾರಣರೂ ಅವರೇ. ವೈದಿಕ ಧರ್ಮದ ಧ್ವಜವನ್ನು ಭೂಮಂಡಲದ ಮೇಲೆಲ್ಲ ಮೆರಸಬೇಕು, ಜಗತ್ತಿನಲ್ಲಿ ಅವತರಿಸಿದ

ಸಮಸ್ತ ದುಃಖಗಳನ್ನೂ, ಯುದ್ಧಗಳನ್ನೂ, ಕಷ್ಟಗಳನ್ನೂ ಹೋಗಲಾಡಿಸಲಿಕ್ಕೂ, ಸಮಾಜದಲ್ಲಿ ಸ್ಥೈರ್ಯವನ್ನು ನೆಲೆಗೊಳಿಸಲಿಕ್ಕೂ ಸಮಸ್ತ ಪ್ರಕಾರದ ದಬ್ಬಾಳಿಕೆ-ನಿರಂಕುಶ ಪ್ರಭುತ್ವ-ಇತ್ಯಾದಿ ಶೋಷಣೆಯಿಂದ ಬೇಸರಗೊಂಡ ಜಗತ್ತಿಗೆ ಆನಂದ, ವಿಶ್ರಾಂತಿ ಮತ್ತು ಸ್ವಾತಂತ್ರ್ಯಗಳನ್ನು ಸಂಪಾದಿಸಿಕೊಡಲಿಕ್ಕೂ ಸಮಸ್ತ ಸಂಸ್ಕೃತಿಗಳು ನಷ್ಟವಾದರೂ, ನಮ್ಮ ಸಂಸ್ಕೃತಿಯು ಜೀವಂತವಿದೆ. ಕರ್ಮರೂಪವಾದ ನಿಸ್ಪೃಹ ಆಚಾರಗಳಿಂದ ವರ್ಣಾಶ್ರಮದ ನೆಲಗಟ್ಟಿನ ಮೇಲೆ ಧರ್ಮಸಂಸ್ಥಾಪನೆಯ ಕಾರ್ಯವು ಹಿಂದೊದಗಿದೆ. ಅದಕ್ಕೆ ವರ್ತಮಾನದ ಅವತಾರವಾಗಿ ನೀ. ಜಾರಿ ಬಿದ್ದು ಹೋಗುವ ಮಾರ್ಗಕ್ಕೆ ಅವರು ತಡೆಹಾಕಿದರು. ಜಾತಿಭೇದದಿಂದ ಹಂಚು ಹಂಚಾದ ಸಮಾಜಕ್ಕೆ ಅವರು ಸಂಘಟನೆಯ ಬಲವನ್ನಿತ್ತರು. ಬಾಲವಿವಾಹಕ್ಕೆ ತಡೆಹಾಕಿದರು. ದರ್ಶನಾನಂತರ ಬ್ರಹ್ಮಚರ್ಯಾಶ್ರಮದ ವಾ ವಿವಾಹದ ಸಮಯ ಓಡಿಹೋಗಿ, ವಿರಕ್ತರಾಗಿ ವರ್ಣಾಶ್ರಮ ಧರ್ಮದ ಸ್ಥಾಪನೆ ಮಾಡಿದರು. ದುರ್ಬಲ ಶರೀರಕ್ಕೆ ಆತ್ಮಪ್ರಾಪ್ತಿಯಾಗುವದಿಲ್ಲೆಂಬುದನ್ನು ಅರಿತುಕೊಂಡು ಅವರು ದೇಹಸಾಮರ್ಥ್ಯವನ್ನು ಬೆಳೆಸಲು ಬೋಧಿಸಿದರು. ಪೈಗಳ್ವಾಗಬೇಡಿರಿ; ನಸುಕು ಹರಿಯುವದರೊಳಗಾಗಿ ಎದ್ದು ವ್ಯಾಯಾಮ ಮಾಡಿರಿ; ಸಮಸ್ತ ಪ್ರಕಾರದಿಂದಲೂ ಶರೀರವನ್ನು ಜೋಪಾನ ಮಾಡಿರಿ; ಎಂಬುದನ್ನು ಅವರು ಬೋಧಿಸಿದರು. ಯಮನಿಯಮಗಳಿಂದ ಮನುಷ್ಯರು ಇಷ್ಟು ಕಾರ್ಯ ಮಾಡಬಲ್ಲರು. ಮಿತ ಆಹಾರ ಹಾಗು ನಿಯಮದಿಂದ ವ್ಯಾಯಾಮ ಮಾಡಿ ತಾನೇ ಮಾಡುವದರಿಂದ,೩೦ ವರ್ಷಗಳಾದರೂ, ನಾನು ಕಾರ್ಯ ಮಾಡಬಲ್ಲೆನು. ಅದ್ದರಿಂದ ಟೊಂಕಕಟ್ಟಿರಿ, ಎದ್ದೇಳಿರಿ, ನಿಮ್ಮ ಧರ್ಮ-ಸಂಸ್ಕೃತಿಗಳನ್ನು ತಿಳಕೊಳ್ಳಿರಿ. ಸ್ಥಿರ ಮನಸ್ಕರಾಗಿ ನಿಸ್ವಾರ್ಥಬುದ್ಧಿಯಿಂದ ದುಡಿಯುವ ಕರ್ಮಯೋಗಿಗಳಾಗಿರಿ. ಸಮಸ್ತ ಸಿದ್ಧಾಂತಗಳನ್ನು ಆಚಾರದಲ್ಲಿರಿಸಿರಿ ಗುಣಕರ್ಮಾನುಸಾರವಾಗಿ ವರ್ಣವ್ಯವಸ್ಥೆ ಮಾಡಿರಿ ಬ್ರಹ್ಮಚರ್ಯವನ್ನು ಪಾಲನೆ ಮಾಡಿರಿ. ಆದರ್ಶಭೂತ ಗೃಹಸ್ಥರಾಗಿರಿ. ಪುನಃ ಆರ್ಯ, ಅಂದರೆ, ಶ್ರೇಷ್ಠ ಎಂಬ ಬಿರುದನ್ನು ತಾಳಿರಿ. ಯಾವದೇ ದೇಶವನ್ನು ಪಾದಾಕ್ರಾಂತ ಮಾಡಿಕೊಳ್ಳದ, ಯಾವದೇ ಪ್ರಕಾರದ ದ್ರವ್ಯಾಪಹಾರ ಮಾಡದ, ಆರ್ಯಸಂಸ್ಕೃತಿಯ ಧ್ವಜವನ್ನು ಭೂಮಂಡಲ ತುಂಬ ಮೆರಿಸಿ, ದುಃಖ್ಯರಿಗೆ! ಮಾರ್ಗ ತೋರಿಸಿ ಜಗತ್ತಿನ ಶಾಶ್ವತ ಕಲ್ಯಾಣ ಮಾಡಿರಿ

— ಅಮಳನೇರದ ಶ್ರೀ ಡಾ. ವಿ. ಮಾಸಕರರವರು ನಾಯಿಯ ತತ್ವಜ್ಞಾನಶಾಲೆಗೆ ಪಿತೃಸ್ಮರಣಾರ್ಥ ಒಂದು ಸಾವಿರ ರೂಪಾಯಿಗಳನ್ನು ಅರ್ಪಿಸಿ, ಈ ರಕಮಿನ ಬಡ್ಡಿಯನ್ನು ಪ್ರತಿವರುಷ 'ಧರ್ಮ' ವಿಷಯದ ಮೇಲೆ ಉತ್ಕೃಷ್ಟ ಪ್ರಬಂಧ ಬರೆಯುವವರಿಗೆ ಪಾರಿತೋಷಕ ಕೊಡಬೇಕೆಂದು ಅಪ್ಪಣೆ ಮಾಡಿರುವರು.

— ಹೊಸ ದಿಲ್ಲಿನಗರರಚನೆಗಾಗಿ ವಿಲಾಯತಿಯಿಂದ ಚಿತ್ರಕಾರರು ಆಮದಾಗಿರುವರು. ಹಿಂದುಸ್ಥಾನದೊಳಗಿನ ಚಿತ್ರಕಾರರಿಲ್ಲವೇನು?

— ಕಲ್ಕತ್ತೆಯ ಮುನಿಸಿಪಾಲಿಟಿಯವರು ಅಲ್ಲಿಯ ಅಷ್ಟಾಂಗ ಆಯುರ್ವೇದ ವಿದ್ಯಾಲಯಕ್ಕೆ ರೂಪಾಯಿ ೩೫೦೦ ವೈದ್ಯಶಾಸ್ತ್ರ ಪೀಠಕ್ಕೆ ರೂಪಾಯಿ ೨೫೦೦ ಮತ್ತು ಗೋವಿಂದ ಸುಂದರ ಆಯುರ್ವೇದ ಕಾಲೇಜಿಗೆ ರೂಪಾಯಿ ೫೦೦ ಹೀಗೆ ೬೫೦೦ ರೂಪಾಯಿಗಳನ್ನರ್ಪಿಸಿರುವರು.

— ಗುಜರಾಥ ಪ್ರಾಂತಿಕ ವೈದ್ಯ ಸಮ್ಮೇಲನ ಸಭೆಯ ಸದ್ಯಕ್ಕೆ ಸೇರಿ, ಒಂದು ಆಯುರ್ವೇದ ಕಾಲೇಜನ್ನು ಹೊಂದಿಸಲು ಸರಕಾರಕ್ಕೆ ಬಿನ್ನೈಸಲಾಯಿತು. ಅಹಮ್ಮದಾಬಾದದಲ್ಲಿ ಆಯುರ್ವೇದ ಶಾಲೆಯನ್ನು ಕೂಡಲೇ ಜೋಡಿಸುವ ನಿರ್ಧಾರವಾಗಿದೆ.

— ಅಹಮ್ಮದಾಬಾದದಲ್ಲಿ ಬೆರಿಸ್ಟರ ಜಿನ್ನಾಸಾಹೇಬರ ಭಾಷಣವಾಯಿತು. ಸರಕಾರವು ಕೊಡುವ ಅಧಿಕಾರಸ್ಥಾನಗಳನ್ನು ಸ್ವೀಕರಿಸಬೇಕಾಗಿಯೂ ಅಧಿಕಾರ ದೊರೆತರೂ ದೇಶದ ದ್ರೋಹಿಯಾಗ ಬಾರದೆಂಬುದಾಗಿಯೂ ಅವರು ಹೇಳಿದರು. ಪ್ರಚಾರ ಸುಲಭ! ಆಚಾರ ಕಠಿಣ'! ಅದರಿಂದ ಈ ಗತಿ!!!

ವಿವಿಧ ಸಂಗ್ರಹ.

ವರದಕ್ಷಿಣೆಯ ಅನರ್ಥಪರಂಪರೆ.

ತಿರುವಾಂಕೂರಿನ ನೆರೆಹೊರೆಯಲ್ಲಿ ಅನಪ್ರಂಬಳವೆಂಬ ಗ್ರಾಮವಿದೆ, ಅಲ್ಲಿಯ ಸೀತಮ್ಮ ಎಂಬವಳು ಆತ್ಮಹತ್ಯ ಮಾಡಿಕೊಂಡಿರುವಳು. ಕಾರಣವೇನು? ಮಗಳಾದ ಸೀತಮ್ಮಳ ವಿವಾಹದ ಸಮಯ ಅಳಿಯನಿಗೆ ಕೆಲ ರಕಮನ್ನು ವರದಕ್ಷಿಣೆ ಕೊಡುತ್ತೇನೆಂದು ಮಾವನು ವಚನವನ್ನಿತ್ತಿದ್ದನು; ಆ ವಚನದ ಮೇಲೆ ಮದುವೆಯಾಯಿತು. ಮುಂದೆ ಕೆಲ ದಿನಗಳ ಮೇಲೆ ಮಾವನು ತೀರಿಕೊಂಡನು; ಅಳಿಯನು ವರದಕ್ಷಿಣೆಯ ತಗಾದೆ ಹಚ್ಚಿದನು, ಅತ್ತೆಯು ಅನಾಥ ವಿಧವೆ! ಅವಳೇನು ಮಾಡುವಳು? ಹಣ ಒದಗಲಿಲ್ಲ. ಈ ವಿಷಯಕ ಅತ್ತೆಗೂ ಅಳಿಯನಿಗೂ ವಿತಂಡವಾಯಿತು ಬಳಿಕ, ಸೀತಮ್ಮಳ ತಂಗಿಗೆ ವಿವಾಹ ಸಮಯವು ಪ್ರಾಪ್ತವಾಯಿತು. ಇವರೆಗೆ ಸೀತಮ್ಮಳೂ, ಅಳಿಯು ಪತಿಯೂ ಸಂತೋಷದಿಂದ ಸಂಸಾರ ಮಾಡುತ್ತಿದ್ದರು; ಸೀತಮ್ಮಳಲ್ಲಿ ಮಕ್ಕಳೂ ಹುಟ್ಟಿದ್ದರು ತಂಗಿಯ ಮದುವೆಗಾಗಿ ಸೀತಮ್ಮಳು ತವರುಮನೆಗೆ ಬಂದ ಸಮಯ, ಅಳಿಯನು ಅತ್ತೆಯ ಮೇಲೆ ದಾವೆ ಹೂಡಿದನು. ದಾವೆಯಲ್ಲಿ ವರದಕ್ಷಿಣೆಯನ್ನು ಬೇಡಿದ್ದನು; ಸೀತಮ್ಮಳು ತಾಯಿಯೊಡನೆ ಇಡಗೊಟ್ಟ ಕೆಲ ಚಿನ್ನವನ್ನೂ ಬೇಡಿದ್ದನು. ವಿಚಾರವಾಗಿ, ಅಳಿಯನ ದಾವೆಯು ಅಸತ್ಯವೆಂದು ರದ್ದಾಯಿತು. ಅಳಿಯನು ಮುನಿದನು ಹೆಂಡತಿಯಾದ ಸೀತಮ್ಮಳನ್ನೂ, ಮಕ್ಕಳನ್ನೂ ತವರುಮನೆಯಲ್ಲಿಯೇ ಬಿಟ್ಟು ನಡೆದನು. ಸೀತಮ್ಮಳೂ, ಮಕ್ಕಳೂ ತವರುಮನೆಯಲ್ಲಿಯೇ ಕೆಲವು ಕಾಲಕಳೆದರು; ತಾಳ್ಮೆಯಿಂದ ಕಳೆದರು; ತನ್ನ ಪತಿಗಳಿಗೆ ಮತಿಬಂದೀತೆಂಬ ಆಶೆ ಹಿಡಿದು ಕಾಲ ಕಳೆದಳು. ಆದರೆ, ದೈವಗತಿಯೋ, ಅಥವಾ ದ್ರವ್ಯಾಭಿಲಾಷೆಯೋ! ಬಹುಕಾಲವಾದರೂ, ಸೀತಮ್ಮಳ ಗಂಡನು ಇವಳನ್ನು ಕರಕೊಂಡು ಹೋಗಲಿಲ್ಲ; ಇತ್ತ ತವರುಮನೆಯವರೂ ಶ್ರೀಮಂತರಲ್ಲ; ಸಂಪಾದನೆ ಮಾಡಲಿಕ್ಕೆ ಮನೆಯಲ್ಲಿ ಗಂಡಸರಿಲ್ಲ. ಅನಾಥ ವಿಧವೆಯಾದ ತಾಯಿಯೊಬ್ಬಳೇ ಇದ್ದಳು. ಇದರಿಂದ ಹೊತ್ತು ಹೊತ್ತಿಗೆ ಹೊಟ್ಟೆತುಂಬ ಅನ್ನ ಸಿಗುವದು ಕಠಿಣವಾಯಿತು. ಸೀತಮ್ಮಳಿಗ ಹೇಳಕೊಡದಷ್ಟು ಕಷ್ಟ. ಇತ್ತ ತಾಯಿಯ ಕಷ್ಟ; ಅತ್ತ ಚಿಕ್ಕಮಕ್ಕಳ ಗೋಳು; ಮೇಲೆ ಹೊಟ್ಟೆಯುರಿ; ಪತಿಯು ತ್ಯಾಗಮಾಡಿದನೆಂಬ ಅಪಮಾನದ ಬೇರೆ; ವಿರಹತಾಪ ಬೇರೆ; ಇಷ್ಟೆಲ್ಲ ದುಃಖಗಳಿಗೆ ಕಾರಣ ತಾನೊಬ್ಬಳಲ್ಲವೇ? ಎಂದು ಅವಳು ಆಗಾಗ್ಗೆ ಯೋಚಿಸಿ, ಪಾರಾಗುವ ಬಗೆ ಏನು? ಎಂದು ನಿರಂತರವಾಗಿ ಆಲೋಚಿಸುತ್ತಿದ್ದಳು. ಒಂದು ದಿನ ನಿರಾಶಳಾದಳು; ಒಂದು, ಹಗ್ಗ ತಂದು ಕುತ್ತಿಗೆಗೆ ಬಿಗಿಯಾಗಿ ಬಿಗಿದುಕೊಂಡು ಪ್ರಾಣತ್ಯಾಗಮಾಡಿದಳು. ಕೆಲ ದಿವಸಗಳ ಬಳಿಕ, ಸೀತಮ್ಮಳ ಗಂಡನು, ಪಶ್ಚಾತ್ತಾಪದಿಂದಲೋ ಏನೋ, ಸೀತಮ್ಮಳನ್ನು ಕರೆತರಲು ಅತ್ತೆಯ ಮನೆಗೆ ಹೋದನು. ಆಗ ಸೀತಮ್ಮ ಎಲ್ಲಿರುವಳು? ಅಳಿಯನು ಸೀತಮ್ಮಳ ಕಥೆ ಕೇಳಿ ಮರಮರನೆ ಮರುಗಿದನು. ಕೆಟ್ಟಮೇಲೆ ಬುದ್ಧಿ! ವರದಕ್ಷಿಣೆಯ ಲೋಭದಿಂದ ಒದಗಿದ ಅನರ್ಥಪರಂಪರೆಯಿದು!

ಸ್ತ್ರೀಲಂಪಟ ಮುದುಕನು!

ಸಿಂಜೂರ ಎಂಬ ಊರಲ್ಲಿ ರಮಣಲಾಲನೆಂಬ ಮುದುಕನಿರುವನು. ಆತನ ಪ್ರಾಯ ೬೫ ವರುಷ. ಮುಪ್ಪಿನ ಮುದುಕ! ಆದರೂ, ಮದುವೆಯ ಮರುಳು ವಿಶೇಷವಿದೆ. ಈತನಿಗೆ ಇನ್ನೊಂದು ಮದುವೆ ಮಾಡಿಕೊಳ್ಳಲು ಮನಸ್ಸಾಯಿತು. ಹೆಣ್ಣನ್ನು ಬಹಳ ಹುಡುಕಿದನು. ೬ ಸಾವಿರ ರೂಪಾಯಿ ಖರ್ಚಮಾಡಿಕೊಂಡು, ಒಬ್ಬ ಹುಡುಗಿಯನ್ನು ಮದುವೆಯಾದನು ಹುಡುಗಿಯ ಪ್ರಾಯವು ೮ ವರುಷ. ತೀರ ಎಳೆ ಮಗು! ಮಾವನು ಬಹಳ ಧನಲೋಭಿಯು. ೬ ಸಾವಿರ ರೂಪಾಯಿಗಳನ್ನು ಕೊಂಡು, ಹುಡುಗಿಯನ್ನು ರಮಣಲಾಲನಿಗೆ ಕೊಟ್ಟನು. ರಮಣಲಾಲನ ಮೊದಲನೇ ಹೆಂಡತಿಯು ಇನ್ನೂ ಬದುಕಿರುವಳು! ಅವಳು ಮುದುಕಿಯಾದ್ದರಿಂದ, ಎಳೆ ಮಗುವನ್ನು ೬೫ ವರ್ಷ ಪ್ರಾಯದ ಹರೆಯದವನು ಮದುವೆಮಾಡಿಕೊಂಡಿರುವನು!! ಸ್ತ್ರೀಲಂಪಟತನಕ್ಕೆ ಮರುಗಬೇಕೋ? ಕನ್ಯಾವಿಕ್ರಯಕ್ಕೆ ಮರುಗಬೇಕೋ?

ಬ್ರಿಟಿಶ ಕೋರ್ಟಿನ ನ್ಯಾಯ.

ಬೆಂಗಳೂರಿನ "ವಿಶ್ವಕರ್ನಾಟಕ" ಪತ್ರಿಕೆಯಲ್ಲಿ ಬ್ರಿಟಿಶ ಕೋರ್ಟುಗಳಲ್ಲಿ ನಡೆಯುವ ನ್ಯಾಯದಾನದ ಆಚಾರಗಳ ಕುರಿತು ಒಂದು ಹಕೀಕತು ಪ್ರಸಿದ್ಧವಾಗಿದೆ. ಒಬ್ಬ ಹೆಂಗಸು ವಾರಸು ಸರ್ಟಿಫಿಕೇಟಿಗಾಗಿ ಅರ್ಜಿ ಮಾಡಿದ್ದಳು. ಪ್ರಕರಣದ ವಿಚಾರವು ಮುಂದೆ ಮುಂದೆ ಹೋಗುವದು ನೋಡಿ, ಅವಳು ಬೇಸತ್ತಳು. ಕಳೆದ ೧೦ನೇ ತಾರೀಖಿಗೆ ಸಾಕ್ಷಿಗಾರರನ್ನು ಕರಕೊಂಡು ಅವಳು ಹಾಜರಾದಳು ಆ ದಿನವೂ ಆ ಪ್ರಕರಣ ವಿಚಾರಿಸಲಿಕ್ಕೆ ಕೋರ್ಟಿಗೆ ಅವಕಾಶವಾಗಲಿಲ್ಲ; ಇನ್ನೊಂದು ದಿನ ಇಡಬೇಕೆಂದು ಹುಕುಮವಾಯಿತು. ಈ ಹುಕುಮು ತಿಳಿದ ಕೂಡಲೆ, ಅಬಲೆಯು ಎದೆಗಟ್ಟು ಮಾಡಿ, ನ್ಯಾಯಸ್ಥಾನಕ್ಕೆ ಹೋಗಿ ನುಡಿದಳೇನಂದರೆ,—"ಇನ್ನೆಷ್ಟು ದಿನ ನಾನು ಸುಮ್ಮನೆ ತಿರುಗುತ್ತಿರಬೇಕು? ಒಂದು ಹಣ ಕೆಲಸಕ್ಕೆ ಇಷ್ಟು ತೊಂದರೆಯಾದರೆ, ಹೇಗೆ ಸಹಿಸಲಿ ಸ್ವಾಮಿ! ಹೀಗೆ ವಿಲಂಬ ಮಾಡುವದರಿಂದ ಸಾಲಗಾರರಿಗಿಷ್ಟು ಅನುಕೂಲ; ನಮಗೆ ಮಾತ್ರ ಕಷ್ಟ." ನ್ಯಾಯಮೂರ್ತಿಗಳಿಗೆ ಉತ್ತರ ಕೊಡುವದು ಅಸಾಧ್ಯವಾಯಿತು. "ಮಾರನೇ ದಿನ ಬನ್ನಿರಿ" ಎಂದು ಹೇಳಿ, ನ್ಯಾಯಾಧೀಶರು ನ್ಯಾಯಾಸನದಿಂದ ಎದ್ದುನಡೆದರು. ಮಾರನೇ ದಿನ ಆ ಪ್ರಕರಣ ತೆಗೆಯಲಿಕ್ಕೆ ೪ ಘಂಟೆ ಬೇಕಾದವು. ಆಗ ಹೆಂಗಸಿನ ವಕೀಲರಿಗೂ, ನ್ಯಾಯಾಧೀಶರಿಗೂ ಮನೋರಂಜಕ ಮಾತುಗಳಾದವು.

ನ್ಯಾಯಾಧೀಶರು:—"ಏನು ವಕೀಲರೇ, ನಿನ್ನೆ ನಿಮ್ಮ ಕಕ್ಷಿಗಾರಳನ್ನು ನನ್ನಮೇಲೆ ಬಿಟ್ಟಿರಿ! ಈ ಕೋರ್ಟಿನ ಕೆಲಸಗಳನ್ನೆಲ್ಲ ನಿರ್ವಹಿಸುವದು ಯಾರಿಂದ ಸಾಧ್ಯ? ವಿಲಂಬವಾದರೆ, ನೀವೇಕೆ ಸಮಾಧಾನ ಹೇಳಲಿಲ್ಲ?

ವಕೀಲರು:—ನಾನು ಹೇಳಿದೆ ಸ್ವಾಮೀ! ಕೋರ್ಟಿಗೆ ಮನಸ್ಸೊಲಿಯುವಂತೆ ನಾನು ಹೇಳಲಿಲ್ಲವೆಂದು ಆಕೆಯು ದೂರಿದಳು; ಹಾಗಾದರೆ ನೀನೇ ಹೇಳಿಕೋ, ಎಂದು ನಾನು ಹೇಳಿದೆ.

ನ್ಯಾ:—ಅವಳನ್ನು ನನ್ನ ಮೇಲೆ ಬೀಳಲು ನೀವು ಏಕೆ ಬಿಟ್ಟಿರಿ?

ವ:—ಅವಳು ನನ್ನ ಮೇಲೆ ಬಿದ್ದಳು.

ನ್ಯಾ:—ನಿಮ್ಮ ಮೇಲೆ ಬಿದ್ದರೆ, ನೀವು ತಡೆಯಬೇಕು.

[ಕೋರ್ಟಿನ ಕೆಲಸಗಳನ್ನು ನಿರ್ವಹಿಸುವದು ಅಸಾಧ್ಯವಾದ ಬಳಿಕ, ಕಕ್ಷಿಗಾರರು ದೂರಿಕೊಂಡಾಗ ವಕೀಲರು ತಡೆಯಬೇಕಾದಾಗ, ನ್ಯಾಯಾಧೀಶರು ಅಧಿಕಾರತ್ಯಾಗ ಮಾಡುವದು ಲೇಸು.]

ಕಾನಡಾವೃತ್ತ.

ಮಿತಿ ಶ್ರೀಕ್ರೋಧನ ಸಂ। ಪುಷ್ಯ ಶು॥ ಷಷ್ಠಿ ಸೋಮವಾರ.

ವರ್ಣದ್ವೇಷದ ಹುಚ್ಚು!

ದಕ್ಷಿಣ ಆಫ್ರಿಕೆಯಲ್ಲಿ ನಡೆಯುವ ಭಾರತೀಯರ ಪೀಡನೆ.

ಬ್ರಿಟಿಶರ ಸಾಮ್ರಾಜ್ಯದಲ್ಲಿ ಸರ್ವ ಪ್ರಜೆಗಳು ಸಮಾನರೆಂದು ಖ್ಯಾತಿಯಿದೆ. ಬ್ರಿಟಿಶ ಸಾಮ್ರಾಜ್ಯದೊಳಗಿನ ಪ್ರಜೆಗಳೆಲ್ಲರೂ ಒಂದೇ ಸಮಾಜದವರಿದ್ದು, ಬಂಧು—ಬಳಗದವರಂತೆ ನಡಕೊಳ್ಳಬೇಕೆಂಬ ಉಪದೇಶವು ಆಗಿಂದಾಗ ಹೇಳಲ್ಪಡುತ್ತದೆ. ಬ್ರಿಟಿಶರ ಆಚಾರಗಳು ಮಾತ್ರ ಕೇವಲ ಸ್ವಾರ್ಥಪರವಾದವಿದ್ದು ಭಾರತೀಯರನ್ನು ಸ್ಥಿರವಾಗಿ, ಕ್ರಮವಾಗಿ ನಿರ್ಮೂಲಿಸಿ, ತಾವೇ ಗೌಡರಾಗಲು ಬ್ರಿಟಿಶರು ಹಾತೊರೆಯುತ್ತಿರುವರು. ದಕ್ಷಿಣ ಆಫ್ರಿಕೆಯಲ್ಲಿ ಭಾರತೀಯರನ್ನು ಬಹು ಪರಿಯಿಂದ ದಣಿಸಿದರೂ, ಭಾರತೀಯರು ಅವನ್ನೆಲ್ಲ ಸಹಿಸಿ, ಸ್ವಪರಾಕ್ರಮದಿಂದ ಈ ವರೆಗೆ ದಕ್ಷಿಣ ಆಫ್ರಿಕೆಯಲ್ಲಿ ಬದುಕಿ ಬಾಳ್ವೆ ಮಾಡಿದರು. ಆದರೆ, ಈಗ ಕಾಯಿದೆಯು ಮತ್ತೂ ಕಠಿಣವಾಗುತ್ತ ನಡೆದಿದೆ. ಬ್ರಿಟಿಶರು ಸುಲಿಯುವದಾಗಲಿ, ತಲೆಹೊಡೆಯುವದಾಗಲಿ, ನಾಶಮಾಡುವದಾಗಲಿ ಮೋಘಲ ಬಾದಶಹರಂತೆ ಬೇಕಾಬಿಟ್ಟೆಯಿಂದ ನಡಿಸದೆ, ಕೇವಲ ಕಾಯಿದೆಯಿಂದಲೇ ನಡಿಸುವರು. ಅಧರ್ಮಾಚಾರಗಳನ್ನು ಕಾಯಿದೆಯ ಗ್ರಂಥಗಳಲ್ಲಿ ನಮೂದಿಸಲು ಮೋಘಲರು ಹಿಂಜರಿಯುತ್ತಿದ್ದರೆಂಬಂತೆ ತೋರುತ್ತದೆ. ಪಾಶ್ಚಾತ್ಯ ಸುಧಾರಣೆಯ ಶಿಖರವನ್ನೇರಿದ ಬ್ರಿಟಿಶರು ಕಾಯಿದೆ ಮಾಡಿ, ಅದನ್ನು ಪ್ರಕಟಿಸಿ, ಆಕ್ಷೇಪಗಳನ್ನೆಲ್ಲ ಕೇಳಿಕೊಳ್ಳುವ ಢೋಂಗು ಮಾಡಿ, ಸಾರ್ವಜನಿಕ ಹಿತಕ್ಕೆಂದು, ಪ್ರಜಾರಕ್ಷಣೆಯ ಪ್ರದರ್ಶನ ಮಾಡಿ, ತಮಗೆ ಬೇಡಾದವರನ್ನು ದಣಿಸುತ್ತಾರೆ. ಇದೊಂದು ಪಾಶ್ಚಾತ್ಯ ಸುಧಾರಣೆಯ ಸ್ವಾರ್ಥಸಾಧನೆಯ ಉಪಾಯವು.

ಕಾಯಿದೆಯಿಂದ ದಕ್ಷಿಣ ಆಫ್ರಿಕೆಯಲ್ಲಿ ನಡೆಯುತ್ತಿರುವ ಹಾವಳಿಯನ್ನು ಭಾರತೀಯರು ವೃತ್ತಪತ್ರಗಳಲ್ಲಿ ಓದಿ ತಿಳಕೊಂಡಿರಬಹುದು. ಅದನ್ನು ಸ್ವತಃ ಅರುಹಲು ದಕ್ಷಿಣ ಆಫ್ರಿಕೆಯೊಳಗಿನ ದೇಶಬಾಂಧವರಾದ ಡಾ॥ ಅಬ್ದುರ್ ರಹಿಮಾನ, ಜೇಮ್ಸ ಗೋಡ್‌ಫ್ರೇ ಮೊದಲಾದ ಮಹನೀಯರು ಕಳೆದ ತಿಂಗಳ ತಾ॥ ೧೩ನೇಗೆ ಮುಂಬಯಿಗೆ ಬಂದಿರುವರು. ಭಾರತೀಯರಿಗೆ ಬ್ರಿಟಿಶರು ದಣಿಸುವ ತಂತ್ರದ, ಪರಿಪರಿಯ ಹಂಚಿಕೆಗಳನ್ನು ಅರುಹಿ, ದೇಶಬಾಂಧವರ ಬೆಂಬಲ ಪಡೆಯಲಿಕ್ಕೂ, ಸರ್ವಾಧಿಪತಿಗಳ ದರ್ಶನ ಪಡೆದು ಅವರಿಂದ ದಕ್ಷಿಣ ಆಫ್ರಿಕದ ಸರಕಾರದೊಡನೆ ಮಾತುಕಥೆ ನಡಿಸಲಿಕ್ಕೂ ಅವರು ಪ್ರಯತ್ನ ಮಾಡುವರು. ಡಾ॥ ಅಬ್ದುರ್ ರಹಿಮಾನರವರು ಮುಂಬಾಪುರಿಯಲ್ಲಿ ಕಾಲಿಟ್ಟ ಕೂಡಲೆ, "ಮುಂಬಯಿ ಕ್ರೊನಿಕಲ್" ಪತ್ರಿಕೆಯ ಪ್ರತಿನಿಧಿಗಳು ಅವರ ದರ್ಶನ ಪಡೆದು, ಅಲ್ಲಿಯ ಹಕೀಕತನ್ನು ಕೇಳಿದರು. ಡಾ। ಅಬ್ದುರ್ ರಹಿಮಾನ್‌ರವರು ಸಂಕ್ಷೇಪವಾಗಿ ಹೇಳಿದ್ದೇನಂದರೆ —

೧೮೮೫ನೇ ಇಸ್ವಿಯಿಂದ ಭಾರತೀಯರಿಗೆ ಅಲ್ಲಿ ಪೀಡನೆಯಾಗುತ್ತಿದೆ. ಟ್ರಾನ್ಸವಾಲ ಪರಗಣೆಯಲ್ಲಿ ಈ ಪೀಡನೆಯು ಮಿತಿಮೀರಿತು. ಆದುದರಿಂದ ಬ್ರಿಟಿಶರು ಟ್ರಾನ್ಸವಾಲ ಸರಕಾರದೊಡನೆ ಯುದ್ಧ ಹೂಡಿದರು. ಯುದ್ಧ ಮುಗಿದೊಡನೆ, ಬ್ರಿಟಿಶರೂ, ಟ್ರಾನ್ಸವಾಲ ಸರಕಾರದವರೂ ಕೂಡಿಕೊಂಡು ಭಾರತೀಯರಿಗೆ ದಣಿಸಹತ್ತಿದರು. ಮಹಾಯುದ್ಧದ ಸಮಯ ದೊಡ್ಡ ದೊಡ್ಡ ಜಾಹೀರಾತುಗಳು ಪ್ರಕಟವಾದವು. ಬ್ರಿಟಿಶ ರಾಜಕಾರಣಧುರಂಧರರು ಜಗದುದ್ಧಾರಕ, ಮಾನವಕೋಟಿಯ ಕಲ್ಯಾಣಕರ ನುಡಿಗಳನ್ನಾಡಿ, ಅಷ್ಟಕ್ಕೇ ಪೀಡನೆಗೆ ತಡೆಹಾಕಿದರು. ಯುದ್ಧ ಮುಗಿಯುವಷ್ಟರಲ್ಲಿ ಪುನಃ ಪೀಡನೆಗೆ ಪ್ರಾರಂಭವಾಯಿತು. ರಾಜ್ಯಕಾರಭಾರದ ಹಕ್ಕುಗಳು ಅಪಹರಿಸಲ್ಪಟ್ಟವು, ಸ್ಥಾನಿಕ ಸ್ವರಾಜ್ಯಾಧಿಕಾರದ ಹಕ್ಕುಗಳು ನಿಯಂತ್ರಿತವಾಗಿವೆ, ವ್ಯಾಪಾರ ಮಾಡಿಕೊಂಡು ಉಳಿಯುವದು ಕಠಿಣವಾಗಿದೆ, ಕಲಾಕೌಶಲ್ಯಗಳಲ್ಲಿ ಭಾರತೀಯರಿಗೆ ಸೇರಲು ಪ್ರತಿಬಂಧವಿದೆ, ಸದ್ಯಕ್ಕೆ ೫ ಸಾವಿರ ಮಂದಿ ಭಾರತೀಯರನ್ನು, ಮೂಲನಿವಾಸಿಗಳನ್ನೂ ಉಗಿಬಂಡಿಯ ಕೆಲಸದೊಳಗಿಂದ ಪದಚ್ಯುತ ಮಾಡಿ, ಅವರ ಸ್ಥಳದಲ್ಲಿ ಯುರೋಪಿಯನ್‌ರನ್ನು ನೇಮಿಸಿದೆ. ಈ ಯುರೋಪಿಯನ್‌ರು ಬಡವರಂತೆ. ಹೀಗೆ ದಣಿಸಿದರೂ, ಭಾರತೀಯರು ಮತ್ತೂ ಬಾಳ್ವೆ ಮಾಡಿಕೊಂಡಿರುವರು. ಅದ್ದರಿಂದ ಏನು ಮಾಡುವದು?

ಪುನಃ ಕಾಯಿದೆಗಳಾಗಲಿಕ್ಕೆ ಪ್ರಾರಂಭವಾದವು. 'ಕಲರ ಬಾರ ಬಿಲ್' ಎಂಬ ಕಾಯಿದೆಯಾಯಿತು. ಈ ಕಾಯಿದೆಯಿಂದ, ಯಂತ್ರವಿದ್ಯೆಯಲ್ಲಿ ಯುರೋಪಿಯನ್ನರ ಹೊರತು ಇತರರಿಗೆ ಕೆಲಸಕ್ಕೆ ಕೊಳ್ಳಬಾರದೆಂದು ವಿಧಿಸಲಾಯಿತು. 'ಲಿಕರ ಲೊ ಎಮೆಂಡಮೆಂಟ ಬಿಲ್' ಎಂಬದೊಂದು ಕಾಯಿದೆಯಾಯಿತು. ಈ ಕಾಯಿದೆಯಂತೆ ಮದ್ಯದ ಕೈಗಾರಿಕೆ, ಮದ್ಯದ ವ್ಯಾಪಾರಗಳಲ್ಲಿ ಯುರೋಪಿಯನ್ನರಿಗೇ ನೇಮಿಸಿಕೊಳ್ಳಬೇಕೆಂದು ವಿಧಿಸಲಾಯಿತು. ಇದರಿಂದ ಭೋಜನಗೃಹಗಳಲ್ಲಿ ಚಾಕರಿ ಮಾಡುವ ಬಡ ಭಾರತೀಯರೂ, ಮೂಲ ನಿವಾಸಿಗಳೂ ನಿರುದ್ಯೋಗಿಗಳಾಗಬೇಕಾಗಿದೆ. ಇನ್ನೊಂದು ಕಾಯಿದೆಯು ಮತ್ತೂ ಭಯಂಕರವು. "ಏರಿಯಾಸ ರಿಝರ್ವೇಶನ್ ಎಂಡ ಇಮಿಗ್ರೇಶನ್ ರಿಸ್ಟ್ರಿಕ್ಶನ್ ಬಿಲ್." ಈ ಕಾಯಿದೆಯ ಸ್ವರೂಪವನ್ನು ಈ ಮುಂಚೆ ನಾವು ಚರ್ಚಿಸಿರುವೆವು. ಸ್ವಲ್ಪದರಲ್ಲಿ ಹೇಳಬೇಕಾದರೆ, ಅಲ್ಲಿಯ ಸರಕಾರವು ವಿಧಿಸಿದ್ದ ಸ್ಥಳದಲ್ಲಿ, ವಿಧಿಸಿದಷ್ಟು ಮುದ್ದತ್ತಿನ ವರೆಗೆ ಭಾರತೀಯರು ಉಳಕೊಳ್ಳಬೇಕೆಂದು ತೀರ್ಮಾನವಾಗಿದೆ. ಈ ಕಾಯಿದೆಯಿಂದ ಭಾರತೀಯರಿಗೆ ಹಿತವನ್ನೇ ಮಾಡುತ್ತದೆಂದು ಸರಕಾರವು ಹೇಳಲುಮರೆಯಲಿಲ್ಲ. ಈ ಮೂರೂ ಕಾಯಿದೆಗಳು ಇನ್ನೂ ಚರ್ಚಿಸಲ್ಪಡುತ್ತಿವೆ. ಇವುಗಳ ಸ್ವರೂಪವನ್ನು ಸ್ಪಷ್ಟವಾಗಿ ನಮ್ಮ ಸರಕಾರಕ್ಕೆ ತಿಳಿಸಲಿಕ್ಕೂ, ಹಿಂದುಸ್ಥಾನ ಸರಕಾರವೆಂಬ ಅಭಿಮಾನವಿದ್ದರೆ, ದಕ್ಷಿಣ ಆಫ್ರಿಕೆಯಲ್ಲಿ ನಡೆದಿರುವ ಹಿಂದೀಯರ ಮೇಲಿನ ದಾಳಿಯನ್ನು ಪರಿಹರಿಸಲಿಕ್ಕೂ ಡಾ॥ ಅಬ್ದುರ್ ರಹಿಮಾನ್‌ರವರು ಹಿಂದುಸ್ಥಾನ ಸರಕಾರದೊಡನೆ ಕೇಳಿಕೊಳ್ಳುವರು. ಸರ್ವಾಧಿಪತಿ ರೀಡಿಂಗ ದೊರೆಗಳು ಡಾ॥ ಅಬ್ದುರ್ ರಹಿಮಾನ್ ಪ್ರಭೃತಿ ಶಿಷ್ಟರನ್ನು ಮೊನ್ನೆ ತಾ. ೧೯ ನೇ ಗೆ ಕಲಕತ್ತೆಯಲ್ಲಿ ಕಾಣುವವರಿದ್ದರು.

ಇದೇ ಸಮಯ ಈ ಕಾಯಿದೆಯಿಂದ ಅಲ್ಲಿಯ ಪಾರ್ಲಿಮೆಂಟು ಏನು ಮಾಡಬಯಸುತ್ತದೆಂಬ ಆಲೋಚನೆಯು ಪ್ರಕಟವಾಗಿದೆ. ರೆವ್ಹರೆಂಡ ಫಿಶ್ ಎಂಬ ಕ್ರೈಸ್ತ ಧರ್ಮೋಪದೇಶಕರು ಸದ್ಯಕ್ಕೆ ದರ್ಬಾನದಲ್ಲಿ ನುಡಿದದ್ದೇನಂದರೆ:— "ದಕ್ಷಿಣ ಆಫ್ರಿಕೆಯ ಪ್ರಜಾಜನರಲ್ಲಿ ಭಾರತೀಯರು ಸೇರಿಹೋಗಬೇಕೆಂದು ಸರಕಾರವು ಬಯಸಿದ್ದಿಲ್ಲ. ಅಥವಾ ಏಶಿಯಾದ ಜನರು ವ್ಯಾಪಾರ ಮಾಡಬೇಕೆಂದಿಲ್ಲ. ಈ ವ್ಯಾಪಾರದಿಂದ ದಕ್ಷಿಣ ಆಫ್ರಿಕೆಯು ನಿಸ್ತೇಜವಾಗಿದೆ. ಭಾರತೀಯರು ಪರಾನ್ನಪುಷ್ಟರು. ಮತ್ತೂ ಒಂದು ಕಾರಣವಿದೆ. ಹಿಂದೀ ವರ್ತಕರ ಬೆಂಬಲದಿಂದ ಮೂಲನಿವಾಸಿಗಳಲ್ಲಿ ಇಸ್ಲಾಮು ಧರ್ಮವನ್ನು ಭಾರತೀಯರು ಪ್ರಸಾರ ಮಾಡುತ್ತಾರೆ. ಇದರಿಂದ ಕ್ರೈಸ್ತ ಧರ್ಮದ ಪ್ರತಿಷ್ಠೆಯು ಕುಗ್ಗಿದೆ. ಯುರೋಪಿಯನ್ ಸಂಸ್ಕೃತಿಯ ಹೆಚ್ಚಳಕ್ಕೆ ಬಾಧೆ ತಟ್ಟಿದೆ. ಭಾರತೀಯರು ಬ್ರಿಟಿಶ ಪ್ರಜಾಜನರು. ಚೀನರಂತೆ, ಅವರಿಗೆ ಹಡಮರಿಗೆ ಕಟ್ಟಿ ಥಟ್ಟನೆ ಹೊರದೂಡಲು ಬರುವದಿಲ್ಲ. ಆದರಿಂದ ಭಾರತೀಯರನ್ನು ನಿಯಂತ್ರಿಸಬೇಕು. ದಕ್ಷಿಣ ಆಫ್ರಿಕೆಯಲ್ಲಿ ಬಾಳ್ವೆ ಮಾಡುವದು ಭಾರತೀಯರಿಗೆ ಅಶಕ್ಯವಾಗುವಂತೆ ನಿಯಮಗಳು ಏರ್ಪಡಬೇಕು. ಇದರಿಂದ

ಈ ಕಾಯಿದೆಯಲ್ಲಿ ಹಿಂದೀಯರು, ವಿಂಗ ಸಿಟ್ಟ ಭೂಭಾಗದಲ್ಲಿ ಮಾತ್ರ ಉಳಕೊಳ್ಳ ಬೇಕೆಂದು ನಮೂದಿಸಲ್ಪಟ್ಟಿದೆ." ಫೆರವರು ದಕ್ಷಿಣ ಆಫ್ರಿಕೆಯ ಪಾರ್ಲಿಮೆಂಟ ಸಭೆಯ ಸಭಾಸದರು; ಸರಕಾರದ ಪುರಸ್ಕರ್ತರು. ಈ ಸಭೆಗೆ ದರ್ಬಾನ ಮ್ಯುನಿಸಿಪಾಲಿಟಿಯ ಅಧ್ಯಕ್ಷ ರು ಸಭಾಪತಿಗಳಾಗಿದ್ದರು. ಈ ಸಭೆಯು ದಕ್ಷಿಣ ಆಫ್ರಿಕೆಯೊಳಗಿನ ವಿಚಾರಶೀಲ, ಪಕ್ಷಾತೀ ತ ಜನರಿಂದ ಸೇರಿಸಲ್ಪಟ್ಟಿತ್ತೆಂದು "ಕ್ರೋನಿಕ ಲ್" ಪತ್ರಿಕೆಯ ದರ್ಬಾನದ ಸುದ್ದಿಗಾರರು ಹೇಳುತ್ತಾರೆ. ಅಂದ ಬಳಿಕ, ಈ ಕಾಯಿದೆ ಯು ನಿಜರೂಪವೇನು! ನಿಜಧೋರಣವೇನು! ಉದ್ದೇಶವೇನು! ಎಂಬುದರ ಕಲ್ಪನೆಯು ವಾಚಕರಿಗುಂಟಾಗದಿರದು.

ಬ್ರಿಟಿಶ ಸಾಮ್ರಾಜ್ಯದೊಳಗಿನ ಭಾರತೀಯ ರ ಸ್ಥಿತಿಯಿದು. ಫೆರವರು ನುಡಿದಂತೆ, ಭಾ ರತೀಯರಿಗೆ ಕ್ರಮವಾಗಿ ಧ್ವಂಸ ಮಾಡುವ ಪ್ರಜಾಸಂಹಾರಕ ಕಾಯಿದೆಯನ್ನು ಸರಕಾರ ವು ಮಂಜೂರು ಮಾಡಲಿಕ್ಕಿದೆ. ದಕ್ಷಿಣ ಆಫ್ರಿಕೆ ಯ ಸರಕಾರವು ಚೀನ ದೇಶದವರಿಗೆ ಗಂಟು ಮೂಟೆ ಕಟ್ಟಿ ಥಕ್ಕನೆ ಹೊರತಳ್ಳಿದಂತೆ, ಭಾರ ತೀಯರಿಗೂ ಹೊರತಳ್ಳಿದ್ದರೆ, ಭೂಮಂಡಲಕ್ಕೆ ಬ್ರಿಟಿಶ ಸಾಮ್ರಾಜ್ಯದ ರಾಜ್ಯಕಾರಭಾರದ ಅರಿ ವಾಗುತ್ತಿತ್ತು; ಮಲಗೊಂಡಿದ್ದ ಭಾರತೀಯ ರೂ ಎದ್ದೇಳುತ್ತಿದ್ದರು; ದಕ್ಷಿಣ ಆಫ್ರಿಕೆಯೊಳ ಗಿನ ಹಿಂದೀಯರಿಗೂ ಕ್ರಮವಾಗಿ ನಾಶಹೊಂ ದುವ ಯಮಯಾತನೆಯು ತಪ್ಪುತ್ತಿತ್ತು. ಇಂ ಥ ಕಾಯಿದೆಯಲ್ಲಿ ತಿದ್ದುಪಡಿಯನ್ನು ಸೂಚಿಸ ಲು ನಮ್ಮ ಹಿಂದುಸ್ಥಾನ ಸರಕಾರವು ದಕ್ಷಿಣ ಆಫ್ರಿಕಕ್ಕೆ ಶಿಷ್ಟಮಂಡಳವನ್ನೊಂದು ಕಳುಹಿದೆ. ಕತ್ತೆಗೆ ಜರತಾರಿ ಹಾಕಿ ಕುದುರೆ ಮಾಡುವ ಯೋಜನೆಯಿದು ! ಸರ್ವಾಧಿಪತಿಗಳು ಇದ ಕ್ಕಿಂತ ತೀವ್ರ ಉಪಾಯವನ್ನು ಕೈಕೊಂಡರೆ ಮಾತ್ರ ಭಾರತೀಯರು ಬದುಕುವರು. ಡಾ| ಅಬ್ದುರ್ ರಹಿಮಾನರಿಗೆ ಏನು ಉತ್ತರ ದೊರ ಕುತ್ತದೆಂದು ನೋಡಲು ಭಾರತೀಯರು ಆತುರ ರಾಗಿರುವದು ಸಹಜವು.

ಸ್ಫುಟ ಸೂಚನೆಗಳು.

೧. ಪೂರ್ವಸಂಕೇತದಂತೆ, ಮೋಸಲ್ ಪ್ರದೇ ಶವು ಬ್ರಿಟಿಶರಿಗೆ ಸೇರಿದೆಂದು ರಾಷ್ಟ್ರಸಂಘವು ಈ ದ ೧೬ನೇ ತಾರೀಖಿಗೆ ಜಾಹೀರಪಡಿಸಿದೆ. ಈ ನಿರ್ಣಯವು ಅನಪೇಕ್ಷಿತವಲ್ಲ. ಬ್ರಿಟಿಶರು ಮೋಸ ಲ್ ಪ್ರದೇಶದ ಮೇಲೆ ಕಣ್ಣಿಟ್ಟಾಗ, ಅವರ ಕೈ ಗೊಂಬೆಯಾದ ರಾಷ್ಟ್ರಸಂಘವು ಅದನ್ನು ಹೇಗೆ ಅನ್ಯ ಮಾಡದಿದ್ದೀತು ? ರಾಷ್ಟ್ರಸಂಘದ ಸಭೆಯು ಲಿ ತುರ್ಕಸ್ಥಾನದ ಪ್ರತಿನಿಧಿಗಳು ಆ ದಿನ ಹಾಜ ರಿರಲಿಲ್ಲ. ರಾಷ್ಟ್ರಸಂಘದ ಕರ್ತವ್ಯವು ಕೇವಲ ಏಕ ಪಕ್ಷದ್ದೆಂದು ತುರ್ಕಸ್ಥಾನದ ಅಭಿಮತವಾಗಿದ್ದರಿಂದ, ಅವರು ಈ ಪ್ರಕರಣದ ನಿರ್ಣಯವು ಜಾಹೀರಾ ಗುವ ಸಭೆಯಲ್ಲಿರುವದು ಅನುಚಿತವೆಂದು ಅಭಿಪ್ರಾ ಯವನ್ನು ಹಿಂದರಿದಿದ್ದರು. ಇಸ್ಮತ ಪಾಶಾರವರು ನುಡಿದಂತೆ, ರಾಷ್ಟ್ರಸಂಘದವರು ತುರ್ಕ ಪ್ರತಿನಿಧಿ ಗಳೊಡನೆ ಒಪ್ಪಂದದ ಮಾತುಗಳನ್ನು ತೆಗೆಯದೆ, ಬ್ರಿಟಿಶ ಪಕ್ಷಪಾತಿಗಳಾಗಿ ಈ ನಿರ್ಣಯ ಮಾಡಿರು ವರು. ಈ ನಿರ್ಣಯದಿಂದ ಬ್ರಿಟಿಶರಿಗೆ ಯುದ್ಧ ಕಾಲದಲ್ಲಿ ಆಕ್ರಮಿಸಿದ ಪ್ರದೇಶದಂತೂ ಸಿಕ್ಕಿತು; ಆಕ್ರಮಿಸದ ಪ್ರದೇಶವೂ ಸಿಕ್ಕಿದೆ. ಅಂದ ಬಳಿಕ, ರಾಷ್ಟ್ರಸಂಘದ ನಿರ್ಣಯವು ಎಷ್ಟರಮಟ್ಟಿಗೆ ನಿಷ್ಪಕ್ಷ ಪಾತದ್ದೆಂದು ಸ್ಪುಟವಾಗುವದು. ಈ ನಿರ್ಣಯವ ನ್ನು ತುರ್ಕರು ಅಲ್ಲಗಳೆದು, ಸ್ವತ್ವವನ್ನು ಕಾಪಾ ಡಲು ಪರಮಾವಧಿಯ ಯತ್ನಮಾಡುವರು. ಶಾ ಮ-ದಾಮಗಳಿಂದ ನಿರ್ಣಯವಾಗದಿದ್ದರೆ, ಭೇದ- ದಂಡಗಳಿಂದ ನಿರ್ಣಯವಾಗುವ ದುಶ್ಚಿನ್ಹಗಳು ತೋರುತ್ತವೆ. ಸದ್ಯಕ್ಕೆ ಯುದ್ಧದ ಪ್ರತ್ಯಕ್ಷ ಲಕ್ಷಣ ಗಳು ತೋರದಿದ್ದರೂ, ರಾಷ್ಟ್ರಸಂಘದವರು — ಯು ದ್ಧ ಪ್ರಸಂಗವನ್ನು ಹೋಗಲಾಡಿಸಲು ಜನ್ಮವನ್ನೆತ್ತಿ ದ ರಾಷ್ಟ್ರಸಂಘದವರು — ಮೋಸಲ್ ನಿರ್ಣಯದಿಂ ದ ರಣದೇವಿಯ ಆವಾಹನ ಮಾಡಿರುವರೆಂದು ಹೇ ಳಬಹುದು. ಇನ್ನೂ ತುರ್ಕರು ಸ್ವಾಭಿಮಾನದಿಂದ ಸಂಧಾನ ಮಾಡಿಕೊಳ್ಳಲು ತಯಾರಿರುವರು. ಬ್ರಿಟಿ ಶ ಪ್ರತಿನಿಧಿಗಳು, ಶಾಂತತಾವಾದಿಗಳಾದ ಬ್ರಿಟಿಶ ರು ಶೀಘ್ರವೇ ಈ ಪ್ರಕರಣದ ಇತ್ಯರ್ಥವನ್ನು ಸಾ ಮೋಪಾಯಗಳಿಂದ ನಿರ್ಣಯಿಸಿಕೊಳ್ಳುವದು ಶ್ರೇ ಯಸ್ಕರವು.

---

೨. ಪಂಜಾಬದ ಕಾಯಿದೆ ಕೌನ್ಸಿಲಿನಲ್ಲಿ ಅಲ್ಲಿ ಯ ಜೈಲುಗಳನ್ನು ತಪಾಸ ಮಾಡುವ ಅಧಿಕಾರವು ಕಾಯಿದೆ ಕೌನ್ಸಿಲಿನ ಸಭಾಸದರಿಗಿರಬೇಕೆಂಬ ಠರಾ ವಿಗೆ ಸರಕಾರವು ವಿರೋಧ ಮಾಡಿದರೂ, ಅದು ಸದ್ಯಕ್ಕೆ ಮಂಜೂರಾಗಿದೆ. ಇದೇ ಸಮಯ ಅಲ್ಲಿಯ ಕಾಯಿದೆ ಕೌನ್ಸಿಲಿನ ಸಭಾಸದರಾದ ಲಾಲಾ ದೋ ಧರಾಜರವರು ಮೊಂಟಗೊಮೇರಿ ಜೈಲಿಗೆ ತಪಾಸಿ ಗಾಗಿ ಹೋದಾಗ, ಇಬ್ಬ ಕೈದಿಗಳು ಅವರನ್ನು ಕರೆದು, ಅವರ ಮೈಮೇಲೆ ಕೆಸರು ಒಗೆದು, ಅವರಿಗೆ ಉಜ್ಜನ ಅಭಿಷೇಕ ಮಾಡಿದರು. ಬಳಿಯಲ್ಲಿ ೧೨ ಮಂದಿ ವೊರ್ಡರ ಯಾನೆ ಕಾವಲಗಾರರಿದ್ದರೂ, ಅವರು ಈ ಕುರಿತು ತಟಸ್ಥ ವೃತ್ತಿಯನ್ನೇ ಸ್ವೀಕರಿಸಿದ್ದ ರು. ಜೈಲರನ ಹಿಬ್ಬ ನೌಕರನೂ ಅಲ್ಲಿಯೇ ಇದ್ದನು. ಆತನೂ, ಏನೂ ಅರಿಯದವನಂತೆ, ತಣ್ಣಗೆ ನಿಂತು ಕೊಂಡಿದ್ದನು. ರೀತಿಯಂತೆ ವೊರ್ಡರನು ಸಿಳ್ಳು ಕೂಡ ಕೊಡಲಿಲ್ಲ. ಇದರ ಮೇಲಿಂದ ಜೈಲರರ ಮದೋಧನೆಯಿಂದಲೇ ತಮಗೆ ಅಪಮಾನವಾಯಿ ತೆಂದು ದೋಧರಾಜರವರು ಪ್ರಕಟಿಸಿರುವರು. ಪಂಜಾ ಬದ ಜೈಲುಗಳೊಳಗಿನ ನಡಾವಳಿಯು ಸದ್ಯಕ್ಕೆ ಬ ಹಳ ಲೋಕಾಪವಾದಕ್ಕೀಡಾಗಿದೆ. ಈ ಕುರಿತು ಚೌ ಕಶಿ ಮಂಡಳವೂ ನೇಮಿಸಲಾಗಿದೆ. ಜೈಲುಗಳಲ್ಲಿ ಅಧಿ ಕಾರಿಗಳಿಗೆ ಲಂಚ ಕೊಟ್ಟು ಕೆಲ ನಿರ್ಲಜ್ಜ ಕೈದಿಗಳು ತಮಗೆ ಅವಶ್ಯವುಳ್ಳ ವಿಷಯೋಪಭೋಗಗಳನ್ನು ಸಹ ಪಡೆಕೊಳ್ಳುತ್ತಿರುವರಂತೆ. ದೋಧರಾಜರವರಂಥ ದೇಶಸೇವಕರು ಜೈಲುಗಳ ತಪಾಸ ಮಾಡಹತ್ತಿದ್ದಲ್ಲಿ, ಅಂಥ ಪ್ರಕಾರಗಳು ಬೈಲಿಗೆ ಬಂದು, ಜೈಲು ಅಧಿ ಕಾರಿಗಳ ಮೇಲೆ ಆಪತ್ತು ಬಂದು, ಅನರ್ಥವಾಗಬ ಹುದು; ಅದರಿಂದ ಈ ಉಪಾಯವನ್ನು ಪರಸ್ಪರ ಕೈದಿಗಳಿಂದಲೇ ಜೈಲಿನ ಅಧಿಕಾರಿಗಳು ಒದಗಿಸಿದ ರವೇಕೆಂದು ದೋಧರಾಜರವರ ತರ್ಕ. ಈ ಕುರಿತು ಪಂಜಾಬ ಕಾಯಿದೆ ಕೌನ್ಸಿಲಿನಲ್ಲಿ ಚರ್ಚೆಯಾಗಿ, ಈ ಪ್ರಕಾರವು ಶಾಸನಾರ್ಹವೆಂದು ಅಭಿಪ್ರಾಯವಾ ಗಿದೆ. ಸರಕಾರವು ಈ ಪ್ರಕಾರಗಳ ಬಗ್ಗೆ ವ್ಯಸನಪ್ರದ ರ್ಶನ ಮಾಡಿ, ಇಬ್ಬ ಕೈದಿಗಳ ಕುರಿತು ತಕ್ಕ ಚೌಕ ಶಿಯಾಗುವದೆಂದರು. ಜೈಲ ಸುಪರಿಂಟೆಂಡೆಂಟರವ ರಿಗೆ ಒಮ್ಮೆಲೇ ಪದಚ್ಯುತ ಮಾಡಬೇಕೆಂದು ಲಾಲಾ ದೋಧರಾಜರವರು ಗೃಹಮಂತ್ರಿಗಳಿಗೆ ತಿಳಿಸಿದ್ದರು. ಆ ಕುರಿತು ಇನ್ನೂ ಏನೂ ವ್ಯವಸ್ಥೆಯಾಗಲಿಲ್ಲ. ಯಾಕೆ?

೩. ಡಿಸ್ಟ್ರಿಕ್ಟ ಲೋಕಲ್ ಬೋರ್ಡುಗಳ ಸಾಂಪ ತ್ತಿಕ ಸ್ಥಿತಿಯನ್ನು ವಿಚಾರಿಸಿ, ಅವುಗಳಿಗೆ ಸರಕಾರವು ಕೊಡತಕ್ಕ ಸಹಾಯದ ವಿಚಾರ ಮಾಡಲು ಮನ್ನ ಮುಂಬಯಿ ಸರಕಾರದವರು ಚೌಕಶಿ ಮಂಡಳವ ನ್ನೊಂದು ನೇಮಿಸಿದ್ದರು. ಈ ಮಂಡಳದವರು ತಮ್ಮ ಶಿಫಾರಸುಗಳನ್ನು ಪ್ರಕಟಿಸಿದ್ದಾರೆ. ಸರಕಾರದವರು ಈಗ ಗ್ರೇಂಟ-ಇನ್-ಏಡ ಪದ್ಧತಿಯಂತೆ ಆಯಾ ಬಾಬುಗಳಿಗೆ ಗ್ರೇಂಟುಗಳನ್ನು ಕೊಡುತ್ತಾರೆ. ಈ ಪದ್ಧ ತಿಯನ್ನು ರದ್ದು ಮಾಡಿ, ಸರಕಾರವು ಬೋರ್ಡುಗ ಳಿಗೆ ಖರ್ಚಿನಲ್ಲಿ ೩ ರಲ್ಲಿ ೨ ಪಾಲನ್ನು ಕೊಡಬೇ ಕೆಂದು ಮಂಡಳದ ಶಿಫಾರಸಿದೆ. ಹಿಂದಿನ ೫ ವರ್ಷಗಳ ಸರಾಸರಿ ತೆಗೆದು, ಆ ಮಾನದಿಂದ ಖರ್ಚಿನ ಅಂಕೆಗಳನ್ನು ನಿರ್ಧರಿಸಬೇಕಾಗಿಯೂ, ೫ ವರುಷಗಳ ವರೆಗೆ ಈ ರಕಮಿನಲ್ಲಿ ಹೆಚ್ಚು ಕಡಿಮೆ ಮಾಡಬಾರ ದಾಗಿಯೂ ಕಮೀಟಿಯವರು ಶಿಫಾರಸು ಮಾಡಿರು ವರು. ೩ ರಲ್ಲಿ ೨ ಪಾಲು ಖರ್ಚ ಇಲಾಖೆಯೊಳ ಗಿನ ಎಲ್ಲ ಬೋರ್ಡುಗಳಿಗೆ ದೊರೆಯುವದು. ಯಾವ ದೇ ಬೋರ್ಡುಗಳು ಮತ್ತೂ ಬಡ ಸ್ಥಿತಿಯಲ್ಲಿದ್ದಲ್ಲಿ ಅವುಗಳ ಸ್ಥಿತಿಯ ವಿಚಾರದಿಂದ ಸರಕಾರವು ಪ್ರತ್ಯೇ ಕ ಗ್ರೇಂಟು ಕೊಡಬೇಕಾಗಿಯೂ ಮಂಡಳದ ಹೇಳಿ ಕೆಯಿದೆ. ಈ ಯೋಜನೆಯಿಂದ ಸರಕಾರಕ್ಕೆ ರೂ. ೩೬ ಲಕ್ಷ ಹೆಚ್ಚು ಖರ್ಚ ತಗಲುವ ಅಂದಾ ಜಿದೆ. ಕಮೀಟಿಯವರ ನಿರ್ಣಯಗಳು ಏಕ ಮತ್ಯದಿಂದ ಆಗಿರುವದರಿಂದಲೂ, ಕಮೀಟಿ ಯೊಳಗಿನ ಸರಕಾರಿ ಅಧಿಕಾರಿಗಳು ಈ ಶಿಫಾರ ಸುಗಳಿಗೆ ಒಪ್ಪಿಗೆಯನ್ನಿತ್ತಿದ್ದರಿಂದಲೂ ಈ ಶಿಫಾರಸುಗ ಳು ಸರಕಾರಕ್ಕೆ ಮಾನ್ಯವಾಗುವವೆಂದು ಹೇಳಲ ಡ್ಡಿಯೇನಿಲ್ಲ. ಶಿಕ್ಷಣ ಖರ್ಚಿನ ವಿಚಾರವು ಪ್ರತ್ಯೇಕವಿ ದ್ದದರಿಂದ, ಈ ಕಮೀಟಿಯವರು ಆ ಕುರಿತು ವಿಚಾ ರಮಾಡಲಿಲ್ಲ.

೪. ಲೋಕಲ್ ಬೋರ್ಡುಗಳಿಗೆ ಕೊಡತಕ್ಕ ಹಣಕ್ಕಾಗಿ ಸರಕಾರವು ಹೊಸ ಕರಗಳನ್ನೆತ್ತುವದ ಮಾಡುವ ವಿಚಾರದಲ್ಲಿದೆ. ಅಬಕಾರಿ ಉತ್ಪನ್ನದ ಮೇಲೆ ರೂಪಾಯಿಗೊಂದಾಣೆ ಇಟ್ಟರೆ, ೨೪ ಲಕ್ಷ ರೂಪಾಯಿ ಉತ್ಪನ್ನವಾಗುವವು; ಟೋಲ ನಾಕೆಗ ಳ ಪುನರುದ್ಧಾರ ಮಾಡಿದ್ದಲ್ಲಿ ೧೨ ಲಕ್ಷ ರೂಪಾಯಿ ಗಳು ಹುಟ್ಟುವವು. ಹೀಗೆ ೩೬ ಲಕ್ಷ ರೂಪಾಯಿಗ ಳನ್ನು ಪರಸ್ಪರ ಎತ್ತಿ, ಪರಸ್ಪರ ಕೊಡಬೇಕೆಂದು ಮಂಡಳದ ಶಿಫಾರಸಿದೆ. ಅಬಕಾರಿ ಖಾತೆಯು ಉ ತ್ಪನ್ನವನ್ನು ಪ್ರಜಾಹಿತಕಾರ್ಯಕ್ಕಾದರೂ ಎಣಿಸಲಾ ಗದು. ಹೆಂಡಗುಡಿತದಿಂದ ಸರಕಾರಿ ಕೋಶ ತುಂಬುವದು ಮಹಾಪಾತಕವೆಂದು ಸಮಸ್ತ ದೇಶ ಹಿತೈಷಿಗಳು ಸಾರುತ್ತಿದ್ದಾಗ, ಅದಕ್ಕೂ ಲೋಕ

ಲ್ ಬೋರ್ಡಿಗೂ ಕಮೀಟಿಯವರು ಹವಾಲೆ ಕಾ ಕಿದ್ದು ಈ ತ ಅನುಚಿತವು ಟೋಲು ಕಟ್ಟೆಗಳಿಂದ ವಾಹನಗಳಿಗೆ ಬಹಳ ಕಷ್ಟವಾಗುತ್ತದೆಂಬ ಮಾತನ್ನು ನಾವು ಇಂದು ಹೇಳಬೇಕಾಗಿಲ್ಲ ಆ ಕುರಿತ, ಬಹಳ ಚರ್ಚೆಯಾಗಿ, ಕೊನೆಗೆ ಸರಕಾರವು ಲೋಕಮತವನ್ನು ಸಮಾಧಾನಪಡಿಸಲು. ಕೆಲ ಕೆಲವು ಟೋಲು ಕಟ್ಟೆಗಳನ್ನು ಕಿತ್ತುಹಾಕಿತ್ತು ಬಂದಿರ ಮನು, ಅವನ್ನು ಬೋರ್ಡುಗಳಿಗಾಗಿ ಪುನ ಉದ್ಧರಿಸುವದು ಅನ್ಯಾಯವು. ಬೋರ್ಡುಗಳು ವ್ಯಾಪಾರ-ಉದ್ದಿಮೆ-ಕೈಗಾರಿಕೆಗಳ ಮೇಲೆ ತೆರಿಗೆಯನ್ನು ಹೇರಿ ಸಂಪತ್ತಿ ಧ್ಯವಯ ಮಾಡಿಕೊಳ್ಳಬಹುದೆಂದೂ ಕಮೀಟಿಯವರು ಅಭಿಪ್ರಾಯಪಟ್ಟಿರುವರು.

ಈ ಹೊಸ ಕರಗಳ ಕುರಿತ, ಯಾರದೂ ಅನುಕೂಲ ಅಭಿಪ್ರಾಯ ಕೊಡಲಾರರು. ಸುಧಾರಣೆಯನ್ನು ಸೂಚಿಸುವಾಗ, ಅದಕ್ಕೆ ತಗಲುವ ಹಣವನ್ನೆಲ್ಲಲು ಹೊಸ ಕರಗಳ ಸೂಚನೆ ಮಾಡಬೇಕೆಂಬ ದೊಂದು ಅನುಕೂಲವಾದ ರೂಢಿಯು ಬಿದ್ದಿದೆ ಈಗಿನ ಸರಕಾರದ ಖರ್ಚು ವಿಪರೀತ ಬೆಳೆದದೆ, ಮಹಾಯುದ್ಧವಾದಂದಿನಿಂದ ವಿಶೇಷ ಬೆಳೆದಿದೆ ಯುದ್ಧ ಮುಗಿದರೂ ಕರಗಳು ಕಡಿಮೆಯಾಗುವದಿಲ್ಲ ಇಂಥ ಸ್ಥಿತಿಯಲ್ಲಿ ಸುಧಾರಣೆಯ ಹೊಸ ಕರಗಳನ್ನು ಸೂಚಿಸುವ ಮೊದಲು, ಆದೇ ಸರಕಾರದ ಆಯ-ವ್ಯಯವನ್ನು ಸ್ವತಂತ್ರ ಮಂದಿಗಳು ಸ್ವತಂತ್ರ ಧೋರಣದಿಂದ ಪರ್ಯಾಲೋಚಿಸತಕ್ಕದ್ದು ಇದರಿಂದ ಸರಕಾರದ ಖರ್ಚು, ಸುಧಾರಣೆಯ ಖರ್ಚು ಈಗಿನ ಎತ್ತುವಳಿಯಿಂದ ಸಾಗದಂತಾದರೆ, ಹೊಸ ಕರಗಳ ಎತ್ತುವಳಿ ಮಾಡಲಡ್ಡಿಯೇನಿಲ್ಲ; ಮಾಡಲೇಬೇಕು. ಇಲ್ಲದಿದ್ದರೆ, ಆ ಸುಧಾರಣೆಗೆ ಆ ಕರ, ಆ ಹಿತಕ್ಕೆ ಈ ತೆರಿಗೆ, ಹೀಗೆ ಗಂಟುಹಾಕುವದು ಮತ್ತು ಅನೆಯಂಥ ದೊಡ್ಡ ದೊಡ್ಡ ತೆರಿಗೆಗಳನ್ನು ಅಳರಸರ ಖರ್ಚಿಗಾಗಿ, ಪಿಂಚಣಿಗಾಗಿ ಖರ್ಚು ಮಾಡ ಬೇಕ್ರೇಯುಕ್ಕರವಲ್ಲ ಹಿತಪ್ರದವಲ್ಲ, ರಾಜ್ಯಧೋರಣವೂ ಅಲ್ಲ. ಪ್ರಾಂತಿಕ ಸರಕಾರವು ಸೂಕ್ತರೀತಿಯಿಂದ ಪರ್ಯಾಲೋಚಿಸಿದರೆ, ಆಯ-ವ್ಯಯ ಪತ್ರಿಕೆಯನ್ನು ತೆಗೆದುಕೊಂಡು ಅನಾವಶ್ಯಕ ಖರ್ಚಿನ ಬಾಬುಗಳನ್ನು ರದ್ದುಮಾಡಲು ಮನಸ್ಸಿಟ್ಟು ಮಾಡಿದರೆ — ಕೋಟಿ ಲಕ್ಷವೇಕೆ? — ಕೋಟಿ-ಕೋಟಿ ರೂಪಾಯಿಗಳು ಸಹಜವಾಗಿ ಉಳಿಯುವವು ಬೋರ್ಡುಗಳಿಗಾಗಿ ಹೊಸ ಕರಗಳ ಸಂಶೋಧನ ಮಾಡುವದಕ್ಕಿಂತ, ಹಳೇ ಕರಗಳನ್ನು ಬೋರ್ಡುಗಳ ಸ್ವಾಧೀನಪಡಿಸುವದು ಅನುಕೂಲವು; ಬೋರ್ಡುಗಳ ಕಾರ್ಯವು ಪ್ರಜಾನುರಂಜನದಿಂದ ಸಾಗುವದು. ಇಲ್ಲದಿದ್ದರೆ, ಖರ್ಚಿನ ಕೊರತೆಯ ಮೂಲಕ ಬೋರ್ಡುಗಳ ಕಾರ್ಯವು ಲೋಕಾನುಕೂಲತೆಯಿಂದ ಸಾಗಲಿಕ್ಕಿಲ್ಲ. ಪ್ರಜೆಗಳಿಗೂ ಖರ್ಚು ಕೊಡುವದು ಅಸಾಧ್ಯವಾಗುವದರಿಂದ ಬೋರ್ಡುಗಳು ಏಳಿಗೆ ಹೊಂದಲಾರವು. ಮುಂಬಯಿ ಸರಕಾರಕ್ಕೆ ಬೋರ್ಡುಗಳಿಗೆ ನೆರವಾಗಬೇಕೆಂಬ ಸಂಕಲ್ಪವಿದ್ದರೆ, ಹೊಸ ಕರಗಳ ಗೋಜಿಗೆ ಹೋಗದೆ, ತನ್ನ ಖರ್ಚಿನಲ್ಲಿ ಮಿತವ್ಯಯ ಮಾಡಿ ಬೋರ್ಡುಗಳ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಲಿಕ್ಕಿ ಬೇಕು.

ಕಿ ನಮ್ಮ ಎಗಿಕ್ಯುಟಿವ್ ಇಂಜಿನಿಯರರು ಕಳೆದ ವಾರದಲ್ಲಿ ಇಲ್ಲಿ ಕೊಳೆಗೆ ಕಟ್ಟುತ್ತಿರುವ ಸಂಕವನ್ನು ನೋಡಬಂದಿದ್ದರು. ಈ ಸಂಕದ ಕುರಿತು ನಮ್ಮ ಕೊರೆಯು. ಪ್ರೈತರು ಮಾಡಿದ ಅರ್ಜಿಗಳೂ, ಸೂಚನೆಗಳೂ ಮೂಲೆಗೆ ಬಿದ್ದವೆಂದು ಈಗ ಹೇಳಲಡ್ಡಿಯೇನಿಲ್ಲ. ಸಂಕದ ಕಟ್ಟೋಣವು ಪೂರ್ವಸಂಕೇತದಂತೆ ನಡೆದಿದೆ, ೩ ಫೂಟು ಎತ್ತರ ಮಾಡುವ ತಿದ್ದುಪಡಿಯೊಂದಾಗಿದೆ ಕೊಳೆಯು [illegible] ಫೂಟು ಹರವಿದ್ದು ಅಷ್ಟು ದೊಡ್ಡ ನೀರು ಮಳೆಗಾಲದಲ್ಲಿ, ವಿಶೇಷ ಭರತಿಯ ಸಮಯದಲ್ಲಿ ೩ ೨ ಫೂಟು ಹರವ ೮-೯ ಗಂಟೆಗಳಿಂದ ಪಾರಾಗಬೇಕಾಗುವದು. ಇದೊಂದು ಅಸೆಯನ್ನ, ಸೂಚಿಯ ವಿಜ್ಞನೊಳಗಿಂದ ಪಾರಾಗಿಸುವ ಪ್ರಯೋಗವೆಂದು ಸಾಮಾನ್ಯರು ಕೇಳುತ್ತಾರೆ ಇಂಜಿನಿಯರರಾದವರೂ ಈ ಕುರಿತು ವಿಚಾರಮಾಡಿದ್ದರೆ ಅವರಿಗೂ ತಿಳಿಯುವ ಹಾಗಿದೆ ಇಂಜಿನಿಯರರು ಒಂದು ಮಾತನ್ನು ಆಕ್ಷೇಪಕರಿಗೆ ಹೇಳುವರಾಗಿ ನಮ್ಮ ತಿಳುವಳಿಕೆಗೆ ಬಂದಿದೆ ನೀರು ಸಾಗಿಹೋಗದೆ ಕಟ್ಟಿನಿಂತಲ್ಲಿ, ಭೂಮಿ ಹಾಳಾಗುವ ಪ್ರಸಂಗದಲ್ಲಿ ಸಂಕವನ್ನು ಮುರಿದು ಕೆಡಹಲು ಅಪ್ಪಣೆಯಿಲ್ಲವಾಗಿ ಹೇಳಿದರು. ಇದು ನಿರುಪಾಯದ ಉಪಾಯವು. ಸಂಕ ಕಟ್ಟುವಾಗಲೇ ಪರಿಣಾಮದ ಆಲೋಚನೆಯನ್ನು ಮಾಡುವದು ಶ್ರೇಯಸ್ಕರವಲ್ಲ. ಕಟ್ಟಿ ಮುರಿಯುವದರಲ್ಲಿ ಅದಕ್ಕೆ ತಗಲುವ ಸಾವಿರಾರು ರೂಪಾಯಿಗಳು ನಿರರ್ಥಕವಾಗುವವು ಅದಕ್ಕೆ ಹೊಣೆಗಾರರ್‍ಯಾರು? ಅದಾ ಅದೇನು ತಮ್ಮ ಜೇಬಿನೊಳಗಿಂದ ಖರ್ಚಾಗುವದಿಲ್ಲ ದ ಹಾಗೆ [illegible] ಉತ್ತರಗಳು [illegible] ೧೨ ಸಾವಿರ ರೂಪಾಯಿ ಖರ್ಚು [illegible] ಕಟ್ಟಿ ಪ್ರಯೋಗ [illegible] ದಿಯ ವರೆಗೆ ಅದನ್ನು [illegible] ಯೋಜನೆಯನ್ನು [illegible] ಕಾಯಿದೆ ಕೌನ್ಸಿಲಿನೊಳಗಿನ ಮಾಹಿತಿ [illegible] ದ ತಿಳಿಯುತ್ತದೆ ಪ್ರಜಾಪ್ರತಿನಿಧಿಯನ್ನು [illegible] ಪ್ರದ ಯೋಜನೆಗಳಿಗೆ ಖರ್ಚು ಮಾಡುವದು ಕೇವಲ ಅವಶ್ಯವು. ಮಳೆಗಾಲದಲ್ಲಿ ಸಂಕದಿಂದ [illegible] ಹೊಳೆಯಲ್ಲಿ ಕಟ್ಟಿದರೆ, ಸಾಮಾನ್ಯ ಹೊನಲಿಗೆ ಸಾಗಿ ಹೋಗುವ ನೀರು ಅಷ್ಟೇ ನಿಂತು, ಪೇಟೆಯಲ್ಲಿಯೂ ಜಲಪ್ರವೇಶವಾಗ ಬಹುದು. ವಿಚಾರಶೀಲರು ನುಡಿಯುತ್ತಾರೆ ಈ ಕುರಿತು ಇಂಜಿನಿಯರ ಖಾತೆಯವರು ಮಳೆಗಾಲದಲ್ಲಿ ಹೊಳೆಯ ಪರೀಕ್ಷಣ ಮಾಡಬೇಕಾಗಿತ್ತು. ಈಗಿನ ಸಂಕದ ಯೋಜನೆಯನ್ನು ಇಷ್ಟಕ್ಕೇ ತಡೆಹಿಡಿಯಬೇಕಾಗಿದ್ದೂ ನಮ್ಮ ಸೂಚನೆಯಿದೆ. ಇದಕ್ಕೂ ಮಿಕ್ಕಿ ಖಾತೆಯವರು ನಡೆದಲ್ಲಿ ಅದಕ್ಕೆ ಯಾರಿಂದೇನ ಬಾಯ?

— ಅಮೇರಿಕೆಯ ಸಂಯುಕ್ತ ಸಂಸ್ಥಾನದಲ್ಲಿ ಒಂದು ವಿವಾಹವಾಗಿದೆ ಮದುಮಗನು ಸಾಮುವೆಲ್ ಬೆರನ್ ಎಂಬವನು, ಮದುಮಗಳು ಜೆನ್ನಿ ಸಿಂಗಳು, ಮದುಮಗನ ಪ್ರಾಯ ೮೭ ವರುಷ! ಮದುಮಗಳು ೮೫ ವರುಷದವಳು! ತೀರ ಎಳೆ ದಂಪತಿ! ಮದುವೆಯಾಗ ವಾಗ ಸಾಮುವೆಲನಿಗೆ ೩ ಮಕ್ಕಳು, ೧೨ ಮೊಮ್ಮಕ್ಕಳು, ೩ ಮರಿಮಕ್ಕಳು! ಜೆನ್ನಿ ಸಿಂಗಳಿಗೆ ಪೂರ್ವಸಂಬಂಧದಿಂದ ೩ ಮಕ್ಕಳು, ೧೩ ಮಂದಿ ಮೊಮ್ಮಕ್ಕಳು!! ೬ ಮರಿಮಕ್ಕಳು!! ಸಮಸ್ತ ಪ್ರಕಾರದಿಂದಲೂ ದಂಪತಿಗಳು ತುಷ್ಟರು!

ಸ್ಥಾನಿಕ ವೃತ್ತಾಂತ

ಕುಮಟಾ— ಚಳಿ ಸಾಧಾರಣ. ಅಡಿಕೆಯ ಆಮದು ವಿಶೇಷ ದರ ಕಡಿಮೆ ಈ ವರ್ಷ ಭತ್ತ, ರಾಗಿ ಮೊದಲು ಇತ್ಯಾದಿ ಧಾನ್ಯದ ವೇಗನ ಸಾಮಾನಿನ ಆಮದು ಕಳೆದ ವರ್ಷದಷ್ಟು ಇಲ್ಲ ದನಗಳ ರೋಗದ ಮೂಲಕ ಗಾಡಿಗಳ ಬಾಡಿಗೆಕ್ಕ ಬಹಳ ತೊಂದರೆಯಾಗಿದೆ

ಕಳೆದ ಗುರುವಾರ-ಶುಕ್ರವಾರಕ್ಕೆ ಕಾರವಾರ ಹಾಯಸ್ಕೂಲಿನ ವಿದ್ಯಾರ್ಥಿಗಳಿಗೂ, ಇಲ್ಲಿಯ ಗಿಬ್ಬ ಹ್ಯಾಯಸ್ಕೂಲಿನ ವಿದ್ಯಾರ್ಥಿಗಳಿಗೂ ಕ್ರಿಕೆಟ್ ಪಂದ್ಯಾಟವು ನಡೆಯಿತು. ಕಾರವಾರ ಹ್ಯಾಯಸ್ಕೂಲಿನವರು ೧೦೦ ರನ್ ಮಾತ್ರ ಓಟಗಳನ್ನು ತೆಗೆದರೆ, ಗಿಬ್ಬ ಹ್ಯಾಯಸ್ಕೂಲಿನವರು ೫೩ ರನ್ ತೆಗೆದು ಸೋತರು ಮರುದಿನ, ಫುಟಬೋಲ ಮ್ಯಾಚ ಕಾಲು ಚೆಂಡಿನ ಆಟ ನಡೆಯಿತು. ಅದರಲ್ಲಿ ಸೋಲು-ಗೆಲವು ನಿರ್ಣಯವಾಗುವ ಮುಂಚೆಯೇ ಹೊತ್ತು ಕಳೆಯಿತು.

ಆಕ್ಟೋಬರ ೧ನೇ ತಾರೀಖಿಗೆ ಕತಗಾಲದಿಂದ ಇಲ್ಲಿಗೆ ಸೂರ್ಯಾಸ್ತವಾದ ಬಳಿಕ ಮೋಟಾರು ನಡಿಸಿದ ಬಗ್ಗೆ ಡ್ರೈವರ ಅಬ್ದುಲ್ ಖಾದರ ಇವನ ಮೇಲೆ ಪೋಲೀಸ ಖಟ್ಲೆಯಾಗಿ, ಕಳೆದ ಶುಕ್ರವಾರ ತಾ. ೧೮ನೇಗೆ ಮೆಜಿಸ್ಟ್ರೇಟರು ಆತನಿಗೆ ರೂಪಾಯಿ ೩೫ ದಂಡ ವಿಧಿಸಿದರು. ಮತ್ತು ೬ ತಿಂಗಳ ವರೆಗೆ ಆತನ ಲೈಸನ್ಸನ್ನು ತಡಕೊಟ್ಟು ಮಾಡಿರುವರು

ಉರಣ ಉಪ್ಪು ಇಲ್ಲಿಯೂ ಬಂದಿರುವದು ಈ ಉಪ್ಪಿನ ದರವು ಚೀಲಕ್ಕೆ ರೂ ४-೮-೦, ಸಾಣಿಕಟ್ಟೆಯ ಉಪ್ಪಿನ ದರವು ರೂ ४-೧೦-೦

ಸಾಭಾರ ಸ್ವೀಕಾರ.

ಸ್ವಧರ್ಮ— ಧಾರವಾಡದ ಕರ್ನಾಟಕ ಮಹಾವಿದ್ಯಾಲಯದಿಂದ ಹೊರಡುವ ತ್ರೈಭಾಷಿಕ ಮಾಸಪತ್ರಿಕೆ. ಪುಷ್ಯ ಮಾಸದ ಸಂಚಿಕೆ ಸಂಪಾದಕ- ಶ್ರೀ ಸುರೇಂದ್ರನಾಥ ದೇಸಾಯಿ. ಧಾರವಾಡ ವಾ ಚ ರೂ ३-೦-೦

ಲೋಕರಹಸ್ಯ— ಡಿಸೆಂಬರ ತಿಂಗಳ ಸಂಚಿಕೆ ಸಂಪಾದಕ ಮತ್ತು ಪ್ರಕಾಶಕ- ಶ್ರೀ ಕೇ. ನಾರಾಯಣರಾವ, ವೀರರಾಜೇಂದ್ರ ಪೇಟೆ, ಕೊಡಗು. ವಾರ್ಷಿಕ ಚಂದಾ ರೂ ३ ೮ ೦

ಕಿರ್ಲೋಸ್ಕರ ವಾರ್ತೆ— ಡಿಸೆಂಬರ ತಿಂಗಳ ಸಂಚಿಕೆ ಸಂಪಾದಕ ಮತ್ತು ಪ್ರಕಾಶಕ- ಶ್ರೀ ಎ. ಕೃ. ಬಾಗಲ ಸಾಹಿತ್ಯ ವಿಶಾರದ, ಕಿರ್ಲೋಸ್ಕರವಾಡಿ, ಸಾತಾರಾ. ವಾರ್ಷಿಕ ವರ್ಗಣಿ ರೂಪಾಯಿ ೧-४ ೦. ಮಾತ್ರ

ನಂದಿನೀ— ವಿವಿಧಾರ್ಥಸಂದೋಹವುಳ್ಳ ನೂತನ ಮಾಸಪತ್ರಿಕೆ ಪುಷ್ಯ ಮಾಸದ ಸಂಚಿಕೆ ಸಂಪಾದಕ ಮತ್ತು ಪ್ರಕಾಶಕ- ಶ್ರೀ ನಾರಾಯಣ ಶಾಸ್ತ್ರಿ ಭಡತಿ, ಗೋಕರ್ಣ ವಾರ್ಷಿಕ ಚಂದಾ ರೂ ३-೦-೦

ಸತ್ಯವ್ರತ— ಮಾಸಪತ್ರಿಕೆ ಆಕ್ಟೋಬರ-ನವೆಂಬರ-ಡಿಸೆಂಬರ ತಿಂಗಳ ಸಂಚಿಕೆಗಳು ಸಂಪಾದಕ ಮತ್ತು ಪ್ರಕಾಶಕ ಮಿ| ಎಸ್. ಈ ಪಿಮಸ್, ಬಿಜ್ಜರ ರಸ್ತೆ, ಮಂಗಳೂರು (ದ ಕ) ವಾರ್ಷಿಕ ಚಂದಾ ರೂ ೮-೧२-೦,

ಹೊನ್ನಾವರ— ಊರಲ್ಲಿ ತುಂಬಾ ಮೈಲಿ ಬೇನೆಯುಂಟು ಮೈಲಿಯಿಂದ ಈ ವರೆಗೆ ೮—೧೦ ಜನರು ಮೃತಪಟ್ಟರು

ಇಲ್ಲಿಯ ಲೋಕಪ್ರಿಯ ವಕೀಲ್ಲರಾದ ಮಿ| ರಾಮಶರಣ ರ ಕಾರವಾರ ಡಿವಿಜನಕ್ಕೆ ಬಡ್ತಿಯಾಗಿದೆಯೆಂತಲೂ, ಇಲ್ಲಿ ಅವರ ಜಾಗೆಗ ರಾಮಚಂದ್ರ ಕಾಮತ್ ಕೊಡಿಯುತ್ತಾರೆ ನಮ್ಮವರು ಬರುವವರಿದ್ದಾರೆಂದೂ ಸುದ್ದಿ.

ಚಿಗಳ್ಳಿ— ಚಿಗಳ್ಳಿ ಶಾಲೆಯ ಹೆಡ್ ಮಾಸ್ತರ ರಾ. ಅಡಿವೆಪ್ಪ ಗುರುಲಿಂಗಪ್ಪ ಹೊಸಕೋಟೆಯವರು ತಾ. ೬-೧೨-೨೫ ನೇ ಪತ್ರ ಹೀಗೆ ತಿಳಿಸುವದೇನಂದರೆ:— ಈ ಶಾಲೆಗೆ ಶ್ರೀ ಲೋಕೇಶ್ವರ ಎಂಬವರು ಹೊಸ ಹೆಡ್ ಮಾಸ್ತರರು ಬಂದು ೧೦ ತಿಂಗಳಾದವು. ಇವರು ಬಂದಾಗ ೩೦ ವಿದ್ಯಾರ್ಥಿಗಳಿದ್ದರು; ಈಗ ಶಾಲೆಯಲ್ಲಿ ೧೧೦ ವಿದ್ಯಾರ್ಥಿಗಳಾಗಿರುವರು ಶ್ರೀ ಲೋಕೇಶ್ವರರ ವಿದ್ಯಾರ್ಥಿಪ್ರೇಮದ, ವಿದ್ಯಾದಾನಚಾತುರ್ಯದ ದ್ಯೋತಕವಿದು. ಈ ಶಾಲೆಯಲ್ಲಿ ಅಸ್ಪೃಶ್ಯ ಜಾತಿಯ ಭರಮಾ ದೇವಪ್ಪ ಎಂಬ ಹುಡುಗನು ನಾಲ್ಕನೇ ಇಯತ್ತೆಯಲ್ಲಿ ಕಲಿಯುತ್ತಿರುವನು. ಆತನ ಗಾಯನ, ಓದು ಹಾಗೂ ಇತರ ಅಭ್ಯಾಸಗಳ ಪರೀಕ್ಷೆ ಮಾಡಿ, ಅಲ್ಲಿಯ ಲಿಂಗಾಯತರಾದ ಮಿ| ಎಲ್. ಟಿ ಕರಿಗಾರರವರು ಆತನಿಗೆ ಕಲಿಸುತ್ತಲು ಒಂದು ಫೋಟೆಯನ್ನಿತ್ತಿದ್ದರು.

ಕಾನಪುರದ ವರ್ತಮಾನ

ರಾಷ್ಟ್ರೀಯ ಸಭೆಯ ತಯಾರಿಯು ಮುಗಿಯುತ್ತ ಬಂದಿರುವದು. ಮಹಾತ್ಮಾ ಗಾಂಧಿಯವರೂ, ಲಾಲಾ ಲಜಪತರಾಯರೂ, ಸೌ| ಸರೋಜಿನೀ ದೇವಿಯವರೂ ಬುಧವಾರ ತಾರೀಖು ೨೩ನೇಗೆ ಬಂದು ಮುಟ್ಟುವರು. ಪಂಡಿತ ಮೋತೀಲಾಲ ನೆಹರೂರವರು ಕಳೆದ ೧೬ನೇ ತಾರೀಖಿಗೆ ಕಾನಪುರಕ್ಕೆ ಹೋಗಿರುವರು. ೪೦೦೦ ಪ್ರತಿನಿಧಿಗಳು ಬರಲಿರುವರು. ಪ್ರೇಕ್ಷಕರಿಗಾಗಿ ಡೇರೆಗಳ ವ್ಯವಸ್ಥೆಯಾಗಿದೆ ಹಣ ಕೊಡಲಾರದವರಿಗಾಗಿ ಬಂಗಲೆಗಳು ಕೊಳ್ಳಲ್ಪಟ್ಟಿವೆ. ೧೦೦೦ ಸ್ವಯಂಸೇವಕರು ಪಟದಲ್ಲಿ ದಾಖಲಾಗಿರುವರು. ಸ್ವದೇಶಿ ಪ್ರದರ್ಶನದ ತಯಾರಿಯು ಸಮಾಪ್ತವಾಗಿದೆ. ಪ್ರದರ್ಶನ ಮಂಟಪವು ಪ್ರದರ್ಶನ ವಸ್ತುಗಳಿಂದ ತುಂಬಿಹೋಗಿರುವದು, ಅಪೂರ್ವ ಚಿತ್ರಗಳು ಪ್ರದರ್ಶನದಲ್ಲಿಡಲ್ಪಡುವವು. ಪ್ರದರ್ಶನ ಮಂಟಪವು ಸುಶೋಭಿತವಾಗಿದೆ, ನೂಲುವ ಸಂಘಟವು ನಡೆಯುವದಿದೆ. ಮಹಾತ್ಮರು ಪ್ರದರ್ಶನವನ್ನು ಗುರುವಾರ ಮುಂಜಾವಿಗೆ ತೆರೆಯುವರು.

— ಧಾರವಾಡದಲ್ಲಿ ಕಳೆದ ೧೬ನೇ ತಾರೀಖಿಗೆ ಪ್ರಾಂತಿಕ ಸಹಕಾರಿ ಪರಿಷತ್ತು ಸೇರಿ ಸಹಕಾರದ ಭಿನ್ನ ಭಿನ್ನ ಉಪಾಯಗಳಿಂದ ಪ್ರಜಾಕಲ್ಯಾಣ ಸಾಧನದ ಆಲೋಚನೆಯಾಯಿತು. ಅಧ್ಯಕ್ಷರಾದ ಸರ ಕೆ. ವ್ಹಿ. ರೆಡ್ಡಿಯವರು ತಮ್ಮ ಭಾಷಣದಲ್ಲಿ, ಸಹಕಾರ ಚಳವಳಿಯು ನಡೆದರೂ, ಇನ್ನೂ ಶೇಕಡ ರೈತರು ಸಾಲದಲ್ಲಿಯೇ ನರಳುತ್ತಿರುವರೆಂದು ಅಭಿಪ್ರಾಯಪಟ್ಟರು.

— ಚೀನ ದೇಶದ ಮಂಚೂರಿಯಾ ಪ್ರದೇಶದಲ್ಲಿ ಗಡಿಬಿಡಿಯಾಗಹತ್ತಿರುವದು. ಜಪಾನದವರು ೨೫೦೦೦ ಸೈನಿಕರನ್ನು ಕಳುಹಲಿರುವರು.

ತ್ವರೆ ಮಾಡಿರಿ! ತ್ವರೆ ಮಾಡಿರಿ!!

ಚಿಗ್ಗೋಣ ರಾಮಾ ತಿಮ್ಮಣ್ಣ ಪಂಡಿತರವರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ಕ್ಷಯ ಸಂವತ್ಸರದ

ಪಂಚಾಂಗಗಳು

ಮಾರಾಟಕ್ಕೆ ಸಿದ್ಧವಾಗಿರುತ್ತವೆ.

೧೦೦ಕ್ಕೆ ರೂ. ೧೨-೦-೦	೫೦ಕ್ಕೆ ರೂ. ೬-೮-೦
೨೫ಕ್ಕೆ ರೂ. ೩-೮-೦	೧ಕ್ಕೆ ರೂ. ೦-೩-೦

ಸ್ಥಳ— ಮ್ಯಾನೇಜರ,

"ಸ್ವಸ್ತಿ ಅರ್ಥ ಕೇಸರಿ" ಪ್ರೆಸ್, ಕುಮಟಾ.

ವೃತ್ತಸಾರ.

— ಪ್ರಸ್ತುರ್ದೇಶದ ಹುಳಾಬಂಗ ದಳಿ ಪ್ರದೇಶದಲ್ಲಿ ಹುಳ ಎಂಬ ಹುಳಗಳಿಂದ ತೊಂದರೆಯಾಗಿರುವರು. ಇವು ಗುಲಾಮರನ್ನು ಅಪಹರಿಸುತ್ತಾರೆ; ಮನುಷ್ಯಬಲಿ ಕೊಡುತ್ತಾರೆ. ಗುಲಾಮರಿಗೆ ಬಂಧಮುಕ್ತಮಾಡಲಿಕ್ಕೂ, ಮನುಷ್ಯಬಲಿಯ ಪ್ರಘಾತವನ್ನು ನಿಲ್ಲಿಸಲಿಕ್ಕೂ ಬ್ರಿಟಿಶ ದೇಶದ ಸರಕಾರವು ಯತ್ನ ಮಾಡುತ್ತಿದೆ.

— ತೆಹರಾನ ಪಟ್ಟಣದಲ್ಲಿ ಮಿಯೋನಾಸ ಬಿಹೆಲವಿಯವರ ರಾಜ್ಯಾರೋಹಣ ಸಮಾರಂಭವು ಸಡಗರದಿಂದ ನೆರವೇರಿತು. ಇರಾಣ ದೇಶದ ಉನ್ನತಿಗಾಗಿ ತನ್ನ ಸಾಮರ್ಥ್ಯದಿಂದ ತಾವು ಯತ್ನ ಮಾಡುವೆನೆಂದು ಮಿಯೋನಾಸರು ಉದ್ಗರಿಸಿದರು.

— ಒಂದು ಚಮತ್ಕಾರ! ಪ್ರಸ್ತುರ್ದೇಶದವನೊಬ್ಬನು ಮತ್ತೊಬ್ಬಳಿಗೆ ಆಸಕ್ತನಾಗಿ ಸರ್ವಸ್ವಕ್ಕೂ ತಿಲಾಂಜಲಿಯನ್ನಿತ್ತನು; ಬೇಸರಗೊಂಡು ಒಬ್ಬ ಬೌದ್ಧ ಸನ್ಯಾಸಿಯ ಬಳಿ ಹೋದನು. ಆತನ ಕೃಪೆಯಿಂದ ಮತ್ತೊಬ್ಬಳ ಪ್ರಸಂಗವು ತೀರಿತು. ಹೀಗೆ ಸಂಪಾದನೆ ಮಾಡಿದನು. ಪ್ರಾಪ್ತಿಯಲ್ಲಿ ಸನ್ಯಾಸಿಗೆ ಅರ್ಧ ದ್ರವ್ಯವನ್ನಿತ್ತನು. ಸನ್ಯಾಸಿಯು ಜೂಜುಗಾರನಿಗೆ ಸನ್ಯಾಸಿಯಾಗಲು ಬೋಧಿಸಿದನು. ಸನ್ಯಾಸದೀಕ್ಷೆಯನ್ನು ಸ್ವೀಕರಿಸಿ ಸ್ವಕರ ಮಾತ್ರದಿಂದ ರೋಗಗಳನ್ನು ವಾಸಿಮಾಡುವ ಅದ್ಭುತ ಶಕ್ತಿಯುಳ್ಳವನಾದನು. ಅನೇಕರು ವೃದ್ಧ ಸನ್ಯಾಸಿಯ ಸ್ಪರ್ಶದಿಂದ ಗುಣಹೊಂದುತ್ತಿದ್ದಾರೆ. ರೋಗಿಗಳ ಸಂದಣಿಯಾಗಿ, ಸ್ಪರ್ಶ ಮಾಡಲು ಅಸಾಧ್ಯವಾದಲ್ಲಿ ತನ್ನ ಶಕ್ತಿಯನ್ನು ಶಿಷ್ಯರಿಗೆ ಕೊಟ್ಟು ಸ್ಪರ್ಶ ಮಾಡಿಸಿ, ರೋಗಿಗಳಿಗೆ ರೋಗಮುಕ್ತನಾಗಿ ಕಳಿಸುತ್ತಾನಂತೆ! ಅದ್ಭುತ ಶಕ್ತಿ!! ಧನ್ವಂತರಿಯ ಅವತಾರವೇನು?

— ರಂಗೂನಿನ ೫ ಮೈಲು ಒಳಿಯಲ್ಲಿರುವ ಒಂದು ಹಗ್ಗದ ಕಾರಖಾನೆಗೆ ಧಕ್ಕನೆ ಬೆಂಕಿ ಹತ್ತಿ, ೩ ಲಕ್ಷ ರೂಪಾಯಿಗಳ ನಷ್ಟ!

— ಅಮೃತಸರ ಮ್ಯುನಿಸಿಪಾಲಿಟಿಯವರು ಕಲಿತರಿಗೆಯು ನ್ನಾಕರಿಸುವ ವಿಚಾರದಲ್ಲಿರುವರು. ಉಗಿಬಂಡಿಯಿಂದ ಬಂದುಹೋಗುವ ಪ್ರಯಾಣಿಕರು ಕಲಿತರಿಗೆಗೆ ಪಾತ್ರರು ಇದು ಬಹು ಸುಲಭ!

— ಪಾಶ್ಚಾತ್ಯರ ಸ್ತ್ರೀಗಮನದ್ಧತಿಯು ಹಸ್ತಾಂದೋಲನವು ಇದರಿಂದ ಆರೋಗ್ಯಹಾನಿಯಾಗುತ್ತದೆಂದು ಒಳ್ಳವರ ಅಭಿಪ್ರಾಯವಾಗಿದೆ. ರಶಿಯಾ ದೇಶದ ಮಾಸ್ಕೋ ಪಟ್ಟಣದಲ್ಲಿ ದೊಡ್ಡ ಚಳವಳಿ ನಡೆದು, ಈ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲಿಸಬೇಕೆಂಬ ನಿರ್ಧಾರವಾಗಿದೆ

— ಆಫ್ರಿಕೆಯೊಳಗಿನ ಕೆಂಪ ಎಂಬಲ್ಲಿ ಚಿನ್ನದ ಗಣಿಗಳಿವೆ. ಅಲ್ಲಿ ಭಯಂಕರ ಅಪಘಾತವಾಗಿ ೧೦ ಗೂಲಿಗಳಲ್ಲಿ ಕೆಲಸ ನಿಂತುಹೋಗಿದೆ

— ಭೂಸೆಯ ಮ್ಯುನಿಸಿಪಾಲಿಟಿಯವರು ಅಲ್ಲಿಯ ಕ್ರಿಶ್ಚನ್ ಧರ್ಮ ಪ್ರಚಾರಕರ ಬಗ್ಗೆ ಲಕ್ಷ್ಯ ಕೊಟ್ಟು ೧೫೦೦ ರೂಗಳನ್ನರ್ಪಿಸಿರುವರು.

— ರಾಜಾ ಲಜಪತರಾಯರವರು ಪಂಜಾಬ ಕಾಯಿದೆ ಕೌನ್ಸಿಲಿಗೆ ಜಲಂಧರ ಭಾಗದ ಪ್ರತಿನಿಧಿಗಳಾಗಿ ಪ್ರತಿಪಕ್ಷಗಳಿಲ್ಲದೆ ಆರಿಸಿಬಂದಿರುವರು. ಕಾಯಿದೆ ಕೌನ್ಸಿಲಿಗೊಂದು ಭೂಷಣ! ಜಲಂಧರ ಭಾಗಕ್ಕೊಂದು ಭಾಗ್ಯ!

— ತಿರ್ಥಹಳ್ಳಿಯ ಶ್ರೀ ಆಯುರ್ವೇದ'ವೆಂಬ ಮಾಸಪತ್ರಿಕೆಯು ಹೊರಟು ಬಂದಿದೆ. ಆಯುರ್ವೇದ ಗ್ರಂಥಗಳು ಸಂಸ್ಕೃತದಲ್ಲಿದ್ದು ಭಾಷಾಂತರಿಸಲ್ಪಡುವವು. ವಾರ್ಷಿಕ ಚಂದಾ ಅಂಚೆಸಹಿತ ಸರಿ ರೂಪಾಯಿ ೩||.

— ಪಂಜಾಬ ಪ್ರಾಂತದ ಮೋಗಾ ತಾಲೂಕಿನಲ್ಲಿ ಸಪ್ಪಳ್ಳ ಆಗಿರುವ ಸುರಿಮಳೆ! ಬೆಳೆದಂತಹ ಬೆಳೆಯನ್ನು ಹಾಳು ಮಾಡಿತಲ್ಲಾ! ಬೆಳೆ ಹಾಗು ದನಕರು ಹೇರಳವಾಗಿ ನಷ್ಟ ಹೊಂದಿದವು.

— 'ವಿಶ್ವಕರ್ನಾಟಕ' ಪತ್ರಿಕೆಯ ಸಂಪಾದಕರಾದ ಶ್ರೀ|| ತಿರುಮಲೆ ತಾತಾಚಾರ್ಯ ಶರ್ಮರವರು ಮೈಸೂರ ವಿಶ್ವವಿದ್ಯಾಲಯ ಸಭೆಯ ಸದಸ್ಯರು. ಶ್ರೀಯುತರು ಖಾದಿಯ ಶ್ವೇತವಸ್ತ್ರವನ್ನು ಧರಿಸಿ ಸಭಾಸ್ಥಾನಕ್ಕೆ ಹೋಗುತ್ತಿರಲು, ರಿಜಿಸ್ಟ್ರಾರರು ಅವರಿಗೆ ಒಳ ಸೇರ ಬಿಡಲಿಲ್ಲ; ಶ್ರೀ ಶರ್ಮರು ಒರಳಿಹೋದರು. ಆಗ ರಿಜಿಸ್ಟ್ರಾರರು ಸುಮ್ಮಗೆ ಅವರನ್ನು ಒಳಸೇರಗೊಟ್ಟರು.

— ಕೈದಿಗಳು ಪೋಲೀಸರಿಗೆ ಕೈಹೊಡಿಸಿದರು: ಹಿರಿಯ ಬಂಡಿಯಲ್ಲಿ ದಾರುಶಿಕ್ಷೆಯ ಕೆಲಸಕ್ಕೋಸ್ಕರ ೨೨ ಕೈದಿಗಳನ್ನು ಪೋಲೀಸರು ಒಯ್ದಿದ್ದರು. ಪೋಲೀಸರು ಮಧ್ಯಾಹ್ನ ಹೊಟ್ಟೆತುಂಬ ಊಟಮಾಡಿದರು; ತಲೆತಿರುಗಿ ಬಂತು; ಮಲಗಿದರ, ಇದೇ ಸಮಯವೆಂದು ಕೈದಿಗಳು ಜಬಾಕಿ ಗುಂಡುಗಳನ್ನೆಲ್ಲ ಬಗಲಲ್ಲಿ ಹಾಕಿಕೊಂಡು ಓಡಿದರು. ಪೋಲೀಸರು ಎಚ್ಚತ್ತರು; ಅತ್ತಿತ್ತ ನೋಡಿದರು, ಜಾಗ ಹುಡುಕಿದರು, ಕೈದಿಗಳ ಪತ್ತೆಯಿಲ್ಲ. ಜಮಾಬಂದಿ ಸರಕಾರವು ಪೋಲೀಸರ ಮೇಲೆ ಕ್ಯಾದೆ ಇಲಾಜು ನಡಿಸುತ್ತಿರುವದು.

— ಕೋಕೋನಾಡಿನ ಉಗಿಬಂಡಿಯ ಸ್ಟೇಶನಿನ ಬಳಿ ಸುಮಾರು ೧೦೦ ಮಂದಿಗಳು ಗೋದಾವರಿ ನದಿಯನ್ನು ದಾಟುತ್ತಿದ್ದರು. ಧಕ್ಕನೆ ದೋಣಿಯು ಕವಚಿಬಿದ್ದು ಎಲ್ಲರೂ ಹೊಳೆಯಲ್ಲಿ ಬಿದ್ದರು. ಅಂಬಿಗನು ಈಸಿ ಪಾರಾದನು; ಕೆಲ ಗಂಡಸರು ದಂಡೆಗೆ ಈಸಿಬಂದರು. ಉಳಿದವರಗತಿ, ಏನಿನ್ನೇನು?

— ಅಸ್ಟ್ರಿಯಾ ದೇಶದ ರಾಜಧಾನಿಯಾದ ವಿಯೆನ್ನಾ ಪಟ್ಟಣದಲ್ಲಿ ಒಬ್ಬ ಪ್ರೊಫೆಸರರು ಒಂದು ಹೊಸ ಪತ್ತೆ ಮಾಡಿದರು. ಸಿ ಪ್ರಾಣಿಗಳಿಗೆ ಎಳೆಯದನ್ನಾಗಿ ಅವರು ಪರಿಣಮಿಸಬಲ್ಲರು. ಮನುಷ್ಯರಿಗೂ ಈ ಕ್ರಮದಿಂದ ಯೌವನವನ್ನೀಯಬಹುದಂತೆ! ಈ ಯುಗದಲ್ಲಿ ಯಯಾತಿ ಯಿರಬೇಕಿತ್ತು!

वात, क्षीणता व कमजोरपणा यांसाठी

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात. पचन शक्ति सुधारून परसाकडे साफ होतें. त्याचप्रमाणें प्रत्येक प्रकारची अशक्तता दूर होऊन शरीर तेजस्वी व बळवान होतें. किं. ४० गोळ्यांच्या डबीस रु. १.

रमण विलासिनी गोळ्या. रात्री फक्त १ गोळी दुधाबरोबर खाल्यानें इच्छेप्रमाणें वीर्यस्तंभन होतें. किं. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पाऊन खरें पुरुषत्व प्राप्त होतें. किं. डबीस रु. १.

कुमटा एजंट :— माधव सीताप्पा शेणवी बेलेकेरी.

राजवैद्य नारायणजी केशवजी वैद्य:—१९३ काळबादेवी रोड मुंबई नं. २

ಮಹಾತ್ಮರ ಆತ್ಮಚರಿತ್ರೆ.

(೧) ಜನ್ಮ ಮತ್ತು ಮನೆತನ

'ಮಹಾತ್ಮರು ನವಜೀವನ ಪತ್ರಿಕೆಯಲ್ಲಿ [illegible] ಪ್ರಯೋಗಗಳ [illegible] ಮಹಾತ್ಮರ [illegible] ಸತ್ಯದ ಪ್ರಯೋಗಗಳ [illegible] ಅವನ್ನು [illegible] ಸಂಕಲ್ಪ ಮಾಡಿರುವದು [illegible] ಸ್ಥಿತಿಯನ್ನು [illegible] ಅದು ಅತ್ಯಂತ ಮಹತ್ವದ್ದು [illegible] ಆತ್ಮಚರಿತ್ರೆಯು [illegible] ಪ್ರಾರಂಭವಾಗಿದೆ [illegible] ಜನ್ಮವನ್ನೂ ಮನೆತನವನ್ನೂ ವರ್ಣಿಸುವರು. ಸಂ.

[illegible] ಪೋರಬಂದರದಲ್ಲಿ [illegible] ಪೋರಬಂದರವನ್ನು [illegible] ಸಂಸ್ಥಾನದ [illegible]"

[illegible] ಪೋರಬಂದರದಲ್ಲಿ [illegible] ಪೋರಬಂದರ [illegible] ಪ್ರಧಾನಪದವನ್ನು ವಹಿಸಿದರು. ಕಾಬಾ ಗಾಂಧಿಯು [illegible] ಆದರೆ ಅಲ್ಲಿ [illegible] ಪ್ರಧಾನಿಕೆಯಲ್ಲಿ [illegible] ಸ್ಥಾನದಲ್ಲಿಯೂ [illegible]

ನನ್ನ ತಂದೆಯವರು

ಕಾಬಾ ಗಾಂಧಿಯವರಿಗೆ ನಾಲ್ಕು ಹೆಂಡರು, ಒಬ್ಬರ [illegible] ಮೊದಲಿನ ಇಬ್ಬರು ಹೆಂಡಂದಿರಿಂದ ಇಬ್ಬರು ಮಗಳಿಯರು ಹುಟ್ಟಿದರು. ಪುತ್ಲೀಬಾಯಿಯವರು ಕಡೆಯ ಹೆಂಡತಿಯವರು. ಪುತ್ಲೀಬಾಯಿಯವರಿಗೆ ಒಬ್ಬ ಮಗಳು, ಮೂವರು ಮಗಂದಿರು. ಮಗಂದಿರಲ್ಲಿ ಚಿಕ್ಕವನು ನಾನೇ. ನನ್ನ ತಂದೆಯವರಿಗೆ ಮನೆತನದ ಅಭಿಮಾನ ಬಹಳ. ಸತ್ಯಸಂಧರು, ಉದಾರರು, ಧೈರ್ಯವಂತರು, ಆದರೆ, ಶೀಘ್ರಕೋಪಿಗಳು. ಕೆಲಮಟ್ಟಿಗೆ ಅವರು ವಿಷಯ ಲಂಪಟರೂ ಇರಬಹುದು, ೪೦ ವರ್ಷ ಮೀರಿದ ನಂ[illegible]ಗಲೂ ಕೂಡ ಇವರು ನಾಲ್ಕನೇ ಸಲ ಮದುವೆಯಾದರು. ಆದರೆ ಅವರು ನಿಷ್ಕಳಂಕರು ಮತ್ತು ನಮ್ಮ ಮನೆತನದಲ್ಲಿಯೂ ಊರಲ್ಲಿಯೂ ನಿಷ್ಪಕ್ಷಪಾತರೆಂದು ಖ್ಯಾತಿ ಹೊಂದಿದ್ದು ಅರಸರಿಗೆ ಅವರು ನಿಷ್ಠಾವಂತರಾಗಿದ್ದರು. ಒಮ್ಮೆ ಅಸಿಸ್ಟೆಂಟ ಪೊಲಿಟಿಕಲ್ ಏಜಂಟರು ಅವರ ಒಡೆಯನಾದ ರಾಜಕೋಟದ ಠಾಕೂರ ಸಾಹೇಬರ ವಿಷಯ ತಿರಸ್ಕಾರದ ಮಾತುಗಳನ್ನಾಡಿದರು. ಅದನ್ನು ಕೇಳಿ ಕೂಡಲೆ, ಇವರು ಅವನ್ನು ಅಲ್ಲಿಂದಲ್ಲೇ ನಿಷೇಧಿಸಿದರು. ಏಜಂಟರು ಕೋಪಗೊಂಡಿದ್ದರು, ಕಾಬಾ ಗಾಂಧಿಯವರಿಗೆ ಕ್ಷಮೆ ಬೇಡಲು ಆಜ್ಞಾಪಿಸಿದ್ದರು. ಅದಕ್ಕೆ ಇವರು ನಿರಾಕರಿಸಿದರು. ನಿರಾಕರಿಸಲು, ಇವರಿಗೆ ಕೆಲ ಕಾಲದ ವರೆಗೆ ಪ್ರತಿಬಂಧ ಮಾಡಲಾಯಿತು. ಆದರೆ, ಕಾಬಾ ಗಾಂಧಿಯವರ ನಿರ್ಧಾರ ನೋಡಿ ಠಾಕೂರ ಸಾಹೇಬರವರು ಅವರಿಗೆ ಬಿಡುಗಡೆ ಮಾಡಲು ಹುಕುಮು ಹೊರಡಿಸಿದರು. ನನ್ನ ತಂದೆಯವರಿಗೆ ದ್ರವ್ಯಸಂಚಯ ಮಾಡಬೇಕೆಂಬ ಅಭಿಲಾಷೆಯು ಎಂದೂ ಇರಲಿಲ್ಲ. ಆದರಿಂದ ನಮಗೆ ಪ್ರಾಪ್ತವಾದ ಪಿತ್ರಾರ್ಜಿತ ಆಸ್ತಿಯು ಅಷ್ಟರ ಮಟ್ಟಿಗೇ.

ಇವರಿಗೆ ಅನುಭವವೇ ಶಿಕ್ಷಣವು. ಹೆಚ್ಚೆಂದರೆ, ಇವರು ಗುಜರಾಥಿ ಐದನೇ ಇಯತ್ತೆಯ ವರೆಗೆ ಕಲಿತಿರಬಹುದು. ಅವರಿಗೆ ಇತಿಹಾಸವಾಗಲಿ, ಭೂಗೋಲವಾಗಲಿ ಗೊತ್ತಿರಲಿಲ್ಲ. ಆದರೆ, ವ್ಯವಹಾರಿಕ ಜ್ಞಾನಬಲದಿಂದ ಇವರು ಅತ್ಯಂತ ಕಠಿಣ ಪರಿಸ್ಥಿತಿಯೊಳಗಿಂದ ಸಹ ಪಾರಾಗುತ್ತಿದ್ದರು; ನೂರಾರು ಮಂದಿಗಳ ಮೇಲೆ ಕಾರಭಾರ ನಡಿಸುತ್ತಿದ್ದರು. ಧಾರ್ಮಿಕ ಶಿಕ್ಷಣವೂ ಅಷ್ಟರ ಮಟ್ಟಿಗೇ, ಆದರೆ, ಅವರಲ್ಲಿ ಧರ್ಮಸಂಸ್ಕೃತಿಯಿತ್ತು. ದೇವಾಲಯಗಳಿಗೆ ಆಗಿಂದಾಗ ಹೋಗಿ ಅಲ್ಲಿ ನಡೆಯುವ ಧರ್ಮಪ್ರವಚನಗಳನ್ನು ಕೇಳುತ್ತಿದ್ದರು. ಮುಪ್ಪಿನ ಕಾಲದಲ್ಲಿ ಇವರು ಕುಟುಂಬದ ವಿದ್ವಾಂಸ ಬ್ರಾಹ್ಮಣರು ಹೇಳಿದಂತೆ, ಗೀತೆಯನ್ನು ಓದುತ್ತಿದ್ದರು. ದಿನಾಲು ಅವರು ಪೂಜೆ ಮಾಡುವಾಗ ಕೆಲ ಶ್ಲೋಕಗಳನ್ನು ತಪ್ಪದೆ ಗಟ್ಟಿಯಾಗಿ ಹೇಳುವ ಪರಿಪಾಠವಿತ್ತು.

ನನ್ನ ತಾಯಿಯವರು

ನನ್ನ ತಾಯಿಯ ಸ್ವಭಾವದ ಕುರಿತು, ಅವಳ ಸಾಧ್ವೀತನವು ಪ್ರಮುಖವಾಗಿ ನನಗೆ ಜ್ಞಾಪಕಕ್ಕೆ ಬರುತ್ತದೆ. ಅವಳು ಬಹಳ ಧರ್ಮಿಷ್ಠಳು. ನಿತ್ಯದ ಪೂಜೆ ಮಾಡದ ಹೊರತು, ಅನ್ನಗ್ರಹಣ ಮಾಡುವ ವಿಚಾರವೇ ಅವಳಿಗೆಂದೂ ಸ್ಫುರಿಸಲಿಲ್ಲ. ಹವೇಲಿಗೆ ಹೋಗುವದು ಅವಳದೊಂದು ನಿತ್ಯಕ್ರಮವು. ಯಾವದೇ ಚಾತುರ್ಮಾಸವನ್ನು ಅವಳು ಬಿಡಲಿಲ್ಲ. ಅವಳು ಕಠಿಣ ವ್ರತಗಳನ್ನು ಅಂಗೀಕರಿಸಿ ನಿರ್ಭಂಗವಾಗಿ ಪಾಲಿಸುತ್ತಿದ್ದಳು. ಅಸ್ವಸ್ಥತೆಯ ನೆವದಿಂದ ವ್ರತನಿಯಮ ಪಾಲನದಲ್ಲಿ ಭಂಗವಾಗಲಿಲ್ಲ. ಚಾಂದ್ರಾಯಣ ವ್ರತದ ಸಮಯ ಅವಳೊಮ್ಮೆ ಅಸ್ವಸ್ಥವಾದ ನೆನಪು ಕಾಣುತ್ತದೆ. ಆದರೆ, ಈ ವ್ರತವನ್ನು ಅವಳು ತ್ಯಜಿಸಲಿಲ್ಲ. ಚಾತುರ್ಮಾಸದಲ್ಲಿ ಒಪ್ಪತ್ತೂಟವದು ಅವಳ ಮೈಯುಂಡಿತ್ತು. ಇದರಿಂದ ಅವಳಿಗೆ ಸಮಾಧಾನವಾಗಲಿಲ್ಲ, ಆದರಿಂದ ಒಂದು ಚಾತುರ್ಮಾಸದಲ್ಲಿ ಅವಳು ದಿನ ಬಿಟ್ಟು ದಿನ ಉಪೋಷಣ ಮಾಡುತ್ತಿದ್ದಳು. ಒಪ್ಪತ್ತಿ ೨-೩ ದಿನ ಉಪವಾಸ ಮಾಡುವದು ಅವಳಿಗೆ ಸಹಜವಾಗಿತ್ತು. ಒಮ್ಮೆ ಚಾತುರ್ಮಾಸದಲ್ಲಿ ಸೂರ್ಯದರ್ಶನವಾದ ಹೊರತು, ಅನ್ನಗ್ರಹಣ ಮಾಡಬಾರದೆಂದು ಅವಳ ಸಂಕಲ್ಪವಿತ್ತು. ನಾವು ಚಿಕ್ಕ ಹುಡುಗರು; ಸೂರ್ಯದರ್ಶನವಾದ ಕೂಡಲೇ ತಾಯಿಗೆ ತಿಳಿಸಲು ನಾವು ಮೋಡಗಳ ಕಡೆಗೆ ದಿಟ್ಟಿಸಿ ನೋಡುತ್ತ ಕಾದುಕೊಂಡಿರುತ್ತಿದ್ದೆವು. ಮಳೆಗಾಲದ ಭರದಲ್ಲಿ ಸೂರ್ಯನಾರಾಯಣನ ಸಾಕ್ಷಾತ್ಕಾರವಾಗಲು ಕಠಿಣವಾಗುತ್ತದೆಂದು ಎಲ್ಲರಿಗೂ ಗೊತ್ತಿದ್ದ ಮಾತು. ಧಕ್ಕನೆ ಸೂರ್ಯದರ್ಶನವಾದ ಕೂಡಲೆ ನಾವು ಗಾಬರಿಯಿಂದ ಹೇಳಲು ಓಡುತ್ತಿದ್ದೆವು; ತಾಯಿಯು ಸೂರ್ಯದರ್ಶನ ಪಡೆಯಲು ಉತ್ಸುಕಳಾಗಿ ಓಡುತ್ತಿದ್ದಳು; ಅಷ್ಟರಲ್ಲಿ ಸೂರ್ಯನಾರಾಯಣನು ಥಟ್ಟನೆ ಮೋಡಗಳಲ್ಲಿ ಅಡಗಿಕೊಳ್ಳುತ್ತಿದ್ದನು. ನಮ್ಮ ತಾಯಿಯ ಊಟ ಹೋಯಿತು; ಆದರೂ, ತಾಯಿಯು ಸಂತೋಷದಿಂದ ಉದ್ಗರಿಸುತ್ತಿದ್ದಳೇನಂದರೆ;— "ಅದರಿಂದೇನು? ಈ ಹೊತ್ತು ನಾನು ಊಟ ಮಾಡಬೇಕೆಂದು ಈಶಸಂಕಲ್ಪವಿದ್ದಿಲ್ಲ," ಹೀಗೆ ಹೇಳಿ, ಅವಳು ನಿತ್ಯಕರ್ಮವನ್ನು ಅನುಸರಿಸುವಳು.

ಅವಳ ವ್ಯವಹಾರಿಕ ಜ್ಞಾನವು ವಿಶೇಷ. ರಾಜ್ಯಕಾರಭಾರದ ವಿಷಯಗಳನ್ನೆಲ್ಲ ಅವಳು ಅರಿತುಕೊಂಡಿದ್ದಳು. ಅರಮನೆಯೊಳಗಿನ ಹೆಂಗಸರು, ಅವಳು ತೀರ ಜಾಣಳೆಂದು ಹೇಳುತ್ತಿದ್ದರು. ಬಾಲಚೇಷ್ಟೆಗಳನ್ನು ಮಾಡುತ್ತ ನಾನು ಅವಳ ಜೊತೆಗೆ ಆಗಿಂದಾಗ ಹೋಗುತ್ತಿದ್ದೆನು. ಠಾಕೂರ ಸಾಹೇಬರ ವಿಧವೆಯಾದ ತಾಯಿಯೊಡನೆ ನನ್ನ ತಾಯಿಯು ನಡಿಸಿದ ವಿಚಾರಪೂರ್ಣಕ ಭಾಷಣಗಳು ಇನ್ನೂ ನನ್ನ ನೆನವರಿಕೆಯಲ್ಲಿವೆ.

ಇಂಥ ತಂದೆ-ತಾಯಿಗಳಿಂದ ಸುದಾಮಪುರಿ, ಅಂದರೆ ಪೋರಬಂದರದಲ್ಲಿ ನಾನು ೧೮೬೯ನೇ ಇಸ್ವಿಯ ಅಕ್ಟೋಬರ ೨ನೇ ತಾರೀಖಿಗೆ ಜನ್ಮವನ್ನೆತ್ತಿದೆನು. ಪೋರಬಂದರದಲ್ಲಿ ನನ್ನ ಬಾಲ್ಯವು ಕಳೆಯಿತು. ಒಂದು ಶಾಲೆಗೆ ಹೋದ ನೆನಪು ಕಾಣುತ್ತದೆ. ಬಹಳ ಪ್ರಯಾಸದಿಂದ ಮಗ್ಗಿಗಳನ್ನು ಕಲಿತೆನು. ಬಾಲ್ಯದಲ್ಲಿ ಸಹಪಾಠಿಗಳೊಡನೆ ನಮ್ಮ ಶಿಕ್ಷಕರಿಗೆ ಬಯ್ಯುಗಳ ಕಲಿತ ನೆನಪಷ್ಟೇ ಇದೆ. ಇದರ ಮೇಲಿಂದ ನಾನು ಜಡಬುದ್ಧಿಯವನಿದ್ದೆನೆಂದು ಅನುಮಾನವಾಗುತ್ತದೆ. ನನ್ನ ಜ್ಞಾಪಕಶಕ್ತಿಯೂ ಬಹಳ ಅಪಕ್ವವಿತ್ತು; ಒಬ್ಬ [illegible] ಶಿಕ್ಷಕನ ವಿಷಯ [illegible] ನನ್ನ ಜ್ಞಾಪಕಶಕ್ತಿಯು ಅಪಕ್ವವಿತ್ತು.

ಸಾರಸ್ವತ ಹೇಮಂತ ಸಂಚಿಕಾ.

ಕೊಂಕಣಿ ಭಾಷೆಚೆಂ ಹೆಂ ಸಚಿತ್ರ, ಸುಂದರ ಆನಿ ವಿಷಯಗರ್ಭಿತ ಪುಸ್ತಕ.

ಪುಢ್ಯಾ ಮಾಸಾಚ್ಯಾ ಅಖೇರಿಕ ತಯಾರ ಜಾತಾ.

ಪ್ರಮುಖ ಲೇಖ:—

ಮಹಾಗಿರಿ ವಾಸು:— ಶ್ರೀ ಗೋವಿಂದ ಪೈ.
ಸಾರಸ್ವತಾಲಿಂ ಕಳಕಳ್ಯ:— ಶ್ರೀ ವಿ. ಎಸ್. ಪ್ರಭು
ಸಾಬರಮತಿ ಆಶ್ರಮು:— ಶ್ರೀ ಎಸ್. ಎಸ್. ಮ್ಯಾನಭಾಗ, M.A. LL.B
ದಸ್ಕೋಶ್ಯ ಕವರ್ಜಚೊ ಪುನರುದ್ಧಾರು:— ಶ್ರೀಯುತ ಬಿ. ಕೃಷ್ಣರಾವ್, B.A
ಶರೀರಸ್ವಾಸ್ಥ್ಯಾಚಿ ಮಹಾದಾಜ:— ಶ್ರೀ ವಿ. ಆರ್. ಪ್ರಭು.
ಜಪ್ಪಲ್ಲಗ್ಯಾಸಿಂ ಕೆಲ್ಲೆಲಿಂ ಸುಕ್ತಂ:— ಶ್ರೀ ಗಣಪತಿ ರಾವ್ ಪಟೀಲ
ಧರ್ಮಸ್ವಾತಂತ್ರ್ಯ:— ಶ್ರೀ ಕೆ. ಪದ್ಮನಾಭ ಕಾಮತ್
ಮುಂಬೈಚ್ಯಾ ಕ್ಷೇತ್ರಾಚೆ ವ್ಯಾಖ್ಯಾನ:— ಶ್ರೀಯುತ ಗೋವಿಂದ ಪೈ.
ಆನಂದ:— ಶ್ರೀ ಮಂಗೇಶರಾವ ತೆಲಂಗ.
ಆಚಾರ:— ಶ್ರೀ ವೈಕುಂಠ ಭಕ್ತ.
ವರಾನ್ವೇಷಣ:— ಏಕ ಕಥಾ.
ಸ್ತ್ರೀ ಶಿಕ್ಷಣ:— ರಾಣು ಬಾಯಿ ಕೇಣಿ, ಡಾಬಿ.

ಹಿಂ ಸೊಡ್ನು ಅನೇಕ ಸಾರಸ್ವತ, ಗೌಡಸಾರಸ್ವತ ಪ್ರಮುಖಾಂಲೆಂ ಜೀವನ ಚರಿತ್ರ (ತಾಂಗೆಲೆ ಛಾಯಾ ಚಿತ್ರ ಸಮೇತ) ಅನೇಕ ಕವನ. ವಿನೋದ, ವಿವಿಧ ವಿಷಯ, ಏಕ ಇಂಗ್ಲಿಷ ಉಪನ್ಯಾಸು, ಸ್ತ್ರೀ ವಿಭಾಗು ಇತ್ಯಾದಿ ಆಸ್ತಾ.

ಪುಟ ೭ ಶೆಂ 50. ಮೋಲ ಆಟ ಆಣೆ.
ಟಪಾಲ ಖರ್ಚ ಏಕ ಆಣೊ.

ಜಾಂವ್ಕ ಜಾಲ್ಲೆಲ್ಯಾನಿಂ ನವ ಆತ್ಯಾ ಸ್ಟಾಂಪ ಪಟೊ ಕಾ. ಸಾರಸ್ವತಾಚ್ಯಾ ಪೋಷಕಾಂಕ ಆನಿ ಸಹಾಯಕಾಂಕ ಏಕ್ಕೆಕಿ ಉಚಿತ ಪ್ರತಿ ಧಾಡ್ತಾಂತಿ ಜಾಸ್ತಿ ಪ್ರತಿ ಜಾಯ್ ಜಾಲ್ಯಾರಿ ಸಹಾಯಕ ಆನಿ ಪೋಷಕಾನಿಂ ಪ್ರತ್ಯೇಕ ಮೌಲ್ಯ ಪಟೊಂಕಾ.

ವಿಳಾಸ.— ಕಾರ್ಯದರ್ಶಿ, 'ಸಾರಸ್ವತ', ಮು. ಡಾಬಿ.

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!

ಕೆಲವು ದಿವಸಗಳಲ್ಲಿ ಗುಣಪಡಿಸುವಂಥ

ಔಷಧಿಯು ಇದು ಮಾತ್ರವು.

ಜಠರಾಗ್ನಿ, ರಕ್ತವೃದ್ಧಿ, ಧಾತುಪುಷ್ಟಿ, ಮುಖೋಲ್ಲಾಸ, ಪರಮಾನಂದ ಮೊದಲಾದ ಸುಖಗಳನ್ನು

ಕೊಡುವ ಆರೋಗ್ಯದಾಯಿನಿ

ಪ್ರೇಮ ಪಾಕ] ಅಗಸ್ತ್ಯ [ಶೀಘ್ರ ಫಲದಾಯಿ

ಮನ್ಮಥಚಿಂತಾಮಣಿಲೇಹ

ರಿಜಿಸ್ಟರಆದದ್ದು

ಅಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳು ಈ ಲೇಹ ಗುಣಕಾರಿಯಾಗಿದ್ದು ಮೇಹವಿಕಾರವಿದ್ದವರಿಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯ ವ್ಯಾಧಿ ಗಳ ಯುವಕರಿಗೂ ಜ್ಞಾನ ಪುಷ್ಟಿ ಬೇಕಾದವರಿಗೂ ಉಪಯೋಗವಿಲ್ಲ ಪರಮಸಾಧನ ಔಷಧಿ

1 ಸೇರು ನಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು

1 ಸೇರು ದಬ್ಬಿ ಒಂದಕ್ಕೆ 3—0—0

½ ಸೇರು ದಬ್ಬಿ ಒಂದಕ್ಕೆ 1—9—0

ವಿ. ಪಿ ಖರ್ಚು ಪ್ರತ್ಯೇಕ. ವಿಶೇಷ ವಿವರಕ್ಕೆ ಬರೆಯಿರಿ.

ವಿಳಾಸ:-ದೇವಣ್ಣ ನಾರಾಯಣ ಸೇಟ್,

ಮರ್ಚಂಟ್, ಗೋರಕ್ಷಪ್ಪ, ಮಂಗಳೂರು,(ದ. ಕ.)

ದರ ಕಡಿಮೆ ಸುಸಂಧಿ!!

ಎಚ್ಚರಿಕೆ!

ನಮ್ಮ

ಸುಪ್ರಸಿದ್ಧ

ಇಂಗ್ಲಿಷ ಮೋಡ

ಸಾಯಕಲ

ವೆಲಿಂಗ್ಟನ

ಸಾಯಕಲ ಮತ್ತು ಮೋಟಾರ

ಕಂಪನಿ, ಹೊರ್ನಬೀ ರೋಡ,

ಮುಂಬಯಿ ನಂಬರ ೧

ಆರ್ಸೆನಲ ರೋಡ, ಪುಣೆ.

ರೋಗದಿಂದ ನರಳಬೇಡಿ!

ನಮ್ಮಲ್ಲಿ ಪಂಚ ಮಹಾ ಚಿತ್ರ ಇತ್ಯಾದಿ ಎಲ್ಲ ತರದ ಜ್ವರ, ಪ್ಲೇಗ, ಕಾಲರಾ, ತಲೆಶೂಲಿ, ವಾಯು, ಕಫ, ಅಗ್ನಿಮಾಂದ್ಯ, ಮಲಬದ್ಧತೆ, ಮೂಲವ್ಯಾಧಿ, ವಾತ, ಪಿತ್ತ, ಅತಿಸಾರ, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉದರ (ಗುಲ್ಮ) ಬಾಲಗ್ರಹ, ಕುಷ್ಠ, ಗಜಕರ್ಣಗಳಿಗೆ ಅಮೇರಿಕನ, ಫ್ರೆಂಚ ಇಂಗ್ಲಿಷ ದೇಶಿ ಔಷಧಗಳು ಅಗ್ಗವಾಗಿ ಸಿಗುವವು.

ಇದಲ್ಲದೆ ಎಲ್ಲ ತರದ ಸೈಕಲ್, ಗ್ರಾಮೋಫೋನ್ ಸಾಮಾನು, ... ಪೇಟೆಂಟ ಔಷಧಿಗಳು ಸಿಗುವವು. ನಮ್ಮಲ್ಲಿ ... ಬೇರೆ ದರದಿಂದ ಕಳಿಸಿಕೊಡುತ್ತೇವೆ.

ಎಸ್ ಎಲ್ ಥಾಕಪ್ಪ ಮತ್ತು ಬ್ರದರ್ಸ,

ಸಿರಸಿ.

"ಚಾಟಾನೂಗಾ" ಕಬ್ಬಿನ ಗಾಣ!

ಜಗತ್ತಿನಲ್ಲಿ ಸರ್ವೋತ್ಕೃಷ್ಟ ವೆಂದೇ ಇದು ಇಷ್ಟು ಪ್ರಖ್ಯಾತಿ ಹೊಂದಿತು!



ನಂ. ೧೨, ರೂ. ೧೪೫
,, ೧೩, ರೂ. ೧೬೫
,, ೫೫, ರೂ. ೧೯೦.
,, ೫೬, ರೂ. ೨೩೫.

ಮಾಲು ಮುಂಬಯಿ ರೇಲ್ವೆ ಸ್ಟೇಷನ್ನಿನ ವರೆಗೆ ತಂದು ಕೊಡಲ್ಪಡುವದು.

ಇದರ ರೋಲುಗಳು ಶುದ್ಧ ಕಬ್ಬಿಣದಿಂದ ಮಾಡಿದ್ದಿರುತ್ತವೆ. ಕಬ್ಬಿನಲ್ಲಿಯ ಹನಿ ಹನಿ ರಸವನ್ನು ಈ ಗಾಣ ಹಿಂಡಿ ತೆಗೆಯುವ ಸ್ವಭಾವ ... ಯಾವುದೇ ಬಿಡಿಯುವ ಭಯವಿಲ್ಲದೆ ಕೊಡಬಹುದಾಗಿದೆ

ಆರ್ಡರಿನ ಸಂಗಡ ಹಣವನ್ನು ಕಳಿಸಬೇಕು.

ಸ್ಪೆಷಲ ಗಾಣ "ಡಬ್ಲ್ಯು ಗಿಯರ" ಪ್ರತ್ಯೇಕ!

ಮೆಕ್‌ಬೆಥ ಬ್ರದರ್ಸ ಮತ್ತು ಕಂಪನಿ, ಲಿಮಿಟೆಡ್.

ಕೊಡಾಕ ಹೌಸ, ಹೊರ್ನಬಿ ರೋಡ ಮುಂಬಯಿ.

"ಲೋಕರಹಸ್ಯ"

ಈ ಕನ್ನಡ ಮಾಸ ಪತ್ರಿಕೆಯಲ್ಲಿ ವ್ಯಾಪಾರಿಗಳಿಗೆ ವ್ಯಾಪಾರದ ವಿಚಾರ, ರೈತರಿಗೆ ಕೃಷಿಯ ಅತ್ಯುತ್ತಮ ಮಾರ್ಗಗಳು, ಸ್ತ್ರೀಯರಿಗೆ ಗೃಹಕೃತ್ಯದ ವಿಚಾರಗಳು, ಬಡವರಿಗೆ ಹಣ ಸಂಪಾದನೆಯ ಸುಲಭ ಮಾರ್ಗಗಳು, ರಸಿಕರಿಗೆ ವಿನೋದ ವಿಚಾರಗಳು, ಪ್ರತಿಯೊಬ್ಬರಿಗೂ ಬೇಕಾದ ಉಪಯುಕ್ತ ವಿಚಾರಗಳು, ವೈದ್ಯ ಭಾಗಗಳು ಜ್ಯೋತಿಷ್ಯ, ಕಾನೂನ, ವೇದಾಂತ, ಕಾಮಸಂಬಂಧಗಳು, ಗೋಪಾಲನೆ, ಶೃಂಗಾರಿಕೆಗಳು, ಮುಂತಾದ ವಿಷಯಗಳೆಲ್ಲವೂ ಪ್ರಕಟವಾಗುತ್ತಿವೆ ಪತ್ರಿಕೆಯು ಪ್ರತಿಯೊಂದು ಪುಟದಲ್ಲಿಯೂ ಅನುಕೂಲವಾದ ಗೂಢ ವಿಚಾರಗಳಿಂದ ತುಂಬಿರುತ್ತವೆ. ಪ್ರತಿ ಮಾಸದಲ್ಲಿಯೂ ೬೦ ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ

ರೂ. ೩—೦—೦. ಮಾತ್ರ.

ಮಾದರಿ ಸಂಚಿಕೆಗೆ ಕ್ರಯ ೦—೫—೦

ಮಾದರಿ ಸಂಚಿಕೆಗಳನ್ನು ಪುಕ್ಕಟೆಯಾಗಿ ಕೊಡುವದಿಲ್ಲ

ಹಾಕಿದ ಹಣವನ್ನು ಪಡೆದು ... ತಿಂಗಳಿಗೆ ೧೦೦ ರೂ. ... ಸಂಪಾದನೆ ... ಬೇಕಾದರೆ ...

ಮ್ಯಾನೇಜರ್,

"ಲೋಕರಹಸ್ಯ"

ವೀರರಾಜೇಂದ್ರ ಪೇಟೆ, ಕೊಡಗು



ವಿಜಾಪುರ ಬೇಡಿ! ವಿಚಾರಿಸು ಬೇಡಿ!!

ನಮ್ಮಲ್ಲಿ

ಅತಿ ಮನೋಹರವಾದ

ದೇವರ ಮಂಟಪಗಳೂ,

ಹಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಚಿತ್ರನೇರಿ ಪೆಟ್ಟಿಗೆಗಳೂ, ಆಫೀಸ ಟೇಬಲ್ಲುಗಳೂ, ರೊಕಿಂಗ ಖುರ್ಚಿಗಳೂ ಮುಂತಾದ ಎಲ್ಲ ತರದ ಮನೆ ಸಾಮಾನು ಸಿಗುತ್ತವೆ.

ನಮ್ಮ ವಿಳಾಸ:—

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,

ಕಾಜಿ ಭುವನ,

ಕಾರವಾರ.

ಸುಗಂಧಿ ತಾಂಬೂಲೀ ಜರ್ದಾ!

ಉತ್ತಮ ತಂಬಾಕ ತಕ್ಕೊಂಡು ಅದಕ್ಕೆ ತಾಂಬೂಲ ಪದಾರ್ಥಗಳ ಮತ್ತು ಮುಖರಂಜನ ಔಷಧೀ ವನಸ್ಪತಿಗಳ ಅರ್ಕದ ಬಗಣೀಕೊಟ್ಟು ಈ ತಾಂಬೂಲೀ ಜರ್ದಾ ತಯಾರ ಮಾಡಿರುತ್ತದೆ. ಇದು ತಿನ್ನಲಿಕ್ಕೆ ಉತ್ತಮವಿದ್ದು ಸುವಾಸಿಕವಿರುತ್ತದೆ. ಇದರ ಸೇವನೆಯಿಂದ ಬಾಯಿ ಹೊಲಸು, ಹಲ್ಲುಬೇನೆ ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಗಟ್ಟಿಯಾಗುತ್ತವೆ. ಇದರ ಸೇವನೆಯಿಂದ ದಮ್ಮು, ಕಫ ಮುಂತಾದ ವಿಕಾರಗಳು ಆಗುವ ಭೀತಿಯು ಏನೂ ಇಲ್ಲ. ಆದ್ದರಿಂದ ತಂಬಾಕ ತಿನ್ನುವ ರಸಿಕರು ಅವಶ್ಯವಾಗಿ ಅನುಭವ ತಕ್ಕೊಳ್ಳಬೇಕು. ಗಡ್ಡಿಗೆ ೩೦ ರೂ ೦೦-೬, ೨ ಡಜನಕ್ಕೆ ರೂ ೧-೦, ೧೦೦ ಕ್ಕೆ ರೂ ೨೦ ೦, ೫೦೦ಕ್ಕೆ ರೂ ೮೦ ೦, ೧೦೦೦ಕ್ಕೆ ರೂ ೧೫೦-೦ ಟಪಾಲ ಪೆಕಿಂಗ ಖರ್ಚು ಗಿರಾಕರ್ ಕಡೆಯಿಂದ ಬೀಳುವದು. ವಿಶೇಷ ಸವಲತ್ತಿನ ಬಗ್ಗೆ ಕೆಳಗಿನ ಪತ್ತೆಯ ಮೇಲೆ ಪತ್ರ ವ್ಯವಹಾರ ಮಾಡಿ ನಿರ್ಧಾರ ಮಾಡಿಕೊಳ್ಳಬಹುದು.

ಪಕ್ಕೆ. ಎಸ್. ಬಿ. ಕದಂ,

ಬಿಡಿ ಮತ್ತು ತಂಬಾಕು ಜರ್ದಾ ದುಕಾನ

ಮು ಶ್ರೀ ಸಿದ್ದೇಶ ಜಿ ಬೆಳಗಾಂವ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬಿ ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿ

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ, ಕಂಠಕ್ಕೆ ಸೇರಲ್ಪಟ್ಟ ಸಹ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಯಾರು ಬೆಟ್ಟದ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ ಗಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ಎಂದು ಪ್ರಕಟಿಸಲಿಚ್ಛಿಸುತ್ತೇವೆ.

ಒಂದು ಬುಡ್ಡಿಗೆ ಕ್ರಯ ರೂ ೦-೪-೦. ವ್ಹಿ. ಪಿ ಖರ್ಚು ಅಲ್ಲದೆ. ಡಜನ್ ೧ ಕ್ಕೆ ರೂ. ೨ ೮ ೦. ವ್ಹಿ. ಪಿ. ೦ ೮ ೦ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ದಕ್ಷಿಣ ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ. ೫೧೦, ಜಾರ್ಜಟೌನ, ಮದರಾಸ

ನಿಜೇಕ] ಅನುಭವಸಿದ್ಧ [ನಿಸ್ಸಂಶಯ.

ವನೌಷಧಿಮೂಲಿಕೆಗಳು.

ವಾಯುದುಮ್ಮನ (ಹೈಡ್ರೋಫೋಬಿಯಾ) ಮಹಾಮಾರಿ (ಕೊಲೆರಾ) ಅರ್ಧಾಂಗವಾಯು, ವಿಷ ಜಂತು, ಹುಚ್ಚು ನಾಯಿ ಸರ್ಪ ಮೊದಲಾದ ವಿಷ ಕೀಟ ಜಂತು ಕಚ್ಚುವಿಕೆಯಿಂದ ವಿಷಬಾಧಿತರಾದವರಿಗೂ (ಜೀವ ಸಗಿ) ರಕ್ತದೋಷ ರೋಗಗಳಿಗೆ ಒಂದೇ ಒಂದು ಮಾತ್ರೆಯಿಂದ ಮಾತ್ರೆಯಾಗಿ ತಿನ್ನ ಗುಣಪಡಿಸುವದು ಇವು ಬಹುಕಾಲದಿಂದ ಅನುಭವ ತಕ್ಕೊಂಡು ಹಾಗೆ ಪ್ರತಿನಿತ್ಯ ಉಪಯೋಗಿಸುತ್ತಿದ್ದು ಖಚಿತಗಳ ಔಷಧಿಗಳ ತಾಜಾ ಮೂಲಿಕೆಗಳು. ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು ಮೂಲಿಕೆ ಔಷಧಿಗಳ ದ್ರಾವಕ (Tincture) ಸಹ ದೊರೆಯುವವು ಸೂಚಿಸಿದರೆ ಕಳುಹುವೆವು

ವಾಯುದುಮ್ಮನದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ಕ್ಕೆ ೦ ೨-೦

ಕೊಲೆರಾದ ಬಗ್ಗೆ ... ೦ ೨ ೦

ಅರ್ಧಾಂಗ ವಾಯುವಿನಬಗ್ಗೆ ೧ ಪೂರ್ತಿ ಗುಣವಾಗುವಷ್ಟು ... ೧ ೮-೦.

ನಿತ್ಯ ಉಪಯೋಗಕ್ಕೆ

ನಾಯಿ ಕಡಿತದಬಗ್ಗೆ ೦-೪-೦

ಸರ್ಪ ಸುತ್ತಿನ ಬಗ್ಗೆ ೦ ೨ ೦

ಹೊಟ್ಟೆಯಲ್ಲಿ ಕತ್ತಿಯ ಔಷಧ ಬಿದಬಗ್ಗೆ ತೊಲೆ ೧೦ ಕ್ಕೆ ೦-೮-೦

ನಿಶಕ್ತಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾಶ್ತು ಕ್ಕೆ ೧-೦ ೦

ನೋರಾನಳಾ (ನೆಲ್ಲಕಾಯಿ ಗುಳುಂಬ) ರಾಶ್ತು ೧ ಕ್ಕೆ ೧-೦-೦

ಉಂಡುಗಳು ದಾನ ಆದಷ್ಟು ಹೆಚ್ಚು ತರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು ಟಪಾಲ ಖರ್ಚು ಪ್ರತ್ಯೇಕ ವಿಶೇಷ ಮಾಹಿತಿ ಪತ್ರ ದ್ವಾರಾ. ಅನುಭವಪತ್ರ ಔಷಧೀ ಸಂಗಡ

ಎನ್. ಜಿ. ಹೆಗಡೆ, ಮಾಸ್ತೇರ,

ಪೋಸ್ಟ— ಒಂಕೀಕೋಲ್ಲ. ತಾ ಉತ್ತರ ಕಾನಡಾ

ಕಿರ್ಲೋಸ್ಕರ ಗಾಣಗಳು.

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಕಬ್ಬಿನ ಗಾಣಗಳೆಂದರೆ—

೧. ಕಿರ್ಲೋಸ್ಕರ ನಂ. ೫. ೨. 'ಕಿಸಾನ'. ೩. 'ಕಮಾಲ ಚರಕ.'

ಇವುಗಳಲ್ಲಿ ಮೊದಲಿನ ಎರಡುಗಾಣಗಳ ಬಗ್ಗೆ ಕರ್ನಾಟಕಸ್ಥರಿಗೆ ಗೊತ್ತುಂಟು ಮೂರನೆಯದಾದ ಕಮಾಲಗಾಣದ ಬಗ್ಗೆ ಬರೆಯುವದೆಂದರೆ ಇದು ಗಂಟೆಯೊಂದಕ್ಕೆ ೧೨೦೦ ಪೌಂಡ ಕಬ್ಬನ್ನು ಅರೆಯುವದು. ೧೦೦ಕ್ಕೆ ೭೦ರಂತೆ ರಸವು ದೊರೆಯುವದು.

ಹೆಚ್ಚಿನ ಮಾಹಿತಿಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ನಾವು ಕಿರ್ಲೋಸ್ಕರ ವಾರ್ತೆ ಎಂಬ ತಿಳಿಗನ್ನಡ ಮಾಸಪತ್ರಿಕೆಯನ್ನು ಕರ್ನಾಟಕ ತರುಣರ ಉನ್ನತಿಗೋಸ್ಕರ ಪ್ರಕಟಿಸಹತ್ತಿರುವೆವು.

ವಾರ್ಷಿಕ ವರ್ಗಣಿ ೧ ರೂಪಾಯಿ. ಮಾದರಿ ಸಂಚಿಕೆ ಪುಕ್ಕಟೆ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ; ಜಿಲ್ಹಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಿದ್ಧವಾಗಿದೆ. ಲಕ್ಷಗಟ್ಟಲೆ ಜನರು ಅಮೃತಾಂಜನವನ್ನು ಉಪಯೋಗಿಸುತ್ತಿರುವರು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ನೆಗಡಿ, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಖಾಯಿಷ್ ಇದ್ದವರು ಅದು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೊ, ಫೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

Reg. No. B 1270 Monday, December 28th, 1925.

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೧೩.

ಪತ್ರದ ವರ್ಗಣಿ.
ಮುಂಚಿಯಲ್ಲಿ ಅಗಾವು ರೂಪಾಯಿ 2-4-0.
ವೆಯಾರ್ತರಿಯಿಂದ ರೂ. 3-0-0.
ವಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ (೧೨ ಪಾಯಿಂಟ ಟೈಪ) ೪ ಸಾಲುಗಳವರೆಗೆ ರೂ. 1-0-0. ಆ ನಂತರ ಪ್ರತಿಸಾಲಿಗೆ 0-2-0.
ಜಾಹಿರಾತಿನ ಸಾಲು ಎಷ್ಟು ದೊಡ್ಡದಿರುವವೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಖಾಸ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಿದ ಮೇಲೆ ನಿಶ್ಚಯಿಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೨೮ ಮಾಹೆ ಡಿಶಂಬರ ಸನ್ ೧೯೨೫ ನೇ ಇಸವಿ)

हिंदुस्थानांतील रहिवाशांस ज्याप्रमाणे हिंदुस्थानची हवा मानमानेच हें औषध हिंदुस्थानातील लोकांस ज्यास्त फायदेशीर आहे.

द्राक्षासव— दीड रतलची किंमत २ रुपये;

रामबाण औषधें —

सांदे घालविणारें,
भूक वाढविणारें,
कोष्ठास साफ करणारें,
झोप आणणारें,
शक्ति देणारें,
तेजस्वीपणा आणणारें,

— विश्वास हवेकर कॅटलाग मागवा,

पंडुफार्मास्युटिकलवर्क्स लिमिटेड,
मुंबई नं. १२

एजंट— मेसर्स पंडित आणी कंपनी, तीर्थहळ्ळी.

Notice.

We hereby beg to inform all of our esteemed customers that Mr. Padmanabh Gopal Kamat of Ankola is our Canvassing Agent for the District of North Kanara and that none of our other Agents are given power to book orders in the said area. Further we beg to add that our prices are nett and no discounts are allowed on them.

P. P. KUMARAN,
Proprietor,
For The West Coast Weaving Establishment.
CANNANORE.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.



'ಕಾನಡಾವೃತ್ತ'ದ ಚಂದಾದಾರರಿಗೆ
ಬರೇ ಒಂದು ತಿಂಗಳ ತನಕ.

ನಮ್ಮ ಮೊಡರ್ನ ರೆಗ್ಯುಲೇಟರ ವಾಲ ಕ್ಲಾಕ (ಗೋಡೆಯ ಗಡಿಯಾರ) ಮತ್ತು ೧೮ ಕೆರೆಟ ನಕಲಿ ಬಂಗಾರದ ಕೈ ಗಡಿಯಾರ ಇವೆರಡಕ್ಕೂ ಕೂಡಿ ಕಿಮ್ಮತ್ತು ಬರೇ ರೂ. ೧೦! ಎರಡಕ್ಕೂ ೫ ವರ್ಷದ ಗೆರಂಟಿ!

ಪ್ರತ್ಯೇಕವಾಗಿ ಬೇಕಾದ್ದಲ್ಲಿ, ಗೋಡೆ ಗಡಿಯಾರಕ್ಕೆ ರೂ. ೫. ಕೈ ಗಡಿಯಾರಕ್ಕೆ ರೂ. ೬.

ತ್ವರೆ ಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ!

CAPTAIN WATCH CO., P. B. 265, MADRAS.

ಅನುಮಾನವೇಕೆ——?

ಅಭಿಪ್ರಾಯಗಳು.

ನಿಮ್ಮ "ಟಿಕ್ ಟಾಕ್" ಗೋಡೆಯ ಗಡಿಯಾರವು ತಲುಪಿತು. ಅದರ ಬೆಲೆಯೂ ಅತಿ ಅಗ್ಗವಾಗಿರುವದು. ಅದು ನನ್ನ ಮಿತ್ರರಿಗೆ ಆನಂದವನ್ನು ಕೊಡುವದರಿಂದ ನನಗೆ ಇನ್ನೊಂದು ಗಡಿಯಾರವನ್ನು ಕಳಿಸಿರಿ.

ಆರ್. ...

ನಿಮ್ಮ "ಟಿಕ್ ಟಾಕ್" ಗಡಿಯಾರದ ವಿಷಯ ನಿಜವಾಗಿ ಹೇಳುವದಾದರೆ, ಅದು ಬಹಳ ಉಪಯೋಗವಾಗಿರುವದು. ಅದು ಉತ್ತಮ ರೀತಿಯಿಂದ ನಡೆಯುತ್ತದೆ.

ಖಾನ್, ಮೋಹನ ಮುಳಕರ್,
ತಾ. ಮುರಿಸ್ಕರ್, ರಾಜನ...



ಓದಿ ಖಾತ್ರಿಮಾಡಿಕೊಳ್ಳಿ!

ನಿಮ್ಮ "ಟಿಕ್ ಟಾಕ್" ಗಡಿಯಾರವನ್ನು ನೋಡಿ ಬಹಳ ಸಂತೋಷವಾಯಿತು. ನನಗೆ ಇನ್ನು ೫ ಗಡಿಯಾರಗಳನ್ನು ಕಳಿಸಿರಿ. ಇವು ಕಳ್ಳತನದ ಶತ್ರುಗಳ ಕಣ್ಣಿಗೆ ಬೀಳದಂತೆ ಕಳಿಸಬೇಕು.

ರಘುನಂದನ ಪ್ರಸಾದ, ಎಸ್. ಪ್ಲೈಲರ. ಬಳ್ಳಾರಿ.

ನಿಮ್ಮ "ಟಿಕ್ ಟಾಕ್" ಗಡಿಯಾರದಿಂದ ನಮಗೆ ಬಹಳೇ ಸಮಾಧಾನವಾಗಿದೆ. ಇನ್ನು ೩೦ ಗಡಿಯಾರಗಳ ಬಗ್ಗೆ ಬೇಗನೇ ಆರ್ಡರ ಕಳಿಸುವೆವು.

ಬನೆಸ್ಟಿ ಎಂಡ್ ಕಂಪನಿ, ಸೋಲಾಪುರ.

ಬೆಲೆ ಬರೇ ಮೂರು ರೂಪಾಯಿ ವಿಲಂಬವಿಲ್ಲದೆ ತರಿಸಿಕೊಳ್ಳಿ:

PETER WATCH CO., P. B. 27, MADRAS.

ಗೌರಿ ಹುಣ್ಣಿಮೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ ಜಯಕರ್ನಾಟಕ ಮಾಸ ಪತ್ರಿಕೆ

ಸಂಪಾದಕ ಆಲೂರ ವೆಂಕಟರಾಯರು

ಇದರಲ್ಲಿ ವಿವಿಧ ವಿಷಯಕ್ಕೆ ಸಂಬಂಧಿಸಿದ ಸಾಹಿತ್ಯ, ಧಾರ್ಮಿಕ, ಸಾಮಾಜಿಕ [illegible] ಪ್ರಯೋಗ[illegible] ಬರವಣಿಗೆ [illegible] ನಾಟಕಾದಿಗಳು [illegible] ಸಂಚಿಕೆಯಲ್ಲಿ ಸುಂದರ ಚಿತ್ರಗಳು [illegible] ವರ್ಷದ ಬೆಲೆ [illegible] ಕಾರ್ಯಾಲಯ [illegible]

ಎಲ್ಲಾ ನೋವುಗಳಿಗೆ ದಿವ್ಯೌಷಧ

ವಾತಹಾರಿ ತೈಲ.

[illegible]

ಕೇರೇಕರ ಕಾಬೂಲಿ ಹಿಂಗಿನ ದುಕಾನ

ಜವಳಿಬಜಾರ ಕುಮಟಾ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು



೧ ರಾಗದ ಕೈಪೆಟ್ಟಿಗೆ ಕಿಂ ೩೦ ೬೦,೩೦,೭೫ ೧೦೦

೨ ,, ಕಾಲು ಪೆಟ್ಟಿಗೆ ಕಿಂ ೩೫ ೭೫ ೧೨೦, ೧೪೦

೩ ತಬಲೆ ಜೋಡಿ ಕಿಂ ೧೩, ೧೮, ೨೦, ೨೫

೪ ಹಾರ್ಮೋನಿಯಮ ಗ್ಯಾಡ (ಮರಾಠಿ) ಕಿಂ ೧॥, ತಬಲೆ ಗ್ಯಾಡ ಕಿಂ ೧೨ ಆ

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡತಕ್ಕದ್ದು

ಪತ್ತೆ ಗೋಪಾಳ ಸಖಾರಾಮ ದಾತೆ ಕಂಪನಿ, ವಿಠ್ಠಲವಾಡಿ ಎದುರಿಗ ೨೩೩ ಕಾಳಬಾದೇವಿ. ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ

ಕಳೆದ ೪ ೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ-ತಾಳಗುಪ್ಪೆ, ಶಿವಮೊಗ್ಗಾ-ಹರಿಹರ-ದಾವಣಗೆರೆ, ಶಿವಮೊಗ್ಗಾ-ಕಳಸರಕಟ್ಟೆ, ಸಾಗರ-ಸೊರಬ-ಶಿರಾಳಕೊಪ್ಪ, ಸಾಗರ-ತೀರ್ಥಹಳ್ಳಿ, ಸಾಗರ-ಕಳಸರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸುತ್ತಿದ್ದು ಇದೆ ದಕ್ಷಿಣ ಕನ್ನಡ ಜಿಲ್ಹೆಯ ಕಾರ್ಕಳ ಉಡುಪಿ, ಕುಂದಾಪುರ, ಮಂಗಳೂರ ಹೀಗು ಘಟ್ಟದ ಈ ಕಡೆಗೆ "ಕಾರ್ಕಳ ಮೋಟರ ಸರ್ವಿಸಿನ" ವಿದ್ಯಮಾನವೂ, ಬಳ್ಳಾರಿ ಜಿಲ್ಹೆಯ ಹರಪನಹಳ್ಳಿಗೆ "ಲಕ್ಷ್ಮೀ ಮೋಟರ ಸರ್ವಿಸಿನ" ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡುತ್ತೇವೆ

ಉತ್ತರ ಕನ್ನಡ ಜಿಲ್ಹೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ ಸಾಗರ ಹರಿಹರ ಮತ್ತು ಮೇಲ್ಕಂಡ ಸ್ಥಳಗಳಿಗೆ ಪ್ರಯಾಣ ಬೆಳಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಶಿರಸಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾರಂಭ ಮಾಡಿರುತ್ತೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	ಬೆಳಿಗ್ಗಿನ ೭ ಘಂಟೆಗೆ
ಶಿರಸಿ ಸೇರುವದು—	,, ೧೧ ,,
ಶಿರಸಿಯಿಂದ ಬಿಡುವದು ಶಿವಮೊಗ್ಗಾ ಕಡೆಗೆ—	ಮಧ್ಯಾನ್ಹ ೧ ,,
ಸಾಗರಕ್ಕೆ ಸೇರುವದು (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ ,,
ಸಾಗರದಿಂದ ಶಿರಸಿ ಕಡೆಗೆ ಹೊರಡುವದು— . .	ಬೆಳಿಗ್ಗಿನ ೬ ,,
ಸಿದ್ದಾಪುರದ ಮೇಲಾಗಿ ಶಿರಸಿಗೆ ಸೇರುವದು— ... ,	೧೧ ,,
ಶಿರಸಿಯಿಂದ ಕುಮಟೆಗೆ ಹೊರಡುವದು —	ಮಧ್ಯಾನ್ಹ ೨ ,,
ಕುಮಟೆಗೆ ಸೇರುವದು—	ಸಾಯಂಕಾಲ ೬ ,,

N B — ಈ ಮೇಲಿನ ಲೈನುಗಳ ವಿನಹ ಶಿರಸಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ ಪ್ರಾರಂಭಿಸುವ ಯೋಚನೆ ಸಹಾ ಇರುತದೆ ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

SHIMOGA, 22—11—1924 } **M MANJAPPA.** **PROPRIETOR**

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀದಾಸಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ ಪಿತ್ತ, ಕಫ ಈ ತ್ರಿದೋಷಗಳ ವಿಕ್ರಿಯೆಯಿಂದಾದ ಬೇನೆಯು ಹೋಗುವದು ೬೦ ೭೦ ವರ್ಷದ ಮುದುಕರ ಕಾಯಕಾಂತಿ ತರುಣರಂತೆ ಪ್ರವರ್ಧಮಾನವಾಗುವದು (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಯದಲ್ಲಿ ನಪುಂಸಕತ್ವವು ಇಲ್ಲದಂತಾಗುವದು ಮಲಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ಧಾತು ಒಂದಾಗುವದು — ಪರಮಾ ಹಾಗೂ ಕಾಸಿನಿಂದ ಶೋಷಿತವಾದ ಶರೀರವು ನಿರ್ದೋಷವಾಗುವದು ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವದು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚೆನ್ನಾಗಿ ಆಗುತದೆ. ಇದರ ಅನುಭವವು ಪಡೆದಲ್ಲದೆ ತಿಳಿಯದು. ಶೌಚ ಸಾಫ ಆಗುವದು ಮೈಯಲ್ಲಿ ಎಷ್ಟೇ ದಿವಸದ ತಾಪ ಇದ್ದರೂ ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತು ೪—೦—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ ೩ನೇ ಬಾಟಲಿಗಳ ಕಿಮ್ಮತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚ ಬೇರೆ ಬೀಳುವದು ವಿಹಿಂಟರ ಕಡಿಯಿಂದ ೧ ಬಾಟ್ಲಿಗೆ ೧—೦—೦ ೩ ಬಾಟ್ಲಿಗೆ ೩—೦—೦ ಹಾಜನಿ ೧೩—೧—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ ಪೋ ನಿಪ್ಪಾಣಿ ಜಿ ಬೆಳಗಾಂವ

ಕಾನಪುರದ ವರ್ಣನೆ.

ಕಾನಪುರದ ಈಗ ಸರ್ವತೋಮುಖಿಯಾಗಿದ ಈ ಪಟ್ಟಣದ ವರ್ಣನೆಯು ಹಿಂದೊಮ್ಮೆ 'ಕೇಸರೀ' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಕಾನಪುರವು, ಕಾನಪುರ ಜಿಲ್ಲೆಯ ಮುಖ್ಯ ಸ್ಥಳವು, ಭಾಗೀರಥಿ ನದಿಯ ಬಲ ದಂಡೆಯ ಮೇಲಿದ್ದು, ಭಾಗೀರಥಿಯು ಈಶಾನ್ಯ ದಿಕ್ಕಿನಿಂದ ಹರಿಯುತ್ತದೆ. ಪಟ್ಟಣದಲ್ಲಿ ಗಂಗಾ ನದಿಯ ಒಂದು ಕಾಲುವೆಯನ್ನು ಈಶಾನ್ಯ-ನೈಋತ್ಯ ದಿಕ್ಕಿನಿಂದ ಒಯ್ದಿರುವರು. ಇದರಿಂದ ಇಂಗ್ಲಿಷರ ಹಾಗು ಭಾರತೀಯರ ವಾಸಸ್ಥಳಗಳು ಪ್ರತ್ಯೇಕವಾಗಿವೆ. ಈ ವರುಷ ರಾಷ್ಟ್ರೀಯ ಸಭೆ ಸೇರುವ ಸ್ಥಳವು 'ತಿಲಕ ನಗರ' ವೆಂದು ಖ್ಯಾತಿಗೊಂಡಿದೆ. ಈ ಪ್ರದೇಶವು ಕಾನಪುರದ ಪಶ್ಚಿಮ ದಿಕ್ಕಿಗಿದೆ. 'ಖಲಾಸಿ ಲ್ಯಾನ' ಎಂಬ ಸ್ಥಳದಲ್ಲಿ 'ತಿಲಕ ನಗರ' ವಿದೆ. ಈ ಪ್ರದೇಶವು ನವಾಬಗಂಜ ಹಾಗ ಗ್ವಾಲಟೋಲಿ ಇವುಗಳ ನಡುಮಧ್ಯದಲ್ಲಿದೆ. ಖಲಾಸಿ ಲ್ಯಾನ ಸ್ಥಳವು ಇಂಪ್ರೂವ್‌ಮೆಂಟ ಟ್ರಸ್ಟಿನವರದು. 'ತಿಲಕ ನಗರ'ದ ವ್ಯಾಪ್ತಿಯು ೫೦ ಎಕರೆ ಕ್ಷೇತ್ರವಿದೆ. ಅದಕ್ಕಾಗಿ ೬,೧೦೦ ರೂಪಾಯಿ ಬಾಡಿಗೆ ತೆರಬೇಕು. ಈ ಪ್ರದೇಶದಲ್ಲಿ ಟ್ರಸ್ಟಿನವರು ಕಟ್ಟಿಸಿದ ದೊಡ್ಡ ಮಾರ್ಗಗಳಿರುವದರಿಂದ ಮಾರ್ಗನಿರ್ಮಾಣಕ್ಕೆ ಖರ್ಚು ಒಂದು ತಗಲಲಿಲ್ಲ. ಕಾನಪುರವು ದೊಡ್ಡ ಔದ್ಯೋಗಿಕ ಸ್ಥಳವು. ದೊಡ್ಡ ದೊಡ್ಡ ಕಾರಖಾನೆಗಳಿವೆ. ಗಂಗಾ ನದಿಯ ಸಾನ್ನಿಧ್ಯದ ಮೂಲಕ ಈ ಜಿಲ್ಲೆಯು ಸುಸಂಪನ್ನವಾಗಿದೆ. ನದಿಯೊಳಗಿಂದ ೫ ಕಾಲುವೆಗಳಿದ್ದು, ಅವು ಸುಮಾರು ೨ ಲಕ್ಷ ಎಕರೆ ಭೂಮಿಗೆ ನೀರು ಪೂರೈಕೆಯಾಗುತ್ತದೆ. ಇದರಿಂದ ಇಲ್ಲಿಯ ಭೂಮಿಯ ಸುಪೀಕತೆಯು ವಿಶೇಷವಿದೆ. ಕಾರಖಾನೆಗಳು ಕಾನಪುರದಲ್ಲಿ ವಿಶೇಷ ಔದ್ಯೋಗಿಕ ಶಿಕ್ಷಣ ಕೊಡುವ ೬ ಶಿಕ್ಷಣಾಲಯಗಳಿವೆ. ಚರ್ಮದಿಂದ ಬೂಟ, ಪೆಟ್ಟಿಗೆಗಳು ಇತ್ಯಾದಿ ತಯಾರು ಮಾಡಲು ಕಲಿಸುವ ಶಾಲೆಯೊಂದು, ಅರಿವೆ ಅಂಚುಗಳಿಗೆ ಬಣ್ಣ ಕೊಡಲು ಕಲಿಸುವ ಶಾಲೆಯೊಂದು, ವ್ಯಾಪಾರ ಕಲಿಸುವ ಶಾಲೆ ಮತ್ತೊಂದು, ಹೀಗೆ ವ್ಯಾಪಾರ-ಉದ್ಯೋಗಗಳನ್ನು ಕಲಿಸುವ ಸಂಸ್ಥೆಗಳ ಮೂಲಕ ಇಲ್ಲಿ ವಿವಿಧ ಕಾರಖಾನೆಗಳು ಉಂಟಾಗಿವೆ. ಹತ್ತಿ, ಉಣ್ಣೆ, ಇಟ್ಟಂಗಿ, ಸಣ್ಣ, ಸಕ್ಕರೆ, ಹಿಟ್ಟು, ಚರ್ಮ, ಟ್ರಂಕ್, ಬಾಚಣಿಗೆ, ಸರಕು ಜೇರಿ ಇತ್ಯಾದಿ ಅನೇಕ ಪ್ರಕಾರದ ಕಾರಖಾನೆಗಳು. ಸಣ್ಣ ದೊಡ್ಡ ಪ್ರಮಾಣದಲ್ಲಿ ಇಲ್ಲಿ ನಡೆಯುತ್ತಿವೆ. ಉದ್ಯೋಗಗಳಲ್ಲಿ ಪ್ರವೇಶಗೊಂಡವರ ಸಂಖ್ಯೆಯು ೧೯೨೧ನೇ ಸಾಲಿನ ಖಾನೇಸುಮಾರಿಯಂತೆ, ೬೦ ಸಾವಿರ ಗಂಡಸರ, ೩೫ ಸಾವಿರ ಸ್ತ್ರೀಯರು, ೧೫ ಸಾವಿರ ಮಕ್ಕಳು, ಹೀಗೆ ೧ ಲಕ್ಷ ೧೦ ಸಾವಿರ ಜನರಿರುವರು. ಪ್ರತಿ ವರುಷ ಇಲ್ಲಿ ಲಕ್ಷಾವಧಿ ರೂಪಾಯಿಗಳ ಕಾಳು-ಕಡಿ ವ್ಯಾಪಾರವಾಗುತ್ತದೆ. ಗೋದಿಯಲ್ಲಿ ಇಲ್ಲಿಯ ಗಿರಣಿಗಳೇ ಖರೀದಿ ಮಾಡಿಕೊಳ್ಳುವವು. ಕಾನಪುರದ ಬೇಳೆಯು ಸುಪ್ರಸಿದ್ಧವಿದೆ. ಮಹಾಯುದ್ಧದ ಪೂರ್ವದಲ್ಲಿ ಇಲ್ಲಿ ೧ ಲಕ್ಷ ರೂಪಾಯಿಗಳ ಜವಾರದ ವ್ಯಾಪಾರವು ನಿತ್ಯವೂ ಆಗುತ್ತಿತ್ತು. ಇತ್ತಿತ್ತ ಧಾರಣೆ ಇಳಿದಾಗ್ಗ್ಯೂ, ದಿನಕ್ಕೆ ೪೦-೪೫ ಸಾವಿರ ರೂಪಾಯಿಗಳ ವ್ಯಾಪಾರವು ಈಗಲೂ ಆಗುತ್ತದೆ. ಅರ್ಧ ಲಕ್ಷದ ವ್ಯಾಪಾರವು ಚರ್ಮ-ಚೆಕ್ಕಳದು, ನಿತ್ಯವೂ ಜರುಗುತ್ತದೆ. ನಿತ್ಯವೂ ಮುಂಬಯಿಯಿಂದ ಅಲ್ಲಿ ಹೋಗುತ್ತದೆ. ಇಟ್ಟಂಗಿಗಳ ಕಾರಖಾನೆಗಳು ಈ ಜಿಲ್ಲೆಯಲ್ಲಿ ೫೭ ಇವೆ. ೫೭ ಕಾರಖಾನೆಗಳು ಕಾನಪುರ ಪಟ್ಟಣದಲ್ಲಿಯೇ ಇವೆ. ವರ್ಷಕ್ಕೆ ೫೦ ಕೋಟಿ ಇಟ್ಟಂಗಿಗಳು ತಯಾರಾಗುತ್ತವೆ. ಈ ಇಟ್ಟಂಗಿಗಳಲ್ಲಿ ಉಂಟು ಹೆಚ್ಚು, ಅದರಿಂದ ಇವುಗಳು ಶ್ರೇಷ್ಠ ತರಗತಿಯವು. ಕೆಲ ಮನೆಗಳು ಈ ಇಟ್ಟಂಗಿಗಳಿಂದಲೇ ಹಾಸಿಕೊಂಡಿವೆ. ಇಲ್ಲಿ ದನಗಳು ವಿಪುಲ. ಆಕಳು, ಎತ್ತು, ಹೋರಿ, ಕುರಿ ಇವೆಲ್ಲ ಕೂಡಿ ೯ ಲಕ್ಷ ದನಗಳಿವೆ. ಕಾನಪುರದ ಪ್ರಸಿದ್ಧಿಯು ಇಲ್ಲಿಯ ಚರ್ಮದ ಕಾರಖಾನೆಗಳ ಮೂಲಕ ವಿಶೇಷವಿದೆ. ೨ ಸಾವಿರ ಚರ್ಮಗಳು ನಿತ್ಯವೂ ಇಲ್ಲಿ ಹದಮಾಡಲ್ಪಡುತ್ತವೆ; ೩೦೦೦ ಬೂಟುಗಳು ನಿತ್ಯವೂ ತಯಾರಾಗುತ್ತವೆ. ಪರದೇಶದಲ್ಲಿ ದಪ್ಪಾಗುವ ಚರ್ಮವು ಹೆಚ್ಚಾಗಿದ್ದಲ್ಲಿ, ಇಲ್ಲಿ ಹದಗೊಟ್ಟರೆ, ಪರದೇಶಸ್ಥರಿಗೆ ಅದು ಸರಿಹೊಂದುವದಿಲ್ಲವಂತೆ. ಹಿಂದುಸ್ಥಾನ ಸರಕಾರದವರು ೧೮೬೭ನೇ ಇಸ್ವಿಯಲ್ಲಿ ಇಲ್ಲಿ ಒಂದು ಕಾರಖಾನೆ ತೆಗೆದು ಸೈನ್ಯದೊಳಗಿನ ಕುದುರೆಗಳಿಗೆ ತಿಂದಿಕೊಡುವ ತೋಬರಿಗಳನ್ನು ತಯಾರಿಸ ಹತ್ತಿದರು. ಈಗ ಈ ಸೈನ್ಯಕ್ಕೆ ತಗಲುವ ತೋಬರಿಗಳು ಇಲ್ಲಿಯೇ ತಯಾರಾಗುತ್ತವೆ. ಅವಕ್ಕೆ ತಗಲುವ, ಬೂಟುಗಳಿಗೆ ತಗಲುವ ಕಬ್ಬಿಣದ ಸಾಮಾನು ಕೂಡ ಅಲ್ಲಿಯೇ ತಯಾರಾಗುತ್ತವೆ. ಇಲ್ಲಿ ಚಾಲ ಇದ್ದು, 'ಸೈ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ ನೀಲಿಮೆಯಿಂದ ನಿಬಿಡವಾದ ಕೇಶದ ಮಹತ್ವವನ್ನು ಯಾವ ನಾರಿಯು ತಾನೇ ಹಾರೈಸಲೊಲ್ಲಳು? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಶಕ್ತಿಯನ್ನು ವಹಿಸುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುವದರಿಂದ ಮಸ್ತಕದ ಬೇನೆಯು ಶೀಘ್ರವಾಗಿ ಮಾಯವಾಗಿ ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅವಸಾನ ಹೊಂದಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅಲ್ಲದೆ, ಅವು ಮೃದುವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆದು ನಷ್ಟ ಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ಮೂಲಕ ನಮಗೆ ೩,೦೦೦ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ ಇತರ ಸಾವಿರಾರು ಗ್ರಾಹಕರ ಉಪಯೋಗವಾದ ಮಾನಪತ್ರಗಳೂ ದೊರೆತಿ

ಕ್ರಯ:— ಸೀಸೆಗೆ ರೂಪಾಯಿ 1 0-0, ಸೀಸೆ 3ಕ್ಕೆ ರೂಪಾಯಿ 2-10 0 ವ್ಹಿ. ಪಿ ಖರ್ಚು 0-14-0

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು. ಜಪಾನಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದ್ದು ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ಪಟ್ಟಿಯಲ್ಲಿ ಅಥವಾ ಅಂಚಿನಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ವಿಶಾಲ ಮನಸ್ಸಿನ ಕಳೆಯಿಂದ ಸೆಳೆಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆ 1 ಕ್ಕೆ 0 8 0, 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0 12 0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4 0
ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address: **The Anglo Indian Drug & Chemical Co.**
16, Market, **BOMBAY 2**

ನಾಥ ಬಾಲ ಮುಕುಂದ ಫೂಲನ ಮಿಲ್ಸ ಕಂಪನಿ ... ಎಂಬ ಉಕ್ಕಿನ ಕಾರಖಾನೆಗಳವೆ ... ಸುವ ಉಕ್ಕೆಲ್ಲ ಸಂಯುಕ್ತ ಪ್ರಾಂತದೊಳಗಿನ ... ಸ್ವತ ಮಾಡುವ ಕಾರಖಾನೆಗಳು ಎರಡು ಒಂದು ಕಾರಖಾನೆಯವರು ತಮ್ಮದೊಂದು ... ನಮೂನೆಯನ್ನು ವಿಲಾಯತಿಯ ಸಾಮ್ರಾಜ್ಯ ಪ್ರದರ್ಶನದಲ್ಲಿ ಇಟ್ಟಿದ್ದರು. ಅದಕ್ಕೆ ಚಲೋ ಇನಾಮು ದೊರಕಿದೆ ... ಮುಂದೆ ಸರಕು ಇಲ್ಲಿ ತಯಾರಾಗಿ ಕಳಕತ್ತಾ, ಮದ್ರಾಸ ಮುಂಬಯಿ ಕಡೆಗೆ ರವಾನೆಯಾಗುವದು. ಈ ಉದ್ಯೋಗವು ಸುಧಾರಿಸಿದ ಸ್ಥಿತಿಯಲ್ಲಿ ... ದೇಶದಿಂದ ... ಒಂದು ಸಾವಿರಕ್ಕೆ ... ಬಾಹಣೆಗೆಗಳು ತಯಾರಾಗುತ್ತವೆ ಇಟ್ಟು ... ಬಾಹಣೆಗೆಗಳನ್ನು ತಯಾರಿಸಬಲ್ಲವು

ಉಪವಾಸಾಚರಣ.

ಮಹಾತ್ಮರ ಪ್ರಯೋಗ.

ಮಹಾತ್ಮರು ಬಿಟ್ಟ ವೈಷ್ಣವ ... ಬಿಸ್ವಣೆಯನ್ನು ಮನ್ನಿಸಿ, ತಮಗೆ ಉಪೋಷಣದಿಂದುಂಟಾದ ಶಾರೀರಿಕ ಪರಿಣಾಮಗಳನ್ನು "ಯಂಗ ಇಂಡಿಯಾ" ಪತ್ರಿಕೆಯಲ್ಲಿ ಪ್ರಕಟಿಸಿರುವರು. ಮಹಾತ್ಮರು ಉಪವಾಸವನ್ನು ಪಾರಮಾರ್ಥಿಕ ವಿಚಾರದಿಂದ ಕೈಕೊಂಡಿದ್ದರಿಂದ ಐಹಿಕ ಫಲಾಫಲಗಳನ್ನು ಸೂಕ್ಷ್ಮವಾಗಿ ಅರುಹಲು ಅಸಮರ್ಥರಿದ್ದೇವೆಂದು ಹೇಳಿರುವರು. ಆದರೂ, ತಮಗೆ ತೋರಿದಷ್ಟರ ಮಟ್ಟಿಗೆ ... ಸಂಕ್ಷಿಪ್ತವಾಗಿ ವಿವರಿಸಿರುವರು. ೧೯೧೪ನೇ ಇಸವಿಯಲ್ಲಿ ದಕ್ಷಿಣ ಆಫ್ರಿಕೆಯಲ್ಲಿದ್ದಾಗ, ಮಹಾತ್ಮರು ೧೪ ದಿವಸಗಳ ಉಪೋಷಣವನ್ನಾಚರಿಸಿದರು. ವಾರಣವಾದ ಮಾರನೇ ದಿನದಿಂದ ಬಹಳ ಅಡ್ಡಾಡಲಾರಂಭಿಸಿದರು. ೩ ಮೈಲುಗಳ ವರೆಗೆ ೨ ದಿನ ನಡೆದಾಡಲು, ಕಾಲು-ಹಿಂಭಾಗಗಳು ಬಹಳ ನೋಯಹತ್ತಿದವು. ಮತ್ತೂ ಅವರು ನಡೆದಾಡಹತ್ತಿದ್ದರು. ಈ ಸಮಯ ದಕ್ಷಿಣ ಆಫ್ರಿಕೆಯಿಂದ ಇಂಗ್ಲೇಡಕ್ಕೆ ಅವರು ಹೋಗಬೇಕಾಯಿತು. ಆಗ ಡಾ। ಜೀವರಾಜ ಮೇಹತಾರವರು ಅವರ ಪರೀಕ್ಷೆಮಾಡಿ, ಒಂದು ಪಕ್ಷದ ವರೆಗೆ ಸಂಪೂರ್ಣ ವಿಶ್ರಾಂತಿ ಕೊಳ್ಳಬೇಕೆಂದರು. ಆದರೂ, ಅವರ ಆರೋಗ್ಯವು ಮುಂಚಿನ ಪರಿಶ್ರಮದಿಂದ ಕೆಟ್ಟು, ಎದೆನೋವು ಪ್ರಾರಂಭವಾಗಿ, ಅವರ ಸುಸ್ಥಿತ ಪ್ರಕೃತಿಯು ನಷ್ಟವಾಯಿತು. ಈ ಮುಂದೆ ಉಪವಾಸದಲ್ಲಿಯೂ, ಉಪವಾಸದ ನಂತರವೂ ಸಂಪೂರ್ಣ ವಿಶ್ರಾಂತಿ ಕೊಳ್ಳಬೇಕೆಂದು ಮಹಾತ್ಮರ ಮನವರಿಕೆಯಾಗಿ, ಅವರು ಅದೇ ಮೇರೆಗೆ ನಡಕೊಳ್ಳುತ್ತಿರುವರು. ಉಪೋಷಣದ ಸಮಯ ಮಹಾತ್ಮರು ಜಲಪಾನ ಮಾಡುತ್ತಾರೆ. ಬೇಕಷ್ಟು ಜಲಪಾನ ಮಾಡಿದರೆ, ಶರೀರವು ನಿರ್ಮಲವಿರುತ್ತದೆ; ಬಾಯಿಯು ತಂಪಾಗಿರುತ್ತದೆ. ಮಹಾತ್ಮರು ನೀರಿನ ಸಂಗಡ ಉಪ್ಪು ಮತ್ತು ಸೋಡಾ ಬೆರಸಿ ಕುಡಿಯುತ್ತಿರುವರು, ಮತ್ತು ದಿನಕ್ಕೊಮ್ಮೆ 'ಎನಿಮಾ' ಅಂದರೆ, ಗುದದ್ವಾರದಿಂದ ಜಲಪ್ರವೇಶ ಮಾಡಿಕೊಂಡು, ಮಲವಿಸರ್ಜನ ಮಾಡುತ್ತಾರೆ. ಬಿದ್ದುಕೊಂಡಿದ್ದಾಗಲೇ ಸ್ಪಂಜ ಮತ್ತು ಸಮುದ್ರಪಾಚಿಯಿಂದ ಸ್ನಾನ ಮಾಡುತ್ತಾರೆ. ಇದರಿಂದ ರಾತ್ರಿ ಚಲೋ ನಿದ್ರೆ ಹತ್ತುತ್ತದೆ; ಹಗಲಿಗೂ ಒಂದು ತಾಸು ನಿದ್ದೆ ಹತ್ತುತ್ತದೆ. ಕಳೆದ ೭ ದಿನಗಳ ಉಪೋಷಣದ ಮೊದಲಿನ ೩ ದಿನಗಳಲ್ಲಿ ಮಹಾತ್ಮರ ... ಘೋಟಿಯ ... ಮುಂತಾದ ತೊಂದರೆಗೆ ಬಹಳ, ಪತ್ರವ್ಯವಹಾರ, ವರ್ತಮಾನ ಪತ್ರ ಲೇಖನಗಳನ್ನು ಸಾಗಿಸಿದರು. ಆನೇ ದಿನ ಬಹಳ ತಲೆನೋವಾಯಿತು. ಕೂಡಲೆ, ಸಮಸ್ತ ಕಾರ್ಯಗಳಿಗೂ ತಡೆಯಾಕೊಡಲಾಯಿತು. ಆನೇ ದಿನ ಚಿತ್ತಸ್ವಾಸ್ಥ್ಯವು ಪೂರ್ತವಾಗಿ ದಣಿವೂ, ತಲೆನೋವೂ ಮಾಯವಾಯಿತು. ೭ನೇ ದಿನಕ್ಕೆ ಮಹಾತ್ಮರು ಉಪೋಷಣ ವ್ರತದ ಮೇಲೆ ಲೇಖವನ್ನು ಬರೆದರು. ಮಹಾತ್ಮರು ಮುಂದೆ ಈ ಉಪೋಷಣದ ... ಮಾಡುವ ಹಕೀಕತನ್ನು ಕೊಟ್ಟಿರುವರು. ಹಾಲಿನಲ್ಲಿ ಕ್ರಮವಾಗಿ ನೀರು ಬೆರಸಿ ಹೆಚ್ಚೆಚ್ಚು ಹಾಲನ್ನೂ ದ್ರಾಕ್ಷೆಯ ರಸವನ್ನೂ ಕಿತ್ತಲೇ ಹಣ್ಣಿನ ರಸವನ್ನೂ ಕೊಳ್ಳತೊಡಗಿ ೧೫ನೇ ದಿನಕ್ಕೆ ೪ ರತ್ತಲು ಹಾಲು ಕುಡಿಯಹತ್ತಿದರು. ಸಣ್ಣ ಗೋದಿಯ ರೊಟ್ಟಿಯನ್ನೂ ಕೊಳ್ಳಹತ್ತಿದರು. ಬರೇ ಹಾಲು ಮತ್ತು ಹಣ್ಣು-ಹಂಪಲುಗಳ ಮೇಲೆ ಮಹಾತ್ಮರು ಹಿಮ್ಮೆ ... ಗಳ ವರೆಗೆ ಉಳಿಯಬಲ್ಲರು. ಇದರಿಂದ ತಮಗೆ ಯಾವದೇ ಪ್ರಕಾರದ ನಷ್ಟವಾಗಲಿಲ್ಲೆಂದೂ ಮಹಾತ್ಮರು ನಮೂದಿಸಿರುವರು.

***

ಉಪೋಷಣ ಮಾಡುವವರಿಗೆ ಸೂಚನೆಗಳು.

ಮಹಾತ್ಮರು ಅದೇ ಪತ್ರಿಕೆಯಲ್ಲಿ ಉಪೋಷಣ ಮಾಡುವವರಿಗೆ ಕೆಲವು ಸೂಚನೆಗಳನ್ನು ಕೊಟ್ಟಿರುವರು.

೧. ಪ್ರಾರಂಭದಿಂದ ನಿಮ್ಮ ಕಾಯಿಕ ಹಾಗು ಮಾನಸಿಕ ಶಕ್ತಿಯನ್ನು ಕಾಪಾಡಿಕೊಳ್ಳಿರಿ.

೨. ಉಪೋಷಣ ಮಾಡುವಾಗ ಆಹಾರದ ವಿಚಾರವನ್ನು ತ್ಯಜಿಸಬೇಕು.

೩. ಶಕ್ಯವಿದ್ದಷ್ಟು ತಣ್ಣೀರನ್ನು ಕುಡಿಯಿರಿ; ನೀರಿಗೆ ಉಪ್ಪು ಮತ್ತು ಸೋಡಾ ಬೆರಸಿ ಅಥವಾ ಬೆರಸದೆ, ಒಮ್ಮೊಮ್ಮೆ ಸ್ವಲ್ಪ ಸ್ವಲ್ಪವಾಗಿ ಕುಡಿಯಿರಿ; (ನೀರನ್ನು ಕುದಿಸಿ, ಸೋಸಿ, ತಣ್ಣಗೆಮಾಡಿ ಕುಡಿಯಬೇಕು.) ಉಪ್ಪು ಮತ್ತು ಸೋಡಾಗಳನ್ನು ಬೆರಸಿಕೊಳ್ಳಲು ಅನುಮಾನ ಮಾಡುವ ಕಾರಣವಿಲ್ಲ ಯಾಕೆಂದರೆ, ಎಲ್ಲಾ ನೀರುಗಳಲ್ಲಿ ಈ ದ್ರವ್ಯಗಳು ಇದ್ದೇ ಇವೆ.

೪. ಬೆಚ್ಚನ್ನ ನೀರಿನಲ್ಲಿ ಸಮುದ್ರಪಾಚಿಯನ್ನು ಅದ್ದಿಸಿ, ನಿತ್ಯವೂ ಸ್ನಾನ ಮಾಡಿರಿ.

೫. ಉಪವಾಸದ ದಿವಸಗಳಲ್ಲಿ ತಪ್ಪದೇ 'ಎನಿಮಾ' ಉಪಾಯದಿಂದ ಮಲ ವಿಸರ್ಜನೆ ಮಾಡಿರಿ. ನಿತ್ಯವೂ ಹೊರಹೋಗುವ ಹೊಲಸನ್ನು ನೋಡಿ ನೀವು ಬೆರಗಾಗುವಿರಿ.

೬. ಸಾಧ್ಯವಿದ್ದಷ್ಟರ ಮಟ್ಟಿಗೆ ವಾಯುಸಂಚಾರವಿರುವ ಸ್ಥಳದಲ್ಲಿ ಮಲಕೊಳ್ಳಿರಿ.

೭. ಬೆಳಗಿನ ಬಿಸಿಲಲ್ಲಿ ನಿಂತುಕೊಳ್ಳಿರಿ. ಬಿಸಿಲು-ಗಾಳಿಗಳನ್ನು ಕೊಳ್ಳುವದರಿಂದ ನೀರಿನ ಜಳಕ ಮಾಡಿದಷ್ಟು ಶರೀರವು ನಿರ್ಮಲವಾಗುತದೆ.

೮. ಉಪವಾಸದ ಹೊರತು, ಇತರ ವಿಷಯಗಳ ವಿಚಾರ ಮಾಡಿರಿ.

೯. ಯಾವದೇ ಉದ್ದೇಶದಿಂದ ನೀವು ಉಪೋಷಣ ವ್ರತವನ್ನು ಕೈಕೊಂಡಾಗ್ಯೂ, ಈ ಅಮೌಲ್ಯ ಸಮಯ, ಸೃಷ್ಟಿಕರ್ತನನ್ನು ನೆನಿಸಿರಿ. ಮತ್ತು ಆತನಿಗೂ, ಆತನ ಇತರ ಸೃಷ್ಟಿಗೂ ಇರುವ ಸಂಬಂಧವನ್ನು ವಿಚಾರ ಮಾಡಿರಿ. ಅಂದರೆ, ನೀವು ಇನ್ನೂ ಕಲ್ಪಿಸದಂಥ ಶೋಧಗಳನ್ನು ಮಾಡುವಿರಿ.

ಬಳಿಕ, ಮಹಾತ್ಮರು ಹೇಳಿದ್ದೇನಂದರೆ:— ಮಲಬದ್ಧತೆಯಾದರೆ ಉಪವಾಸ ಮಾಡಿರಿ; ರಕ್ತಕ್ಷಯ (anaemic) ವಾದರೆ, ಉಪವಾಸ ಮಾಡಿರಿ; ಜ್ವರ ಬಂದರೆ, ಉಪವಾಸ ಮಾಡಿರಿ; ಅಜೀರ್ಣವಾದರೆ, ಉಪವಾಸ ಮಾಡಿರಿ; ಕಸ ಬಂದರೆ, ಉಪವಾಸ ಮಾಡಿರಿ; ಸಂಧು ಬೇನೆಯಾದರೆ, ಉಪವಾಸ ಮಾಡಿರಿ; ಶೀಘ್ರಕೋಪಿಯಾಗುತ್ತಿದ್ದರೆ, ಉಪವಾಸ ಮಾಡಿರಿ, ಉತ್ಸಾಹಹೀನರಾಗಿದ್ದರೆ, ಉಪವಾಸ ಮಾಡಿರಿ, ಮಿತಿಮೀರಿ ಆನಂದವಾದರೂ, ಉಪವಾಸ ಮಾಡಿರಿ. ಮಹಾತ್ಮರು ಈ ಸೂಚನೆಗಳನ್ನು ತಮ್ಮ ಸ್ವಾನುಭವದಿಂದ ನಮೂದಿಸಿರುವರು. ಹೀಗೆ ಉಪವಾಸ ಮಾಡಿದ್ದಕ್ಕೆ, ವೈದ್ಯರಿಂದ ಮದ್ದು ಕೊಳ್ಳುವದು ತಪ್ಪುವದೆಂದು ಮಹಾತ್ಮರು ನಮೂದಿಸಿರುವರು.

ಹಸಿದಾಗಲೇ ಉಣ್ಣಿರಿ; ಮತ್ತು ನಿಮ್ಮ ಆಹಾರ ಸಂಪಾದನೆಗಾಗಿ ನೀವು ದುಡಿದಾಗಲೇ ಉಣ್ಣಿರಿ.

ತ್ವರೆಮಾಡಿರಿ! ತ್ವರೆಮಾಡಿರಿ!!

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರವರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ಕ್ಷಯ ಸಂವತ್ಸರದ

ಪಂಚಾಂಗಗಳು

ಮಾರಾಟಕ್ಕೆ ಸಿದ್ಧವಾಗಿರುತ್ತವೆ.

೧೦೦ಕ್ಕೆ ರೂ. ೧೨-೦-೦ ೫೦ಕ್ಕೆ ರೂ. ೬-೮-೦

೨೫ಕ್ಕೆ ರೂ. ೩-೮-೦ ೧ಕ್ಕೆ ರೂ. ೦-೩-೦

ಪತ್ತೆ.— ಮೆನೇಜರ,

"ಸ್ಟಾರ ಆಫ್ ಕೆನರಾ" ಪ್ರೆಸ್, ಕುಮಟಾ

THE

INDIA PROVIDENT COMPANY LTD:

ESTABLISHED 1910.

Dividend declared 1912 20 per cent.

Dividend declared 1922 30 per cent.

Dividend declared previous year 15-20 per cent.

The Safest office for Life Insurance of the poor. Premium Re. 1 or As 8 per mensem

Apply at once to

PADMANABH GOPAL KAMAT,

Agent, ANKOLA. N. Kanara

ಫಾರೆಸ್ಟ ಕಮೀಟಿ.

ಚೌಕಶಿಯ ಪ್ರಾರಂಭ.

ಮುಂಬಯಿ ಕಾಯಿದೆ ಕೌನ್ಸಿಲಿನ ೧೯೨೪ ನೇ ಇಸ್ವಿಯ ಜುಲೈ ಅಧಿವೇಶನದಲ್ಲಿ ಮಂಜೂರಾದ ಠರಾವಿನಂತೆ, ಪ್ರಾಂತಿಕ ಸರಕಾರವು ಕಳೆದ ಜನವರಿ ತಿಂಗಳಿನಲ್ಲಿ ವನ ದೂರುಗಳನ್ನು ವಿಚಾರಿಸಲು ಮಂಡಳವನ್ನೊಂದು ನೇಮಿಸಿತ್ತಷ್ಟೇ. ಈ ಮಂಡಳದ ಚೌಕಶಿಯು ಕಳೆದ ಡಿಸೆಂಬರ ೧ ಮೊದಲನೇ ತಾರೀಖಿನಿಂದ ಪೂರ್ವ ಖಾನದೇಶ ಜಿಲ್ಲೆಯ ಮುಖ್ಯ ಪಟ್ಟಣವಾದ ಜಳಗಾಂವಿಯಲ್ಲಿ ಪ್ರಾರಂಭವಾಯಿತು. ಕಮೀಟಿಯ ಅಧ್ಯಕ್ಷರಾದ ಮಿ| ಎತಿಯವರೂ, ರಾ| ದಾದಾಚಾಂಜಿ, ಶ್ರೀ| ಕರೀಕ, ದೇವ, ಪಾಟೀಲ ಮತ್ತು ಅಬ್ದುಲ್ ಲತೀಫ ಇವರು ಹಾಜರಿದ್ದರು. ಮಧ್ಯಭಾಗದ ಕನ್ಸರವ್ಹೇಟರರಾದ ಮಿ| ಹೊಟ್ಸನ್‌ರವರೂ ಹಾಜರಿದ್ದರು. ಕಮೀಟಿಯವರು ಸ್ಥಳಿಕ ಮಾಹಿತಿ ಪೂರ್ತಿಗಾಗಿ ಫಾರೆಸ್ಟ ಆಫೀಸರರಾದ ಮಿ| ಶೇಲಿಯವರನ್ನು ಬರಮಾಡಿಕೊಂಡಿದ್ದರು. ಪ್ರಾರಂಭಕ್ಕೆ ರೈತರಿಂದ ಬರೆದು ಬಂದ ದೂರುಗಳ ಪರಾಮರಿಕೆಯಾಯಿತು. ರೈತರ ತರ್ಫೆನಿಂದ ಮಿ| ಚೌಧರಿಯವರ ಸಾಕ್ಷಿಯ ವಿಚಾರವು ನಡೆಯಿತು. ಮಿ| ಚೌಧರಿಯವರು ನಾಮಾಂಕಿತ ವಕೀಲರಿದ್ದು, ಕಾಯಿದೆ ಕೌನ್ಸಿಲಿನ ಸಭಾಸದರೂ ಆಗಿರುವರು. ಮಿ| ಚೌಧರಿಯವರ ವಿಚಾರವು ವಿಶೇಷ ವಿಸ್ತಾರದಿಂದ ನಡೆಯಿತು. ಬಹಳ ವಿವರವು ಕೇಳಬಂದದ್ದರಿಂದ ಕಮೀಟಿಯವರು ವಿಚಾರವನ್ನು ಅಷ್ಟಕ್ಕೇ ತಡೆಸಿ, ಪುನಃ ಮಾರನೇ ದಿನ ಮಧ್ಯಾನ್ಹಕ್ಕೆ ಅವರ ಜಬಾನಿ ಕೊಂಡರು. ಕಮೀಟಿಯವರು ನೆರೆಹೊರೆಯ ಹಳ್ಳಿಗಳನ್ನು ನೋಡಿದರು. ಕಂಡಾರಿಗೆ ಹೋಗಿ ಹುಲ್ಲಿನ ಕುರಣ ಯಾನೆ ಕಾರಿಟ್ಟ ಹುಲ್ಲು ಬೇಣಗಳನ್ನೂ, ವರ್ಕಿಂಗ ಪ್ಲಾನ ಕ್ರಮದಿಂದ ಮಾಡಿದ ಸಬ್ ಬ್ಲೋಕುಗಳನ್ನೂ ನೋಡಿದರು. ರೈತರು ಅಲ್ಲಲ್ಲಿ ನೆರೆದು ತಮ್ಮ ಕಷ್ಟಗಳನ್ನು ನಿರ್ದಾಕ್ಷಿಣ್ಯದಿಂದ ಅರುಹಿಕೊಂಡರು. ಯಾವಲ, ಧರಣಗಾಂವ, ಎದಲಾಬಾದ, ಜೋಧಗಾಂವ, ಜಾಮನೇರ, ಎರಂಡೋಲ ಮುಂತಾದ ಮುಖ್ಯ ಮುಖ್ಯ ಗ್ರಾಮಗಳಿಗೆ ಕಮೀಟಿಯವರು ಹೋಗಿ, ಅಲ್ಲಿಯ ರೈತರಿಗೆ ಒದಗುವ ಕಷ್ಟಗಳನ್ನು ರೈತರ ಬಾಯಿಂದಲೇ ಕೇಳಿಕೊಂಡರು. ಪೂರ್ವ ಖಾನದೇಶದೊಳಗಿನ ಚೌಕಶಿಯು ೪ನೇ ತಾರೀಖಿಗೆ ಸಮಾಪ್ತವಾಯಿತು. ೫ನೇ ತಾರೀಖಿಗೆ ಕಮೀಟಿಯವರು ತಮಗೆ ತೋರಿದ ವಿಶಿಷ್ಟ ಸಂಗತಿಗಳನ್ನು ನಮೂದಿಸಿಕೊಂಡು, ೬ನೇ ತಾರೀಖಿಗೆ ಪಶ್ಚಿಮ ಖಾನದೇಶಕ್ಕೆ ತೆರಳಿದರು.

ಪೂರ್ವ ಖಾನದೇಶದ ಸ್ಥಿತಿ.

ಇಲ್ಲಿಯ ಚೌಕಶಿಯಲ್ಲಿ ಕಂಡುಬಂದ ಹಕೀಕತ್ತು ಏನೆಂದರೆ:— ಪೂರ್ವ ಖಾನದೇಶ ಜಿಲ್ಲೆಯ ಕ್ಷೇತ್ರವು ೪೫೪೫ ಚೌರಸ ಮೈಲು. ಇದರಲ್ಲಿ ೭೯೯ ಚ. ಮೈಲು ಅಡವಿ ಪ್ರದೇಶವು; ೩೮ ಚ. ಮೈಲು ಅಡವಿಯು ಮುಲಕಿ ಖಾತೆಯ ಆಡಳಿತೆಯಲ್ಲಿದೆ; ಉಳಿದದ್ದು ಅಡವಿ ಖಾತೆಯ ಆಡಳಿತೆಯಲ್ಲಿದೆ. ಅಡವಿಯಲ್ಲಿ ಸೇರಿಸಿದ ಪ್ರದೇಶವು ಪ್ರಾಮುಖ್ಯವಾಗಿ ಹುಲ್ಲುಗಾವಲುಗಳ ಪ್ರದೇಶವೇ. ಗಿಡಗಂಟಿಗಳುಳ್ಳ ಪ್ರದೇಶವೆಲ್ಲ ವರ್ಕಿಂಗ ಪ್ಲಾನ ಕ್ಷೇತ್ರದಲ್ಲಿ ಒಳಗೊಂಡಿದೆ. ಗಿಡಗಳನ್ನು ಕೆಲವೆಡೆಗಳಲ್ಲಿ ಬೆಳಸುತ್ತಿರುವರು. ಅಡವಿಗಳಲ್ಲಿದ್ದ ಮರಗಳು ಬೆಂಡು ಜಾತಿಯವು. ತೇಗದ ಗಿಡಗಳು ತೀರ ಅಲ್ಪ. ಹೀಗೆ ಇಲ್ಲಿಯ ಅಡವಿಯ ಉತ್ಪನ್ನವು ಪ್ರಾಮುಖ್ಯವಾಗಿ ಹುಲ್ಲುಗಾವಲಿನದೇ. ದನಕರುಗಳಿಗೆ ವನದೇವಿಯ ಪೋಷಣೆ ವಿಶೇಷ. ಗೋಚರಾವು ಫೀ [illegible]ಲ ೧ಕ್ಕೆ ೪ ಆಣೆಯಂತೆ ತೆರಬೇಕು. ಮೇವಿಗೆ [illegible]ಕ್ಷೇತ್ರವಿಲ್ಲ. ಮೇವಿಗೆ ಬಿಟ್ಟುಕೊಟ್ಟ ಕ್ಷೇತ್ರದಲ್ಲಿ ಹುಲ್ಲಿಲ್ಲ. ಚಲೋ ಹುಲ್ಲು ಬೆಳೆಯುವ ಸ್ಥಳವೆಲ್ಲ ಅಡವಿಯ ಪಾಲಾಗಿರುತ್ತದೆ. ಕುರಣ ಯಾನೆ ಕಾರಿಟ್ಟ ಹುಲ್ಲು ಬೇಣಗಳಲ್ಲಿಯೂ, ಸಬ್ ಬ್ಲೋಕುಗಳಲ್ಲಿಯೂ ಬೆಳೆಯುವ ಹುಲ್ಲನ್ನೆಲ್ಲ ಅಡವಿ ಖಾತೆಯವರು ಜೂನ-ಜುಲೈ ತಿಂಗಳುಗಳಲ್ಲಿ ಅಂದರೆ, ಹುಟ್ಟುತ್ತಿರುವಾಗಲೇ ಹುಲ್ಲು ಲಿಲಾಂವಾಗುತ್ತದೆ. ಇದರಿಂದ ಕಂಟ್ರಾಕ್ಟರರಿಗೆ ಒಳ್ಳೆ ಫಾಯಿದೆಯಾಗುತ್ತದೆ. ಹುಲ್ಲು ಮಿತಿಮೀರಿ ತುಟ್ಟಿಯಾಗುತ್ತದೆ. ಒಂದು ಗಾಡಿ ಕರಡಕ್ಕೆ ೧೫ ರೂಪಾಯಿಗಳ ವರೆಗೆ ದರವಾಗುತ್ತದೆ; ಕೊಯ್ದು ತರುವ ಕೂಲಿ ಪ್ರತ್ಯೇಕ. ಕಂಟ್ರಾಕ್ಟರರು ಯಾವ ದರದಿಂದ ಮಾರಬೇಕು ಎಂಬ ಬಗ್ಗೆ ನಿರ್ದೇಶವಿಲ್ಲದ್ದರಿಂದ, ಇಡೀ ಜಿಲ್ಲೆಯೊಳಗಿನ ದನಗಳ ಮೇವು ಕಂಟ್ರಾಕ್ಟರರ ಸ್ವಾಧೀನವಾಗಿ, ರೈತರ ಗೋಳು.

ಕುರಣ-ಸಬ್ ಬ್ಲೋಕುಗಳ ಸ್ಥಿತಿ.

ಕಾರಿಟ್ಟ ಸಬ್ ಬ್ಲೋಕುಗಳಿಗಾಗಲಿ ಕುರಣಗಳಿಗಾಗಲಿ, ಸುತ್ತಲೂ ಬೇಲಿಯೂ ಇರುವದಿಲ್ಲ; ಮಾಗಾರವೂ ಇರುವದಿಲ್ಲ. ಹುಲ್ಲಿನ ಆಶೆಯಿಂದ ಇವುಗಳಲ್ಲಿ ದನಗಳು ಪ್ರವೇಶಿಸುವದು ಸಹಜವು; ಪ್ರವೇಶವಾದೊಡನೆ ಕಂಟ್ರಾಕ್ಟರರು ದೊಡ್ಡಿಯಲ್ಲಿ ಹಾಕುತ್ತಾರೆ, ಕಾರಿಟ್ಟ ಕಾಡಿನಲ್ಲಿ ಹೋದರೆ, ಅಡವಿ ಖಾತೆಯವರು ಹಿಡಿದು ಹಾಕುತ್ತಾರೆ. ಎಮ್ಮೆ ಕೋಣಗಳ ಪ್ರವೇಶವಾದರೆ, ಬಾಲ ಒಂದರ ೨ ರೂಪಾಯಿಗಳಂತೆ, ಆಕಳು-ಎತ್ತು ಇತ್ಯಾದಿಗಳು ಪ್ರವೇಶಿಸಿದರೆ, ೧ ರೂಪಾಯಿಯಂತೆ ಅಡವಿ ಖಾತೆಗೆ ನಷ್ಟವೊದಗುತ್ತದೆಂದು ಈ ಮುಂಚೆಯೇ ಲಕ್ಷ್ಯವಾಗಿದೆ; ಅದರಂತೆ ದಂಡ ತೆರಬೇಕು. ಗೋದಲೆಯೊಳಗಿನ ಒಂದು ದನವು ಕಾರಿಟ್ಟ ಅಡವಿಯ ಹದ್ದಿನಲ್ಲಿ ಪ್ರವೇಶಗೊಂಡ ಕೂಡಲೆ, ಇಡೀ ಗೋದಲೆಯನ್ನೇ ಹಿಡಿದು ದೊಡ್ಡಿಗೆ ಸಾಗಿಸುತ್ತಾರೆ. ದೊಡ್ಡಿಯ ದರವು ಅತ್ತ ೨ ವರ್ಷಗಳಿಂದ ವಿಶೇಷ ಏರಿದ್ದರಿಂದ ಬೇಸಾಯಗಾರರ ಗೋಳು. ಕಂಟ್ರಾಕ್ಟರರು ಹುಲ್ಲುಗಾವಲುಗಳೊಳಗಿಂದ ಹುಲ್ಲು ಮಾರಾಟ ಮಾಡಿದ ಬಳಿಕ, ಅಲ್ಲಿ ದನಗಳನ್ನು ಮೇಯಗೊಡುತ್ತಾರೆ; ಆದರೆ, ಅವರಿಗೆ ಆ ಬಗ್ಗೆ ಬಾಲ ೧ರ ೧ ರೂಪಾಯಿಯಂತೆ ಚರಾವು ಫೀ ತೆರಬೇಕು. ಕಂಟ್ರಾಕ್ಟಿಗೆ ಒಳಪಟ್ಟ ಪ್ರದೇಶದಲ್ಲಿ ಬಿದ್ದ ಮುಳ್ಳು ಗಿಡಗಳನ್ನು ಕಡಿದೊಯ್ಯಬೇಕಾದರೂ, ಕಂಟ್ರಾಕ್ಟರರು ಬೇಡಿದಷ್ಟು ಹಣ ಕೊಡಬೇಕು. ದನಗಳ ಖಾನೇಸುಮಾರಿ ಲೆಕ್ಕದಂತೆ ಗೋಚರಾವು ಫೀ ೪ ಆಣೆ ತೆರಬೇಕು. ಖಾನೇಸುಮಾರಿ ಲೆಕ್ಕಮಾಡಿದಂದಿನಿಂದ ಫೀ ತೆರುವ ಕಾಲದ ವರೆಗೆ ದನಗಳು ಸತ್ತರೂ, ಸತ್ತ ದನಗಳಿಗಾಗಿಯೂ ಫೀ ಕೊಡಬೇಕು; ಹುಟ್ಟಿದರೆ, ಹೆಚ್ಚು ಫೀ ಕೊಡಬೇಕು. ಈದ ಕರುಗಳೂ ಮೇಯಹೋಗದಿದ್ದರೂ, ಫೀ ತಪ್ಪುವದಿಲ್ಲ. ಅಡವಿಯ ಒಂದು ಭಾಗವು ಒಂದು ಹಳ್ಳಿಗೆ ಹೊಂದಿಕೆಯಾಗಿದೆ. ಅಲ್ಲಿ ದನಗಳ ಅತಿಕ್ರಮವು ಆಗಿಂದಾಗ ಒದಗುತ್ತದೆ. ಹೀಗೆ ದೊಡ್ಡಿಯ ಉತ್ಪನ್ನವು ಹೇರಳ ಬೆಳೆದದೆ. ೧೦-೧೫-೨೦ ಮೈಲು ದೂರ ಸಾಗಿಸುವ ಕೆಲ ಕೆಲ ಹಳ್ಳಿಗರು ಹುಲ್ಲು ಒಯ್ಯಬೇಕಾದರೆ, ಕಂಟ್ರಾಕ್ಟರರಿಗೆ ಮಿತಿಮೀರಿ ಹಣ ತೆರಬೇಕು. ಇಲ್ಲವೆ, ಅಡವಿ ಖಾತೆಯವರಿಗೆ [illegible] ಪರಮೀಟು ಹಾಕಲು ಕೊಟ್ಟು, ಹುಲ್ಲು ಪೂರೈಕೆ ಮಾಡಿಕೊಳ್ಳಬೇಕು. ಇಂಥ ಸ್ಥಿತಿಯಲ್ಲಿ ಅಡವಿ ಖಾತೆಯ ಸಾಕೇದಾರರ ಮರ್ಜಿ ಸಂಪಾದನೆಗಾಗಿ ರೈತರು ಮಾಡಬೇಕಾದ ಉಪಾಯಗಳು ಹೇಳುವ ಮೊದಲೇ ತಿಳಿಯುವ ಹಾಗಿವೆ.

ದೂರ ದೂರ ಹುಲ್ಲಿನ ಬೇಣಗಳಿವೆ. ಅಲ್ಲಿ ದನಗಳನ್ನು ಮೇಯಿಸುತ್ತಾರೆ ಅಲ್ಲಿ ಮೇಯಿಸಬೇಕಾದರೆ, ಗೋಚರಾವ ಫೀಯಂತು ತೆರಬೇಕು. ದಹಾವ ಫೀ, ಝೋಪಡ ಫೀ, ಚಾಲ ಫೀ ಹೀಗೆ ಮೂರು ತರದ ಫೀಗಳಿವೆ. ಫೀ ದರವು ಸಣ್ಣದಲ್ಲ.

ಅಡವಿಯಲ್ಲಿ ದನಗಳಿಗೆ ಕುಡಿಯಲು ಒಂದೇ ಒಡಿಗೆ ನೀರಿದೆ. ದನಗಳು ಅಲ್ಲಿ ಹೋಗಲು ನಿಯಮಿತ ದಾರಿಯಿಲ್ಲ. ಹೋಗುವಾಗ ಪ್ರತಿಬಂಧಕ ಅಡವಿಯಲ್ಲಿ ಕಾಲಿಟ್ಟರೆ, ದೊಡ್ಡಿ ಮಾಸದ ಲಕ್ಷೆ.

ಅಲ್ಲಿ 'ಚಿಂಚನ' ಎಂಬದೊಂದು ಜಾತಿಯ ಗಿಡವಿದೆ. ಈ ಜಾತಿಯ ಗಿಡಗಳು ದನಗಳಿಗೆ ಬಹಳ ರುಚಿ. ಈದ ದನಗಳಿಗೆ ಇದರಷ್ಟು ಒಳ್ಳೇ ಮೇವು ದೊರೆಯೊಂದಿಲ್ಲ. ಈ ಎಲೆಗಳನ್ನು ಅಡವಿ ಖಾತೆಯವರು ಪರಮೀಟು ರೂಪದಿಂದ ಮಾರಾಟ ಮಾಡುತ್ತಾರೆ. ಇದರಿಂದ ವರ್ಷಕ್ಕೆ ೨೦ ಸಾವಿರ ರೂಪಾಯಿ ಉತ್ಪನ್ನವಾಗುತ್ತದೆ.

ಅಡವಿಗೆ ಬೆಂಕಿ ಬಿದ್ದರೆ, ಅಪ್ಪಣೆಯ ಹೊರತು ದನ ಮೇದರೆ, ಗೋಚರಾವು ಫೀಯನ್ನು ೪ ಆಣೆಯಿಂದ ೧ ರೂಪಾಯಿಯ ವರೆಗೆ ಏರಿಸುವರು.

ಈ ತರದ ಕ್ರಮದಿಂದ ಗೋಧನವು ಬಹಳ ತಗ್ಗಿದೆ. ಕಮೀಟಿಯವರು ಹಳ್ಳಿಗಳಲ್ಲಿ ದನಗಳನ್ನು ನೋಡಿದರು. ದನಗಳು ಎತ್ತರವಾಗಿವೆ, ಉದ್ದವಾಗಿವೆ; ಆದರೆ, ಬಡಬಿದ್ದವೆ. ಹೊಟ್ಟೆಯು ಬಾವಿಹೋಗಿದಂತೆ ಕಾಣುತ್ತಿತ್ತು. ಎಲುಬುಗಳನ್ನು ಲೆಕ್ಕ ಮಾಡಬಹುದಿತ್ತು. ಎದಲಾಬಾದದಲ್ಲಿ ಒಕ್ಕಲಿಗನೊಬ್ಬನು ಹೇಳಿದ್ದೇನಂದರೆ:—"ಅಡವಿ ಕಾಟದಿಂದ ನಾವು ಸೋತೆವು. ನಿರ್ವಾಹ ಮಾಡುವದು ಕಷ್ಟವಾಗಿದೆ. ೨ ವರ್ಷಗಳ ಹಿಂದೆ ನನ್ನ ಮನೆಯಲ್ಲಿ ೧೨೦-೧೫೦ ದನಗಳಿದ್ದವು; ೩೫ ದನಗಳನ್ನು ಮಾರಿದೆನು. ಇನ್ನೂ ಈ ಕಾಟವು ಸಾಗಿದರೆ, ನನ್ನ ದನಗಳನ್ನೂ ಭೂಮಿಯನ್ನೂ ಮಾರಾಟ ಮಾಡಿ, ನಿಜಾಮ ರಾಜ್ಯಕ್ಕೆ ಹೋಗಿ ಸೇರುವೆನು."

ಇಲ್ಲಿ ಹತ್ತಿಯ ಬೆಳೆ ವಿಶೇಷ. ಅದರಿಂದ ದನಗಳ ಮೇವು ಹುಲ್ಲುಗಾವಲುಗಳಿಂದಲೇ ಪೂರೈಕೆಯಾಗಬೇಕು. ಮುಲ್ಕಿ ಖಾತೆಯ ಆಡಳಿತೆಯಲ್ಲಿದ್ದ ಪ್ರದೇಶದಲ್ಲಿ ದನ ಮೇಯಿಸಬೇಕಾದರೂ, ಫೀ ತೆರಬೇಕು. ಹೀಗೆ ದನಗಳಿಗೆ ಮೇವು ದೊರಕುವದು ಬಹಳ ಕಷ್ಟ. ಹತ್ತಿಯ ಬೇಸಾಯವು ದನಗಳಿಂದ ಸಾಗಬೇಕು. ಕೆಲವೆಡೆಗಳಲ್ಲಿ ಮೆಣಸು, ಕಾಯಿಪಲ್ಲೆಗಳನ್ನು ಬೆಳೆಸುತ್ತಾರೆ. ಬಾವಿಯೊಳಗಿಂದ ನೀರು ಎತ್ತಿಹಾಕುವ ಕೆಲಸವು ದನಗಳದು. ಹೀಗೆ ಒಕ್ಕಲಿಗರ ಸಂಸಾರವೆಲ್ಲ ಗೋವುಗಳ ಮೇಲೆ; ಗೋವುಗಳ ಹೊಟ್ಟೆಯು ಅಡವಿ ಖಾತೆಯವರ ಕೈಯಲ್ಲಿ. ಜಾಮನೇರ ಎಂಬ ಒಂದೇ ತಾಲೂಕಿನೊಳಗಿಂದ ಜಂಗಲ ಖಾತೆಯವರು [illegible] ಉತ್ಪನ್ನ ಕೇಳಿರಿ. ೧೯೧೫-೧೬ರಲ್ಲಿ ರೂ. ೫೫೩೨, ೧೬-೧೭ರಲ್ಲಿ ರೂ. ೬೦೨೫, ೧೭-೧೮ರಲ್ಲಿ ರೂ. ೨೧೪೪೫, ೧೮-೧೯ರಲ್ಲಿ ರೂ. ೨೦೭೫೦, ೧೯-೨೦ರಲ್ಲಿ ರೂ ೩೯೦೦೦ ಹೀಗೆ ಇರುತ್ತದೆ.

ಉರುವಲ ಕಟ್ಟಿಗೆ, ಬೇಸಾಯಕ್ಕೆ ತಗಲುವ ಸಾಮಗ್ರಿಗಳ ಪೂರೈಕೆ ಇತ್ಯಾದಿಗಳ ಕಷ್ಟಗಳೂ ಇಲ್ಲಿಯೂ ಇದ್ದೇ ಇವೆ.

ಪಶ್ಚಿಮ ಖಾನದೇಶದ ಸ್ಥಿತಿ.

ತಾ. ೬ನೇಗೆ ಕಮೀಟಿಯವರು ಪಶ್ಚಿಮ ಖಾನದೇಶ ಜಿಲ್ಲೆಯ ನಂದುರಬಾರಕ್ಕೆ ಹೋದರು. ೭-೮ನೇ ತಾರೀಖಿಗೆ ಕೆಲವು ಗ್ರಾಮಗಳ ಭೆಟ್ಟಿ ಕೊಂಡು, ಒಕ್ಕಲಿಗರ ದೂರುಗಳನ್ನು ಕೇಳಿಕೊಂಡರು. ಈ ಜಿಲ್ಲೆಯಲ್ಲಿ ೨ ಅಡವಿಖಾತೆಯ ಭಾಗಗಳಿವೆ. ತಾಪಿ ನದಿಯ ಉತ್ತರ ದಿಕ್ಕಿನದು ಒಂದು ದಕ್ಷಿಣ ದಿಕ್ಕಿನದು ಒಂದು. ಉತ್ತರ ಭಾಗವು ಮಿ| ನಾಯಟ್. ಆರ್. ದಿವೇಕರ ಅವರ ಆಡಳಿತೆಯಲ್ಲಿದೆ, ಇವರು ನಮ್ಮ ಕಾನಡಾ ಜಿಲ್ಲೆಯವರು. ದಕ್ಷಿಣ ದಿಕ್ಕಿನ ಭಾಗವು ಮಿ| ಮಿಲ್ಲರ ಇವರ ಆಡಳಿತೆಯಲ್ಲಿದೆ. ಉತ್ತರ ಭಾಗದ ಅಡವಿ ಪ್ರದೇಶದಲ್ಲಿ ಭಿಲ್ಲರ ವಸ್ತಿ ಹೆಚ್ಚು. ನಮ್ಮಲ್ಲಿಯ ಕುಂಬರಿ ಮರಾಠೆಯರಂತೆ ಇವರ ಸ್ಥಿತಿಯಿದೆ. ಇವರ ಸ್ಥಿತಿಗತಿಯನ್ನು ಗುಜರಾಥಿ ಗೃಹಸ್ಥರೊಬ್ಬರು ಬಹು ಕುಶಲತೆಯಿಂದ ಹೊರಗೆಡಹಿದರು. ಈ ಜಿಲ್ಲೆಯಲ್ಲಿ ಪೂರ್ವಖಾನದೇಶ ಜಿಲ್ಲೆಯಂತೆ, ಹುಲ್ಲಿನ ಕಂಟ್ರಾಕ್ಟ ಕೊಡುವದು ಕಡಿಮೆ. ಕಾಡೂ ದಟ್ಟವಾಗಿರುವದು. ಆ ಕಾರಣದಿಂದ ಕಾಡು ಪ್ರಾಣಿಗಳ ಬಾಧೆಯೂ ವಿಶೇಷ. ಸಾಮಾನ್ಯ ಸ್ಥಿತಿಯು ಪೂರ್ವ ಖಾನದೇಶ ಜಿಲ್ಲೆಯಂತೆ ಇದೆ. ಕಮೀಟಿಯವರು ಅಲ್ಲಿಯ ಕೆಲಸ ತೀರಿಸಿಕೊಂಡು ೧೦ನೇ ತಾರೀಖಿಗೆ ಅಲ್ಲಿಂದ ಠಾಣೆ ಜಿಲ್ಲೆಯ ಪಾಲಘರಕ್ಕೆ ಹೋದರು.

ಕಾನಡಾವೃತ್ತ.

ಮಿತಿ ಕ್ರೋಧನ ಸಂ ಪುಷ್ಯ ೧ ೯ ಸೋಮವಾರ

ಪರಸ್ಪರ ಸಹಕಾರ.

ಧಾರವಾಡದಲ್ಲಿ ಕಳೆದ ೧೩ ನೇ ತಾರೀಖಿನಿಂದ ಪ್ರಾಂತಿಕ ಸಹಕಾರಿ ಪರಿಷತ್ತಿನ ಅಧಿವೇಶನವು ಪ್ರಾರಂಭವಾಗಿ ೧೬ ನೇ ತಾರೀಖಿಗೆ ಸಮಾಪ್ತಿಯಾಯಿತು. ಅಧ್ಯಕ್ಷಸ್ಥಾನವನ್ನು ಮದ್ರಾಸಿನ ಸರ್ ಕೆ. ವ್ಹಿ. ರೆಡ್ಡಿಯವರು ಅಲಂಕರಿಸಿದ್ದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಹಕಾರದ ವ್ಯಾಪ್ತಿಯನ್ನು ಸಂಕ್ಷಿಪ್ತವಾಗಿ ತಿಳಿಸಿದರು. ಒಟ್ಟಿಗೆ ಸ್ವರಾಜ್ಯದಲ್ಲಿ ಸಹಕಾರದ ವ್ಯಾಪ್ತಿಯು ಅಕಲ್ಪಿತವಾಗಿ ಬೆಳೆದಿತೆಂದು ಅಂಕಿಗಳಿಂದ ನಿವೇದಿಸಿದರು. ೧೯೩೦ ನೇ ಇಸ್ವಿಯಲ್ಲಿ ಇಡಿ ಹಿಂದುಸ್ಥಾನದಲ್ಲಿ ೩೦೮ ಸೆಂಟ್ರಲ್ ಬ್ಯಾಂಕುಗಳಿದ್ದವು ೧೯೩೪ ನೇ ಇಸ್ವಿಯ ಮಾರ್ಚ ಅಂತ್ಯಕ್ಕೆ ಇವು ೫೩೦ ಕ್ಕೆ ಬೆಳೆದವು ೧೯೩೦ ರಲ್ಲಿ ೭೩೮ ನಾನರವ್ಯಾಜಿಂಗ ಹಾಗು ರಂಟೀಯಿಂಗ ಯೂನಿಯನ್ ಸಂಸ್ಥೆಗಳಿದ್ದವು. ೧೯೩೪ ನೇ ಇಸ್ವಿಯಲ್ಲಿ ಅವು ೧೪೦೭ ಆದವು ಬೇಸಾಯ ಸಂಘಗಳು ೭೫೮೭೩ ರಿಂದ ೫೪೭೬೪೫ ಕ್ಕೆ ಬೆಳೆದವು ಬೇಸಾಯೇತರ ಸಂಘಗಳು ೧೬೭೭ ರಿಂದ ೪೫೩೯ ಕ್ಕೆ ಬೆಳೆದವು ಮೊದಲು ೧೭೫೩೯೧೪ ಹೊಂದಿದ್ದರು ಈಗ ೩೭೧೬೫೭೭ ಆಗಿರುವರು. ಬಂಡುವಲವು ಮೊದಲು ೧೮ ೩೧ ೩೨೪೦೦೦ ಇದ್ದದ್ದು ೪೦೫೫೯೭೭೦೦೦ ಹಾಯಿತು. ಹೀಗೆ ಸಹಕಾರದ ವ್ಯಾಪ್ತಿಯು ಒಟ್ಟಿಗೆ ಸ್ವರಾಜ್ಯದಲ್ಲಿ ಅಕಲ್ಪಿತವಾಗಿ ಬೆಳೆಯಿತು. ಸಹಕಾರದ ಮಟ್ಟಿಗೆ ಇದೊಂದು ಅಭಿನಂದನೀಯ ಮಾತು.

ಆದಿಂತಿರಲಿ ಪರಸ್ಪರ ಸಹಕಾರದ ಮೂಲ ಉದ್ದೇಶವು, ಮೂಲ ಸಾಧ್ಯವು ಬೇಸಾಯಗಾರರನ್ನು ಸಾವುಕಾರರ ಬಾಯೊಳಗಿಂದ ತಪ್ಪಿಸಿ ಕಾಯುವದು. ಆ ಧ್ಯೇಯವು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆಂದು ಸರ್ ರೆಡ್ಡಿಯವರೇ ಪ್ರಶ್ನೆಯನ್ನೆತ್ತಿ, ಆ ಕುರಿತು ಸಹಕಾರವು ಏನೂ ಸಾಧ್ಯಮಾಡಲಿಲ್ಲೆಂದು ಮರೆಮಾಚದೆ ಹೇಳಿದರು. ಸಹಕಾರದ ವ್ಯಾಪ್ತಿಯು ಬೆಳೆದದ್ದು ನಿಜ, ಸಹಕಾರಿ ಸಂಸ್ಥೆಗಳ ಸಂಖ್ಯೆಯೂ ಬೆಳೆಯಿತು; ಆದರೆ ಬೇಸಾಯಗಾರರು ಇದ್ದಂತೆಯೇ ಇರುವರು. ಬೇಸಾಯಗಾರರ ಕೊರಳೊಳಗಿನ ಸಾಲದ ಕಾಂಟೆಯು ಇನ್ನೂ ಇದ್ದಂತೆಯೇ ಇದೆ ಸಾಲದ ಕೊರಳ ಕಾಂಟೆಯಿಂದ ಅವನು ಎದ್ದೇಳಲಾರನು ಪರಸ್ಪರ ಸಹಕಾರ ಪರಿಷತ್ತಿನ ಅಧ್ಯಕ್ಷರು ನಮೂದಿಸಿದ ವಸ್ತುಸ್ಥಿತಿಯಿದು. ಸಹಕಾರವು ಇಷ್ಟು ದಿನಗಳ ವರೆಗೆ ಮಾಡಿದ ಚಟುವಟಿಕೆಗಳ ಫಲಶ್ರುತಿಯನ್ನು ಸರ್ ರೆಡ್ಡಿಯವರು ಸಂಕ್ಷಿಪ್ತವಾಗಿ, ಸ್ಪಷ್ಟವಾಗಿ ನಮೂದಿಸಿದ್ದನ್ನು ನೋಡಿ, ನಮಗೆ ಸಂತೋಷವಾಗುತ್ತದೆ

ಪರಸ್ಪರ ಸಹಕಾರದ ಮೂಲ ಉದ್ದೇಶವು ಸಾಧ್ಯವಾಗದ ಕಾರಣವೇನು? ಬೇಸಾಯಗಾರರ ಏಳಿಗೆಗಾಗಿ, ಅವರನ್ನು ಸಾಲದೊಳಗಿಂದ ವಿಮೋಚಿಸಿ ಸಂಪನ್ನರಾಗಿ ಮಾಡಲು ಸಹಕಾರಿಗಳು ಅಲ್ಲಲ್ಲಿ ಹಗಲಿರುಳು ದುಡಿಯುತ್ತಿದ್ದಾಗ ಅವರೆಲ್ಲರೂ ಇನ್ನೂ ಸಾಲದಲ್ಲಿ ಏಕೆ ನರಳಬೇಕು? ಸಹಕಾರಿ ಸಂಸ್ಥೆಗಳು ನಿಜವಾದ ಬೇಸಾಯಗಾರರಿಗೆ ಸಹಾಯ ಮಾಡದಿರಬೇಕು. ಅಥವಾ ಸಹಕಾರಿ ಸಂಸ್ಥೆಗಳೊಳಗಿನ ಕ್ರಮವು ಬೇಸಾಯಗಾರರಿಗೆ ಪ್ರತಿಕೂಲವಾಗಿರಬೇಕು. ಕೆಲವೆಡೆಯಲ್ಲಿ ಒಂದು ಸ್ಥಿತಿಯು ಕಂಡುಬಂದರೆ, ಇನ್ನೊಂದೆಡೆಯಲ್ಲಿ ಮತ್ತೊಂದು ಸ್ಥಿತಿಯು, ಇನ್ನು ಕೆಲವಡೆಯಲ್ಲಿ ಎರಡೂ ಸ್ಥಿತಿಗಳು ಕಂಡುಬರುವವು. ಬೇಸಾಯಗಾರರಿಗೆ ಸಹಾಯ ಮಾಡುವದು, ಮಾಡದಿರುವದು ಸಹಕಾರಿ ಸಂಸ್ಥೆಗಳ ಅಲ್ಲಲ್ಲಿಯ ಯಜಮಾನರ ಮೇಲೆ ಅವಲಂಬಿಸಿರುತ್ತದೆ. ಸಂಸ್ಥೆಯ ಚಾಲಕರು ನಿರಪೇಕ್ಷ ಬುದ್ಧಿಯವರೂ, ನಿಸ್ವಾರ್ಥಿಗಳೂ, ನಿಸ್ಪೃಹರೂ, ಪರೋಪಕಾರ ಬುದ್ಧಿಯವರೂ ಆಗಿದ್ದರೆ, ಪರಸ್ಪರ ಸಹಕಾರಿ ಸಂಸ್ಥೆಯಿಂದ ನಿಜವಾದ ಬೇಸಾಯಗಾರರಿಗೆ ದ್ರವ್ಯಸಹಾಯ ದೊರಕಿ, ಕಲ್ಯಾಣವಾಗುತ್ತದೆ. ಸ್ವಾರ್ಥಿಗಳಾಗಿದ್ದರೆ, ತಮ್ಮ ತಮ್ಮ ಸ್ನೇಹಿತರಿಗೆ, ಕಾರ್ಯಾಕಾರ್ಯದ ವಿಚಾರ ಮಾಡದೆ, ಸಂಸ್ಥೆಯ ಕೋಶವನ್ನು ತಮ್ಮ ಮನಬಂದಂತೆ ಹಂಚಿಕೊಳ್ಳುವರು. ಕೆಲ ಪುಣ್ಯಾತ್ಮರು ಸಹಕಾರಿ ಸಂಸ್ಥೆಗಳಲ್ಲಿ ಸೇರಿಕೊಂಡು, ದೊಡ್ಡ ಸಹಕಾರಿಗಳಾಗಿ ಮೆರೆಯುವರು. ಇವರಿಗೆ ಸಹಕಾರದ ಜಂಬ ಮೆರೆಯುವದು ಬೇಕು; ಲೋಕೋಪಕಾರದ ಹರಟೆ ಹೊಡೆಯುವದು ಬೇಕು. ಇದೆಲ್ಲ ಯಾಕೆ ಬೇಕು? ಸಹಕಾರದ ನೆವದಿಂದ ಇವರಿಗೊಂದು ಆಫೀಸು ಸಿಗುತ್ತದೆ; ದೊಡ್ಡ ಆಫೀಸರರಾಗುತ್ತಾರೆ. ಕಾರಕೂನರೂ, ಸಿಪಾಯಿಗಳೂ ಹುಕುಮಿನಂತೆ ವರ್ತಿಸಲು ಸಿದ್ಧರಾಗಿ ನಿಲ್ಲುತ್ತಾರೆ; ಇದೆಲ್ಲ ಆಡಂಬರಕ್ಕಾಗಿ, ಆತ್ಮಗೌರವಕ್ಕಾಗಿ ಪುಣ್ಯಾತ್ಮರು ಸಹಕಾರ ಸಂಸ್ಥೆಯಲ್ಲಿ ಸೇರಿಕೊಳ್ಳುವದೂ ಉಂಟು. ಇಂಥ ಜನರ ಸಹಕಾರದಿಂದ ಲೋಕೋಪಕಾರವಾಗುವ ಬಗೆ ಹೇಗೆ?

ಸಹಕಾರ ಸಂಸ್ಥೆಗಳ ಕ್ರಮವು ಬೇಸಾಯಗಾರರಿಗೆ ಅನುಕೂಲವಿರುವದಿಲ್ಲ. ಪರಸ್ಪರ ಸಹಕಾರವನ್ನು ಸರಕಾರವು ಪರಸ್ಪರ ಪ್ರ… ಗಳಿಗೆ ವಹಿಸಿದೆ. ಸರಕಾರದ ಸಹಾಯ ಪ್ರಜೆಗಳಿಗೆ ದೊರಕುವದು ಬಹಳ ಅಪರೂ… ವಾಗಿದೆ ಇದರಿಂದ ಕಡಿಮೆ ಬಡ್ಡಿ ದರದಿ… ಸಾಲ ಸಿಗುವದು ಕಠಿಣವು. ಸಹಕಾರಿ ಸಂ… ಗಳೊಳಗಿನ ಬಡ್ಡಿಯ ಮಾನವು ಸಾವುಕಾ… ಬಡ್ಡಿಯ ಮಾನಕ್ಕಿಂತ ಕಡಿಮೆಯಿದ್ದರೂ, … ಸಾಯಕ್ಕೆ ಅನುಕೂಲವಾಗಿರುವದಿ… ೯—೧೦ ರೂಪಾಯಿ ದರದ ಬಡ್ಡಿಯಿಂದ ಹ… ತೆಂದು ಭೂಮಿಯನ್ನು ರೂಪಿಸುವದು … ವಿರುವದೇನು? ಸಂಸ್ಥೆಗಳು ಭೂಮಿಯ… ಅಡವು ಮಾಡಿಕೊಳ್ಳುವ ಪ್ರಘಾತವಿಲ್ಲ. ಭೂ… ಅಡವು ಕೊಟ್ಟಲ್ಲಿ, ಸಾವುಕಾರರು … ದರದಿಂದ ಸಹ ಹಣ ಕೊಡುತ್ತಾರೆ. ಈ … ಸ್ಥೆಯು ಸಹಕಾರಿ ಸಂಸ್ಥೆಗಳಲ್ಲಿರುವದಿಲ್ಲ. … ರಿಂದ ಸಹಕಾರಿ ಸಂಸ್ಥೆಗಳು ಬೇಸಾಯಗಾ… ರಿಗೆ ಸಾವುಕಾರರ ಕಡೆಗೇ ಅಟ್ಟುತ್ತವೆ… ಹೇಳಬಹುದು. ಸಹಕಾರಿ ಸಂಸ್ಥೆಗಳು ಭೂ… ಗಳನ್ನು ಅಡವು ಕೊಂಡು ಅದವಿನ ಸಾಲವ… ಸಣ್ಣ ಸಣ್ಣ ವಾರ್ಷಿಕ ಕಂತುಗಳಿಂದ ವಸೂ… ಮಾಡಿಕೊಳ್ಳುವ ವ್ಯವಸ್ಥೆ ಮಾಡಬೇಕು. … ರಿಂದ ಬಹಳ ಬೇಸಾಯಗಾರರಿಗೆ ಅನುಕೂ… ವಾಗುವದು. ಅಧ್ಯಕ್ಷರಾದ ಸರ್ ರೆಡ್ಡಿಯ… ತಮ್ಮ ಭಾಷಣದಲ್ಲಿ ಇದೇ ಸೂಚನೆಯ… ಮಾಡಿರುವರು.

ಬೇಸಾಯಗಾರರಿಗೆ ತಕ್ಕ ಕೈಗಾರಿಕೆ… ಜ್ಞಾನ, ಮನೆಯಲ್ಲಿಯೇ ಬೇಸಾಯೇತರ … ಯದಲ್ಲಿ ಸಾಗಿಸಬಹುದಾದ ಉದ್ಯೋಗ, ಬೆ… ಯ ಸಾಮಗ್ರಿಗಳನ್ನು ಸಂಘಟಿತವಾಗಿ ಸ… ಹಿಸಿ ವ್ಯಾಪಾರ ಮಾಡುವ ವ್ಯವಸ್ಥೆ, ಇ… ಉಪಾಯಗಳು ಸಹಕಾರ ಕಕ್ಷೆಯೊಳಗಿ… ಆದರೆ, ಅವು ನೂತನ ಮಾರ್ಗಗಳು … ಎರಡು ಸೂಚನೆಗಳು ಸದ್ಯದ ಪರಿಸ್ಥಿ… ವಿಚಾರದಿಂದ ಸೂಚಿಸಿದಂಥವು. ಸಹ… ಚಳವಳಿಯಿಂದ ನಿಜವಾದ … ಕಲ್ಯಾಣವಾಗಬೇಕಾದರೆ, ಪ್ರಜಾಕ… ಮಾಡಲು ಸಂಸ್ಥೆಗಳಲ್ಲಿ ಇಂಬಿರಬೇಕು. … ಸ್ಥೆಗಳು ಅಷ್ಟು ಸಮೃದ್ಧವಾಗಿರಬೇಕು; … ಕಾರದ ಅನುಗ್ರಹವಿರಬೇಕು. ಲೋಕೋ… ಕಾರದ ಸೋಗು ಹಾಕುವವರಿಗೆ ಎಡೆ… ಬಾರದು. ಲೋಕೋಪಕಾರಿಗಳಿಗೇ, … ತ್ರ ವಿಚಾರದವರಿಗೇ ಸೇರಲು ಅವಕಾ… ಶ. ಸೇರುವಷ್ಟು ಉತ್ತೇಜಕ ಪರಿಸ್ಥಿತಿ… ಬೇಕು; ಈಗ ಪರಸ್ಪರ ಸಹಕಾರವೆಂ… ಕೊಡ-ಕೊಂಬುವ ಸಾವಕಾರ್‍ಯ ಸಂಸ್ಥೆಯಾ… ಸಾವುಕಾರರ ಬದಲಿಗೆ ಸಹಕಾರಿ ಸಂಸ್ಥೆ… ನಿರ್ಮಾಣ ಹೊಂದಿವೆ. ಸಾವುಕಾರರ ವಿ… ಕೋರ್ಟುಗಳಲ್ಲಿ ಆಕ್ಷೇಪ ಮಾಡಲು ಅ… ರವಿದೆ; ಸಹಕಾರಿ ಸಂಸ್ಥೆಗಳ ವಿರುದ್ಧ ಅ…

...ರುವದಿಲ್ಲ. ಸ ಹ ಕಾ ರಿ ಸಂಸ್ಥೆಗಳ ಎಲ್ಲ ಕಾರ್ಯವು ... ಹಾಕೆಯಿಂದಲೇ ನಡೆಯುತ್ತದೆ. ... ನ ವಸೆ ಯಿಂದ ಮೆಂಬರರು ಗತಿಗೆಟ ಗೂ

ಭಾರತ ಮಂತ್ರಿಗಳು ಪಠಾಡಿದ ಕಾರಣವೇನೆಂದು ಬಲ್ಲಿರಾ? ವಿದ್ಯಾರ್ಥಿಗಳು ಭಾರತೀಯರ ಸೇವೆಗೆ ಬರಲೊಡು ಪದಿಂವಂತೆ! ಅವರಿಗೆ ...

ರ ಸಮಾರೋಪವಾದ ಬಳಿಕ, ಪರಿಷತ್ತು ವಿಸರ್ಜನ ಹೊಂದಿತು.

ಉರಣ ಉಪ್ಪು!

ಅಗ್ಗ ಉಪ್ಪು! **ಅಚ್ಛ ಉಪ್ಪು!!**

ಸಮಸ್ತ ಉಪ್ಪಿನ ಗಿರಾಕಿಗಳಿಗೆ ಜಾಹೀರಪಡಿಸುವದೇನಂದರೆ:—

ಲೋಕಾನುಕೂಲತೆಗಾಗಿ, ಖರೇ ಲೋಕಾಗ್ರಹದ ಮೇಲಿಂದ ಉರಣ ಸಜೆಯಿಂದ **ಅಚ್ಛ ಉಪ್ಪು** ತಂದು ಮಾರಾಟ ಮಾಡಲ್ಪಡುತ್ತದೆ. ಈ ಉಪ್ಪು ಸಮಸ್ತ ತರದಿಂದಲೂ ಶ್ರೇಷ್ಠವಿದೆ: ಈ ಉಪ್ಪು ಅಳತೆಗೆ ಚಲೋದು: ತೂಕಕ್ಕೂ ವಿಶೇಷ; ದರದಲ್ಲೂ ಅಗ್ಗ; ಅಳತೆಯಲ್ಲಿ ತುಟ್ಟಿ ಬರುವದಿಲ್ಲ: ಸ್ವಚ್ಛವಾದ ಉಪ್ಪು ಇದೇ. ಉಪ್ಪು ಗುಣವೂ ಇದರಲ್ಲಿ ಹೆಚ್ಚಿದ್ದು, ಶಿಲ್ಕು ಇಟ್ಟಲ್ಲಿ ಕರಗುವದಿಲ್ಲ. ಒಮ್ಮೆ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿರಿ! ಉರಣ ಉಪ್ಪಿನಷ್ಟು ಚಲೋ ಉಪ್ಪು ಈ ಭಾಗದಲ್ಲಿ ಸಿಗುವದಿಲ್ಲ!! ಉರಣ ಉಪ್ಪಿಂತ ಬೇರೆ ಉಪ್ಪು ಕೊಂಡು ಮೋಸ ಹೋಗಬೇಡಿರಿ!!!

ಉಪ್ಪು ಸಿಗುವ ಪತ್ತೆ:—

ಅಂಕೋಲಾ ಕೃಷ್ಣ ವಸ್ತಾಳಪ್ಪೈ, ಉಪ್ಪಿನಪಟ್ಟಣ.

ಮೆಸರ್ಸ ಶೇಷಗಿರಿ ಬಾಳಕೃಷ್ಣ ರಾವ ಸೋಂದೆ,

ಮತ್ತು ಇಸಳೂರಕರ ಕಂಪನಿ, ಶಿರ್ಶಿ.

ಪದ್ಮನಾಭ ಕೃಷ್ಣಪ್ಪಾ ಬಿಳಗಿ, ಶಿರ್ಶಿ.

ಗೋವಿಂದ ಲಕ್ಷ್ಮಣ ಶ್ಯಾನಭಾಗ, ಕುಮಟಾ.

ತಾ. ೧೨-೧೨-೧೯೩೪.

STAR OF KANARA PRESS, KUMTA

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಗುರುವಾರ ತಾ. ೨೦ನೇ ಯಂದು ಸಾಯಂಕಾಲಕ್ಕೆ ಕಲ್ಲಿಕೋಟೆಯ ಸನ್ಯಾಸದೀಕ್ಷೆಯನ್ನು ...ಂಡ ಶಿ. ಗಣಪತರಾವ, ಬಿ. ಎ., ರವರು ಇಲ್ಲಿ ಬಂದ ... ಗಣಪತರಾಯರು ಕಲ್ಲಿಕೋಟೆಯ ಹೈಸ್ಕೂಲಿನ ಮುಖ್ಯಾಧ್ಯಾಪಕರಿದ್ದರು; ಬಾಲಕರೂ ಅವರೇ. ಈ ಶಾಲೆ...ನ್ನು ಇವರು ನಿರಪೇಕ್ಷ ಬುದ್ಧಿಯಿಂದ, ಧರ್ಮಬುದ್ಧಿ...ದ ನಡಿಸಿದರು. ಈಗ ಶಾಲೆಯಲ್ಲಿ ೧೩೦೦ ವಿದ್ಯಾರ್ಥಿ...ಗಳು. ಈ ಶಾಲೆಗೆ ಸರಕಾರಿ ಸಹಾಯವನ್ನು ಸಹ ...ದು ಪಡೆದಿದ್ದಿಲ್ಲವಾಗಿ ತಿಳಿಯುತ್ತದೆ. ಶಾಲೆಯ, ಆಡಳಿ...ನ್ನು ಈಗ ತಮ್ಮ ಬಿಬ್ಬ ಮಗಂದಿರರಿಗೆ ಒಪ್ಪಿಸಿರುವ ...ಇವರಿಗೆ ನಾಲ್ವರು ಮಗಂದಿರರು. ಇನ್ನುಳಿದ ಮೂವರ ... ರು ಮದ್ರಾಸಿನ ಹೈಕೋರ್ಟ ವಕೀಲರ ; ನಾ...ಯವರು ಇಂಗ್ಲಂಡದಲ್ಲಿರುವರು. ಇವರ ಸೌಭಾಗ್ಯವ...ವರು ಕಳೆದ ೧೨ ವರ್ಷಗಳ ಹಿಂದೆ ತೀರಿಕೊಂಡ... ಗಣಪತರಾಯರು ಬದ್ರಿನಾರಾಯಣಕ್ಕೆ ಹೋಗಿ ಸ...ದೀಕ್ಷೆಯನ್ನು ಪಡೆಕೊಂಡಿರುವರು. ಈಗ ದೇಶಸಂ...ಮಾಡುತ್ತಿರುವರು. ಇವರ ಸನ್ಯಾಸಾಶ್ರಮದ ಹೆಸ...ಸ್ವಾಮಿ ಸುವಿಚಾರಾನಂದ" ಎಂಬುದು. ಶ್ರೀ ಸ್ವಾಮಿ ...ರಾನಂದರವರದೊಂದು ಪ್ರವಚನವು ಮರುದಿನ ...ದ ಸಾಯಂಕಾಲಕ್ಕೆ ಶ್ರೀ ವೆಂಕಟರಮಣ ದೇವಾ... ಉಪ್ಪರಿಗೆಯ ಮೇಲೆ ಜರುಗಿತು. ಶ್ರೀ ಸ್ವಾಮಿಯ... ಧರ್ಮ ಮತ್ತು ನೀತಿ' ಈ ಕುರಿತು ನಾಲ್ಕು ಮಾ...ಡಿದರು. ಮೊದಲು, ಕೊಂಕಣಿ ಭಾಷೆಯಿಂದ ಮಾ...ಬಳಿಕ, ವಿದ್ಯಾರ್ಥಿಗಳಿಗಾಗಿ ಇಂಗ್ಲಿಷಿನಿಂದ ಉಪ...ಮಾಡಿದರು. ಶ್ರೀ ಸ್ವಾಮಿಯವರಿಗೆ ಕನ್ನಡ ಭಾಷೆ...ಜ್ಞಾನವಿಲ್ಲದ್ದರಿಂದಲೂ, ಕೊಂಕಣಿ ಭಾಷೆಯಲ್ಲಿ, ಧ...ಂಥ ಉಚ್ಚ ವಿಷಯದ ಮೇಲೆ, ಮಾತಾಡ ... ಕ್ಲಿಷ್ಟದ್ದರಿಂದಲೂ, ಇಂಗ್ಲಿಷ ಭಾಷೆಯು ಶ್ರಮ್ಯವು ...ಷ್ಟವರಿಂದಲೂ, ಅವರ ಇಂಗ್ಲಿಷ ಭಾಷಣವು ಬಹ...ಬೋಧಕವಾಯಿತು.

...ಸುವಿಚಾರಾನಂದರವರು ನುಡಿದದ್ದೇನಂದರೆ:— ...ಜನ್ಮಗಳಲ್ಲಿಯೂ ಮನುಷ್ಯ ಜನ್ಮವು ಶ್ರೇಷ್ಠವಾದ... ಮೋಕ್ಷ ಪಡೆಯಬೇಕಾದರೆ, ಸಮಸ್ತ ಪ್ರಾಣಿಗಳೂ ...ದೇಹವನ್ನೇ ಆಶ್ರಯಿಸಬೇಕು. ದೇವಾದಿಗಳು ...ನವರಾಗಿ ಜನ್ಮವನ್ನೆತ್ತಿದ ಹೊರತು, ಅವರಿಗೆ ...ಪ್ರಾಪ್ತಿಯಿಲ್ಲ. ಮೋಕ್ಷವು ಹೇಗೆ ಸಾಧ್ಯ? ಮಾನವ... ಕಬೇಕಾದ್ದೇನು? ಮಾನವನು ಪುರುಷಾರ್ಥಗಳ ...ಸಾಧಿಸಬೇಕು. ಪುರುಷಾರ್ಥಗಳು ೪. ಧರ್ಮ, ...ಕಾಮ, ಮೋಕ್ಷ. ಧರ್ಮದಿಂದ ಅರ್ಥ ಪ್ರಾಪ್ತಿ...ಯಿಂತು, ಆ ಅರ್ಥದಿಂದ ಕಾಮಗಳನ್ನೆಲ್ಲ ಸಂತೃಪ್ತಿ...ಬಳಿಕ, ಮಾನವನು ಮೋಕ್ಷಾರ್ಹನಾಗುತ್ತಾನೆ. ...ೀ ಪುರುಷಾರ್ಥವು ಧರ್ಮವು. ಧರ್ಮವ ಮ...ಯದಿದ್ದರೆ, ಪುರುಷಾರ್ಥಗಳನ್ನು ನಾವು ಸಂಪಾ...ವು. ಧರ್ಮವೆಂದರೇನು? "ಪೂರ್ಣಮದಃ, ಪೂ...ಂ, ಪೂರ್ಣಾತ್ ಪೂರ್ಣಮುದಚ್ಯತೇ। ಪೂರ್ಣಸ್ಯ ...ರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥" ...ದಂ, ಅಂದರೆ, ಈ ಜಗತ್ತು ಪೂರ್ಣವಿದೆ; ...ವಿದೆ; ಪೂರ್ಣಮದಃ ಅಂದರೆ, ಈ ಜಗತ್ತಿನ ...ಹಿದ ಜಗನ್ನಿಯಾಮಕನಾದ, ಜಗತ್ಕರ್ತನಾದ ...ಂದರೆ ಆತನು, ಪರಮಾತ್ಮನು; ಆತನೂ ಪೂ...ಅನಂತನು. ಪೂರ್ಣನಾದ ಪರಮಾತ್ಮನಿಂದ ...ಗತ್ತು ಉದ್ಭವಿಸಿತು. ಪೂರ್ಣ ಪರಮಾತ್ಮನಿಂ... ಜಗತ್ತು ಉದ್ಭವಿಸಿದರೂ, ಆತನ ಪೂರ್ಣತೆ...ಗೆ ಕುಂದು ಬರಲಿಲ್ಲ; ಆದರೂ ಆತನು ಪೂರ್ಣನೇ. ಹೀಗೆ ೨ ವಸ್ತುಗಳು. ಒಂದು ಜಗತ್ತು; ಎರಡನೇದು ಪರಮಾತ್ಮನು. ಈ ಎರಡೂ ವಸ್ತುಗಳನ್ನು ನೋಡುವ, ಆ ಎರಡೂ ವಸ್ತುಗಳೊಳಗಿನ ಸಂಬಂಧಗಳನ್ನು ಗ್ರಹಿಸ...

...ವೇದೇಕು, ಅದರಿಂದ ಹೆಡ್ ಮಾಸ್ತರರು ತಮ್ಮ ...ಲ ವಿದ್ಯಾರ್ಥಿಗಳಿಗೆ ಹಿಂದುಸ್ತಾನದಲ್ಲಿ ಕೀರ್ ...ಯಲು ಉಪದೇಶಿಸಬೇಕು." ಈ ಉಪದೇಶವನ್ನು

... ಅಪ್ರಿಯ, ಅದು ಮರಳುಗಿಹೋಗಿದ್ದರಿಂದ, ಈ ಪ್ರಯೋಗವನ್ನು ಪುನಃ ಕೈಕೊಳ್ಳಲಾಗದಂತಾಯಿತು. ಆದರೂ, ಅರಾವು ಮುಂದಾಗಿಂಗಿದೆ. ಹೀಗೆಲ್ಲ ಅರಾವುಗಳಾಗಿ, ಅವ್ಯಕ್ತ

ಕಾನಡಾವೃತ್ತ.

ಮಿತಿ ಕ್ರೋಧನ ಸಂ। ಪುಷ್ಯ ಶ। ೩ ಸೋಮ

ಪರಸ್ಪರ ಸಹಕಾರ.

ಧಾರವಾಡದಲ್ಲಿ ಕಳೆದ ೧೬ ನೇ ತಾರೀಖಿನಿಂದ ಪ್ರಾಂತಿಕ ಸಹಕಾರಿ ಪರಿಷತ್ತಿನ ಬೈಠಕವು ಪ್ರಾರಂಭವಾಗಿ ೧೮ ನೇ ತಾರೀಖು ಸಮಾಪ್ತಿಯಾಯಿತು. ಅಧ್ಯಕ್ಷಸ್ಥಾನವನ್ನು ಮದ್ರಾಸಿನ ಸರ್ ಕೆ. ವ್ಹಿ. ರೆಡ್ಡಿಯವರು ಅಲಂಕರಿಸಿದ್ದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಹಕಾರದ ವ್ಯಾಪ್ತಿಯನ್ನು ಸವಿಸ್ತರ ತಿಳಿಸಿ ಮೊಂಟೆಗ್ಯೂ ಸ್ವರಾಜ್ಯ ಯುಗದಲ್ಲಿ ಸಹಕಾರ ವ್ಯಾಪ್ತಿಯು ಅಕಲ್ಪಿತವಾಗಿ ಬೆಳದಿತೆಂದು ಅಂಕಗಳಿಂದ ನಿವೇದಿಸಿದರು. ೧೯೨೦ ನೇ ಇಸವಿಯಲ್ಲಿ ಇಡೀ ಹಿಂದುಸ್ಥಾನದಲ್ಲಿ ೩೦೪ ನೇ ಬ್ಯಾಂಕುಗಳಿದ್ದವು ೧೯೨೪ ನೇ ಇಸ್ವಿ ಮಾರ್ಚ ಅಂತ್ಯಕ್ಕೆ ಇವು ೫೩೦ ಕ್ಕೆ ಬೆಳೆದವು. ೧೯೨೦ ರಲ್ಲಿ ೬೩೮ ಸುಪರವ್ಹಾಜಿಂಗ ಹಾಗು ಗ್ಯಾರಂಟೀಯಿಂಗ ಯೂನಿಯನ್ ಸಂಸ್ಥೆಗಳು ೧೯೨೪ ನೇ ಇಸ್ವಿಯಲ್ಲಿ ಅವು ೧೪೦೨ ಕ್ಕೆ ಬೆಳದವು. ಬೇಸಾಯ ಸಂಘಗಳು ೨೫೮೬೮ ರಿಂದ ೫೪೬೪೫ ಕ್ಕೆ ಬೆಳೆದವು. ಬೇಸಾಯೇತರ ಸಂಘಗಳು ೧೬೬೨ ರಿಂದ ೪೫೮೯ ಕ್ಕೆ ಏರಿದವು. ಸದಸ್ಯರ ಸಂಖ್ಯೆ ಮೊದಲು ೧೩೫೮೯೦೪ ಇದ್ದುದು ೨೨೧೩೫೩೬ ಆಗಿರುವದು. ಖಂಡ ಬಂಡವಾಳವು ಮೊದಲು ರೂ ೩೧ ೨೨೪೦೦೦ ಇದ್ದದ್ದು ೪೦೫೨೯೬೦೦೦ ವಾಯಿತು. ಹೀಗೆ ಸಹಕಾರದ ವ್ಯಾಪ್ತಿಯು ಮೊಂಟೆಗ್ಯೂ ಸ್ವರಾಜ್ಯದಲ್ಲಿ ಅಕಲ್ಪಿತವಾಗಿ ಬೆಳೆಯಿತು. ಸಹಕಾರ ದೃಷ್ಟಿಗೆ ಇದೊಂದು ಅಭಿನಂದನೀಯವು.

ಆದಿಂತಿರಲಿ ಪರಸ್ಪರ ಸಹಕಾರದ ಮೂಲ ಉದ್ದೇಶವು, ಮೂಲ ಸಾಧ್ಯವು ಬೇಸಾಯಗಾರರನ್ನು ಸಾವುಕಾರರ ಬಾಯಿ ತಪ್ಪಿಸಿ ಕಾಯುವದು. ಆ ಧ್ಯೇಯವು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆಂದು ಸರ್ ರೆಡ್ಡಿ ಪ್ರಶ್ನೆಯನ್ನೆತ್ತಿ, ಆ ಕುರಿತು ಸ್ವಲ್ಪವೇನೂ ಸಾಧ್ಯವಾಗಲಿಲ್ಲೆಂದು ಮರೆ ಹೇಳಿದರು. ಸಹಕಾರದ ವ್ಯಾಪ್ತಿಯು ಬೆಳೆದದ್ದು ನಿಜ, ಸಹಕಾರಿ ಸಂಸ್ಥೆಗಳ ಸಂಖ್ಯೆಯು ಬೆಳೆಯಿತು; ಆದರೆ ಬೇಸಾಯಗಾರರು ಇದ್ದಂತೆಯೇ ಇರುವರು. ಬೇಸಾಯಗಾರರ ಕೊರಳೊಳಗಿನ ಸಾಲದ ಕುಂಟೆಯು ಇನ್ನೂ ಇದ್ದಂತೆಯೇ ಇದೆ ಸಾಲದ ಕೊರಳ ಕುಂಟೆಯಿಂದ ಅವನು ಎದ್ದೇಳಲಾರನು. ಪರಸ್ಪರ ಸಹಕಾರ ಪರಿಷ... [illegible] ...ಕಾರವಾಗುತ ಬಗ ... [illegible]

ಸಹಕಾರ ಸಂಸ್ಥೆಗಳ ಕ್ರಮವು ಬೇಸಾಯಗಾರರಿಗೆ ಅನುಕೂಲವಿರುವದಿಲ್ಲ. ಪರಸ್ಪರ ಸಹಕಾರವನ್ನು ಸರಕಾರವು ಪರಸ್ಪರ ಪ್ರಜೆಗಳಿಗೆ ವಹಿಸಿದೆ. ಸರಕಾರದ ಸಹಾಯವು ಸಂಸ್ಥೆಗಳಿಗೆ ದೊರಕುವದು ಬಹಳ ಅಪರೂಪ ... [illegible] ... ನಿವರ್ಾಣ ಹೊಂದಿವೆ. ಸಾವುಕಾರರ ವಿರುದ್ಧ ಕೋರ್ಟುಗಳಲ್ಲಿ ಆಕ್ಷೇಪ ಮಾಡಲು ಅಧಿಕಾರವಿದೆ; ಸಹಕಾರಿ ಸಂಸ್ಥೆಗಳ ವಿರುದ್ಧ ಅ...

ಇರುವದಿಲ್ಲ. ಸಹಕಾರಿ ಸಂಸ್ಥೆಗಳ ಎಲ್ಲ ಕಾರ್ಯವು ಶಾಖೆಯಿಂದಲೇ ನಡೆಯುತ್ತದೆ. ಈ ವ್ಯವಸ್ಥೆಯಿಂದ ಮೆಂಬರರು ಗತಿಗೆಟ್ಟರೂ, ಸಹಕಾರಿ ಸಂಸ್ಥೆಯು ಕರಳು ಕರಗುವದಿಲ್ಲ. ಪರಸ್ಪರ ಸಹಕಾರದ ಈಗಿನ ದೋಷವನ್ನು ಇಳಿಸುವದು ಅತ್ಯಾವಶ್ಯಕವಾಗಿದೆ. ಸರ್ ರೆಡ್ಡಿಯವರ ಸೂಚನೆಗಳಿಂದ ಸರಕಾರವು ಎಚ್ಚತ್ತು ಬೇಸಾಯಗಾರರಿಗೆ ಹಿತವಾಗುವ ಯೋಜನೆಯನ್ನು ಕೈಕೊಳ್ಳಲೆಂದು ನಾವು ಹಾರೈಸುವೆವು.

ಸ್ಫುಟ ಸೂಚನೆಗಳು.

೧. ಯುರೋಪ ಖಂಡದ ರಾಜಕಾರಣವು ಪುನಃ ಚಿಂತಾಜನಕವಾಗಹತ್ತಿದೆ. ಮೋಸಲ್ ಪ್ರಕರಣದಿಂದ ಬ್ರಿಟಿಶರು ಗೆದ್ದರೂ, ತುರ್ಕರೇನು ಈ ನಿರ್ಣಯವನ್ನು ಕೊನೆಯ ತೀರ್ಪೆಂದು ಗ್ರಹಿಸಲು ತಯಾರಿಲ್ಲ. ಕಳೆದ ಪಾರ್ಲಿಮೆಂಟಿನಲ್ಲಿಯೂ ಈ ಕುರಿತು ಚರ್ಚೆಯಾದಾಗ, ಕೂಲಿಕಾರ ಪಕ್ಷದವರು ಮೋಸಲ್ ನಿರ್ಣಯವನ್ನು ತಿರಸ್ಕರಿಸಲು ಯತ್ನ ಮಾಡಿದರು. ಅನೇಕ ಯುಕ್ತಿವಾದಗಳನ್ನು ಹೇಳಿದರೂ, ಕೊನೆಗೆ ಸಾಮ್ರಾಜ್ಯವಾದಿ (Imperialists) ಗಳು ಗೆದ್ದರು. ಹೀಗೆ ಮೋಸಲ್ ಪ್ರಕರಣದ ವಿಷಯ ಬ್ರಿಟಿಶ ಲೋಕಮತವೂ ಕೂಡ ಅನುಕೂಲವಿರುವದಿಲ್ಲ. ತುರ್ಕರು ತಮ್ಮ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಯತ್ನ ಮಾಡುತ್ತಿರುವರು. ಕಳೆದ ೧೭ ನೇ ತಾರೀಖಿಗೆ ತುರ್ಕರಿಗೂ, ಬಲಾಢ್ಯ ರಶಿಯಾ ದೇಶದವರಿಗೂ ಕಹನಾಮೆಯಾಗಿದೆ. ಈ ಕಹನಾಮೆಯಂತೆ ರಶಿಯಾ ದೇಶವು ತುರ್ಕರಿಗೆ ವಿರೋಧವಾಗಿ ಯಾವದೇ ಕೃತಿಯನ್ನು ಪರರಾಷ್ಟ್ರಗಳ ಹಿಳಕಂಟಿನಿಂದ ಮಾಡಲಾರದು. ತುರ್ಕರಾದರೂ, ಇದೇ ಧೋರಣದಿಂದ ನಡೆಯುವರು. ಈ ಸಂಧಾನವು 'ಬಹಳ ಮಹತ್ವದ್ದಿದೆ. ಬ್ರಿಟಿಶರ ಮೋಸಲ್ ನಿರ್ಣಯಕ್ಕೆ, ಮೋಸಲ್ ಅದರ ಕಾರಕ್ಕೆ ಇದೊಂದು ಪ್ರತ್ಯುತ್ತರವೆಂದು ರಾಜಕಾರಣಧುರಂಧರರು ಅಭಿಪ್ರಾಯಪಟ್ಟಿರುವರು. ಹೀಗೆ ಯುರೋಪ ಖಂಡದ ರಾಜಕಾರಣವು ಶಾಂತಿವೇಷವನ್ನು ಧರಿಸಿದರೂ, ಮುಂದೆ ಪ್ರಕ್ಷುಬ್ಧವಾಗುವ ಲಕ್ಷಣಗಳು ಸ್ಪಷ್ಟವಾಗಿ ತಲೆದೋರುತ್ತಿವೆ. ಮುಂದೆ ಏನೇನಾಗುತ್ತದೆಂದು ನೋಡುವ!

---

೨. ಬ್ರಿಟಿಶರು ಇನ್ನೂ ಹಿಂದುಸ್ಥಾನದ ಮೇಲಿನ ಲೋಭದೃಷ್ಟಿ ಬಿಡಲೊಲ್ಲರು. ಈ ಕಸಂಕೇತವಂತೆ, ಭರತಖಂಡವನ್ನು ಭಾರತೀಯ ಪ್ರಜೆಗಳ ಉದ್ಧಾರಕ್ಕಾಗಿ ಬ್ರಿಟಿಶರು ಆಳುತ್ತಿರುವರೆಂಬ ಭಾವನೆಯು ಇನ್ನೂ ಹಬ್ಬುತ್ತಿದೆ. ಸಮ್ಮಕ್ಕೆ ವಿಲಾಯತಿಯ ಕ್ರೂಸರಿ ಎಂಬಲ್ಲಿ ಹೆಡ್‌ಮಾಸ್ತರರ ಪರಿಷತ್ತು ಸೇರಿತ್ತು. ಆಗ ಭಾರತ ಮಂತ್ರಿಗಳ ಪ್ರತಿನಿಧಿಗಳಾಗಿ ಮಿ. ಈ. ಎಲನ್‌ರವರು ನುಡಿದದ್ದೇನಂದರೆ:—"ನಾವು (ಬ್ರಿಟಿಶರು) ಅಲ್ಲಿ (ಹಿಂದುಸ್ಥಾನದಲ್ಲಿ) ಇರಲೇ ಬೇಕು. ... ಕೋಟಿ ಪ್ರಜೆಗಳನ್ನು ಅರಾಜಕತೆಯಲ್ಲಿ ನಾವು ... ಬಿಡಲಾರೆವು. ಬ್ರಿಟನ್ನವು ಹಿಂದುಸ್ಥಾನದಲ್ಲಿ ಉಳಿಯಬೇಕು. ಆದರಿಂದ ಹೆಡ್ ಮಾಸ್ತರರು ತಮ್ಮ ... ಶಾಲೆ ವಿದ್ಯಾರ್ಥಿಗಳಿಗೆ ಹಿಂದುಸ್ಥಾನದಲ್ಲಿ ಕೆಲಸ ಮಾಡಲು ಉಪದೇಶಿಸಬೇಕು." ಈ ಉಪದೇಶವನ್ನು ಭಾರತ ಮಂತ್ರಿಗಳು ಮಾಡಿದ ಕಾರಣವೇನೆಂದು ಬಲ್ಲಿರಾ? ವಿದ್ಯಾರ್ಥಿಗಳು ಭಾರತೀಯರ ಸೇವೆಗೆ ಬರಲೊಪ್ಪುವದಿಲ್ಲವಂತೆ! ಅಂಥವರಿಗೆ ಇಲ್ಲಿ ಪೂರೈಕೆಯಾಗುವ ವಿಲಾಸಮಂದಿರ, ತರತರದ ಉಪಭೋಗ, ಏರ್ಪಡಿಸಿದ ಸಲಬು, ಇಷ್ಟೆಲ್ಲ ನಿರಾತಂಕವಾಗಿ ಪೂರೈಕೆಯಾಗುತ್ತಿರುವಾಗ, ಇಂಥ ಪರಿಸ್ಥಿತಿಯಲ್ಲಿ ಅವಶ್ಯಕತೆಯು ಸಂಭವಿಸಿದ್ದಲ್ಲಿ, ಅದರ ಪರಿಮಾರ್ಜನ ಮಾಡಲಿಕ್ಕೂ ದೇಶಭಾಂಧವರಿರುವಾಗ, ಆವರು ಭರತಖಂಡವನ್ನು ಸೇರಿಕೊಳ್ಳಲು ಹಿಂಜರಿಯುತ್ತಾರೆಂಬದು ಏನೇ ಹಿಂದು ಹೋಲಿಯು. ಇನ್ನೂ ಸಂಬಳವನ್ನೇರಿಸಿಕೊಳ್ಳುವ, ಅನುಕೂಲ್ಯಗಳನ್ನು ಪೂರೈಸಿಕೊಳ್ಳುವ ಹೊಂಚು ಇರುತ್ತದೇನೆಂದು ಭೀತಿಪಡದರೆ, ಆಶ್ಚರ್ಯವೇನಿಲ್ಲ. ಅರಾಜಕತೆಯ ಗಾಬರಿ, ಹಿಂದೀ ಪ್ರಜೆಗಳ ಮೇಲಿನ ಮಮತೆ, ಇವೆಲ್ಲ ಕೇಳಿ ಕೇಳಿ, ಬೇಸರ ಬಂದಿದೆ;

---

೩. ಧಾರವಾಡದಲ್ಲಿ ಸೇರಿದ ಮುಂಬಯಿ ಪ್ರಾಂತಿಕ ಸಹಕಾರಿ ಪರಿಷತ್ತಿನಲ್ಲಿ ಶ್ರೀ| ನಲವಡಿ, ಸಾನೇ, ಸುಲಾಖೇ, ವೇಲಕರ ಮೊದಲಾದವರ ನಿಧನದ ಬಗ್ಗೆ ದುಃಖಪ್ರದರ್ಶನ ಮಾಡಲಾಯಿತು. ಇಟಲಿ ಸರಕಾರವು ತನ್ನ ರಾಜ್ಯದೊಳಗಿನ ಸಹಕಾರಿ ಸಂಘಗಳಿಗೆ ಕಾಡುತ್ತಿದೆಂಬ ಹಕೀಕತು ಕೇಳಿ, ಈ ಪರಿಷತ್ತು ಅದನ್ನು ನಿಷೇಧಿಸಿ, ಹಿಂದುಸ್ಥಾನ ಸರಕಾರಕ್ಕೆ ತನ್ನ ನಿಷೇಧವನ್ನು ತಿಳಿಸಲು ಬರೆದುಕೊಂಡಿತು. ಇಷ್ಟು ಜೊತೆ ಠರಾವನ್ನು ಮಾತ್ರ ಸಹಕಾರಿ ಪರಿಷತ್ತು ಸ್ವೀಕರಿಸಿದ್ದು ಅನುಚಿತವೆಂದು ಬಲ್ಲವರ ಮತವು. ಸಿಂಧ ಪ್ರಾಂತದಂತೆ, ಕೇರಿನ ಹಣವನ್ನು ಧಾರವಾಡ, ಸುರತ, ಭಡೋಚ ಜಿಲ್ಲೆಗಳಲ್ಲಿ ಕಂತಿನಿಂದ ವಸೂಲ ಮಾಡುವಂತೆ ವ್ಯವಸ್ಥೆಯಾಗಬೇಕೆಂದು ಠರಾವಾನವಾಯಿತು. ಹಳ್ಳಿಗಳ ನೀರು ನಿರರ್ಥಕ ಹರಿದುಹೋಗದಂತೆ ತಕ್ಕ ಕಾಲದಲ್ಲಿ ಒಡ್ಡುಗಳನ್ನು ಹಾಕಿ, ತೋಟ-ಗದ್ದೆಗಳಿಗೆ ಅನುಕೂಲ ಮಾಡಿಕೊಡಬೇಕೆಂದೂ, ಈ ಕುರಿತು ರೈತರಿಗೆ ತಕ್ಕ ಮಾಹಿತಿ ಪೂರೈಸಲು ಬೇಸಾಯ ಖಾತೆಯವರು ತಜ್ಞರನ್ನು ನೇಮಿಸಬೇಕೆಂದೂ, ಇದಕ್ಕಾಗಿ ಸರಕಾರವು ೧೦೦ಕ್ಕೆ ೪ ರಂತೆ ಬಡ್ಡಿ ದರದಿಂದ ಹಣವನ್ನಿತ್ತು, ಈ ಹಣವನ್ನು ೪೦ ವರ್ಷಗಳಲ್ಲಿ ಕಂತಿನಿಂದ ಸಲಾಯಿಸಿಕೊಳ್ಳಬೇಕೆಂದೂ ಠರಾವಾನವಾಯಿತು. ಸಹಕಾರಿ ಸಂಘಗಳ ಮುಖ್ಯಾಧಿಕಾರಿಗಳಾದ ರಿಜಿಸ್ಟ್ರಾರರು ಈ ಠರಾವನ್ನು ವಿರೋಧಿಸಿ, ಇಷ್ಟು ಸುಲಭ ಬಡ್ಡಿ ದರದಿಂದ ಹಣ ದೊರೆಯದೆಂದರು. ಪರಸ್ಪರ ಸಹಕಾರದಿಂದ ಸರಕಾರಕ್ಕೆ ಪ್ರಜೆಗಳ ಹಳಿತಾಗಬೇಕು; ಹಣದ ಪೂರೈಕೆಯು ಪರಸ್ಪರ ಆಗಬೇಕು; ಇದೇ ಪರಸ್ಪರ ಸಹಕಾರದ ಪರಸ್ಪರ ಧೋರಣವಲ್ಲವೇ? ಆದರೂ, ಠರಾವು ಬಹುಮತದಿಂದ ಮಂಜೂರಾಯಿತು. ರೈತರಿಗೆ ಮಿತವ್ಯಯದ ಚಟ ಹಚ್ಚಲಿಕ್ಕೆ ಸಹಕಾರಿ ಸಂಘಗಳಲ್ಲಿ ಸೇವಿಂಗ್ಸ ಬ್ಯಾಂಕ ಪದ್ಧತಿಯನ್ನಿಡಬೇಕೆಂದೂ ಗೊತ್ತಾಗಿದೆ. ಬೇಸಾಯಗಾರರ ಹುಟ್ಟುವಳಿಯನ್ನು ಬೇಸಾಯಗಾರರ ವಿಸ್ತವರಾನ ಮುಂಬಯಿಯಲ್ಲಿ ಮಾರುವ ವ್ಯವಸ್ಥೆಯಾಗಬೇಕೆಂಬ ಠರಾವಿಗೆ ರಾ| ವಾಳವೇಕರರು ವಿರೋಧಿಸಿದರು. ಇಂಥ ಉಗ್ರಾಣವು ಈ ಮುಂಚೆ ಮುಂಬಯಿಯಲ್ಲೊಂದು ಇಟ್ಟಿದ್ದು, ಅದು ಮುಳುಗಿಹೋದ್ದರಿಂದ, ಈ ಪ್ರಯೋಗವನ್ನು ಪುನಃ ಕೈಕೊಳ್ಳಲಾಗದೆಂಬರು. ಆದರೂ, ಠರಾವು ಮಂಜೂರಾಗಿದೆ. ಹೀಗೆಲ್ಲ ಠರಾವುಗಳಾಗಿ, ಅಧ್ಯಕ್ಷರ ಸಮಾರೋಪವಾದ ಬಳಿಕ, ಪರಿಷತ್ತು ವಿಸರ್ಜನ ಹೊಂದಿತು.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಗುರುವಾರ ತಾ. ೨೪ನೇ ಸಾಯಂಕಾಲಕ್ಕೆ ಕಲ್ಲಿಕೋಟೆಯ ಸನ್ಯಾಸದೀಕ್ಷೆಯನ್ನು ಕೊಂಡ ಡಿ. ಗಣಪತರಾವ, ಬಿ. ಎ., ರವರು ಇಲ್ಲಿ ಬಂದರು. ಗಣಪತರಾಯರು ಕಲ್ಲಿಕೋಟೆಯ ಹೈಸ್ಕೂಲಿನ ಮುಖ್ಯಾಧ್ಯಾಪಕರಿದ್ದರು; ಚಾಲಕರೂ ಅವರೇ. ಈ ಶಾಲೆಯನ್ನು ಇವರು ನಿರಪೇಕ್ಷ ಬುದ್ಧಿಯಿಂದ, ಧರ್ಮಬುದ್ಧಿಯಿಂದ ನಡಿಸಿದರು. ಈಗ ಶಾಲೆಯಲ್ಲಿ ೧೬೦೦ ವಿದ್ಯಾರ್ಥಿಗಳಿರುವರು. ಈ ಶಾಲೆಗೆ ಸರಕಾರಿ ಸಹಾಯವನ್ನು ಸಹ ಇವರು ಪಡೆದಿದ್ದಿಲ್ಲವಾಗಿ ತಿಳಿಯುತ್ತದೆ. ಶಾಲೆಯ ಚಾಲಕತೆಯನ್ನು ಈಗ ತಮ್ಮ ಒಬ್ಬ ಮಗಂದಿರರಿಗೆ ಒಪ್ಪಿಸಿರುವರು. ಇವರಿಗೆ ನಾಲ್ವರು ಮಗಂದಿರರು. ಇನ್ನುಳಿದ ಮೂವರಲ್ಲಿ ಈರ್ವರು ಮದ್ರಾಸಿನ ಹೈಕೋರ್ಟ ವಕೀಲರು; ನಾಲ್ಕನೇಯವರು ಇಂಜಿನಿಯರಿರುವರು. ಇವರ ಸೌಭಾಗ್ಯವತಿಯವರು ಕಳೆದ ೧೨ ವರ್ಷಗಳ ಹಿಂದೆ ತೀರಿಕೊಂಡರು. ಗಣಪತರಾಯರು ಬದರಿನಾರಾಯಣಕ್ಕೆ ಹೋಗಿ ಸನ್ಯಾಸದೀಕ್ಷೆಯನ್ನು ಪಡೆದುಕೊಂಡಿರುವರು. ಈಗ ದೇಶಸಂಚಾರ ಮಾಡುತ್ತಿರುವರು. ಇವರ ಸನ್ಯಾಸಾಶ್ರಮದ ಹೆಸರು "ಸ್ವಾಮಿ ಸುವಿಚಾರಾನಂದ" ಎಂಬುದು. ಶ್ರೀ ಸ್ವಾಮಿ ಸುವಿಚಾರಾನಂದರವರದೊಂದು ಪ್ರವಚನವು ಮರುದಿನ ಶುಕ್ರವಾರ ಸಾಯಂಕಾಲಕ್ಕೆ ಶ್ರೀ ವೆಂಕಟರಮಣ ದೇವಾಲಯದ ಉಪ್ಪರಿಗೆಯ ಮೇಲೆ ಜರುಗಿತು. ಶ್ರೀ ಸ್ವಾಮಿಯವರು 'ಧರ್ಮ ಮತ್ತು ನೀತಿ' ಈ ಕುರಿತು ನಾಲ್ಕು ಮಾತು ಆಡಿದರು. ಮೊದಲು, ಕೊಂಕಣಿ ಭಾಷೆಯಿಂದ ಮಾತಾಡಿದ ಬಳಿಕ, ವಿದ್ಯಾರ್ಥಿಗಳಿಗಾಗಿ ಇಂಗ್ಲಿಷಿನಿಂದ ಉಪದೇಶ ಮಾಡಿದರು. ಶ್ರೀ ಸ್ವಾಮಿಯವರಿಗೆ ಕನ್ನಡ ಭಾಷೆಯ ಜ್ಞಾನವಿಲ್ಲದ್ದರಿಂದಲೂ, ಕೊಂಕಣಿ ಭಾಷೆಯಲ್ಲಿ, ಧರ್ಮದಂಥ ಉಚ್ಚ ವಿಷಯದ ಮೇಲೆ, ಮಾತಾಡುವ ಪರಿಪಾಠವಿಲ್ಲದ್ದರಿಂದಲೂ, ಇಂಗ್ಲಿಷ ಭಾಷೆಯು ಪ್ರಭುತ್ವವು ವಿಶೇಷವಿದ್ದವರಿಂದಲೂ, ಅವರ ಇಂಗ್ಲಿಷ ಭಾಷಣವು ಬಹಳ ಚಿತ್ತವೇಧಕವಾಯಿತು.

ಸ್ವಾಮಿ ಸುವಿಚಾರಾನಂದರವರು ನುಡಿದದ್ದೇನಂದರೆ:— ಸಮಸ್ತ ಜನ್ಮಗಳಲ್ಲಿಯೂ ಮನುಷ್ಯ ಜನ್ಮವು ಶ್ರೇಷ್ಠವಾದದ್ದು; ಮೋಕ್ಷ ಪಡೆಯಬೇಕಾದರೆ, ಸಮಸ್ತ ಪ್ರಾಣಿಗಳೂ ಮಾನವ ದೇಹವನ್ನೇ ಆಶ್ರಯಿಸಬೇಕು. ದೇವಾದಿಗಳೂ ಕೂಡ ಮಾನವರಾಗಿ ಜನ್ಮವೆತ್ತಿದ ಹೊರತು, ಅವರಿಗೆ ಮೋಕ್ಷಪ್ರಾಪ್ತಿಯಿಲ್ಲ. ಮೋಕ್ಷವು ಹೇಗೆ ಸಾಧ್ಯ? ಮಾನವನು ಮಾಡಬೇಕಾದ್ದೇನು? ಮಾನವನು ಪುರುಷಾರ್ಥಗಳನ್ನು ಸಂಪಾದಿಸಬೇಕು. ಪುರುಷಾರ್ಥಗಳು ೪. ಧರ್ಮ, ಅರ್ಥ, ಕಾಮ, ಮೋಕ್ಷ. ಧರ್ಮದಿಂದ ಅರ್ಥ ಪ್ರಾಪ್ತಿ ಮಾಡಿಕೊಂಡು, ಆ ಅರ್ಥದಿಂದ ಕಾಮಗಳನ್ನೆಲ್ಲ ಸಂತೈಸಿಕೊಂಡ ಬಳಿಕ, ಮಾನವನು ಮೋಕ್ಷಾರ್ಹನಾಗುತ್ತಾನೆ. ಮೊದಲನೇ ಪುರುಷಾರ್ಥವು ಧರ್ಮವು. ಧರ್ಮದ ಮರ್ಮ ತಿಳಿಯದಿದ್ದರೆ, ಪುರುಷಾರ್ಥಗಳನ್ನು ನಾವು ಸಂಪಾದಿಸಲಾರೆವು. ಧರ್ಮವೆಂದರೇನು? "ಪೂರ್ಣಮದಃ ಪೂರ್ಣಮಿದಂ, ಪೂರ್ಣಾತ್ ಪೂರ್ಣಮುದಚ್ಯತೇ ॥ ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥" ಪೂರ್ಣಮಿದಂ, ಅಂದರೆ, ಈ ಜಗತ್ತು ಪೂರ್ಣವಿದೆ; ನಿಷ್ಕಲಂಕವಿದೆ; ಪೂರ್ಣಮದಃ ಅಂದರೆ, ಈ ಜಗತ್ತಿನ ಹಿಂದೆ ಇರುವ ಜಗನ್ನಿಯಾಮಕನಾದ, ಜಗತ್ಕರ್ತನಾದ 'ಅದಃ' ಅಂದರೆ ಆತನು, ಪರಮಾತ್ಮನು; ಆತನೂ ಪೂರ್ಣನೇ; ಊನರಹಿತನು. ಪೂರ್ಣನಾದ ಪರಮಾತ್ಮನಿಂದ ಪೂರ್ಣ ಜಗತ್ತು ಉದ್ಭವಿಸಿತು. ಪೂರ್ಣ ಪರಮಾತ್ಮನಿಂದ ಪೂರ್ಣ ಜಗತ್ತು ಉದ್ಭವವಾದರೂ, ಆತನ ಪೂರ್ಣತೆಗೆ ಕುಂದು ತರಲಿಲ್ಲ; ಆದರೂ ಆತನು ಪೂರ್ಣನೇ. ಹೀಗೆ ೨ ವಸ್ತುಗಳು. ಒಂದು ಜಗತ್ತು; ಎರಡನೇದು ಪರಮಾತ್ಮನು. ಈ ಎರಡೂ ವಸ್ತುಗಳನ್ನು ನೋಡುವ, ಆ ಎರಡೂ ವಸ್ತುಗಳೊಳಗಿನ ಸಂಬಂಧಗಳನ್ನು ಗ್ರಹಿಸುವ

ಮೂರನೇ ವಸ್ತುವಿದೆ 'ಅದ್ಯಾರು' ನಾವು ನಮ್ಮ ಜೀವವು ಹೀಗೆ ಮೂರು ವಸ್ತುಗಳು. ಈ ಮೂರು ವಸ್ತುಗಳೂ ಅನ್ಯೋನ್ಯವಾಗಿರುವವು. ಈ ಅನ್ಯೋನ್ಯ ಸಂಬಂಧವನ್ನು ತಿಳಕೊಂಡು ನಡಕೊಳ್ಳುವದು ಧರ್ಮವು. ಆ ನ್ಯೋನ್ಯ ಸಂಬಂಧಕ್ಕೆ ಸಂಬಂಧಿಸಿದ ಸಮಸ್ತ ಕೃತ್ಯಗಳಿಗೆ ಸಾಮುದಾಯಿಕ ಹೆಸರು ಧರ್ಮವು. ಈ ಕೃತ್ಯಗಳ ಧೋರಣವು ನೀತಿಯು. ನಮ್ಮ ಧರ್ಮವು ಬಹಳ ಪ್ರಾಚೀನ ಕಾಲದ್ದು. ಅದು ಶ್ರುತಿ ಸ್ಮೃತಿ, ಪುರಾಣ ಇತಿಹಾಸಗಳಲ್ಲಿ ಗ್ರಥಿತವಾಗಿದೆ. ಶ್ರುತಿಗಳಲ್ಲಿ ಶಾಶ್ವತವಾದ ಜ್ಞಾನವು ತುಂಬಿಕೊಂಡಿದೆ. ಈ ಗ್ರಂಥಗಳನ್ನು ಯಾರು ಮಾಡಿದರೆಂಬುದು ತಿಳಿಯುವದಿಲ್ಲ. ಈ ಗ್ರಂಥಗಳೊಳಗಿಂದ ಕೆಲವು ಕಾಲೋಚಿತ ಜ್ಞಾನವನ್ನು ಸಂಗ್ರಹಿಸಿ ಸ್ಮೃತಿ ಗ್ರಂಥಗಳಲ್ಲಿ ಹೇಳಿರುವರು. ನೆನಪು ಇಟ್ಟು ಕಾಲೋಚಿತ ಧರ್ಮಾಚರಣೆ ಮಾಡುವದಕ್ಕಾಗಿ ಈ ಗ್ರಂಥಗಳ ರಚನೆಯಾಗಿದೆ. ಪುರಾಣ-ಇತಿಹಾಸಗಳಲ್ಲಿ ಶ್ರುತಿಯೊಳಗಿನ ಜ್ಞಾನವು ಕಥಾರೂಪದಿಂದ ನಿವೇದಿಸಲ್ಪಟ್ಟಿದೆ. ಈ ನಾಲ್ಕು ಗ್ರಂಥಗಳನ್ನು ಪರಿಶೀಲಿಸಲು ಅನುಕೂಲವಿಲ್ಲದವರಿಗಾಗಿ ಭಗವದ್ಗೀತೆಯು ರಚಿತವಾಗಿದೆ. ಇದರೊಳಗೆ ೭೦೦ ಶ್ಲೋಕಗಳಿವೆ. ಅವನ್ನು ಸಾಮಾನ್ಯರು ಪಠಿಸಬಹುದು. ಹಿಂದೂ ಧರ್ಮದ ೪ ಗ್ರಂಥಗಳ ವಿವರಣೆಯಾಯಿತು.

ಇನ್ನು ಧರ್ಮಾಚರಣೆಕ್ಕಾಗಿ ವಿಧಿಸಿದ ನಿಯಮಗಳ ವಿಚಾರ ಮಾಡುವಾ. ಪುರುಷಾರ್ಥಗಳು ೪. ಧರ್ಮಗ್ರಂಥಗಳು ೪. ಅದರಂತೆ ಪುರುಷಾರ್ಥ ಸಾಧನಕ್ಕಾಗಿ ವಿಂಗಡಿಸಿದ ವರ್ಣಗಳೂ ೪. ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ. ಜನ್ಮನಾ ಜಾಯತೇ ಶೂದ್ರಃ ಹಿಂದೂ ಧರ್ಮದಲ್ಲಿ ಜನ್ಮದಿಂದ ಎಲ್ಲರೂ ಶೂದ್ರರೇ. ಜನ್ಮದಿಂದ ವರ್ಣವು ನಿಶ್ಚಯವಾಗುವದಿಲ್ಲ. ಹಿಂದೂ ಧರ್ಮದಲ್ಲಿ ವರ್ಣಭೇದವಿಲ್ಲ. ತಕ್ಕ ಸಂಸ್ಕಾರ ಪಡೆದು ಒಂದು ವರ್ಣದವರು ಇನ್ನೊಂದು ವರ್ಣದಲ್ಲಿ ಸೇರಬಹುದು. ಸಂಸ್ಕಾರೇಣ ದ್ವಿಜೋತ್ತಮಃ "ವೇದಾಭ್ಯಾಸೇ ಭವೇದ್ವಿಪ್ರಃ" ಇತ್ಯಾದಿ ವಚನಗಳೂ ಬ್ರಹ್ಮಸಾಕ್ಷಾತ್ಕಾರವಾದ ಬಳಿಕ, ಬ್ರಾಹ್ಮಣನಾಗುತ್ತಾನೆಂಬುದೂ ಈ ಅನುಮಾನವನ್ನು ದೃಢಪಡಿಸುತ್ತವೆ. ಪ್ರವೃತ್ತಿಯಿಂದ ವರ್ಣಗಳ ನಿಶ್ಚಯವಾಗುತ್ತಿತ್ತು. ಶಮ ದಮ ತಪಾದಿಗಳ ಸಂಗ್ರಹದಿಂದ ಬ್ರಾಹ್ಮಣರೂ, ಶಿಷ್ಟಪಾಲನ ದುಷ್ಟದಮನ ಮಾಡಿ ಸೃಷ್ಟಿಯನ್ನು ಪಾಲಿಸುವವರು ಕ್ಷತ್ರಿಯರೂ, ಕೃಷಿ ವಾಣಿಜ್ಯಗಳಿಂದ ಸರ್ವರನ್ನೂ ಪೋಷಿಸುವವರು ವೈಶ್ಯರೂ, ಸೇವಾವೃತ್ತಿಯಿಂದ ಶೂದ್ರರೂ ಎಂದು ಆ ಕಾಲದಲ್ಲಿ ತಿಳುವಳಿಕೆಯಾಗಿತ್ತು. ಪ್ರಪಂಚದಲ್ಲಿ ಕೂಡ ನಾಲ್ಕು ಭಾಗಗಳಿವೆ. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ. ಬ್ರಹ್ಮಚರ್ಯದಲ್ಲಿ ಕಲಿಕೆ ಕಲಿತು ಜ್ಞಾನಾರ್ಜನ ಮಾಡಬೇಕು, ಗೃಹಸ್ಥಾಶ್ರಮದಲ್ಲಿ ವಿವಾಹ ಮಾಡಿಕೊಂಡು ಪ್ರಜೋತ್ಪತ್ತಿಯಾದ ಬಳಿಕ, ಪ್ರಪಂಚದಿಂದ ದೂರಸರಿದು, ವಾನಪ್ರಸ್ಥಾಶ್ರಮವನ್ನು ಕೈಕೊಳ್ಳಬೇಕು. ಬಳಿಕ, ಸನ್ಯಾಸವನ್ನು ಕೈಕೊಂಡು ಪರಮಾತ್ಮನಲ್ಲಿ ಲೀನನಾಗಬೇಕು. ಈಗ ನಮ್ಮ ಧರ್ಮದ ಹ್ರಾಸವಾಗಹತ್ತಿದೆ. ನಾವು ಗೊತ್ತಿಲ್ಲದೆ ಧರ್ಮಚ್ಯುತರಾಗಿದ್ದೇವೆ. ನಮಗೆ ಕಲಿಸುವ ಇತಿಹಾಸ ಪಾಠಗಳು ನಮ್ಮ ಸನಾತನ ಧರ್ಮತತ್ವಗಳನ್ನಾಗಲೀ, ಧರ್ಮಾಚಾರವನ್ನಾಗಲೀ ಬೋಧಿಸುವದಿಲ್ಲ. ನಮ್ಮ ಇತಿಹಾಸ ಪಾಠಗಳು ಬ್ರಿಟಿಶ ಆಮದಾನಿಯಿಂದ ಪ್ರಾರಂಭವಾಗುತ್ತವೆ. ಹೆಚ್ಚೆಂದರೆ, ಬ್ರಿಟಿಶ ರಾಜ್ಯಸ್ಥಾಪನೆಗಾಗಿ ಕೈಕೊಂಡ ಸಮರಗಳ ಹಕೀಕತು ಕೊಡಲ್ಪಡುತ್ತವೆ. ಇದನ್ನು ಹೇಳುವಾಗ, ಶ್ರೀ ಸ್ವಾಮಿಯವರು ಒಂದು ನೋರೆಕಾಯಿಯ ಉದಾಹರಣೆ ಕೊಟ್ಟರು. ನೋರೆಕಾಯಿಯನ್ನು ತಿನ್ನಬಯಸುವ ಮಾನವರೇನು ಮಾಡುತ್ತಾರೆ? ಮೊಟ್ಟಮೊದಲು, ದಂಟು ಕೊಯ್ಯುತ್ತಾರೆ, ಅಂದರೆ, ಫಲಕ್ಕೆ ಫಲಪೋಷಣೆ ಮಾಡುವ ಬಳ್ಳಿಗೂ ಇರುವ ರಕ್ತಸಂಬಂಧವನ್ನು ಕಡಿದುಹಾಕುವದು. ಬಳಿಕ, ಅದನ್ನು ಕಾಪಾಡಿಕೊಂಡಿರುವ ತೊಗಟೆಯನ್ನು ಸವರುವದು. ಬಳಿಕ, ಸಣ್ಣಾಗಿ ಕೊಚ್ಚಿ, ಕುದಿಸಿ ತಿನ್ನುವದು; ಈ ಕ್ರಮವು ಈಗ ನಡೆದಿದೆ. ಮ್ಯುನಿಸಿಪಾಲಿಟಿಗಳಿಂದ ನಾವು ಕೊಚ್ಚಲ್ಪಡುತ್ತೇವೆ. ಪಕ್ಷಭೇದಗಳಿಲ್ಲದ ಮ್ಯುನಿಸಿಪಾಲಿಟಿಯಿಲ್ಲ. ಧರ್ಮವನ್ನು ಸನಾತನಿಗಳು ಆಚರಿಸಬೇಕೆಂದು ನಿಶ್ಚಯವು. ಬ್ರಾಹ್ಮಮುಹೂರ್ತದ ಸಮಯ, ಊಟದ ಸಮಯ, ೨ ಶ್ಲೋಕಗಳನ್ನು ಉಚ್ಚರಿಸಬೇಕೆಂದು ವಿಧಿಸೋಣಾಗಿದೆ. ಆ ಶ್ಲೋಕಗಳು ಗೀತೆಯೊಳಗಿನವು. ಮಾನವನಿಗೆ ಎಷ್ಟು ತೊಂದರೆಗಳಿದ್ದರೂ, ಆತನು ಊಟಮಾಡದೆ ಇರಲಾರನು; ಊಟದ ಸಮಯವನ್ನಾದರೂ ಪರಮಾತ್ಮನ ಸ್ಮರಣೆಯಾಗಲೆಂದು ಕಲ್ಪನೆ. ಆಯಾಯವರಿಗೆ ಆಯಾಯವರ ಧರ್ಮವು ಶ್ರೇಷ್ಠ. "ಸ್ವಧರ್ಮೇ ನಿಧನಂ ಶ್ರೇಯಃ" ಎಂಬ ವಚನದಿಂದ ಪ್ರತಿಯೊಬ್ಬರು ತಮ್ಮ ತಮ್ಮ ಪ್ರವೃತ್ತಿಯಂತೆ ಧರ್ಮಾಚರಣೆ ಮಾಡಿದರೆ, ಆತನಿಗೆ ಮೋಕ್ಷವು ತಪ್ಪದೆ ಲಭಿಸುವದು. ಕನ್ಯಾಕುಮಾರಿಯಿಂದ ಇಲ್ಲಿಯವರೆಗೆ ನನ್ನ ತಿರುಗಾಟವಾಯಿತು. ಪ್ರತಿಯೊಂದು ಕಡೆಯಲ್ಲಿಯೂ, ಸ್ವಜ್ಞಾತಿ ಇದ್ದಲ್ಲಿ ದೇವಸ್ಥಾನಗಳನ್ನು ನೋಡಿದೆನು. ೫ ಮನೆಗಳಿದ್ದಲ್ಲಿಯೂ ಒಂದು ದೇವಸ್ಥಾನವಿದೆ. ದೇವಸ್ಥಾನಗಳು ವಿಶೇಷ ಹಣ ಖರ್ಚು ಮಾಡಿ ಕಟ್ಟಿದಂಥವು. ಅವುಗಳಲ್ಲೀಗ ಅಮೃತಪಡಿ, ನಂದಾದೀಪಗಳನ್ನಿಟ್ಟು ನಡಿಸುವವರು ವಿರಳರು. ಈ ಪುರಾತನ ದೇವಾಲಯಗಳನ್ನು ನೋಡಿ, ಎರಡು ಸಂಗತಿಗಳು ಗೋಚರವಾಗುತ್ತವೆ. ಆ ಕಾಲದ ಜನರು ಭಕ್ತಿಪೂರ್ಣರಾಗಿದ್ದರು, ಹಾಗು ಸಮೃದ್ಧರಿದ್ದರು. ಈಗ ಭಕ್ತಿಯಿಲ್ಲ, ಸಮೃದ್ಧಿಯಿಲ್ಲ. ಧರ್ಮವಿಲ್ಲದ್ದರಿಂದ, ಭಕ್ತಿಯಿಲ್ಲದ್ದರಿಂದ, ನಾವು ಧರ್ಮಚ್ಯುತರಾದ್ದರಿಂದ ನಮ್ಮ ಗತಿಯು ಕೆಟ್ಟಿದೆ. ಸ್ತ್ರೀಯರು ನಮ್ಮ ಸಮಾಜದಲ್ಲಿ ಭಕ್ತಿವಂತರು. ಅವರೂ ಈಗ ಶಾಲೆಗೆ ಹೋಗಿ ಭಕ್ತಿರಹಿತರಾಗುತ್ತಿರುವರು. ಪ್ರಪಂಚದಲ್ಲಿ ೫ ಮಿನಿಟುಗಳಾದರೂ ಪರಮಾತ್ಮನ ಧ್ಯಾನ ಮಾಡಿದರೆ, ಪರಮಾತ್ಮನು ನಿಮಗೆ ಪ್ರಸನ್ನನಾಗುವನು. ಶ್ರೀ ಸ್ವಾಮಿಯವರು ನಾರದನ ಕಥೆಯೊಂದು ಹೇಳಿದರು. ಒಂದಾನೊಂದು ದಿನ ನಾರದ ಮುನಿಯು ಪರಮಾತ್ಮನಿಗೆ ನುಡಿದದ್ದೇನಂದರೆ:—"ನನಗಿಂತ ಶ್ರೇಷ್ಠ ಭಕ್ತನು ಬೇರೊಬ್ಬ ನಿರುವನೇನು?" ಪರಮಾತ್ಮನು, 'ಇರುವನು,' ಎಂದು ನುಡಿಯಲು 'ಯಾರವನು?' ಎಂದು ಮುನಿಶ್ರೇಷ್ಠನು ಪ್ರಶ್ನಿಸಿದಾಗ ಪರಮಾತ್ಮನು ನಾರದನಿಗೆ ಭೂಲೋಕದ ದೇಶಕ್ಕೆ ಕಳಿಸಿದನು. ಅಲ್ಲಿ ಒಬ್ಬ ಒಕ್ಕಲಿಗನು ನಸುಕು ಹರಿಯುವದರೊಳಗೆ ಎದ್ದು ಕೃಷಿಕರ್ಮವನ್ನು ಮಾಡಿ, ಸಾಯಂಕಾಲ ಮನೆಗೆ ಬಂದು ಜಳಕ ಮಾಡಿ ಅನ್ನ ಉಂಡು ಮಲಗುವಾಗ, 'ದೇವರೇ!' ಎಂದು ಉದ್ಗರಿಸಿ, ಮಲಗುತ್ತಿದ್ದನು. ಇದನ್ನು ನೋಡಿ, ಮುನಿಯನಿಗೆ ಚಮತ್ಕಾರವೆನಿಸಿತು. ಕೂಡಲೆ, ಪರಮಾತ್ಮನಿದ್ದಲ್ಲಿಗೆ ಹೋಗಿ, "ಏನು ಈ ಚೇಷ್ಟೆ ಮಾಡುತ್ತೀರಿ? ಒಮ್ಮೆ ಆತನು ನಿಮ್ಮ ಸ್ಮರಣ ಮಾಡುತ್ತಾನೆ; ನಾನು ಹಗಲಿರುಳು ನಿಮ್ಮ ಕೀರ್ತನೆ ಮಾಡುತ್ತೇನೆ." "ಇಷ್ಟೇಯೋ! ಇರಲಿ," ಎಂದು ಪರಮಾತ್ಮನು ಉದ್ಗರಿಸಿ, ನಾರದನ ಕೈಯಲ್ಲಿ ಎಣ್ಣೆ ತುಂಬಿದ ಒಂದು ಪಾತ್ರೆಯನ್ನು ಕೊಟ್ಟನು. ಸ್ವಲ್ಪ ಕದಲಿದರೆ, ಎಣ್ಣೆ ಬೀಳುವಷ್ಟು ಆ ಪಾತ್ರೆಯು ಎಣ್ಣೆಯಿಂದ ತುಂಬಿತ್ತು. ಪರಮಾತ್ಮನು ಅದನ್ನು ನಾರದನ ಅಂಗೈಮೇಲಿಟ್ಟು, ಎಣ್ಣೆ ಚೆಲ್ಲದಂತೆ ೩ ಪ್ರದಕ್ಷಿಣೆ ತೆಗೆಯ ಹೇಳಿದನು. ಮುನಿಶ್ರೇಷ್ಠನು ಪಾತ್ರೆಯ ಮೇಲೆಯೇ ಲಕ್ಷ್ಯಕೊಟ್ಟು, ಬಹು ಪ್ರಯಾಸದಿಂದ ೩ ಪ್ರದಕ್ಷಿಣೆಗಳನ್ನು ತೆಗೆದು, ನಿಟ್ಟುಸಿರು ಬಿಟ್ಟು ಪಾತ್ರೆಯನ್ನು ಕೆಳಕ್ಕಿರಿಸಿದನು. ಆಗ ಪರಮಾತ್ಮನು ಮುನಿಶ್ರೇಷ್ಠನಿಗೆ ಪ್ರಶ್ನಿಸಿದ್ದೇನಂದರೆ:— "ನೀವು ಪ್ರದಕ್ಷಿಣೆಗಳನ್ನು ತೆಗೆದಿರುವಿರಿ. ಈ ಸಮಯ ಎಷ್ಟು ಸಲ ನನ್ನ ಸ್ಮರಣೆ ಮಾಡಿದಿರಿ?" ಇದನ್ನು ಕೇಳಿ ಮುನಿಶ್ರೇಷ್ಠನು ಬೆಪ್ಪಾದನು! ತನ್ನ ಲಕ್ಷ್ಯವೆಲ್ಲ ಎಣ್ಣೆ ತುಂಬಿದ ಪಾತ್ರೆಯ ಮೇಲಿತ್ತೆಂದೂ, ಸ್ಮರಣೆ ಮಾಡಲು ಅನುಕೂಲವಾಗಲಿಲ್ಲೆಂದೂ ಹೇಳಿದನು. ಆಗ ಪರಮಾತ್ಮನು ಹೇಳಿದ್ದೇನಂದರೆ:-ಪ್ರಪಂಚದಲ್ಲಿ ಇದಕ್ಕಿಂತ ಹೆಚ್ಚು ಕಷ್ಟಗಳಿವೆ. ಅವನ್ನೆಲ್ಲ ನೀಗಿಸಿ, ಭಕ್ತಿಯಿಂದ ನನ್ನ ಸ್ಮರಣೆ ಮಾಡುವವನು ಭಕ್ತಶ್ರೇಷ್ಠನು. ಇತ್ಯಾದಿ ಶ್ರೀ ಸ್ವಾಮಿಯವರು ಬೋಧಿಸಿ, ವಿದ್ಯಾರ್ಥಿಗಳಿಗೆ ನಾಲ್ಕು ಮಾತು ಹೇಳಿದರು. ಬಳಿಕ, ಶ್ರೀ ಸ್ವಾಮಿಯವರು ಇಲ್ಲಿಯ ದೇವಾಲಯಗಳನ್ನು ಸಂದರ್ಶಿಸಿದರು. ಶ್ರೀ ಸ್ವಾಮಿಯವರು ಮಾರನೇದಿನ ಗೋಕರ್ಣಕ್ಕೆ ತೆರಳಿದರು.

ಹೊನ್ನಾವರ— ಚಳಿ ಬೀಳುತ್ತದೆ. ಮ್ಯ... ನೆಯು ಕಡಿಮೆಯಾಗಲಿಲ್ಲ.

ಇಲ್ಲಿಯ ಮಾಮಲೇದಾರ ಮಿ| ಕಾಮತ ಇವರು ... ಕೊಯಿಮುತ್ತೂರದವರಿಗೆ ಚಾರ್ಜ ವಹಿಸಿರುವರು; ... ಎಲ್. ಟಿ. ಕರ್ಕೇರಿಯವರಿಗೆ ಇಲ್ಲಿ ನೇಮಿಸಿರು... ಶಾಂತಿ ಬಂದಿರುತ್ತದೆಂಬ ಸುದ್ದಿ. ಇದು ಯಾವ ನಮ್ಮ... ಅಗಾರದಗಿ—! ಮಾಮ್ಲೇದಾರ ಮಿ| ಕಾಮತರು ಇಂದು ತಾ. ೨೫ ಕ್ಕೆ ಇಲ್ಲಿಂದ ಹೋಗುವಾಗ... ಬೆಂಡವಾದ್ಯದೊಡನೆ ಸಕ್ಕರೆ ಅಲ್ಲಲ್ಲಿ ಹಂಚುತ್ತ ಪ್ರ... ಬೆಳಿಸಿದರು. ಇವರಿಗೆ ಅಲ್ಲಲ್ಲಿ ಟಿಫಿನ್-ಪೋಷಾಕು... ದವು.

ವೃತ್ತಸಾರ.

— ಬ್ರಿಟನದಲ್ಲಿ ಉತ್ತರ ದಿಕ್ಕಿನಿಂದ ಬಂದ ಪ್ರ... ಸುರಿಗಾಳಿ ಎದ್ದು ಹೇಳಲಾರದಷ್ಟು ನಷ್ಟ. ಭಯ... ಹಿಮ ಬಿತ್ತು. ಬೆಳೆಗಳು ಹೇರಳವಾಗಿ ಒಡೆ... ಮರೆಯಾಗಿವೆ. ಲಂಡನ ಪಟ್ಟಣದಲ್ಲಿ ಭಯಂಕರ ... ವೇಳ್ಪದಲ್ಲಿ ನೂರಾರು ಕಾರುಗಳು ನಿಧನ ಹೊಂದಿ... ಅನೇಕರು ಹಿಮ-ಚಳಿಯಿಂದ ಸತ್ತುಹೋದರು.

— ಶಾಂಘಾಯಿಯಿಂದ ಟೆಂಟಸೀನ ಬಂದರಕ್ಕೆ ಹೋ... ವ ಹಡಗದ ಮೇಲೆ ಪ್ರಯಾಣಿಕರ ವೇಷ ಹಾಕಿಕೊಂ... ಸಮುದ್ರಗಳ್ಳರು ಹತ್ತಿ, 'ಬೇಸ' ಎಂಬ ತಮ್ಮ ದ್ವೀ... ದರ್ಶನವಾದ ಕೂಡಲೆ, ನಿಜರೂಪವನ್ನು ಧರಿಸಿ, ... ಭಾರಿಯಾಗಿ ಹಡಗದ ಕಪ್ತಾನನನ್ನು ಗುಂಡುಹಾಕಿ, ಸಾ... ನುಗಳನ್ನೂ, ಚಿನ್ನವನ್ನೂ ಒಯ್ದು ಪಲಾಯನ ಮಾ... ರು.

— ಲಾಹೋರಿನ "ವಂದೇ ಮಾತರಮ್" ಪತ್ರಿಕೆ... ಅಲ್ಲಿಯ ಡೆಪ್ಯುಟಿ ಕಮಿಶನರ ಕುರಿತು ಬರೆದ ... ನಷ್ಟದ ಲೇಖದ ಬಗ್ಗೆ ದಾವೆಯಾಗಿತ್ತು. ಮೂಲಕೋ... ನವರು ರೂಪಾಯಿ ೧೦೦ ಕೊಡಬೇಕೆಂದಿದ್ದರು; ... ಕೋರ್ಟಿನ ಇಬ್ಬರು ನ್ಯಾಯಾಧೀಶರೊಳಗೆ ಮತಭೇ... ಯಿತು. ಒಬ್ಬರು ಮೂಲ ಕೋರ್ಟಿನ ತೀರ್ಪನ್ನೇ ... ದರು. ಇನ್ನೊಬ್ಬರು ರೂಪಾಯಿ ೧೦೦೦೦ ಕೊಡಬೇಕೆಂ... ೧೦೦೦೦ ರೂಪಾಯಿ ಕೊಡಬೇಕೆಂದು ವಿಧಿಸಿದ ನ್ಯಾಯ... ಕರು ಹಿರಿಯರಿದ್ದ ಕೋರ್ಟು ೧೦೦೦೦ ರೂಪಾಯಿಗಳ ಡಿಕ್ರಿ... ತು. 'ವಂದೇ ಮಾತರಮ್' ಪತ್ರಿಕೆಯವರು ಅ... ಮಾಡಲು, ರೂಪಾಯಿ ೧೦೦ ಕೊಡಿಸಿ ಈ ಪ್ರಕರಣದ ... ಯ ನಿರ್ಣಯ ಕೊಟ್ಟರು. ಇಷ್ಟೆಲ್ಲ ಬಡಿದಾಟದಿಂದ... ಕನವರಿಗೆ ಸಿಕ್ಕದ್ದು ಬರೇ ರೂಪಾಯಿ ೧೦೦! ... ಎಷ್ಟು ೧೦೦ ರೂಪಾಯಿ ಖರ್ಚಾದವೋ ಏನೋ!"

— ಲಾಹೋರಿನ ಸಬಜಡ್ಜರಾದ ಮ್ಹಾತ್ರೆ ಅವ್ವ... ಮಾಡಿದವರಿಗೆ ಸಾಲ ಬಹಳ. ಪ್ರತಿ ತಿಂಗಳಿಗೆ ... ಸಂಬಳವು ಜಪ್ತಾಗುತ್ತಿತ್ತು. ಈ ಕುರಿತು ಪಂ... ಸರಕಾರವು ಚೌಕಶಿ ನಡಿಸಿ ಅವರನ್ನು ಪದಚ್ಯುತ ... ದೆ

— ಈ ವರುಷ ಸಕ್ಕರೆಯ ಬೆಳೆಯು ೧೦ ಲಕ್ಷ ... ಹೆಚ್ಚು ಉತ್ಪನ್ನವಾಗಿದೆ. ಚಹ ಕುಡಿಯುವದು ... ಯು ಅಗ್ಗವಾದರೆ, ಚಹ ಕಪ್ಪಿನ ಬೆಲೆಯು ಅಷ್ಟೇ ... ದು. ಈ ವರ್ಷ ಸಕ್ಕರೆ ಬೆಳೆ ೨ ಕೋಟಿ, ೪೫ ... ಟನ್ನು

— ಮದ್ರಾಸ ಮ್ಯುನಿಸಿಪಾಲಿಟಿಯವರು ಬೀದಿ ಹಾ... ಲಾಟ ಹಾಗು ಗುಡಿಗಗಳನ್ನು ಪೂರೈಸುವದಕ್ಕಾಗಿ ... ರೂಪಾಯಿಗಳನ್ನು ಮಂಜೂರು ಮಾಡಿರುವರು. ... ಧೋತರ ಕೊಡಬೇಕೆಂದು ಠರಾವಾಗಿದೆ.

— ಮುಂಬಯಿಯ ಪ್ರಸಿದ್ಧ ಸಾಮ್ಯವಾದಿ ಶ್ರೀ ... ತ್ರ ಮುರಾರಜಿಯವರು ಪುಣೆಯಿಂದ ಮುಂಬ... ಹೋಗುವಾಗ, ಅವರ ಡಬ್ಬದಲ್ಲಿ ಕೂಡ ಜೆಂಟಲ... ಮೆನ್ಸರು ಸೇರಿ ಬಹಳ ಅಪಮಾನ ಮಾಡಿದರು ... ದೆ ಅವರ ವಿಚಾರಣೆಯು ಲಷ್ಕರ ಖಾತೆಯಿಂದ ... ಯಾಗುತ್ತಿದೆ

ಪುರವಣಿ, ಕಾನಡಾವೃತ್ತ—ಸೋಮವಾರ ತಾರೀಖು ೨೮ ನೆಯ ಡಿಸೆಂಬರ ಸನ್ ೧೯೩೬ ನೇ ಇಸವಿ.

ನಯುಪಿಟ್ಟು ಇದರ ಸಂಗಡ ಕಳುಹಿಸಿರುವ ಕಾಗದಗಳನ್ನು ಬೇರೆಯವರಿಗೆ ಕೊಡಬೇಕು. ಹರಿದು ಹಾಕಬಾರದು.

ಗುಳಿಗೆಗಳು ಜಗತ್ಪ್ರಸಿದ್ಧ! ಜಗದೀಶನು ಎಲ್ಲರಿಗೂ ಸುಖಕೊಡಲಿ!!! ನಮ್ಮ ಕಂಪ್ನಿಯ [illegible] ಬಹು ಗುಣಕಾರಿ!!

...ಂವ, ಮುಂಬಯಿ.

ಶ್ರೀ ರಾಮಚಂದ್ರ ಕರ್ಕಿ ಮತ್ತು ಕಂಪ್ನಿ

೧೮೯೧ನೇ ಇಸವಿಯಲ್ಲಿ ಸ್ಥಾಪನೆಯಾದದ್ದು

ಜಗಪ್ರಸಿದ್ಧ ಜ್ವರದ ಗುಳಿಗೆಗಳು, ಅನೇಕ ಪ್ರಕಾರದ ಜ್ವರಗಳಮೇಲೆ, ಬಹುಗುಣಕಾರಿ, ಜ್ವರಕ್ಕೆ ಸಂಜೀವನಿ, ಲಕ್ಷಗಟ್ಲೆ ಬಾಟ್ಲಿಗಳು ಖರ್ಚಾದವು !

...ನೇಕ ಜಗಪ್ರಸಿದ್ಧ ಡಾಕ್ಟರರು ಸರ್ಟಿಫಿಕೇಟು ಕೊಟ್ಟಿರುತ್ತಾರೆ!

...ರ ಕೆ. ಎಸ್. ಇಂಜಿನಿಯರ, ಎಲ್. ಎಮ್. ಎಸ್. (ಮುಂಬಯಿ) ಎಫ್. ಸೀ ಎಸ್. (ಲಂಡನ) ಅಸಿಸ್ಟಂಟ ಸರ್ಜನ್, ... ಎಮ್. ಎಸ್. ಆರ್. ಎಲ್.— ಕರ್ನಾಟಕದೊಳಗೆ ಕಾರವಾರ ಎಂಬುವಲ್ಲಿ ನಾನು ಸಿವ್ಹಿಲ್ ಸರ್ಜನ್ ಇರುವಾಗ ಕರ್ಕಿ ಮತ್ತು ಕಂ...ದ ಗುಳಿಗೆಗಳನ್ನು ಕಾರವಾರ ಜಿಲ್ಹೆಯಲ್ಲಿ ವ್ಯಾಪಿಸಿರುವ ಅನೇಕ ಪ್ರಕಾರದ ಜ್ವರಗಳ ಮೇಲೆ (ಛಳಿಜ್ವರ, ಕೆಟ್ಟ ಹವೆಯ ಜ್ವರ ಮುಂತಾ...) ಜನರಿಗೆ ಕೊಟ್ಟಿರುತ್ತೇನೆ. ಹಾಗೂ ಈ ಗುಳಿಗೆಗಳು ಬಹಳೇ ಗುಣಕಾರಿ ಎಂತ ನನ್ನ ಅನುಭವದಿಂದ ಕಂಡುಬಂತು. ಈ ಗುಳಿಗೆಗಳಲ್ಲಿ... ನನಗೆ ಗೊತ್ತಿವೆ. ಮತ್ತು ಅವು ಬಹಳೇ ವಿಶ್ವಸನೀಯವಾಗಿರುತ್ತವೆ

ಜನವರಿ	ಫೇಬ್ರುವರಿ	ಮಾರ್ಚ	ಎಪ್ರಿಲ
. ೩ ೧೦ ೧೭ ೨೪ ೩೧	ರ. … ೭ ೧೪ ೨೧ ೨೮	ರ. … ೭ ೧೪ ೨೧ ೨೮	ರ .. ೪ ೧೧ ೧೮ ೨೫
… ೪ ೧೧ ೧೮ ೨೫ …	ಸೋ. ೧ ೮ ೧೫ ೨೨ …	ಸೋ. ೧ ೮ ೧೫ ೨೨ ೨೯	ಸೋ. … ೫ ೧೨ ೧೯ ೨೬
… ೫ ೧೨ ೧೯ ೨೬ …	ಮಂ. ೨ ೯ ೧೬ ೨೩ …	ಮಂ. ೨ ೯ ೧೬ ೨೩ ೩೦	ಮಂ. ೬ ೧೩ ೨೦ ೨೭
.. ೬ ೧೩ ೨೦ ೨೭ ..	ಬು. ೩ ೧೦ ೧೭ ೨೪ …	ಬು. ೩ ೧೦ ೧೭ ೨೪ ೩೧	ಬು … ೭ ೧೪ ೨೧ ೨೮
… ೭ ೧೪ ೨೧ ೨೮ …	ಗು. ೪ ೧೧ ೧೮ ೨೫ …	ಗು. ೪ ೧೧ ೧೮ ೨೫ …	ಗು. ೧ ೮ ೧೫ ೨೨ ೨೯
೧ ೮ ೧೫ ೨೨ ೨೯ ..	ಶು. ೫ ೧೨ ೧೯ ೨೬ .	ಶು. ೫ ೧೨ ೧೯ ೨೬ …	ಶು. ೨ ೯ ೧೬ ೨೩ ೩೦
೨ ೯ ೧೬ ೨೩ ೩೦ ..	ಶ ೬ ೧೩ ೨೦ ೨೭ ..	ಶ. ೬ ೧೩ ೨೦ ೨೭ ..	ಶ. ೩ ೧೦ ೧೭ ೨೪ …

ಮೇ	ಜೂನ	ಜುಲಾಯಿ	ಅಗೋಸ್ತ
… ೨ ೯ ೧೬ ೨೩ ೩೦	ರ. . ೬ ೧೩ ೨೦ ೨೭	ರ … ೪ ೧೧ ೧೮ ೨೫	ರ. ೧ ೮ ೧೫ ೨೨ ೨೯
… ೩ ೧೦ ೧೭ ೨೪ ೩೧	ಸೋ. … ೭ ೧೪ ೨೧ ೨೮	ಸೋ. … ೫ ೧೨ ೧೯ ೨೬	ಸೋ. ೨ ೯ ೧೬ ೨೩ ೩೦
… ೪ ೧೧ ೧೮ ೨೫ …	ಮಂ. ೧ ೮ ೧೫ ೨೨ ೨೯	ಮಂ. … ೬ ೧೩ ೨೦ ೨೭	ಮಂ. ೩ ೧೦ ೧೭ ೨೪ ೩೧
.. ೫ ೧೨ ೧೯ ೨೬ …	ಬು. ೨ ೯ ೧೬ ೨೩ ೩೦	ಬು … ೭ ೧೪ ೨೧ ೨೮	ಬು ೪ ೧೧ ೧೮ ೨೫ …
… ೬ ೧೩ ೨೦ ೨೭ …	ಗು. ೩ ೧೦ ೧೭ ೨೪ …	ಗು ೧ ೮ ೧೫ ೨೨ ೨೯	ಗು. ೫ ೧೨ ೧೯ ೨೬ …
… ೭ ೧೪ ೨೧ ೨೮ ..	ಶು. ೪ ೧೧ ೧೮ ೨೫ …	ಶು. ೨ ೯ ೧೬ ೨೩ ೩೦	ಶು. ೬ ೧೩ ೨೦ ೨೭ …
೧ ೮ ೧೫ ೨೨ ೨೯ …	ಶ ೫ ೧೨ ೧೯ ೨೬ …	ಶ ೩ ೧೦ ೧೭ ೨೪ ೩೧	ಶ. ೭ ೧೪ ೨೧ ೨೮ …

ಸಪ್ಟಂಬರ	ಅಕ್ಟೋಬರ	ನವಂಬರ	ಡಿಸಂಬರ
.. ೫ ೧೨ ೧೯ ೨೬ …	ರ. ೩ ೧೦ ೧೭ ೨೪ ೩೧	ರ … ೭ ೧೪ ೨೧ ೨೮	ರ. … ೫ ೧೨ ೧೯ ೨೬
… ೬ ೧೩ ೨೦ ೨೭ …	ಸೋ. ೪ ೧೧ ೧೮ ೨೫ …	ಸೋ. ೧ ೮ ೧೫ ೨೨ ೨೯	ಸೋ. .. ೬ ೧೩ ೨೦ ೨೭
… ೭ ೧೪ ೨೧ ೨೮ …	ಮಂ ೫ ೧೨ ೧೯ ೨೬ …	ಮಂ. ೨ ೯ ೧೬ ೨೩ ೩೦	ಮಂ. … ೭ ೧೪ ೨೧ ೨೮
೧ ೮ ೧೫ ೨೨ ೨೯	ಬು. ೬ ೧೩ ೨೦ ೨೭	ಬು. ೩ ೧೦ ೧೭ ೨೪ …	ಬು. ೧ ೮ ೧೫ ೨೨ ೨೯
೨ ೯ ೧೬ ೨೩ ೩೦ …	ಗು. ೭ ೧೪ ೨೧ ೨೮ ..	ಗು ೪ ೧೧ ೧೮ ೨೫ …	ಗು ೨ ೯ ೧೬ ೨೩ ೩೦
೩ ೧೦ ೧೭ ೨೪ … …	ಶು. ೧ ೮ ೧೫ ೨೨ ೨೯ .	ಶು. ೫ ೧೨ ೧೯ ೨೬ …	ಶು. ೩ ೧೦ ೧೭ ೨೪ ೩೧
೪ ೧೧ ೧೮ ೨೫ … …	ಶ. ೨ ೯ ೧೬ ೨೩ ೩೦ …	ಶ. ೬ ೧೩ ೨೦ ೨೭ ..	ಶ ೪ ೧೧ ೧೮ ೨೫ [illegible]

ಸನ್ ೧೯೩೭ ಇಸವಿ

PRESS KUMTA ನಮ್ಮ ಜ್ವರಗಳ್ಳಯ ಗುಳಿಗೆಗಳಿಂದ ಅನೇಕ ಜನರು [illegible] ಗುಣಹೊಂದಿರುತ್ತಾರೆ!

...ದಲ್ಲವೆ, ಸಭಾಮಂಟ... ಪ್ರಗತಿಯೂ ಪದಲ್ಲಿ ಬೇಡಿದುವರ ಉಪನ್ಯಾಸವಾಗುವದಿತ್ತು ...

...ಪ ಮೇಲೆವಹಿಲೆಗಳು ಅರ್ಪಿಸೋಣವದ್ದು. ಮಹಾತ್ಮ ಗುಪಂತಿದೆ. ಪಂಜಾಬದಲ್ಲಿ ಕೊಡಿಸಿದ ನಿರ್ಧಿಯನ್ನು ಇಗಳ ಸುರಾಂಕದವನ್ನು ಮುಂದಿನ ಸಂಚಿಕೆಯಲ್ಲಿ ಕೊಡು...

...ಖರ್, ಖಸ್ ಸುಳು, ಸಾಕು ಹೇಳಬೇಕಾಯಿತು. ಪಂಜಾಬದೊಳಗೆ ಸರಕಾರಿ ಪಟ್ಟಿಕೆಗೆ ಕಾಣ್ತಾವವೆ ವಪು.

ಕೂಲಿಕಾರ ಪಕ್ಷದ ನಾಯಕರಾದ ಮಿ। ವೋಲ್ಸ ಹಾಗು ...ಕ್ಸನರವರು, ತಮಗೆ ಸರಕಾರವು ಅಧಿಕಾರವಿಲ್ಲದೆ ...ಹಿಡಿದು ಪ್ರತಿಬಂಧಿಸಿದ ಬಗ್ಗೆ ಬ್ರಿಟಿಶ ಸರಕಾರದ ...ಲೆ ೨೦-೩೦ ಸಾವಿರ ಪವನುಗಳ ಲುಕ್ಸಾನಭರ...ಯಿ ದಾವೆಗಳನ್ನು ದಾಖಲ ಮಾಡಿರುವರು. ಅವರ ...ಂಡಂದಿರು ೫-೫ ಸಾವಿರ ಪವನುಗಳ ದಾವೆ ಮಾಡಿರು...ರು. ಪ್ರತಿಬಂಧದಿಂದ ಗಂಡಂದಿರ ಅನುಕೂಲತೆಯು ...ಷ್ಟ ಲುಕ್ಸಾನಾಯಿತೆಂದು ಅವರ ಆಕ್ಷೇಪ.

— ಬಂಗಾಲದ ಪಬ್ಲಿಕ ಕಾನೂನಿನ ತುತ್ತಾದ ...ಶಸೇವಕರಿಗೆ ಸ್ವರಾಜ್ಯ ಸರಕಾರವು ಬಿಡುಗಡೆ ...ಡುವ ಆಲೋಚನೆಯಲ್ಲಿರುವದಾಗಿ ಪಾರ್ಲಿಮೆಂಟ ...ಲ್ಲಿ ಜಾಹೀರಾಗಿದೆ.

— ಪಂಜಾಬ ಕ್ಯಾಪೆ ಕೌನ್ಸಿಲಿನಲ್ಲಿ ಸ್ತ್ರೀಯರಿಗೆ ಮತದಾ...ದ ಅಧಿಕಾರವಿರಬೇಕೆಂಬ ಕಾನೂನು ಆಗುವದಿದೆ.

— ರೂಪಾಯಿಯ ಬೆಲೆಯು ೧ ಶಿಲಿಂಗ ೪ ಪೇನ್ಸ ಇದ್ದ...ು ೧ ಶಿಲಿಂಗ ೬ ಪೇನ್ಸ ಎಂತ ಸರಕಾರವು ಜಾಹೀರು ...ಡಿಸಿದೆ: ಪರದೇಶದ ಸಾಮಗ್ರಿಗಳ ಆಮದಿಗೆ ಅಷ್ಟು ...ನುಕೂಲವಾಯಿತು. ಪರದೇಶದ ಸಾಮಗ್ರಿಗಳ ಬೆಲೆ...ು ಅಷ್ಟರಿಂದ ಇಳಿಯುವದು।

— ಸೌಥ ಇಂಡಿಯನ್ ರೇಲ್ವೆಯ ಅಪಘಾತದ ಮೂಲ...ಕ ೯ ಮಂದಿಗಳು ಮಡಿದರು.

— ಬೆಝಂಟ ಅಮ್ಮನವರ ಕಲ್ಪನೆಯ "ಕೊಮನ್‌ವೆ...ಲ್ಥ ಆಫ್ ಇಂಡಿಯಾ ಬಿಲ್" ಎಂಬ ಸ್ವರಾಜ್ಯ ಕ್ಯಾಪೆಯು ...ಳೆದ ತಾ. ೧೮ನೇಗೆ ವಿಲಾಯತಿಯ ಪಾರ್ಲಿಮೆಂಟಿನಲ್ಲಿ ...ಸೂಚಿಸಲ್ಪಡುವದಿತ್ತು.

— ವಹಾಬಿಯವರು ಜೆದ್ದಾ ಪಟ್ಟಣವನ್ನು ಸ್ವಾಧೀನಪಡಿ...ಸಿಕೊಳ್ಳುವವರಿದ್ದಾರೆ.

— ಸೊಲ್ಲಾಪುರ ದಂಗೆಯ ಕುರಿತು 'ನವಾಕಾಳ' ಪತ್ರಿಕೆ...ಯಲ್ಲಿ ಪ್ರಕಟವಾದ ಹಕೀಕತಿನಿಂದ ಅಪಮಾನವಾಯಿ...ತೆಂದು ಸೊಲ್ಲಾಪುರದ ಪೋಲೀಸ ಸುಪರಿಂಟೆಂಡೆಂಟರು ...ಸಂಪಾದಕರ ಮೇಲೆ ಅಬ್ರುಲುಕ್ಸಾನಿಯ ಫಿರ್ಯಾದವನ್ನು ...ಮುಂಬಯಿಯ ಮೆಜಿಸ್ಟ್ರೇಟ ಕೋರ್ಟಿನಲ್ಲಿ ದಾಖಲಮಾ...ಡುವರು. ವಿಚಾರಣೆಯು ತಾರೀಖು ಜನವರಿ ೧೩ನೇದು.

ಕಾನಪುರದ ಸುದ್ದಿ !

ಈಗ ಕಾನಪುರದಲ್ಲಿ ರಾಷ್ಟ್ರೀಯ ಸಭೆಯು ಸಮಾರಂಭ...ದಿಂದ ನಡೆದಿದೆ. ಅಧ್ಯಕ್ಷರಾದ ಸೌ। ಸರೋಜಿನಿ ದೇವಿಯವ...ರು ಕಳೆದ ಬುಧವಾರ ತಾ. ೨೩ನೇ ಸಾಯಂಕಾಲಕ್ಕೆ ...ಕಾನಪುರಕ್ಕೆ ಮುಟ್ಟಿದರು. ಅದೇ ಬಂಡಿಯಲ್ಲಿ ಮಹಾತ್ಮ...ರೂ ಹೋಗಿದ್ದರು. ಅಧ್ಯಕ್ಷರಿಗೆ ಮುಂಬಯಿಯಿಂದ ಕಾನ...ಪುರದ ವರೆಗೆ ಸ್ಟೇಶನುಗಳಲ್ಲಿ ಸತ್ಕಾರವಾಯಿತು. ಕಾನಪು...ರದಲ್ಲಿ ಅಧ್ಯಕ್ಷರ ಮೆರವಣಿಗೆಯು ಬಹಳ ದೃಂಭಣೆ...ಯಿಂದ ನಡೆಯಿತು; ಮಹಾತ್ಮರಿಗೆ 'ಗಾಂಧಿಕಿ ಜಯ' ...ಘೋಷದಿಂದ ಜನಸಂದಣಿಯು ಸತ್ಕರಿಸಿತು. ಜನರು ...ಅತ್ಯುತ್ಸಾಹಿಗಳಾದ್ದರಿಂದ ಜನಸಂದಣಿಯನ್ನು ನಿಯಂತ್ರಿ...ಸುವದು ಕಠಿಣವಾಯಿತು. ಆದರಿಂದ ಮಹಾತ್ಮರು ಮಧ್ಯ...ದಲ್ಲಿಯೇ ಮೆರವಣಿಗೆಯನ್ನು ಬಿಟ್ಟು, ಬೇರೆ ದಾರಿಯಿಂದ ...ಹೋಗಬೇಕಾಯಿತು. ಖಿಲಾಫತ ಪರಿಷತ್ತಿನ ಅಧ್ಯಕ್ಷರಾದ ...ಡಾ॥ ಅಬ್ದುಲ್ ಕಲಮ ಆಝಾದರವರು ಇದೇ ಸಮ...ಯ ಕಲಕತ್ತೆಯಿಂದ ಬಂದು ಮುಟ್ಟಿದ್ದರಿಂದ ಅವರೂ ...ಮೆರವಣಿಗೆಯಲ್ಲಿ ಸೇರಿಕೊಂಡಿದ್ದರು. ಲಾಲಾ ಲಜಪತ...ರಾಯರು ಬುಧವಾರಕ್ಕೆ ಹೋಗಿ, ರಾಷ್ಟ್ರಧ್ವಜಾರೋಹ...ಣ ಸಮಾರಂಭವನ್ನು ಮಾಡಿದರು. ಖಾದಿಯ ಪ್ರದರ್ಶನ...ವನ್ನು ಮಹಾತ್ಮರು ಗುರುವಾರ ತೆರೆದರು. ಮಹಾತ್ಮರಿಗೆ ...ನೋಡಿ, ಜನರಿಗೆ ಬಹಳ ಆನಂದವಾಯಿತು. ಅದಾಗನಾ...ಟಿಗಳ ಮೇಲೆ ಮಾಲೆಗಳು ಅರ್ಪಿಸಲಾದವು. ಮಹಾತ್ಮ...ರು "ಬಸ್, ಬಸ್" ಸಾಕು, ಸಾಕು ಹೇಳಬೇಕಾಯಿತು.

ಪ್ರದರ್ಶನವನ್ನು ತೆರೆಯುವಾಗ, ಮಹಾತ್ಮರು ಖಾದಿಯ ಶ್ರೇಷ್ಠತೆಯನ್ನು ನಿಷ್ಠೆಯಿಂದ ಪ್ರತಿಪಾದಿಸಿದರು; ನನಗೆ ಖಾದಿಯ ಮೇಲೆ ಹತ್ತಿರ. ಕನಸು ಮನಸ್ಸಿನಲ್ಲಿಯೂ ಕೂಡ ನನಗೆ ಖಾದಿಯ ಧ್ಯಾಸವಾಗುತ್ತಿದೆ. ಪರದೇಶ ಅರಿವೆಯನ್ನೂ, ಗಿರಣಿ ಅರಿವೆಯನ್ನೂ ಪ್ರಜೆಗಳು ತ್ಯಜಿಸಿದರೆ, ೧ ವರುಷದಲ್ಲಿ ಸ್ವರಾಜ್ಯಪ್ರಾಪ್ತಿಯಾಗುವದೆಂದು ನಾನು ಇವೊತ್ತಿನ್ನು ಹೇಳುತ್ತೇನೆ. ಇಲ್ಲಿ ಈ ಮಂಡಪದಲ್ಲಿ ೩೦ ಪರಿಷತ್ತುಗಳು ಸೇರಲಿಕ್ಕಿವೆ. ಅನೇಕ ಪರಿಷತ್ತುಗಳಿಗೆ ಅಧ್ಯಕ್ಷರಾಗಲು ನನಗೆ ನಿಮಂತ್ರಣವಿತ್ತು; ನಾನು ಅವನ್ನೆಲ್ಲ ನಿರಾಕರಿಸಿ, ಇದನ್ನೊಂದು ಸ್ವೀಕರಿಸಿದ್ದೇನೆ. ಹಿಂದೂ-ಮುಸಲ್ಮಾನರ ಐಕ್ಯಕ್ಕಿಂತ ಖಾದಿಯೇ ನನಗೆ ಶ್ರೇಷ್ಠವಾದದ್ದು. ಖಾದಿಯ ಪ್ರಸಾರವಾದರೆ, ಹಿಂದೂ-ಮುಸಲ್ಮಾನರ ಐಕ್ಯಭಂಗವಾಗದೆಂದು ನನ್ನ ನಂಬಿಗೆಯಿದೆ. ೧೯೨೦ ನೇ ಇಸ್ವಿಯಲ್ಲಿ ಗಜ ೧೮ ೧೬ ಆಣೆಯಂತೆ ಖಾದಿಯನ್ನು ನಾನು ಮಾರಾಟ ಮಾಡಿರುವೆನು; ಈಗ ಚಲೋ ಖಾದಿಯು ೯ ಆಣೆಯಂತೆ ಸಿಗುತ್ತದೆ. ಜನರು ನಾನು ಹೇಳಿದಂತೆ ನಡಕೊಳ್ಳಲು ಸಿದ್ಧರಾದರು. ಅವರು ವಚನ ಪಾಲಿಸಲಿಲ್ಲ; ಆದರಿಂದ, ಅಪೇಕ್ಷೆಯಂತೆ, ವರ್ಷದಲ್ಲಿ ಸ್ವರಾಜ್ಯಪ್ರಾಪ್ತಿಯಾಗಲಿಲ್ಲ. ಈ ಹೊತ್ತಿಗೂ ನಾನು ಎದೆತಟ್ಟಿ ಹೇಳುವದೇನಂದರೆ:— ನೀವು ಪರದೇಶ ಹಾಗು ಸ್ವದೇಶ ಗಿರಣಿಗಳಲ್ಲಿ ತಯಾರಾಗುವ ಅರಿವೆಯನ್ನು ಬಹಿಷ್ಕರಿಸಿದರೆ, ನಿಶ್ಚಯವಾಗಿ ವರುಷ ಮುಗಿಯುವ ಮುಂಚೆಯೇ ಸ್ವರಾಜ್ಯಪ್ರಾಪ್ತಿಯಾಗುವದು. ನಾನು ಹೇಳಿದಂತೆ, ನೀವು ಮಾತ್ರ ನಡೆಯಬೇಕು." ಇತ್ಯಾದಿ ಭಾಷಣ ಮಾಡಿ ಮಹಾತ್ಮರು ಪ್ರದರ್ಶನವನ್ನು ತೆರೆದರು. ಪ್ರದರ್ಶನದಲ್ಲಿ ಖಾದಿಯ ತರತರದ ನಮೂನೆಗಳಿವೆ. ಹಿತ್ತಾಳೆ ಸಾಮಾನೂ, ಬಣ್ಣದ ಸಾಮಾನುಗಳೂ ಇವೆ. ಪ್ರದರ್ಶನಾಲಯದಲ್ಲಿ ನೂರಾರು ಕೈರಾಟೆಗಳು ತಿರುಗುತ್ತಿರುವವು.

ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಯ ಹಕೀಕತು.

ಗುರುವಾರ ಮಧ್ಯಾನ್ಹಕ್ಕೆ ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಯ ಸಭೆ ಸೇರಿತು. ಕಾರ್ಯದರ್ಶಿಗಳು ೧೯೨೪ ನೇ ಇಸವಿಯ ರಾಷ್ಟ್ರೀಯ ಸಭೆಯ ವರದಿಯನ್ನು ಸಾದರಪಡಿಸಿದರು. ಸಭಾಸದರನ್ನು ದಾಖಲ ಮಾಡಲು ಅನೇಕ ಪ್ರಾಂತಗಳು ವ್ಯವಸ್ಥೆ ಮಾಡಿದ್ದಿಲ್ಲ. ಸಭಾಸದರ ಸಂಖ್ಯೆಯು ತಿಂಗತಿಂಗಳಿಗೆ ಬದಲಾಗುತ್ತಿತ್ತು. ಬಂಗಾಲದಲ್ಲಿ ೩೧೬೯, ಆಂಧ್ರದಲ್ಲಿ ೨೬೩೮, ತಮಿಳನಾಡಿನಲ್ಲಿ ೩೨೫೦, ಗುಜರಾಥದಲ್ಲಿ ೧೮೫೩, ಸಂಯುಕ್ತ ಪ್ರಾಂತದಲ್ಲಿ ೧೪೪೩, ಕರ್ನಾಟಕದಲ್ಲಿ ೧೧೨೪. ಇವು ಆ ಆ ಪ್ರಾಂತಗಳ ಪರಮಾವಧಿಯ ಅಂಕಗಳು. ಹಿಂದೂ-ಮುಸಲ್ಮಾನರ ಸಂಬಂಧಗಳು ವಿಶೇಷ ಸುಧಾರಿಸಲಿಲ್ಲ. ದೊಂಬಿಗಳಾಗದಿದ್ದರೂ, ದ್ವೇಷವು ಇನ್ನೂ ಇದೆ. ಮಸೀದೆಗಳ ನೆರೆಹೊರೆಯಲ್ಲಿ ವಾದ್ಯಘೋಷ ಮಾಡುವ ವಿಷಯ ಅಲ್ಲಲ್ಲಿ ಬಡಿದಾಟವಾಯಿತು. ದಿಲ್ಲಿಯೊಳಗಿನ ಐಕ್ಯ ಪರಿಷತ್ತಿನ ನಿರ್ಣಯದ ಪಾಲನವಾಗಲಿಲ್ಲ. ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಯು ಪಾಟಣಾದೊಳಗಿನ ಅಧಿವೇಶನದಿಂದ ರಾಷ್ಟ್ರೀಯ ಸಭೆಯು ಪ್ರಾಮುಖ್ಯವಾಗಿ ರಾಜಕಾರಣ ಸಂಸ್ಥೆಯಾಗಿದೆ. ವಿಧಾಯಕ ಕಾರ್ಯಕ್ರಮವು ವಿಶಿಷ್ಟ ಸಂಸ್ಥೆಗಳಿಗೊಪ್ಪಿಸಲ್ಪಟ್ಟಿದೆ. ದೇಶಬಂಧು ದಾಸ, ಸರ್ ಸುರೇಂದ್ರನಾಥ ಬಾನರ್ಜಿಯವರ ನಿಧನದ ಕುರಿತು ವ್ಯಸನಪೂರ್ವಕವಾದ ಉಲ್ಲೇಖವಿದೆ. ಅಸ್ಪೃಶ್ಯರ ವ್ಯಾಕಮ ಸತ್ಯಾಗ್ರಹವು ಯಶಸ್ವಿಯಾಗಿದೆ. ಸನ್ಮಾನ್ಯ ಶೀಖರು ಕಾರಾಗೃಹವಾಸದಲ್ಲಿರುವ ತನಕ, ಅಕಾಲಿಗಳ ಕಾದಾಟವು ನಿರ್ಣಯವಾಗಲಿಕ್ಕಿಲ್ಲ. ಖಾದಿಯ ಪ್ರಸಾರವು ನೂಲುವ ಸಂಘದ ವಿದ್ಯಮಾನ ಬಂಗಾಲ-ತಮಿಳ ನಾಡುಗಳಲ್ಲಿ ವಿಶೇಷವಾಗಿ ಸಾಗಿತು. ಆಂಧ್ರ ದೇಶದಲ್ಲಿ ಖಾದಿಯ ಪ್ರಸಾರವು ಸುಸಂಘಟಿತವಾಗಿ ನಡೆದರೆ, ಬಹಳ ಪ್ರಗತಿಯಾಗುವಂತಿದೆ. ಪಂಜಾಬದಲ್ಲಿ ಕೂಡಿಸಿದ ನಿಧಿಯನ್ನು ಪಂಜಾಬದೊಳಗೆ ಸರಕಾರಿ ಪಬ್ಲಿಕಿಗೆ ಉತ್ತರದಾರ ನಿವಾರಣೆಗಾಗಿ ಉಪಯೋಗಿಸಲ್ಪಡುವದು. ಈ ನಿಧಿಯು ೪೫ ಸಾವಿರ ರೂಪಾಯಿಗಳು ಪಂಡಿತ ಮದನ ಮೋಹನ ಮಾಲವೀಯಜಿಯವರ ಹತ್ತರವಿವೆ. ನಾಗಪುರದ ರಾಷ್ಟ್ರೀಯ ಸಭೆಗೆ ೧॥ ಲಕ್ಷ ಉತ್ಪನ್ನವಾಯಿತು. ಅವುಗಳಲ್ಲಿ ೩೯ ಸಾವಿರ ರೂಪಾಯಿಗಳು ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಗೆ ಕೊಡಲ್ಪಟ್ಟಿವೆ. ಉಳಿದವು ಅಧಿವೇಶನಕ್ಕೆ ಖರ್ಚಾದವು.

ರಿಪೋರ್ಟಿನ ವಾಚನವಾದ ಬಳಿಕ, ಮಹಾತ್ಮರು ಅಜಮೀರ-ಮಾರವಾಡದೊಳಗಿನ ೪೦೦ ಪ್ರತಿನಿಧಿಗಳ ಚುನಾವಣೆಯನ್ನು ರದ್ದು ಮಾಡಬೇಕೆಂಬ ಠರಾವನ್ನು ತಂದರು. ಕಾನೂನಿನಂತೆ ಇವರ ಇಲೆಕ್ಷನು ಆಗದ್ದರಿಂದ ಇವರ ಪ್ರಾತಿನಿಧಿಕ ಅಧಿಕಾರವು ರದ್ದು ಮಾಡಲ್ಪಟ್ಟಿದೆ. ಇಷ್ಟಕ್ಕೆ ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಯು ವಿಸರ್ಜನ ಹೊಂದಿತು.

ಅಪರಾನ್ಹಕ್ಕೆ ಪುನಃ ಸಭೆಸೇರಿತು. ಮಹಾತ್ಮರು ತಮ್ಮ ಅಧಿಕಾರಸೂತ್ರಗಳನ್ನು ಸೌ। ಸರೋಜಿನಿ ದೇವಿಯವರಿಗೆ ಅರ್ಪಿಸಿದರು. ಸೌ। ಯವರು ದಕ್ಷಿಣ ಆಫ್ರಿಕೆಯಲ್ಲಿ ಮಾಡಿದ ಕಾರ್ಯವನ್ನೂ, ಅವರ ಪ್ರತಿಭಾಸಂಪನ್ನ ಕಾವ್ಯಶಕ್ತಿಯನ್ನೂ ಬಣ್ಣಿಸಿ, ರಾಷ್ಟ್ರಧುರೆಯನ್ನು ಅವರಿಗೆ ಮಹಾತ್ಮರು ಒಪ್ಪಿಸಿದರು; ಸ್ತ್ರೀಯರು ಯಾವಾಗಲೂ ಶಿದಾರ್ಯವಂತರಿದ್ದು, ರಾಷ್ಟ್ರೀಯ ಸಭೆಯ ನಿಧಿಯನ್ನು ಮಾತ್ರ ಜಾಗ್ರತೆಯಿಂದಲೂ, ಮಿತವ್ಯಯದಿಂದಲೂ ವೆಚ್ಚ ಮಾಡಬೇಕೆಂದು ಹೇಳಿ, ಅಧ್ಯಕ್ಷಾಧಿಕಾರದ ಸೂತ್ರಗಳನ್ನು ಸೌ। ಸರೋಜನಿ ದೇವಿಯವರಿಗೆ ಒಪ್ಪಿಸಿದರು. ಸರೋಜನಿ ದೇವಿಯವರು ಅಧಿಕಾರಸೂತ್ರಗಳನ್ನು ಕೈಕೊಳ್ಳುವಾಗ, ತಾವು ಕಮೀಟಿಯವರ ಸೇವಕರೆಂದೂ, ತಮಗೆ ಮನವಣಿ ಸಹಾಯ ಮಾಡಬೇಕೆಂದೂ, ನಿಧಿಯ ಆಯ-ವ್ಯಯವನ್ನೆಲ್ಲ ಮಹಾತ್ಮರಂಥ ಕೃಪಣರಿಗೆ ಒಪ್ಪಿಸುತ್ತೇವೆಂದೂ ಉದ್ಗರಿಸಿದರು। ಬಳಿಕ, ಮಹಾತ್ಮರು ಪಾಟಣಾದಲ್ಲಿ ನಿರ್ಣಯವಾದ ಘಟನೆಯ ಠರಾವನ್ನು ಸೂಚಿಸಿದರು: ಈ ಠರಾವಿನಂತೆ, ೨೦೦೦ ಗಜ ನೂಲು ಕೊಡುವವರು, ಅಥವಾ ೪ ಆಣೆ ಕೊಡುವವರು ಮತ್ತು ರಾಷ್ಟ್ರೀಯ ಸಮಾರಂಭಗಳಲ್ಲಿ ಖಾದಿಯನ್ನು ಧರಿಸುವವರು ಸಭಾಸದರಾಗಬೇಕೆಂದಿದ್ದಿತ್ತು. ಪಂಡಿತ ಮೋತಿಲಾಲರವರು ಈ ಠರಾವಿಗೆ ಬೆಂಬಲವನ್ನಿತ್ತರು. ಶ್ರೀ। ಕೇಳಕರರವರು ೨೦೦೦ ಗಜ ನೂಲಿನ ಹಾಗು ರಾಷ್ಟ್ರೀಯ ಸಮಾರಂಭಗಳಲ್ಲಿ ಖಾದಿ ಧರಿಸಬೇಕೆಂಬ ನಿಯಮಗಳನ್ನು ತೆಗೆದುಹಾಕಬೇಕೆಂದು ಉಪಸೂಚನೆ ತಂದರು; ಸಮಸ್ತ ಪ್ರಸಂಗಗಳಲ್ಲಿಯೂ ರಾಷ್ಟ್ರೀಯ ಸಭೆಯವರು ಖಾದಿ ಧರಿಸಬೇಕೆಂಬ ನಿರ್ಬಂಧವಿರಬೇಕೆಂದು ಮಿ। ಅಬ್ದುಲ್ ಹಮೀದಖಾನರವರು ಮತ್ತೊಂದು ಉಪಸೂಚನೆ ತಂದರು. ಎರಡೂ ಉಪಸೂಚನೆಗಳು ತೆಗೆದುಹಾಕಲ್ಪಟ್ಟು, ಮಹಾತ್ಮರ ಠರಾವು ಬಹುಮತದಿಂದ ಮಂಜೂರಾಯಿತು.

ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ಮೊನ್ನೆ ಶನಿವಾರದಿಂದ ಪ್ರಾರಂಭವಾಗಿದೆ; ನಾಳೆ ಮಂಗಳವಾರದ ವರೆಗೆ ನಡೆಯುವದು. ಹಿಂದೂ-ಮಹಾಸಭೆ, ಖಿಲಾಫತ ಪರಿಷತ್ತು ಇತ್ಯಾದಿ ಅನೇಕ ಪರಿಷತ್ತುಗಳು ಈ ವಾರದಲ್ಲಿ ಕಾನಪುರದಲ್ಲಿ ಜರಗುವವು.

ಅಧ್ಯಕ್ಷರ ಭಾಷಣದ ಸ್ವರೂಪ.

ಸೌ। ಸರೋಜಿನಿ ದೇವಿಯವರ ಭಾಷಣವು ತೀರ ಚಿಕ್ಕದಿದೆ. ತಮಗೆ ಅಧ್ಯಕ್ಷಸ್ಥಾನವನ್ನಿತ್ತು ಮನ್ನಿಸಿದ ಬಗ್ಗೆ ಆಭಾರ, ದೇಶಬಂಧು ದಾಸ, ಸರ ಸುರೇಂದ್ರನಾಥ ಬಾನರ್ಜಿಯವರ ನಿಧನದ ಬಗ್ಗೆ ವ್ಯಸನ, ಮಹಾತ್ಮರ ತ್ಯಾಗವೃತ್ತಿ, ಗ್ರಾಮಸಂಘಟನೆ, ದಕ್ಷಿಣ ಆಫ್ರಿಕೆಯೊಳಗಿನ ದೇಶಬಾಂಧವರೊಡನೆ ಸಹಾನುಭೂತಿ, ಪರದೇಶದಲ್ಲಿ ಭಾರತೀಯ ಪೀಡನೆಯ ಪ್ರತಿಕಾರದ ಆವಶ್ಯಕತೆ, ಸ್ವಸ್ವಾತಂತ್ರ್ಯ, ಹಿಂದೂ-ಮುಸಲ್ಮಾನರ ಐಕ್ಯ ಇತ್ಯಾದಿ ವಿಷಯಗಳು ಬರೆದುಕೊಟ್ಟ ಭಾಷಣದಲ್ಲಿವೆ. ಇದಲ್ಲದೆ, ಸಭಾಮಂಟಪದಲ್ಲಿ ದೇವಿಯವರ ಉಪನ್ಯಾಸವಾಗುವದಿತ್ತು. ಭಾಷಣಗಳ ಸಾರಾಂಶವನ್ನು ಮುಂದಿನ ಸಂಚಿಕೆಯಲ್ಲಿ ಕೊಡುವೆವು.

ಮಹಾತ್ಮರ ಆತ್ಮಚರಿತ್ರೆ.

(೨) ಬಾಲ್ಯ.

[illegible]

ಮಹಾತ್ಮರ [illegible]

[illegible] ಅಲ್ಲಿ ಅವರು [illegible] ಅಲ್ಲಿ ನನಗೆ [illegible] ನನಗೆ [illegible] ಅವರ [illegible] ನನ್ನ [illegible] ನನ್ನ [illegible] ನನ್ನ [illegible] ನನ್ನ ನಿತ್ಯ [illegible] ಸರೀಕ್ಷೆಯ [illegible] ನನಗೆ [illegible] ನಾನು [illegible] ಓಡಿಹೋಗುತ್ತಿದ್ದೆನು. [illegible] ನಾನು [illegible] ಹೈಸ್ಕೂಲಿನ ಮೊದಲನೇ ವರ್ಗದ ಪರೀಕ್ಷೆಯ ಸಮಯದ ಒಂದು ಸಂಗತಿಯು ಉಂಟು. ಅದು ನಮ್ಮ ಶಾಲೆಗೆ [illegible] ಎಂಬವರು ಎಜ್ಯುಕೇಶನಲ್ ಇನ್ಸ್‌ಪೆಕ್ಟರರು. ಅವರು ಶಾಲೆಯ ತಪಾಸಣೆಗಾಗಿ ಬಂದಿದ್ದರು. ನಮಗೆ ಇಂಗ್ಲಿಶಿನ ಪರೀಕ್ಷೆ ಮಾಡಲು ಅವರು ಐದು ಶಬ್ದಗಳನ್ನು ಬರೆಯಹೇಳಿದರು. ಒಂದು ಶಬ್ದವು kettle ಎಂಬುದಿತ್ತು. ನಾನು ಈ ಶಬ್ದವನ್ನು ತಪ್ಪು ಬರೆದಿದ್ದೆನು. ಶಿಕ್ಷಕರು ಬೂಟಿನ ತುದಿಯಿಂದ ಸರಿಯಾಗಿ ಬರೆಯಲು ನನಗೆ ಸೂಚಿಸಿದರು. ಆ ಸೂಚನೆಯಿಂದ ನನಗೇನೂ ಅರ್ಥವಾಗಲಿಲ್ಲ. ಬಳಿಯಲ್ಲಿದ್ದ ವಿದ್ಯಾರ್ಥಿಯ ಪಾಟಿಯ ಮೇಲಿಂದ ಸ್ಪೆಲ್ಲಿಂಗನ್ನು ನಕಲು ಮಾಡಲು ಶಿಕ್ಷಕರು ನನಗೆ ಹೇಳುತ್ತಿದ್ದರು, ಹೀಗೆ ಅವರು ಹೇಳುವರೆಂದು ಗ್ರಹಿಸುವದು ನನಗೆ ಅಶಕ್ಯವಾಯಿತು. ಯಾಕೆಂದರೆ ಶಿಕ್ಷಕರು ನಾವು ನಕಲು ಮಾಡದಂತೆ ಕಾವಲಿರಲು ಅಲ್ಲಿ ನೇಮಿಸಲ್ಪಟ್ಟಿದ್ದರು. ಇದರಿಂದ ಎಲ್ಲ ಹುಡುಗರೂ ಎಲ್ಲಾ ಶಬ್ದಗಳನ್ನು ತಪ್ಪದೇ ಬರೆದಿದ್ದರು; ನಾನೊಬ್ಬನೇ ಮೂರ್ಖನಾಗಿದ್ದೆ. ಒಳಿಕ ಶಿಕ್ಷಕರು ನನ್ನ ಮೂರ್ಖತನವನ್ನು ತಿಳಿಸಹೇಳಲೆತ್ನಿಸಿದರು; ಆದರೆ, ಅವರ ಯತ್ನಗಳು ನಿರರ್ಥಕವಾದವು. ನಕಲು ಮಾಡುವ ವಿದ್ಯೆಯನ್ನು ನನ್ನಿಂದ ಕಲಿಯಲಾಗಲಿಲ್ಲ

ಆದರೂ, ಶಿಕ್ಷಕರ ವಿಷಯ ನನ್ನ ಆದರವು ಕುಂದಲಿಲ್ಲ. ಗುರು-ಹಿರಿಯರ ದೋಷಗಳನ್ನು ಕಣ್ಮರೆ ಮಾಡುವದು ನನ್ನ ಸಹಜ ಗುಣವಾಗಿತ್ತು. ಇನ್ನು ಕೆಲ ದಿನಗಳಲ್ಲಿ ಈ ಶಿಕ್ಷಕರ ಇನ್ನೂ ಕೆಲವು ದೋಷಗಳು ನನಗೆ ತಿಳಿದು ಬಂದವು; ಆದರೂ, ನನ್ನ ಆದರವು ಕಳೆಗುಂದಲಿಲ್ಲ. ಯಾಕೆಂದರೆ, ಗುರು-ಹಿರಿಯರ ಆಜ್ಞಾಪಾಲನವನ್ನಷ್ಟು ನಾನು ಕಲಿತಿದ್ದೆ. ಅವರ ಕೃತ್ಯಗಳ ಗುಣದೋಷಗಳನ್ನು ಶೋಧಿಸಲು ಕಲಿತಿದ್ದಿಲ್ಲ.

"ಶ್ರಾವಣ ಪಿತೃಭಕ್ತಿ ನಾಟಕ."

ಆ [illegible] ಸಂಗತಿಗಳು ಇನ್ನೂ ನನಗೆ [illegible] ನನ್ನ ಅಭ್ಯಾಸದ ಪುಸ್ತಕಗಳ ಹೊರತು [illegible] ನಾಚನವನ್ನು ನಾನು ಕೈಕೊಳ್ಳುತ್ತಿರಲಿಲ್ಲ. ನಿತ್ಯದ ಪಾಠಗಳನ್ನು ಕಲಿಯ ಬೇಕಾಗಿತ್ತು; ಇಲ್ಲದಿದ್ದರೆ, [illegible] ಶಿಕ್ಷಕರು ಶಾಸನ ಮಾಡಿ [illegible] ನನ್ನ ತಿಳುವಳಿಕೆಯಿತ್ತು. ಹೀಗೆ [illegible] ನನಗೆ [illegible] ಅದರಿಂದ ನಾನು ನಿತ್ಯ [illegible]; ಆದರೆ, ಅನೇಕಾವರ್ತಿ ಆ [illegible] ನಾನು ತನ್ಮಯನಾಗುತ್ತಿರಲಿಲ್ಲ. ಹೀಗೆ ನಿತ್ಯ [illegible] ಶಿಕ್ಷಕ, [illegible] ವಾಚನ [illegible]. ಆದರೂ, ನನ್ನ ತಂದೆಯು ಕೊಂಡ ಒಂದು ಪುಸ್ತಕವು ನನ್ನ ಕೈಸೇರಿತ್ತು. ಅದರ ಹೆಸರು "ಶ್ರಾವಣ ಪಿತೃಭಕ್ತಿ ನಾಟಕ." ಅದನ್ನು ನಾನು ತತ್ಪರತೆಯಿಂದ ಓದಿದೆನು. ಇದೇ ಸಮಯ ಊರೂರು ಸಂಚಾರ ಮಾಡಿ ಚಿತ್ರಪಟ [illegible] ನಮ್ಮ ಊರಲ್ಲಿ ಬಂದರು. ಅಲ್ಲಿ ನಾನು ಒಂದು ಚಿತ್ರ ನೋಡಿದೆನು: ಶ್ರಾವಣನು ಒಂದು ಕೋಲಿನ ಎರಡೂ ತುಗ್ಗಲಿಗೆ ತನ್ನ ಕುರುಡ ತಾಯಿ-ತಂದೆಗಳನ್ನು ಕೂರಿಸಿಕೊಂಡು ಹೆಗಲ ಮೇಲಿಂದ ಹೊತ್ತುಕೊಂಡು ಯಾತ್ರೆಗೆ ಒಯ್ಯುತ್ತಿದ್ದನು. ಆ ಚಿತ್ರವೂ ಆ ಪುಸ್ತಕವೂ ನನ್ನ ಮನಸ್ಸಿನ ಮೇಲೆ ಉಳಿ [illegible] ಸ್ಪಷ್ಟವಾಗಿ ಉಳಿದವು. "[illegible] ನನಗೆ [illegible]" ಎಂದು ನಾನು ಭಾವಿಸಿದೆನು.

ಶ್ರಾವಣನ ನಿಧನ ಕೇಳಿ, ತಾಯಿ-ತಂದೆಗಳು ಮಾಡಿದ ವಿಲಾಪದ ಶೋಕವು ಇನ್ನೂ ನನಗೆ ಕೇಳಿದ ಭಾಸವಾಗುತ್ತಿದೆ. ಅವರ ದುಃಖಾವೇಗದಿಂದ ನನ್ನ ಮನಸ್ಸು ಕರಗಿತು. ನನ್ನ ತಂದೆಯು ನನಗಾಗಿ ಒಂದು ಮೇಳ ಕೊಂಡಿದ್ದನು, ಆ ಮೇಳದ ಮೇಲೆ ಈ ದುಃಖಪರ ಕಾವ್ಯವನ್ನು ನಾನು ಬಾರಿಸುತ್ತಿದ್ದೆನು.

"ಹರಿಶ್ಚಂದ್ರ ನಾಟಕ."

ಇನ್ನೊಂದು ಆಟದಿಂದ ಒದಗಿದ ಹಕೀಕತನ್ನು ಹೇಳುವೆನು. ನಮ್ಮೂರಲ್ಲಿ ಒಂದು ನಾಟಕ ಮಂಡಳಿ [illegible] ಇತ್ತು. ಅಲ್ಲಿ ಒಂದು ನಾಟಕ ನೋಡಲು ನನ್ನ ತಂದೆಯ ಅಪ್ಪಣೆ ಪಡೆದೆನು. ಆ ನಾಟಕವು "ಹರಿಶ್ಚಂದ್ರ" ನಾಟಕವು. ಈ ನಾಟಕವು ನನಗೆ ಬಹಳ ಚಿತ್ತವೇಧಕವಾಯಿತು., ಅದನ್ನು ನೋಡಿದಷ್ಟು ನನಗೆ ಸಮಾಧಾನವಾಗದು. ಆದರೆ ಎಷ್ಟಾವರ್ತಿ ನನಗೆ ಆ ನಾಟಕ ನೋಡಗೊಡುತ್ತಾರೆ? ನನಗೆ ಹರಿಶ್ಚಂದ್ರನ ಧ್ಯಾಸವಾಯಿತು. ಮತ್ತು ಅನೇಕಾವರ್ತಿ ನಾನು ಹರಿಶ್ಚಂದ್ರನಂತೆ ನಡೆಯಹತ್ತಿದೆನು. "ಹರಿಶ್ಚಂದ್ರನಂತೆ ಸಮಸ್ತರೂ ಯಾಕೆ ಸತ್ಯಸಂಧರಾಗಬಾರದು?" ಎಂಬ ಪ್ರಶ್ನೆ ನಾನು ಹಗಲಿರುಳು ನನ್ನಷ್ಟಕ್ಕೇ ಎತ್ತಿಕೊಳ್ಳುತ್ತಿ[illegible] ಸತ್ಯವನ್ನನುಸರಿಸಲಿಕ್ಕು, ಹರಿಶ್ಚಂದ್ರನಂತೆ [illegible] ಸಂಕಟಗಳನ್ನು ಸಹಿಸಲಿಕ್ಕು ನಾನು ಕಲಿತೆನು [illegible]ಶ್ಚಂದ್ರ ಕಥೆಯು ಸಂಪೂರ್ಣವಾಗಿ ಸತ್ಯವಾದ[illegible] ನಾನು ನಂಬಿದೆನು; ಆ ಕಥೆಯು ಧ್ಯಾನ ಮಾಡಿ [illegible] ಪರೀ ಮರುಗಿರುವೆನು. ಹರಿಶ್ಚಂದ್ರನು ಐತಿ[illegible] ಪುರುಷನಲ್ಲೆಂದು ನಾನು ವ್ಯವಹಾರಿಕ ಜ್ಞಾ[illegible] ಈಗ ಹೇಳಬಲ್ಲೆನು. ಆದರೆ, ಹರಿಶ್ಚಂದ್ರನೂ, [illegible]ನೂ ಸಜೀವ ವ್ಯಕ್ತಿಗಳು; ಆ ನಾಟಕಗಳ[illegible] ಹೊತ್ತು ಪುನಃ ಓದಿದರೂ, ಮುಂಚಿನಂತೆಯೇ ಭಾವನೆಯಾಗುವದೂ ನಿಶ್ಚಯವು.

ಸಾರಸ್ವತ ಹೇಮಂತ ಸಂಚಿ[illegible]

ಕೊಂಕಣಿ ಭಾಷೆಚೆಂ ಹೆಂ ಸಚಿತ್ರ, ಸ[illegible]

ಆಸಿ ವಿಷಯಗರ್ಭಿತ ಪುಸ್ತಕ.

ಪ್ರಸಿದ್ಧ ಮಾಸಾಂಚ್ಯಾ ದಶಮಿಕ ತಯಾರ [illegible]

ಪ್ರಮುಖ ಲೇಖ:—

ಮಾರ್ಗಿಕರ ಜಾತಿ:— ಶ್ರೀ॥ ಗೋವಿಂದ ಪೈ,

ಸಾರಸ್ವತಾಲಿಂ ಕರ್ತವ್ಯ:— ಶ್ರೀ॥ ವಿ. ಎಸ್. ಪ್ರ[illegible]

ಸಾಬಿರಮಾತಿ ಪತ್ರಿ:— ಶ್ರೀ॥ ಎನ್. ಎಮ್.

ಶ್ಯಾನಭಾಗ, M. A. L[illegible]

ವರ್ಣಾಶ್ರಮ ಧರ್ಮಾಚೊ ಪುನರುದ್ಧಾರ:— ಶ್ರೀ[illegible]

ಡಿ. ಕೃಷ್ಣರಾವ್, [illegible]

ಹರಿದಾಸಸ್ವಾಮಿ ಮಹಾರಾಜ:— ಶ್ರೀ॥ ವಿ. ಆರ್[illegible]

ಮಲ್ಲ್ಯಾನಿಂ ಕೆಲ್ಲೆಲೆಂ ಸುಕೃತ:— ಶ್ರೀ॥ ಗ[illegible] ರಾವ್ [illegible]

ಧರ್ಮಸ್ಥಾಪನ:— ಶ್ರೀ॥ ಕೆ. ಪದ್ಮನಾಭ ಕಾಮ[illegible]

ನಾಂವ್ ಕ್ಷೇತ್ರಾಚಿ ಪ್ಯಾಚೀನತಾ:— ಶ್ರೀ[illegible] ಗೋವಿಂ[illegible]

ಧನುವ — ಶ್ರೀ॥ ಮಂಗೇಶರಾವ ತೇಲಂಗ.

[illegible] — ಶ್ರೀ॥ ವೈಕುಂಠ ಭಕ್ತ.

ವರಾನ್ವೇಷಣ:— ಏಕ ಕಥಾ.

ಸ್ತ್ರೀ ಶಿಕ್ಷಣ:— [illegible], [illegible].

ಹಿಂ ನಂತರ ಅನೇಕ ಸಾರಸ್ವತ, ಗೌಡಸಾ[illegible] ಪ್ರಮುಖಾಂಲ್ಯಾ ಜೀವನ ಚರಿತ್ರಾ, (ತಾಂಗೇಲಿ ಚಿತ್ರ ಸಮೇತ) ಅನೇಕ ಪದಂ, ವಿನೋದ, ವಿಷಯ, ಏಕ ಇಂಗ್ಲಿಷ ಉಪನ್ಯಾಸ, ಸ್ತ್ರೀ [illegible] ಇತ್ಯಾದಿ ಯೆತ್ತಾ.

ಪೃಷ್ಠ 1 ಶಂ 50. ಮೋಲ ಆಟ [illegible] ಟಪಾಲ ಖರ್ಚ ಏಕ[illegible]

ಜಾವ್ಕಾ ಜಾಲ್ಲಲ್ಯಾನಿಂ ನವ ಆಣ್ಯಾ ಸ್ಟಾಂಪ[illegible] ಕಾ. ಸಾರಸ್ವತಾಚ್ಯಾ ಪೋಷಕಾಂಕ ಆನಿ ಸಹಾ[illegible] ಕ ಏಕ್ಕೆಕಿ ಉಚಿತ ಪ್ರತಿ ಧಾಡ್ತಾಂತಿ. ಜಾಸ್ತಿ ಪ್ರತಿ[illegible] ಜಾವ್ನಾ ಸಹಾಯಕ ಆನಿ ಪೋಷಕಾನಿಂ ಪ್ರತ್ಯೇಕ[illegible] ಪಟಯಿಕಾ.

[illegible] — ಕಾರ್ಯದರ್ಶಿ, 'ಸಾರಸ್ವತ'. ಉ[illegible]

धातु क्षीणता व कमजोरपणा यांसाठीं

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करितात. पचन शक्ति सुधारून परसाकडे साफ होतें. त्याचप्रमाणें प्रत्येक प्रकारची अशक्तता दूर होऊन शरीर तेजदार व बळवान होतें. किं ४० गोळ्यांच्या डबीस रु. १.

रमण विलासिनी गोळ्या. रात्रौ फक्त १ गोळी दुधाबरोबर खाल्या[illegible] इच्छेप्रमाणें वीर्यस्तंभन होतें. किं. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां [illegible] रोग नाश पाऊन खरें पुरुषत्व प्राप्त होतें. किं. डबीस रु. १.

कुमटा एजंट :— माधव सांतप्पा शेणवी वेलेकरी.

राजवैद्य नारायणजी केशवजी ब्रँच:— १९३ काळबादेवी रोड मुंबई [illegible]

ಶಾಸ್ತ್ರಸಿದ್ಧವಾದದ್ದು ! ಅನುಭವಸಿದ್ಧವಾದದ್ದು !!

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ

ಔಷಧಿಯ ಕ್ರಯ ವಾಪಸು.

ರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋ

ಸ, ಪರಮಾನಂದ ಮೊದಲಾದ ಸುಖಜೀವನಕ್ಕೆ

ಬೇಕಾದ ಆರೋಗ್ಯದಾಯಿನಿ

ಪವಾರ್ಕ] **ಅಗಸ್ತ್ಯ** [ನೋಂದಿ ಕೊಟ್ಟಿದೆ.

ಮನ್ಮಥಚಿಂತಾಮಣಿಲೇಹ

ರಿಜಿಸ್ಟರ ಆಗಿದ್ದು

ಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ

ತಿ ಗುಣಕಾರಿಯಾದದ್ದು ಮೇಹವಿಕಾರವಿದ್ದ

ಗೂ, ನಿದ್ರೆ ಇಲ್ಲದವರಿಗೂ, ಸ್ವಪ್ನೇಂದ್ರಿಯವಾ

ಯುವಕರಿಗೂ ಜ್ಞಾನಿ ಸುಜ್ಞಾನಿಗಳಿಗೂ

ಉಪಯೋಗವುಳ್ಳ ಪರಮಾನಂದ ಔಷಧಿ

ಸೇರು ನಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು

1 ಸೇರು ಡಬ್ಬಿ ಒಂದಕ್ಕೆ 3—0—0

½ ಸೇರು ಡಬ್ಬಿ ಒಂದಕ್ಕೆ 1—9—0

ವ್ಹಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಬರೆಕೊಳ್ಳಿರಿ.

:- ದೇವಣ್ಣ ನಾರಾಯಣ ಸೇಟ್,

ಸರಾಫ್, ಗೋಲಿಕಟ್ಟಾ, ಮಂಗಳೂರು, (ದ. ಕ.)

"ಲೋಕರಹಸ್ಯ"

ಈ ಕನ್ನಡ ಮಾಸ ಪತ್ರಿಕೆಯಲ್ಲಿ ವ್ಯಾಪಾರರಿಗೆ ವ್ಯಾಪಾರದ ವಿಚಾರ, ರೈತರಿಗೆ ಕೃಷಿಯ ಅತ್ಯುತ್ತಮ ಮಾರ್ಗಗಳು, ಸ್ತ್ರೀಯರಿಗೆ ಗೃಹಕೃತ್ಯದ ವಿಚಾರಗಳು, ಬಡವರಿಗೆ ಹಣ ಸಂಪಾದನೆಯ ಸುಲಭ ಮಾರ್ಗಗಳು, ರಸಿಕರಿಗೆ ವಿನೋದ ವಿಚಾರಗಳು, ಪ್ರತಿಯೊಬ್ಬರಿಗೂ ಬೇಕಾದ ...ಚಕೀಯ ವಿಚಾರಗಳು, ವೈದ್ಯ ಭಾಗಗಳು, ಜ್ಯೋತಿಷ್ಯ, ಕಾನೂನು, ವೇದಾಂತ, ಕಾದಂಬರಿ..., ಗೋಪಾಲನೆ, ಕೈಗಾರಿಕೆಗಳು, ವೃತ್ತಾಂತಗಳೇ ಮುಂತಾದ ವಿಷಯಗಳೆಲ್ಲವೂ ಪ್ರಕಟವಾಗುತ್ತವೆ. ಪತ್ರಿಕೆಯು ಪ್ರತಿಯೊಂದು ಪುಟದಲ್ಲಿ ಅಮೂಲ್ಯವಾದ ಗೂಢ ವಿಚಾರಗಳಿಂದ ತುಳುಕುತ್ತಿದೆ. ಪ್ರತಿ ಮಾಸದಲ್ಲೂ ... ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

...ಷಿಕ ಚಂದಾ ಅಂಚೆ ವೆಚ್ಚ ಸೇರಿ

ರೂ. ೩—೦—೦. ಮಾತ್ರ.

...ಮಾದರಿ ಸಂಚಿಕೆಗೆ ಕ್ರಯ ೦—೫—೦

...ಮಾದರಿ ಸಂಚಿಕೆಗಳನ್ನು ಪುಕ್ಕಟೆಯಾಗಿ ಕೊಡುವದಿಲ್ಲ

...ಹಾಕಿದ ಹಣವನ್ನು ನಷ್ಟ ಮಾಡದೆ, ಹಾಕಿದ ...ವನ್ನು ಇದ್ದಕ್ಕಿದ್ದ ಹಾಗೆಯೇ ತಿಂಗಳಿಗೆ ೧೦೦ ರೂ. ... ಹೆಚ್ಚಾಗಿಯೇ ಹಣ ಸಂಪಾದನೆ ಮಾಡುವ ...ಯನ್ನು ತಿಳಿಸುವ ಬಗ್ಗೆ ಒಂದಾಣೆ ಸ್ಟಾಂಪು ... ಕಳಿಸಿ ಕಾಗದಕ್ಕೆ ಬರೆಯಿರಿ.

ಮೆನೇಜರ್.

"ಲೋಕರಹಸ್ಯ"

ವೀರರಾಜೇಂದ್ರ ಪೇಟೆ, ಕೊಡಗು

ದರ ಕಡಿಮೆ ಮಾಡಿರುವೆವು ! **ಸುಸಂಧಿ!!**

ನಮ್ಮ

ಸುಪ್ರಸಿದ್ಧ

ಇಂಗ್ಲಿಷ ಮೋಡ

ಸಾಯಕಲ

ವೆಲಿಂಗ್ಟನ

ಸಾಯಕಲ ಮತ್ತು ಮೋಟಾರ ಕಂಪನಿ, ಹೊರ್ನಬೀ ರೋಡ, ಮುಂಬಯಿ ನಂಬರ ೧.

ಆರ್ಸೆನಲ ರೋಡ, ಪುಣೆ.

ರೋಗದಿಂದ ನರಳ ಬೇಡಿ!

ನಮ್ಮಲ್ಲಿ ದಂತು ಜುಲಾಬು, ಪಿತ್ತ ಜುಲಾಬು ಎಲ್ಲ ತರದ ಜ್ವರ, ಜ್ವರಗರ್ಭ, ಚಳಿಜ್ವರ, ಕಾಮಿಣಿ, ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಮಲಬದ್ಧತೆ, ಮೂಲವ್ಯಾಧಿ, ನರ, ವಾತ, ತಲೆಶೂಲ, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ (ಗರ್ಮಿ) ಬಾಲಗ್ರಹ, ಖಜ್ಜಿ, ಗಜಕರ್ಣಗಳಿಗೆ ಖಂಡಿತ ಗುಣ ಬರುವ ಜರ್ಮನ, ಅಮೇರಿಕನ, ಫ್ರೇಂಚ ಇಂಗ್ಲಿಷ ಮತ್ತು ದೇಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು.

ಇದಲ್ಲದೆ ಎಲ್ಲ ತರದ ಸ್ಟೇಶನರಿ, ಪರಪ್ಯೂಮರಿ ಸ್ಪಾಯಕಲ ಸಾಮಾನು, ಓಲ್ಡ ಸ್ಪೋರ್ಟ್ ಬ್ಯಾಲ, ಸುವರಲೆಟ, ಮೋರಿಸ ಮೊಳಾರ ಬಂಡಿಗಳು, ಸವಲತಿನ ದರದಿಂದ ಸಿಗುವವು. ನಮ್ಮಲ್ಲಿಲ್ಲದ ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡಲಾಗುತ್ತದೆ.

ಎಸ್ ಎಲ್ ಧಾಕಪ್ಪ ಮತ್ತು ಬ್ರದರ್,

ಸಿರಸಿ.

"ಚಾಟಾನೂಗಾ" ಕಬ್ಬಿನ ಗಾಣ!

ಜಗತ್ತಿನಲ್ಲಿ ಸರ್ವೋತ್ಕೃಷ್ಟವೆಂದೇ ಇದು ಇಷ್ಟು ಪ್ರಖ್ಯಾತಿ ಹೊಂದಿತು!



ನಂ. ೧೨, ರೂ. ೧೪೫

,, ೧೩, ರೂ. ೧೬೫

,, ೩೨, ರೂ. ೧೯೦.

,, ೩೩, ರೂ. ೩೪೮.

ಮಾಲು ಮುಂಬಯಿ ರೇಲ್ವೆ ಸ್ಟೇಶನ್ನಿನ ವರೆಗೆ ತಂದು ಕೊಡಲ್ಪಡುವದು.

ಇದರ ರೋಲುಗಳು ಶುದ್ಧ ಕಬ್ಬಿಣದಿಂದ ಮಾಡಿದ್ದಿರುತ್ತವೆ. ಕಬ್ಬಿನೊಳಗಿನ ಹನಿ ಹನಿ ರಸವನ್ನು ಕೂಡ ಹಿಂಡಿ ತೆಗೆಯುವ ವ್ಯವಸ್ಥೆ ಮಾಡಲಾಗಿದೆ. ಗಾಣವ ಎರಡೂ ಬದಿಗಳ ಯಾವದೇ ಬದಿಯಿಂದ ಕಬ್ಬು ಕೊಡಬಹುದಾಗಿದೆ.

ಆರ್ಡರಿನ ಸಂಗತಿ ಕ್ಕೆ ಹಣವನ್ನು ಡಿಪೋಝಿಟ್ ಆಗಿ ಕಳಿಸಬೇಕು.

ಕ್ಯಾಟಲಾಗು "ಡಬ್ಲ್ಯು ೧೧೩" ಪುಕ್ಕಟೆ!

ಮೆಕ್‌ಬೆಥ ಬ್ರದರ್ಸ ಮತ್ತು ಕಂಪನಿ, ಲಿಮಿಟೆಡ್.

ಕೋಡಾಕ ಹೌಸ, ಹೊರ್ನಬಿ ರೋಡ ಮುಂಬಯಿ.



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಸ್ಪೆನ್ಸರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತರ್ತು ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

ಸುಗಂಧಿ ತಾಂಬೂಲೀ ಜರ್ದಾ!

ಉತ್ತಮ ತಂಬಾಕ ತಕ್ಕೊಂಡು ಅದಕ್ಕೆ ತಾಂಬೂಲ ಪದಾರ್ಥಗಳ ಮತ್ತು ಮುಖರಂಜನ ಔಷಧೀ ವನಸ್ಪತಿಗಳ ಅರ್ಕದ ಒಗಣೀಕೊಟ್ಟು ಈ ತಾಂಬೂಲೀ ಜರ್ದಾ ತಯಾರ ಮಾಡಿರುತ್ತದೆ ಇದು ತಿನ್ನಲಿಕ್ಕೆ ಖರ್ಚವಿದ್ದ ಸುವಾಸಿಕವಿದ್ದದ್ದು ಇದರ ಸೇವನೆಯಿಂದ ಬಾಯಿಯು ಹೊಲಸು, ಹಲ್ಲು ಬೇನೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಗಟ್ಟಿಯಾಗುತ್ತವೆ ಇದರ ಸೇವನೆಯಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಭೀತಿಯು ಏನೂ ಇಲ್ಲ ಅದರಿಂದ ತಂಬಾಕ ಸೇವಿಸುವ ದರಿ ಕರು ಅವಶ್ಯವಾಗಿ ಅನುಭವ ತಕ್ಕೊಳ್ಳಬೇಕ ೧ ಪುಡಿಗೆ ೬೦ ರೂ.೦-೦-೬, ೨೫ಕ್ಕೆ ೦-೯ ೦, ೧೦೦ಕ್ಕೆ ರೂ ೨ ೦ ೦, ೫೦೦ಕ್ಕೆ ರೂ. ೮ ೦ ೦, ೧೦೦೦ಕ್ಕೆ ರೂ ೧೫-೦-೦. ಟಪಾಲ, ಪೆಕಿಂಗ ಖರ್ಚ ಬೇರೆ ಪ್ರತ್ಯೇಕ ಕೊಡುವದು ವಿಶೇಷ ಮಾಹಿತಿ ಬಗ್ಗೆ ಕೆಳಗಿನ ಪತ್ತೆಯ ಮೇಲೆ ಪತ್ರವ್ಯವಹಾರ ಮಾಡಿದರೆ ಜರೂರ ಜಾಹಿರ ಕೊಡಲ್ಪಡುವದು.

ಪತ್ತೆ.. ಎಸ್. ಬಿ. ಕದಂ,

ಬೀಡಿ ಮತ್ತು ತಂಬಾಕು ಜರ್ದಾ ದುಕಾನ

ಮು ಪೋ ಸಿಸ್ವಾಳ, ಜಿ ಬೆಳಗಾಂವ

ವಿಶೇಷ] ಅನುಭವಸಿದ್ಧ [ವನ್ಯವಿ.

ವನೌಷಧಿಮೂಲಿಕೆಗಳು

ವಾಯುದುಮ್ಮಾನ (ನಿಮೋನಿಯಾ) ಮಾಂತಿ ಭ್ರಾಂತಿ (ಕಾಲರಾ) ಅರ್ಧಾಂಗವಾಯು (ಪೆರಾಲೆಸಿಸ್) ಮುಂತಾದ ನಾನಾ ನಮೂನೆಯ ಸರ್ಪ ವಿಷ ಹೊಟ್ಟೆಯಲ್ಲಿ ಕ್ರಿಮಿ ವಿಷಹಾಕಿದ್ದು (ಕೈಮದ್ದು) ವಗೈರೆ ರೋಗಗಳಿಗೆ ಒಂದೆ ಒಂದು ಮೂಲಿಕ ರಿಂದ ಖಾತ್ರಿಯಾಗಿ ತೀವ್ರ ಗುಣಬರುವದು ಇವು ಬಹುಕಾಲದಿಂದ ಅನುಭವ ತಕ್ಕೊಂಡು ಹಾಗು ಪ್ರತಿಸಿತ್ತು ಈಕಡೆಗೆ ಒಳಿಕೆಯಲ್ಲಿದ್ದು ಸಿಗಾಗುವ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು ಕೊಲರಾ ಔಷಧಿಗಳ ದ್ರಾವಕ (Tincture) ಸಹ ಅಗಾವು ಸೂಚಿಸಿದರೆ ಕಳುಹುವೆವು.

ವಾಯುದುಮ್ಮಾನದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ಕ್ಕೆ ೦-೨-೦.

ಕೊಲರಾದ ಬಗ್ಗೆ „ „ „ ೦ ೨ ೦

ಅರ್ಧಾಂಗ ವಾಯುವಿನ ಬಗ್ಗೆ

೧ ಇಸಮಿಗೆ ಸಾಲುವಷ್ಟು ॥ ಶೇರು .. .. ೧ ೫-೦.

ಪ್ರತ್ಯೇಕ ತಿಳಿಸಬೇಕು.

ನಾಯಿ ಕಡಿತದ ಬಗ್ಗೆ ೨-೪-೦

ಸರ್ಪ ಸುತ್ತಿನ ಬಗ್ಗೆ ೦ ೨ ೦

ಹೊಟ್ಟೆಯಲ್ಲಿ ಕ್ರಿಮಿ ಔಷಧ ಬಿದ ಬಗ್ಗೆ ತೊಲೆ ೧೦ ಕ್ಕೆ ೦-೮-೦

ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾತ್ತಲ್ಲ ಕ್ಕೆ ೧-೦ ೦

ಮೋರಾವಳಾ (ನೆಲ್ಲಿಕಾಯಿ ಗುಳಂಬ)

ರಾತ್ತಲ ೧ ಕ್ಕೆ ೧-೦ ೦

ರಾತುಗಳ್ಳ ಯಾ ಅದಕ್ಕೂ ಹೆಚ್ಚು ತರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು ಟಪಾಲ ಖರ್ಚ ಪ್ರತ್ಯೇಕ. ವಿಶೇಷ ಮಾಹಿತಿ ಪತ್ರ ದ್ವಾರಾ. ಅನುಪಾನಪತ್ರ ಔಷಧೀ ಸಂಗಡ.

ಎನ್. ಜಿ. ಹೆಗಡೆ, ಮಾಸ್ಕೇರಿ,

ಪೋಸ್ಟ — ಬಂಕಿಕೊಡ್ಲ ಜಿ ಉತ್ತರ ಕಾನಡಾ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯಮರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿ

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಶಿರಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ... ಶುಕ್ಲವಿ ಕಳಿಸಲಾಗದು.

ಬಾಟ್ಲಿ ದಕ್ಕೆ ಕ್ರಯ ರೂ ೦-೪-೦. ವ್ಹಿ ಪಿ ೪ ಆಣೆ ಡಜನ್ ೧ ಕ್ಕೆ ರೂ. ೨—೮—೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ. ೫೧೦, ಪಾರ್ಕಟೌನ, ಮದರಾಸ

ಕಿರ್ಲೋಸ್ಕರ ಕಬ್ಬಿನ ಗಾಣಗಳು.

(ಎರಡು ಎತ್ತುಗಳಿಂದ ನಾಲ್ಕು ಎತ್ತುಗಳ ವರೆಗೆ)

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ

(೧) ಕಿರ್ಲೋಸ್ಕರ ನಂ ೫, (೨) ಕಿಸಾನ, (೩) ಕಮಾಲ ಗಾಣಗಳಲ್ಲಿ

ಕಮಾಲ ಗಾಣ

ಇದು ಎಲ್ಲಕ್ಕೂ ಶ್ರೇಷ್ಠವಿದ್ದಿರುತ್ತದೆ ಇದು ತೀರ ಹೊಸದು ೧೦೦ಕ್ಕೆ ೭೨ ರಷ್ಟು ರಸ ಹಿಂಡುತ್ತದೆ ಒಂದು ತಾಸಿಗೆ ೧೨೦೦ ಪೌಂಡ ಕಬ್ಬನ್ನು ಅಡುತ್ತದೆ. ಬಿಡಿ ಭಾಗಗಳು ಕಾರ್ಖಾನೆಯಲ್ಲಿ ಬೇಡಿದಾಗ ದೊರೆಯುತ್ತವೆ, ಹೆಚ್ಚಿನ ಸಂಗತಿಯ ಬಗ್ಗೆ ಇಂದೇ ತಿಳಿದುಕೊಳ್ಳಿ

ಕಿರ್ಲೋಸ್ಕರ ವಾರ್ತೆ

ಇದೊಂದು ಕನ್ನಡ ಮಾಸಪತ್ರಿಕೆಯು ಕರ್ನಾಟಕ ತರುಣರ ಉನ್ನತಿಯೇ ಇದರ ಧ್ಯೇಯ ವು ವಾರ್ಷಿಕ ವರ್ಗಣಿ ಒಂದೇ ೧। ರೂ.

ಮಾದರಿ ಸಂಚಿಕೆಯು ಪುಕ್ಕಟವಾಗಿ ದೊರೆಯುವದು.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ; ಜಿಲ್ಹಾ ಸಾತಾರಾ.



ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತ ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು ಅದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ಮಾದರಿ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯುವವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚ ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta.